ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೧೮

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಂ

(ಸಂಸ್ಕೃತದಲ್ಲಿ ಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಅನುವಾದಕ:
ಆಸ್ಥಾನವಿದ್ವಾನ್
ಪಾಟೀಣಕರ ಚಂದ್ರಶೇಖರ ಭಟ್ಟ.

* * *

ಮೈಸೂರು
ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್,
೧೯೪೫

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೧೮

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀ ಮಾಹಾತ್ಮ್ಯಂ

(ಸಂಸ್ಕೃತದಲ್ಲಿ ಮೂಲ, ಕನ್ನಡ ಅರ್ಥಾನುವಾದವಿವರಣೆಗಳೊಡನೆ)

ಅನುವಾದಕ:

ಆಸ್ಥಾನವಿದ್ವಾನ್

ಪಾಟಣಕರ ಚಂದ್ರಶೇಖರ ಭಟ್ಟ.

* * *

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್,

೧೯೪೫

ಪ್ರಸ್ತಾವನೆ.

ಪವಿತ್ರವಾದ ಭರತಖಂಡದಲ್ಲಿ ವಾಸಮಾಡುವ ಆರ್ಯಜನರಿಗೆ ಐಹಿಕ ಮತ್ತು ಆಮುಷ್ಮಿಕ ಫಲಪ್ರಾಪ್ತಿಗೆ ಸಾಧನವಾದ ಧರ್ಮಗಳಲ್ಲಿ ತೀರ್ಥಸ್ನಾನ, ಪುಣ್ಯಕ್ಷೇತ್ರ ದರ್ಶನ, ಮತ್ತು ಭಗವತ್ ಕೈಂಕರ್ಯಗಳು ಉತ್ತಮವಾದ ಸಾಧನಗಳೆಂದು ಪುರಾಣ ಗಳಲ್ಲಿ ನಿರೂಪಿಸಲ್ಪಟ್ಟಿರುವುದು. ಆ ಕ್ಷೇತ್ರಗಳಲ್ಲಿ ಕಾಶಿ ಮತ್ತು ರಾಮೇಶ್ವರ ಮುಂತಾದ ಪ್ರಸಿದ್ಧ ಕ್ಷೇತ್ರಗಳಂತೆ ಅಷ್ಟೊಂದು ಪ್ರಾಮುಖ್ಯದಿಂದ ಕಾಂಚೀಕ್ಷೇತ್ರವು ಇರುವುದೆಂದು ಪ್ರಾಯಶಃ ಯಾರಿಗೂ ತಿಳಿಯದೇ ಇಲ್ಲ. ಕಾಂಚೀಕ್ಷೇತ್ರಕ್ಕೆ ಹೋಗಿ ಭಕ್ತಿಯಿಂದ ಮೇಲೆ ನಿರೂಪಿಸಿದ ಧರ್ಮಗಳನ್ನು ಅನುಷ್ಠಾನಮಾಡಿ ಧನ್ಯರಾದ ಜನರು ನಮ್ಮ ಕನ್ನಡನಾಡಿನಲ್ಲಿಯೂ ಎಷ್ಟೋ ಮಂದಿ ಇರುವರು. ಆದರೆ ಯಾವು ದೊಂದು ಕ್ಷೇತ್ರಯಾತ್ರೆಯನ್ನು ನೆರವೇರಿಸಿದರೂ ಅಲ್ಲಿನ ಕ್ಷೇತ್ರಮಾಹಾತ್ಮ್ಯ, ದೇವತಾವಿಭೂತಿಯ ಅಂಶ, ಮತ್ತು ನಾನಾವಿಧವಾದ ಅವತಾರಲೀಲೆ ಇವನ್ನು ತಿಳಿ ಯಲು ಅನೇಕ ಯಾತ್ರಿಕರು ವಿಶೇಷವಾಗಿ ಕುತೂಹಲಪಡುವರು. ಸ್ವಲ್ಪ ಕಾಲದ ಹಿಂದೆ ತಾತ್ವಿಕವಾಗಿ ಅದನ್ನು ತಿಳಿದು ಜಿಜ್ಞಾಸುಗಳಿಗೆ ಅದನ್ನು ಉಪದೇಶಿಸುವ ಹಿರಿ ಯರು ಅನೇಕ ಮಂದಿ ಇದ್ದರಾದರೂ ಈ ನವಯುಗದಲ್ಲಿ ಅಂತಹ ಪ್ರಾಜ್ಞರೂ ವಿರಳ ರಾಗಿರುವರು. ಹಾಗೂ ಕೆಲವು ಮಂದಿ ತಮ್ಮ ಅಜ್ಞಾನವನ್ನು ತೋರ್ಪಡಿಸದೇ ಊಹಾಪೋಹಗಳಿಂದ ಕಟ್ಟುಕಥೆಗಳನ್ನು ಕಲ್ಪಿಸಿ ಪ್ರಚಾರಮಾಡುವುದೂ ಉಂಟು. ಹೀಗಿರಲು ಪಾರಮಾರ್ಥಿಕ ವಿಷಯಗಳನ್ನರಿಯುವುದೇ ದುರ್ಲಭವಾಗಿದೆ.

ಪ್ರಕೃತ ಕಾಂಚೀಕ್ಷೇತ್ರದ ಮಾಹಾತ್ಮ್ಯವನ್ನು ಪ್ರತಿಪಾದಿಸುವ ಈ ಕಾಂಚೀ ಮಾಹಾತ್ಮ್ಯವೆಂಬ ಒಂದು ಖಂಡವು ಶ್ರೀಮದ್ವ್ಯಾಸಮಹರ್ಷಿವಿರಚಿತವಾದ ಬ್ರಹ್ಮಾಂಡಪುರಾಣದಲ್ಲಿ ಅಂತರ್ಗತವಾಗಿ ಲಭಿಸಿದೆ. ಈ ಗ್ರಂಥವು ಸತ್ಯವ್ರತವೆಂಬ ವಿಶಾಲಕ್ಷೇತ್ರ, ಅದರ ಒಂದು ಭಾಗವಾಗಿ ಕಾಂಚೀನಗರ ಮತ್ತು ಸುತ್ತುಮುತ್ತಲೂ ಇರುವ ಅನೇಕ ತೀರ್ಥ, ದೇವಾಲಯ ಮುಂತಾದುವುಗಳ ಮಾಹಾತ್ಮ್ಯದಿಂದ ಕೂಡಿದ ಚರಿತ್ರೆಯನ್ನು ಹೇಳುತ್ತಿದೆ. ಜ್ಞಾನಿಗಳಾದ ಋಷಿಗಳ ವಚನದಿಂದ ತಿಳಿದಿರುವ ಈ ವಿಷಯದಲ್ಲಿ ಯಾವವಿಧದ ಅಪ್ರಾಮಾಣ್ಯಶಂಕೆಗೆ ಕಾರಣವಿಲ್ಲ. ಸಾಮಾನ್ಯವಾಗಿ ಮಾಹಾತ್ಮ್ಯಖಂಡಗಳಲ್ಲಿ ಪ್ರತಿಪಾದಿಸುವ ಚರಿತ್ರವರ್ಣನೆಯು ಲೋಕತಂತ್ರದ ಪರಿಣಾ ಮದಲ್ಲಿ ವೈರಸ್ಯವನ್ನು ವ್ಯಕ್ತಪಡಿಸಿ ಮಾನವರಿಗೆ ಶಾಂತಿಯನ್ನುಂಟುಮಾಡುವುದು. ತೀರ್ಥ-ಕ್ಷೇತ್ರ-ಮಾಹಾತ್ಮ್ಯಕೀರ್ತನವು ಶ್ರೋತೃವರ್ಗಕ್ಕೆ ಭಕ್ತಿಶ್ರದ್ಧೆಗಳನ್ನುಂಟು

ಮಾಡಿ ತನ್ಮೂಲಕ ಸಕಲಾಂಗಸಂಪೂರ್ಣವಾಗಿ ಯಾತ್ರಾಫಲವನ್ನು ಕೊಡಲು ಶಕ್ತವಾಗುವುದು.

ಮತ್ತು ತೀರ್ಥ ದೇವತಾ ವಿಶೇಷಗಳು ಪರಮಾತ್ಮನ ವಿಭೂತಿವಿಶೇಷವೆಂಬ ಚಿಂತನವು ಭಗವತ್ಪ್ರಾಪ್ತಿಯನ್ನೂ, ಮೋಕ್ಷ ಸಾಮ್ರಾಜ್ಯವನ್ನೂ ಉಂಟು ಮಾಡುವುದೂ, ಕಾಂಚೀಕ್ಷೇತ್ರದಲ್ಲಿ ವಿಷ್ಣುಪರಮಾತ್ಮನ ಅನೇಕ ವಿಧದ ವಿಗ್ರಹಗಳೂ, ವಿವಿಧ ತೀರ್ಥಗಳೂ ಇರುವುದು, ಆ ಕ್ಷೇತ್ರದ ಯಾತ್ರಿಕರಿಗೆ ತಿಳಿದಿದೆ. ಇಷ್ಟು ವಿಗ್ರಹಗಳು ಸಂಭವಿಸಲು ಕಾರಣವು ಮಾಹಾತ್ಮ್ಯ ಗ್ರಂಥವನ್ನು ಓದದೇ ತಿಳಿಯುವಂತಿಲ್ಲ. ಅದನ್ನು ತಿಳಿದ ವಿನಹ ಇಷ್ಟೊಂದು ದೇವತೆಗಳ ತೀರ್ಥಗಳ ಸಂಖ್ಯೆಯು ಏಕೆ ಬೆಳೆಯಿತು? ಇದೆಲ್ಲವೂ ಪ್ರಾಕೃತ ಜನರಿಂದ ಕಲ್ಪಿತವಿರಬಹುದೇ? ಎಂಬ ಆಕ್ಷೇಪವು ಸಂಭವಿಸಬಹುದು. ಇದರಿಂದ ಅಮೂಲ್ಯವಾದ ಕ್ಷೇತ್ರೋತ್ಪತ್ತಿಯೂ, ಭೂಮಿಯಲ್ಲಿ ಹೂತಿಟ್ಟಿರುವ ನಿಧಿಯಂತೆ ಪುರುಷಾರ್ಥವನ್ನು ಕೊಡುವುದಿಲ್ಲ. ಆದುದರಿಂದ ಮಾಹಾತ್ಮ್ಯ ಗ್ರಂಥಗಳ ಪ್ರಯೋಜನವನ್ನು ಎಷ್ಟೊಂದು ವರ್ಣಿಸಿದರೂ ಅಲ್ಪವೇ ಆಗುವುದೆಂಬುದರಲ್ಲಿ ಸಂಶಯವಿಲ್ಲ. ಕಾಂಚಿಯಲ್ಲಿ ವರಾಹವಲ್ಮೀಕ, ಶೇಷಮೂರ್ತಿ, ಲಕ್ಷ್ಮೀತೀರ್ಥ, ಜೊತೆಗೆ ಶಂಕರನ ಕೆಲವು ದಿವ್ಯಮೂರ್ತಿಗಳು ಭಕ್ತಾನುಗ್ರಹಕ್ಕೋಸ್ಕರವಾಗಿ ಕೃತ-ತ್ರೇತಾದಿಯುಗಗಳಿಂದಲೂ ನೆಲೆಸಿಗೊಂಡಿವೆ ಎಂಬುದು ಈ ಕಾಂಚೀಮಾಹಾತ್ಮ್ಯದಿಂದ ವ್ಯಕ್ತಪಡುವುದು.

ಈ ಗ್ರಂಥದ ವಿಷಯಗಳ ಸಾಮಾನ್ಯಪರಿಚಯವು ವಿಷಯಾನುಕ್ರಮಣಿಕೆಯಿಂದಲೂ ವಿಶೇಷಪರಿಚಯವು ಕನ್ನಡ ಅನುವಾದದಿಂದಲೂ ಆಗುವಂತಿರುವುದರಿಂದ ಪುನಃ ಇಲ್ಲಿ ಒಂದೊಂದಾಗಿ ವಿವರಿಸುವುದರ ಮೂಲಕ ಪುನರುಕ್ತಿಗೆ ಅವಕಾಶವನ್ನೀಯಲು ಇಷ್ಟಪಡುವುದಿಲ್ಲ.

ಇದು ಸಂಸ್ಕೃತ ವಾಙ್ಮಯದಲ್ಲಿ ವೇದವ್ಯಾಸರಿಂದ ಬರೆಯಲ್ಪಟ್ಟಿದ್ದರೂ ಸೊಬಗಾದ ಕನ್ನಡಭಾಷೆಯನ್ನು ಮಾತ್ರ ಅರಿತ ಕನ್ನಡನಾಡಿನ ಜನರಿಗೆ ಅರಿಯುವಂತಿರಲಿಲ್ಲ.

ನಮ್ಮನ್ನಾಳುವ ಮಹಾಸ್ವಾಮಿಯವರಾದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರು** ಕನ್ನಡಿಗರೆಲ್ಲರ ಉಪಯೋಗಕ್ಕೆ ಸಂಸ್ಕೃತದಲ್ಲಿರುವ ಈ ಗ್ರಂಥವನ್ನು ಕನ್ನಡಕ್ಕೆ ಪರಿವರ್ತಿಸಲು ನನಗೆ ಆಜ್ಞೆಯನ್ನು ಇತ್ತಿರುವರು. ಅದನ್ನು ಅನುಸರಿಸಿ ಆಮೂಲಾಗ್ರವಾಗಿ ಈ ಗ್ರಂಥವನ್ನು ಆದಷ್ಟು ಸುಲಭಶೈಲಿಯಿಂದ ತಿಳಿಗನ್ನಡದಿಂದ ಪರಿವರ್ತಿಸಿರುತ್ತೇನೆ. ಮೂಲಪದ್ಯ, ಅನುವಾದಗಳಿಂದ ಕೂಡಿದ ಈ ಪುಸ್ತಕವು ನೂತನವಿಧಾನದಿಂದ ಅಂದವಾಗಿ ಮುದ್ರಿಸಲ್ಪಟ್ಟಿದೆ. ಈ ಮೂಲಕ ಸಜ್ಜನಸೇವೆಯನ್ನು ಮಾಡಲು ನನಗೆ ಅವಕಾಶ ದೊರಕಿಸಿದ ಮಹಾಸ್ವಾಮಿಯವರಿಗೆ ತುಂಬಾ ಕೃತಜ್ಞನಾಗಿದ್ದೇನೆ.

ಅನುವಾದಕ.

ಕಾಂಚೀಮಾಹಾತ್ಮ್ಯದ

ವಿಷಯಾನುಕ್ರಮಣಿಕೆ.

ಪುಟಸಂಖ್ಯೆ

ಮೊದಲನೆಯ ಅಧ್ಯಾಯವು—

ನೈಮಿಷಾರಣ್ಯದಲ್ಲಿ ಶೌನಕಾದಿ ಮಹರ್ಷಿಗಳಿಗೆ ದಾನವೇ ಮುಖ್ಯವಾದ ಮೋಕ್ಷಸಾಧನವೆಂದು ವಸಿಷ್ಠಮುನಿ ಮತವನ್ನು ಅಂಗೀಕರಿಸಿದುದು. 1

ಎರಡನೆಯ ಅಧ್ಯಾಯವು—

ನಾರದ—ಅಂಬರೀಷರ ಸಂವಾದದಲ್ಲಿ ದಾನಾರ್ಹ ಪ್ರದೇಶಗಳಲ್ಲಿ ಸತ್ಯವ್ರತಕ್ಷೇತ್ರದ ಪ್ರಾಶಸ್ತ್ಯ, ಮತ್ತು ಅಲ್ಲಿ ವರಾಹವಲ್ಮೀಕ, ಅನಂತ ಸರೋವರಗಳ ಉತ್ಪತ್ತಿ. 17

ಮೂರನೆಯ ಅಧ್ಯಾಯ—

ಹಿರಣ್ಯಕಶಿಪು ರಾಕ್ಷಸನ ಸಂಹಾರ ಪ್ರಸಂಗದಿಂದ ಕ್ಷೇತ್ರದ ಸತ್ಯವ್ರತ ಮತ್ತು ನರಸಿಹ್ಮಕ್ಷೇತ್ರವೆಂಬ ಹೆಸರಿನ ಅನ್ವರ್ಥತೆಯ ವಿವರಣೆ. 37

ನಾಲ್ಕನೆಯ ಅಧ್ಯಾಯ—

ಸಕಲ ಕ್ಷೇತ್ರಗಳಿಗಿಂತ ಬ್ರಹ್ಮನು ಅಶ್ವಮೇಧಯಾಗವನ್ನು ಮಾಡಿ ಕಾಂಚೀ ಎಂದು ಪ್ರಖ್ಯಾತವಾದ ನಗರಿಯ ಶ್ರೇಷ್ಠತೆ. 58

ಐದನೆಯ ಅಧ್ಯಾಯ—

ಸತ್ಯವ್ರತಕ್ಷೇತ್ರದಲ್ಲಿರುವ ಅನಂತತೀರ್ಥ ಮುಂತಾದ ತೀರ್ಥಗಳ ಉತ್ಪತ್ತಿ ಪ್ರಶಂಸೆ. 74

ಆರನೆಯ ಅಧ್ಯಾಯ—

ಗರುಡತೀರ್ಥದ ಮಾಹಾತ್ಮ್ಯವನ್ನು ಕೀರ್ತನಮಾಡುವ ಪ್ರಸಂಗದಲ್ಲಿ ಸುಯಾಜಯಾಜಕರ ಚರಿತ್ರೆ. 88

ಏಳನೆಯ ಅಧ್ಯಾಯ—

ತತ್ಕಾಯಾರೋಹಣ ತೀರ್ಥದ ಮಹಿಮೆ ಮತ್ತು ಅದಕ್ಕೆ ಅಂಗವಾಗಿ ತ್ರಿಶಂಕುವಿಗೆ ಉತ್ತಮಲೋಕ ಪ್ರಾಪ್ತಿ ವರ್ಣನೆ. 105

ಪುಟಸಂಖ್ಯೆ

ಎಂಟನೆಯ ಅಧ್ಯಾಯ—
ಕೃಷೀವಲನೆಂಬ ಮಹಾಪಾತಕಿಗೆ ಪುಣ್ಯಪದಪ್ರಾಪ್ತಿ ಮೂಲಕವಾಗಿ ತತ್ಕಯಾರೋಹಣತೀರ್ಥದ ಪ್ರಶಂಸೆ ಮತ್ತು ಗಜತೀರ್ಥ, ಗೃಧ್ರ ತೀರ್ಥ ಮುಂತಾದ ಇತರ ತೀರ್ಥಗಳ ವರ್ಣನೆ. 118

ಒಂಭತ್ತನೆಯ ಅಧ್ಯಾಯ—
ಹಸ್ತಿಗಿರಿಯಲ್ಲಿ ವಿಷ್ಣುವಿನ ಪ್ರಾದುರ್ಭಾವಕ್ಕೆ ಕಾರಣ, ಹಂಸರೂಪ ದಿಂದ ಬ್ರಹ್ಮನಿಗೆ ಹರಿಯು ಮಾಡಿದ ವೇದೋಪದೇಶ ಹರಿಯ ದರ್ಶನಕ್ಕಾಗಿ ಸತ್ಯವ್ರತಕ್ಷೇತ್ರದಲ್ಲಿ ಬ್ರಹ್ಮನು ಅಶ್ವಮೇಧಯಾಗ ವನ್ನು ಮಾಡಬೇಕೆಂಬ ಸಂಕಲ್ಪಮಾಡಿದುದು.

ಹತ್ತನೆಯ ಅಧ್ಯಾಯ—
ಸತ್ಯವ್ರತಕ್ಷೇತ್ರದಲ್ಲಿ ದೇವ-ಋಷಿಗಣಗಳ ಸಹಾಯದಿಂದ ಬ್ರಹ್ಮನು ಅಶ್ವಮೇಧಯಾಗವನ್ನು ಮಾಡಿದುದು. 150

ಹನ್ನೊಂದನೆಯ ಅಧ್ಯಾಯ—
ಯಜ್ಞಶಾಲೆಯಲ್ಲಿ ದೇವತೆಗಳ ಮೇಲಿನ ಸ್ಪರ್ಧೆಯಿಂದ ರಾಕ್ಷಸರು ಧನದಾನಕ್ಕೆ ತೊಡಗಿರುವುದನ್ನು ಇಂದ್ರನು ತಡೆದುದರಿಂದ ದೇವಾಸುರರ ಮನಸ್ತಾಪ ಮತ್ತು ಶಾರ್ಙ್ಗಧರ ಮೂರ್ತಿ, ಮತ್ತು ನೃಸಿಹ್ಮನಿಂದ ರಾಕ್ಷಸರ ಪರಾಜಯ, 171

ಹನ್ನೆರಡನೆಯ ಅಧ್ಯಾಯ—
ಪರಾಜಿತರಾದ ಅಸುರರು ಈಶ್ವರನನ್ನು ಶರಣಹೊಂದಲು ಅವರಲ್ಲಿ ಅನುಗ್ರಹ ತೋರಿಸಿ ಶರಭಾಕಾರದಿಂದ ಈಶ್ವರನು ಬಂದುದು. ದೀಪಪ್ರಕಾಶಮೂರ್ತಿಯ ಪ್ರಾದುರ್ಭಾವ. 191

ಹದಿಮೂರನೆಯ ಅಧ್ಯಾಯ—
ಅಷ್ಟಭುಜಸ್ವಾಮಿಯಿಂದ ಶರಭರೂಪಿಯಾದ ಈಶ್ವರನಿಗೆ ಉಂಟಾದ ಪರಾಜಯ. 210

ಹದಿನಾಲ್ಕನೆಯ ಅಧ್ಯಾಯ—
ರಾಕ್ಷಸರು ಬ್ರಹ್ಮನ ಯಜ್ಞವನ್ನು ಭಂಗಪಡಿಸಲು ಸರಸ್ವತಿ-ಬ್ರಹ್ಮ ದೇವರ ವಿರೋಧವನ್ನು ಮುಂದಿಟ್ಟು ಸರಸ್ವತಿಯನ್ನು ಪ್ರೇರೇಪಿ ಸಿದುದು, ಅವರ ಅನ್ಯೋನ್ಯ ವಿರೋಧಕ್ಕೆ ಕಾರಣ. 216

ಪುಟಸಂಖ್ಯೆ

ಹದಿನೈದನೆಯ ಅಧ್ಯಾಯ—

ಯಜ್ಞಕ್ಕೆ ಭಂಗವನ್ನು ತರಲು ಸರಸ್ವತಿಯು ನದೀರೂಪವನ್ನು ತೆಗೆದುಕೊಂಡು ಬಂದುದು, ಕಡೆಗೆ ಸರಸ್ವತಿಗೆ ಹರಿಯ ದರ್ಶನ 232

ಹದಿನಾರನೆಯ ಅಧ್ಯಾಯ—

ಸರಸ್ವತಿಯು ವಿರೋಧವನ್ನು ಬಿಟ್ಟು ಯಜ್ಞಶಾಲೆಗೆ ಹೋಗಿ ಬ್ರಹ್ಮನಲ್ಲಿ ವಿನೀತಳಾಗಿ ಕರ್ಮಾನುಷ್ಠಾನದಲ್ಲಿ ನೆರವಾಗುವುದು, ಯಜ್ಞಾನುಷ್ಠಾನ ಮತ್ತು ಬ್ರಹ್ಮನಿಗೆ ದೇವಾದಿಗಳೊಂದಿಗೆ ಮುಕುಂದನ ಸಾಕ್ಷಾತ್ಕಾರ. 252

ಹದಿನೇಳನೆಯ ಅಧ್ಯಾಯ.

ಪುಣ್ಯಕೋಟಿಯೆಂಬ ವಿಮಾನಾರೂಢನಾದ ಸ್ವಾಮಿಯನ್ನೇ ಕಾಂಚೀಕ್ಷೇತ್ರದಲ್ಲಿ ವಾಸಮಾಡಬೇಕೆಂದು ಬ್ರಹ್ಮನ ಪ್ರಾರ್ಥನೆ, ಪ್ರತಿಮೆಗಳನ್ನು ಪ್ರತಿಷ್ಠೆಮಾಡಿ ಪೂಜಿಸಿದಲ್ಲಿ ಅವುಗಳಲ್ಲಿ ಸರ್ವದಾ ವಾಸಮಾಡುವೆನೆಂದು ಭಗವಂತನು ಅನುಗ್ರಹ ತೋರಿಸಿದುದು 276

ಹದಿನೆಂಟನೆಯ ಅಧ್ಯಾಯ—

ಸತ್ತ್ವಗುಣಮಯ ದೇವರು ಯಾರೆಂದು ಭೃಗುಮುನಿಯು ಜಿಜ್ಞಾಸೆಯಿಂದ ಹೊರಟು ಬ್ರಹ್ಮ-ರುದ್ರರಂತೆ ವಿಷ್ಣುವಿನಲ್ಲಿ ತೋರಿಸಿದ ಅಪಚಾರದಿಂದ ದುರ್ಗತಿಯನ್ನು ಹೊಂದಿದುದು ಮತ್ತು ಅದರ ಪರಿಹಾರಾರ್ಥವಾಗಿ ನಾರದೋಪದೇಶದಂತೆ ಕಾಂಚೀನಗರಕ್ಕೆ ಬಂದಿರುವುದು. 297

ಹತ್ತೊಂಭತ್ತೆಯ ಅಧ್ಯಾಯ—

ಬಲಿಚಕ್ರವರ್ತಿಯ ಅಶ್ವಮೇಧಯಾಗದ ಅನುಷ್ಠಾನ, ಆ ಸಂದರ್ಭದಲ್ಲಿ ಶೇಷ-ವಾಮನ ತ್ರಿವಿಕ್ರಮ ಅವತಾರಗಳು. 315

ಇಪ್ಪತ್ತನೆಯ ಅಧ್ಯಾಯ—

ಬಲೀಂದ್ರನ ಯಜ್ಞ ವಿಘಾತಕ್ಕೋಸ್ಕರ ಜಲಾಶಯಗಳನ್ನು ದೇವತೆಗಳು ಒಣಗಿಸಿದುದು. ಆಗ ಹರಿಯ ಮೇಘಾಮೂರ್ತಿಯಿಂದ ಅವತರಿಸಿ ವಿಪತ್ತನ್ನು ಶಮನಮಾಡಿರುವುದು. 336

ಇಪ್ಪತ್ತೊಂದನೆಯ ಅಧ್ಯಾಯ—

ಭೃಗುಮುನಿಗೆ ವಾಮನಮೂರ್ತಿಯು ಪ್ರಸಾದದಿಂದ ವಿಷ್ಣುವಿನ ತ್ರಿಧಾಮಮೂರ್ತಿಗಳ ಸಾಕ್ಷಾತ್ಕಾರವು. 357

ಪುಟಸಂಖ್ಯೆ

ಇಪ್ಪತ್ತೆರಡನೆಯ ಅಧ್ಯಾಯ—

ಭೃಗುಮುನಿಗೆ ಶಾಪಕೊಟ್ಟ ಅಪರಾಧದಿಂದ ವಿಷ್ಣುವು ಲಕ್ಷ್ಮಿಯನ್ನು ಶಪಿಸಿ ಲಕ್ಷ್ಮಿಯು ಭೃಗುಮುನಿಯ ಪುತ್ರಿಯಾಗಿ ಜನಿಸಿದುದು ಮತ್ತು ತೀರ್ಥಸ್ನಾನಮಾಡಿ ಲಕ್ಷ್ಮಿಯು ವರದಸ್ವಾಮಿಯನ್ನು ಅರ್ಚಿಸಿದುದರಿಂದ ಲಕ್ಷ್ಮೀತೀರ್ಥದ ಉತ್ಪತ್ತಿ. 372

ಇಪ್ಪತ್ತಮೂರನೆಯ ಅಧ್ಯಾಯ—

ರುದ್ರಪಾರ್ವತಿಯರಿಗೆ ದ್ಯೂತದಲ್ಲಿ ವಿರೋಧವುಂಟಾದುದು ಮತ್ತು ರುದ್ರಶಾಪದಿಂದ ಪಾರ್ವತಿಗೆ ಕಾಳೀಸ್ವರೂಪವು ಬಂದುದು. 382

ಇಪ್ಪತ್ತನಾಲ್ಕನೆಯ ಅಧ್ಯಾಯ—

ಸತ್ಯವ್ರತಕ್ಷೇತ್ರದಲ್ಲಿ ಗಿರಿಜೆಯು ವಾಮನಮೂರ್ತಿಯ ಸೇವೆಯನ್ನು ಮಾಡಿ ಶಾಪೋದ್ಧಾರವನ್ನು ಹೊಂದಿದುದು, ಮತ್ತು ಚಂದ್ರಖಂಡಮೂರ್ತಿಯ ಅವತಾರ. 390

ಇಪ್ಪತ್ತೈದನೆಯ ಅಧ್ಯಾಯ—

ಗಿರಿಜಾಭಕ್ತಿಯನ್ನು ಪರೀಕ್ಷಿಸುವ ಶಂಕರಾಜ್ಞೆಯಿಂದ ಗಂಗೆಯು ಗಿರಿಜೆಯ ತಪಸ್ಸಿಗೆ ಭಂಗ ತಂದಿರುವುದು. ಗಿರಿಜೆಯಿಂದ ಗಂಗೆಗೆ ಶಾಪಪ್ರಾಪ್ತಿ. 402

ಇಪ್ಪತ್ತಾರನೆಯ ಅಧ್ಯಾಯ—

ಗಂಗೆಯ ಶುದ್ಧಿಗೆ ಚಂದ್ರಖಂಡಸ್ವಾಮಿಯನ್ನು ಪ್ರಾರ್ಥಿಸಬೇಕೆಂದು ಬ್ರಹ್ಮನು ತೋರಿಸಿದ ಉಪಾಯ. ಅದರಿಂದ ದೇವತೆಗಳಿಗೆ ಹರಿಯ ಸಾಕ್ಷಾತ್ಕಾರ. 413

ಇಪ್ಪತ್ತೇಳನೆಯ ಅಧ್ಯಾಯ—

ದೇವತೆಗಳು ಗಂಗೆಯ ಶುದ್ಧಿಯನ್ನು ಪ್ರಾರ್ಥಿಸಲು ಹರಿಯ ಅನುಗ್ರಹದಿಂದ ಗಂಗೆಯು ಶುದ್ಧಿ ಹೊಂದಿರುವುದು. 424

ಇಪ್ಪತ್ತೆಂಟನೆಯ ಅಧ್ಯಾಯ—

ಬ್ರಹ್ಮನು ಹರಿಯ ಆಜ್ಞೆಯಂತೆ ವಿಶ್ವಕರ್ಮನಿಂದ ಪ್ರತಿಮಾಮಂಟಪಾದಿಗಳನ್ನು ಮಾಡಿಸಿ ಪೂಜಾ-ಉತ್ಸವಗಳನ್ನು ನೆರವೇರಿಸಿದುದು 439

ಇಪ್ಪತ್ತೊಂಭತ್ತನೆಯ ಅಧ್ಯಾಯ—

ತ್ರೇತಾಯುಗದಲ್ಲಿ ಕಾಂಚೀನಗರವು ವನರೂಪವನ್ನು ಹೊಂದಿ

ಪುಟಸಂಖ್ಯೆ

ಜನಮೇಜಯರಾಜನಿಂದ ನಗರ ನಿರ್ಮಾಣ, ಮತ್ತು ಅಲ್ಲಿ ಜನಮೇಜಯನು ಮಾಡಿ ಯಾಗಾನುಷ್ಠಾನ ಮತ್ತು ಶ್ರೀಕೃಷ್ಣನ ಸಂದರ್ಶನ. 456

ಮೂವತ್ತನೆಯ ಅಧ್ಯಾಯ—

ಪುತ್ರಾರ್ಥಿಯಾದ ವಿರೋಚನನು ಮಂಜುಲಾಪತ್ನಿಯೊಡನೆ ಸತ್ಯವ್ರತಕ್ಷೇತ್ರದಲ್ಲಿ ತಪಸ್ಸನ್ನು ಮಾಡಿದುದು. ಹಿಂದೆ ಶಪ್ತರಾದ ಜಯವಿಜಯರು ಪಲ್ಲವ, ವಿಲ್ಲವರ ರೂಪದಿಂದ ಈ ರಾಜನಿಗೆ ಪುತ್ರರಾಗಿ ಜನಿಸಿದುದು. 473

ಮೂವತ್ತೊಂದನೆಯ ಅಧ್ಯಾಯ—

ಬೃಹಸ್ಪತಿಗೆ ಮುನಿಗಳಿಂದ ಶಾಪ ಬಂದು ಭರದ್ವಾಜಮುನಿಯ ಆದೇಶದಂತೆ ಸತ್ಯವ್ರತ ಕ್ಷೇತ್ರಾಟನದಿಂದ ಶಾಪೋದ್ಧಾರವಾದುದು, ಮತ್ತು ಪಲ್ಲೀಚರಿತ್ರೆ. 489

ಮೂವತ್ತೆರಡನೆಯ ಅಧ್ಯಾಯ—

ನಂದಿಗೆ ರುದ್ರನಿಂದ ಶಾಪಪ್ರಾಪ್ತಿ, ಲಿಂಗವನ್ನು ಪ್ರತಿಷ್ಠೆಮಾಡಿ ನಂದಿಯು ಈಶ್ವರನನ್ನು ಪೂಜಿಸಿ ಶಾಪದಿಂದ ಬಿಡುಗಡೆಹೊಂದಿರುವುದು. ವೃಷಭೇಶ್ವರನ ಅವತಾರ 509

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ

ಪ್ರೊಪ್ರೈಟರ್ ವೈ. ಆರ್. ರಂಗರಾವ್ ರವರಿಂದ

ಮುದ್ರಿಸಲ್ಪಟ್ಟಿತು.

೧೯೪೫

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಪ್ರಥಮೋಽಧ್ಯಾಯಃ

ಕದಾಚಿನ್ನೈಮಿಷಾರಣ್ಯೇ ಪುಣ್ಯಕ್ಷೇತ್ರೇ ಸಮಾಗತಾಃ ।
ಶೌನಕಾದ್ಯಾ ಮಹಾಭಾಗಾ ಮುನಯಃ ಸಂಶಿತವ್ರತಾಃ ॥ ೧ ॥

ಬೋಧಾಯನೋ ಮುಂಜಿಕೇಶೋ ನಾರದಃ ಕಣ್ವಕರ್ದಮೌ ।
ಕಾತ್ಯಾಯನೋ ಗೌತಮಶ್ಚ ಮುನಿರ್ದಾಂಡಾಯನೋಽಷ್ಟಕಃ ॥ ೨ ॥

ಕಾಂಚೀಮಾಹಾತ್ಮ್ಯದ ಕನ್ನಡ ಅನುವಾದವು.

೧. ಕಾಂಚೀಮಾಹಾತ್ಮ್ಯವೆಂಬ ಈ ಪುರಾಣ ಕಥೆಯು ಒಂದಾನೊಂದು ಪುಣ್ಯ ಕ್ಷೇತ್ರದಲ್ಲಿ ಮಹರ್ಷಿ ಸಮಾಜದಲ್ಲಿ ಧರ್ಮಜಿಜ್ಞಾಸೆಯು ಹುಟ್ಟಿ ಆ ಜ್ಞಾನಿವರ್ಯರು ವಿಮರ್ಶೆಮಾಡಿ ನಿಶ್ಚಯಿಸಿರುವ ಮಾಹಾತ್ಮ್ಯದಿಂದ ಗರ್ಭಿತವಾಗಿದೆ. ಇದು ಈ ಭೂಮಿಕೆಯಿಂದ ಪ್ರಾರಂಭವಾಗಿರುವುದು. ಒಂದಾನೊಂದು ಸಮಯದಲ್ಲಿ ಮಹಾ ಮಹಿಮೆಯುಳ್ಳವರೂ ಅತಿಕರ್ಕಶವ್ರತಾನುಷ್ಠಾನವಂತರೂ ಆದ ಶೌನಕ ಮುಂತಾದ ಅನೇಕ ಮಹರ್ಷಿಗಳು ಪವಿತ್ರಕ್ಷೇತ್ರವಾದ ನೈಮಿಷವೆಂಬ ಅರಣ್ಯದಲ್ಲಿ ಸೇರಿದರು.

೨. ಅಲ್ಲಿ ಸೇರಿದ ಮಹರ್ಷಿಗಳಲ್ಲಿ ಮುಖ್ಯರಾದವರು ಯಾರೆಂದರೆ :— ಬೋಧಾಯನ, ಮುಂಜಿಕೇಶ, ನಾರದ, ಕಣ್ವ, ಕರ್ದಮ, ಕಾತ್ಯಾಯನ, ಗೌತಮ ಮತ್ತು ಎಂಟನೆಯವನಾಗಿ ದಾಂಡಾಯನನೆಂಬ ಮುನಿ-ಇವರೆಲ್ಲರೂ ಸೇರಿದ್ದರು.

ಭರದ್ವಾಜೋ ಯವಕ್ರೀತೋ ಜೈಮಿನಿಃ ಪೈಲ ಏವ ಚ ।
ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ ॥ ೩ ॥

ಯಾಜ್ಞವಲ್ಕ್ಯಃ ಪಂಚತಪಾ ಅಷ್ಟಾವಕ್ರಃ ಸುಶೃಂಖಲಃ ।
ಏತೇ ಚಾನ್ಯೇ ಚ ಮುನಯೋ ಹಂಸಾಃ ಸಂನ್ಯಾಸಿನೋಽಪರೇ ॥ ೪ ॥

ಯಜಂತೋ ವಿವಿಧೈರ್ಯಜ್ಞೈರ್ವಿಷ್ಣುಮವ್ಯಕ್ತರೂಪಿಣಂ ।
ಧ್ಯಾಯಂತಃ ಪೂಜಯಂತಶ್ಚ ಸರ್ವೇ ಕೈವಲ್ಯಕಾಂಕ್ಷಿಣಃ ॥ ೫ ॥

ಅಥೈಕದಾ ಸಮಾಸೀನಾಃ ಸರ್ವೇ ಪ್ರಯತಮಾನಸಾಃ ।
ವೇದಶಾಸ್ತ್ರಾರ್ಥತತ್ತ್ವಜ್ಞಾಃ ಪ್ರಾಜ್ಞಾಃ ಪ್ರೋಚುಃ ಪರಸ್ಪರಂ ॥ ೬ ॥

---

೩. ಮತ್ತು ಭರದ್ವಾಜ, ಯವಕ್ರೀತ, ಜೈಮಿನಿ, ಪೈಲ, ವಸಿಷ್ಠ, ವಾಮದೇವ, ಜಾಬಾಲಿ, ಮತ್ತು ಕಾಶ್ಯಪ ಮಹರ್ಷಿಗಳು ಆ ಸಮಾಜದಲ್ಲಿ ಸೇರಿದ ಸಭಿಕರಾಗಿದ್ದರು.

೪. ಯಾಜ್ಞವಲ್ಕ್ಯ, ಪಂಚತಪ, ಅಷ್ಟಾವಕ್ರ, ಸುಶೃಂಖಲ, ಎಂಬ ಇಲ್ಲಿ ನಿರ್ದೇಶಮಾಡಿರುವ ಮತ್ತು ಇತರ ಅನೇಕ ಮಹರ್ಷಿಗಳೂ ಅಲ್ಲದೇ ಹಂಸಸಂಜ್ಞೆಯಿಂದ ಅಂಕಿತರಾದ ಸನ್ಯಾಸಿಗಳೂ ಸಭೆಯನ್ನು ಅಲಂಕರಿಸಿದ್ದರು.

೫. ಈ ಮಹಾತ್ಮರೆಲ್ಲರೂ ನಾನಾವಿಧವಾದ ಯಜ್ಞಗಳನ್ನು ಆಚರಿಸಿ ಅತೀಂದ್ರಿಯನಾದ್ದರಿಂದ ಸರ್ವಪ್ರಕಾಶವಲ್ಲದ ಸ್ವರೂಪವುಳ್ಳ ವಿಷ್ಣುಪರಮಾತ್ಮನನ್ನು ಪೂಜಿಸುತ್ತ ಮತ್ತು ಧ್ಯಾನ, ಇತರ ಪೂಜೆಗಳನ್ನು ಆಚರಿಸುತ್ತ ಮೋಕ್ಷಸುಖವನ್ನು ಅಪೇಕ್ಷಿಸುವರಾಗಿದ್ದರು.

೬. ಹೀಗಿರಲು ಒಂದಾನೊಂದು ಸಮಯದಲ್ಲಿ ವೇದ-ಶಾಸ್ತ್ರಗಳ ಗಂಭೀರವಾದ ತತ್ತ್ವಾರ್ಥವನ್ನು ಅರಿತಿರುವ ಪ್ರಾಜ್ಞ ಮಹಾಮುನಿಗಳು ಪವಿತ್ರವಾದ ಚಿತ್ತದಿಂದ ಗೋಷ್ಠೀಸುಖದಿಂದ ಕುಳಿತುಕೊಂಡವರಾಗಿ ಪರಸ್ಪರವಾಗಿ ಶಾಸ್ತ್ರಾರ್ಥಸಂಲಾಪವನ್ನು ಪ್ರಾರಂಭಿಸಿದರು.

ಕೇನೇಹ ಕರ್ಮಣಾ ನೄಣಾಂ ಭವೇನ್ಮುಕ್ತಿಪ್ರದೋ ಹರಿಃ ।
ಯಜ್ಞೇನ ತಪಸಾ ವಾಽಥ ಕಿಂ ವಾ ದಾನೇನ ಯಾತ್ರಯಾ ॥ ೭ ॥

ಇತಿ ತೇಷು ಬ್ರುವಾಣೇಷು ಗೌತಮಸ್ತಪಸಾಂ ನಿಧಿಃ ।
ವಿಪ್ರಾನ್ ಪ್ರೋವಾಚ ಧರ್ಮಾತ್ಮಾ ಶಾಸ್ತ್ರದೃಷ್ಟ್ಯಾ ಸ್ವನಿಶ್ಚಿತಮ್ ॥ ೮ ॥

ಯಜ್ಞಮೂರ್ತಿರ್ಮಹಾದೇವೋ ಯಜ್ಞಾಂಗೋ ಯಜ್ಞಭುಕ್ ಸ್ವಯಂ
ಯಜ್ಞೇನ ಮುಕ್ತಿದೋ ನೄಣಾಂ ಭವೇದಿತಿ ಮತಿರ್ಮಮ ॥ ೯ ॥

ತತಃ ಕಣ್ವೋ ಮಹಾಪ್ರಾಜ್ಞಸ್ತಪಸಾ ಧೂತಕಿಲ್ಬಿಷಃ ।
ಪ್ರೋವಾಚ ವಿಪ್ರಾನಾಮಂತ್ರ್ಯ ಸ್ವಮತಂ ಬ್ರಹ್ಮನಂದನಃ ॥ ೧೦ ॥

ತಪೋಯೋಗೇನ ಮಹತಾ ದಮೇನ ನಿಯಮೇನ ಚ ।
ಸದ್ಯಃ ಕೈವಲ್ಯದೋ ವಿಷ್ಣುರ್ಭವೇದತ್ರ ನ ಸಂಶಯಃ ॥ ೧೧ ॥

---

೭. ವಿಷ್ಣುಪರಮಾತ್ಮನು ಮನುಜರಿಗೆ ಯಾವ ಸತ್ಕರ್ಮಾಚರಣೆಯಿಂದ ಪ್ರಸನ್ನನಾಗಿ ಮುಕ್ತಿಯನ್ನು ಕೊಡುವನು? ಯಜ್ಞ, ತಪಸ್ಸು, ದಾನ, ಪೂಜೆ ಇವುಗಳಲ್ಲಿ ಯಾವುದಾದರೊಂದರಿಂದ ಪ್ರಸನ್ನನಾಗುವನೆ?

೮. ಈ ರೀತಿಯಾಗಿ ಜಿಜ್ಞಾಸೆಯಿಂದ ಮುನಿಗಳು ಗೋಷ್ಠಿಯನ್ನು ಆರಂಭಿಸಲಾಗಿ ತಪೋನಿಧಿಯೂ ಧರ್ಮಾತ್ಮನೂ ಆದ ಗೌತಮಮಹರ್ಷಿಯು ಶಾಸ್ತ್ರದೃಷ್ಟಿಯಿಂದ ತನ್ನ ಸಿದ್ಧಾಂತವನ್ನು ವಿಪ್ರರಿಗೆ ಬೋಧಿಸಿದನು.

೯. ದೇವೋತ್ತಮನಾದ ಮಹಾವಿಷ್ಣುವು ಯಜ್ಞದ ಮೂರ್ತಿಯುಳ್ಳವನು. ಯಜ್ಞವೆಂಬ ಅವಯವಗಳಿಂದ ಪೂರ್ಣನು. ಮತ್ತು ತಾನು ಯಜ್ಞದಲ್ಲಿ ಅರ್ಪಿಸಿರುವ ಹವಿಸ್ಸುಗಳನ್ನು ಭುಜಿಸುವನು. ಆದುದರಿಂದ ಮನುಷ್ಯರ ಯಜ್ಞಾಚರಣೆಯಿಂದ ವಿಶೇಷವಾಗಿ ಮುಕ್ತಿಯನ್ನು ಕೊಡುವನೆಂದು ನನ್ನ ಮತವು.

೧೦. ಸಕಲ ಮುನಿಗಳು ತಮ್ಮ ತಮ್ಮ ಮತಗಳನ್ನು ಪ್ರತಿಪಾದಿಸುವ ಈ ಅವಸರದಲ್ಲಿ ಗೌತಮ ಮುನಿಯ ವಚನಾನಂತರದಲ್ಲಿ ತಪಶ್ಚರ್ಯೆಯಿಂದ ಪಾಪಗಳನ್ನು ಕಳೆದಿರುವ, ಮಹಾಪ್ರಾಜ್ಞನಾದ. ಮತ್ತು ಬ್ರಹ್ಮಪುತ್ರನಾದ ಕಣ್ವಮುನಿಯು ವಿಪ್ರರನ್ನು ಸಂಬೋಧಿಸಿ ತನ್ನ ಮತವನ್ನು ವಿವರಿಸಿದನು.

೧೧. ಇಂದ್ರಿಯನಿಗ್ರಹ, ಶೌಚಾಚಾರಾದಿ ನಿಯಮಗಳಿಂದ ಕೂಡಿದ ಮಹ

ಮರೀಚಿಸ್ತಾನ್ ಸಮಾಭಾಷ್ಯ ಪ್ರೋವಾಚ ಸ್ವಮತಂ ತದಾ ।
ನರಾಣಾಂ ಮುಕ್ತಿದೋ ವಿಷ್ಣುರ್ಭವೇತ್ತೀರ್ಥಾನುಸೇವಯಾ ॥ ೧೨ ॥

ಅತ್ರಿರ್ದಾನೇನ ದೇವೇಶಂ ಕೈವಲ್ಯದಮಥಾಬ್ರವೀತ್ ।
ಏವಂ ತದಾ ಬ್ರುವಾಣೇಷು ಬ್ರಾಹ್ಮಣೇಷು ಪರಸ್ಪರಮ್ ॥ ೧೩ ॥

ತತಸ್ತಾನಬ್ರವೀತ್ ಸರ್ವಾನ್ ವಸಿಷ್ಠೋ ಬ್ರಹ್ಮನಂದನಃ ।
ವಸಿಷ್ಠ ಉವಾಚ :—
ಶೃಣ್ವಂತು ಮುನಯಃ ಸರ್ವೇ ಯೇನ ಮುಕ್ತಿಪ್ರದೋ ಹರಿಃ ॥ ೧೪ ॥

ನರಾಣಾಂ ಬ್ರಾಹ್ಮಣಾದೀನಾಮಿಹ ಕೈವಲ್ಯಕಾಂಕ್ಷಿಣಾಮ್ ।
ಜಂಬೂದ್ವೀಪೇ ಮಹಾಪುಣ್ಯೇ ಖಂಡೇ ಭಾರತಸಂಜ್ಞಕೇ ॥ ೧೫ ॥

ತ್ತಾದ ತಪಶ್ಚರ್ಯೆಯಿಂದ ಕೂಡಲೆ ವಿಷ್ಣುವು ತೃಪ್ತನಾಗಿ ಕೈವಲ್ಯಸುಖವನ್ನು ಕೊಡು ವನು. ಈ ವಿಷಯದಲ್ಲಿ ಸಂಶಯವಿಲ್ಲ. ಇದು ನನ್ನ ಮತವು.

೧೨. ಆಗ ಹೀಗೆಯೇ ಮಾತನಾಡುವ ಪ್ರಸಂಗದಲ್ಲಿ ಮರೀಚಿ ಮುನಿಯು ಪವಿತ್ರ ತೀರ್ಥಾಟನೆಯಿಂದ ಸಂತುಷ್ಟನಾದ ವಿಷ್ಣುವು ಮಾನವರಿಗೆ ಮುಕ್ತಿಯನ್ನು ಕೊಡುವನೆಂಬ ತನ್ನ ಮತವನ್ನು ಸಭಿಕರಾದ ವಿಪ್ರರಿಗೆ ಬೋಧಿಸಿದನು.

೧೩-೧೪. ಅತ್ರಿ ಮುನಿಯು ಈ ವಿಷಯದಲ್ಲಿ ದೇವೋತ್ತಮನು ದಾನದಿಂದ ಕೈವಲ್ಯವನ್ನು ಅನುಗ್ರಹಿಸುವನೆಂಬ ತನ್ನ ಸಿದ್ಧಾಂತವನ್ನು ಪ್ರತಿಪಾದಿಸಿದನು. ಹೀಗೆ ಅಲ್ಲಿ ನೆರದಿರುವ ಪ್ರಾಜ್ಞವಿಪ್ರರು ಪರಸ್ಪರವಾಗಿ ತಮ್ಮ ತಮ್ಮ ಪವಿತ್ರವೂ ರಹ ಸ್ಯವೂ ಆದ ಸಿದ್ಧಾಂತಗಳನ್ನು ವಿವರಿಸುತ್ತಿರಲು ಸಾಕ್ಷಾತ್ತಾಗಿ ಬ್ರಹ್ಮಪುತ್ರನಾದ ವಸಿಷ್ಠಮುನಿಯು ಅವರೆಲ್ಲರನ್ನೂ ಉದ್ದೇಶಿಸಿ ಈ ರೀತಿಯಾಗಿ ಹೇಳಿದನು. ವಸಿಷ್ಠ ಮುನಿಯು ಹೇಳಿದ್ದೇನೆಂದರೆ—ಹರಿಯು ಯಾವ ಸಾಧನದಿಂದ ಒಲಿದು ಮುಕ್ತಿ ಯನ್ನು ಕೊಡುವನೆಂಬ ವಿಷಯದಲ್ಲಿ ನನ್ನ ವಚನವನ್ನು ಕೇಳಿರಿ.

೧೫-೧೬. ಈ ಪ್ರಪಂಚದಲ್ಲಿ ಮುಕ್ತಿಯನ್ನು ಆಶಿಸುತ್ತಿರುವ ಬ್ರಾಹ್ಮಣ ಮುಂತಾದ ಪ್ರಜೆಗಳ ಇಷ್ಟವನ್ನು ನೆರವೇರಿಸಿಕೊಡುವ ಸಾಧನವನ್ನು ಕೇಳಿರಿ. ಆದರೆ ಪುಣ್ಯಮಯವಾದ ಈ ಜಂಬೂದ್ವೀಪದ ಭರತಖಂಡದಲ್ಲಿ ಹುಟ್ಟಿರುವ ಮನು ಜರು ಕಾಮ ಕ್ರೋಧ ಮದ ಮುಂತಾದ ಅರಿಷಡ್ವರ್ಗಕ್ಕೆ ವಶರೂ ಲೋಭಿಗಳೂ

ಉತ್ಪನ್ನಾ ಮನುಜಾ ಭೂಮೌ ಕಾಮಕ್ರೋಧಮದಾನ್ವಿತಾಃ ।
ನ ಕೈವಲ್ಯಮಪೇಕ್ಷಂತೇ ಕೃಪಣಾ ಭೋಗಲೋಲುಪಾಃ ॥ ೧೬ ॥

ಅಲ್ಪಾಯುಷೋ ಹ್ಯಲ್ಪಸತ್ತ್ವಾ ಅಲ್ಪಜ್ಞಾನಾ ಅಕಿಂಚನಾಃ ।
ನ ವಿಷ್ಣುಂ ಪೂಜಯಂತ್ಯೇತೇ ನ ಯಜಂತಿ ಸ್ಮರಂತಿ ವಾ ॥ ೧೭ ॥

ಅನ್ಯಾನ್ ಸಂಪೂಜಯಂತ್ಯೇತೇ ಭೋಗಾಯ ತ್ರಿದಿವೌಕಸಃ ।
ನೈವ ಜಾನಂತಿ ತೇ ವಿಷ್ಣುಂ ಭೋಗಮೋಕ್ಷಪ್ರದಾಯಿನಂ ॥ ೧೮ ॥

ಕೇಚಿದ್ಯಜಂತಿ ಕಮಲಾಸನಮಾತ್ಮಯೋನಿ-
ಮನ್ಯೇ ಪುರಾರಿಮಪರೇ ಬಲಸೂದನಂ ಚ ।
ಸ್ಕಂದಂ ಚ ಭಾನುಗಣಪಾವಪಿ ಹವ್ಯವಾಹಂ
ಕಾಮಾರ್ಥಿನಸ್ತನುಭೃತೋ ನ ತು ವಿಷ್ಣುಮೀಶಂ ॥ ೧೯ ॥

ಮತ್ತು ಭೋಗಲಾಲಸೆಯಿಂದ ಪರಿಪೂರ್ಣರೂ ಆಗಿ ಭೂಮಿಯಲ್ಲಿ ವಾಸಮಾಡುತ್ತ ಕೈವಲ್ಯಸುಖವನ್ನು ಸ್ವಲ್ಪವೂ ಆಶಿಸುವುದಿಲ್ಲ.

೧೭. ಮತ್ತು ಆ ಪ್ರಜೆಗಳು ಅಲ್ಪಾಯುಷ್ಯ, ಅಲ್ಪಶಕ್ತಿ, ಮತ್ತು ಅಲ್ಪವಾದ್ದ ಜ್ಞಾನ ಇವುಗಳಿಂದ ಕೂಡಿದವರಲ್ಲದೆ ದಾರಿದ್ರ್ಯಾವಸ್ಥೆಗೆ ಭಾಜನರಾಗಿ ವಿಷ್ಣುವನ್ನು ಪೂಜಿಸುವುದಿಲ್ಲ. ಹಾಗು ವಿಷ್ಣುವನ್ನು ಉದ್ದೇಶಿಸಿ ದ್ರವ್ಯವನ್ನು ತ್ಯಜಿಸುವುದೆಂಬ ವಿಷ್ಣುಯಾಗವನ್ನು ಆಚರಿಸುವುದಿಲ್ಲ. ಕಡೆಗೆ ಸ್ಮರಣಮಾತ್ರದಿಂದಲೂ ವಿಷ್ಣುವನ್ನು ಸತ್ಕರಿಸುವುದಿಲ್ಲ.

೧೮, ಮುಕ್ತಿಸುಖವನ್ನು ಮರೆತು ಬೇರೆವಿಧವಾದ ವಿಷಯ ಸೌಖ್ಯವನ್ನು ಅನುಭವಿಸಬೇಕೆಂಬ ಭೋಗಾಶೆಯಿಂದ ಮಿಕ್ಕ ದೇವತೆಗಳನ್ನು ಆರಾಧಿಸುತ್ತಾರೆ. ಭೋಗ ಮೋಕ್ಷಗಳೆರಡನ್ನೂ ವಿಷ್ಣುದೇವನೇ ಅನುಗ್ರಹಿಸುವವನೆಂಬ ವಿಷ್ಣುಮಹಿಮೆಯನ್ನು ಅವರು ಅರಿತುಕೊಂಡಿಲ್ಲ.

೧೯. ಕೆಲವರು ತನ್ನಿಂದಲೇ ಜನ್ಮವನ್ನೆತ್ತಿ "ಆತ್ಮಭೂ" ಎಂಬ ಹೆಸರಿನಿಂದ ಪ್ರಖ್ಯಾತನಾದ ಬ್ರಹ್ಮನನ್ನು ಪೂಜಿಸುವರು. ಮತ್ತೆ ಕೆಲವರು ತ್ರಿಪುರಾಸುರಸಂಹಾರಿಯಾದ ರುದ್ರನನ್ನು ಪೂಜಿಸುವರು. ಹೀಗೆಯೇ ಬಲಾಸುರನನ್ನು ಸಂಹರಿಸಿರುವ ಇಂದ್ರ, ಕುಮಾರಸ್ವಾಮಿ, ಸೂರ್ಯ, ಗಣೇಶ, ಮತ್ತು ಅಗ್ನಿ ಮುಂತಾದ ಹಲವಾರು

ಯೇ ಹ್ಯಂಬುಜಾಕ್ಷಮರವಿಂದಭವೇಶಪೂರ್ವ-
ದಿಕ್ಪಾಲಮೌಳಿಪರಿಘಟ್ಟಿತಪಾದಪೀಠಂ ।
ಭಕ್ತ್ಯಾಽರ್ಚಯಂತಿ ಮನಸಾ ಸತತಂ ಸ್ಮರಂತಿ
ತೇ ಮಾನವಾಃ ಸಪದಿ ಮುಕ್ತಿಪದಂ ಪ್ರಯಾಂತಿ ॥ ೨೦ ॥

ಯೇ ವಾ ಮುಕುಂದಚರಣಾಂಬುಜಮರ್ಚಯಂತಿ
ಯೇ ವಾ ತದೀಯಚರಿತಾನಿ ಸಮುಚ್ಚರಂತಿ ।
ಯೇ ವಾ ತದೀಯಭವನಾನಿ ವಿಲೋಕಯಂತಿ
ತೇ ಮಾನವಾಃ ಸಪದಿ ಮುಕ್ತಿಪದಂ ಪ್ರಯಾಂತಿ ॥ ೨೧ ॥

ಕರ್ಮಾಣಿ ಚ ಕ್ರತುಮುಖಾನಿ ತಪಾಂಸಿ ತೀರ್ಥೇ-
ಷ್ವಾಮಜ್ಜನಾನಿ ಭುವಿ ವಿಪ್ರಕರಾರ್ಪಣಾನಿ ।

ದೇವತೆಗಳ ಭಕ್ತರಾದ ಕೆಲಕೆಲವು ಪ್ರಾಣಿಗಳು ಕಾಮ್ಯಫಲಗಳನ್ನು ಅಪೇಕ್ಷಿಸಿ ಆಯಾಯ ದೇವತೆಗಳ ಆರಾಧನೆಯನ್ನು ನೆರವೇರಿಸುವರು. ಸರ್ವೇಶ್ವರನಾದ ವಿಷ್ಣುವನ್ನು ಪೂಜಿಸುವುದಿಲ್ಲ.

೨೦. ವಿಷ್ಣುನಾಭಿ ಕಮಲದಲ್ಲಿ ಜನ್ಮತಾಳಿದ ಬ್ರಹ್ಮದೇವ, ಈಶ್ವರ ಮುಂತಾದ ದೇವತಾವೃಂದವು ತಲೆ ಬಾಗಿಸಿ ಪಾದಪೀಠವನ್ನು ಘರ್ಷಣಮಾಡಿ ಸೇವೆಯನ್ನು ಗೆಯ್ಯುವ ಪುಂಡರೀಕಪುಷ್ಪದಂತೆ ಕಣ್ಣುಗಳಿಂದ ರಾಜಿಸುವ ಮಹಾವಿಷ್ಣುವನ್ನು ಪವಿತ್ರ ಸಂಸ್ಕಾರವುಳ್ಳ ಯಾವ ಮಾನವರು ಭಕ್ತಿಯಿಂದ ಅರ್ಚಿಸುತ್ತಲೂ ಸಂತತವೂ ಮನದಲ್ಲಿ ಧ್ಯಾನಿಸುತ್ತಲೂ ಇರುವರೋ, ಅಂತಹ ಮಾನವರು ಶೀಘ್ರವಾಗಿ ಮುಕ್ತಿಪದವನ್ನು ಹೊಂದುವರು.

೨೧. ಯಾವ ಮಾನವರು ಮುಕುಂದನ ಪಾದಪದ್ಮಗಳನ್ನು ಅರ್ಚಿಸುವರೋ ಮತ್ತೆ ಯಾರು ಮುಕುಂದ ಪುಣ್ಯ ಚರಿತ್ರಗಳನ್ನು ಉಚ್ಚರಿಸುವರೋ ಮತ್ತು ಯಾರು ಮುಕುಂದ ಪುಣ್ಯ ಚರಿತ್ರಗಳನ್ನು ಉಚ್ಚರಿಸುವರೋ ಮತ್ತು ಯಾರು ಮುಕುಂದ ದೇವಾಲಯಗಳನ್ನು ಸಂದರ್ಶಿಸುವರೋ ಅಂತಹ ಪವಿತ್ರಾಚಾರವಂತರಾದ ಮಾನವರು ಮುಕ್ತಿಸುಖವನ್ನು ಅನುಭವಿಸುವರು.

೨೨. ಮತ್ತು ಯಾವ ಮನುಜರು ಮುಖ್ಯವಾದ ಯಜ್ಞಕರ್ಮಗಳನ್ನೂ ತಪಸ್ಸುಗಳನ್ನೂ ಭೂಮಂಡಲದ ಪುಣ್ಯತೀರ್ಥ ಕ್ಷೇತ್ರಗಳಲ್ಲಿ ಸ್ನಾನಕರ್ಮಗಳನ್ನೂ

ಯೇ ಹ್ಯಂಬುಜಾಕ್ಷಪದಪದ್ಮಯುಗೇಽರ್ಪಯಂತಿ
ತೇ ಮಾನವಾಃ ಸಪದಿ ಮೋಕ್ಷಪದಂ ಪ್ರಯಾಂತಿ ॥ ೨೨ ॥

ಕರ್ಮ ಕಾಮಾಯ ಭವತಿ ಹರಿಭಕ್ತಿವಿನಾಕೃತಮ್ ।
ತದೇವ ಮೋಕ್ಷಾಯ ಭವೇದ್ಧರಿಭಕ್ತಿಸಮನ್ವಿತಮ್ ॥ ೨೩ ॥

ವಿಷ್ಣುರೇವ ಹಿ ಮೋಕ್ಷಸ್ಯ ದಾತಾ ನಾನ್ಯೋಽಸ್ತಿ ಕಶ್ಚನ ।
ತದಂಶಭೂತಾ ಬ್ರಹ್ಮಾದ್ಯಾ ದೇವಾಃ ಕಾಮ್ಯಫಲಪ್ರದಾಃ ॥ ೨೪ ॥

ತಸ್ಮಾದನನ್ಯಭಾವೇನ ವಿಷ್ಣುಮಾರಾಧಯೇನ್ನರಃ ।
ಸಂತುಷ್ಟೇ ದೇವದೇವೇಶೇ ಮುಕುಂದೇ ಪರಮಾತ್ಮನಿ ॥ ೨೫ ॥

ಕಿಮಲಭ್ಯಂ ನೃಣಾಂ ಲೋಕೇ ಪುರುಷಾರ್ಥಚತುಷ್ಟಯೇ ।
ತಪೋಯಜನಯಾತ್ರಾಭಿರ್ದಾನೈಃ ಸಂಪೂಜ್ಯ ಕೇಶವಮ್ ॥ ೨೬ ॥

ಮತ್ತು ಸತ್ಪಾತ್ರರಾದ ವಿಪ್ರರ ಹಸ್ತಗಳಲ್ಲಿ ಮಾಡಿರುವ ದಾನಕರ್ಮಗಳನ್ನೂ ಆಚರಿಸಿ ಪುಂಡರೀಕಾಕ್ಷನ ಪಾದಪದ್ಮಗಳ ಯುಗ್ಮದಲ್ಲಿ ಅರ್ಪಿಸುವರೋ ಅಂತಹ ಮಾನವರು ಕೂಡಲೆ ಈ ಸಂಸಾರವನ್ನು ತ್ಯಜಿಸಿ ಮುಕ್ತಿ ಸುಖವನ್ನು ಹೊಂದುವರು.

೨೩. ಹರಿಭಕ್ತಿಯೆಂಬ ಸಾರಾಂಶದಿಂದ ರಹಿತವಾಗಿ ಆಚರಿಸಿದ ಕರ್ಮವು ಅಲ್ಪವಾದ ಕಾಮ್ಯಫಲ ಸಾಧನವಾಗಿ ಕ್ಷಯಿಸುವುದು. ಹರಿಭಕ್ತಿಯಿಂದ ಕೂಡಿರುವ ಆ ಕರ್ಮವೇ ಮೋಕ್ಷಸುಖಕ್ಕೆ ಸಾಧನವಾಗುವುದು. ಆದುದರಿಂದ ಕರ್ಮಾಚರಣೆಯಲ್ಲಿ ಹರಿಭಕ್ತಿಯು ಸರ್ವೋತ್ತಮವಾದುದು.

೨೪. ಪರಮ ಪುರುಷಾರ್ಥವಾದ ಮೋಕ್ಷವನ್ನು ಸಾಕ್ಷಾತ್ ವಿಷ್ಣುಪರಮಾತ್ಮನು ಅನುಗ್ರಹಿಸುವನು. ಇನ್ನಾವ ದೇವತೆಯೂ ಮೋಕ್ಷವನ್ನು ಕೊಡಲು ಶಕ್ತವಾಗಿಲ್ಲ. ಆ ವಿಷ್ಣುಪರಮಾತ್ಮನ ಅಂಶದಿಂದ ಸಂಭೂತರಾದ ಬ್ರಹ್ಮಾದಿ ದೇವತೆಗಳು ಕಾಮ್ಯವಾದ ಪಶುಪುತ್ರಾದಿ ಫಲಗಳನ್ನು ಕೊಡುವರು.

೨೫. ಆದುದರಿಂದ ಮನುಷ್ಯನು ಅನ್ಯದೇವತೆಯಲ್ಲಿ ಪೂಜ್ಯಭಾವನೆಯನ್ನು ದೂರಮಾಡಿ ವಿಷ್ಣುವನ್ನು ಆರಾಧಿಸಬೇಕು. ಅನನ್ಯ ಭಕ್ತಿಯ ಆರಾಧನೆಯಿಂದ ದೇವೋತ್ತಮನಾದ ವಿಷ್ಣುವು ಸಂತೋಷಪಡುವನು.

೨೬. ಮೇಲೆ ಹೇಳಿರುವಂತೆ ಆರಾಧನೆಯಿಂದ ವಿಷ್ಣುವು ಪ್ರಸನ್ನನಾದರೆ ಈ ಲೋಕದಲ್ಲಿ ಮನುಷ್ಯರಿಗೆ ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥ

ವಿಂದೇತ ಮುಕ್ತಿಂ ಮನುಜೋ ನ ಚೈವಾನ್ಯಾನುಸೇವಯಾ ।
ದೇಶೇ ಕಾಲೇ ಚ ಪಾತ್ರೇ ಚ ವಿಷ್ಣುಭಕ್ತಿಸಮನ್ವಿತೈಃ ॥ ೨೭ ॥

ಸರ್ವೈರ್ಯತ್ಕ್ರಿಯತೇ ಕರ್ಮ ತತ್ಕೋಟಿಗುಣಿತಂ ಭವೇತ್ ।
ಕೃತೇ ಯುಗೇ ಮನುಷ್ಯಾಣಾಂ ತಪಸಾ ಸಂಪ್ರಸೀದತಿ ॥ ೨೮ ॥

ತ್ರೇತಾಯಾಂ ಯಜ್ಞೈರ್ವಿಷ್ಣುಃ ಸಂತುಷ್ಟೋ ಭವತಿ ದ್ವಿಜಾಃ ।
ದ್ವಾಪರೇ ತು ಯುಗೇ ವಿಷ್ಣುಃ ಫಲದಸ್ತೀರ್ಥಸೇವಯಾ ॥ ೨೯ ॥

ಕಲೌ ಯುಗೇ ತು ದಾನೇನ ವಿಪ್ರಾಣಾಮನುಸೇವಯಾ ।
ಯಥಾ ತುಷ್ಯತಿ ವೈ ವಿಷ್ಣುಸ್ತಥಾ ನಾನ್ಯೇನ ಕೇನ ಚಿತ್ ॥ ೩೦ ॥

ಗಳಲ್ಲಿ ಅಲಭ್ಯವಾದ ಫಲವು ಏನಿದೆ? ಆದುದರಿಂದ ತಪಸ್ಸು, ಯಜ್ಞ, ಮತ್ತು ತೀರ್ಥಯಾತ್ರಾರೂಪವಾದ ಸಕಲ ಸತ್ಕರ್ಮಗಳಿಂದಲೂ ಕೇಶವನನ್ನು ಪೂಜಿಸಬೇಕು.

೨೭-೨೮. ಹೀಗೆ ಮಾನವನು ವಿಷ್ಣುಭಕ್ತಿಯಿಂದ ಕೂಡಿದ ಸತ್ಕರ್ಮಾಚರಣೆಯಿಂದ ಮುಕ್ತಿಯನ್ನು ಹೊಂದುವನು. ಇದಲ್ಲದೆ ಯಾವ ಸಾಧನ ಸೇವನೆಯಿಂದಲೂ ಮುಕ್ತಿಯನ್ನು ಹೊಂದಲಾಗುವುದಿಲ್ಲ. ದೇಶ-ಕಾಲ-ಪಾತ್ರಗಳಿಗೆ ಅನುಗುಣವಾಗಿ ವಿಷ್ಣುಭಕ್ತಿ ಪೂರ್ವಕವಾಗಿ ಮನುಷ್ಯರು ಮಾಡುವ ಯಾವ ಸತ್ಕರ್ಮವಾದರೂ ತನ್ನ ಸ್ವಾಭಾವಿಕ ಫಲಕ್ಕಿಂತ ಕೋಟಿ ಗುಣಿತವಾಗಿ ಅಧಿಕವಾದ ಫಲವನ್ನು ಕೊಡುವುದು. ವಿಷ್ಣುಪ್ರಸಾದವನ್ನು ಉಂಟುಮಾಡುವ ಧರ್ಮಕಾರ್ಯಗಳು ಯುಗಭೇದದಿಂದ ಪರ್ಯಾಯದಿಂದ ಪ್ರಾಧಾನ್ಯವನ್ನು ಹೊಂದಿವೆ. ಮನುಷ್ಯರಿಗೆ ಕೃತಯುಗದಲ್ಲಿ ವಿಷ್ಣುವು ತಪಸ್ಸಿನಿಂದ ಹೆಚ್ಚಾಗಿ ಮೆಚ್ಚುವನು.

೨೯. ದ್ವಿಜರೆ! ತ್ರೇತಾಯುಗದಲ್ಲಿ ಯಜ್ಞಕರ್ಮಗಳಿಂದ ವಿಷ್ಣುವು ಸಂತುಷ್ಟನಾಗುವನು. ದ್ವಾಪರಯುಗದಲ್ಲಿ ತೀರ್ಥಸ್ನಾನ ಸೇವೆಯಿಂದ ವಿಷ್ಣುಪರಮಾತ್ಮನು ಸುಪ್ರೀತನಾಗಿ ಫಲವನ್ನು ಕೊಡುವನು.

೩೦. ಕಲಿಯುಗದಲ್ಲಿ ದಾನದಿಂದಲೂ ಶ್ರೋತ್ರಿಯ ಬ್ರಾಹ್ಮಣರ ಶುಶ್ರೂಷೆಯಿಂದಲೂ ವಿಷ್ಣುವು ಪ್ರಸನ್ನನಾಗುವಂತೆ ಮತ್ತಾವ ಸತ್ಕರ್ಮದಿಂದಲೂ ತೃಪ್ತಿ ಹೊಂದುವುದಿಲ್ಲ. ಹೀಗೆ ತಪಸ್ಸು, ಯಜ್ಞ, ತೀರ್ಥಸೇವೆ, ದಾನಗಳು ಯುಗಭೇದದಿಂದ ಮುಖ್ಯತ್ವವನ್ನು ಹೊಂದಿದ ಸಾಧನಗಳಾಗಿವೆ.

ಚಪಲಾ ಮನುಜಾ ಭೂಮೌ ಕಲೌ ಕಲುಷಮಾನಸಾಃ ।
ಕಾಮಕ್ರೋಧಮದಾಲಸ್ಯಲೋಭಮೋಹಶಮಾನ್ವಿತಾಃ ॥ ೩೧ ॥

ತಪೋಯಜ್ಞಯಾತ್ರಾಭಿರ್ನೈವ ವಿಂದಂತಿ ತೇ ಫಲಂ ।
ದಾನಮೇವ ಕಲೌ ನೃಣಾಂ ಭುಕ್ತಿಮುಕ್ತಿಪ್ರದಾಯಕಂ ॥ ೩೨ ॥

ತಸ್ಮಾದ್ದಾನಂ ಪ್ರಶಂಸಂತಿ ಕಲೌ ಮುಕ್ತಿಪ್ರದಾಯಕಂ ।
ದಾನೇನ ಪೂತೋ ಭವತಿ ನ ಸ್ನಾನೇನ ನ ಚೇಜ್ಯಯಾ ॥ ೩೩ ॥

ನ ಸ್ನಾನೇನ ನ ಯಜ್ಞೇನ ಯಾತ್ರಯಾ ತಪಸಾಽಪಿ ವಾ ।
ಶುದ್ಧ್ಯೇತ್ತು ಮನುಜೋ ಲೋಕೇ ಯಥಾ ದಾನೇನ ಶುದ್ಧ್ಯತಿ ॥ ೩೪ ॥

---

೩೧. ಭೂಮಿಯಲ್ಲಿ ಕಲಿಯುಗದಲ್ಲಿರುವ ಮನುಜರು ಚಪಲಚಿತ್ತರೂ, ಕಲ್ಮಷದಿಂದ ಕೂಡಿದ ಮನಸ್ಸು ಉಳ್ಳವರೂ ಮತ್ತು ಕಾಮ, ಕ್ರೋಧ, ಲೋಭ, ಮೋಹ, ಮದ, ಆಲಸ್ಯಗಳೆಂಬ ಅಂತಃ ಶತ್ರುಗಳಿಂದ ಕೂಡಿದವರೂ ಆಗಿರುವರು.

೩೨. ಆದುದರಿಂದ ಅಂತಹ ಪ್ರಜೆಗಳು ಯುಗಾಂತರದಲ್ಲಿ ಪ್ರಧಾನಗಳಾಗಿದ್ದ ತಪಸ್ಸು, ಯಜ್ಞ, ಮತ್ತು ತೀರ್ಥಾಟನಗಳಿಂದ ಉತ್ತಮಫಲವನ್ನು ಹೊಂದುವುದಿಲ್ಲ. ಈ ಕಲಿಯುಗದಲ್ಲಿ ದಾನವೆಂಬ ಉತ್ತಮಧರ್ಮವು ಭೋಗ, ಮೋಕ್ಷವೆಂಬ ಪುರುಷಾರ್ಥಗಳನ್ನೂ ಕೊಡುವುದು.

೩೩. ಆದ್ದರಿಂದ ಪ್ರಾಜ್ಞರು ಪುರುಷಾರ್ಥ ಪ್ರದವಾದ ಕರ್ಮಗಳಲ್ಲಿ ಕಲಿಯುಗದಲ್ಲಿ ದಾನವನ್ನು ಮುಕ್ತಿಫಲದಾಯಕವೆಂದು ಪ್ರಶಂಸೆಮಾಡುವರು. ಅದು ಹೊರತು ಮಿಕ್ಕ ಸ್ನಾನ-ಯಜ್ಞ ಮುಂತಾದ ಕರ್ಮಗಳಿಂದ ಸಾಧಿಸಲಾಗದ ಪವಿತ್ರತೆಯನ್ನು ದಾನದಿಂದ ಆರ್ಜಿಸುವನು.

೩೪. ಲೋಕದಲ್ಲಿ ಮನುಷ್ಯನು ಜನ್ಮಜನ್ಮಾಂತರಗಳ ದುಷ್ಕರ್ಮಗಳಿಂದ ಬಂದಿರುವ ಅಪವಿತ್ರತೆಯನ್ನು ದಾನದಿಂದ ಕಳೆದುಕೊಂಡು ಶುದ್ಧನಾಗುವಂತೆ ಸ್ನಾನ, ಯಜ್ಞ, ತೀರ್ಥಯಾತ್ರೆ, ಮತ್ತು ತಪಸ್ಸುಗಳಿಂದ ಶುದ್ಧನಾಗುವುದಿಲ್ಲ.

ಧ್ಯಾನಯಜ್ಞಾಸ್ತಪೋಯಜ್ಞಾ ಯಾತ್ರಾಯಜ್ಞಾಸ್ತಥೈವ ಚ ।
ದೇವರ್ಷಿಪಿತೃಯಜ್ಞಾಶ್ಚ ದಾನಯಜ್ಞವತಾಂ ನೃಣಾಂ ॥ ೩೫ ॥

ಬ್ರಹ್ಮಯಜ್ಞಾಃ ಕ್ರಿಯಾಯಜ್ಞಾ ಯಾಶ್ಚಾನ್ಯಾಶ್ಚಾಪಿ ಸತ್ಕ್ರಿಯಾಃ ।
ದಾನಮಾಶ್ರಿತ್ಯ ಫಲದಾ ವಿನಾ ದಾನೇನ ನಿಷ್ಫಲಾಃ ॥ ೩೬ ॥

ತಸ್ಮಾದ್ದಾನಂ ಪ್ರಕುರ್ವೀತ ವಿಷ್ಣುಭಕ್ತ್ಯಾ ಸ್ವಶಕ್ತಿತಃ ।
ಏಕಾಂ ಚ ದಶಗುರ್ದದ್ಯಾದ್ದಶ ದದ್ಯಾಚ್ಚ ಗೋಶತೀ ॥ ೩೭ ॥

ಶತಂ ಸಹಸ್ರಗುರ್ದದ್ಯಾತ್ ಸಮಂ ತೇಷಾಂ ಫಲಂ ಸ್ಮೃತಂ ।
ದೇಶೇ ಕಾಲೇ ಚ ಪಾತ್ರೇ ಚ ಪ್ರಯತೋ ವಿಷ್ಣುಭಕ್ತಿಮಾನ್ ॥ ೩೮ ॥

---

೩೫. ಇಂತಹ ಉತ್ಕೃಷ್ಟವಾದ ದಾನಯಜ್ಞವನ್ನು ಆಚರಿಸುವ ಮನುಷ್ಯರಿಗೆ ದೇವತಾಧ್ಯಾನಯಜ್ಞ, ತಪೋಯಜ್ಞ, ತೀರ್ಥಯಾತ್ರಾಯಜ್ಞ, ದೇವಯಜ್ಞ, ಋಷಿಯಜ್ಞ, ಮತ್ತು ಪಿತೃಯಜ್ಞಗಳ ಆಚರಣೆಯು ಸಾರ್ಥಕವಾಗುವುದು.

೩೬. ಹಾಗೆಯೇ ಬ್ರಹ್ಮಯಜ್ಞ. ಕ್ರಿಯಾಯಜ್ಞ ಮತ್ತು ಇತರ ಸತ್ಕರ್ಮಗಳು ಯಜಮಾನನಾದ ಕರ್ತೃವಿನಲ್ಲಿ ದಾನಯಜ್ಞವನ್ನು ಕಂಡು ಫಲಪ್ರದವಾಗುವುವು. ದಾನಯಜ್ಞರಹಿತವಾದ ಸತ್ಕರ್ಮಗಳು ತಮ್ಮ ಫಲವನ್ನು ಕೊಡುವುದಿಲ್ಲ.

೩೭. ಆದುದರಿಂದ ವಿಷ್ಣುಭಕ್ತಿಯನ್ನು ಪುರಸ್ಕರಿಸಿ ತನ್ನ ಶಕ್ತಿಗೆ ಅನುಗುಣವಾಗಿ ದಾನವನ್ನು ಆಚರಿಸಬೇಕು. ಹತ್ತು ಗೋವುಗಳ ಸ್ವಾಮಿಯಾದವನು ಒಂದು ಗೋವನ್ನು ದಾನಮಾಡಬೇಕು. ಒಂದು ನೂರು ಗೋವುಗಳ ಪ್ರಭುವು ಹತ್ತು ಗೋದಾನಗಳನ್ನು ಆಚರಿಸಬೇಕು.

೩೮. ಸಹಸ್ರ ಗೋದ್ರವ್ಯಾಧಿಪತಿಯು ಶತಸಂಖ್ಯೆಯ ಗೋವುಗಳನ್ನು ದಾನಮಾಡಬೇಕು. ಹೀಗೆ ತನ್ನ ಶಕ್ತಿಯನ್ನನುಸರಿಸಿ ಮಾಡುವ ಎಲ್ಲಾ ಗೋದಾನಗಳೂ ಯಜಮಾನನಿಗೆ ಒಂದೇವಿಧವಾದ ಫಲವನ್ನು ಕೊಡುವುವು. ಆದರೆ ವಿಷ್ಣುಭಕ್ತಿಯಿಂದ ಕೂಡಿದವನೂ ಪವಿತ್ರನೂ ಆಗಿ ಉತ್ತಮವಾದ ದೇಶ, ಕಾಲ, ಪಾತ್ರಗಳಲ್ಲಿ ಅಣುವಾದ ಯಾವ ದ್ರವ್ಯವನ್ನು ದಾನಮಾಡಿದರೂ ಅವನು ಕೋಟಿದ್ರವ್ಯವನ್ನು ದಾನಮಾಡಿದ ಪುಣ್ಯವಂತನಾಗುವನು.

ದದ್ಯಾತ್ ಕಿಂಚಿದಪಿ ದ್ರವ್ಯಂ ಸ ಕೋಟಿದ್ರವ್ಯದೋ ಭವೇತ್ ।
ತೇ ವಯಂ ದಾನಯಜ್ಞೇನ ವಿಷ್ಣುಮಾರಾಧ್ಯ ಕೇವಲಂ ॥ ೩೯ ॥

ನಿರ್ಧೂತಕಲ್ಮಷಾಃ ಸರ್ವೇ ಪ್ರಯಾಮಃ ಪರಮಂ ಪದಂ ।
ಏವಂ ವಸಿಷ್ಠೋ ಬ್ರುವತಿ ಸರ್ವ ಏವ ಮಹರ್ಷಯಃ ॥ ೪೦ ॥

ಪ್ರಹೃಷ್ಟಮನಸಸ್ತತ್ರ ತಮೂಚುರ್ಬ್ರಹ್ಮನಂದನಂ ।
ಋಷಯ ಊಚುಃ :—
ಸಾಧು ಸಾಧು ಮಹಾಸಾಧು ವಸಿಷ್ಠ ಜಪತಾಂ ವರ ॥ ೪೧ ॥

ತ್ವಯಾ ನಿಸ್ಸಂಶಯೋಽಸ್ಮಾಕಂ ಮೋಕ್ಷಮಾರ್ಗಃ ಪ್ರದರ್ಶಿತಃ ।
ಕೋ ವಾ ದೇಶಶ್ಚ ಕಾಲಶ್ಚ ಪಾತ್ರಂ ವಾ ಕೀದೃಶಂ ವದ ॥ ೪೨ ॥

---

೩೯. ಆದ್ದರಿಂದ ವಿಚಾರಪರತೆಯಿಂದ ಇಲ್ಲಿಗೆ ಸೇರಿರುವ ನಾವೆಲ್ಲರೂ ಮಹತ್ತಾದ ಕೇವಲ ದಾನಯಜ್ಞದಿಂದ ಭಗವಂತನಾದ ವಿಷ್ಣುವನ್ನು ಆರಾಧಿಸಿ ದುಷ್ಕೃತ್ಯಗಳನ್ನು ಕಳೆದುಕೊಂಡು ಪರಮಪದವಿಯನ್ನು ಹೊಂದೋಣ.

೪೦. ಈ ರೀತಿಯಾಗಿ ಧರ್ಮಗೋಷ್ಠಿಯಲ್ಲಿ ವಸಿಷ್ಠಮುನಿಯು ತನ್ನ ಮತವನ್ನು ಬೋಧಿಸಿದರು. ಅಲ್ಲಿದ್ದ ಸಕಲ ಮುನಿಗಳೂ ತೃಪ್ತಿಹೊಂದಿದ ಮನಸ್ಸುಳ್ಳವರಾಗಿ ಬ್ರಹ್ಮಮಾನಸಪುತ್ರನಾದ ವಸಿಷ್ಠಮುನಿಯನ್ನು ಕುರಿತು ಹೀಗೆಂದರು.

೪೧. ಋಷಿಗಳು ಹೇಳಿದುದೇನೆಂದರೆ:—ಜಪ ಮುಂತಾದ ಧರ್ಮಪರಾಯಣರಲ್ಲಿ ಅಗ್ರಗಣ್ಯನಾದ ವಸಿಷ್ಠಮುನಿಯೇ! ಸಾಧುವಾದುದು ! ಸಾಧುವಾದುದು ! ಬಹು ಸಾಧುವಾದುದು !

೪೨. ನೀನು ನಮ್ಮೆಲ್ಲರಿಗೆ ಈ ಸಂದರ್ಭದಿಂದ ಮೋಕ್ಷಮಾರ್ಗವನ್ನು ನಿಸ್ಸಂಶಯವಾಗಿ ಬೋಧಿಸಿ ಉಪಕಾರಮಾಡಿರುವೆ. ನೀನು ಉಪದೇಶಿಸಿದ ದಾನಯಜ್ಞಾನುಷ್ಠಾನಕ್ಕೆ ಉಚಿತವಾದ ದೇಶ, ಕಾಲ, ಮತ್ತು ಸತ್ಪಾತ್ರಗಳಾವುವು ? ಇದನ್ನು ಉಪದೇಶಿಸು.

ಯಸ್ಮಿನ್ ದೇಶೇ ಚ ಕಾಲೇ ಚ ಪಾತ್ರೇ ವಾ ಪ್ರತಿಪಾದಿತಂ ।
ವಿಷ್ಣುಪ್ರೀತಿಕರಂ ಭೂಯಾ ತ್ತಾತ್ಪೃಗ್ದೇಶಾದಿಕಂ ಮುನೇ ॥ ೪೩ ॥

ತೇಷಾಂ ತದ್ವಚನಂ ಶ್ರುತ್ವಾ ವಸಿಷ್ಠೋ ವಾಕ್ಯಮಬ್ರವೀತ್ ।
ವಸಿಷ್ಠ ಉವಾಚ :—
ಬ್ರಹ್ಮಣಾಂ ಧರ್ಮವೃದ್ಧ್ಯರ್ಥಂ ತ್ರಯ ಏತೇ ವಿನಿರ್ಮಿತಾಃ ॥ ೪೪ ॥

ದೇಶಾಃ ಕಾಲಾಶ್ಚ ಪಾತ್ರಾಣಿ ಶೃಣ್ವಂತು ಮುನಿಪುಂಗವಾಃ ।
ವಿಷ್ಣುಪ್ರೀತಿಕರಾನ್ ಕಾಲಾನ್ ಪ್ರವಕ್ಷ್ಯಾಮ್ಯಘನಾಶನಾನ್ ॥ ೪೫ ॥

ಆಷಾಢಃ ಕಾರ್ತಿಕೋ ಮಾಘಶ್ಚೈತ್ರೋ ವೈಶಾಖ ಏವ ಚ ।
ಶ್ರಾವಣೋ ಮಾರ್ಗಶೀರ್ಷಶ್ಚ ಶ್ರೇಷ್ಠಾ ಮಾಸೇಷು ಕೀರ್ತಿತಾಃ ॥ ೪೬ ॥

ಶುಕ್ಲಶ್ಚೈವ ತಥಾ ಕೃಷ್ಣಃ ಪಕ್ಷೌ ದ್ವೌ ಸಂಪ್ರಕೀರ್ತಿತೌ ।
ಶುಕ್ಲೇ ದೇವಾನ್ ಪಿತ್ರ್ಯಾನ್ ಕೃಷ್ಣೇ ಪ್ರಯುಜೀತ ದ್ವಿಜೋತ್ತಮಃ ॥೪೭॥

---

೪೩. ಮುನಿಯೇ! ಯಾವ ದೇಶ, ಕಾಲ, ಮತ್ತು ಪಾತ್ರಗಳಲ್ಲಿ ವಿನಿಯೋಗಿಸಿದ ದಾನವು ವಿಷ್ಣುಪ್ರೀತಿಯನ್ನುಂಟುಮಾಡಬಲ್ಲದೋ ಅಂತಹ ಗುಣಪೂರ್ಣವಾದ ದೇಶ ಕಾಲ ಪಾತ್ರಗಳನ್ನು ಬೋಧಿಸು.

೪೪-೪೫. ಹೀಗೆ ಮುನಿಪುಂಗವರ ಪ್ರಶ್ನವಾಕ್ಯಗಳನ್ನು ಕೇಳಿ ವಸಿಷ್ಠಮುನಿಯು ತನ್ನ ಉತ್ತರವಾಕ್ಯವನ್ನಾಡಲಾರಂಭಿಸಿದನು. ವಸಿಷ್ಠಮುನಿಯ ಉತ್ತರವೇನೆಂದರೆ:- ಮುನಿಶ್ರೇಷ್ಠರೇ! ಧರ್ಮವನ್ನು ವೃದ್ಧಿಮಾಡಲೋಸ್ಕರ ಲೋಕಸೃಷ್ಟಿಕರ್ತನಾದ ಬ್ರಹ್ಮನು ದೇಶ, ಕಾಲ ಮತ್ತು ಪಾತ್ರಗಳೆಂಬ ಮೂರು ದಾನಾಂಗಗಳನ್ನು ನಿರ್ಮಿಸಿರುವನು. ಅವುಗಳಲ್ಲಿ ವಿಷ್ಣುಪ್ರೀತಿಸಂಪಾದಕವಾದ ಕಾಲವಿಶೇಷಗಳನ್ನು ಹೇಳುತ್ತೇನೆ, ಕೇಳಿರಿ.

೪೬. ಚೈತ್ರ ಮುಂತಾದ ದ್ವಾದಶಮಾಸಗಳ ಪೈಕಿ ಆಷಾಢ, ಕಾರ್ತೀಕ, ಮಾಘ, ಚೈತ್ರ, ವೈಶಾಖವೆಂಬ ಮಾಸಗಳು ವಿಷ್ಣುಪ್ರೀತಿಯನ್ನುಂಟುಮಾಡುವುದರಲ್ಲಿ ಉತ್ತಮವೆಂದು ಪರಿಗಣಿತಗಳಾಗಿವೆ.

೪೭. ಶುಕ್ಲಪಕ್ಷ-ಕೃಷ್ಣಪಕ್ಷವೆಂಬ ಎರಡು ಪಕ್ಷಗಳೂ ಪ್ರಶಸ್ತವಾದುವುಗಳು. ಆದರೆ ಉತ್ತಮನಾದ ದ್ವಿಜನು ವಿಷ್ಣುಪ್ರೀತಿಯನ್ನುದ್ದೇಶಿಸಿ ಶುಕ್ಲಪಕ್ಷದಲ್ಲಿ ದೇವತೆಗಳನ್ನೂ ಕೃಷ್ಣಪಕ್ಷದಲ್ಲಿ ಪಿತೃಗಳನ್ನೂ ಪೂಜಿಸಬೇಕು.

ದಶಮ್ಯೇಕಾದಶೀ ಚೈವ ದ್ವಾದಶೀ ಪೂರ್ಣಿಮಾ ತಥಾ ।
ಅಮಾ ತೃತೀಯಾ ಮಧ್ಯಾ ಚ ಶ್ರೇಷ್ಠಾಸ್ತಿಥಿಷು ಕೀರ್ತಿತಾಃ ॥ ೪೮ ॥

ವಿಷುವಾಯನಕಾಲೌ ಚ ಯದಾ ಸಂಕ್ರಮತೇ ರವಿಃ ।
ಹಸ್ತಾ ತು ಭರಣೀ ಶ್ರೋಣಾ ತಥಾತಿಷ್ಯಪುನರ್ವಸೂ ॥ ೪೯ ॥

ರೋಹಿಣೀ ಮೃಗಮೂಲಾರ್ದ್ರಾಜ್ಯೇಷ್ಠಾಃ ಶ್ರೇಷ್ಠಾಃ ಪ್ರಕೀರ್ತಿತಾಃ ।
ತತಃ ಪಾತ್ರಾಣಿ ಮುನಯಃ ಶೃಣುಧ್ವಂ ವದತೋ ಮಮ ॥ ೫೦ ॥

ದ್ವಿಜ ಏವ ಹಿ ಸರ್ವೇಷಾಂ ವರ್ಣಾನಾಂ ಪಾತ್ರಮುಚ್ಯತೇ ।
ದ್ವಿಜೇಷು ಸಾಗ್ನಿಹೋತ್ರಶ್ಚೇತ್ಪಾತ್ರಂ ಪರಮಮೀರಿತಂ ॥ ೫೧ ॥

ಸಾಗ್ನಿಹೋತ್ರಾತ್ಪರಂ ಪಾತ್ರಂ ದರಿದ್ರೋ ವೇದಪಾರಗಃ ।
ಸಾಚಾರಸ್ತು ಪರಂ ಪಾತ್ರಂ ದರಿದ್ರಾದ್ವೇದಪಾರಗಾತ್ ॥ ೫೨ ॥

---

೪೮. ಪ್ರತಿಪತ್ ತಿಥಿ ಮೊದಲುಗೊಂಡು ಅಮಾವಾಸ್ಯಾ ಪರ್ಯಂತವಾದ ಷೋಡಶತಿಥಿಗಳಲ್ಲಿ ದಶಮೀ, ಏಕಾದಶೀ, ದ್ವಾದಶೀ, ಪೂರ್ಣಿಮಾ, ಅಮಾವಾಸ್ಯಾ, ತೃತೀಯಾ, ಮತ್ತು ಅಷ್ಟಮೀ ಎಂಬುವು ಶ್ರೇಷ್ಠವಾದ ತಿಥಿಗಳು.

೪೯. ಮತ್ತು ಸೂರ್ಯನು ವಿಷುವ ಮತ್ತು ಅಯನಗಳನ್ನು ಪ್ರವೇಶಿಸುವ ಮೇಷ, ಕರ್ಕಾಟಕ, ತುಲಾ ಮತ್ತು ಮಕರಸಂಕ್ರಮಣಕಾಲಗಳು ಪ್ರಶಸ್ತವಾದವುಗಳು. ಹಸ್ತ, ಭರಣೀ, ಶ್ರವಣ, ಪುಷ್ಯ, ಪುನರ್ವಸು, ರೋಹಿಣೀ, ಮೃಗಶಿರ, ಮೂಲಾ, ಆರ್ದ್ರಾ, ಜ್ಯೇಷ್ಠಾ, ಪೂರ್ವಾಭಾದ್ರಾ ನಕ್ಷತ್ರಗಳು, ಅಶ್ವಿನ್ಯಾದಿ ನಕ್ಷತ್ರಗಳಲ್ಲಿ ಪ್ರಶಸ್ತವಾದವುಗಳಾಗಿವೆ.

೫೦. ಮುನಿಗಳೇ! ಉತ್ತಮವಾದ ಕಾಲವನ್ನು ತೋರಿಸಿದಂತೆ ಸತ್ಪಾತ್ರಗಳನ್ನು ನಿರ್ದೇಶಿಸುವ ನನ್ನ ವಚನವನ್ನು ಕೇಳಿರಿ.

೫೧. ಸರ್ವವರ್ಣಗಳಲ್ಲಿ ದ್ವಿಜನೊಬ್ಬನೇ ದಾನಕ್ಕೆ ಅರ್ಹನಾದ ಉತ್ತಮಪಾತ್ರವೆಂದು ಶಾಸ್ತ್ರಗಳಿಂದ ಹೇಳಲ್ಪಟ್ಟಿದೆ. ಆ ದ್ವಿಜನಲ್ಲಿಯೂ ಆಹಿತಾಗ್ನಿಯಾಗಿ ಅಗ್ನಿಹೋತ್ರಾನುಷ್ಠಾನಮಾಡುತ್ತಲಿರುವವನು ಶ್ರೇಷ್ಠನಾದ ಪಾತ್ರವು.

೫೨. ಅಗ್ನಿಹೋತ್ರಿಯಾದ ಬ್ರಾಹ್ಮಣನಿಗಿಂತ ವೇದಪಾರಂಗತನೂ ದರಿದ್ರನೂ ಆದ ಬ್ರಾಹ್ಮಣನು ಶ್ರೇಷ್ಠಪಾತ್ರವೆಂದೆನಿಸಿರುವನು. ಅಂತಹ ದರಿದ್ರನಾದ ವೈದಿಕ ದ್ವಿಜನಿಗಿಂತಲೂ ಸದಾಚಾರ ತತ್ಪರನಾದವನು ಮತ್ತೂ ಉತ್ತಮನು.

ಸಾಚಾರಾತ್ಪರಮಂ ಪಾತ್ರಂ ವಿಷ್ಣುಭಕ್ತಿಪರೋ ದ್ವಿಜಃ ।
ಸಾಚಾರಃ ಸಾಗ್ನಿಹೋತ್ರಶ್ಚ ದರಿದ್ರಶ್ಚ ಕುಟುಂಬವಾನ್ ॥ ೫೩ ॥

ವೇದ ಶಾಸ್ತ್ರಾರ್ಥತತ್ತ್ವಜ್ಞಃ ಸದನುಷ್ಠಾನತತ್ಪರಃ ।
ವಿಷ್ಣುಭಕ್ತಿ ಪರೋ ವಿದ್ವಾನ್ ಮುಕುಂದಾರ್ಪಿತಮಾನಸಃ ॥ ೫೪ ॥

ಯದಾ ತು ಲಭ್ಯತೇ ಪಾತ್ರಂ ತದಾ ಕಾಲಃ ಪ್ರಶಸ್ಯತೇ ।
ದೇಶಾಶ್ಚ ಬಹವಃ ಸಂತಿ ವಿಷ್ಣುಪ್ರೀತಿಕರಾ ದ್ವಿಜಾಃ ॥ ೫೫ ॥

ಪುಷ್ಕರಂ ನೈಮಿಶಾರಣ್ಯಂ ಸಿದ್ಧಾಶ್ರಮಮಹೋಬಿಲಂ ।
ಗೋವರ್ಧನಶ್ಚಿತ್ರಕೂಟಃ ಕುರುಕ್ಷೇತ್ರಮಥೋ ಗಯಾ ॥ ೫೬ ॥

೫೩. ಆಚಾರವಂತನಿಗಿಂತಲೂ ವಿಷ್ಣು ಭಕ್ತಿ ಸಂಪನ್ನನಾದ ಮಾನವನು ಅತಿಶಯವಾದ ಸತ್ಪಾತ್ರತೆಯನ್ನು ಹೊಂದಿರುವನು. ಹೀಗೆ ದಾನಪಾತ್ರರಲ್ಲಿ ಇರಬೇಕಾದ ದ್ವಿಜಜಾತಿ, ವೇದಾಧ್ಯಯನಾದಿಗಳು ಮುಂತಾದ ಗುಣಗಳು ಒಂದಕ್ಕಿಂತ ಮತ್ತೊಂದು ಮೇಲಾದುವು.

೫೪. ಸತ್ಕರ್ಮಾಚರಣೆ, ಅಗ್ನಿಹೋತ್ರಾನುಷ್ಠಾನ, ಕೇವಲ ದಾರಿದ್ರ್ಯ, ಕುಟುಂಬ ಸಮೃದ್ಧಿ, ವೇದಶಾಸ್ತ್ರಾರ್ಥತತ್ತ್ವಜ್ಞಾನ, ಸಾಧುಕರ್ಮಾನುಷ್ಠಾನಗಳೊಂದಿಗೆ ವಿಷ್ಣುಭಕ್ತಿ—ಈ ಪೂರ್ವೋಕ್ತವಾದ ಸಕಲ ಯೋಗ್ಯತೆಗಳಿಂದ ಕೂಡಿದ ಮತ್ತು ಮುಕುಂದನಲ್ಲಿ ಮಾನಸವನ್ನು ಪ್ರೇಮದಿಂದ ಅರ್ಪಿಸಿರುವ ಮಹನೀಯನು ಯಾವಾಗ ದಾನ ಪಾತ್ರನಾಗಿ ಲಭಿಸುವನೋ ಆಕಾಲವು ದಾನಕ್ಕೆ ಉತ್ತಮೋತ್ತಮವಾದುದು.

೫೫. ಪಾತ್ರ ಮತ್ತು ಕಾಲಗಳಂತೆ ವಿಷ್ಣುಪ್ರೀತಿಯನ್ನುಂಟುಮಾಡುವ ದಾನಾರ್ಹವಾದ ಪವಿತ್ರದೇಶಗಳು ಅನೇಕ ಸಂಖ್ಯೆಯಿಂದಿವೆ.

೫೬. ಅವುಗಳಲ್ಲಿ ಮುಖ್ಯವಾದುವುಗಳು ಯಾವುವೆಂದರೆ:—ಪುಷ್ಕರಕ್ಷೇತ್ರ, ನೈಮಿಶಾರಣ್ಯ, ಸಿದ್ಧಾಶ್ರಮ, ಅಹೋಬಿಲಕ್ಷೇತ್ರ, ಗೋವರ್ಧನ, ಚಿತ್ರಕೂಟ, ಕುರುಕ್ಷೇತ್ರ, ಮತ್ತು ಗಯಾ ಇವುಗಳು ಪ್ರಶಸ್ತವಾದ ಕ್ಷೇತ್ರಗಳು.

ಪ್ರಯಾಗಃ ಪಂಚವಟ್ಯಾಖ್ಯಃ ಪದ್ಮನಾಭಃ ಪ್ರಕೀರ್ತಿತಃ ।
ಕೌರ್ಮಂ ಕ್ಷೇತ್ರಂ ನಾರಸಿಂಹಂ ಜನಾರ್ದನಮಜಾವಿಲಂ ॥ ೫೭ ॥

ಶ್ರೀಮುಷ್ಣಂ ಕುಂಭಘೋಣಾಖ್ಯಂ ಶ್ರೀರಂಗಂ ವೃಷಭಾಚಲಃ ।
ಪಾಟಲಃ ಪಾಂಡುರಂಗಾಖ್ಯೋ ಜಗನ್ನಾಥಸ್ತಥೈವ ಚ ॥ ೫೮ ॥

ಅಯೋಧ್ಯಾ ಮಧುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ ।
ಪುರೀ ದ್ವಾರವತೀ ಚೈವ ಸಪ್ತೈತಾ ಭುಕ್ತಿಮುಕ್ತಿದಾಃ ॥ ೫೯ ॥

ಏತಾನ್ಯನ್ಯಾನಿ ಪುಣ್ಯಾನಿ ಕ್ಷೇತ್ರಾಣಿ ವಸುಧಾತಲೇ ।
ತೇಷು ಪುಣ್ಯತಮಾ ಕಾಂಚೀ ಕಲಿಕಲ್ಮಷನಾಶಿನೀ ॥ ೬೦ ॥

ಸ್ಮರಣಾನ್ಮುಕ್ತಿದಾ ನೄಣಾಂ ಕಿಮು ತತ್ರ ನಿವಾಸಿನಾಂ ।
ತತ್ರ ಸನ್ನಿಹಿತೋ ವಿಷ್ಣುರ್ಗುಹಾಯಾಂ ಹಸ್ತಿಭೂಭೃತಃ ॥ ೬೧ ॥

---

೫೭. ಮತ್ತು ಪ್ರಯಾಗ, ಪಂಚನಟೀ, ಪದ್ಮನಾಭಕ್ಷೇತ್ರ, ಕೂರ್ಮಕ್ಷೇತ್ರ, ನರಸಿಹ್ಮಕ್ಷೇತ್ರ, ಜನಾರ್ದನಕ್ಷೇತ್ರ, ಮತ್ತು ಅಜಾಮಿಲಕ್ಷೇತ್ರಗಳು ಶ್ರೇಷ್ಠವೆಂದು ಪರಿಗಣಿತವಾಗಿವೆ.

೫೮. ಶ್ರೀಮುಷ್ಣಕ್ಷೇತ್ರ, ಕುಂಭಘೋಣ, ಶ್ರೀರಂಗ, ವೃಷಭಗಿರಿ, ಪಾಟಲಕ್ಷೇತ್ರ, ಪಾಂಡುರಂಗಕ್ಷೇತ್ರ, ಜಗನ್ನಾಥಕ್ಷೇತ್ರಗಳು ಉತ್ತಮಕ್ಷೇತ್ರಗಳಲ್ಲಿ ಅಂತರ್ಗತವಾಗಿವೆ.

೫೯. ಅಲ್ಲದೆ ಅಯೋಧ್ಯಾ, ಮಧುರಾ, ಮಾಯಾ, ಕಾಶೀ, ಕಾಂಚೀ, ಅವಂತಿ ಮತ್ತು ದ್ವಾರಕಾ ಎಂಬುವು ಭುಕ್ತಿಮುಕ್ತಿಫಲಗಳನ್ನು ಕೊಡುವ ಮುಖ್ಯವಾದ ಏಳು ಕ್ಷೇತ್ರಗಳು.

೬೦ ಹೀಗೆ ಸಮಸ್ತ ಭೂಮಂಡಲದಲ್ಲಿ ಇಲ್ಲಿ ವರ್ಣಿಸಿರುವ ಅಥವಾ ವರ್ಣಿಸದಿರುವ ಪವಿತ್ರವಾದ ಕ್ಷೇತ್ರಗಳು ಅನಂತಗಳಾಗಿವೆ. ಅವುಗಳಲ್ಲೆಲ್ಲಾ ಪವಿತ್ರವಾದ ಕಾಂಚೀಕ್ಷೇತ್ರವು ಮುಖ್ಯವಾಗಿ ಕಲಿಯುಗ ದೋಷಗಳನ್ನು ನಿವಾರಿಸುವ ಉತ್ತಮ ಕ್ಷೇತ್ರವೆಂದು ಪ್ರಸಿದ್ಧಿಗೊಂಡಿದೆ.

೬೧. ಆ ಪುಣ್ಯಕ್ಷೇತ್ರವು ಸ್ಮರಣಮಾತ್ರದಿಂದ ಜನರಿಗೆ ಮುಕ್ತಿಫಲವನ್ನು ಕೊಡುವ ಶಕ್ತಿಯುಳ್ಳದ್ದಾಗಿದೆ. ಅಲ್ಲಿಯೇ ವಾಸಮಾಡುವ ಜನರಿಗೆ ಆ ಪುಣ್ಯಕ್ಷೇತ್ರ

ತತ್ರ ವಿಷ್ಣುಂ ಸಮುದ್ದಿಶ್ಯ ಯತ್ಕಿಂಚಿದಪಿ ಮಾನವಃ ।
ಸ್ನಾನದಾನಾದಿಕಂ ಕರ್ಮ ಕುರ್ವನ್ ಮುಕ್ತಿಮವಾಪ್ನುಯಾತ್ ॥ ೬೨ ॥

ಏವಂ ಮಯಾ ಪಂಕಜಜನ್ಮನೋ ಮುಖಾ-
ಚ್ಛ್ರುತಂ ಹಿ ಸರ್ವಂ ಕಥಿತಂ ದ್ವಿಜಾಗ್ರ್ಯಗಾಃ ।
ಕಾಂಚೀನಿವಾಸಃ ಕಲಿಕಲ್ಮಷಾಪಹಃ
ಕರೋತಿ ಜಂತೂನ್ ಕಮಲೇಶಪಾರ್ಶ್ವಗಾನ್ ॥ ೬೩ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಪ್ರಥಮೋಽಧ್ಯಾಯಃ

ವಾಸವು ಮುಕ್ತಿಫಲವನ್ನು ಕೊಡುವುದೆಂಬುದನ್ನು ಹೇಳುವುದೇನಿದೆ? ಆ ಕ್ಷೇತ್ರದಲ್ಲಿ ಹಸ್ತಿಪರ್ವತದ ಗುಹೆಯಲ್ಲಿ ವಿಷ್ಣುವು ತನ್ನ ಸನ್ನಿಧಿಯನ್ನು ಇಟ್ಟಿರುವನು.

೬೨. ಆ ಕ್ಷೇತ್ರದಲ್ಲಿ ಮಾನವನು ವಿಷ್ಣುವನ್ನುದ್ದೇಶಿಸಿ ಸ್ನಾನ ದಾನ ಮುಂತಾದ ಯಾವುದೊಂದು ಅತ್ಯಲ್ಪವೆಂದು ಭಾಸವಾಗುವ ಸತ್ಕರ್ಮವನ್ನು ಆಚರಿಸಿದರೂ ಆ ಕರ್ಮವು ಮುಕ್ತಿಯನ್ನು ಕೊಡುವುದು.

೬೩. ಎಂಬುದಾಗಿ ಕಮಲಪುಷ್ಪದಲ್ಲಿ ಜನ್ಮವೆತ್ತಿದ ಮಹಿಮೆಯಿಂದ ಕೂಡಿದ ಬ್ರಹ್ಮದೇವನು ಉಪದೇಶಿಸಿರುವ ಸರ್ವಾಂಶಗಳಿಂದ ಕೂಡಿದ ಈ ವಚನವನ್ನು ನಾನು ಕೇಳಿರುವೆನು. ಕಾಂಚೀಕ್ಷೇತ್ರನಿವಾಸವು ಜನಗಳ ಕಲಿಕಲ್ಮಷವನ್ನು ದೂರಮಾಡಿ ಲಕ್ಷ್ಮೀಪತಿಯಾದ ವಿಷ್ಣುಪರಮಾತ್ಮನ ಸಾಮೀಪ್ಯವೆಂಬ ಮುಕ್ತಿಯನ್ನು ಸಾಧಿಸುವುದು. ಇಂತಹ ಉತ್ತಮಫಲಪ್ರಾಪ್ತಿಗೆ ಕಾಂಚೀನಿವಾಸವು ಸಾಧನವಾಗಿರುವುದು.

ಕಾಂಚೀಮಾಹಾತ್ಮ್ಯದಲ್ಲಿ ಮೊದಲನೇ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ದ್ವಿತೀಯೋಽಧ್ಯಾಯಃ

ಏವಂ ವಸಿಷ್ಠೇ ಬ್ರುವತಿ ಸರ್ವ ಏವ ಮಹರ್ಷಯಃ ।
ಪ್ರಹೃಷ್ಟವದನಾ ಭೂತ್ವಾ ಪ್ರಶಶಂಸುರ್ದ್ವಿಜರ್ಷಭಂ ॥ ೧ ॥

ಧನ್ಯಸ್ತ್ವಂ ಕೃತಕೃತ್ಯಸ್ತ್ವಂ ಯದ್ಭವಾನ್ ಸಂಶಯಾತ್ಮನಾಂ ।
ಅಸ್ಮಾಕಂ ಸುಲಭೇನೈವ ಮೋಕ್ಷಮಾರ್ಗಮದರ್ಶಯತ್ ॥ ೨ ॥

ಕಾಂಚೀಕ್ಷೇತ್ರಸ್ಯ ಮಾಹಾತ್ಮ್ಯಂ ಸಂಕ್ಷೇಪೇಣ ಪ್ರಶೃಣ್ವತಾಂ ।
ನ ತೃಪ್ತಿರ್ಜಾಯತೇಽಸ್ಮಾಕಂ ತನ್ನೋ ವಿಸ್ತರತೋ ವದ ॥ ೩ ॥

---

೧. ವಸಿಷ್ಠಮಹಾಮುನಿಯು ಹೇಳಿರುವ ಈ ವಚನವನ್ನು ಕೇಳಿ ಸಮಸ್ತ ಮುನಿಗಳು ಸಂತೋಷಪೂರ್ಣವಾದ ಮುಖವುಳ್ಳವರಾಗಿ ದ್ವಿಜಶ್ರೇಷ್ಠನಾದ ಗುರುವನ್ನು ಪ್ರಶಂಶಿಸಿದರು.

೨. ಮೋಕ್ಷಮಾರ್ಗದ ಜಿಜ್ಞಾಸೆಯಲ್ಲಿ ಸಂಶಯಾತ್ಮಕರಾಗಿದ್ದ ನಮಗೆ ಸುಲಭವಾಗಿ ಮೋಕ್ಷಮಾರ್ಗವನ್ನು ನೀನು ತೋರಿಸಿರುವೆ. ಇಂತಹ ಮಹೋಪಕಾರವನ್ನು ಮಾಡಿದ ನೀನೇ ಧನ್ಯನು! ನೀನೇ ಕೃತಕೃತ್ಯನು!!

೩. ಕಾಂಚೀಕ್ಷೇತ್ರಮಾಹಾತ್ಮ್ಯವನ್ನು ಸಂಗ್ರಹವಾಗಿ ನಿನ್ನಿಂದ ಕೇಳಿರುವ ನಮಗೆ ಅಷ್ಟುಮಾತ್ರದಿಂದ ಮನಸ್ತೃಪ್ತಿಯಾಗಿರುವುದಿಲ್ಲ. ಆದುದರಿಂದ ಕುತೂಹಲಿಗಳಾದ ನಮಗೆ ಅದನ್ನು ವಿಸ್ತಾರವಾಗಿ ವರ್ಣಿಸು.

ಕೇನ ಸಾ ನಿರ್ಮಿತಾ ಪೂರ್ವಂ ಕೇನ ಕಾಂಚೀತಿ ವಿಶ್ರುತಾ ।
ಸತ್ಯವ್ರತಂ ಭಾಸ್ಕರಾಖ್ಯಂ ತತ್ಕ್ಷೇತ್ರಮಭವತ್ಕುತಃ ॥ ೪ ॥

ವಸಿಷ್ಠ ಉವಾಚ:—

ದ್ವೈಪಾಯನಾನುಗ್ರಹಜೇನ ಸಮ್ಯ-
ಜ್ಞ್ಞಾನೇನ ಯುಕ್ತಃ ಕಿಲ ಸೂತಪುತ್ರಃ ।
ವಕ್ತುಂ ಸ ಏವಾರ್ಹತಿ ಭೂಸುರಾಣಾಂ
ಕ್ಷೇತ್ರಾಣಿ ತೀರ್ಥಾನಿ ರಥಾಂಗಪಾಣೇಃ ॥ ೫ ॥

ಸತ್ಯವ್ರತಂ ಭಾಸ್ಕರಾಖ್ಯಂ ಚ ಯಸ್ಮಾತ್
ಖ್ಯಾತಂ ಕ್ಷೇತ್ರಂ ಮುಕ್ತಿದಂ ಚೈವ ನೃಣಾಂ ।
ಯಥಾ ತತ್ರ ಪ್ರಾದುರಭೂನ್ಮುಕುಂದೋಽ-
ಸ್ಯೈತತ್ಸರ್ವಂ ಪ್ರವದೇತ್ ಸೂತಪುತ್ರಃ ॥ ೬ ॥

---

೪. ಆ ಕ್ಷೇತ್ರವು ಆದಿಯಲ್ಲಿ ಯಾರಿಂದ ನಿರ್ಮಿಸಲ್ಪಟ್ಟಿತು ? ಅದು ಕಾಂಚೀ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಏತಕ್ಕೆ ಹೊಂದಿತು ? ಮತ್ತು ಆ ಕ್ಷೇತ್ರವು ಸತ್ಯವ್ರತಕ್ಷೇತ್ರ, ಭಾಸ್ಕರಕ್ಷೇತ್ರವೆಂಬ ವ್ಯವಹಾರಗೋಚರವಾದುದು ಹೇಗೆ ?

೫. ವಸಿಷ್ಠಮುನಿಯು ಇಂತೆಂದನು :—ಸೂತಪುತ್ರನಾದ ರೋಮಹರ್ಷಣನೆಂಬ ಮುನಿಯು ದ್ವೈಪಾಯನಮಹರ್ಷಿಯಲ್ಲಿ ಶಿಷ್ಯತ್ವವನ್ನು ಹೊಂದಿ ಗುರುಪ್ರಸಾದದಿಂದ ಸಮ್ಯಜ್ಞಾನವನ್ನು ಆರ್ಜಿಸಿರುವನಲ್ಲವೆ. ಆ ಮುನಿಯು ಚಕ್ರಪಾಣಿಯಾದ ಮಹಾವಿಷ್ಣುವಿನ ಸನ್ನಿಧಿಯನ್ನು ಹೊಂದಿದ ಪವಿತ್ರಗಳಾದ ತೀರ್ಥಕ್ಷೇತ್ರಗಳನ್ನು ವಿಪ್ರರಾದ ನಿಮಗೆ ಹೇಳಲು ಅರ್ಹನು.

೬. ಆ ಕ್ಷೇತ್ರಕ್ಕೆ ಸತ್ಯವ್ರತ, ಭಾಸ್ಕರಕ್ಷೇತ್ರವೆಂಬ ಪ್ರಸಿದ್ಧಿಯುಂಟಾದ ಬಗೆ, ಮುಮುಕ್ಷುಮಾನವರಿಗೆ ಮುಕ್ತಿಯನ್ನು ದೊರಕಿಸುವ ಮಹಾಮಹಿಮೆಯು ಪ್ರಾಪ್ತವಾದ ಪ್ರಕಾರ, ಮತ್ತು ಅಲ್ಲಿ ಮುಕುಂದನು ಅವತರಿಸಿದ ರೀತಿ—ಇವೆಲ್ಲವನ್ನೂ ಸೂತಪುತ್ರನಾದ ಮುನಿಯು ನಿಮಗೆ ಬೋಧಿಸಲು ಅರ್ಹನು

ವಾಕ್ಯಂ ವಸಿಷ್ಠಸ್ಯ ನಿಶಮ್ಯ ವಿಪ್ರಾ
ಮುಕುಂದ ಗಾಥಾಶ್ರವಣೇ ಕೃತಾದರಾಃ ।
ತತ್ರಾಭಿಯಾಂತಂ ದದೃಶುರ್ಯದೃಚ್ಛಯಾ
ಸೂತಂ ತದಾ ವಿಪ್ರವರ್ಯೈರುಪೇತಂ ॥ ೭ ॥

ತತೋ ವಿಪ್ರಾನಭಿವಂದ್ಯಾಸನಸ್ಥಂ
ಸೂತಂ ದೃಷ್ಟ್ವಾ ಶೌನಕಾದ್ಯಾಶ್ಚ ಸರ್ವೇ ।
ಪಪ್ರಚ್ಛುರೇನಂ ಪರಿಹೃಷ್ಟಚೇತಸಃ
ಪಾದಾಂಬುಜಧ್ಯಾನಪರಾ ಮುರಾರೇಃ ॥ ೮ ॥

ಋಷಯ ಊಚುಃ :—

ಸೂತ ಸೂತ ಮಹಾಭಾಗ ಸರ್ವಶಾಸ್ತ್ರಾರ್ಥಕೋವಿದ ।
ದೈವಯೋಗಾದಸುಪ್ರಾಪ್ತೋ ಭಾಗಧೇಯೇನ ನೋ ಭವಾನ್ ॥ ೯ ॥

---

೭. ಸಭಿಕರಾದ ದ್ವಿಜೋತ್ತಮರು ವಸಿಷ್ಠಮುನಿಯ ಈ ವಚನವನ್ನು ಕೇಳಿ ಮುಕುಂದನ ಚರಿತಾಮೃತಗಳನ್ನು ವರ್ಣಿಸಿರುವ ಗಾಥಾಮೃತವನ್ನು ಪಾನಮಾಡ ಬೇಕೆಂಬ ಅತ್ಯಾದರವುಳ್ಳವರಾಗಿ ಯದೃಚ್ಛಾವಶದಿಂದ ಅನೇಕ ವಿಪ್ರವೃಂದದಿಂದ ಕೂಡಿ ಅಲ್ಲಿಗೆ ಬರುತ್ತಲಿದ್ದ ಮಹಾಜ್ಞಾನಿಯಾದ ಸೂತಮುನಿಯನ್ನು ಕಂಡರು.

೮. ಮುರಾರಿಯ ಪಾದಾಂಬುಜಗಳನ್ನು ಧ್ಯಾನಮಾಡುವ ಆಸಕ್ತಿಯೋಗ ದಿಂದ ಕೂಡಿ ಸೂತಮುನಿಯ ಸನ್ನಿಧಿಯನ್ನು ನಿರೀಕ್ಷಿಸುತ್ತಲಿದ್ದ ಶೌನಕಾದಿ ಸಕಲ ಮುನಿಗಳು ಆಗ ಅಕಸ್ಮಾತ್ತಾಗಿ ದಯಮಾಡಿಸಿರುವ ಸೂತಮಹಾಮುನಿಯು ಸಭೆಗೆ ಬಂದು ಸಭಿಕರಾದ ವಿಪ್ರರನ್ನು ಅಭಿನಂದಿಸಿ ಆಸನಾರೂಢನಾಗಿ ಕುಳಿತುಕೊಂಡ ತರುವಾಯ ಸಂತುಷ್ಟಚಿತ್ತರಾಗಿ ಸೂತಮುನಿಯನ್ನು ಕುರಿತು ಪ್ರಶ್ನೆಮಾಡಿದರು.

೯. ಋಷಿಗಳು ಪ್ರಶ್ನೆಮಾಡಿದುದೇನೆಂದರೆ:—ಸಕಲ ಶಾಸ್ತ್ರಾರ್ಥಗಳ ಪಾರಂ ಗತನೂ ಮಹಾಮಹಿಮನಂತನೂ ಆದ ಸೂತಮುನಿಯೆ ! ಸೂತಮುನಿಯೆ !! ಈದಿನ ನಮ್ಮ ಎಲ್ಲರ ಭಾಗ್ಯೋದಯದಿಂದ ಅಕಸ್ಮಾತ್ತಾಗಿ ನೀನು ಇಲ್ಲಿಗೆ ಬಂದಿರುವೆ.

ಭವತಾ ಕಥಿತಾಃ ಪೂರ್ವಂ ವರ್ಣಾಶ್ರಮಸಮಾಶ್ರಿತಾಃ ।
ಕಥಾಃ ಕೈವಲ್ಯಫಲದಾ ವಿಷ್ಣುಭಕ್ತಿಪ್ರದಾಯಕಾಃ ॥ ೧೦ ॥

ಕ್ಷೇತ್ರಾಣಿ ಚ ಸುಪುಣ್ಯಾನಿ ತೀರ್ಥಾನ್ಯಾಯತನಾನಿ ಚ ।
ಕಥಿತಾನಿ ತ್ವಯಾ ವಿದ್ವನ್ ಲೋಕಾನಾಂ ಚರಿತಾನಿ ಚ ॥ ೧೧ ॥

ಇದಾನೀಂ ಶ್ರೋತುಮಿಚ್ಛಾಮಃ ಕಾಂಚೀ ಕ್ಷೇತ್ರಸ್ಯ ವೈಭವಂ ।
ಯತ್ತು ಸತ್ಯವ್ರತಂ ನಾಮ ಭಾಸ್ಕರಾಖ್ಯಂ ಚ ಮುಕ್ತಿದಂ ॥ ೧೨ ॥

ಕತಿ ಸ್ಥಾನಾನಿ ವೈ ವಿಷ್ಣೋಃ ಕತಿ ರುದ್ರಸ್ಯ ಚಾನಘ ॥ ೧೩ ॥

ತೀರ್ಥಾನಿ ಕತಿ ವಾ ಸಂತಿ ಹ್ರದಾ ನದ್ಯಶ್ಚ ಪುಣ್ಯದಾಃ ।
ತತ್ಸರ್ವಂ ವಿಸ್ತರೇಣೈವ ತ್ವಂ ನೋ ವಕ್ತು ಮಿಹಾರ್ಹಸಿ ॥ ೧೪ ॥

---

೧೦. ಇದಕ್ಕೆ ಮುಂಚೆ ವಿಷ್ಣುಭಕ್ತಿಯನ್ನು ಪ್ರದಾನಮಾಡಿ ಸಾಕ್ಷಾತ್ತಾಗಿ ಕೈವಲ್ಯಫಲವನ್ನು ಕೊಡುವ ವರ್ಣ-ಆಶ್ರಮಧರ್ಮಗಳ ಮಹಿಮೆಯನ್ನು ಕೊಂಡಾಡುವ ಅನೇಕ ಕಥೆಗಳು ನಿನ್ನಿಂದ ಉಪದೇಶಿಸಲ್ಪಟ್ಟಿವೆ.

೧೧. ಜ್ಞಾನಿಯೇ ! ಹಾಗೆ ಪವಿತ್ರವಾದ ಅನೇಕ ತೀರ್ಥಕ್ಷೇತ್ರಗಳನ್ನೂ, ಪವಿತ್ರ ದೇವಾಲಯಗಳನ್ನೂ ಮತ್ತು ಲೋಕದಲ್ಲಿ ಪ್ರಾದುರ್ಭವಿಸಿದ ಮಹಾತ್ಮರ ಪುಣ್ಯಚರಿತ್ರೆಗಳನ್ನೂ ಉಪದೇಶಮಾಡಿರುವೆ.

೧೨. ಸತ್ಯವ್ರತ, ಭಾಸ್ಕರ ಮುಂತಾದ ಪ್ರಸಿದ್ಧಿಯನ್ನು ಹೊಂದಿ ಭಕ್ತರಿಗೆ ಕೈವಲ್ಯವನ್ನು ಕೊಡುವ ಕಾಂಚೀಕ್ಷೇತ್ರದ ಮಾಹಾತ್ಮ್ಯವನ್ನು ಈಗ ನಾವೆಲ್ಲರೂ ಕೇಳಲು ಕುತೂಹಲಿಗಳಾಗಿರುವೆವು.

೧೩. ವಿಷ್ಣುಸನ್ನಿಧಿಯನ್ನು ಹೊಂದಿರುವ ಪವಿತ್ರಸ್ಥಾನಗಳು ಎಷ್ಟಿವೆ ?

೧೪. ಮತ್ತು ಪುಣ್ಯವನ್ನು ಉಂಟುಮಾಡುವ ಮಡು, ನದೀರೂಪವಾದ ತೀರ್ಥಗಳು ಎಷ್ಟಿವೆ ? ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಉಪದೇಶಿಸಿ ನಮ್ಮನ್ನು ಅನುಗ್ರಹಿಸಲು ನೀನು ಅರ್ಹನಾಗಿರುವೆ.

ತೇಷಾಂ ತದ್ವಚನಂ ಶ್ರುತ್ವಾ ಮುನೀನಾಂ ಭಾವಿತಾತ್ಮನಾಂ ।
ನತ್ವಾ ಸತ್ಯವತೀಪುತ್ರಂ ಸೂತಃ ಪ್ರೋವಾಚ ತಾನ್ ಮುನೀನ್ ॥ ೧೫ ॥

ಸೂತ ಉವಾಚ :—

ಹಂತ ವಃ ಕಥಯಿಷ್ಯಾಮಿ ಶೃಣುಧ್ವಂ ವಿಪ್ರಪುಂಗವಾಃ ।
ಏವಮೇವ ಪುರಾ ಪೃಷ್ಟೋ ಭಗವಾನ್ ನಾರದೋ ಮುನಿಃ ॥ ೧೬ ॥

ಯದುವಾಚ ತದಾ ರಾಜ್ಞೇ ಹ್ಯಂಬರೀಷಾಯ ಪೃಚ್ಛತೇ ।
ತದ್ವೋಽಹಂ ಕಥಯಿಷ್ಯಾಮಿ ಕಾಂಚೀಕ್ಷೇತ್ರಸ್ಯ ವೈಭವಂ ॥ ೧೭ ॥

ರಾಜಾಽಭೂದಂಬರೀಷಾಖ್ಯೋ ಮಹಾನಿಕ್ಷ್ವಾಕುವಂಶಜಃ ।
ಅಯೋಧ್ಯಾಧಿಪತಿಃ ಶ್ರೀಮಾನ್ನರಮೇಧಂ ಸ ಚಾಕರೋತ್ ॥ ೧೮ ॥

---

೧೫. ಸುಕೃತಪರಿಪಾಕದಿಂದ ಸಂಸ್ಕೃತಚಿತ್ತರಾದ ಆ ಮುನಿಗಳು ಈ ಪ್ರಶ್ನ ವಚನವನ್ನು ಕೇಳಿ ಸೂತಮುನಿಯು ಸತ್ಯವತೀದೇವಿಯಲ್ಲಿ ಪುತ್ರನಾಗಿ ಜನಿಸಿರುವ ವೇದವ್ಯಾಸಗುರುವನ್ನು ನಮಸ್ಕರಿಸಿ ಸಭಿಕಮಹರ್ಷಿಗಳಿಗೆ ಆ ವಿಷಯವನ್ನು ಹೇಳಲು ಆರಂಭಿಸಿದನು.

೧೬-೧೭. ಸೂತಮುನಿಯು ಈರೀತಿಯಾಗಿ ಹೇಳಿದನು :-ದ್ವಿಜೋತ್ತಮರೆ! ಅತ್ಯಾನಂದವು! ನೀವು ಕೇಳಿರುವ ವಿಷಯಗಳನ್ನು ಪ್ರತಿಪಾದಿಸುವೆನು. ಕೇಳಿರಿ. ಪೂರ್ವಕಾಲದಲ್ಲಿ ಅಂಬರೀಷನೆಂಬ ರಾಜನು ಪೂಜ್ಯನಾದ ನಾರದಮಹರ್ಷಿಯನ್ನು ಕಂಡು ಹೀಗೆಯೇ ಪ್ರಶ್ನಿಸಿರುವಾಗ ನಾರದಮುನಿಯು ಆ ರಾಜನಿಗೆ ಬೋಧಿಸಿರುವಂತೆ ಕಾಂಚೀಕ್ಷೇತ್ರಮಾಹಾತ್ಮ್ಯದಿಂದ ಗರ್ಭಿತವಾದ ಕಥೆಯನ್ನು ನಿಮಗೆ ಈಗ ನಾನು ವಿವರಿಸುವೆನು.

೧೮. ಇಕ್ಷ್ವಾಕುವಂಶದಲ್ಲಿ ಜನಿಸಿದ ಅಂಬರೀಷನೆಂಬ ಪವಿತ್ರನಾಮಧೇಯವುಳ್ಳ ಮಹಾರಾಜನು ಐಶ್ವರ್ಯಸಂಪನ್ನನೂ ಅಯೋಧ್ಯಾನಗರಿಗೆ ಅಧಿಪತಿಯೂ ಆಗಿ ನರನನ್ನು ಯಾಗಪಶುವನ್ನಾಗಿ ವಿನಿಯೋಗಿಸಿರುವ ನರಮೇಧಯಾಗವನ್ನು ಆಚರಿಸಿದನು.

ಭಾರ್ಗವಂ ತು ಶುನಃಶೇಫಮೃಚೀಕತನಯಂ ದ್ವಿಜಾಃ ।
ಪುರಸ್ಕೃತ್ಯ ವಸಿಷ್ಠಾದ್ಯಾಶ್ಚಕ್ರುಃ ಕರ್ಮಾಣಿ ಚಾಧ್ವರೇ ॥ ೧೯ ॥

ತಸ್ಮಿನ್ ಯಜ್ಞೇ ಸಮಾಪ್ತೇ ತು ರಾಜಾ ಸಂಪೂರ್ಣಮಾನಸಃ ।
ಸ ಕೃತಾವಭೃಥಃ ಪೂತೋ ವಿಷ್ಣುಧ್ಯಾನಪರಾಯಣಃ ॥ ೨೦ ॥

ದತ್ವಾ ದಾನಾನಿ ವಿಪ್ರೇಭ್ಯ ಋತ್ವಿಗ್ಭ್ಯಶ್ಚ ವಿಶೇಷತಃ ।
ತತ್ರಾಗತಂ ದೇವಋಷಿಂ ಸರ್ವಜ್ಞಂ ಬ್ರಹ್ಮಣಃ ಸುತಂ ॥ ೨೧ ॥

ಸಂಪೂಜ್ಯ ವಿಧಿವದ್ರಾಜಾ ಪರಿಪಪ್ರಚ್ಛ ನಾರದಂ ।
ಅಂಬರೀಷ ಉವಾಚ :—
ತ್ವಯಾ ದೇವಋಷೇ ಪೂರ್ವಂ ಸರ್ವೇ ಧರ್ಮಾಃ ಪ್ರಕೀರ್ತಿತಾಃ ॥೨೨॥

---

೧೯. ದ್ವಿಜೋತ್ತಮರೆ ! ಭೃಗುವಂಶದ ಋಚೀಕನೆಂಬ ಬ್ರಾಹ್ಮಣನ ಪುತ್ರನಾದ ಶುನಃಶೇಫನನ್ನು ಪಶುಸ್ಥಾನದಲ್ಲಿ ಪುರಸ್ಕರಿಸಿ ಆ ಯಜ್ಞದಲ್ಲಿ ಋತ್ವಿಜರಾಗಿದ್ದ ವಸಿಷ್ಠ ಮುಂತಾದ ಮಹರ್ಷಿಗಳು ಅಂಗಕರ್ಮಗಳನ್ನು ಆಚರಿಸಿದರು.

೨೦. ಆ ಯಜ್ಞವು ಸಂಪೂರ್ಣವಾಗಿ ಮುಗಿದ ತರುವಾಯ ರಾಜನು ಪರಿಪೂರ್ಣಮನೋರಥವುಳ್ಳವನೂ, ಅವಭೃಥಸ್ನಾನಮಾಡಿದವನೂ, ಪವಿತ್ರನೂ ಮತ್ತು ವಿಷ್ಣುಪರಮಾತ್ಮನ ಧ್ಯಾನದಲ್ಲಿ ಆಸಕ್ತಿಯುಳ್ಳವನೂ ಆದನು.

೨೧-೨೨. ಆ ಯಜ್ಞಸಮಾರಂಭದಲ್ಲಿ ವಿಪ್ರರಿಗೆ ದಾನಗಳನ್ನು ಕೊಟ್ಟು ಋತ್ವಿಜರಿಗೆ ವಿಶೇಷವಾಗಿ ದಕ್ಷಿಣಾದಾನವನ್ನು ಮಾಡಿ ಅಲ್ಲಿಗೆ ಬಂದಿದ್ದ ಬ್ರಹ್ಮಮಾನಸಪುತ್ರನೂ, ಸರ್ವಜ್ಞನೂ, ಮತ್ತು ದೇವರ್ಷಿಯೂ ಆದ ನಾರದಮಹರ್ಷಿಯನ್ನು ವಿಧಿಪೂರ್ವಕವಾಗಿ ಸತ್ಕರಿಸಿ ಪ್ರಶ್ನೆಮಾಡಲಾರಂಭಿಸಿದನು. ರಾಜನು ಪ್ರಶ್ನೆಮಾಡಿರುವುದೇನೆಂದರೆ:—ದೇವರ್ಷಿಯೇ ! ಪೂರ್ವದಲ್ಲಿ ನಿನ್ನಿಂದ ನಮ್ಮೆಲ್ಲರಿಗೆ ಸಕಲ ಧರ್ಮಗಳು ಉಪದೇಶಿಸಲ್ಪಟ್ಟಿವೆ.

ಚತುರ್ಣಾಂ ಚೈವ ವರ್ಣಾನಾಮಾಶ್ರಮಾಣಾಂ ತಥೈವ ಚ ।
ಯೇ ಧರ್ಮಾ ಯೋಗಶೀಲಾನಾಂ ವೇದಾಧ್ಯಯನಶಾಲಿನಾಂ ॥ ೨೩ ॥

ಯೇ ಚ ತ್ವಯಾ ದ್ವಿಧಾ ಪ್ರೋಕ್ತಾಃ ಕಾಮದಾ ಮೋಕ್ಷದಾ ಇತಿ ।
ಯೇ ಚ ವೈ ವಿನಿಯುಜ್ಯಂತೇ ದೇವೇಷ್ವನ್ಯೇಷು ಕಾಮದಾಃ ॥ ೨೪ ॥

ಹರೌ ಚೇದ್ವಿನಿಯುಜ್ಯಂತೇ ಕಾಮ್ಯಾ ಮೋಕ್ಷಪ್ರದಾ ಇತಿ ।
ಧರ್ಮಾಶ್ಚ ಬಹುಶಶ್ಚೀರ್ಣಾ ಅಪಿ ವಿಷ್ಣುವಿವರ್ಜಿತಾಃ ॥ ೨೫ ॥

ಸುಕೃತಾ ಅಪಿ ತೇ ವ್ಯರ್ಥಾ ಯಥಾ ಭಸ್ಮನಿ ವೈ ಹುತಾಃ ।
ಧರ್ಮೋ ಹ್ಯಣುರಪಿ ಧ್ಯಾತ್ವಾ ಹರಿಂ ಹೃದಿ ಕೃತೋ ಭವೇತ್ ॥ ೨೬ ॥

---

೨೩. ನೀನು ಉಪದೇಶಮಾಡಿರುವ ಧರ್ಮಗಳಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣ್ಯದ ಧರ್ಮ, ಬ್ರಹ್ಮಚರ್ಯ ಮುಂತಾದ ಆಶ್ರಮಧರ್ಮ, ಯೋಗಾಭ್ಯಾಸ ಶೀಲವುಳ್ಳವರ ಧರ್ಮ ಮತ್ತು ವೇದಾಧ್ಯಯನಶಾಲಿಗಳ ಧರ್ಮ-ಮುಂತಾದ ವಿಶೇಷ ಧರ್ಮಗಳು ಸೇರಿಕೊಂಡಿವೆ.

೨೪. ಆ ಧರ್ಮಗಳು ಕಾಮ್ಯಫಲ ಮುಕ್ತಿಫಲಗಳನ್ನು ಕೊಡುವ ನಿಮಿತ್ತದಿಂದ ಕಾಮದ, ಮೋಕ್ಷದವೆಂದು ಎರಡು ಧರ್ಮವಿಭಾಗವನ್ನೂ ತೋರಿಸಿರುವೆ. ಇತರ ಸಾಮಾನ್ಯ ದೇವತೆಗಳಲ್ಲಿ ಅರ್ಪಿಸಿರುವ ಕರ್ಮಗಳು ಕಾಮದ ಧರ್ಮಗಳಾಗಿವೆ. ಮಹಾ ವಿಷ್ಣುವಿನಲ್ಲಿ ಅರ್ಪಿಸಿರುವ ಕರ್ಮಗಳು ಕಾಮಫಲವನ್ನು ಕೊಟ್ಟು ಮುಕ್ತಿಪ್ರದಾಯಕಗಳೂ ಆಗುವುವು.

೨೫. ವಿಷ್ಣುಭಕ್ತಿಯಿಲ್ಲದೆ ಅತಿಯಾಗಿ ಆಚರಿಸಿರುವ ಕರ್ಮಗಳು ಸಮಗ್ರಾಂಗಗಳಿಂದ ಕೂಡಿ ವಿಜೃಂಭಣೆಯಿಂದ ಮಾಡಿದ್ದರೂ ಕೂಡ ಅಗ್ನಿಯಿಲ್ಲದ ಭಸ್ಮರಾಶಿಯಲ್ಲಿ ಹೋಮಮಾಡಿದಂತೆ ಅವುಗಳೆಲ್ಲಾ ನಿರರ್ಥಕವಾಗುವುವು.

೨೬. ಹೃದಯದಲ್ಲಿ ವಿಷ್ಣುಪರಮಾತ್ಮನನ್ನು ಧ್ಯಾನಿಸಿ ಅಣುವಾದ ಧರ್ಮವನ್ನು ಆಚರಿಸಿದರೂ ಮಾನವರ ಆ ಧರ್ಮವು ಆಲದಗಿಡದ ಚಿಕ್ಕಬೀಜವು ಭಾರಿ ವೃಕ್ಷದ ಸ್ಥೂಲಾಕಾರವನ್ನು ಹೊಂದುವಂತೆ ಮಹತ್ತರವಾಗುವುದು.

ಸ ಏವ ಭವತಿ ಸ್ಥೂಲೋ ನರಾಣಾಂ ವಟಬೀಜವತ್ ।
ತಸ್ಮಾದ್ವಿಷ್ಣುಂ ಸಮುದ್ದಿಶ್ಯ ಪುಣ್ಯಕ್ಷೇತ್ರೇಷು ಭಕ್ತಿಮಾನ್ ॥ ೨೭ ॥

ಕರೋತಿ ಮನುಜೋ ಧರ್ಮಾನ್ ಸ ಮುಕ್ತಿಂ ಲಭತೇತರಾಂ ॥ ೨೮ ॥

ಧ್ಯಾಯೇತ್ತು ವಿಷ್ಣೋಃ ಪದಪಂಕಜಂ ಹೃದಾ
ನಾಮಾನಿ ವಿಷ್ಣೋಃ ಪ್ರವದೇಚ್ಚ ವಾಚಾ ।
ಶ್ರೂಯಾಚ್ಚ ವಿಷ್ಣೋಶ್ಚರಿತಂ ಶ್ರವೋಭ್ಯಾ
ಮೀಕ್ಷೇತ ವಿಷ್ಣೋರ್ಮುಖಮೀಕ್ಷಣಾಭ್ಯಾಂ ॥ ೨೯ ॥

ಯಜಂತಿ ವಿಷ್ಣುಂ ಪ್ರಯಜಂತಿ ವಿಷ್ಣುಂ
ನಮಂತಿ ವಿಷ್ಣುಂ ನತಮಸ್ತಕಾ ಯೇ ।
ನಂದಂತಿ ವಿಷ್ಣುಂ ಚ ನದಂತಿ ವಿಷ್ಣುಂ
ನೃತ್ಯಂತಿ ತೇ ವಿಷ್ಣುಪದಂ ಪ್ರಯಾಂತಿ ॥ ೩೦ ॥

೨೭-೨೮. ಆದ್ದರಿಂದ ಮಾನವನು ಪುಣ್ಯಕ್ಷೇತ್ರಗಳಲ್ಲಿ ವಿಷ್ಣುವನ್ನು ಉದ್ದೇಶಿಸಿ ವಿಷ್ಣುಭಕ್ತಿಯಿಂದ ಕೂಡಿ ಧರ್ಮಗಳನ್ನು ಅನುಷ್ಠಾನಮಾಡಿದ್ದರಿಂದ ಮುಕ್ತಿಯನ್ನು ಅತಿಶಯವಾಗಿ ಹೊಂದುವನು.

೨೯. ಅತಿಶಯವಾದ ವಿಷ್ಣುಭಕ್ತಿಮಾರ್ಗಸಮಾರೂಢನು ವಿಷ್ಣುವಿನ ಪಾದಪದ್ಮಗಳನ್ನು ಮನಸ್ಸಿನಿಂದ ಧ್ಯಾನಿಸುವನು. ವಿಷ್ಣುವಿನ ಪವಿತ್ರನಾಮಗಳನ್ನು ವಾಗಿಂದ್ರಿಯದಿಂದ ಉಚ್ಚಾರಮಾಡುವನು. ವಿಷ್ಣುವಿನ ಪುಣ್ಯಚರಿತ್ರಗಳನ್ನು ಕಿವಿಯಿಂದ ಕೇಳುವನು ಮತ್ತು ವಿಷ್ಣುವಿನ ಮುಖಕಮಲವನ್ನು ದೃಷ್ಟಿಯಿಂದ ನೋಡುವನು.

೩೦. ಮತ್ತು ವಿಷ್ಣುಭಕ್ತರು ವಿಷ್ಣುವನ್ನು ಪೂಜಿಸುವರು. ವಿಷ್ಣುವನ್ನು ಉದ್ದೇಶಮಾಡಿ ಯಾಗಮಾಡುವರು. ತಲೆಯನ್ನು ಬಾಗಿಸಿ ವಿಷ್ಣುವನ್ನು ನಮಸ್ಕರಿಸುವರು. ವಿಷ್ಣುವನ್ನು ಪ್ರೀತಿಸುವರು. ವಿಷ್ಣುವನ್ನು ನಾಮೋಚ್ಚಾರಣೆಯಿಂದ ಕರೆಯುವರು. ವಿಷ್ಣುಪ್ರೀತಿಗಾಗಿ ನೃತ್ಯಮಾಡುವರು. ಈರೀತಿಯಾಗಿ ವಿಷ್ಣುಭಕ್ತಿತತ್ಪರರಾದ ಮನುಷ್ಯರು ಮುಕ್ತಿಮಾರ್ಗವನ್ನು ಹೊಂದುವರು.

ಇತಿ ತ್ವಯೋದಿತಂ ಪೂರ್ವಂ ಮಹ್ಯಂ ಶುಶ್ರೂಷವೇಽನಘ ।
ಇದಾನೀಂ ಶ್ರೋತುಮಿಚ್ಛಾಮಿ ಕ್ಷೇತ್ರಾಣ್ಯಾಯತನಾನಿ ಚ ॥ ೩೧ ॥

ಜಂಬೂದ್ವೀಪೇ ಮಹಾಪುಣ್ಯೇ ಖಂಡೇ ಭಾರತಸಂಜ್ಞಕೇ ।
ಸ್ಥಿತಾನಿ ವಿಷ್ಣೋಃ ಸ್ಥಾನಾನಿ ಭುಕ್ತಿಮುಕ್ತಿಪ್ರದಾನಿ ಚ ॥ ೩೨ ॥

ತೇಷಾಂ ಪುಣ್ಯತಮಂ ಶ್ರೇಷ್ಠಂ ನಾಮ್ನಾ ಸತ್ಯವ್ರತಂ ಶುಭಂ ।
ಸ್ಮರಣಾನ್ಮುಕ್ತಿದಂ ನೃಣಾಂ ದೇವರ್ಷಿಗಣಸೇವಿತಂ ॥ ೩೩ ॥

ಇತಿ ತ್ವಯೋದಿತಂ ಪೂರ್ವಂ ಸಂಕ್ಷೇಪೇಣ ದ್ವಿಜರ್ಷಭ ।
ಬ್ರೂಹಿ ವಿಸ್ತರಶೋ ಮಹ್ಯಂ ಯಥಾ ತುಷ್ಯೇನ್ಮನೋ ಮಮ ॥ ೩೪ ॥

ಇತಿ ತಸ್ಯ ಬ್ರುವಾಣಸ್ಯ ರಾಜ್ಞೋ ವಚನಮದ್ಭುತಂ ।
ಶ್ರುತ್ವಾ ಬ್ರಹ್ಮಾತ್ಮಜಃ ಶ್ರೀಮಾನ್ ನಾರದೋ ವಾಕ್ಯಮಬ್ರವೀತ್ ॥

---

೩೧. ಪಾಪಸಂಗವಿಲ್ಲದ ಪೂಜ್ಯನೆ! ಹಿಂದೆ ಶುಶ್ರೂಷುವಾದ ನನಗೆ ನಿನ್ನಿಂದ ಈರೀತಿಯಾಗಿ ಹೇಳಲ್ಪಟ್ಟಿತು. ಈಗ ಅಂತಹ ಕ್ಷೇತ್ರ ಆಲಯಗಳನ್ನು ಕೇಳಲು ಇಷ್ಟವುಳ್ಳವನಾಗಿರುವೆನು.

೩೨. ಮಹಾಪವಿತ್ರವಾದ ಈ ಜಂಬೂದ್ವೀಪದಲ್ಲಿ ಭಾರತವೆಂಬ ಸಂಜ್ಞಾಂಕಿತವಾದ ಖಂಡದಲ್ಲಿ ಭೋಗಮೋಕ್ಷಫಲಗಳನ್ನು ಕೊಡುವ ಪವಿತ್ರವಾದ ವಿಷ್ಣುಸ್ಥಾನಗಳು ಅನೇಕವಾಗಿರುವುವು.

೩೩. ಅವುಗಳಲ್ಲೆಲ್ಲಾ ಶ್ರೇಷ್ಠವೂ ಅತಿಶಯವಾಗಿ ಪವಿತ್ರವೂ ಆದ ಸತ್ಯವ್ರತವೆಂಬ ಸಂಜ್ಞೆಯನ್ನು ಹೊಂದಿದ ಮಂಗಲಕರಕ್ಷೇತ್ರವು ಸ್ಮರಣಮಾತ್ರದಿಂದ ಮೋಕ್ಷಸಿದ್ಧಿಯನ್ನು ಕೊಡುವುದೂ, ದೇವತೆಗಳಿಂದಲೂ ಋಷಿಗಳಿಂದಲೂ ಸೇವಿಸಲ್ಪಟ್ಟಿರುವುದೂ ಆಗಿದೆ.

೩೪. ದ್ವಿಜಪುಂಗವನೆ! ನಿನ್ನ ಉಪದೇಶದಿಂದ ಈ ವಿಷಯವನ್ನು ಸಂಕ್ಷೇಪವಾಗಿ ತಿಳಿದಿರುವೆನು. ಈಗ ಆ ವಿಷಯವನ್ನು ನನ್ನ ಮನಸ್ಸು ಆನಂದಿಸುವಂತೆ ವಿಸ್ತಾರವಾಗಿ ಉಪದೇಶಿಸು.

೩೫. ಇಂತೆಂದಿರುವ ರಾಜನ ಆಶ್ಚರ್ಯಕರವಾದ ಮಾತನ್ನು ಕೇಳಿ ಬ್ರಹ್ಮಮಾನಸಪುತ್ರನೂ ಅಷ್ಟೈಶ್ವರ್ಯಸಂಪನ್ನನೂ ಆದ ನಾರದಮುನಿಯು ಉತ್ತರವನ್ನು ಹೇಳಿದನು.

ನಾರದ ಉವಾಚ :—

ಧನ್ಯಸ್ತ್ವಂ ಕೃತಕೃತ್ಯಸ್ತ್ವಂ ಯಸ್ಯ ತೇ ಮತಿರೀದೃಶೀ ।
ಜಾತಾ ವಿಷ್ಣುಕಥಾಸ್ವಾದೇ ಪವಿತ್ರೇ ಲೋಕಪಾವನೇ ॥ ೩೬ ॥

ಹಂತ ತೇ ಕೀರ್ತಯಿಷ್ಯಾಮಿ ವಿಷ್ಣೋಃ ಕ್ಷೇತ್ರಸ್ಯ ವೈಭವಂ ।
ಸತ್ಯವ್ರತಂ ಭಾಸ್ಕರಾಖ್ಯಂ ಕ್ಷೇತ್ರಂ ವಿಷ್ಣೋರತಿಪ್ರಿಯಂ ॥ ೩೭ ॥

ಜಂಬೂದ್ವೀಪೇ ಪುಣ್ಯತಮೇ ವರ್ಷೇ ಭಾರತಸಂಜ್ಞಕೇ ।
ಗಂಗಾಯಾ ದಕ್ಷಿಣೇ ಭಾಗೇ ಯೋಜನಾನಾಂ ಶತದ್ವಯೇ ॥ ೩೮ ॥

ಪೂರ್ವಾಬ್ಧೇಸ್ತೀರಮಾರಭ್ಯ ದಶಯೋಜನಮಾಯತಂ ।
ದಕ್ಷಿಣೋತ್ತರತಸ್ತಾವದ್ವಿಸ್ತೃತಂ ಕ್ಷೇತ್ರಮುತ್ತಮಂ ॥ ೩೯ ॥

---

೩೬. ಆಗ ನಾರದಮುನಿಯು ಈರೀತಿಯಾಗಿ ಉತ್ತರವಿತ್ತನು :—ಸ್ವತಃ ಪವಿತ್ರವೂ ಲೋಕಗಳನ್ನೆಲ್ಲ ಪಾವನಮಾಡುವುದೂ ಆದ ವಿಷ್ಣುಕಥಾಮೃತದ ಆಸ್ವಾದನೆಯಲ್ಲಿ ನಿನಗೆ ಕುತೂಹಲವು ಬೆಳೆದಿರುವುದರಿಂದ ನೀನೇ ಧನ್ಯನು ! ನೀನೇ ಕೃತಕೃತ್ಯನು !!

೩೭. ಆಗಲಿ ಸಂತೋಷ. ವಿಷ್ಣುಕ್ಷೇತ್ರದ ವೈಭವವನ್ನು ನಿನಗೆ ಹೇಳುವೆನು. ಭಾಸ್ಕರಕ್ಷೇತ್ರವೆಂಬ ಹೆಸರುಳ್ಳ ಸತ್ಯವ್ರತವೆಂಬುದು ವಿಷ್ಣುವಿಗೆ ಅತ್ಯಂತ ಪ್ರಿಯವಾದ ಸ್ಥಾನವು.

೩೮. ಆ ಕ್ಷೇತ್ರವು ಜಂಬೂದ್ವೀಪದ ಪವಿತ್ರವಾದ ಭಾರತವೆಂಬ ಖಂಡದಲ್ಲಿ ಗಂಗಾನದಿಯ ದಕ್ಷಿಣದಿಕ್ಕಿನ ಪ್ರದೇಶದಲ್ಲಿ ಇನ್ನೂರು ಯೋಜನಗಳ ದೂರದಲ್ಲಿರುವುದು.

೩೯. ಪೂರ್ವಸಮುದ್ರತೀರ ಭೂಮಿಯನ್ನು ಉಪಕ್ರಮಿಸಿ ಹತ್ತು ಯೋಜನಗಳಷ್ಟು ದೀರ್ಘವೂ ದಕ್ಷಿಣೋತ್ತರ ಭಾಗಗಳಲ್ಲಿ ಅಷ್ಟು ವಿಸ್ತಾರವೂ ಆದ ಉತ್ತಮಕ್ಷೇತ್ರವಾಗಿರುವುದು.

ಪುಣ್ಯವೃಕ್ಷಲತಾಯುಕ್ತಂ ಪುಣ್ಯೋಪವನಶೋಭಿತಂ ।
ಸತ್ಯವ್ರತಂ ಭಾಸ್ಕರಾಖ್ಯಂ ವಾರಾಹಾಖ್ಯಂ ಚ ತತ್ ಸ್ಮೃತಂ ॥ ೪೦ ॥

ನಾರಸಿಹ್ಮಂ ಚ ತತ್ ಕ್ಷೇತ್ರಂ ನೃಸಿಹ್ಮಾಧ್ಯುಷಿತಂ ಯತಃ ।
ಅಂಬರೀಷ ಉವಾಚ :—
ತಸ್ಯ ಕ್ಷೇತ್ರಸ್ಯ ದೇವರ್ಷೇ ಯತಃ ಸತ್ಯವ್ರತಾಭಿಧಾ ॥ ೪೧ ॥

ಯೇನ ತದ್ಭಾಸ್ಕರಂ ಕ್ಷೇತ್ರಂ ವಾರಾಹಾಖ್ಯಂ ಚ ಹೇತುನಾ ।
ನಾರಸಿಹ್ಮಮಭೂದ್ಯೇನ ತನ್ಮೇ ವಿಸ್ತರತೋ ವದ ॥ ೪೨ ॥

ನಾರದ ಉವಾಚ :—
ಶೃಣು ರಾಜನ್ ಪ್ರವಕ್ಷ್ಯಾಮಿ ತುಭ್ಯಂ ಶುಶ್ರೂಷವೇಽನಘ ।
ತತ್ ಸತ್ಯಮನೃತಂ ಚೇತಿ ಯೋ ವಿಷ್ಣುಃ ಸಮುದಾಹೃತಃ ॥ ೪೩ ॥

---

೪೦. ಪವಿತ್ರವಾದ ವೃಕ್ಷ, ಲತಾ ಮತ್ತು ಉಪವನಗಳಿಂದ ಅಲಂಕರಿಸಲ್ಪಟ್ಟ ಆ ಕ್ಷೇತ್ರವು ಸತ್ಯವ್ರತ, ಭಾಸ್ಕರ ಮತ್ತು ವಾರಾಹಕ್ಷೇತ್ರವೆಂದು ವಿವಿಧವಾದ ಪ್ರಖ್ಯಾತಿಯನ್ನು ಹೊಂದಿರುವುದು.

೪೧-೪೨. ಮತ್ತು ನರಸಿಹ್ಮಸ್ವಾಮಿಯು ಅಲ್ಲಿ ವಾಸಮಾಡಿರುವ ನಿಮಿತ್ತದಿಂದ ನರಸಿಹ್ಮಕ್ಷೇತ್ರವೂ ಅದಾಗಿರುವುದು. ಇದನ್ನು ಕೇಳಿ ಅಂಬರೀಷನು ಕೇಳುವುದೇನೆಂದರೆ:—ದೇವರ್ಷಿಯೆ! ಆ ಕ್ಷೇತ್ರಕ್ಕೆ ಸತ್ಯವ್ರತವೆಂಬ ಹೆಸರು ಹೇಗೆ ಬಂದಿತು? ಮತ್ತು ಭಾಸ್ಕರಕ್ಷೇತ್ರ, ವಾರಾಹಕ್ಷೇತ್ರವೆಂದು ವ್ಯವಹಾರವುಂಟಾಗಲು ನಿಮಿತ್ತವೇನು? ಯಾವ ಕಾರಣದಿಂದ ಅದು ನಾರಸಿಹ್ಮಕ್ಷೇತ್ರವಾಯಿತು? ಇದನ್ನು ವಿಸ್ತಾರವಾಗಿ ಉಪದೇಶಿಸಿ ಅನುಗ್ರಹಿಸಬೇಕು.

೪೩. ನಾರದಮಹರ್ಷಿಯು ಈರೀತಿಯಾಗಿ ವಿವರಿಸಲಾರಂಭಿಸಿದನು:—ಪಾಪಕಲ್ಮಷಮುಕ್ತನಾದ ರಾಜನೇ! ಪವಿತ್ರ ವಿಷಯಗಳನ್ನು ಕೇಳಬೇಕೆಂದಿರುವ ನಿನಗೆ ಇದೆಲ್ಲವನ್ನೂ ಕ್ರಮವಾಗಿ ಹೇಳುವೆನು ಕೇಳು. ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ವಿಷ್ಣುಪರಮಾತ್ಮನು ಸತ್ಯ ಮತ್ತು ಅನೃತಸ್ವರೂಪಿಯಾದವನು. ಮತ್ತು ಆ ಪರಮಾತ್ಮನು ಯಜ್ಞಮೂರ್ತಿಯು, ಪರಬ್ರಹ್ಮಸ್ವರೂಪನು, ಸತ್ಯಶಬ್ದಪ್ರತಿಪಾದ್ಯನು, ಸಾಕ್ಷಾನ್ನಾರಾಯಣನು, ಮತ್ತು ಹರಿಯು. ಇವೆಲ್ಲ ಆ ಮಹಾಮಹಿಮನ ಮಹಿಮೆಗಳನ್ನು ಉಲ್ಲೇಖಿಸುವ ನಾಮಗಳು.

ಯಜ್ಞಮೂರ್ತಿಃ ಪರಂ ಬ್ರಹ್ಮ ಸತ್ಯೋ ನಾರಾಯಣೋ ಹರಿಃ ।
ಸ ಕದಾಚಿನ್ಮಹಾರಾಜ ಸಂಯುಕ್ತೋಸ ಸುರರ್ಷಿಭಿಃ ॥ ೪೪ ॥

ಬ್ರಹ್ಮಣಾ ಸಮನುಧ್ಯಾತಃ ಸುರಕಾರ್ಯಾರ್ಥಸಿದ್ಧಯೇ ।
ಹಿರಣ್ಯಾಕ್ಷವಧಾರ್ಥಾಯ ಪ್ರಾಪ್ತೋ ಯಜ್ಞವರಾಹತಾಂ ॥ ೪೫ ॥

ತತಃ ಪ್ರವಿಶ್ಯ ಪಾತಾಳಮರ್ಣಂಭಸಿ ಸಂಪ್ಲುತಃ ।
ಕ್ಷಣೇನ ಚಾಭಿದುದ್ರಾವ ದಾನವೇಂದ್ರಮಮರ್ಷಣಃ ॥ ೪೬ ॥

ತತ್ರ ದೃಷ್ಟ್ವಾ ಹಿರಣ್ಯಾಕ್ಷಂ ಭೂಮಿಂ ತತ್ಕಕ್ಷಗಾಮಪಿ ।
ಭೂಮಿಂ ತುಂಡೇನ ಚಾಕೃಷ್ಯ ಹತ್ವಾ ಕ್ರೋಧೇನ ದಾನವಂ ॥ ೪೭ ॥

ಆಜಗಾಮಾಥ ವೇಗೇನ ದಂಷ್ಟ್ರಯೋದ್ಧೃತ್ಯ ಭೂತಲಂ ।
ಕ್ರೋಡೋದ್ಧೃತಧರಃ ಶ್ರೀಶಃ ಶುಶುಭೇ ಸ್ಥಲಸಂಸ್ಥಿತಃ ॥ ೪೮ ॥

೪೪-೪೫. ಮಹಾರಾಜನೆ! ಆ ಯಜ್ಞಮೂರ್ತಿಯು ದೇವಕಾರ್ಯವನ್ನು ಸಾಧಿಸುವ ಉದ್ದೇಶದಿಂದ ಒಂದಾನೊಂದು ಸಮಯದಲ್ಲಿ ದೇವರ್ಷಿಗಳಿಂದಲೂ ಬ್ರಹ್ಮನಿಂದಲೂ ಧ್ಯಾನಿಸಲ್ಪಟ್ಟವನಾಗಿ ಹಿರಣ್ಯಾಕ್ಷನೆಂಬ ಅಸುರನ ಸಂಹಾರಕ್ಕೋಸ್ಕರ ಯಜ್ಞವರಾಹಸ್ವರೂಪವನ್ನು ಪರಿಗ್ರಹಿಸಿದನು.

೪೬. ತರುವಾಯ ನೀರಿನೊಳಗೆ ಮುಳುಗಿ ಪಾತಾಳಲೋಕವನ್ನು ಪ್ರವೇಶಮಾಡಿ ಆ ದಾನವೇಂದ್ರನಾದ ಹಿರಣ್ಯಾಕ್ಷನನ್ನು ಕಂಡು ಕೋಪರಹಿತನಾಗಿ ನಿಮಿಷಮಾತ್ರದಿಂದ ಹಿಂದಟ್ಟಿಕೊಂಡುಹೋದನು.

೪೭. ಆಗ ಹಿರಣ್ಯಾಕ್ಷನನ್ನೂ ಅವನ ಕಂಕುಳಲ್ಲಿದ್ದ ಭೂದೇವಿಯನ್ನೂ ಕಂಡು ಮುಖದಿಂದ ಭೂಮಿಯನ್ನು ಸೆಳೆದುಕೊಂಡು ಕ್ರೋಧದಿಂದ ದಾನವನನ್ನು ಸಂಹರಿಸಿದನು.

೪೮. ತರುವಾಯ ತನ್ನ ಕೋರೆದಾಡೆಯಲ್ಲಿ ಭೂಮಿಯನ್ನು ಎತ್ತಿಕೊಂಡು ವೇಗವಾಗಿ ಪಾತಾಳದಿಂದ ಮೇಲಕ್ಕೆ ಬಂದು ಲಕ್ಷ್ಮೀಪತಿಯು ಲೀಲಾಮಾತ್ರದಿಂದ ಭೂಮಿಯನ್ನು ಉದ್ಧಾರಮಾಡಿದವನಾಗಿ ಪ್ರಕಾಶಿಸುತ್ತ ಸ್ಥಲದಲ್ಲಿ ನಿಂತುಕೊಂಡನು.

ಯಥಾ ಕರೋದ್ಧೃತಚ್ಛತ್ರೋ ನರೋ ಭಾತಿ ಹರಿಸ್ತಥಾ ।
ತತಃ ಸಮಾಶ್ವಾಸ್ಯ ಧರಾಂ ಸ್ಥಾಪಯಾಮಾಸ ಪೂರ್ವವತ್ ॥ ೪೯ ॥

ತತ್ರ ಸ್ವದಂಷ್ಟ್ರೇಣ ಹರಿಃ ಕೃತ್ವಾ ವಿವರಮಂಜಸಾ ।
ತೇನೈವ ತು ಬಿಲೇನೋರ್ವ್ಯಾಃ ಪಾತಾಲಾದೂರ್ಧ್ವಮುತ್ಪತತ್ ॥ ೫೦ ॥

ಊರ್ಧ್ವಮುತ್ಪತತಸ್ತಸ್ಯ ವೇಗೇನೋತ್ಕಂಪಿತಾ ಮಹೀ ।
ಉನ್ನತಾಽಭೂದ್ಬಿಲದ್ವಾರೇ ವಲ್ಮೀಕಸದೃಶಾಕೃತಿಃ ॥ ೫೧ ॥

ತದ್ವೈ ವರಾಹವಲ್ಮೀಕಮಭೂತ್ಪರ್ವತಸನ್ನಿಭಂ ।
ತತೋ ರಸಾತಲಾದ್ಭೂಮಿಮುತ್ಪತನ್ ಸೂಕರಾಕೃತಿಃ ॥ ೫೨ ॥

ಬಿಲಸ್ಯ ಪಾರ್ಶ್ವೇ ವಾಯವ್ಯೇ ಲುಲುಂಠ ಧರಣೀತಲೇ ।
ಲುಠತಸ್ತಸ್ಯ ರೋಮಾಣಿ ಧೂನ್ವತಶ್ಚ ಮುಹುರ್ಮುಹುಃ ॥ ೫೩ ॥

---

೪೯. ಕೈಯಲ್ಲಿ ಛತ್ರವನ್ನು ಧರಿಸಿರುವ ಮನುಷ್ಯನಂತೆ ಭೂಗೋಲವನ್ನು ಧರಿಸಿಕೊಂಡಿರುವ ಆ ವರಾಹಮೂರ್ತಿಯು ಶೋಭಿಸಿದನು. ಅನಂತರದಲ್ಲಿ ಭೂಮಿಯನ್ನು ಸಂತೈಸಿ ಮೊದಲಿನಂತೆ ಪ್ರತಿಷ್ಠೆಗೊಳಿಸಿದನು.

೫೦. ಹರಿಯು ತನ್ನ ಕೋರದಾಡೆಯಿಂದ ಭೂಗೋಲದಲ್ಲಿ ರಂಧ್ರವನ್ನು ಮಾಡಿ ಆ ಭೂಮಿಯ ಬಿಲದಮೂಲಕ ವೇಗವಾಗಿ ಪಾತಾಲದಿಂದ ಮೇಲಕ್ಕೆ ಹಾರಿ ಬಂದನು.

೫೧. ಪಾತಾಲದಿಂದ ಮೇಲಕ್ಕೆ ಹಾರಿಬರುವಾಗ ಆ ವರಾಹಮೂರ್ತಿಯ ವೇಗದಿಂದ ಭೂಮಿಯು ನಡುಗಿ ಆ ಬಿಲದ ಮುಖಭಾಗದಲ್ಲಿ ಹುತ್ತದಂತೆ ಆಕಾರವುಳ್ಳದ್ದಾಗಿ ಎತ್ತರವಾಯಿತು.

೫೨. ಪರ್ವತಾಕಾರವಾಗಿ ಉನ್ನತವಾದ ಆ ಬಿಲದ್ವಾರವು ವರಾಹವಲ್ಮೀಕವಾಗಿರುವುದು. ತರುವಾಯ ರಸಾತಲಲೋಕದಿಂದ ಭೂಮಿಗೆ ಬಂದಿರುವ ವರಾಹಮೂರ್ತಿಯು ಆ ಬಿಲದ ವಾಯುವ್ಯದಿಕ್ಕಿನ ಪಾರ್ಶ್ವದಲ್ಲಿ ನೆಲದಮೇಲೆ ಹೊರಳಾಡಿದನು.

೫೩-೫೪. ರಾಜೇಂದ್ರನೆ! ಹೀಗೆ ನೆಲದಮೇಲೆ ಹೊರಳಾಡುತ್ತ, ಮತ್ತೆಮತ್ತೆ ತನ್ನ ಶರೀರದಮೇಲಿನ ರೋಮಗಳನ್ನು ಕೊಡವುತ್ತ, ಮುಖಾಗ್ರದಿಂದ ಘುರ್ಘುರಶಬ್ದವನ್ನು ಮಾಡುತ್ತ, ಮತ್ತು ಅತಿಶಯವಾಗಿ ಸಟೆಗಳನ್ನು ನಡುಗಿಸುತ್ತಲೂ ಇರುವ

ಘಟ್ ಕುರ್ವತಶ್ಚ ತುಂಡೇನ ಸಟಾಃ ಕಂಪಯತೋ ಭೃಶಂ ।
ಪಾತಾಲೋದಕಸಿಕ್ತಸ್ಯ ತಸ್ಯಾಂಗಾತ್ತೋಯಬಿಂದವಃ ॥ ೫೪ ॥

ಪತಿತಾ ಯತ್ರ ರಾಜೇಂದ್ರ ತತ್ರಾಭೂತ್ಪಲ್ವಲಂ ಮಹತ್ ।
ಸಪಂಕಮಭವತ್ತೋಯಂ ವರಾಹಾಂಗಸಮುದ್ಭವಂ ॥ ೫೫ ॥

ವರಾಹತೀರ್ಥಮಾಖ್ಯಾತಂ ಸರ್ವಪಾಪಪ್ರಣಾಶನಂ ।
ಯದನಂತಸರೋ ನಾಮ ಖ್ಯಾತಂ ಲೋಕೇ ಸುಪಾವನಂ ॥ ೫೬ ॥

ಅನಂತಾಖ್ಯೇನ ನಾಗೇನ ಹರಿಮರ್ಚಯತಾ ಹ್ರದೇ ।
ಉಷಿತಂ ತತ್ರ ತೇನೈವ ಕಾರಣೇನ ತದಾಹ್ವಯಂ ॥ ೫೭ ॥

ತತೋ ಧರಾ ಸಮುದ್ವೀಕ್ಷ್ಯ ಹರಿಂ ಸಂತುಷ್ಟಮಾನಸಾ ।
ಆತ್ಮಾನಮಸುರಾಕ್ರಾಂತಾಮುದ್ಧರ್ತುಂ ಕಿಟಿರೂಪಿಣಂ ॥ ೫೮ ॥

ಪಾತಾಲಲೋಕದ ನೀರಿನಿಂದ ನೆನೆದಿರುವ ಆ ವರಾಹಮೂರ್ತಿಯ ಅಂಗದಿಂದ ಜಲ ಬಿಂದುಗಳು ಯಾವ ಸ್ಥಳದಲ್ಲಿ ಬಿದ್ದುವೋ ಆ ಸ್ಥಳದಲ್ಲಿ ಒಂದು ಚಿಕ್ಕ ಸರೋವರ ವಾಯಿತು.

೫೫. ಹೀಗೆ ವರಾಹಮೂರ್ತಿಯ ಶರೀರದಿಂದ ಉತ್ಪನ್ನವಾದ ಆ ಸಪಂಕವಾದ ಜಲವು ಈ ತೀರ್ಥವನ್ನು ಸೇವಿಸಿದವರ ಸಕಲ ಪಾಪಗಳನ್ನು ಕಳೆಯುವ ವರಾಹ ತೀರ್ಥವೆಂದು ಪ್ರಖ್ಯಾತವಾಯಿತು.

೫೬. ಬಹಳ ಪವಿತ್ರವಾದ ಅನಂತಸರೋವರವೆಂಬ ನಾಮಾಂಕಿತವಾಗಿ ಒಂದು ಸರೋವರವು ಲೋಕಪ್ರಸಿದ್ಧವಾಗಿ ಆ ಕ್ಷೇತ್ರದಲ್ಲಿರುವುದು.

೫೭. ಆ ಸರೋವರದ ಆಳವಾದ ಪ್ರದೇಶದಲ್ಲಿ ಹರಿಯನ್ನು ಸೇವೆಮಾಡುತ್ತ ಅನಂತನೆಂಬ ನಾಗಶ್ರೇಷ್ಠನು ವಾಸಮಾಡಿದನು. ಆ ಕಾರಣದಿಂದ ಅದಕ್ಕೆ ಅನಂತ ಪದದ ಸಂಕೇತದಿಂದ ಅನಂತಸರೋವರವೆಂದು ಹೆಸರು ಬಂದಿರುವುದು.

೫೮. ಅನಂತರದಲ್ಲಿ ಅಸುರರಿಂದ ಆಕ್ರಮಿಸಿ ಪೀಡಿತಳಾದ ತನ್ನನ್ನು ಉದ್ಧಾರ ಮಾಡಲು ವರಾಹರೂಪವನ್ನು ಧರಿಸಿದ ಹರಿಯನ್ನು ಭೂದೇವಿಯು ಸಾಕ್ಷಾತ್ಕರಿಸಿ ಸಂತುಷ್ಟವಾದ ಮನವುಳ್ಳವಳಾದಳು.

ಶುದ್ಧಸ್ಫಟಿಕಸಂಕಾಶಂ ಶಂಖಚಕ್ರಗದಾಧರಂ।
ಭೂತ್ವಾ ಸ್ವರೂಪಿಣೀ ದೇವೀ ಸ್ನಿಗ್ಧವೈಡೂರ್ಯಸನ್ನಿಭಾ ॥ ೫೯ ॥

ಪ್ರಣಮ್ಯ ದೇವಮೀಶಾನಂ ಬದ್ಧಾಂಜಲಿಪುಟಾ ತಥಾ ।
ತುಷ್ಟಾವಾನಂತಸರಸಸ್ತೀರಂ ಪಶ್ಚಿಮಮಾಶ್ರಿತಾ ॥ ೬೦ ॥

ಧರಣ್ಯುವಾಚ:—

ನಮೋಽನಂತಾಯ ಶಾಂತಾಯ ಕರುಣಾಮೃತಸಿಂಧವೇ ।
ಸುರೇಶಾಯ ಸುದಂಷ್ಟ್ರಾಯ ನಮಃ ಸೂಕರಮೂರ್ತಯೇ ॥ ೬೧ ॥

ಸತ್ಯವ್ರತಂ ಸತ್ಯಯೋನಿಂ ಸತ್ಯಾತ್ಮಕಮರಿಂದಮಂ ।
ಸತ್ಯೋದ್ಧರಣಕರ್ತಾರಂ ತ್ವಾಂ ಪ್ರಪದ್ಯೇ ಜನಾರ್ದನಂ ॥ ೬೨ ॥

ನಿಷ್ಪಿಷ್ಟಗಾತ್ರಾಮಸುರೇಂದ್ರಪೀಡನಾ-
ದನನ್ಯನಾಥಾಮಭಯೈಷಿಣೀಮಿಹ ।

೫೯-೬೦. ಆ ಅನಂತಸರೋವರದ ಪಶ್ಚಿಮತೀರದಲ್ಲಿ ಹೊಳೆಯುತ್ತಿರುವ ವೈಡೂರ್ಯರತ್ನದಂತೆ ಒಪ್ಪುವ ಮೂರ್ತಿಯನ್ನು ಧರಿಸಿದ ಭೂದೇವಿಯು ಅಂಜಲಿಬಂಧದಿಂದ ವಿನೀತಳಾಗಿ ಶುದ್ಧವಾದ ಸ್ಫಟಿಕಮಣಿಯಂತೆ ಪ್ರಕಾಶಿಸುವ, ಶಂಖ, ಚಕ್ರ, ಗದೆಗಳನ್ನು ಭುಜಗಳಲ್ಲಿ ಧರಿಸಿರುವ ಸರ್ವೇಶ್ವರನಾದ ಮಹಾವಿಷ್ಣುವನ್ನು ನಮಸ್ಕರಿಸಿ ಸ್ತುತಿಸಿದಳು.

೬೧. ಭೂದೇವಿಯು ಹೇಳಿದ್ದೇನೆಂದರೆ:—ಆದಿಅಂತರಹಿತನೂ, ಸರ್ವೋಪದ್ರವಶಾಂತಿಸ್ವರೂಪನೂ, ಕಾರುಣ್ಯಾಮೃತಕ್ಕೆ ಸಮುದ್ರಪ್ರಾಯನೂ ಮತ್ತು ಸಮಸ್ತ ದೇವತಾಧೀಶನೂ ಆದ ಸುಂದರವಾದ ದಂಷ್ಟ್ರಗಳಿಂದ ಅಲಂಕರಿಸಿರುವ ವರಾಹಮೂರ್ತಿಗೆ ನಮಸ್ಕಾರವು.

೬೨. ಸ್ಥಿರವಾದ ವ್ರತವುಳ್ಳವನೂ, ಸತ್ಯಕ್ಕೆ ಕಾರಣನೂ, ಸತ್ಯಸ್ವರೂಪನೂ, ಸತ್ಯವನ್ನು ಉದ್ಧಾರಮಾಡುವವನೂ ಮತ್ತು ಶತ್ರುಗಳನ್ನು ಸಂಹಾರಮಾಡುವವನೂ ಆದ ಜನಾರ್ದನನಾದ ನಿನ್ನನ್ನು ಶರಣಾಗತನಾಗುವೆನು.

೬೩. ಪದ್ಮನಾಭಸ್ವಾಮಿಯೆ ! ಅಸುರೇಂದ್ರನ ಪೀಡೆಯಿಂದ ಭಂಗಹೊಂದಿದ ಗಾತ್ರವುಳ್ಳ ಮತ್ತು ಬೇರೆ ಶರಣರಿಲ್ಲವೆ ಅಭಯಾರ್ಥಿನಿಯಾದ ನನ್ನನ್ನು ಈಗ ಭುಜ

ಕುರುಷ್ವ ಮಾಂ ಪಂಕಜನಾಭಪಾರ್ಶ್ವಗಾ-
ಮಹೀಂದ್ರತಲ್ಪೇ ಶಯನೋ ಯಥಾ ರಮಾಂ ॥ ೬೩ ॥

ಇತಿ ಸ್ತುತಸ್ತತ್ರ ತಯಾ ಹರಿಸ್ತಾ-
ಮಾಲಿಂಗ್ಯ ದೋರ್ಭ್ಯಾಂ ವಿಮಮರ್ಶ ಪಾಣಿನಾ ।
ಆರೋಪ್ಯ ಚಾಂಕಂ ಪರಿಸಾಂತ್ವಯನ್ಮುಹುಃ
ಪ್ರೋವಾಚ ವಾಕ್ಯಂ ಪರಿಹೃಷ್ಟಚೇತನಾಂ ॥೬೪ ॥

ಪ್ರಮುಂಚ ಭೀತಿಂ ದನುಜೇಂದ್ರಸಂಭವಾ-
ಮುಪಸ್ಥಿತೋಽಹಂ ತವ ಪಾಲನಾಯ ।
ಸ್ವಸ್ಥಾ ಚ ಭದ್ರೇ ಭವ ವಿಜ್ವರಾ ಚ ತೇ
ಪುನಃ ಪ್ರಿಯಂ ಕಿಂ ಕರವಾಣ್ಯಹಂ ವದ ॥ ೬೫ ॥

ಇತ್ಯಂಬುಜಾಕ್ಷಸ್ಯ ವಚೋ ನಿಶಮ್ಯ ತ-
ದ್ವರಾಹರೂಪಸ್ಯ ವಸುಂಧರಾ ತದಾ ।

ಗೇಂದ್ರತಲ್ಪದಲ್ಲಿ ಶಯನಮಾಡಿ ಲಕ್ಷ್ಮೀದೇವಿಯನ್ನು ಪಾರ್ಶ್ವದಲ್ಲಿ ಇರಿಸಿಕೊಂಡಿರುವಂತೆ ಪಾರ್ಶ್ವವರ್ತಿಯನಿಯನ್ನಾಗಿ ಮಾಡು.

೬೪. ಈರೀತಿಯಾಗಿ ಭೂದೇವಿಯಿಂದ ಸ್ತುತಿಸಲ್ಪಟ್ಟ ಹರಿಯು ಆ ಸಂದರ್ಭದಲ್ಲಿ ಭೂದೇವಿಯನ್ನು ತನ್ನ ಬಾಹುಗಳಿಂದ ಆಲಿಂಗಿಸಿಕೊಂಡು ಕೈಯಿಂದ ಸ್ಪರ್ಶಮಾಡಿದನು, ಮತ್ತು ಸಮಾಧಾನಕರಗಳಾದ ವಚನಗಳಿಂದ ಸಂತುಷ್ಟ ಮನಸ್ಸುಳ್ಳ ದೇವಿಯನ್ನು ತನ್ನ ಅಂಕದಲ್ಲಿ ಕುಳ್ಳಿರಿಸಿಕೊಂಡು ಮುಂದೆ ಹೇಳುವಂತೆ ವಚನವನ್ನು ಆಡಿದನು.

೬೫. ಮಂಗಳಸ್ವರೂಪಳೇ! ರಾಕ್ಷಸೇಂದ್ರನಿಂದ ಉಂಟಾಗಿರುವ ಭೀತಿಯನ್ನು ತ್ಯಜಿಸು. ನಿನ್ನನ್ನು ಪರಿಪಾಲಿಸಲು ನಾನು ಸಿದ್ಧನಾಗಿರುವೆನು. ಆದುದರಿಂದ ನೀನು ಸ್ವಸ್ಥಳೂ, ತಾಪಪೀಡೆಗಳಿಲ್ಲದವಳೂ ಆಗಿ ಸುಖದಿಂದಿರು. ಈಗ ನಾನು ನಿನ್ನ ಪ್ರಿಯವನ್ನು ಏನನ್ನು ಮಾಡಲಿ?

೬೬. ರಾಜೇಂದ್ರನೇ! ಆಗ ಭೂಮಿಯು ವರಾಹರೂಪಿಯಾದ ಪುಂಡರೀ

ಯದಬ್ರವೀದ್ರಾಜವರ ಬ್ರವೀಮಿ ತೇ
ತದದ್ಭುತಂ ವಾಕ್ಯಮನನ್ಯಧೀಃ ಶೃಣು ॥ ೬೬ ॥

ಧರಣ್ಯುವಾಚ:—

ದೇವ ದೇವ ಜಗನ್ನಾಥ ತ್ವಯಾಹಂ ಸಮ್ಯಗುದ್ಧೃತಾ ।
ಹತ್ವಾ ದಾನವರಾಜಂ ತಮುನ್ಮತ್ತಂ ದೇವಕಂಟಕಂ ॥ ೬೭ ॥

ಭಯಮನ್ಯಚ್ಚ ಮೇ ದೇವ ವರ್ತತೇ ತದ್ವ್ಯಪೋಹಯ ।
ಇತೋ ದಕ್ಷಿಣದಿಗ್ಭಾಗೇ ದೇಶೇ ದ್ವಾದಶಯೋಜನೇ ॥ ೬೮ ॥

ವಸತ್ಯದ್ರಿನಿಭಾ ಘೋರಾ ರಾಕ್ಷಸೀ ಕಾಮರೂಪಿಣೀ ।
ಭಯದಾ ಸರ್ವಜಂತೂನಾಂ ಝಿಲ್ಲಿಕಾ ನಾಮ ನಾಮತಃ ॥ ೬೯ ॥

ಸಾ ತು ಶಂಕರಮಾರಾಧ್ಯ ಸಂಪ್ರಾಪ್ತಾಚಲಸನ್ನಿಭಾ ।
ಪಾಪಾ ಲಬ್ಧವರಾ ತಸ್ಮಾಚ್ಛಂಕರಾತ್ತು ಮಹಾತ್ಮನಃ ॥ ೭೦ ॥

ಕಾಕ್ಷನ ಈ ಮಾತನ್ನು ಕೇಳಿ ಏನು ಹೇಳಿದಳೋ ಭೂಮಿಯ ಅದ್ಭುತವಾದ ಆ ವಚನವನ್ನು ನಿನಗೆ ಹೇಳುವೆನು, ಕೇಳು.

೬೭. ಭೂಮಿಯು ಹೇಳಿದ್ದೇನೆಂದರೆ :—ಜಗತ್ಪಾಲಕನೂ ದೇವೋತ್ತಮನೂ ಆದ ಸ್ವಾಮಿಯೆ ! ದೇವತೆಗಳಿಗೆ ಕಂಟಕಪ್ರಾಯನಾದ ಮತ್ತು ಮದಾಂಧನಾದ ಆ ಅಸುರರಾಜನನ್ನು ಕೊಂದು ನನ್ನನ್ನು ಸಾಧುಮಾರ್ಗದಿಂದ ಉದ್ಧರಿಸಿರುವೆ.

೬೮-೬೯. ಸ್ವಾಮಿಯೆ ! ನನಗೆ ಈ ಅಸುರಭಯಮಾತ್ರವಲ್ಲದೆ ಮತ್ತೊಂದು ಭಯವು ಪ್ರಾಪ್ತವಾಗಿರುವುದು. ಅದನ್ನು ಹೋಗಲಾಡಿಸಬೇಕು. ಈ ಸ್ಥಳದಿಂದ ಹನ್ನೆರಡುಯೋಜನ ದೂರದಲ್ಲಿ ದಕ್ಷಿಣದಿಕ್ಕಿನ ಪ್ರದೇಶದಲ್ಲಿ ಪರ್ವತದಂತೆ ಘೋರಾಕಾರವುಳ್ಳ ಸ್ವೇಚ್ಛಾರೂಪದಿಂದ ಕೂಡಿದ ರಾಕ್ಷಸಿಯಿರುವಳು. ಅವಳು ಝಿಲ್ಲಿಕಾ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ ಸರ್ವ ಪ್ರಾಣಿಗಳಿಗೆ ಭಯವನ್ನುಂಟುಮಾಡುತ್ತಲಿರುವಳು.

೭೦. ಪಾಪಿಷ್ಠಳಾದ ಆ ರಾಕ್ಷಸಿಯು ಪರಮೇಶ್ವರನನ್ನು ಆರಾಧಿಸಿ ಆ ಮಹಾತ್ಮನಾದ ಶಂಕರನ ವರಪ್ರಸಾದದಿಂದ ಪರ್ವತಾಕಾರವಾಗಿ ಬೆಳೆದು ಮದೋನ್ಮತ್ತಳಾಗಿರುವಳು.

ಭಕ್ಷಯಂತೀ ನರಾನ್ ಸರ್ವಾನ್ ಸರ್ವಾಂಶ್ಚ ಮೃಗಪಕ್ಷಿಣಃ ।
ತದ್ವನಂ ನ ವಿಶಂತ್ಯೇವ ಝಿಲ್ಲಿಕಾಭಯಕಂಪಿತಾಃ ॥ ೭೧ ॥

ಝಿಲ್ಲಿಕಾವನಮಿತ್ಯೇವ ತದ್ವದಂತಿ ಚ ತಾಪಸಾಃ ।
ತಸ್ಯಾಶ್ಚ ದೇಹಭಾರೇಣ ನಿಮ್ನಾಽಹಮಭವಂ ಹರೇ ॥ ೭೨ ॥

ದಕ್ಷಿಣಾಯಾಮಪಿ ದಿಶಿ ನಿಮಗ್ನೇವಾರ್ಣವಾಂಭಸಿ ।
ತಾಂ ಹತ್ವಾ ರಾಕ್ಷಸೀಂ ಘೋರಾಂ ಮಾಮುದ್ಧರ್ತುಮಿಹಾರ್ಹಸಿ ॥ ೭೩ ॥

ಏವಮುಕ್ತಸ್ತು ದೇವೇಶೋ ಧರಣ್ಯಾ ಕ್ರೋಡರೂಪಧೃಕ್ ।
ಕ್ಷೇತ್ರಾತ್ ಸತ್ಯವ್ರತಾತ್ ತಸ್ಮಾದುತ್ಪಪಾತ ನಭೋ ಹರಿಃ ॥ ೭೪ ॥

ದಕ್ಷಿಣಾಂ ದಿಶಮುದ್ವೀಕ್ಷ್ಯ ಯತ್ರ ಸಾಽಭೂತ್ತು ರಾಕ್ಷಸೀ ।
ದೃಷ್ಟ್ವಾ ತಾಂ ರಾಕ್ಷಸೀಂ ತತ್ರ ಪ್ರವೃದ್ಧಾಮಗಸನ್ನಿಭಾಂ ॥ ೭೫ ॥

---

೭೧. ಅಲ್ಲಿರುವ ಸರ್ವಮನುಜರನ್ನೂ ಸಕಲ ಮೃಗಪಕ್ಷಿಗಳನ್ನೂ ಭಕ್ಷಿಸುತ್ತ ಇರುವಳು. ಆ ಝಿಲ್ಲಿಕಾರಾಕ್ಷಸಿಯ ಭಯದಿಂದ ನಡುಗಿ ಯಾರೂ ಅಲ್ಲಿಗೆ ಪ್ರವೇಶ ಮಾಡುವುದಿಲ್ಲ.

೭೨. ತಪಸ್ವಿಗಳೆಲ್ಲರೂ ಆ ಸ್ಥಳವನ್ನು ಆ ರಾಕ್ಷಸಿಯ ಹೆಸರಿನಿಂದ ಝಿಲ್ಲಿಕಾವನವೆಂದು ಕರೆಯುತ್ತಲಿರುವರು. ಹರಿಯೆ ! ಆಕೆಯ ಶರೀರದ ಭಾರದಿಂದ ನಾನು ತಗ್ಗಿ ಹೋಗಿರುವೆನು.

೭೩. ನಾನು ದಕ್ಷಿಣದಿಕ್ಕಿನಲ್ಲಿರುವ ಸಮುದ್ರದ ಜಲರಾಶಿಯಲ್ಲಿ ಆ ರಾಕ್ಷಸಿಯ ದೇಹಭಾರದಿಂದ ಮುಳುಗಿದಂತೆ ಆಗಿರುವೆನು. ಆ ಘೋರರಾಕ್ಷಸಿಯನ್ನು ಕೊಂದು ನನ್ನನ್ನು ನೀನು ಉದ್ಧರಿಸಲು ಅರ್ಹನಾಗಿರುವೆ.

೭೪. ವರಾಹರೂಪವನ್ನು ಧರಿಸಿದವನೂ, ಸಕಲ ದೇವತಾಧೀಶ್ವರನೂ ಆದ ಹರಿಯು ಭೂದೇವಿಯಿಂದ ಈರೀತಿಯಾಗಿ ಹೇಳಲ್ಪಟ್ಟ ತರುವಾಯ ಆ ಸತ್ಯವ್ರತವೆಂಬ ಕ್ಷೇತ್ರದಿಂದ ಆಕಾಶಕ್ಕೆ ಹಾರಿದನು.

೭೫. ರಾಕ್ಷಸಿಯು ವಾಸಮಾಡಿರುವ ದಕ್ಷಿಣದಿಗ್ಭಾಗವನ್ನು ನೋಡಿ ಆಕಾಶಕ್ಕೆ ಹಾರಿಹೋಗಿ ಅಲ್ಲಿ ಪರ್ವತದಂತೆ ಸ್ಥೂಲವಾಗಿ ಬೆಳೆದಿರುವ ಆ ರಾಕ್ಷಸಿಯನ್ನು ಕಂಡನು.

ಕ್ರೋಡೇನ ಜಠರಂ ಭಿತ್ವಾ ಪ್ರವಿವೇಶೋದರಂ ಕಿಟಿಃ ।
ಆಂತ್ರಾಣಿ ತಸ್ಯಾಂ ನಿಷ್ಕೃಷ್ಯ ಪ್ರಾಪತದ್ಧರಣೀಂ ಪುನಃ ॥ ೨೬ ॥

ಸಾ ಪಪಾತ ಹತಾ ಭೂಮೌ ಪ್ರವೃದ್ಧಾಽಚಲಸನ್ನಿಭಾ ।
ಯತ್ರಾಚಲನಿಭಾ ರಾಜನ್ ಪ್ರವೃದ್ಧಾ ನಿಹತಾಽಭವತ್ ॥ ೨೭ ॥

ತತ್ರ ವೃದ್ಧಾಚಲಾಖ್ಯೋಽಭೂತ್ ಪ್ರದೇಶಃ ಪುರುಷರ್ಷಭ ।
ಹತ್ವಾ ತು ಝಿಲ್ಲಿಕಾಂ ತತ್ರ ರಾಕ್ಷಸೀಂ ಘೋರರೂಪಿಣೀಂ ॥ ೨೮ ॥

ವಿಚಚಾರ ವನೇ ತಸ್ಮಿನ್ ಕಂಚಿತ್ಕಾಲಮರಿಂದಮ ।
ಶ್ರಿಯಾ ವಿಹೀನಂ ಭಯದಂ ರಾಕ್ಷಸ್ಯೋತ್ಸಾದಿತಂ ಪುರಾ ॥ ೨೯ ॥

---

೨೬. ಆ ರಾಕ್ಷಸಿಯ ಸಮೀಪದಲ್ಲಿ ಕೆಳಕ್ಕಿಳಿದು ವರಾಹಸ್ವಾಮಿಯು ತನ್ನ ಕೋರದಾಡೆಯಿಂದ ಆವಳ ಉದರವನ್ನು ಭೇದಿಸಿ ಒಳಗೆ ಪ್ರವೇಶಿಸಿದನು, ಮತ್ತು ಆಕೆಯ ಎಲುಬು ಮೂಳೆಗಳನ್ನು ಸೆಳೆದುಕೊಂಡು ಮತ್ತೆ ಹೊರಗೆ ಬಂದು ಭೂಮಿಯಲ್ಲಿ ನಿಂತನು.

೨೭. ಆಗ ಪರ್ವತಾಕಾರವಾಗಿ ಬೆಳೆದಿರುವ ಆ ರಾಕ್ಷಸಿಯು ಸಂಹರಿಸಲ್ಪಟ್ಟವಳಾಗಿ ಭೂಮಿಯಲ್ಲಿ ಬಿದ್ದಳು. ರಾಜನೆ! ಪರ್ವತದಂತೆ ಅತಿ ಸ್ಥೂಲಳಾಗಿ ಬೆಳೆದ ಆ ರಾಕ್ಷಸಿಯು ಕೊಲ್ಲಲ್ಪಟ್ಟು ಭೂಮಿಯ ಒಂದು ಭಾಗದಲ್ಲಿ ವೃದ್ಧವಾದ ಅಚಲರೂಪದಿಂದ ಬಿದ್ದಳು.

೨೮. ಪುರುಷಶ್ರೇಷ್ಠನಾದ ರಾಜನೆ! ಆ ಸ್ಥಳದಲ್ಲಿ ವೃದ್ಧಾಚಲವೆಂಬ ಕ್ಷೇತ್ರವು ಸಂಭವಿಸಿತು ಈರೀತಿಯಾಗಿ ಘೋರರೂಪದಿಂದ ಕೂಡಿದ ಝಿಲ್ಲಿಕಾ ಎಂಬ ರಾಕ್ಷಸಿಯನ್ನು ವರಾಹಮೂರ್ತಿಯು ವನವಲ್ಲಿ ಕೊಂದನು.

೨೯. ಶತ್ರುನಿಗ್ರಹಶೀಲನಾದ ರಾಜನೆ! ರಾಕ್ಷಸಿಯನ್ನು ಸಂಹರಿಸಿದತರುವಾಯ ಕೆಲವುಕಾಲ ಸ್ವಾಮಿಯು ಆ ವನದಲ್ಲಿ ವಿಹರಿಸಿದನು. ಅದಕ್ಕೆ ಪೂರ್ವದಲ್ಲಿ ರಾಕ್ಷಸಿಯಿಂದ ಆ ವನವು ಕಾಂತಿಹೀನವಾಗಿಯೂ ಭಯಂಕರವಾಗಿಯೂ ಇರುವುದಲ್ಲದೆ ಪೂರ್ಣವಾಗಿ ಭಂಗಪಡಿಸಲ್ಪಟ್ಟಿತ್ತು.

ಶ್ರಿಯಾ ಮುಷ್ಟಮಭೂದ್ಯಸ್ಮಾತ್ಕಾನನಂ ಝಿಲ್ಲಿಕಾಶ್ರಿತಂ ।
ತಸ್ಮಾಚ್ಛ್ರೀಮುಷ್ಟಮಾಖ್ಯಾತಂ ಪುಣ್ಯದಂ ಝಿಲ್ಲಿಕಾವನಂ ॥ ೪೦ ॥

ಕಿಟಿಸ್ತತ್ರಾವಸದ್ರಾಜನ್ ಝಿಲ್ಲಿಕಾಖ್ಯೇ ವನೇ ತದಾ ।
ಸತ್ಯವ್ರತೇಽಪಿ ಚ ಕ್ಷೇತ್ರೇ ಧರಣ್ಯಾ ಸಹಿತೋಽವಸತ್ ॥ ೪೧ ॥

ಸತ್ಯೋ ವಿಷ್ಣುರ್ಯಜ್ಞಮೂರ್ತಿರ್ವರಾಹ-
ಸ್ತೇನೇಯಂ ಭೂಃ ಸಂವೃತಾ ಯತ್ರ ತಸ್ಮಾತ್ ।
ಆಸೀದ್ರಾಜಂಸ್ತದ್ಧಿ ಸತ್ಯವ್ರತಾಖ್ಯಂ
ವಾರಾಹಂ ಚಾಪ್ಯುಷಿತಂ ಯತ್ರ ತೇನ ॥ ೪೨ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ದ್ವಿತೀಯೋಽಧ್ಯಾಯಃ

---

೪೦. ಝಿಲ್ಲಿಕಾರಾಕ್ಷಸಿಯಿಂದ ಸೇವಿಸಲ್ಪಟ್ಟ ಆ ವನವು ಕಾಂತಿಯಿಂದ (ಶ್ರೀಯಿಂದ) ವಿಹೀನವಾದ್ದರಿಂದ ಶ್ರೀಮುಷ್ಟವೆಂಬ ಹೆಸರಿನಿಂದ ಪ್ರಖ್ಯಾತಿಯನ್ನು ಹೊಂದಿರುವುದು. ಈ ಝಿಲ್ಲಿಕಾವನವು ಅತ್ಯಂತ ಪವಿತ್ರವಾಗಿದೆ.

೪೧. ರಾಜನೆ ! ಆಗ ಝಿಲ್ಲಿಕಾವನವೆಂಬ ಹೆಸರುಳ್ಳ ಆ ವನದಲ್ಲಿ ಸತ್ಯವ್ರತ ಕ್ಷೇತ್ರದಲ್ಲಿ ಭೂದೇವಿಯಿಂದ ಸಹಿತನಾದ ವರಾಹಮೂರ್ತಿಯು ವಾಸಮಾಡಿದ್ದನು.

೪೨. ರಾಜನೆ ! ಆ ವನಭೂಮಿಗೆ ಸತ್ಯವ್ರತಕ್ಷೇತ್ರ ಅಥವಾ ವಾರಾಹಕ್ಷೇತ್ರವೆಂಬ ಪವಿತ್ರನಾಮಗಳು ಬಂದಿರುತ್ತವೆ. ಇದರ ಕಾರಣವೇನೆಂದರೆ :—ಯಜ್ಞಮೂರ್ತಿಯೂ, ಸತ್ಯಸ್ವರೂಪನೂ ಮತ್ತು ವ್ಯಾಪಕನೂ ಆದ ವರಾಹಮೂರ್ತಿಯಿಂದ ವನಭೂಮಿಯು ಯಾವ ಸ್ಥಳದಲ್ಲಿ ಸುತ್ತಲ್ಪಟ್ಟಿತೋ ಆ ಪ್ರದೇಶವು ಈ ಕಾರಣದಿಂದ (ಸತ್ಯ = ಸತ್ಯರೂಪಿಯಾದ ವರಾಹಮೂರ್ತಿಯಿಂದ, ವ್ರತ = ಸುತ್ತಲ್ಪಟ್ಟಿರುವುದು) ಸತ್ಯವ್ರತವೆಂದು ಪ್ರಸಿದ್ಧವಾಯಿತು ಮತ್ತು ವರಾಹಮೂರ್ತಿಯು ವಾಸಮಾಡಿರುವುದರಿಂದ ವಾರಾಹಕ್ಷೇತ್ರವೆಂದು ಪ್ರಸಿದ್ಧಿಯುಂಟಾಗಿದೆ.

ಕಾಂಚಿಮಾಹಾತ್ಮ್ಯದಲ್ಲಿ ದ್ವಿತೀಯಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ತೃತೀಯೋಽಧ್ಯಾಯಃ

ನಾರದ ಉವಾಚ :—

ಯೇನ ಸತ್ಯವ್ರತಂ ಕ್ಷೇತ್ರಂ ನಾರಸಿಂಹಮಭೂನ್ನೃಪ ।
ಭಾಸ್ಕರಾಖ್ಯಮಭೂದ್ಯೇನ ತನ್ಮೇ ನಿಗದತಃ ಶೃಣು ॥ ೧ ॥

ಆಸೀತ್ತಸ್ಮಿನ್ ಯುಗೇ ಪೂರ್ವಂ ದೈತೇಯಃ ಕಾಶ್ಯಪೋ ಬಲೀ ।
ಹಿರಣ್ಯಕಶಿಪುರ್ನಾಮ್ನಾ ಖ್ಯಾತೋ ದಾನವಪುಂಗವಃ ॥ ೨ ॥

ಸ ತಪೋ ದೀರ್ಘಮಾತಿಷ್ಠದ್ಗೋಕರ್ಣೇ ಪುಣ್ಯವರ್ಧನೇ ।
ಊರ್ಧ್ವಬಾಹುಃ ಪಂಚತಪಾಃ ಪಾದಾಂಗುಷ್ಠಾಶ್ರಿತಾವನಿಃ ॥ ೩ ॥

---

೧. ನಾರದಮುನಿಯು ಇಂತೆಂದನು :—ರಾಜನೆ ! ಈ ಸತ್ಯವ್ರತಕ್ಷೇತ್ರವು ಯಾವ ಕಾರಣಗಳಿಂದ ನಾರಸಿಂಹಕ್ಷೇತ್ರ ಮತ್ತು ಭಾಸ್ಕರಕ್ಷೇತ್ರವೆಂಬ ಪ್ರಸಿದ್ಧಿಯನ್ನು ಹೊಂದಿರುವುದೋ ಅದನ್ನು ಬೋಧಿಸುವ ನನ್ನ ವಚನವನ್ನು ಕೇಳು.

೨. ಆ ಯುಗದಲ್ಲಿ ಪೂರ್ವಕಾಲದಲ್ಲಿ ಕಶ್ಯಪಮುನಿಯ ಪುತ್ರನೂ, ಮಹಾಬಲಿಷ್ಠನೂ, ಆದ ಹಿರಣ್ಯಕಶಿಪುವೆಂಬ ನಾಮಾಂಕನದಿಂದ ಪ್ರಸಿದ್ಧನಾದ ದೈತ್ಯಶ್ರೇಷ್ಠನೊಬ್ಬನು ಇದ್ದನು.

೩. ಆ ರಾಕ್ಷಸನು ಪುಣ್ಯಾರ್ಜನೆಗೆ ಕಾರಣವಾದ ಗೋಕರ್ಣವೆಂಬ ಮಹಾಕ್ಷೇತ್ರದಲ್ಲಿ ಪಂಚಾಗ್ನಿಮಧ್ಯದಲ್ಲಿ ಪಾದದ ಅಂಗುಷ್ಠಮಾತ್ರದಿಂದ ಭೂಮಿಯನ್ನು ಆಶ್ರಯಿಸಿ ಬಾಹುಗಳನ್ನು ಮೇಲಕ್ಕೆ ಎತ್ತಿಕೊಂಡು ಅತಿ ಕ್ಲೇಶಸಾಧ್ಯವಾದ ತಪಸ್ಸನ್ನು ದೀರ್ಘಕಾಲ ಆಚರಿಸಿದನು.

ವಾಯುಭಕ್ಷೋ ಜಿತಕ್ರೋಧೋ ವರ್ಷಾಣಾಮಯುತಂ ನೃಪ ।
ತೋಷಯಾಮಾಸ ತಪಸಾ ಬ್ರಹ್ಮಾಣಮಸುರೋತ್ತಮಃ ॥ ೪ ॥

ತತಃ ಕಾಲೇನ ಮಹತಾ ಬ್ರಹ್ಮಾ ಲೋಕಪಿತಾಮಹಃ ।
ಹಿರಣ್ಯಕಶಿಪುಂ ದೃಷ್ಟ್ವಾ ತಪ್ಯಂತಂ ಪರಮಂ ತಪಃ ॥ ೫ ॥

ಸಂತುಷ್ಟಸ್ತಪಸಾ ತಸ್ಯ ವಚನಂ ಚೇದಮಬ್ರವೀತ್ ।
ಹಿರಣ್ಯಕಶಿಪೋ ವತ್ಸ ಕಿಂ ತೇಽಭಿಲಷಿತಂ ಹೃದಿ ॥ ೬ ॥

ವರಂ ವೃಣೀಷ್ವ ಭದ್ರಂ ತೇ ತುಷ್ಟೋಽಸ್ಮಿ ತಪಸಾ ತವ ।
ತತಸ್ತುಷ್ಟಂ ಸಮಾಜ್ಞಾಯ ಬ್ರಹ್ಮಾಣಮಸುರೋತ್ತಮಃ ॥ ೭ ॥

---

೪. ಆ ದಾನವಶ್ರೇಷ್ಠನು ವಾಯ್ವಾಹಾರವನ್ನು ಸ್ವೀಕರಿಸುತ್ತ, ಕ್ರೋಧ ಮೊದಲಾದ ಅಂತಃ ಶತ್ರುಗಳನ್ನು ನಿಗ್ರಹಿಸಿ ಅಯುತವರ್ಷಗಳಕಾಲದವರೆಗೆ ಬ್ರಹ್ಮದೇವನನ್ನು ಉದ್ದೇಶಿಸಿ ತಪಸ್ಸನ್ನು ಆಚರಿಸಿ ದೇವತೆಯನ್ನು ಸಂತೋಷಪಡಿಸಿದನು.

೫. ಹೀಗೆ ಬಹು ದೀರ್ಘಕಾಲ ಕಳೆಯಲು ಲೋಕಗಳಿಗೆ ಪಿತಾಮಹನಾದ ಬ್ರಹ್ಮನು ಅಸಾಧ್ಯವಾದ ಉತ್ತಮ ತಪಸ್ಸನ್ನು ಆಚರಿಸುತ್ತಲಿದ್ದ ಹಿರಣ್ಯಕಶಿಪುವನ್ನು ಕಂಡನು.

೬. ಮತ್ತೆ ಅವನ ಆ ತಪಸ್ಸಿಗೆ ಮೆಚ್ಚಿ ಅವನನ್ನು ಪ್ರೀತಿಸಿ ಈರೀತಿಯಾಗಿ ವಚನವನ್ನಿತ್ತನು. ವತ್ಸನಾದ ಹಿರಣ್ಯಕಶಿಪುವೆ ! ನಿನ್ನ ಹೃದಯದಲ್ಲಿ ಯಾವ ಇಷ್ಟ ಫಲದ ಆಕಾಂಕ್ಷೆಯು ಅಡಗಿರುವುದು ?

೭. ಆ ನಿನ್ನ ಇಷ್ಟದ ವಿಷಯದಲ್ಲಿ ವರವನ್ನು ಕೇಳಿಕೊ. ನಿನಗೆ ಕಲ್ಯಾಣವಾಗಲಿ. ನಿನ್ನ ತಪಸ್ಸಿನಿಂದ ಸಂತುಷ್ಟನಾಗಿರುವೆನು. ಈ ಬ್ರಹ್ಮನ ವಾಣಿಯಿಂದ ದಾನವೋತ್ತಮನಾದ ಹಿರಣ್ಯಕಶಿಪುವು ಬ್ರಹ್ಮದೇವನನ್ನು ಸಂತುಷ್ಟನನ್ನಾಗಿ ಭಾವಿಸಿದನು.

ದೃಷ್ಟ್ವಾ ತತ್ರಾಗ್ರತೋ ದೇವಂ ಬ್ರಹ್ಮರ್ಷಿಗಣಸೇವಿತಂ ।
ಪ್ರಣಮ್ಯ ದಂಡವದ್ಭೂಮೌ ಕೃತಾಂಜಲಿರುವಾಚ ಹ ॥ ೮ ॥

ಯದಿ ತುಷ್ಟೋಽಸಿ ದೇವೇಶ ತಪಸಾ ಸುಕೃತೇನ ಮೇ ।
ತಾನ್ ಪ್ರದೇಹಿ ವರಾನ್ ಬ್ರಹ್ಮನ್ ಯಾನಿಚ್ಛತಿ ಚ ಮೇ ಮನಃ ॥ ೯ ॥

ಭವೇಯಮಹಮೇವೇಶಸ್ತ್ರೈಲೋಕ್ಯಸ್ಯಾಸ್ಯ ನಾನ್ಯಥಾ ।
ತ್ವತ್ಸೃಷ್ಟೇಭ್ಯೋಽಥ ಜಂತುಭ್ಯೋ ನ ಭಯಂ ಮೇ ಭವೇತ್ ಕ್ವಚಿತ್ ॥

ಮತ್ತ ಏವ ಹಿ ಸರ್ವೇಷಾಂ ಭಯಂ ಭವತು ನಿತ್ಯಶಃ ।
ನ ಚ ಮೇ ಸ್ಯಾದ್ದಿವಾ ಮೃತ್ಯುರ್ನ ಚ ರಾತ್ರೌ ಕದಾ ಚನ ॥ ೧೧ ॥

ಏತದನ್ಯಚ್ಚ ದೇವೇಶ ಶೃಣುಷ್ವ ವಚನಂ ಮಮ ।
ಸಂಯುಗೇ ಯುಧ್ಯಮಾನಸ್ಯ ಶತ್ರುಭಿರ್ವಿಕ್ಷತಸ್ಯ ಮೇ ॥ ೧೨ ॥

---

೮. ತನ್ನ ಮುಂಭಾಗದಲ್ಲಿ ಅನೇಕ ಬ್ರಹ್ಮರ್ಷಿಗಳಿಂದ ಸೇವಿಸಲ್ಪಟ್ಟಿರುವ ಬ್ರಹ್ಮದೇವನನ್ನು ಸಾಕ್ಷಾತ್ಕರಿಸಿ ಎದುರಿಗೆ ಭೂಮಿಯಲ್ಲಿ ದಂಡಾಕಾರವಾಗಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಅಂಜಲಿಬದ್ಧನಾಗಿ ವಿನಯದಿಂದ ವಿಜ್ಞಾಪಿಸಿಕೊಂಡನು.

೯. ದೇವೋತ್ತಮನಾದ ಬ್ರಹ್ಮದೇವನೆ! ನಾನು ಯಥಾವಿಧಿಯಾಗಿ ಮಾಡಿರುವ ತಪಸ್ಸಿನಿಂದ ನೀನು ಸಂತುಷ್ಟನಾಗಿದ್ದರೆ ನನ್ನ ಮನಸ್ಸು ಯಾವಯಾವ ವರಗಳನ್ನು ಆಶಿಸುವುದೋ ಆ ಸಕಲ ವರಗಳನ್ನು ಕೊಟ್ಟು ನನ್ನನ್ನು ಅನುಗ್ರಹಿಸು.

೧೦. ಹಾಗಿದ್ದರೆ ನನ್ನ ಇಷ್ಟ ವರಗಳನ್ನು ಕೇಳು. ಈ ತ್ರಿಲೋಕಗಳಿಗೆ ನಾನೊಬ್ಬನೇ ಅಧಿಪತಿಯಾಗುವೆನು. ಇದು ಹೊರತು ಮತ್ತೊಬ್ಬ ಅಧಿಪತಿಯಾಗಿರ ಕೂಡದು. ಮತ್ತು ನಿನ್ನಿಂದ ಸೃಷ್ಟಿಸಲ್ಪಟ್ಟಿರುವ ಜಂತುಗಳಿಂದ ನನಗೆ ಯಾವಾಗಲೂ ಭಯವು ಪ್ರಾಪ್ತವಾಗಬಾರದು.

೧೧. ಮತ್ತು ಸಕಲ ಪ್ರಾಣಿಗಳಿಗೆ ನನ್ನಿಂದ ಸರ್ವಕಾಲದಲ್ಲಿಯೂ ಭಯವುಂಟಾಗಬೇಕು. ನಾನು ಸರ್ವಪ್ರಾಣಿ ಭಯಂಕರನಾಗಿರುವೆನು. ನನಗೆ ಹಗಲು ಅಥವಾ ರಾತ್ರಿ ಯಾವ ಸಮಯದಲ್ಲಿಯೂ ಮೃತ್ಯುವು ಒದಗಬಾರದು.

೧೨-೧೩. ಸಕಲದೇವತಾಪ್ರಭುವೆ! ಇವೆಲ್ಲವನ್ನೂ ಮತ್ತು ಮುಂದೆ ಹೇಳುವ ನನ್ನಬೇರೆ ವಚನವನ್ನೂ ಕೇಳು. ಯುದ್ಧರಂಗದಲ್ಲಿ ಯುದ್ಧಮಾಡು

ಗಾತ್ರಾದ್ಯದಿ ಪತಿಷ್ಯಂತಿ ಧರಣ್ಯಾಂ ರಕ್ತಬಿಂದವಃ ।
ತತ್ಕ್ಷಣಾದೇವ ತೇ ಸರ್ವೇ ಭವಂತು ಮಮ ರೂಪಿಣಃ ॥ ೧೩ ॥

ಯಾವಂತೋ ಬಿಂದವೋ ಭೂಮೌ ಪತಂತಿ ಮಮ ಗಾತ್ರತಃ ।
ತಾವತ್ಸಂಖ್ಯಾ ಮಮ ತನುರ್ಭವೇತ್ಸತತಮಾಹವೇ ॥ ೧೪ ॥

ಇತ್ಯುಕ್ತಸ್ತೇನ ದೇವೇಶಸ್ತಸ್ಮೈ ದತ್ವಾ ತಥಾ ವರಂ ।
ಏವಂ ಭವತು ಭದ್ರಂ ತ ಇತ್ಯುಕ್ತ್ವಾಽಂತರ್ಹಿತೋಽಭವತ್ ॥ ೧೫ ॥

ಸೋಽಂತರ್ಹಿತೇ ಭಗವತಿ ಹಿರಣ್ಯಕಶಿಪುಂ ಕ್ರಮಾತ್ ।
ಜಿಗಾಯ ಲೋಕಾಂಸ್ತರಸಾ ಸದೇವಾಸುರಮಾನವಾನ್ ॥ ೧೬ ॥

ಆಕ್ರಮ್ಯ ಲೋಕಾಂಲ್ಲೋಕೇಶೋ ಬಭೂವ ದನುಜೋತ್ತಮಃ ।
ಸಭಾಂ ಸುಧರ್ಮಾಮಾಕ್ರಮ್ಯ ಕಾಮಗಾಂ ದೇವನಿರ್ಮಿತಾಮ್ ॥ ೧೭ ॥

ತ್ತಿರುವಾಗ ಶತ್ರುಗಳಿಂದ ಗಾಯವಾದ ನನ್ನ ದೇಹದಿಂದ ಭೂಮಿಯಲ್ಲಿ ಎಷ್ಟು ರಕ್ತದ ಬಿಂದುಗಳು ಬೀಳುತ್ತವೆಯೋ ಆ ಬಿಂದುಗಳು ಆ ನಿಮಿಷದಲ್ಲಿ ನನಗೆ ಸಮಾನವಾದ ರೂಪವುಳ್ಳ ಅಷ್ಟು ಸಂಖ್ಯೆಯ ರಾಕ್ಷಸರಾಗಿ ಜನಿಸಲಿ.

೧೪. ಯುದ್ಧಮಾಡುವಾಗ ಎಲ್ಲ ನನ್ನ ಶರೀರದಿಂದ ಭೂಮಿಯಲ್ಲಿ ಎಷ್ಟು ಸಂಖ್ಯೆಯ ರಕ್ತಬಿಂದುಗಳು ಬೀಳುವುವೋ ನನ್ನ ಶರೀರವು ಅಷ್ಟು ಸಂಖ್ಯೆಯ ರಾಕ್ಷಸ ರೂಪವನ್ನು ತಾಳಲಿ.

೧೫. ದೇವತಾಧೀಶ್ವರನಾದ ಬ್ರಹ್ಮದೇವನು ಈರೀತಿಯಾಗಿ ವರಗಳನ್ನು ಪ್ರಾರ್ಥಿಸಿಕೊಂಡಿರುವ ಹಿರಣ್ಯಕಶಿಪುವಿಗೆ ಹಾಗೆಯೇ ಸಕಲ ವರಗಳನ್ನೂ ಪ್ರದಾನ ಮಾಡಿ ಹಾಗೆ ಆಗಲಿ. ನಿನಗೆ ಕಲ್ಯಾಣವಾಗಲಿ ಎಂದು ಆಶೀರ್ವಚನವನ್ನು ನುಡಿದು ಆ ಸ್ಥಳದಿಂದ ಅಂತರ್ಧಾನನಾದನು.

೧೬. ವರಪ್ರದಾನಾನಂತರದಲ್ಲಿ ಭಗವಂತನು ಅಂತರ್ಧಾನಹೊಂದಲು ಆ ಹಿರಣ್ಯಕಶಿಪುರಾಕ್ಷಸನು ವರದಾನಬಲದಿಂದ ಕ್ರಮವಾಗಿ ತನ್ನ ವೇಗದಿಂದ ದೇವ-ರಾಕ್ಷಸ-ಮಾನವರಿಂದ ಕೂಡಿರುವ ತ್ರಿಲೋಕಗಳನ್ನೂ ಗೆದ್ದನು.

೧೭. ಆ ದಾನವಶ್ರೇಷ್ಠನು ಲೋಕಗಳನ್ನು ಗೆದ್ದು ಅವುಗಳನ್ನೆಲ್ಲ ಆಕ್ರಮಿಸಿ ತಾನು ಲೋಕೇಶ್ವರನಾಗಿ ಕ್ರಮವಾಗಿ ದೇವತೆಗಳು ನಿರ್ಮಾಣಮಾಡಿರುವ ಕಾಮ ರೂಪವುಳ್ಳ ಸುಧರ್ಮ ಎಂಬ ಸಭೆಯನ್ನು ಆಕ್ರಮಿಸಿದನು.

ತಸ್ಯಾಮೇವ ಸಮಾಸೀನಃ ಶುಶುಭೇ ದೇವರಾಜವತ್ ।
ಏವಂ ವರ್ಷಸಹಸ್ರಾಣಿ ಬಹೂನಿ ನೃಪನಂದನ ॥ ೧೮ ॥

ಅತೀತಾನ್ಯಸುರೇಂದ್ರಸ್ಯ ದೇವಶತ್ರೋಸ್ತರಸ್ವಿನಃ ।
ತತೋ ದೇವರ್ಷಿಗಂಧರ್ವಾ ಬ್ರಾಹ್ಮಣಾ ಬ್ರಹ್ಮವಾದಿನಃ ॥ ೧೯ ॥

ಹನ್ಯಮಾನಾಶ್ಚ ತೇನೈವ ದಿಶೋ ವೈ ಸಂಪ್ರದುದ್ರುವುಃ ।
ದ್ರಾವಯಾಮಾಸ ತಾನ್ ಸರ್ವಾನ್ ವರದಾನಾತ್ ಸ್ವಯಂಭುವಃ ॥೨೦॥

ನಿರ್ಯಜ್ಞಾಽಭೂದ್ವಸುಮತೀ ನಿಸ್ಸ್ವಾಧ್ಯಾಯವಷಟ್ಕ್ರಿಯಾ ।
ನಿರ್ಮನುಷ್ಯಾ ನಿರಾನಂದಾ ನಿರಸ್ತಾಶೇಷಸಜ್ಜನಾ ॥ ೨೧ ॥

---

೧೮. ಆ ಸಭೆಯಲ್ಲಿ ರಾಜಸ್ಥಾನದಲ್ಲಿ ಕುಳಿತುಕೊಂಡು ಅಸುರನು ದೇವೇಂದ್ರನಂತೆ ಪ್ರಕಾಶಿಸಿದನು. ರಾಜವಂಶದಲ್ಲಿ ಹುಟ್ಟಿದ ಭೂಪತಿಯೇ! ಇದೇ ಅವಸ್ಥೆಯಲ್ಲಿ ಅನೇಕ ಸಹಸ್ರ ವರ್ಷಗಳು ಕಳೆದುಹೋದುವು.

೧೯. ದೇವತೆಗಳಿಗೆ ಶತ್ರುಸ್ವರೂಪನೂ ಮಹಾಬಲಿಷ್ಠನೂ ಆದ ರಾಕ್ಷಸರಾಜನಿಗೆ ಹೀಗೆಯೇ ಸಾವಿರಾರು ವರ್ಷಗಳು ಕಳೆಯಲಾಗಿ ಆ ದುಷ್ಟನಿಂದ ದೇವತೆಗಳು, ಋಷಿಗಳು, ಗಂಧರ್ವರು, ಮತ್ತು ಬ್ರಹ್ಮವಾದಿಗಳಾದ ಬ್ರಾಹ್ಮಣರು ಇವರೆಲ್ಲ ಸಂಹರಿಸಲ್ಪಡುವರಾದರು.

೨೦. ಹೀಗೆ ಹಿಂಸಿಸಲ್ಪಟ್ಟ ದೇವ-ಋಷಿ ಮುಂತಾದವರೆಲ್ಲರೂ ದೇಶ ದಿಗಂತಗಳಿಗೆ ಓಡಿಹೋದರು. ಬ್ರಹ್ಮದೇವನ ವರದಾನದಿಂದ ಉನ್ಮತ್ತನಾದ ಅಸುರನು ಹೀಗೆ ಎಲ್ಲರನ್ನೂ ಅವರವರ ಸ್ಥಾನಗಳನ್ನು ಕಿತ್ತುಕೊಂಡು ದಿಗಂತಗಳಿಗೆ ಓಡಿಸಿಬಿಟ್ಟನು.

೨೧. ಆಗ ಈ ಅಸುರರಾಜನ ರಾಜ್ಯಶಾಸನದಲ್ಲಿ ಭೂಮಿಯು ಯಜ್ಞಾದಿಧರ್ಮದಿಂದ ಶೂನ್ಯವೂ ಸ್ವಾಧ್ಯಾಯಪ್ರವಚನ ವಷಟ್ಕಾರೋಚ್ಚಾರಣಗಳಿಂದ ರಹಿತವೂ, ನಿರ್ಮನುಷ್ಯವೂ, ಆನಂದ ವರ್ಜಿತವೂ ಮತ್ತು ಅಶೇಷ ಸಜ್ಜನರಿಂದ ದೂರವಾದುದೂ ಆಯಿತು.

ಏತಸ್ಮಿನ್ನೇವ ಕಾಲೇ ತು ತಸ್ಯ ಪುತ್ರೋ ಬಭೂವ ಹ ।
ಪ್ರಹ್ಲಾದೋ ನಾಮ ರಾಜೇಂದ್ರ ಭಗವದ್ಭಕ್ತಿಸಂಯುತಃ ॥ ೨೨ ॥

ವಿಷ್ಣುಧ್ಯಾನಹತಾಶೇಷಸಂಸಾರಸುಖಬಂಧನಃ ।
ನಾಸ್ಯಜ್ಜಾನಾತಿ ವೈ ನಿತ್ಯಂ ವಿಷ್ಣೋರ್ನಾಮಾನುಕೀರ್ತನಾತ್ ॥ ೨೩ ॥

ಸ್ಮರಂತಮನಿಶಂ ವಿಷ್ಣುಂ ಸ್ವಪುತ್ರಂ ವೀಕ್ಷ್ಯ ಚಾಸುರಃ ।
ಮೇನೇ ಶತ್ರುರ್ನ ಪುತ್ರೋಽಯಂ ಯತಃ ಶತ್ರುಮುಪಾಶ್ರಿತಃ ॥ ೨೪ ॥

ತಸ್ಮಾದೇನಂ ವಧಿಷ್ಯಾಮಿ ನಾಯಮರ್ಹತಿ ಪುತ್ರತಾಂ ।
ಇತ್ಯುಕ್ತ್ವಾ ಖಡ್ಗಮಾದಾಯ ಪುತ್ರಂ ಹಂತುಂ ಸಮುದ್ಯತಃ ॥ ೨೫ ॥

ತಮುದ್ಯತಾಸಿಂ ಸಂಪ್ರೇಕ್ಷ್ಯ ಹಂತುಕಾಮಮುಪಸ್ಥಿತಂ ।
ತುಷ್ಟಾವ ವಿಷ್ಣುಂ ಪ್ರಹ್ಲಾದಃ ಸರ್ವಲೋಕಭಯಾಪಹಂ ॥ ೨೬ ॥

---

೨೨. ರಾಜೇಂದ್ರನೇ! ಇದೇ ಸಮಯದಲ್ಲಿ ಆ ರಾಕ್ಷಸನಿಗೆ ಭಗವದ್ಭಕ್ತಿಯಿಂದ ಪೂರ್ಣನಾದ ಪ್ರಹ್ಲಾದನೆಂಬ ಒಬ್ಬ ಪುತ್ರನಿದ್ದನು.

೨೩. ಆ ಪುತ್ರನು ಸರ್ವಕಾಲದಲ್ಲಿಯೂ ವಿಷ್ಣುಭಕ್ತಿಯಿಂದ ಕೂಡಿ ವಿಷ್ಣುಧ್ಯಾನಯೋಗದ ಆಸಕ್ತಿಯಿಂದ ಅಶೇಷಸಂಸಾರ ಸುಖಗಳೆಂಬ ಬಂಧನಗಳನ್ನು ಬಿಡಿಸಿಕೊಂಡವನಾಗಿಯೂ ಆ ವಿಷ್ಣುವಿನ ಪರಮನಾಮೋಚ್ಚಾರಣೆಯನ್ನು ಬಿಟ್ಟು ಮಿಕ್ಕ ಯಾವ ವ್ಯವಹಾರವನ್ನು ಅರಿಯದವನಾಗಿಯೂ ಇದ್ದನು.

೨೪. ಅಸುರರಾಜನು ಹಗಲು ಮತ್ತು ರಾತ್ರಿ ವೇಳೆಗಳಲ್ಲಿ ವಿಷ್ಣುವನ್ನು ಸ್ಮರಿಸುತ್ತಲಿದ್ದ ತನ್ನ ಪುತ್ರನನ್ನು ಕಂಡು ಶತ್ರುವಾದ ವಿಷ್ಣುವನ್ನು ಆಶ್ರಯಿಸಿರುವುದರಿಂದ ತನ್ನ ಪುತ್ರನಲ್ಲವೆಂದೂ ಶತ್ರುವೆಂದೂ ತಿಳಿದನು.

೨೫. ಆದುದರಿಂದ ಈ ಶತ್ರುವನ್ನು ಕೊಂದುಹಾಕುವೆನು. ಇವನು ನನಗೆ ಪುತ್ರನಾಗಿರಲು ಅರ್ಹನಲ್ಲ ಎಂದು ಹೇಳಿ ತನ್ನ ಕತ್ತಿಯನ್ನು ತೆಗೆದುಕೊಂಡು ಪುತ್ರನನ್ನು ಸಂಹರಿಸಲು ಯತ್ನಮಾಡಿದನು.

೨೬. ಪ್ರಹ್ಲಾದನಾದರೋ ಕತ್ತಿಯನ್ನೆತ್ತಿ ತನ್ನನ್ನು ಕೊಂದುಬಿಡಬೇಕೆಂಬ ಇಷ್ಟದಿಂದ ಹತ್ತಿರಕ್ಕೆ ಬಂದಿರುವ ತಂದೆಯನ್ನು ಕಂಡು ಆ ಸಮಯದಲ್ಲಿ ಸರ್ವಲೋಕಗಳ ಭಯವನ್ನು ನಿರ್ಮೂಲಮಾಡುವ ವಿಷ್ಣುವನ್ನು ಸ್ತುತಿಸಿದನು.

ಭಜೇಽಹಮಪ್ಯಾಭಯದಂ ತ್ರಿಲೋಕ್ಯಾ
ಅಜೇಶಪೂರ್ವೈರಮರೈರಭಿಷ್ಟುತಂ ।
ವ್ರಜೇಯಮನ್ಯಂ ಕಮಿಹಾಶರಣ್ಯೋ
ಗಜೇಂದ್ರಮುಕ್ತಿಪ್ರದಮೀಶ್ವರಂ ವಿನಾ ॥ ೧೭ ॥

ಮಾಂ ದೇವದೇವೇಶ ಕೃಪಾಂಬುರಾಶೇ
ಭಯಾರ್ಣವೇ ಮಗ್ನಮಿಹೋದ್ಧರಾಶು ।
ನಾರಾಯಣಾನಂತಗುಣಾಸುರಾರೇ
ತವ ಪ್ರಸನ್ನೋಽಸ್ಮಿ ಪದಾಬ್ಜಯುಗ್ಮಂ ॥ ೧೮ ॥

ಅಯಂ ತು ಮಾಂ ಹಂತುಮುಪೈತಿ ವೀರ್ಯವಾ-
ನಸಿಂ ಸಮುದ್ಯಮ್ಯ ಕರೇಣ ರೋಷಾತ್ ।
ಅನನ್ಯನಾಥಂ ಭವತಾ ವಿನಾಽದ್ಯ ಮಾ-
ಮುಪೈಹಿ ಗೋಪ್ತುಂ ತರಸಾಽಂಬುಜಾಕ್ಷ ॥ ೧೯ ॥

---

೧೭. ಈಗ ನಾನು ಬ್ರಹ್ಮ ಮತ್ತು ಈಶ್ವರ ಮುಂತಾದ ದೇವತೆಗಳಿಂದ ಸ್ತುತಿಸಲ್ಪಟ್ಟಿರುವ ಮತ್ತು ತ್ರಿಲೋಕಗಳ ಭೀತಿಯನ್ನು ಅಪಹರಿಸಿ ಅಭಯವನ್ನು ದಾನ ಮಾಡುವ ವಿಷ್ಣುಪರಮಾತ್ಮನನ್ನು ಭಜಿಸುವೆನು. ಆಪತ್ತಿಗೆ ಸಿಲುಕಿರುವ ಗಜೇಂದ್ರನಿಗೆ ಮುಕ್ತಿಯನ್ನು ಕರುಣಿಸಿರುವ ಸ್ವಾಮಿಯನ್ನು ಬಿಟ್ಟು ದಿಕ್ಕಿಲ್ಲದ ನಾನು ಇನ್ನಾರನ್ನು ಈ ಭಯಂಕರಾವಸ್ಥೆಯಲ್ಲಿ ಶರಣಹೊಂದಲಿ?

೧೮. ದೇವತೆಗಳಿಗೆಲ್ಲ ಪ್ರಭುವಾದ ದೇವನೆ! ಕರುಣಾಸಮುದ್ರನೇ! ಅಪಾರವಾದ ಭಯಸಮುದ್ರದಲ್ಲಿ ಮುಳುಗಿಹೋದ ನನ್ನನ್ನು ಈಗ ಬೇಗ ಮೇಲಕ್ಕೆತ್ತಿ ರಕ್ಷಿಸು. ನಾರಾಯಣನೇ! ಅನಂತಕಲ್ಯಾಣ ಗುಣಪೂರ್ಣನೇ! ಮತ್ತು ರಾಕ್ಷಸಶತ್ರುವೇ! ನಿನ್ನ ಪಾದಕಮಲಗಳಲ್ಲಿ ಪ್ರಪತ್ತಿಯನ್ನು ಹೊಂದಿರುವೆನು.

೧೯. ಮಹಾಪರಾಕ್ರಮಶಾಲಿಯಾದ ಈ ತಂದೆಯು ಕೋಪದಿಂದ ಕೈಯಲ್ಲಿ ಕತ್ತಿಯನ್ನು ಹಿಡಿದು ನನ್ನನ್ನು ಕೊಲ್ಲಲು ಬರುತ್ತಿರುವನು. ಪುಂಡರೀಕಾಕ್ಷನೆ! ನಿನ್ನ ಹೊರತು ಮತ್ತಾರೂ ದಿಕ್ಕಿಲ್ಲದ ನನ್ನನ್ನು ಈಗ ರಕ್ಷಿಸಲು ವೇಗದಿಂದ ನೀನು ಸಮೀಪಕ್ಕೆ ಬರುವನಾಗು.

ಇತಿ ಸ್ತುತೋಽಸಾವಸುರಾರ್ಭಕೇಣ
ಸ್ತಂಭಾತ್ಸಭಾಯಾ ಹರಿರಾವಿರಾಸೀತ್ ।
ಸಂಗೃಹ್ಯ ರೂಪಂ ಪರಮಂ ವಿಚಿತ್ರಂ
ನ ತಸ್ಯ ಮೃಗಸ್ಯಾಪಿ ನ ಮಾನುಷಸ್ಯ ॥ ೩೦ ॥

ತದಾ ನೃಸಿಂಹಂ ಪ್ರಸಮೀಕ್ಷ್ಯ ಚಾಸುರಃ
ಸ ತೇನ ಯೋದ್ಧುಂ ಜಗೃಹೇಽಸಿಚರ್ಮಣೀ ।
ಗೃಹೀತಚರ್ಮಾಸಿಮಭಿಭ್ರಮಂತಂ
ವಿಭ್ರಾಮಯಂತಂ ನಿಶಿತಾಸಿಮೀಕ್ಷ್ಯ ॥ ೩೧ ॥

ಕರೇಣ ತಸ್ಯೋರಸಿ ಶೈಲಸಾರೇ
ಸಂಪ್ರಾಹರದ್ವಜ್ರನಖೇನ ವಿಷ್ಣುಃ ।
ತಸ್ಯೋರಸಃ ಸಂಪ್ರಹತಸ್ಯ ವಿಷ್ಣುನಾ
ವಿನಿರ್ಗತಾಃ ಶೋಣಿತಬಿಂದವೋ ಯೇ ॥ ೩೨ ॥

---

೩೦. ರಾಕ್ಷಸಶಿಶುವಾದ ಪ್ರಹ್ಲಾದನಿಂದ ಈ ರೀತಿಯಾಗಿ ಭಕ್ತಿಯಿಂದ ಸ್ತುತಿಸಲ್ಪಟ್ಟ ಹರಿಯು ವಿಚಿತ್ರವೂ ಶ್ರೇಷ್ಠವೂ ಆದ ರೂಪವನ್ನು ಸ್ವೀಕರಿಸಿ ಆ ರಾಕ್ಷಸ ಸಭೆಯ ಸ್ತಂಭದಿಂದ ಆವಿರ್ಭವಿಸಿದನು. ಆಗ ಪರಮಾತ್ಮನು ಧರಿಸಿದ ರೂಪವು ಮೃಗದ ರೂಪವಲ್ಲ. ಅಥವಾ ಮನುಷರೂಪವೂ ಅಲ್ಲ.

೩೧. ಆ ಸ್ತಂಭದಿಂದ ಆವಿರ್ಭವಿಸಿರುವ ನೃಸಿಹ್ಮಾಕೃತಿಯನ್ನು ಕಂಡು ರಾಕ್ಷಸನು ಅವನೊಡನೆ ಯುದ್ಧಮಾಡಲು ಉಪಕರಣಗಳಾದ ಕತ್ತಿ, ಚರ್ಮ ಮುಂತಾದುವುಗಳನ್ನು ಪರಿಗ್ರಹಿಸಿದನು. ಕೈಯ್ಯಲ್ಲಿ ಚರ್ಮವನ್ನು ಧರಿಸಿ ಹರಿತವಾದ ಕತ್ತಿಯನ್ನು ಸುತ್ತಿಸುತ್ತ ಆ ಸಭಾಂಗಣದಲ್ಲಿ ಭ್ರಮಣಮಾಡುತ್ತಲಿದ್ದ ರಾಕ್ಷಸನನ್ನು ನೃಸಿಹ್ಮಸ್ವಾಮಿಯು ನೋಡಿದನು.

೩೨. ಬೆಟ್ಟದಂತೆ ಬಹುಸಾರಗರ್ಭಿತವಾದ ಆ ಅಸುರನ ಹೃದಯದಲ್ಲಿ ತನ್ನ ಹಸ್ತಗಳ ವಜ್ರಾಯುಧದಂತೆ ತೀಕ್ಷ್ಣವಾದ ನಖಗಳಿಂದ ವಿಷ್ಣುವು ಪ್ರಹರಿಸಿದನು. ವಿಷ್ಣುವಿನಿಂದ ವಜ್ರನಖಗಳಿಂದ ಕ್ಷತವಾದ ಆ ಅಸುರನ ಹೃದಯದಿಂದ ಎಷ್ಟೋ ರಕ್ತಬಿಂದುಗಳು ಸುರಿದವು.

ಸದ್ಯಸ್ತ ಏವಾಸುರರಾಜಕೋಟಯೋ
ಬಭೂವುರುರ್ವ್ಯಾಂ ಶತಶಶ್ಚ ಸಾಯುಧಾಃ ।
ತತೋ ನೃಸಿಂಹೋಽಪಿ ಸಮೀಕ್ಷ್ಯ ದಾನವಾನ್
ಸಟಾ ವಿಧೂನ್ವನ್ ಸಸೃಜೇ ನೃಸಿಂಹಾನ್ ॥ ೩೩ ॥

ಸೃಷ್ಟೈರ್ನೃಸಿಂಹೈಃ ಪರಿತಃ ಸುಪೂರ್ಣಾ
ಬಭೂವ ಭೂಮಿಃ ಸವನಾದ್ರಿಸಾಗರಾ
ತಾನ್ವೀಕ್ಷ್ಯ ದೇವಾ ಋಷಯೋ ನೃಸಿಂಹಾನ್
ಪ್ರಣಮ್ಯ ಹೃಷ್ಟಾಃ ಪ್ರಶಶಂಸುರೇನಂ ॥ ೩೪ ॥

ಅಹೋ ವೀರ್ಯಮಹೋ ಧೈರ್ಯಮಹೋ ಬಾಹುಪರಾಕ್ರಮಃ ।
ನರಸಿಂಹಸ್ಯ ಪಶ್ಯಧ್ವಮಹೋ ರೂಪಂ ಮಹಾಬಲಂ ॥ ೩೫ ॥

---

೩೩. ಆ ನಿಮಿಷದಲ್ಲಿ ರಕ್ತಬಿಂದುಗಳೆಲ್ಲವೂ ಭೂಮಿಯಲ್ಲಿ ನೂರಾರು ಆಯುಧ ಪಾಣಿಗಳಾದ ಅನೇಕಾನೇಕ ಅಸುರರಾಜರಾಗಿ ಉದ್ಭವಿಸಿದವು. ಅನಂತರದಲ್ಲಿ ನೃಸಿಂಹಸ್ವಾಮಿಯು ರಕ್ತದಿಂದ ಹುಟ್ಟಿದ ಆ ದಾನವಗಣವನ್ನು ನೋಡಿ ತನ್ನ ಸಟೆಗಳನ್ನು ಕೊಡಹಿಕೊಂಡು ತನ್ನಂತಿರುವ ಅನೇಕ ನೃಸಿಂಹಮೂರ್ತಿಗಳನ್ನು ಸೃಷ್ಟಿ ಮಾಡಿದನು.

೩೪. ಹೀಗೆ ಸಟೆಗಳಿಂದ ಸೃಷ್ಟಿಸಿದ ಅಸಂಖ್ಯಾತವಾದ ನೃಸಿಂಹಮೂರ್ತಿಗಳಿಂದ ವನ, ಪರ್ವತ, ಸಮುದ್ರಗಳಿಂದ ವ್ಯಾಪ್ತವಾದ ಭೂಮಿಯೆಲ್ಲವೂ ಸುತ್ತಲೂ ತುಂಬಿಹೋಯಿತು. ಆಗ ದೇವತೆಗಳೂ ಮಹರ್ಷಿಗಳೂ ಆ ನೃಸಿಂಹಗಣವನ್ನು ನೋಡಿ ಬಹಳ ಆನಂದದಿಂದ ನಮಸ್ಕರಿಸಿ ನೃಸಿಂಹಸ್ವಾಮಿಯನ್ನು ಸ್ತುತಿಸಿದರು.

೩೫. ಈ ನರ ಮತ್ತು ಸಿಂಹದ ವಿಗ್ರಹವನ್ನು ಧರಿಸಿರುವ ಸ್ವಾಮಿಯ ವೀರ್ಯವು ಆಶ್ಚರ್ಯಕರವು, ಧೈರ್ಯವು ಆಶ್ಚರ್ಯಕರವು, ಬಾಹುಗಳ ವಿಕ್ರಮವು ಅತ್ಯಾಶ್ಚರ್ಯಕರವು. ಮಹಾಬಲಿಷ್ಠನಾದ ನರಸಿಂಹನ ಆಕಾರವನ್ನು ನೋಡಿರಿ. ಬಹು ವಿಸ್ಮಯವನ್ನು ಉಂಟುಮಾಡುವುದು ಆ ರೂಪವು.

ಅಹೋ ದಂಷ್ಟ್ರಾ ಹ್ಯಹೋ ವಕ್ತ್ರಮಹೋ ರೂಪಾಣ್ಯನೇಕಶಃ ।
ಅಹೋ ಗರ್ಜನಮತ್ಯುಗ್ರಮಹೋ ಬಲಕರಂ ಸತಾಂ ॥ ೩೬ ॥

ಇತಿ ದೇವೈಃ ಸ್ತುತೋ ಯಸ್ಮಾತ್ತತ್ರ ಕ್ಷೇತ್ರಮಭೂದ್ಧರೇಃ ।
ಅಹೋಬಲಾಖ್ಯಂ ರಾಜೇಂದ್ರ ಸರ್ವಪಾಪಪ್ರಣಾಶನಂ ॥ ೩೭ ॥

ತತೋ ಹರಿಃ ಸಮುದ್ವೀಕ್ಷ್ಯ ಹಿರಣ್ಯಕಶಿಪುಂ ಪುರಃ ।
ಅಪಾತಯಿತ್ವಾ ರಕ್ತಾನಾಂ ಬಿಂದೂನೇತಸ್ಯ ಭೂತಲೇ ॥ ೩೮ ॥

ಹನ್ಯಾಮಿಮಮಹಂ ಪಾಪಂ ಬ್ರಹ್ಮಣೋ ವರದರ್ಪಿತಂ ।
ಇತಿ ಸಂಚಿಂತ್ಯ ಭಗವಾನುತ್ಪಪಾತಾಸುರಂ ಪ್ರತಿ ॥ ೩೯ ॥

ಕರೈಶ್ಚತುರ್ಭಿಸ್ತಂ ಬಧ್ವಾ ದೀರ್ಘೈರ್ನಖರಸಂಯುತೈಃ ।
ಕರೇಣೈಕೇನ ಸಂಗೃಹ್ಯ ಪಾದಯೋರಸುರೋತ್ತಮಂ ॥ ೪೦ ॥

---

೩೬. ಈ ಆಕಾರದ ಕೋರದಾಡೆಗಳು ಎಷ್ಟು ಆಶ್ಚರ್ಯಕರವಾಗಿವೆ! ಮುಖವೆಷ್ಟು ಆಶ್ಚರ್ಯಕರವು! ವಿವಿಧವಾದ ಅನೇಕ ರೂಪಗಳು ಎಷ್ಟು ಆಶ್ಚರ್ಯಕರಗಳಾಗಿವೆ. ಮತ್ತು ಸತ್ಪುರುಷರಿಗೆ ಬಲವನ್ನು ಉಂಟುಮಾಡುವ ಅತ್ಯುಗ್ರವಾದ ಸಿಂಹಗರ್ಜನವು ಅತ್ಯಾಶ್ಚರ್ಯ! ಅತ್ಯಾಶ್ಚರ್ಯವು.

೩೭. ರಾಜೇಂದ್ರನೇ! ದೇವತೆಗಳಿಂದ ಈ ರೀತಿಯಾಗಿ ಮಹಾವಿಷ್ಣುವು ಸ್ತುತಿಸಲ್ಪಟ್ಟಿರುವುದರಿಂದ ಆ ವಿಷ್ಣುಕ್ಷೇತ್ರವು ಸರ್ವಪಾಪಗಳನ್ನು ನಾಶಪಡಿಸುವ ಪಾವನವಾದ ಅಹೋಬಲ ಕ್ಷೇತ್ರವೆಂಬ ನಾಮದಿಂದ ಪ್ರಸಿದ್ಧವಾಯಿತು.

೩೮-೩೯. ಆಗ ಹರಿಯು ತನ್ನ ಮುಂದುಗಡೆಯಲ್ಲಿ ಹಿರಣ್ಯಕಶಿಪು ರಾಕ್ಷಸನನ್ನು ಕಂಡು ಭೂಮಿಯಲ್ಲಿ ಈ ಅಸುರನ ರಕ್ತಬಿಂದುಗಳು ಬೀಳದ ಹಾಗೆಯೇ ಬ್ರಹ್ಮನ ವರಪ್ರದಾನ ಬಲದಿಂದ ದರ್ಪಗೊಂಡಿರುವ ಈ ಮಹಾಪಾಪಿಯಾದ ಶತ್ರುವನ್ನು ಸಂಹರಿಸುತ್ತೇನೆಂದು ಚಿಂತಿಸಿ ಭಗವಂತನು ಆ ರಾಕ್ಷಸರಾಜನ ಮೇಲೆ ಬಿದ್ದನು.

೪೦. ತೀಕ್ಷ್ಣವಾದ ನಖಗಳಿಂದ ಕೂಡಿದ ತನ್ನ ನಾಲ್ಕು ಹಸ್ತಗಳಿಂದ ಅವನನ್ನು ಬಂಧಿಸಿ ಆ ಅಸುರೋತ್ತಮನನ್ನು ಮತ್ತೆ ಒಂದು ಕೈಯಿಂದ ತನ್ನ ಪಾದಗಳ ಮೇಲೆ ಎಳೆದುಕೊಂಡನು.

ಇತರೇಣ ಶಿರೋ ಗೃಹ್ಯ ಸ್ವಾಂಕಮಾರೋಪಯತ್ತದಾ ।
ಸ್ಫುರಂತಂ ತಂ ಸಮುದ್ವೀಕ್ಷ್ಯ ಹರಿಃ ಸ್ವಕರಪೀಡನಾತ್ ॥ ೪೧ ॥

ಕರಾಭ್ಯಾಮುದರಂ ಭಿತ್ತ್ವಾ ವಕ್ತ್ರಂ ಕೃತ್ವಾಽಸ್ಯ ಚೋದರೇ ।
ಚುಚೋಷ ರುಧಿರಂ ಕೋಷ್ಣಂ ಸಫೇನಮಸುರಸ್ಯ ತು ॥ ೪೨ ॥

ಏವಂ ವಿನಿಹತೇ ತಸ್ಮಿನ್ ದಾನವೇಂದ್ರೇ ಮಹಾಬಲೇ ।
ತುತುಷುರ್ದೇವತಾಃ ಸರ್ವಾಃ ಸರ್ವೇ ಚ ಪರಮರ್ಷಯಃ ॥ ೪೩ ॥

ಗಂಧರ್ವಾಶ್ಚ ಜಗುಃ ಸರ್ವೇ ನನೃತುಶ್ಚಾಪ್ಸರೋಗಣಾಃ ।
ತಸ್ಮಿನ್ನೇವ ಮುಹೂರ್ತೇ ತು ತಸ್ಯ ರಕ್ತೋದ್ಭವಾಶ್ಚ ಯೇ ॥ ೪೪ ॥

ಅಸುರಾಃ ಸಂಹೃತಾಃ ಸರ್ವೇ ನೃಸಿಂಹೈರಪರೈರಪಿ ।
ಹತ್ವಾ ಹಿರಣ್ಯಕಶಿಪುಂ ಸ್ವಯಮೇವ ಜನಾರ್ದನಃ ॥ ೪೫ ॥

---

೪೧. ಆಗ ಮತ್ತೊಂದು ಹಸ್ತದಿಂದ ಅವನ ಶಿರವನ್ನು ಹಿಡಿದು ತನ್ನ ತೊಡೆಯ ಮೇಲೆ ಇರಿಸಿಕೊಂಡನು. ಆಗ ತನ್ನ ಹಸ್ತಗಳ ಪೀಡೆಯನ್ನು ಸಹಿಸಲಾರದೆ ಅತ್ತಿತ್ತ ಚಲಿಸುತ್ತಿದ್ದ ರಾಕ್ಷಸನನ್ನು ನೋಡಿದನು.

೪೨. ತನ್ನ ಹಸ್ತಗಳಿಂದ ಅಸುರನ ಹೊಟ್ಟೆಯನ್ನು ಬಗೆದು ಆ ಉದರದಲ್ಲಿ ತನ್ನ ಮುಖವನ್ನಿಟ್ಟು ಸ್ವಲ್ಪ ಬಿಸಿಯಾದ ನೊರೆಯಿಂದ ಸಹಿತವಾದ ಆ ರಾಕ್ಷಸನ ರಕ್ತವನ್ನು ಹೀರಿದನು.

೪೩. ಹೀಗೆ ಮಹಾಪರಾಕ್ರಮವಂತನಾದ ದಾನವೇಂದ್ರನ ಸಂಹಾರ ನಡೆಯಲಾಗಿ ಸಮಸ್ತ ದೇವತೆಗಳೂ ಅಶೇಷ ಮಹರ್ಷಿಗಳೂ ಅತ್ಯಾನಂದಭರಿತರಾದರು.

೪೪-೪೫. ಗಂಧರ್ವರು ಈ ಆನಂದದಿಂದ ಗಾನಮಾಡಿದರು. ಅಪ್ಸರಃಸ್ತ್ರೀಯರು ಗುಂಪು ಸೇರಿ ನೃತ್ಯವನ್ನು ಪ್ರದರ್ಶಿಸಿದರು. ರಾಕ್ಷಸಭಯದಿಂದ ಎಲ್ಲೋ ಮಾಯವಾದ ಆನಂದವು ಮತ್ತೆ ಇವರಲ್ಲೆಲ್ಲ ತಲೆದೋರಿತು. ಈ ಹಿಂದೆ ಆ ರಾಕ್ಷಸನ ರಕ್ತಬಿಂದುಗಳಿಂದ ಹುಟ್ಟಿದ್ದ ಅನೇಕ ರಾಕ್ಷಸರು ಆ ಮುಹೂರ್ತದಲ್ಲಿಯೇ ಬೇರೆಯಾಗಿ ಅವತರಿಸಿ ಅನೇಕ ನೃಸಿಂಹಮೂರ್ತಿಗಳಿಂದ ಕೊಲ್ಲಲ್ಪಟ್ಟರು. ಜನಾರ್ದನನಾದ ಮಹಾವಿಷ್ಣುವು ಹಿರಣ್ಯಕಶಿಪುವನ್ನು ತಾನೇ ಕೊಂದುಹಾಕಿದನು.

ದೃಷ್ಟ್ವಾ ತತ್ರಾಸುರೀಂ ಸೇನಾಂ ಸವಾಜಿರಥಕುಂಜರಾಂ ।
ಮಹತೀಮರ್ಣವಪ್ರಖ್ಯಾಂ ಪ್ರವಿವೇಶ ಜಿಘಾಂಸಯಾ ॥ ೪೬ ॥

ಚಕ್ರಮುದ್ಯಮ್ಯ ವೈ ಗರ್ಜನ್ ವಿಧೂನ್ವಂಶ್ಚ ಸಟಾ ಮುಹುಃ ।
ಜಘಾನ ಕಾಂಶ್ಚಿಚ್ಚಕ್ರೇಣ ನಖೈಃ ಕಾಂಶ್ಚಿದ್ವ್ಯದಾರಯತ್ ॥ ೪೭ ॥

ಪ್ರಮಮಾಥೋರಸಾ ಕಾಂಶ್ಚಿದ್ದಂಷ್ಟ್ರೈಃ ಕಾಂಶ್ಚಿದ್ದದಂಶ ಹ ।
ಕೇಚಿತ್ತಸ್ಯೈವ ನಾದೇನ ಪತಿತಾ ಧರಣೀತಲೇ ॥ ೪೮ ॥

ಪ್ರದುದ್ರುವುಸ್ತಥಾ ಚಾನ್ಯೇ ದಿಶೋ ದಶ ಭಯಾರ್ದಿತಾಃ ।
ತತೋ ದೃಷ್ಟ್ವಾ ಹತಾಂ ಸೇನಾಂ ನೃಸಿಹ್ಮೇನ ಮಹಾತ್ಮನಾ ॥ ೪೯ ॥

---

೪೬. ಮತ್ತು ಆನೆ, ಕುದುರೆ, ರಥಗಳಿಂದ ಕೂಡಿದ ಸಮುದ್ರದಂತೆ ಅಪಾರವಾದ ಅಸುರಸೈನ್ಯದ ಚಲನವನ್ನು ಕಂಡು ಅವನ್ನು ಸಂಹಾರಮಾಡಬೇಕೆಂದು ಅದರೊಳಗೆ ನುಗ್ಗಿದನು.

೪೭. ಅಸುರಸೇನೆಯ ಮಧ್ಯದಲ್ಲಿ ಚಕ್ರಾಯುಧವನ್ನು ಮೇಲಕ್ಕೆತ್ತಿ ಸುತ್ತಿಸುತ್ತ, ಸಿಹ್ಮನಾದವನ್ನು ಮಾಡುತ್ತ ಮತ್ತು ತನ್ನ ಸಟೆಗಳನ್ನು ಮತ್ತೆ ಮತ್ತೆ ಕೊಡವುತ್ತ ನೃಸಿಹ್ಮಸ್ವಾಮಿಯು ಕೆಲವರನ್ನು ಚಕ್ರದಿಂದ ಕೊಂದುಹಾಕಿದನು. ಮತ್ತೆ ಕೆಲವರನ್ನು ತನ್ನ ಉಗುರುಗಳಿಂದ ಸೀಳಿದನು.

೪೮. ಕೆಲವರನ್ನು ತನ್ನ ಎದೆಯಿಂದ ಅಪ್ಪಳಿಸಿದನು. ಮತ್ತೆ ಕೆಲವರನ್ನು ಕಠಿನವಾದ ದಂಷ್ಟ್ರಗಳಿಂದ ಕಡಿದನು. ಇನ್ನು ಕೆಲವರು ಆ ಸಿಹ್ಮನಾದವನ್ನು ಕೇಳಿ ಸಹಿಸಲಾರದೆ ಭೂಮಿಯಲ್ಲಿ ಬಿದ್ದರು.

೪೯. ಹೀಗೆ ರಾಕ್ಷಸ ಸೇನೆಯ ಸಂಹಾರವಾದ ಬಳಿಕ ಮಿಕ್ಕ ಅಲ್ಪ ಸ್ವಲ್ಪ ಸೈನಿಕರು ಭಯದಿಂದ ಪೀಡಿತರಾಗಿ ಹತ್ತು ದಿಕ್ಕುಗಳ ಅಂತಗಳಿಗೆ ಓಡಿಹೋದರು. ಅನಂತರದಲ್ಲಿ ಮಹಾತ್ಮನಾದ ನೃಸಿಹ್ಮನಿಂದ ರಾಕ್ಷಸಸೇನೆಯು ಕೊಲ್ಲಲ್ಪಟ್ಟಿರುವುದನ್ನು ಅಸುರರಾಜನ ಮಂತ್ರಿಗಳು ನೋಡಿದರು.

ಸಚಿವಾ ದಾನವೇಂದ್ರಸ್ಯ ದುಃಖಿತಾ ಭಯಕಂಪಿತಾಃ ।
ಸುಧನ್ವಾ ಧೂಮ್ರಕೇತುಶ್ಚ ಧೂಮ್ರಾಕ್ಷೋಽಧರ್ಮಪಾಲಕಃ ॥ ೫೦ ॥

ವಿಪ್ರಚಿತ್ತಿರ್ಮಧುರ್ಬಾಣಃ ಕಾಲನೇಮಿಶ್ಚ ವಿಶ್ರುತಃ ।
ಅಷ್ಟಾವೇತೇ ದುರಾಧರ್ಷಾ ದಾನವಾ ಗಲಿತಾಯುಧಾಃ ॥ ೫೧ ॥

ಹತಾವಶಿಷ್ಟೈರ್ದನುಜೈಃ ಸಹಿತಾಃ ಸಂಪ್ರದುದ್ರುವುಃ ।
ಅರ್ದಿತಾ ನರಸಿಹ್ಮೇಣ ಸರ್ವೇ ಪ್ರಾಣಪರೀಪ್ಸವಃ ॥ ೫೨ ॥

ತೇ ವೈ ಸತ್ಯವ್ರತಕ್ಷೇತ್ರಂ ದೃಷ್ಟ್ವಾ ಗಹನಮದ್ಭುತಂ ।
ನಾನಾವೃಕ್ಷಲತಾಗುಲ್ಮಂ ಬಹುಕಂದರಶೋಭಿತಂ ॥ ೫೩ ॥

ಸಿಹ್ಮವ್ಯಾಘ್ರವರಾಹೈಶ್ಚ ಗಜಯೂಥೈಃ ಸಮಾವೃತಂ ।
ತತ್ರ ವಾರಾಹವಲ್ಮೀಕಂ ದೃಷ್ಟ್ವಾ ಪರ್ವತಸನ್ನಿಭಂ ॥ ೫೪ ॥

---

೫೦. ಸುಧನ್ವಾ, ಧೂಮ್ರಕೇತು, ಧೂಮ್ರಾಕ್ಷ, ಅಧರ್ಮಪಾಲಕ ಎಂಬ ರಾಕ್ಷಸನ ಮಂತ್ರಿವರ್ಯರು ಆಗ ಅದನ್ನು ಕಂಡು ಭಯದಿಂದ ನಡುಗಿಹೋದವರೂ ಅತ್ಯಂತ ದುಃಖದಲ್ಲಿ ಮುಳುಗಿದವರೂ ಆದರು.

೫೧-೫೨. ಸುಧನ್ವಾ ಮುಂತಾದ ನಾಲ್ಕು ಜನರೂ ಮತ್ತು ವಿಪ್ರಚಿತ್ತಿ, ಮಧು, ಬಾಣ, ಕಾಲನೇಮಿ, ಎಂಬುವರು ನಾಲ್ಕು ಮಂದಿಯೂ ಸೇರಿ ಪ್ರಖ್ಯಾತರಾದ ಎಂಟು ಜನ ಅತಿ ಧೀರರೂ ಜಯಿಸಲು ಅಶಕ್ಯರೂ ಆದರೆ ಆಯುಧವನ್ನು ಕಳೆದುಕೊಂಡವರೂ ಆದ ರಾಕ್ಷಸ ಸಚಿವರು ನರಸಿಹ್ಮನಿಂದ ಪೀಡಿಸಲ್ಪಟ್ಟವರಾಗಿ ಎಲ್ಲರೂ ಪ್ರಾಣರಕ್ಷಣೋಪಾಯವನ್ನು ಚಿಂತಿಸುತ್ತ ಸಂಹಾರವಾಗಿ ಮಿಕ್ಕಿರುವ ಕೆಲವು ದಾನವರ ಸಂಗಡ ಪಲಾಯನಮಾಡಿದರು.

೫೩. ಧಾವಿಸಿ ಬಂದ ಆ ಅಸುರರು ಅನೇಕ ವೃಕ್ಷ-ಲತೆಗಳಿಂದ ಶೋಭಿಸಲ್ಪಟ್ಟದ್ದಾಗಿಯೂ ಅನೇಕ ಗುಹೆಗಳಿಂದ ಅಲಂಕರಿಸಲ್ಪಟ್ಟದ್ದಾಗಿಯೂ ಮತ್ತು ಆಶ್ಚರ್ಯಕರವಾಗಿಯೂ ಇರುವ ಗಹನವಾದ ಸತ್ಯವ್ರತ ಕ್ಷೇತ್ರವನ್ನು ಸಂದರ್ಶಿಸಿದರು.

೫೪. ಮತ್ತು ಆ ಸತ್ಯವ್ರತಕ್ಷೇತ್ರವು ಸಿಹ್ಮ, ವ್ಯಾಘ್ರ, ವರಾಹ, ಮತ್ತು ಆನೆಗಳ ಗುಂಪು ಮುಂತಾದ ಪ್ರಾಣಿಗಳಿಂದ ಕೂಡಿದ್ದಾಗಿದ್ದಿತು. ಆ ಕ್ಷೇತ್ರದಲ್ಲಿದ್ದ ಪರ್ವತಾಕಾರವಾದ ವರಾಹವಲ್ಮೀಕವನ್ನು ನೋಡಿದರು.

ಕಲಭೈಃ ಕುಂಜರೈಶ್ಚೈವ ಕರಿಣೀಭಿಃ ಸಮಾವೃತಂ ।
ಸ ವೈ ಹಸ್ತಿಗಿರಿರ್ನಾಮ ಹಸ್ತಿಯೂಥಾವೃತೋ ಯತಃ ॥ ೫೫ ॥

ಗಜೇಂದ್ರಃ ಕಶ್ಚಿದಾಗತ್ಯ ಸ್ವಯೂಥೈರಭಿಸಂವೃತಃ ।
ಬಹುವರ್ಷಸಹಸ್ರಾಣಿ ಪೂಜಯನ್ ಪುರುಷೋತ್ತಮಂ ॥ ೫೬ ॥

ಉವಾಸ ತಸ್ಮಾದ್ರಾಜೇಂದ್ರ ಹಸ್ತಿಶೈಲ ಇತೀರಿತಃ ।
ತಸ್ಯ ಶೈಲಸ್ಯ ಪರಿತಃ ಸಮಂತಾದ್ದಶಯೋಜನಂ ॥ ೫೭ ॥

ವ್ಯಾಳವ್ಯಾಘ್ರಸಮಾಕ್ರಾಂತಂ ಕಾಂತಾರಂ ರೋಮಹರ್ಷಣಂ ।
ತತ್ಪ್ರವಿಶ್ಯ ವನಂ ಸರ್ವೇ ದಾನವಾ ಭಯವಿಹ್ವಲಾಃ ॥ ೫೮ ॥

ವೃಕ್ಷಗುಲ್ಮಾದ್ರಿಪಾಷಾಣಮೃಗಪಕ್ಷಿಗಣಾನಪಿ ।
ವನೇ ಪಶ್ಯಂತಿ ತಾನ್ ಸರ್ವಾನ್ ಮನ್ಯಂತೇ ನೃಹರೀನಿವ ॥ ೫೯ ॥

---

೫೫. ಆ ವಲ್ಮೀಕದ ಸುತ್ತಮುತ್ತಲೂ ಆನೆಯ ಮರಿಗಳು, ದೊಡ್ಡಾನೆಗಳ, ಮತ್ತು ಹೆಣ್ಣಾನೆಗಳು ವಿಶೇಷವಾಗಿ ವ್ಯಾಪ್ತವಾಗಿದ್ದವು. ಯಾವ ಕಾರಣದಿಂದ ಆ ಪರ್ವತವು ಗಜಯೂಥದಿಂದ ಪೂರ್ಣವಾಗಿದ್ದಿತೊ, ಆ ಕಾರಣದಿಂದ ಆ ಗಿರಿಯು ಹಸ್ತಿ ಗಿರಿಯೆಂದು ಪ್ರಸಿದ್ಧವಾಗಿತ್ತು.

೫೬. ಅಲ್ಲಿಗೆ ಒಂದಾನೊಂದು ಗಜೇಂದ್ರವು ಬಂದು ತನ್ನ ಯೂಥದಿಂದ ಸುತ್ತುವರಿಯಲ್ಪಟ್ಟು ಅನೇಕ ವರ್ಷಗಳ ಕಾಲ ಪುರುಷೋತ್ತಮನಾದ ಶ್ರೀಮಹಾ ವಿಷ್ಣುವನ್ನು ಪೂಜಿಸುತ್ತಲಿತ್ತು.

೫೭. ರಾಜೇಂದ್ರನೇ ! ಗಜೇಂದ್ರನು ವಿಷ್ಣುಭಕ್ತಿಯಿಂದ ಕೂಡಿ ಅಲ್ಲಿದ್ದಿದ್ದ ರಿಂದ ಹಸ್ತಿಶೈಲವೆಂದು ಆ ಗಿರಿಯು ಕರೆಯಲ್ಪಟ್ಟಿತು. ಆ ಪರ್ವತದ ಸುತ್ತಲು ದಶ ಯೋಜನ ಪರಿಮಾಣದ ವಿಶಾಲದೇಶದಲ್ಲಿ ಒಂದು ಗಹನವಾದ ಅರಣ್ಯವಿದ್ದಿತು.

೫೮. ಅದು ದುಷ್ಟಸರ್ಪ, ವ್ಯಾಘ್ರ ಮುಂತಾದ ಭಯಂಕರ ಪ್ರಾಣಿಗಳಿಂದ ಪರಿವೃತವಾದ್ದರಿಂದ ರೋಮಾಂಚವನ್ನುಂಟುಮಾಡುವಂತೆ ಇದ್ದಿತು. ಭಯಗ್ರಸ್ತ ರಾಗಿದ್ದ ಸಕಲ ದಾನವರು ಆ ವನವನ್ನು ಪ್ರವೇಶಿಸಿದರು.

೫೯. ಭಯಪೀಡಿತರಾದ ದಾನವರು ಆ ವನವನ್ನು ಹೊಕ್ಕು ಅಲ್ಲಿದ್ದ ಮರ, ಪೊದೆ, ಪರ್ವತ, ಶಿಲಾ, ಮೃಗ, ಮತ್ತು ಪಕ್ಷಿಗಳ ಸಮೂಹವನ್ನು ಎಲ್ಲ ನೃಸಿಹ್ಮರೂಪ ವನ್ನಾಗಿ ಭ್ರಮಿಸುತ್ತಲಿದ್ದರು.

ಮಾಕ್ಷಿಕಾದಪಿ ಚೋಡ್ಡೀನಾತ್ ಪರ್ಣಾತ್ ಪ್ರಚಲಿತಾದಪಿ ।
ಭೀತಾಃ ಪ್ರಕಂಪಿತಧಿಯಃ ನಿಲಿಲ್ಯುಃ ಕಾನನೇ ಕ್ವಚಿತ್ ॥ ೬೦ ॥

ಶೈಲಸ್ಯೋಪತ್ಯಕಾಗರ್ತೇ ಹಸ್ತಿನಾಮ್ನಃ ಪರಂತಪ ।
ಪ್ರಲೀನಾಸ್ತತ್ರ ತೇ ಸರ್ವೇ ಕಿಂಚಿದ್ಭಯವಿವರ್ಜಿತಾಃ ॥ ೬೧ ॥

ಮಂದಮಂದಂ ಜಜಲ್ಪುಶ್ಚ ನೃಸಿಹ್ಮಾಗಮಶಂಕಯಾ ।
ಕಿಂ ಕುರ್ಮೋಽದ್ಯ ಕ್ವ ವಾ ಯಾಮಃ ಕೋ ವಾ ನಃ ಶರಣಂ ಭವೇತ್

ಕಸ್ಯಾಶ್ರಮಬಿಲಂ ವೀಕ್ಷ್ಯ ನ ನೋ ಹನ್ಯಾನ್ನೃಕೇಸರೀ ।
ಇತಿ ತೇಷು ಬ್ರುವಾಣೇಷು ಭೀತೇಷ್ವಸುರಪುಂಗವಃ ॥ ೬೩ ॥

ಕಾಲಿನೇಮಿಸ್ತು ತಾನ್ ಸರ್ವಾನ್ ಸಮಾಭಾಷ್ಯೇದಮಬ್ರವೀತ್ ।
ಶೃಣುಧ್ವಮಸುರಾಃ ಸರ್ವೇ ಯದ್ಬ್ರವೀಮಿ ವಚೋ ಮಮ ॥ ೬೪ ॥

---

೬೦. ಅಲ್ಲಿ ಅಕಸ್ಮಾತ್ತಾಗಿ ಒಂದು ನೊಣವು ಹಾರಿದ ಶಬ್ದದಿಂದಲೂ ಒಣಗಿದ ಎಲೆಯು ಚಲಿಸಿರುವ ಶಬ್ದದಿಂದಲೂ ಅತ್ಯಂತ ಭೀತರೂ ನಡುಗುತ್ತಿರುವ ಬುದ್ಧಿಯುಳ್ಳವರೂ ಆಗಿ ಆ ಅರಣ್ಯದ ಯಾವುದಾದರೊಂದು ಮೂಲೆಯಲ್ಲಿ ಅಡಗಿಕೊಳ್ಳುತ್ತಲಿದ್ದರು.

೬೧. ಶತ್ರುಂಜಯನಾದ ರಾಜನೇ! ಆ ಹಸ್ತಿಶೈಲದ ಸಮೀಪ ಭೂಮಿಯ ಹಳ್ಳದ ಗರ್ಭದಲ್ಲಿ ಅವಿತುಕೊಂಡು ಸ್ವಲ್ಪ ಮಾತ್ರ ಭಯನಿರ್ಮುಕ್ತರಾದರು.

೬೨. ಮತ್ತು ನೃಸಿಹ್ಮನು ಅಲ್ಲಿಗೂ ಎಲ್ಲಿ ಬರುವನೋ ಎಂಬ ಶಂಕೆಯಿಂದ ಮೆಲ್ಲಮೆಲ್ಲನೆ ಮಾತನಾಡಿಕೊಂಡರು. ಈ ಸಂದರ್ಭದಲ್ಲಿ ನಾವೇನು ಮಾಡೋಣ, ಎಲ್ಲಿಗೆ ಹೋಗಿ ಸೇರೋಣ, ನಮ್ಮೆಲ್ಲರಿಗೆ ಶರಣಪ್ರದನು ಯಾರು ಲಭಿಸುವನು?

೬೩. ದಾನವಾರಿಯಾದ ನರಸಿಹ್ಮನು ಯಾವ ಪವಿತ್ರಕ್ಷೇತ್ರದ ಮಹಿಮಾಬಲವನ್ನು ಕಂಡು ನಮ್ಮೆಲ್ಲರನ್ನು ಕೊಲ್ಲದಿರುವನು, ಈ ರೀತಿಯಾಗಿ ಆ ಅಸುರರು ಬಹು ಭೀತರಾಗಿ ಮಾತನಾಡಿಕೊಳ್ಳುತ್ತಲಿದ್ದರು.

೬೪. ಆಗ ಅಲ್ಲಿರುವ ದಾನವರಲ್ಲಿ ಶ್ರೇಷ್ಠನಾದ ಕಾಲನೇಮಿಯೆಂಬ ಅಸುರನು ಅವರನ್ನೆಲ್ಲರನ್ನು ಸಂಬೋಧಿಸಿ ಈ ಮಾತನ್ನು ಆಡಿದನು. ಸಕಲ ದಾನವರೇ! ನಾನು ಹೇಳುವ ವಚನವನ್ನು ನೀವೆಲ್ಲರೂ ಕೇಳಿರಿ.

ಯಥಾ ನೃಸಿಹ್ಮಶ್ಚೋದ್ವೇಗಾತ್ ಪಲಾಯನಪರೋ ಭವೇತ್ ।
ಯಮಾಶ್ರಿತ್ಯ ವಯಂ ಸರ್ವೇ ಭವೇಮ ಭಯವರ್ಜಿತಾಃ ॥ ೬೫ ॥

ತಂ ವಯಂ ಲೋಕಕರ್ತಾರಂ ವ್ರಜಾಮಃ ಶರಣಂ ಭವಂ ।
ತ್ರಿಪುರಘ್ನಂ ತ್ರಿಲೋಕೇಶಂ ದಕ್ಷಾಧ್ವರಹರಂ ಹರಂ ॥ ೬೬ ॥

ಸ ಏವ ಕರ್ತಾ ಲೋಕಸ್ಯ ಹರ್ತಾ ಭಕ್ತಜನಾಶ್ರಯಃ ।
ಸಂಪೂಜಿತಃ ಕ್ಷಣಾದೇವ ಭಕ್ತಾನಾಮಿಷ್ಟದೋ ಭವೇತ್ ॥ ೬೭ ॥

ಇತಿ ತಸ್ಯ ವಚಃ ಶ್ರುತ್ವಾ ಸರ್ವೇ ದಾನವಪುಂಗವಾಃ ।
ಉತ್ತಸ್ಥುರ್ಹೃಷ್ಟರೋಮಾಣಃ ಶಂಭುಮಭ್ಯರ್ಚಿತುಂ ತದಾ ॥ ೬೮ ॥

ಸಂಸ್ಥಾಪ್ಯ ಲಿಂಗಂ ರುದ್ರಸ್ಯ ಪೂಜಾರ್ಥಂ ಸಮಪೂಜಯನ್ ।
ಸತ್ಯಂ ನಾಥೋ ಭವೇಚ್ಛಂಭುರಸ್ಮಾಕಮಿತಿ ದಾನವಾಃ ॥ ೬೯ ॥

---

೬೫. ನೃಸಿಹ್ಮನು ಕೂಡ ಯಾವ ಬಲದಿಂದ ಭಯಪಟ್ಟು ಪಲಾಯನಮಾಡ ಬಹುದೋ, ಮತ್ತು ಯಾವ ಅವಲಂಬನದಿಂದ ನಾವೆಲ್ಲರೂ ನಿರ್ಭಯರಾಗುವೆವೋ ಅಂತಹ ಬಲೋಪಾಯವನ್ನು ಹೇಳುವೆನು.

೬೬. ನಾವು ಲೋಕನಿರ್ಮಾತನೂ, ತ್ರಿಪುರಾಸುರನನ್ನು ಸಂಹರಿಸಿದವನೂ, ತ್ರಿಲೋಕಾಧಿಪತಿಯೂ, ಮತ್ತು ದಕ್ಷಬ್ರಹ್ಮನ ಯಜ್ಞವನ್ನು ವಿಧ್ವಂಸನಮಾಡಿದವನೂ ಆದ ಸಕಲ ಜಗತ್ಕಾರಣನಾದ ಈಶ್ವರನನ್ನು ಶರಣಹೊಂದೋಣ.

೬೭. ಆ ಪರಮೇಶ್ವರನೊಬ್ಬನೇ ಲೋಕವನ್ನು ಸೃಜಿಸುವವನು, ಪ್ರಪಂಚ ವನ್ನು ಸಂಹರಿಸುವನು, ಭಕ್ತ ಜನರಿಗೆ ಆಶ್ರಯದಾತನು, ಮತ್ತು ತನ್ನನ್ನು ಪೂಜಿ ಸಿದ ಭಕ್ತರಿಗೆ ನಿಮಿಷಮಾತ್ರದಿಂದ ಅವರ ಇಷ್ಟವನ್ನು ಪ್ರದಾನಮಾಡುವವನು.

೬೮. ಕಾಲನೇಮಿಯ ಈ ವಚನವನ್ನು ಕೇಳಿ ಆ ದಾನವೋತ್ತಮರೆಲ್ಲರೂ ಈ ಉಪಾಯಪ್ರಾಪ್ತಿಯಿಂದ ಉಂಟಾದ ಆನಂದದಿಂದ ರೋಮಾಂಚಿತವಾದ ದೇಹವುಳ್ಳವ ರಾಗಿ ಆಗ ಈಶ್ವರನನ್ನು ಪೂಜಿಸುವ ಸಂಕಲ್ಪದಿಂದ ಮೇಲಕ್ಕೆ ಎದ್ದರು.

೬೯. ಪೂಜಾರ್ಹವಾದ ರುದ್ರದೇವನ ಲಿಂಗವನ್ನು ದಾನವರು ಪ್ರತಿಷ್ಠೆಮಾಡಿ ಅನಾಥರಾದ ನಮ್ಮೆಲ್ಲರಿಗೆ ರುದ್ರನು ನಾಥನಾಗಲೆಂದು ಪ್ರಾರ್ಥಿಸಿ ಪೂಜಿಸಿದರು.

ಯಸ್ಮಾದಪೂಜಯನ್ ಸರ್ವೇ ಲಿಂಗಂ ಪಾರ್ಥಿವಮಾದರಾತ್ ।
ತಸ್ಮಾತ್ ತತ್ಸತ್ಯನಾಥಾಖ್ಯಂ ಸ್ಥಾನಂ ರುದ್ರಸ್ಯ ಭೂತಲೇ ॥ ೭೦ ॥

ಹಸ್ತಿಶೈಲಸ್ಯ ವಾಯುವ್ಯೇ ದೇಶೇ ತಲ್ಲಿಂಗಮುತ್ತಮಂ ।
ಅಸಮಾಪ್ತೇ ತತಸ್ತೇಷಾಂ ರುದ್ರಸ್ಯ ಬಲಿಕರ್ಮಣಿ ॥ ೭೧ ॥

ಅಕಸ್ಮಾತ್ ಕಂಪಿತಾ ಭೂಮಿಃ ಸನಾಗಾದ್ರಿವನಾ ತದಾ ।
ವೃಕ್ಷಾಃ ಪ್ರಕಂಪಿತಾಃ ಸರ್ವೇ ಧಾವಂತಿ ಮೃಗಪಕ್ಷಿಣಃ ॥ ೭೨ ॥

ಭೀತಾಸ್ತೇ ದಾನವಾಃ ಸರ್ವೇ ಕಿಮೇತದಿತಿ ಸಂಭ್ರಮಾತ್ ।
ಶುಶ್ರುವುಶ್ಚ ತದಾ ಶಬ್ದಂ ಬ್ರಹ್ಮಾಂಡಸ್ಫೋಟಸನ್ನಿಭಂ ॥ ೭೩ ॥

ಗರ್ಜತೋ ನರಸಿಹ್ಮಸ್ಯ ದಾನವಾನ್ ಪ್ರತಿಜಘ್ನುತಃ ।
ದದೃಶುಶ್ಚಾಪಿ ದೈತೇಯಾನ್ ನೃಸಿಹ್ಮೇಣ ಪ್ರಧಾವಿತಾನ್ ॥ ೭೪ ॥

---

೭೦. ಯಾವ ಕಾರಣದಿಂದ ಆದರದಿಂದ ಸರ್ವ ದಾನವರು ಪಾರ್ಥಿವ ಲಿಂಗವನ್ನು ಪೂಜಿಸಿದರೋ, ಅದರಿಂದ ಆ ಸ್ಥಾನವು ಭೂತಲದಲ್ಲೆಲ್ಲ ಸತ್ಯನಾಥವೆಂದು ನಾಮಾಂಕಿತವಾಯಿತು.

೭೧-೭೨. ಆ ದಾನವರಿಂದ ಪೂಜಿಸಲ್ಪಟ್ಟ ಉತ್ತಮವಾದ ಲಿಂಗವು ಹಸ್ತಿಶೈಲದ ವಾಯುವ್ಯದೇಶದಲ್ಲಿ ಇರುವುದು. ತರುವಾಯ ದಾನವರು ಕೈಗೊಂಡಿರುವ ಆ ರುದ್ರಯಜ್ಞವು ಸಮಾಪ್ತಿಯಾಗುವುದರೊಳಗಾಗಿ ಅನೇಕ ಆನೆ ಮುಂತಾದ ಪ್ರಾಣಿಗಳಿಂದ ಕೂಡಿದ, ಬೆಟ್ಟ-ಅರಣ್ಯ ಮುಂತಾದುವುಗಳಿಂದ ವ್ಯಾಪ್ತವಾದ ಸಮಸ್ತ ಭೂಮಿಯೂ ಅಕಸ್ಮಾತ್ತಾಗಿ ಕಂಪಿಸಿತು. ಆ ಭೂಕಂಪದಿಂದ ಅಲ್ಲಿ ಹುಟ್ಟಿದ್ದ ಸಮಸ್ತ ವೃಕ್ಷಗಳೂ ನಡುಗಿದವು. ಮೃಗಪಕ್ಷಿಗಳು ಇಲ್ಲಿಂದಲ್ಲಿಗೆ ಪಲಾಯನಮಾಡಿದವು.

೭೩. ಪೂಜಿಸುತ್ತಲಿದ್ದ ಆ ಎಲ್ಲ ದಾನವರು ಭೀತಿಗೊಂಡವರಾಗಿ ಗಾಬರಿಗೊಂಡು ಈ ಭೂಕಂಪಕ್ಕೆ ಏನು ಕಾರಣವೆನ್ನುವಷ್ಟರಲ್ಲಿ ಬ್ರಹ್ಮಾಂಡ ಕಪಾಲವು ಭೇದಿಸಿದಂತೆ ಆಗಿರುವ ಮಹಾಶಬ್ದವನ್ನು ಕೇಳಿದರು.

೭೪. ಆ ಶಬ್ದವು ಶತ್ರುಗಳಾದ ದಾನವರನ್ನು ಸಂಹರಿಸುತ್ತಲಿದ್ದ ನರಸಿಹ್ಮನ ಗರ್ಜನ ರೂಪವಾಗಿದ್ದಿತು. ಅಷ್ಟರಲ್ಲಿ ನೃಸಿಹ್ಮನಿಂದ ಧಾವಿಸಲ್ಪಟ್ಟ ಅನೇಕ ದೈತ್ಯರನ್ನು ಈ ದಾನವರು ಕಂಡರು.

ಭಿನ್ನಗಾತ್ರಾನಸೃಗ್ದಿಗ್ಧಾನ್ ಭಗ್ನಾನಾಪತತೋ ಭಯಾತ್ ।
ಹತಶೇಷಾನ್ನೃಸಿಂಹೇನ ದೃಷ್ಟ್ವಾ ಪ್ರಥಮಮಾಗತಾನ್ ॥ ೭೫ ॥

ಅತ್ರಾಪ್ಯಾಯಾತಿ ನೋ ಹಂತುಮಿತಿ ಪ್ರಾಣಪರೀಪ್ಸವಃ ।
ತಂ ರುದ್ರಬಲಿಮುತ್ಸೃಜ್ಯ ಭೀತಾಃ ಪ್ರವಿವಿಶುರ್ಗುಹಾಂ ॥ ೭೬ ॥

ಅಧಸ್ತಾದ್ಧಸ್ತಿಶೈಲಸ್ಯ ತಾಂ ವರಾಹೇಣ ನಿರ್ಮಿತಾಂ ।
ತದ್ಬಿಲಂ ತೇ ಪ್ರವಿಶ್ಯಾಶು ಪಾತಾಲಮಭಿದುದ್ರುವುಃ ॥ ೭೭ ॥

ನೃಸಿಂಹೋಽಪಿ ತತಃ ಸರ್ವಾನ್ ಹತ್ವಾ ಶತ್ರುಗಣಾನ್ ಪುನಃ ।
ಹತಾವಶಿಷ್ಟಾನ್ ದ್ರವತೋ ಭೀಷಯನ್ನನುದುದ್ರುವೇ ॥ ೭೮ ॥

ಚಕ್ರಮುದ್ಯಮ್ಯ ಹಸ್ತೇನ ಗರ್ಜನ್ ಘೋರಂ ಮುಹುರ್ಮುಹುಃ ।
ದಕ್ಷಿಣಾಂ ದಿಶಮುದ್ದಿಶ್ಯ ಯತ್ರ ತೇ ದಾನವಾ ಗತಾಃ ॥ ೭೯ ॥

೭೫. ಧಾವಿಸಿ ಬಂದ ದೈತ್ಯರು ಭಿನ್ನವಾದ ದೇಹವುಳ್ಳವರೂ, ರಕ್ತಪಾತದಿಂದ ಲೇಪಿಸಲ್ಪಟ್ಟವರೂ ಸರ್ವಾವಯವಗಳಲ್ಲಿಯೂ ಭಂಗವನ್ನು ಅನುಭವಿಸಿದವರೂ ಮತ್ತು ನರಸಿಹ್ಮಮೂರ್ತಿಯಿಂದ ಹತರಾದವರ ಗುಂಪಿನಿಂದ ತಪ್ಪಿ ಶಿಷ್ಟರಾದವರೂ ಆಗಿ ಭಯದಿಂದ ಮೊದಲು ಆ ಸ್ಥಳಕ್ಕೆ ಬಂದವರಾಗಿದ್ದರು.

೭೬. ನೃಸಿಹ್ಮನು ನಮ್ಮನ್ನು ಸಂಹರಿಸುವುದಕ್ಕೋಸ್ಕರ ಇಲ್ಲಿಗೆ ಕೂಡ ಬರುತ್ತಲಿರುವನೆಂದು ಭಾವಿಸಿ ಆ ಅಸುರರು ಭಯಪಟ್ಟು ಹೇಗಾದರೂ ಪ್ರಾಣವನ್ನು ಉಳಿಸಿಕೊಳ್ಳುವ ಮನೋರಥವುಳ್ಳವರಾಗಿ ಆ ರುದ್ರನ ಪೂಜಾಕರ್ಮವನ್ನು ಬಿಟ್ಟು ಗುಹೆಯನ್ನು ಪ್ರವೇಶಮಾಡಿದರು.

೭೭. ಹಸ್ತಿಪರ್ವತದ ಅಧೋಭಾಗದಲ್ಲಿ ವರಾಹಮೂರ್ತಿಯಿಂದ ರಚಿಸಲ್ಪಟ್ಟ ಗುಹೆಯ ಬಿಲವನ್ನು ಪ್ರವೇಶಿಸಿ ಶೀಘ್ರವಾಗಿ ಪಾತಾಲಕ್ಕೆ ಓಡಿಹೋದರು.

೭೮. ತರುವಾಯ ನೃಸಿಂಹನು ಶತ್ರುಗಳಾದ ಸಕಲ ರಾಕ್ಷಸರ ತಂಡವನ್ನು ಸಂಹರಿಸಿ ಮತ್ತೆ ಕೊಂದು ಮಿಕ್ಕ ಭೀತಿಯಿಂದ ಓಡುತ್ತಲಿದ್ದ ಕೆಲವು ರಾಕ್ಷಸರನ್ನು ಹಿಂದಟ್ಟಿಸಿಕೊಂಡು ಹೋದನು.

೭೯. ಆ ದಾನವರು ಓಡಿಹೋದ ದಕ್ಷಿಣದಿಕ್ಕಿಗೆ ಅಭಿಮುಖವಾಗಿ ಅವರನ್ನು ಹಿಂದಟ್ಟಿಕೊಂಡು ಹಸ್ತದಿಂದ ಚಕ್ರಾಯುಧವನ್ನು ಮೇಲಕ್ಕೆತ್ತಿ ಮತ್ತೆ ಮತ್ತೆ ಘೋರವಾಗಿ ಗರ್ಜಿಸುತ್ತ ನೃಸಿಂಹನು ಸಂಚರಿಸಿದನು.

ಯತ್ರ ಸತ್ಯವ್ರತಂ ನಾಮ ಕ್ಷೇತ್ರಂ ಪಾಪಪ್ರಣಾಶನಂ ।
ಪುಣ್ಯವೃಕ್ಷಲತಾಗುಲ್ಮಂ ಪುಣ್ಯೋಪವನಶೋಭಿತಂ ॥ ೬೦ ॥

ಕುಲ್ಯಾಪಲ್ವಲಕಾಸಾರವಾಪೀಕೂಪಶತೈರ್ಯುತಂ ।
ವರಾಹವ್ಯಾಘ್ರಮಹಿಷಋಕ್ಷಹರ್ಯಕ್ಷಕುಂಜರೈಃ ॥ ೬೧ ॥

ಅನ್ಯೈರ್ನಾನಾವಿಧಾಕಾರೈರ್ವಿವರ್ಣೈಶ್ಚ ಮೃಗೈರ್ಯುತಂ ।
ಚೂತಪುನ್ನಾಗವಕುಲಕೇಸರೋದ್ದಾಲಕಾದಿಭಿಃ ॥ ೬೨ ॥

ಅನ್ಯೈಶ್ಚ ವಿವಿಧೈರ್ವೃಕ್ಷೈರ್ಯುತಂ ಕೂಜದ್ವಿಹಂಗಮೈಃ ।
ದೇವಗಂಧರ್ವಸಿದ್ಧೈಶ್ಚ ಸೇವಿತಂ ಪರಮರ್ಷಿಭಿಃ ॥ ೬೩ ॥

---

೬೦. ದಾನವರನ್ನು ಬೆನ್ನಟ್ಟಿಹೋದ ನೃಸಿಂಹನು ಭಕ್ತರ ಸಕಲ ಪಾಪಗಳನ್ನು ದೂರಮಾಡುವ ಸತ್ಯವ್ರತವೆಂಬ ಕ್ಷೇತ್ರದಿಂದ ಕೂಡಿರುವುದೂ, ಪವಿತ್ರವಾದ ವೃಕ್ಷ-ಲತಾ-ಗುಲ್ಮಗಳಿಂದ ತುಂಬಿರುವುದೂ, ಮತ್ತು ಪವಿತ್ರವಾದ ಉಪವನಗಳಿಂದ ಶೋಭಿಸುವುದೂ ಆದ ವನವನ್ನು ಪ್ರವೇಶಿಸಿದನು.

೬೧. ಮತ್ತು ಆ ವನವು ಕಾಲುವೆ, ಚಿಕ್ಕ ಸರೋವರ, ಮಹಾತಟಾಕ, ವಾಪೀ ಕೂಪ, ಮುಂತಾದ ಅನೇಕ ಜಲಾಶಯಗಳಿಂದಲೂ, ಹಂದಿ, ಹುಲಿ, ಕೋಣ, ಕರಡಿ, ಸಿಂಹ, ಆನೆ, ಮುಂತಾದ ಪ್ರಾಣಿಗಳಿಂದಲೂ ಪೂರ್ಣವಾಗಿದ್ದಿತು.

೬೨. ಈ ಪ್ರಾಣಿಗಳಲ್ಲದೆ ನಾನಾವಿಧವಾದ ಆಕಾರ, ವಿವಿಧವಾದ ವರ್ಣಗಳಿಂದ ಕೂಡಿದ ಇತರ ವಿಚಿತ್ರಪ್ರಾಣಿಗಳೂ, ಚೂತ, ಪುನ್ನಾಗ, ವಕುಲ, ಕೇಸರ, ಉದ್ದಾಲಕವೆಂಬ ಬಗೆಬಗೆಯ ವೃಕ್ಷಗಳೂ ಆ ವನದಲ್ಲಿ ತುಂಬಿಕೊಂಡಿದ್ದವು.

೬೩. ಮತ್ತು ಪಕ್ಷಿಗಳು ಶಬ್ದಮಾಡುತ್ತ ಕುಳಿತುಕೊಂಡಿದ್ದ ಅನೇಕ ವಿಧದ, ವೃಕ್ಷಗಳೂ ಶೋಭಿಸುತ್ತಲಿದ್ದವು. ದೇವತೆಗಳು, ಗಂಧರ್ವರು, ಸಿದ್ಧರು, ಮತ್ತು ಮಹಾತ್ಮರಾದ ಮುನಿಗಳು ಆ ಪವಿತ್ರವನವನ್ನು ಸೇವಿಸಿಕೊಂಡಿದ್ದರು.

ತತ್ರ ಗತ್ವಾ ವನೇ ರಾಜನ್ ನರಸಿಂಹೋ ಮಹಾಬಲಃ ।
ದೃಷ್ಟ್ವಾ ತಚ್ಚ ವರಾಹಾಖ್ಯಮನಂತಾಖ್ಯಂ ಚ ಯತ್ಸರಃ ॥ ೮೪ ॥

ತತ್ತೀರಾನಿಲಸಂಸ್ಪೃಷ್ಟೋ ಬಭೂವ ವಿಗತಕ್ಲಮಃ ।
ಅದೃಷ್ಟ್ವಾ ತತ್ರ ದೈತೇಯಾನ್ ದಧ್ಯೌ ತೇ ಕ್ವ ಗತಾ ಇತಿ ॥ ೮೫ ॥

ತತೋ ದೃಷ್ಟ್ವಾ ಗುಹಾಂ ರಮ್ಯಾಂ ಹರಿರ್ಹಸ್ತಿಗಿರೇರಧಃ ।
ಪ್ರವಿಶ್ಯ ತಾಂ ಗುಹಾಂ ತತ್ರ ದದರ್ಶ ಬಿಲಮದ್ಭುತಂ ॥ ೮೬ ॥

ದಂಷ್ಟ್ರಯಾ ದಾರಿತಂ ಪೂರ್ವಂ ಸ್ವೇನೈವ ಕಿಟಿರೂಪಿಣಾ ।
ತತ್ರ ಜ್ಞಾತ್ವಾಽಸುರಾನ್ ಭೀತ್ಯಾ ಬಿಲಾತ್ಪಾತಾಲಮಾಶ್ರಿತಾನ್ ॥ ೮೭ ॥

ತತ್ರೈವ ತದ್ಬಿಲದ್ವಾರೇ ಗುಹಾಯಾಂ ಹಸ್ತಿಭೂಭೃತಃ ।
ನ್ಯವಸದ್ಧಂತುಕಾಮೋ ವೈ ದಾನವಾನ್ ಪುನರಾಗತಾನ್ ॥ ೮೮ ॥

---

೮೪. ರಾಜನೇ! ಮಹಾವಿಕ್ರಮಶಾಲಿಯಾದ ನರಸಿಂಹಸ್ವಾಮಿಯು ಆ ವನಕ್ಕೆ ಹೋಗಿ ವರಾಹ, ಮತ್ತು ಅನಂತವೆಂಬ ಹೆಸರಿನಿಂದ ಪ್ರಸಿದ್ಧವಾದ ಆ ಸರೋವರವನ್ನು ನೋಡಿದನು.

೮೫. ಶತ್ರುಗಳನ್ನು ಎದುರಿಸಲು ವೇಗದಿಂದ ಬಂದಾಗ ಆ ಸರೋವರದ ತೀರದ ಗಾಳಿಯ ಸಂಪರ್ಕದಿಂದ ನೃಸಿಂಹಸ್ವಾಮಿಗೆ ಯುದ್ಧ ಸಂಭ್ರಮದಿಂದ ಉಂಟಾಗಿದ್ದ ಆಯಾಸವು ಶಾಂತವಾಯಿತು. ಅಲ್ಲಿ ರಾಕ್ಷಸರನ್ನು ಕಾಣದೆ ರಾಕ್ಷಸರೆಲ್ಲರೂ ಇಲ್ಲಿಂದ ಯಾವ ಸ್ಥಳಕ್ಕೆ ಹೋಗಿರಬಹುದೆಂದು ಯೋಚಿಸಿದನು.

೮೬. ಅನಂತರದಲ್ಲಿ ಹಸ್ತಿಪರ್ವತದ ಅಧೋಭಾಗದಲ್ಲಿರುವ ರಮಣೀಯವಾದ ಗುಹೆಯನ್ನು ಕಂಡು ಪ್ರವೇಶಮಾಡಿ ಅಲ್ಲಿದ್ದ ಅದ್ಭುತವಾದ ಒಂದು ಬಿಲವನ್ನು ನೋಡಿದನು.

೮೭. ಈ ನರಸಿಂಹಾವತಾರಕ್ಕೆ ಮೊದಲನೆಯ ವರಾಹಾವತಾರದಲ್ಲಿ ತಾನೇ ಕೋರೆದಾಡೆಯಿಂದ ಮಾಡಿರುವ ಬಿಲವನ್ನು ಕಂಡು ಅಸುರರೆಲ್ಲರೂ ಭಯಪಟ್ಟುನಿಲ್ಲಲಾರದೆ ಅಲ್ಲಿದ್ದ ಆ ಬಿಲದ ಮೂಲಕವಾಗಿ ಪಾತಾಲಕ್ಕೆ ಹೋಗಿರುವರೆಂದು ತಿಳಿದನು.

೮೮. ಹಸ್ತಿಪರ್ವತದ ಗುಹೆಯ ದ್ವಾರ ಪ್ರದೇಶದಲ್ಲಿ ಯಾವಾಗಲಾದರೂ ಆ ಬಿಲದಿಂದ ಮತ್ತೆ ಮೇಲಕ್ಕೆ ಬಂದ ರಾಕ್ಷಸರನ್ನು ಸಂಹರಿಸಬೇಕೆಂಬ ಇಷ್ಟದಿಂದ ನರಸಿಂಹನು ಅಲ್ಲಿಯೇ ವಾಸಮಾಡಿದನು.

ಯಸ್ಮಾತ್ತತ್ರಾವಸದ್ದೇವೋ ದೇವಸಂಘೈರಭಿಷ್ಟುತಃ ।
ತಸ್ಮಾತ್ ಸತ್ಯವ್ರತಂ ಕ್ಷೇತ್ರಂ ನಾರಸಿಹ್ಮಮಭೂನ್ನೃಪ ॥ ೮೯ ॥

ನಾರಸಿಹ್ಮಮುಪಾಖ್ಯಾನಂ ಶೃಣ್ವಂತಿ ಚ ಪಠಂತಿ ಯೇ ।
ಸಂಭೃತಾಃ ಸಕಲೈರರ್ಥೈರ್ಭವಂತಿ ಮನುಜಾ ಭುವಿ ॥ ೯೦ ॥

ಹತ್ವಾ ನೃಸಿಹ್ಮೋ ದನುಜೇಂದ್ರಮುದ್ಧತಂ
ದತ್ವಾಽಭಯಂ ದೈತ್ಯಪತೇಃ ಸುತಾಯ ।
ಕೃತ್ವಾ ಮಹೀಂ ದುರ್ಜನಭಾರವರ್ಜಿತಾಂ
ಗತ್ವಾಽಥ ನಾಗಾದ್ರಿದರೀಮುವಾಸ ಹ ॥ ೯೧ ॥

ಇತಿ ಶ್ರೀ ಕಾಂಚೀ ಮಾಹಾತ್ಮ್ಯೇ ತೃತೀಯೋಽಧ್ಯಾಯಃ

---

೮೯. ರಾಜನೇ! ಯಾವ ಕಾರಣದಿಂದ ದಯಾಮಯನಾದ ಸ್ವಾಮಿಯು ದಾನವ ಸಂಹಾರವ್ರತದ ವ್ಯಾಜದಿಂದ ದೇವತೆಗಳ ಸಂಘದಿಂದ ಸ್ತುತಿಸಲ್ಪಡುತ್ತ ಅಲ್ಲಿ ವಾಸಮಾಡಿದನೋ, ಆ ಕಾರಣದಿಂದ ಸತ್ಯವ್ರತವೆಂಬ ಆ ಕ್ಷೇತ್ರವು ನಾರಸಿಂಹ ಕ್ಷೇತ್ರವೆಂಬ ಪ್ರಸಿದ್ಧಿಯನ್ನು ಸಂಪಾದಿಸಿತು.

೯೦. ಭೂಲೋಕದಲ್ಲಿ ಈ ನರಸಿಂಹೋಪಾಖ್ಯಾನವನ್ನು ಭಕ್ತಿಯಿಂದ ಶ್ರವಣ ಅಥವಾ ಪಠನಮಾಡುವ ಮನುಜರು ಸಕಲ ಕಾಮಿತಾರ್ಥಗಳ ಸಮೃದ್ಧಿಯಿಂದ ಪೂರ್ಣರಾಗಿರುವರು.

೯೧. ಈ ರೀತಿಯಾಗಿ ನರಸಿಂಹಸ್ವಾಮಿಯು ಮದಾಂಧನಾದ ಅಸುರರಾಜನನ್ನು ಕೊಂದು, ಅವನ ಪುತ್ರನಾದ ಭಕ್ತಪ್ರಹ್ಲಾದನಿಗೆ ಅಭಯವನ್ನು ದಾನಮಾಡಿ ದುರ್ಜನರಿಂದ ಉಂಟಾದ ಭೂಭಾರವನ್ನು ದುಷ್ಟನಿಗ್ರಹದಿಂದ ಇಳಿಸಿ ಅನಂತರದಲ್ಲಿ ಹಸ್ತಿ ಪರ್ವತದ ಗುಹೆಯಲ್ಲಿ ವಾಸಮಾಡಿದನು. ಇದುನರಸಿಂಹೋಪಾಖ್ಯಾನದ ಸಾರಾಂಶವು.

ಕಾಂಚೀಮಾಹಾತ್ಮ್ಯದಲ್ಲಿ ತೃತೀಯೋಧ್ಯಾಯವು ಮುಗಿದುದು.

ಶ್ರೀಃ

अथ ಬ್ರಹ್ಮಾಂಡಪುರಾಣಾಂತರ್ಗತೇ

ಕಾಂಚೀ ಮಾಹಾತ್ಮ್ಯೇ

ಚತುರ್ಥೋಽಧ್ಯಾಯಃ

ನಾರದ ಉವಾಚ:—

ಶೃಣು ರಾಜನ್ ಪ್ರವಕ್ಷ್ಯಾಮಿ ವಚಸ್ತದ್ಬ್ರುವತೋ ಮಮ ।
ಯಚ್ಛ್ರುತ್ವಾ ಮನುಜಃ ಪಾಪಾನ್ಮುಕ್ತೋ ಮೋಕ್ಷಮವಾಪ್ನುಯಾತ್

ಯಸ್ಮಿನ್ ದೇಶೇ ನೃಪಶ್ರೇಷ್ಠ ಬ್ರಾಹ್ಮಣಾ ವೇದಪಾರಗಾಃ ।
ಬಹ್ಮಿಷ್ಠಾ ವಿಷ್ಣುಭಕ್ತಾಶ್ಚ ವಿಷ್ಣುವ್ರತಪರಾಯಣಾಃ ॥ ೨ ॥

ನಿವಸಂತ್ಯಗ್ನಿಸದೃಶಾಃ ಸ ದೇಶಃ ಪುಷ್ಕರಾಭಿಧಃ ।
ಯಸ್ಮಿನ್ ದೇಶೇ ಹ್ರದಾಃ ಪುಣ್ಯಾಃ ಸರಿತಃ ಸಾಗರಂಗಮಾಃ ॥ ೩ ॥

---

೧. ನಾರದ ಮುನಿಯು ಕಥೆಯನ್ನು ಈರೀತಿಯಾಗಿ ಮುಂದುವರಿಸಿದನು. ರಾಜನೇ! ವಿವಿಧ ಕಥಾಖ್ಯಾನಗಳನ್ನು ಹೇಳುತ್ತಿರುವ ನನ್ನ ಮಾತನ್ನು ಕೇಳು. ಪವಿತ್ರವಾದ ಈ ಕಥಾನಕಗಳನ್ನು ಕೇಳಿ ಮಾನವನು ಪಾಪದಿಂದ ಬಿಡುಗಡೆಹೊಂದಿ ಕಡೆಗೆ ಮುಕ್ತಿಯನ್ನು ಹೊಂದುವನು.

೨. ರಾಜಶ್ರೇಷ್ಠನೇ! ಯಾವಸ್ಥಳದಲ್ಲಿ ವೇದಪಾರಂಗತರೂ, ಬ್ರಹ್ಮನಿಷ್ಠರೂ, ವಿಷ್ಣುಭಕ್ತಿಪರಾಯಣರೂ, ವಿಷ್ಣುಪ್ರೀತಿಕರವಾದ ವ್ರತಾನುಷ್ಠಾನಗಳಲ್ಲಿ ತತ್ಪರರೂ ಮತ್ತು ಅಗ್ನಿಯಂತೆ ತೇಜಸ್ವಿಗಳೂ ಆದ ಬ್ರಾಹ್ಮಣರು ವಾಸಮಾಡುವರೋ ಅದು ಪುಷ್ಕರವೆಂಬ ಹೆಸರುಳ್ಳ ಪವಿತ್ರಕ್ಷೇತ್ರವು.

೩. ಯಾವ ಸ್ಥಳದಲ್ಲಿ ಪವಿತ್ರವಾದ ಮಡುಗಳು, ಸಾಗರಕ್ಕೆ ಸೇರುವ ಪುಣ್ಯ ಮಹಾನದಿಗಳು ಮತ್ತು ಅನೇಕ ರಮ್ಯವೂ ಪವಿತ್ರವೂ ಆದ ಪರ್ವತಗಳುಇರುವುವೋ, ಅದು ವಿಪುಷ್ಕರವೆಂದು ಹೆಸರುವಾಸಿಯಾದ ಕ್ಷೇತ್ರವು.

ಶೋಭಂತೇ ಪರ್ವತಾಶ್ಚೈವ ಸ ದೇಶೋ ಹಿ ನಿಪುಷ್ಕರಃ ।
ಯಸ್ಮಿನ್ ಹಂಸಾಶ್ಚ ಸಾರಂಗಾ ಮಯೂರಾಶ್ಚಮರಾಸ್ತಥಾ ॥ ೪ ॥

ದೇವರ್ಷಿಪಿತೃಗಂಧರ್ವಾ ವಸಂತಿ ಸ ಮಹೋದಯಃ ।
ಯಸ್ಮಿನ್ ದೇಶೇ ಸ್ವಯಂ ವಿಷ್ಣುರೇಕೋ ವಸತಿ ಕೇವಲಂ ॥ ೫ ॥

ದೇವದೇವೋ ಜಗನ್ನಾಥಃ ಸರ್ವಲೋಕಾಭಯಂಕರಃ ।
ಸ ದೇಶಃ ಪುಂಡರೀಕಾಖ್ಯಃ ಪುಂಡರೀಕಾಕ್ಷಸಂಶ್ರಿತಃ ॥ ೬ ॥

ದೇವಾ ವಿಷ್ಣುಃ ಸರಿತಶ್ಚಾದ್ರಯಶ್ಚ
ಹ್ರದಾಶ್ಚ ಪುಣ್ಯಾಃ ಪುಷ್ಕರಿಣ್ಯಶ್ಚ ಯತ್ರ ।
ಸ ವೈ ದೇಶಃ ಕಥಿತೋ ಭಾಸ್ಕರಾಖ್ಯಃ
ಪುಣ್ಯಪ್ರದಃ ಪಾಪಹರಶ್ಚ ನೃಣಾಂ ॥ ೭ ॥

ಅತಃ ಸತ್ಯವ್ರತಂ ಕ್ಷೇತ್ರಂ ಭಾಸ್ಕರಾಖ್ಯಮಭೂನ್ನೃಪ ।
ತತ್ರ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೮ ॥

---

೪. ಯಾವ ಸ್ಥಳದಲ್ಲಿ ಹಂಸ, ನವಿಲು, ಸಾರಂಗ, ಚಮರಮೃಗ, ಇವುಗಳು ಸಂಚರಿಸುವುವೋ ಮತ್ತು ದೇವತೆಗಳು, ಋಷಿಗಳು, ಪಿತೃಗಳು, ಮತ್ತು ಗಂಧರ್ವರು ವಾಸಮಾಡುವರೋ ಅದು ಮಹೋದಯವೆಂಬ ಕ್ಷೇತ್ರವು.

೫-೬. ದೇವೋತ್ತಮನೂ, ಜಗತ್ತಿಗೆಲ್ಲ ನಾಥನೂ, ಸರ್ವಲೋಕಗಳಿಗೆ ಅಭಯವನ್ನು ಪ್ರದಾನಮಾಡುವವನೂ, ಆದ ವಿಷ್ಣುಪರಮಾತ್ಮನು ತಾನೊಬ್ಬನೇ ಎಲ್ಲಿ ವಾಸಮಾಡುವನೋ, ಪುಂಡರೀಕಾಕ್ಷನು ವಾಸಮಾಡಿರುವ ಆ ಸ್ಥಳವು ಪುಂಡರೀಕ ನಾಮಾಂಕಿತವಾದ ಪವಿತ್ರಕ್ಷೇತ್ರವು.

೭. ಅನೇಕ ದೇವತೆಗಳೂ, ವಿಷ್ಣುಪರಮಾತ್ಮನೂ, ಪುಣ್ಯನದಿಗಳೂ, ಪರ್ವತಗಳೂ ಪವಿತ್ರ ಹ್ರದಗಳೂ, ಪುಷ್ಕರಿಣಿಗಳೆಂಬ ಸರೋವರಗಳೂ, ಯಾವ ವಿಶಾಲದೇಶವನ್ನು ವ್ಯಾಪಿಸಿರುವುವೋ ಆ ದೇಶವು ಭಾಸ್ಕರವೆಂಬ ಹೆಸರುಳ್ಳ ದೇಶವೆಂದು ಪ್ರಾಜ್ಞರಿಂದ ಹೇಳಲ್ಪಟ್ಟಿದೆ. ಆ ದೇಶವನ್ನು ಸೇವಿಸಿದ ಮನುಜರ ಸಕಲ ಪಾಪವನ್ನು ನಿವಾರಿಸಿ ಆ ದೇಶವು ಮಹಾಪುಣ್ಯವನ್ನು ಕೊಡುವುದಾಗಿದೆ.

೮. ರಾಜನೇ! ಈ ಕಾರಣದಿಂದ ಸತ್ಯವ್ರತಕ್ಷೇತ್ರವು ಭಾಸ್ಕರಕ್ಷೇತ್ರವೆಂದೆನಿಸಿರುವುದು. ಅಲ್ಲಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮತ್ತು ಅನೇಕ ಮಹಾಮಹರ್ಷಿಗಳೂ ಕೂಡ ವಾಸಮಾಡುವರು.

ಸಂಪೂಜ್ಯ ದೇವದೇವೇಶಂ ಸಂಪ್ರಾಪ್ತಾಃ ಪರಮಾಂ ಗತಿಂ ।
ಪುಣ್ಯವೃದ್ಧಿಕರಂ ನೃಣಾಂ ಕ್ಷೇತ್ರಂ ಪಾಪಪ್ರಣಾಶನಂ ॥ ೯ ॥

ಶೈಲಾಶ್ಚ ಪುಷ್ಕರಿಣ್ಯಶ್ಚ ಹ್ರದಾ ನದ್ಯಶ್ಚ ಪುಣ್ಯದಾಃ ।
ಸಂತಿ ತತ್ರ ಮಹಾರಾಜ ಕ್ಷೇತ್ರೇ ಸತ್ಯವ್ರತೇ ಶುಭೇ ॥ ೧೦ ॥

ಸಮಂತಾದ್ಧಸ್ತಿಶೈಲಸ್ಯ ದಶಯೋಜನಮಾಯತಂ ।
ನಾನಾತೀರ್ಥಸಮಾಯುಕ್ತಂ ದೇವರ್ಷಿಗಣಸೇವಿತಂ ॥ ೧೧ ॥

ಪುಣ್ಯವೃಕ್ಷಲತಾಗುಲ್ಮಂ ಕ್ಷೇತ್ರಂ ವಿಷ್ಣುಪ್ರಿಯಂ ಶುಭಂ ।
ಧರ್ಮೋಽಪ್ಯಣುಸ್ತತ್ರ ಕೃತಃ ಸ್ಥೂಲೋ ಭವತಿ ಪಾರ್ಥಿವ ॥ ೧೨ ॥

ಅನೇಕೈಃ ಕಿಂ ಕೃತೈರ್ಧರ್ಮೈರನ್ಯತ್ರಾಲ್ಪಫಲಪ್ರದೈಃ ।
ಏಕಸ್ತತ್ರ ಕೃತೋ ಧರ್ಮೋ ವರ್ಧತೇ ಹಿ ಸಹಸ್ರಶಃ ॥ ೧೩ ॥

---

೯. ದೇವೋತ್ತಮನಾದ ವಿಷ್ಣುಪರಮಾತ್ಮನನ್ನು ದೇವಾದಿಗಳು, ಮಾನವರ ಸಕಲ ಪಾಪಗಳನ್ನು ನಿರ್ಮೂಲಮಾಡಿ ಪುಣ್ಯವನ್ನು ವೃದ್ಧಿಮಾಡುವ ಈ ಕ್ಷೇತ್ರದಲ್ಲಿ ಪೂಜೆಮಾಡಿ ಪರಮಗತಿಯಾದ ಮುಕ್ತಿಯನ್ನು ಹೊಂದಿರುವರು.

೧೦. ಮಹಾರಾಜನೆ! ಮಂಗಳಕರವಾದ ಆ ಸತ್ಯವ್ರತವೆಂಬ ಕ್ಷೇತ್ರದಲ್ಲಿ ಪುಣ್ಯಸಾಧನವಾದ ಅನೇಕ ಪರ್ವತಗಳು, ಪುಷ್ಕರಿಣೀಸರೋವರಗಳು, ಹ್ರದಗಳು ಮತ್ತು ನದಿಗಳು ಕೂಡ ಇರುತ್ತವೆ.

೧೧-೧೨. ಹಸ್ತಿಪರ್ವತದ ಸುತ್ತಲೂ ಹತ್ತುಯೋಜನ ಪರಿಮಾಣದಷ್ಟು ದೀರ್ಘವಾಗಿ ಅನೇಕ ತೀರ್ಥಗಳಿಂದ ಕೂಡಿದ್ದಾಗಿಯೂ ದೇವತೆಗಳಿಂದ ಮತ್ತು ಋಷಿಗಳಿಂದ ಅಲಂಕರಿಸಲ್ಪಟ್ಟಿರುವುದಾಗಿಯೂ ಪವಿತ್ರವಾದ ವೃಕ್ಷಲತಾಗುಲ್ಮಗಳಿಂದ ರಮ್ಯವಾಗಿಯೂ ಇರುವ ಈ ಕ್ಷೇತ್ರವು ವಿಷ್ಣುಪರಮಾತ್ಮನ ಪ್ರೀತಿಯನ್ನು ಉಂಟುಮಾಡುವುದೂ ಮಂಗಳಕರವೂ ಆಗಿರುವುದು. ರಾಜನೆ! ಆ ಪವಿತ್ರಕ್ಷೇತ್ರದಲ್ಲಿ ಅಲ್ಪಾಲ್ಪವಾಗಿ ಮಾಡಿರುವ ಧರ್ಮವು ಕ್ಷೇತ್ರಮಹಿಮೆಯಿಂದ ವಿಶಾಲವಾದ ಧರ್ಮವನ್ನಾಚರಿಸಿದಂತಾಗುವುದು.

೧೩. ಬೇರೆ ಕ್ಷೇತ್ರಗಳಲ್ಲಿ ಅಲ್ಪಫಲಗಳನ್ನು ಕೊಡುವ ಅನೇಕ ಧರ್ಮಗಳನ್ನು ಆಚರಿಸಿದ್ದರಿಂದ ಆಗುವುದೇನು? ಈ ಪವಿತ್ರಕ್ಷೇತ್ರದಲ್ಲಿ ಆಚರಿಸಿರುವ ಒಂದು ಧರ್ಮವು

ತತ್ರೈವ ಹಿ ಹರಿರ್ದೃಷ್ಟೋ ಬ್ರಹ್ಮಣಾ ಪರಮೇಷ್ಠಿನಾ ।
ಹಯಮೇಧೇನ ಯಜ್ಞೇನ ವಿಷ್ಣುಮಭ್ಯರ್ಚತಾ ಪುರಾ ॥ ೧೪ ॥

ವಿಮಾನೇ ಪುಣ್ಯಕೋಟ್ಯಾಖ್ಯೇ ಹಸ್ತಿಶೈಲಸ್ಯ ಮೂರ್ಧನಿ ।
ಪಾವನಂ ಪುಣ್ಯಕೋಟ್ಯಾಖ್ಯಂ ವಿಮಾನಂ ಪುಣ್ಯವರ್ಧನಂ ॥ ೧೫ ॥

ಸಕೃದ್ದರ್ಶನಮಾತ್ರೇಣ ಸಪ್ತಜನ್ಮಾಘನಾಶನಂ ।
ಕೋಟಿಂ ದೃಷ್ಟ್ವಾ ವಿಮಾನಸ್ಯ ಹಸ್ತಿಶೈಲಸ್ಯ ಮೂರ್ಧನಿ ॥ ೧೬ ॥

ನರಾಃ ಪಾತಕಿನೋಽ ವಾಪಿ ಸದ್ಯಃ ಪೂತಾ ಭವಂತಿ ಹಿ ।
ತಸ್ಮಾತ್ತತ್ಪುಣ್ಯಕೋಟ್ಯಾಖ್ಯಮಭೂತ್ ಪುಣ್ಯಪ್ರವರ್ಧನಾತ್ ॥ ೧೭ ॥

ಕೂಡ ಸಹಸ್ರಗುಣಿತವಾಗಿ ವೃದ್ಧಿಯಾಗುತ್ತದೆ. ಅನೇಕ ಧರ್ಮಾನುಷ್ಠಾನದಿಂದ ಅಲ್ಪಫಲಸಿದ್ಧಿಯನ್ನು ಕೊಡುವ ಇತರ ಕ್ಷೇತ್ರಗಳಿಗಿಂತ ಅಲ್ಪಮಾತ್ರ ಧರ್ಮಾನುಷ್ಠಾನದಿಂದ ಅನಂತಫಲಸಿದ್ಧಿಯನ್ನು ಕೊಡುವ ಈ ಕ್ಷೇತ್ರವು ಸರ್ವೋತ್ತಮವಾದುದು.

೧೪. ಪೂರ್ವದಲ್ಲಿ ಅಶ್ವಮೇಧಯಾಗವನ್ನು ಆಚರಿಸಿ ವಿಷ್ಣುವನ್ನು ಪೂಜಿಸುತ್ತಲಿದ್ದ, ಸರ್ವೋತ್ಕೃಷ್ಟವಾದ ದಿವ್ಯಸ್ಥಾನದಲ್ಲಿರುವ ಬ್ರಹ್ಮನಿಂದ ಹಸ್ತಿಶೈಲದ ಶಿಖರದಲ್ಲಿದ್ದ ಪುಣ್ಯಕೋಟಿ ಎಂಬ ಹೆಸರುಳ್ಳ ವಿಮಾನದಲ್ಲಿ ವಿಷ್ಣುವು ಸಾಕ್ಷಾತ್ಕರಿಸಲ್ಪಟ್ಟನು.

೧೫. ಆದುದರಿಂದ ಪುಣ್ಯಕೋಟಿಯೆಂಬ ನಾಮಾಂಕಿತವಾದ ಆ ವಿಮಾನವು ತನ್ನ ಹೆಸರಿನ ಪ್ರಸಿದ್ಧಿಯಂತೆ ಭಕ್ತರ ಪುಣ್ಯವನ್ನು ವೃದ್ಧಿಪಡಿಸುವುದೂ ಮತ್ತು ಒಂದುಸಲ ದರ್ಶನಮಾಡಿದ ಮಾತ್ರದಿಂದ ಏಳುಜನ್ಮಗಳಲ್ಲಿ ಆರ್ಜಿತವಾದ ಪಾತಕಗಳನ್ನು ಕಳೆಯುವುದೂ ಆಗಿದೆ.

೧೬. ಹಸ್ತಿಪರ್ವತದ ಶಿಖರಭಾಗದಲ್ಲಿದ್ದ ಈ ಪುಣ್ಯಕೋಟಿಯೆಂಬ ವಿಮಾನದ ಅಗ್ರವನ್ನು ಸಾಕ್ಷಾತ್ಕರಿಸಿದ ಪಾಪಿಗಳಾದ ಜನರೂ ಕೂಡ ತತ್ಕ್ಷಣದಲ್ಲಿ ಪವಿತ್ರರಾಗುವರು.

೧೭. ಹೀಗೆ ಭಕ್ತರ ಪುಣ್ಯಪುಂಜವನ್ನು ಅಭಿವೃದ್ಧಿಮಾಡುವನಿಮಿತ್ತದಿಂದ ಈ ವಿಮಾನವು ಪುಣ್ಯಕೋಟಿಯೆಂಬ ಪ್ರಸಿದ್ಧಿಯುಳ್ಳದ್ದಾಗಿದೆ.

ಜಂತುಭಿರ್ಯತ್ಕೃತಂ ಪುಣ್ಯಂ ತತ್ಕೋಟಿಗುಣಿತಂ ಭವೇತ್ ।
ಯಸ್ಯ ದರ್ಶನಮಾತ್ರೇಣ ತದಾಖ್ಯಾ ತೇನ ತಸ್ಯ ಹಿ ॥ ೧೮ ॥

ತತ್ರ ಕಾಂಚೀತಿ ವಿಖ್ಯಾತಾ ಪುರೀ ಪುಣ್ಯವಿವರ್ಧಿನೀ ।
ವಿಧಾತುರಶ್ವಮೇಧಾರ್ಥೇ ನಿರ್ಮಿತಾ ವಿಶ್ವಕರ್ಮಣಾ ॥ ೧೯ ॥

ಸಪ್ತಯೋಜನವಿಸ್ತೀರ್ಣಾ ಸಪ್ತಯೋಜನಮಾಯತಾ ।
ಪುಣ್ಯೋದ್ಯಾನವತೀ ರಮ್ಯಾ ಸಮಭೂಮೌ ಪ್ರತಿಷ್ಠಿತಾ ॥ ೨೦ ॥

ವಾಪೀಕೂಪತಟಾಕಾಢ್ಯಾ ಸರಿತ್ಪಲ್ವಲಮಂಡಿತಾ ।
ದೇವದಾನವಗಂಧರ್ವಸಿದ್ಧವಿದ್ಯಾಧರೋರಗೈಃ ॥ ೨೧ ॥

ಸಂತತಂ ಸೇವಿತಾ ವಿಪ್ರೈರ್ಬ್ರಹ್ಮಕಲ್ಪೈರ್ಮಹರ್ಷಿಭಿಃ ।
ಬ್ರಹ್ಮರ್ಷಿಗಣಸಂಪೂರ್ಣಾ ತಥಾ ರಾಜರ್ಷಿಭಿರ್ವೃತಾ । ॥ ೨೨ ॥

---

೧೮. ಮತ್ತು ಯಾವ ಈ ವಿಮಾನವನ್ನು ದರ್ಶನಮಾಡಿರುವುದರಿಂದ ಪ್ರಾಣಿಗಳು ಮಾಡಿರುವ ಅಲ್ಪಮಾತ್ರ ಪುಣ್ಯವು ಕೋಟಿಸಂಖ್ಯೆಯಷ್ಟು ಗುಣಿತವಾಗಿ ವೃದ್ಧಿಯಾಗುವುದೊ ಆ ವಿಮಾನವು ಅಂತಹ ಅನ್ವರ್ಥಗರ್ಭಿತವಾದ ಪುಣ್ಯಕೋಟಿಯೆಂಬ ಹೆಸರನ್ನು ಪಡೆದಿರುವುದು.

೧೯. ಅಲ್ಲಿ ಪುಣ್ಯಗಳನ್ನು ಹೆಚ್ಚಿಸುವ ಕಾಂಚೀ ಎಂಬ ಒಂದು ನಗರವು ಬ್ರಹ್ಮನು ವಿಷ್ಣುಪ್ರೀತಿಯನ್ನು ಉದ್ದೇಶಿಸಿ ಆಚರಿಸಿದ ಅಶ್ವಮೇಧಯಾಗಕ್ಕೋಸ್ಕರ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿದೆ.

೨೦. ಆ ಕಾಂಚೀನಗರವು ಏಳುಯೋಜನಗಳಷ್ಟು ದೀರ್ಘವಾಗಿಯೂ, ಪವಿತ್ರವಾಗಿಯೂ, ಅನೇಕ ಉದ್ಯಾನವನಗಳಿಂದ ರಮಣೀಯವಾಗಿಯೂ ಮತ್ತು ಸಮಭೂಮಿಯಲ್ಲಿ ಪ್ರತಿಷ್ಠೆಮಾಡಲ್ಪಟ್ಟಿರುವುದಾಗಿಯೂ ಇದೆ.

೨೧. ಮತ್ತು ವಾಪೀ, ಕೂಪ, ತಟಾಕ, ನದೀ, ಅಲ್ಪಸರೋವರ ಮುಂತಾದ ಅನೇಕ ಜಲಾಶಯಗಳಿಂದ ಪರಿಪೂರ್ಣವಾಗಿದೆ.

೨೨. ದೇವತೆಗಳು, ದಾನವರು, ಗಂಧರ್ವರು, ಸಿದ್ಧರು, ವಿದ್ಯಾಧರರು, ಸರ್ಪಗಳು, ಬ್ರಹ್ಮನಿಗೆ ಸಮಾನರಾದ ಬ್ರಾಹ್ಮಣರು ಮತ್ತು ಮಹರ್ಷಿಗಳಿಂದ ಸಂತತವೂ

ಅನ್ಯೈರ್ನಾನಾವಿಧೈಃ ಪುಣ್ಯೈಶ್ಚತುರ್ವರ್ಣೈರ್ಜನೈರ್ವೃತಾ ।
ಪಾಟಲಾಶೋಕಪುನ್ನಾಗವಕುಲಾಮಲಕಾಸನೈಃ ॥ ೨೩ ॥

ಕಪಿತ್ಥಪನಸಾಶ್ವತ್ಥವಟೋದುಂಬರತಿಂದುಕೈಃ ।
ಜಂಬ್ವಾಮ್ರತಿಂತ್ರಿಣೀಲೋಧ್ರನಾರಿಕೇಲಾರ್ಜುನಾದಿಕೈಃ ॥ ೨೪ ॥

ಅನ್ಯೈರ್ನಾನಾವಿಧೈರ್ವೃಕ್ಷೈಃ ಪುಷ್ಪೋಪಗಫಲೋಪಗೈಃ ।
ಸದಾ ಸರ್ವರ್ತುಕುಸುಮೈರ್ನತ್ಯೂಹಕುಲಸಂಕುಲೈಃ ॥ ೨೫ ॥

ಶುಕಬರ್ಹಿಬಕಕ್ರೌಂಚಷಟ್ಪದಾಲಾಪಸಂಕುಲೈಃ ।
ಪ್ರವೃದ್ಧಶಾಖೈರಗನ್ಯೈರ್ವಾಯುಕಂಪಿತಮಸ್ತಕೈಃ ॥ ೨೬ ॥

ಈ ನಗರಿಯು ಸೇವಿಸಲ್ಪಟ್ಟಿತ್ತು. ಮತ್ತು ಅನೇಕ ಬ್ರಹ್ಮರ್ಷಿಗಳೂ, ರಾಜರ್ಷಿಗಳೂ, ಇಲ್ಲಿ ತುಂಬಿಕೊಂಡಿದ್ದರು. ಅಲ್ಲದೆ ಸ್ವಧರ್ಮಾಚರಣೆಯಿಂದ ಪವಿತ್ರರಾದ ಚಾತುರ್ವರ್ಣ್ಯದ ನಾನಾವಿಧ ಪ್ರಜೆಗಳಿಂದ ಈ ನಗರವು ಪರಿಪೂರ್ಣವಾಗಿತ್ತು.

೨೩. ಈ ಪುರದಲ್ಲಿರುವ ಉದ್ಯಾನ ಮುಂತಾದ ರಮ್ಯಸ್ಥಳಗಳಲ್ಲಿ ಪಾದರಿ, ಅಶೋಕ, ಪುನ್ನಾಗ, ವಕುಲ, ಆಮಲಕ, ಅಸನವೆಂಬ ವೃಕ್ಷಗಳು ಶೋಭಿಸುತ್ತಿದ್ದುವು.

೨೪. ಮತ್ತು ಕಪಿತ್ಥ ಪನಸ, ಅಶ್ವತ್ಥ, ವಟ, ಉದುಂಬರ, ತಿಂದುಕ, ಜಂಬೂ, ಆಮ್ರ, ತಿಂತ್ರಿಣೀ, ಲೋಧ್ರ, ನಾರಿಕೇಳ, ಅರ್ಜುನ ಮುಂತಾದ ಅನೇಕ ವೃಕ್ಷಗಳು ಸಮೃದ್ಧಿಯಾಗಿದ್ದುವು.

೨೫. ಅಲ್ಲದೆ ಇತರ ಅನೇಕ ವೃಕ್ಷಗಳು, ಪುಷ್ಪಗಳ ಗೊಂಚಲುಗಳಿಂದಲೂ, ಮತ್ತು ಫಲಗಳ ಸ್ತೋಮಗಳಿಂದಲೂ, ಸರ್ವ ಋತುಗಳಲ್ಲಿ ಲಭಿಸುವ ಪುಷ್ಪಗಳಿಂದಲೂ ಮತ್ತು ನತ್ಯೂಹವೆಂಬ ಪಕ್ಷಿಗಣದಿಂದಲೂ ವ್ಯಾಪ್ತವಾಗಿದ್ದುವು.

೨೬. ಮತ್ತು ಆ ವೃಕ್ಷಗಳು ಶುಕ, ಮಯೂರ, ಬಕ, ಕ್ರೌಂಚ, ಭ್ರಮರ ಮುಂತಾದುವುಗಳ ಇಂಪಾದ ಧ್ವನಿಯಿಂದ ಕೂಡಿದವುಗಳಾಗಿಯೂ, ವಿಸ್ತಾರವಾಗಿ ಬೆಳೆದ ರೆಂಬೆಗಳಿಂದ ದುರ್ಗಮಯವಾಗಿಯೂ ಮತ್ತು ಗಾಳಿಯಿಂದ ಚಲಿಸಲ್ಪಟ್ಟ ಶಾಖಾಗ್ರಗಳಿಂದ ಕೂಡಿದವುಗಳಾಗಿಯೂ, ವೃಕ್ಷಸೌಂದರ್ಯದಿಂದ ಪ್ರಕಾಶಿಸುತ್ತಲಿದ್ದುವು.

ಸಂವೃತಾ ಸಾ ಪುರೀ ಶ್ರೇಷ್ಠಾ ಯಥೇಂದ್ರಸ್ಯಾಮರಾವತೀ ।
ಕುಮುದೋತ್ಪಲಕಲ್ಹಾರಶತಪತ್ರಶ್ರಿಯೋಜ್ಜ್ವಲೈಃ ॥ ೨೭ ॥

ಹಂಸಕುಕ್ಕುಟಕೋಯಷ್ಟಿಕಾರಂಡವರವಾನ್ವಿತೈಃ ।
ಸಂವೃತಾ ಸರ್ವತೋ ರಮ್ಯೈಃ ಸರೋಭಿರ್ದೇವನಿರ್ಮಿತೈಃ ॥ ೨೮ ॥

ನದ್ಯಃ ಪ್ರಸನ್ನಾ ವಿಮಲಾಃ ಸ್ವಚ್ಛೋದಾಃ ಶುಭ್ರವಾಲುಕಾಃ ॥
ಸುಖಾವಗಾಹಾಃ ಸುಭಗಾಃ ಸುಪುಣ್ಯಾಃ ಸುರಸೇವಿತಾಃ ॥ ೨೯ ॥

ವಹಂತಿ ತತ್ರ ರಾಜೇಂದ್ರ ಮಜ್ಜನಾನ್ಮುಕ್ತಿದಾಯಕಾಃ ।
ಅಶ್ವಾ ಚ ಮಂಜುಲಾ ಕಂಪಾ ಹರಿದ್ರಾ ವಿರಜಾ ತಥಾ ॥ ೩೦ ॥

---

೨೭. ಇಂದ್ರನ ಅಮರಾವತೀನಗರಿಯಂತೆ ಈ ಕಾಂಚೀನಗರಿಯು ಹಿಂದೆ ವರ್ಣಿಸಿರುವ ಸುಂದರವಾದ ವೃಕ್ಷ-ಲತಾ ಸಮೂಹದಿಂದ ವಿಸ್ತಾರವಾಗಿ ಶ್ರೇಷ್ಠವಾಗಿತ್ತು.

೨೮. ಕುಮುದ, ಉತ್ಪಲ, ಕಲ್ಹಾರ, ಶತ್ರಪತ್ರಗಳೆಂಬ ವಿಧವಿಧವಾದ ತಾವರೆ ಹೂಗಳ ಶೋಭೆಯಿಂದ ಉಜ್ಜ್ವಲವೂ, ಹಂಸ, ಕುಕ್ಕುಟ, ಕೋಯಷ್ಟಿ, ಕಾರಂಡವ, ಮುಂತಾದ ಜಲಚರಪಕ್ಷಿಗಳ ಧ್ವನಿಯಿಂದ ಸುಶ್ರಾವ್ಯವೂ ಆದ ದೇವತೆಗಳಿಂದ ನಿರ್ಮಿಸಲ್ಪಟ್ಟಿರುವ ರಮಣೀಯ ಸರೋವರಗಳಿಂದ ಸರ್ವಭಾಗಗಳಲ್ಲಿ ವ್ಯಾಪಿಸಲ್ಪಟ್ಟಿತ್ತು.

೨೯. ಮನಸ್ಸಿಗೆ ಪ್ರಸಾದವನ್ನುಂಟುಮಾಡುವ, ನಿರ್ಮಲವಾದ, ಸ್ವಚ್ಛವಾದ ಜಲದಿಂದ ಕೂಡಿದ, ಬೆಳ್ಳಗೆಕಾಣುವ ಮಳಲುದಿಣ್ಣೆಗಳುಳ್ಳ, ಸುಖವಾಗಿ ಮುಳುಗಿ ಸ್ನಾನಮಾಡಲು ಅರ್ಹವಾದ, ಅತಿ ಸುಂದರವಾದ, ಪುಣ್ಯಕರವಾದ ಮತ್ತು ದೇವತೆಗಳಿಂದ ಸೇವಿಸಲ್ಪಟ್ಟ ಅನೇಕ ನದಿಗಳು ಅಲ್ಲಿ ಹರಿಯುತ್ತಿವೆ.

೩೦. ಆ ನದಿಗಳು ಸ್ನಾನಮಾತ್ರದಿಂದ ಯಾತ್ರಿಕರಿಗೆ ಮುಕ್ತಿಯನ್ನು ಕೊಡುವ ಮಹಿಮೆಯಿಂದ ಕೂಡಿರುತ್ತವೆ. ಅಂತಹ ನದಿಗಳಲ್ಲಿ ಅಶ್ವಾ, ಮಂಜುಲಾ, ಕಂಪಾ, ಹರಿದ್ರಾ, ವಿರಜಾ, ಕ್ಷೀರಾ, ವೇಗವತೀ ಎಂಬ ಸಪ್ತನದಿಗಳು ಅತಿಯವಾಗಿ ಪುಣ್ಯವನ್ನು ಕೊಡುವ ಮುಖ್ಯನದಿಗಳಾಗಿವೆ.

ಕ್ಷೀರಾ ವೇಗವತೀತ್ಯೇತಾಃ ಸಪ್ತ ನದ್ಯೋಽತಿಪುಣ್ಯದಾಃ ।
ದೇವೋದ್ಯಾನಶತಾಕೀರ್ಣಾ ದೇವಾಯತನಸಂಕುಲಾ ॥ ೩೦ ॥

ದೇವಾಭೈರ್ನೃವರೈಃ ಪೂರ್ಣಾ ಕಾಂಚೀ ಕಾಮಿತದಾಯಿನೀ ।
ಕಾಂಚೀ ಕಾಂಕ್ಷಿತದಾ ನೃಣಾಂ ಸೃಷ್ಟಾ ಕಮಲಜನ್ಮನಾ ॥ ೩೧ ॥

ಸ್ಮರಣಾನ್ಮುಕ್ತಿದಾ ನೃಣಾಂ ಕಿಮು ತತ್ರೈವ ತಸ್ಥುಷಾಂ ।
ಕ ಇತಿ ಬ್ರಹ್ಮಣೋ ನಾಮ ತೇನ ತತ್ರಾಂಚಿತೋ ಹರಿಃ ॥ ೩೨ ॥

ಹಯಮೇಧೇನ ರಾಜೇಂದ್ರ ತಸ್ಮಾತ್ ಕಾಂಚೀತಿ ವಿಶ್ರುತಾ ।
ಗಜವಾಜಿರಥೈಃ ಪೂರ್ಣಾ ವೃಷಗೋಕುಲಸಂಕುಲಾ ॥ ೩೩ ॥

---

೩೧. ದೇವತಾಸೇವೆಗಾಗಿ ನಿರ್ಮಿತವಾದ ಅನೇಕ ಉದ್ಯಾನವಾಟಿಕೆಗಳಿಂದಲೂ, ಅನೇಕ ದೇವಾಲಯಗಳಿಂದಲೂ, ಮತ್ತು ದೇವತೆಗಳಂತೆ ರಾಜಿಸುವ ಸಮೃದ್ಧಿಯುಳ್ಳ ಮನುಷ್ಯರಿಂದಲೂ ಕೂಡಿದ ಕಾಂಚೀನಗರವು ಕಾಮಿತಫಲಗಳನ್ನು ಪ್ರದಾನ ಮಾಡುವ ಮಹಿಮೆಯುಳ್ಳದ್ದಾಗಿದೆ.

೩೨. ಮನುಜರ ಕಾಮಿತಾರ್ಥಗಳನ್ನು ಅನುಗ್ರಹಿಸುವ ಕಾಂಚೀ ಎಂಬ ಪವಿತ್ರನಗರವು ಬ್ರಹ್ಮನಿಂದ ನಿರ್ಮಿಸಲ್ಪಟ್ಟದ್ದಾಗಿದೆ. ಇದು ಸ್ಮರಣಮಾತ್ರದಿಂದಲೆ ಮುಕ್ತಿಯನ್ನು ಕೊಡುವುದಾಗಿರುವಲ್ಲಿ ಅಲ್ಲಿಯೇ ವಾಸಮಾಡುವ ಮನುಜರಿಗೆ ಇದರ ಮಹಿಮೆಯನ್ನು ಅತಿಶಯವಾಗಿ ಹೇಳುವುದೇನಿದೆ?

೩೩. ರಾಜೇಂದ್ರನೆ! ಇದಕ್ಕೆ ಕಾಂಚೀ ಎಂಬ ಪೂಜ್ಯನಾಮವು ಬಂದಿರುವ ಕಾರಣವನ್ನು ಕೇಳು:—ಕಾಂಚೀ ಎಂಬ ಪದವು "ಕ+ಅಂಚ್" ಎಂಬ ಎರಡು ಅಂಶಗಳಿಂದ ಕೂಡಿ ಕ =ಬ್ರಹ್ಮನಿಂದ, ಅಂಚ್ = ಪೂಜಿಸಲ್ಪಟ್ಟದ್ದು ಎಂಬ ಅರ್ಥವನ್ನು ಬೋಧಿಸುವುದು. ಬ್ರಹ್ಮನು ಅಶ್ವಮೇಧಯಜ್ಞವನ್ನು ಮಾಡಿ ಹರಿಯನ್ನು ಇಲ್ಲಿ ಪೂಜಿಸಿದ್ದರಿಂದ ಈ ಹೆಸರು ಬಂದಿರುವುದು.

೩೪. ಆ ಪವಿತ್ರಕ್ಷೇತ್ರದಲ್ಲಿ ವಾಸಮಾಡುವ ಭಾಗ್ಯವನ್ನು ಹೊಂದಿದ ಆನೆ, ಕುದುರೆ, ರಥಗಳಿಂದಲೂ, ಎತ್ತು ಹಸುಗಳ ವೃಂದದಿಂದಲೂ, ಆಡು, ಒಂಟೆ, ಕೋಣ ಮುಂತಾದ ಇತರ ಅನೇಕ ಪ್ರಾಣಿಗಳಿಂದಲೂ ಈ ನಗರವು ಪೂರ್ಣವಾಗಿತ್ತು.

ಕೃತಪುಣ್ಯೈರ್ಮೃಗೈರನ್ಯೈರಜೋಷ್ಟ್ರಮಹಿಷೈರಪಿ ।
ಸೌಧಾಟ್ಟಾಲಕಸಂಯುಕ್ತಾ ಗೃಹಗೋಪುರಮಂಡಿತಾ ॥ ೩೫ ॥

ವಾತಾಯನವಿತರ್ದೀಕವಿಟಂಕಾನ್ವಿತಮಂದಿರಂ ।
ಗೃಹೈರಚಲಸಂಕಾಶೈಃ ಶೋಭಿತಾ ಸ್ವರ್ಣಕುಟ್ಟಿಮೈಃ ॥ ೩೬ ॥

ದಾಂತರಾಜತಸೋಪಾನೈರ್ವೈಡೂರ್ಯತಲಶೋಭಿತೈಃ ।
ಸುವರ್ಣಶಿಖರೈಶ್ಚಿತ್ರೈಃ ಸೌಧೈರಭ್ರಂಕಷೈರ್ವೃತಾ ॥ ೩೭ ॥

ವಿಮಾನೈರ್ದೇವಸಂಘಾನಾಂ ಸರ್ವತಃ ಸಮಲಂಕೃತಂ ॥
ವೇದವಿದ್ಭಿರ್ವ್ರತಸ್ನಾತೈರ್ಜಪಹೋಮಪರಾಯಣೈಃ ॥ ೩೮ ॥

ಸಾಚಾರೈರ್ವಿನಯೋಪೇತೈರ್ದಾಂತೈರನಲಸನ್ನಿಭೈಃ ।
ಸಾಗ್ನಿಹೋತ್ರೈಶ್ಚ ಸಂಪೂರ್ಣಾ ಬ್ರಾಹ್ಮಣೈರ್ನಿಷ್ಪ್ರತಿಗ್ರಹೈಃ ॥ ೩೯ ॥

---

೩೫. ನಗರವು ಮಹಡಿಯ ಮನೆಗಳಿಂದಲೂ, ಅಟ್ಟಾಲಕಗಳಿಂದಲೂ, ಭವನಗಳಿಂದಲೂ, ಗೋಪುರಗಳಿಂದಲೂ ಅಲಂಕರಿಸಲ್ಪಟ್ಟಿದೆ.

೩೬. ಅಲ್ಲಿರುವ ಪರ್ವತಾಕಾರವಾದ ಅತ್ಯುನ್ನತ ಗೃಹಗಳು ಕಿಟಕಿಗಳಿಂದಲೂ ಮೇಲುಛಾವಣಿಯ ರಮ್ಯಭಾಗಗಳಿಂದಲೂ ಸುವರ್ಣಮಯವಾದ ಸಂಸ್ಕೃತಭೂಮಿಯಿಂದಲೂ ಶೋಭಿಸಲ್ಪಟ್ಟಿದ್ದವು.

೩೭. ಗಜದಂತಗಳಿಂದಲೂ ಬೆಳ್ಳಿಯಿಂದಲೂ ರಚಿಸಲ್ಪಟ್ಟ ಸೋಪಾನ, ವೈಡೂರ್ಯಮಣಿಮಯವಾದ ತಲಭಾಗ, ವಿಚಿತ್ರವಾದ ಸುವರ್ಣಶಿಖರ, ಮತ್ತು ಗಗನವನ್ನು ವ್ಯಾಪಿಸಿರುವ ಪ್ರಾಸಾದಗಳಿಂದ ಕಂಗೊಳಿಸುತ್ತಿತ್ತು.

೩೮-೩೯. ಹಾಗು ದೇವಸಂಘಗಳ ವಿಮಾನಗಳಿಂದ ಸರ್ವಪ್ರದೇಶಗಳಲ್ಲಿಯೂ ಅಲಂಕರಿಸಲ್ಪಟ್ಟಿತ್ತು. ಆ ನಗರದಲ್ಲಿ ವಾಸಮಾಡುವ ವಿಪ್ರರು ವೇದಗಳನ್ನು ತಿಳಿದವರೂ ವ್ರತಚತುಷ್ಟಯಗಳನ್ನು ಆಚರಿಸಿ ಕ್ರಮವಾಗಿ ಸಮಾವೃತ್ತರಾದವರೂ ಜಪ-ಹೋಮ ಮುಂತಾದ ಕರ್ಮಗಳಲ್ಲಿ ಆಸಕ್ತರೂ ಆಚಾರವಂತರೂ ವಿನಯಸಂಪನ್ನರೂ ಜಿತೇಂದ್ರಿಯರೂ ಅಗ್ನಿಯಂತೆ ತೇಜಸ್ವಿಗಳೂ ಅಗ್ನಿಹೋತ್ರ ಹೋಮಾನುಷ್ಠಾನಪರರೂ ಮತ್ತು ಪ್ರತಿಗ್ರಹವನ್ನು ದೂರ ತ್ಯಜಿಸಿರುವವರೂ ಆಗಿ ಧರ್ಮಮೂರ್ತಿಗಳಾಗಿದ್ದರು.

ಸ್ವಧರ್ಮನಿರತೈಶ್ಚಾನ್ಯೈರ್ವದಾನ್ಯೈಃ ಸಂವೃತಾ ಜನೈಃ ।
ಸದಾ ಮೃದಂಗನಿಸ್ಸಾಣಭೇರಿ ಪಟಹನಾದಿತಾ ॥ ೪೦ ॥

ಉಚ್ಚೈರುಚ್ಚಾರಿತೈರ್ವಿಪ್ರೈಃ ಸಷಡಂಗೈಃ ಸಲಕ್ಷಣೈಃ ।
ಸುಸ್ವರೈರ್ವೇದಘೋಷೈಶ್ಚ ಸನ್ನಾದಿತದಿಗಂತರಾ ॥ ೪೧ ॥

ಬ್ರಹ್ಮಾದಿಭಿಃ ಸುರೈಃ ಸೇವ್ಯಾ ಸಾ ಪೂರ್ಬ್ರಹ್ಮಪುರೋಪಮಾ ।
ಕಾಂಚ್ಯಾಂ ವಸತಿ ಯೋ ಮರ್ತ್ಯಃ ಸ ದೇವೈರಪಿ ಪೂಜ್ಯತೇ ॥ ೪೨ ॥

ಚಂಡಾಲಃ ಪುಲ್ಕಸಃ ಸ್ತೇನೋ ಬ್ರಹ್ಮಹಾ ಗುರುತಲ್ಪಗಃ ।
ಸುರಾಪಃ ಪತಿತಶ್ಚೈವ ಯೇ ಚ ಪಾತಕಿನೋಽಪರೇ ॥ ೪೩ ॥

---

೪೦. ಸ್ವಸ್ವಧರ್ಮಗಳಲ್ಲಿ ನಿರತರೂ ಮತ್ತು ಅತ್ಯಂತ ಉದಾರರೂ ಆದ ಇತರ ಜನಗಳಿಂದ ಈ ನಗರವು ವ್ಯಾಪ್ತವಾಗಿದ್ದಿತು. ಅಲ್ಲಿಯ ಗೀತಶಾಲೆಗಳಲ್ಲಿ ಮೃದಂಗ, ನಿಸ್ಸಾಣ, ಭೇರೀ, ಪಟಹ ಮುಂತಾದ ವಾದ್ಯಗಳ ಧ್ವನಿಯು ಪೂರ್ಣವಾಗಿದ್ದಿತು.

೪೧. ವಿಪ್ರರು ಷಡಂಗಗಳಿಂದಲೂ ಲಕ್ಷಣಗಳಿಂದಲೂ ಕೂಡಿ ಉಚ್ಚಧ್ವನಿಯಿಂದ ಮತ್ತು ಸುಶ್ರಾವ್ಯಸ್ವರದಿಂದ ವೇದಘೋಷವನ್ನು ಮಾಡುತ್ತಿರುವುದರಿಂದ ಆಧ್ವನಿಯು ದಿಗಂತರಗಳಲ್ಲಿ ಪ್ರತಿಧ್ವನಿಯನ್ನು ಕೊಡುವಂತೆ ಇದ್ದಿತು. ಸರ್ವಕಾಲಗಳಲ್ಲಿ ವೇದ ಘೋಷವು ಪ್ರಚಾರದಲ್ಲಿತ್ತು.

೪೨. ಬ್ರಾಹ್ಮಣ ಮುಂತಾದ ಚಾತುರ್ವಣ್ಯಕ್ಕೆ ಸೇರಿದ ಪ್ರಜೆಗಳಿಂದ ತುಂಬಿದ ಆ ನಗರವು ಬ್ರಹ್ಮಲೋಕಕ್ಕೆ ಸಮಾನವಾಗಿತ್ತು. ಆದುದರಿಂದ ಆ ಕಾಂಚೀ ನಗರದಲ್ಲಿ ವಾಸಮಾಡುವ ಸ್ವಧರ್ಮಾಚರಣೆಯಲ್ಲಿ ತತ್ಪರನಾದ ಮರ್ತ್ಯನು ದೇವತೆ ಗಳಿಂದಲೂ ಪೂಜ್ಯನಾಗುವನು.

೪೩. ಸಾಮಾನ್ಯವಾಗಿ ಈ ಮರ್ತ್ಯಲೋಕದಲ್ಲಿ ಪಾತಕಿಗಳು ಎಷ್ಟೋ ಮಂದಿ ಇರುವರು. ಅವರಲ್ಲಿಯೂ ಚಂಡಾಲ, ಪುಲ್ಕಸ, ಚೋರ, ಬ್ರಹ್ಮಘಾತೀ, ಗುರು ದಾರಗಾಮಿ, ಸುರಾಪಾಯಿ, ಮತ್ತು ಪತಿತ ಮುಂತಾದವರು ಅತಿಶಯವಾದ ಪಾತಕಿಗಳು.

ತೇಽಪಿ ಕಾಂಚೀನಿವಾಸೇನ ಪುಣ್ಯಭಾಜೋ ಭವಂತಿ ಹಿ ।
ತಸ್ಮಾತ್ ಕಾಂಚ್ಯಾಂ ವಸೇತ್ ಪ್ರಾಜ್ಞೋ ಯಾವದಾಯುಃ ಪ್ರಮುಕ್ತಯೇ

ವಸೇತ್ಸಂವತ್ಸರಂ ವಾಽಪಿ ಷಣ್ಮಾಸಾನ್ ಮಾಸಮೇವ ವಾ ।
ದಶರಾತ್ರಂ ತ್ರಿರಾತ್ರಂ ವಾ ತೇನ ಪಾಪಾತ್ಪ್ರಮುಚ್ಯತೇ ॥ ೪೫ ॥

ವಸೇನ್ಮಾರ್ಗವಶಾತ್ ಕಾಂಚ್ಯಾಮೇಕಾಮಪಿ ನಿಶಾಂ ಯದಿ ।
ತೇನ ಪಾಪಾದ್ವಿನಿರ್ಮುಕ್ತಃ ಪುಣ್ಯಾಂಲ್ಲೋಕಾನವಾಪ್ನುಯಾತ್ ॥ ೪೬ ॥

ಅಕರ್ಮಕಾರಿಣೋ ಯೇ ಚ ಯೇ ಚ ಸತ್ಕರ್ಮವರ್ಜಿತಾಃ ।
ವಿಕರ್ಮಸ್ಥಾಶ್ಚ ಯೇ ವಿಪ್ರಾಃ ಕೇವಲಂ ಸ್ವೋದರಂಭರಾಃ ॥ ೪೭ ॥

ಅಜ್ಞಾನಿನಃ ಶಠಾ ಮೂರ್ಖಾ ಜಪಹೋಮವಿವರ್ಜಿತಾಃ ।
ಪರಾನ್ನನಿರತಾ ನಿತ್ಯಂ ಪರದಾರೇಷು ಲೋಲುಪಾಃ ॥ ೪೮ ॥

---

೪೪. ಆದರೆ ಇಂತಹ ಮಹಾ ಪಾತಕಿಗಳು ಕೂಡ ಶ್ರೀ ಕಾಂಚೀನಗರದಲ್ಲಿ ವಾಸಮಾಡಿದ್ದರಿಂದ ಸಕಲ ಪಾಪಗಳಿಂದ ಮುಕ್ತರಾಗಿ ಪುಣ್ಯವನ್ನು ಹೊಂದುತ್ತಾರೆ. ಆದುದರಿಂದ ಪ್ರಾಜ್ಞನಾದ ನರನು ಮುಕ್ತಿಗೋಸ್ಕರ ತನ್ನ ಆಯುಸ್ಸು ಕ್ಷಯಿಸುವವರೆಗೆ ಕಾಂಚಿಯಲ್ಲಿ ವಾಸಮಾಡಬೇಕು.

೪೫. ಮತ್ತು ಈ ನಗರದಲ್ಲಿ ಒಂದು ವರ್ಷ, ಆರುಮಾಸ, ಒಂದುಮಾಸ, ದಶರಾತ್ರ, ಅಥವಾ ದಿನತ್ರಯವಾದರೂ ವಾಸಮಾಡುವುದರಿಂದ ಸಕಲ ಪಾಪಗಳಿಂದ ಮುಕ್ತನಾಗುವನು.

೪೬. ಒಂದು ಕಡೆಯಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಕಾಂಚೀನಗರವು ಸಿಕ್ಕಿ ಅಲ್ಲಿ ಒಂದು ರಾತ್ರಿಯನ್ನು ಕಳೆದರೂ ಕೂಡ ಅವನ ಪಾಪಗಳೆಲ್ಲವೂ ನಶಿಸಿ ಪುಣ್ಯಲೋಕಗಳು ಪ್ರಾಪ್ತವಾಗುತ್ತವೆ.

೪೭. ಯಾವ ವಿಪ್ರರು ಸತ್ಕರ್ಮಗಳನ್ನು ತ್ಯಜಿಸಿ ನಿಷಿದ್ಧವಾದ ಮಹಾಪಾಪ ಕೃತ್ಯಗಳಲ್ಲಿಯೂ ಸ್ವಾಭಾವಿಕವಾದ ಅಕರ್ತವ್ಯಗಳಲ್ಲಿಯೂ ನಿರತರಾಗುವರೋ ಅಂತಹ ವಿಪ್ರರಿಗೆ ಆ ಪಾಪದ ಬಿಡುಗಡೆಗೆ ಈ ನಗರಿಯು ಅವಲಂಬನವು.

೪೮. ಅಜ್ಞಾನಿಗಳು, ವಂಚಕರು, ಮೂರ್ಖರು, ಜಪ, ಹೋಮ ಬಹಿಷ್ಕೃತರು, ಯಾವಾಗಲೂ ಪರಾನ್ನಭೋಜಿಗಳು ಮತ್ತು ಪರಸ್ತ್ರೀ ಸಮಾಗಮದಲ್ಲಿ ಬದ್ಧಾದರರು ಮುಂತಾದ ಪಾತಕಿಗಳಿಗೆ ಈ ನಗರವಾಸವು ಪ್ರಾಯಶ್ಚಿತ್ತದಂತಾಗುವುದು.

ಪಿಶುನಾ ನಿಂದಕಾಃ ಕ್ಷುದ್ರಾ ವಿಷ್ಣುದ್ವೇಷಪರಾಶ್ಚ ಯೇ ।
ತೇಽಪಿ ಕಾಂಚೀನಿವಾಸೇನ ಪುಣ್ಯಾಂಲ್ಲೋಕಾನ್ ವ್ರಜಂತಿ ಹಿ ॥ ೪೯ ॥

ಕಿಂ ಪುನಃ ಶ್ರದ್ಧಯಾ ಭಕ್ತ್ಯಾ ಜಪಹೋಮಪರಾಯಣಃ ।
ಯೋ ಹಿ ಕಾಂಚ್ಯಾಂ ವಸೇದ್ವಿಪ್ರೋ ವಿಷ್ಣುಧ್ಯಾನಪರಾಯಣಃ ॥ ೫೦ ॥

ಪರಾನ್ನವಿಮುಖೋ ನಿತ್ಯಂ ಪರದಾರಾನಚಿಂತಯನ್ ।
ತರ್ಪಯಂಶ್ಚ ಪಿತೄನ್ ದೇವಾನರ್ಚಯನ್ ಪುರುಷೋತ್ತಮಂ ॥ ೫೧ ॥

ಧ್ಯಾಯನ್ ಜಪಂಶ್ಚ ಸತತಂ ತಮೇವ ಮಧುಸೂದನಂ ।
ಕರಸ್ಥಂ ತಸ್ಯ ಕೈವಲ್ಯಂ ಪ್ರವದಂತಿ ಮನೀಷಿಣಃ ॥ ೫೨ ॥

---

೪೯. ಚಾಡಿಗಾರರು, ಪರನಿಂದಾಸಕ್ತರು, ತುಚ್ಛವಾದ ಮನಸ್ಸುಳ್ಳವರು ಮತ್ತು ವಿಷ್ಣುದ್ವೇಷವನ್ನು ಸಾಧಿಸುವವರು ಇಂತಹ ಸಕಲ ಪಾಪಿಗಳೂ ಕಾಂಚೀ ನಗರದ ವಾಸದ ಮಹಿಮೆಯಿಂದ ಪಾಪಮುಕ್ತರಾಗಿ ಪುಣ್ಯ ಲೋಕಗಳನ್ನು ಗಳಿಸುವರು.

೫೦. ಶ್ರದ್ಧೆ, ಭಕ್ತಿ, ಜಪ, ಹೋಮ ಮುಂತಾದ ವಿಧಿಕರ್ಮಗಳಲ್ಲಿ ಆಸಕ್ತಿ, ಮತ್ತು ವಿಷ್ಣುಧ್ಯಾನತತ್ಪರತೆ ಇವುಗಳಿಂದ ಕೂಡಿ ದಿವ್ಯ ಕಾಂಚೀನಗರದಲ್ಲಿ ವಾಸ ಮಾಡುವ ವಿಪ್ರನ ಸುಕೃತಫಲಗಳನ್ನು ವರ್ಣಿಸುವುದೇನು ?

೫೧. ಯಾವಾಗಲೂ ಪರಾನ್ನಭೋಜನಮಾಡದವನೂ ಪರಸ್ತ್ರೀಸಂಗವನ್ನು ಮನಸ್ಸಿನಿಂದ ಕೂಡ ಚಿಂತಿಸದವನೂ, ಪ್ರತಿ ದಿನ ಪಿತೃದೇವತೆಗಳಿಗೆ ತರ್ಪಣದಿಂದ ಪ್ರೀತಿಯನ್ನುಂಟುಮಾಡುವವನೂ, ಮತ್ತು ದೇವತಾರ್ಚನೆಯನ್ನು ಭಕ್ತಿಯಿಂದ ಆಚರಿಸುವವನೂ ಆದ ಪುರುಷೋತ್ತಮನಿಗೆ ಕಾಂಚೀವಾಸದ ಫಲವೈಭವವನ್ನು ಎಷ್ಟೆಂದು ಹೇಳೋಣ.

೫೨. ಆ ಕ್ಷೇತ್ರದಲ್ಲಿ ಮಧು ಎಂಬ ಅಸುರನನ್ನು ನಿಗ್ರಹಿಸಿದ ವಿಷ್ಣುಪರಮಾತ್ಮನನ್ನು ಸಂತತವಾಗಿ ಧ್ಯಾನಿಸುತ್ತಲೂ ಜಪಮಾಡುತ್ತಲೂ ಇರುವ ಸುಕೃತಿ ಮಾನವನಿಗೆ ಮುಕ್ತಿಯು ಕರಗತವಾದುದೆಂದು ವಿದ್ವಾಂಸರು ಹೇಳುವರು.

ಯತ್ರ ಕುತ್ರ ಸ್ಥಿತೋ ವಾಽಪಿ ಕಾಂಚೀಂ ಪ್ರಾಪ್ಯ ಸಕೃನ್ನರಃ ।
ಕ್ಷೇತ್ರಂ ಸತ್ಯವ್ರತಂ ನತ್ವಾ ಕೃತ್ವಾ ತು ವಪನಂ ಶುಚಿಃ ॥ ೫೩ ॥

ಸಮುದ್ದಿಶ್ಯ ಪಿತೄನ್ ಸರ್ವಾನ್ ಪಿಂಡೈಃ ಶ್ರಾದ್ಧಂ ಕರೋತಿ ಯಃ ।
ಸ ಕೋಟಿಕುಲಮುದ್ಧೃತ್ಯ ವಿಷ್ಣುಲೋಕೇ ಮಹೀಯತೇ ॥ ೫೪ ॥

ಗೋದಾನಮನ್ನದಾನಂ ಚ ಪಿತೄನುದ್ದಿಶ್ಯ ಯೋ ನರಃ ।
ಕರೋತಿ ತತ್ರ ರಾಜೇಂದ್ರ ನಂದಂತಿ ಪಿತರೋಽಖಿಲಾಃ ॥ ೫೫ ॥

ವೃಷಶ್ರಾದ್ಧಂ ಪ್ರಕುರ್ವೀತ ವಿಷ್ಣುಪ್ರೀತಿಕರಂ ಶುಭಂ ।
ಅಶ್ವಮೇಧಸಹಸ್ರಸ್ಯ ಫಲದಂ ತತ್ತು ಕೀರ್ತಿತಂ ॥ ೫೬ ॥

ಗೃಹಂ ವಿಪ್ರಾಯ ಯೋ ದದ್ಯಾದ್ಧನಧಾನ್ಯೈಃ ಸುಸಂವೃತಂ ।
ವಿಷ್ಣುನಾ ಸ ಪರಿಷ್ವಕ್ತೋ ಮೋದತೇ ವಿಷ್ಣುಮಂದಿರೇ ॥ ೫೭ ॥

೫೩-೫೪. ಯಾವುದೋ ಒಂದು ಸಾಮಾನ್ಯಸ್ಥಳದಲ್ಲಿ ವಾಸಮಾಡುವ ಮನುಜನು ಒಂದು ಸಲ ಕಾಂಚೀನಗರಕ್ಕೆ ಬಂದು ಸತ್ಯವ್ರತಕ್ಷೇತ್ರಕ್ಕೆ ನಮಸ್ಕಾರ ಮಾಡಿ ವಪನವನ್ನು ಮಾಡಿಸಿಕೊಂಡು ಪವಿತ್ರನಾಗಿ ಸಕಲ ಪಿತೃ ದೇವತೆಗಳನ್ನು ಉದ್ದೇಶಿಸಿ, ಪಿಂಡದಾನವನ್ನು ಮಾಡಿ ಶ್ರಾದ್ಧವನ್ನು ಆಚರಿಸಿದ ಮಹಿಮೆಯಿಂದ ತನ್ನ ವಂಶದ ಕೋಟಿ ಸಂಖ್ಯೆಯ ಪೂರ್ವ ಪ್ರಜೆಗಳನ್ನು ಉದ್ಧಾರಮಾಡಿ ತಾನು ವಿಷ್ಣು ಲೋಕವನ್ನು ಸೇರಿ ಅಲ್ಲಿ ಪೂಜ್ಯನಾಗುವನು.

೫೫. ರಾಜೇಂದ್ರನೇ ! ಮನುಷ್ಯನು ಆ ಕ್ಷೇತ್ರದಲ್ಲಿ ಪಿತೃದೇವತೆಗಳಿಗೆ ಪ್ರೀತಿ ಯಾಗಲೆಂದು ನೆನೆಸಿ ಗೋದಾನ, ಅನ್ನದಾನಗಳನ್ನು ಮಾಡುವುದರಿಂದ ಅವನ ಸಕಲ ಪಿತೃಗಳು ಆನಂದದಿಂದಿರುತ್ತಾರೆ.

೫೬. ವಿಷ್ಣುವಿಗೆ ಪ್ರೀತಿಯನ್ನುಂಟುಮಾಡುವ ಮತ್ತು ಮಂಗಲಕರವಾದ ವೃಷೋತ್ಸರ್ಗ-ಶ್ರಾದ್ಧಗಳನ್ನು ಮಾಡಿದರೆ, ಆ ಕರ್ಮವು ಸಹಸ್ರ ಅಶ್ವಮೇಧಯಾಗ ಗಳ ಫಲವನ್ನು ಕೊಡುವುದು ಎಂದು ಪ್ರಾಜ್ಞರಿಂದ ಉಪದಿಷ್ಟವಾಗಿದೆ.

೫೭. ಮತ್ತು ವಿಪ್ರನಿಗೆ ಧನ-ಧಾನ್ಯಗಳಿಂದ ಪೂರ್ಣವಾದ ಗೃಹವನ್ನು ದಾನ ಮಾಡಿದವನು ಆ ಪುಣ್ಯಪರಿಪಾಕದಿಂದ ವಿಷ್ಣುವಿನಿಂದ ಪ್ರೇಮದಿಂದ ಆಲಿಂಗಿಸಲ್ಪಟ್ಟವ ನಾಗಿ ವಿಷ್ಣುವಿನ ಗೃಹದಲ್ಲಿ ಸಂತೋಷದಿಂದ ಇರುವನು.

ಕನ್ಯಾದಾನಂ ತು ಯಃ ಕುರ್ಯಾತ್ ಸಾಲಂಕಾರಂ ಸದಕ್ಷಿಣಂ ।
ತಸ್ಯ ನಂದಂತಿ ಪಿತರೋ ವಿಮುಕ್ತಾಃ ಸರ್ವಕಿಲ್ಬಿಷೈಃ ॥ ೫೮ ॥

ಅನ್ಯಾನಿ ದದ್ಯಾದ್ವಿಪ್ರೇಭ್ಯಃ ಸ್ವಾದೂನಿ ಗುಣವಂತಿ ಚ ।
ತತ್ರ ವಿಷ್ಣುಂ ಸಮುದ್ದಿಶ್ಯ ಭಕ್ತಿಯುಕ್ತೇನ ಚೇತಸಾ ॥ ೫೯ ॥

ವಿಷ್ಣುಪ್ರೀತಿಕರಂ ಹ್ಯನ್ನಂ ಕ್ಷೇತ್ರೇ ತಸ್ಮಿನ್ ವಿಶೇಷತಃ ।
ತದೇಕಮಪಿ ವಾ ವಿಪ್ರಂ ಭೋಜಯೇತ್ ಸುಸಮಾಹಿತಃ ॥ ೬೦ ॥

ಶಂಖಚಕ್ರಧರಃ ಶ್ರೀಮಾನ್ ಪೀತವಾಸಾ ಜಗತ್ಪತಿಃ ।
ಸ್ವಯಂ ಹಿ ವಿಪ್ರರೂಪೇಣ ತತ್ರ ಭುಂಕ್ತೇ ಜನಾರ್ದನಃ ॥ ೬೧ ॥

ತಸ್ಮಾದನ್ನಂ ದ್ವಿಜಾಗ್ರ್ಯೇಭ್ಯಃ ಸಂಪ್ರಯಚ್ಛೇತ್ ಪ್ರಯತ್ನತಃ ।
ಪ್ರದಕ್ಷಿಣಂ ತು ಕುರ್ವೀತ ಯಾವತ್ ಸತ್ಯವ್ರತಂ ಭವೇತ್ ॥ ೬೨ ॥

---

೫೮. ಮತ್ತು ಈ ಪವಿತ್ರಸ್ಥಳದಲ್ಲಿ ದಕ್ಷಿಣೆಯಿಂದ ಕೂಡಿದ ಮತ್ತು ಸಾಲಂಕಾರವಾದ ಕನ್ಯಾದಾನವನ್ನು ಮಾಡುವವನ ಪಿತೃಗಳು ಸಕಲ ಪಾಪಬಂಧನಗಳಿಂದ ಮುಕ್ತರಾಗಿ ಆನಂದದಲ್ಲಿ ಮುಳುಗುವರು.

೫೯. ಆ ಕ್ಷೇತ್ರದಲ್ಲಿ ವಿಷ್ಣುವಿಗೆ ಪ್ರೀತಿಯಾಗಲೆಂದು ಉದ್ದೇಶಿಸಿ ಆಚಾರವಂತರಾದ ವಿಪ್ರರಿಗೆ ಭಕ್ತಿಯಿಂದ ಕೂಡಿದ ಮನಸ್ಸಿನಿಂದ ರುಚಿಕರವೂ, ಶುಚಿ ಮತ್ತು ಪಥ್ಯರೂಪವಾದ ಅನ್ನವನ್ನು ದಾನಮಾಡಬೇಕು.

೬೦. ಆ ಕ್ಷೇತ್ರದಲ್ಲಿ ವಿಶೇಷವಾಗಿ ವಿಷ್ಣುಪ್ರೀತಿಯನ್ನುಂಟುಮಾಡುವುದು ಅನ್ನದಾನವು, ಆದುದರಿಂದ ಚಿತ್ತಸಮಾಧಾನ ಮತ್ತು ಭಕ್ತಿಯಿಂದ ಒಬ್ಬ ವಿಪ್ರನಿಗಾದರೂ ಅನ್ನದಾನಮಾಡಬೇಕು.

೬೧. ಸಾಧುವಿಪ್ರನಿಗೆ ಮಾಡಿರುವ ಅನ್ನದಾನವನ್ನು ಶಂಖ-ಚಕ್ರಗಳನ್ನು ಧರಿಸಿದವನೂ ಲಕ್ಷ್ಮೀಯುಕ್ತನೂ ಪೀತಾಂಬರಧಾರಿಯೂ ಮತ್ತು ಸಕಲ ಜಗತ್ಪ್ರಭುವೂ ಆದ ವಿಷ್ಣುವು ಆ ವಿಪ್ರರೂಪದಿಂದ ತಾನು ಬಂದು ಅದನ್ನು ಪ್ರತಿಗ್ರಹಿಸಿ ಭುಂಜಿಸುವನು.

೬೨. ಆದುದರಿಂದ ಪ್ರಯತ್ನಪೂರ್ವಕವಾಗಿ ಉತ್ತಮರಾದ ದ್ವಿಜರಿಗೆ ಅನ್ನವನ್ನು ದಾನಮಾಡಬೇಕು. ಮತ್ತು ಸತ್ಯವ್ರತಕ್ಷೇತ್ರವು ಇರುವ ಪ್ರದೇಶವನ್ನು ಪ್ರದಕ್ಷಿಣಮಾಡಬೇಕು.

ಅಶಕ್ತಸ್ತು ಪ್ರಕುರ್ವೀತ ಕಾಂಚೀಂ ವಾ ಮೋಕ್ಷದಾಯಿನೀಂ ।
ಹಸ್ತಿಶೈಲಸ್ಯ ಪರಿತಃ ಪಂಚಕ್ರೋಶಮಥಾಪಿ ವಾ ॥ ೬೩ ॥

ತತ್ರ ತತ್ರ ಚ ತೀರ್ಥೇಷು ಹ್ರದೇಷು ಕೃತಮಜ್ಜನಃ ।
ತರ್ಪಯಿತ್ವಾ ಪಿತೄನ್ ದೇವಾನ್ ಶ್ರಾದ್ಧೈರ್ಭಕ್ತ್ಯಾ ಹರಿಂ ಸ್ಮರೇತ್

ತತಃ ಸಂಭೋಜಯೇದ್ವಿಪ್ರಾನ್ ಘೃತಸೂಪಾದಿಭಿರ್ಭೃಶಂ ।
ಏವಂ ಕೃತೇ ಮಹಾರಾಜ ಕ್ಷೇತ್ರಭೂಮ್ಯಾಃ ಪ್ರದಕ್ಷಿಣೇ ॥ ೬೫ ॥

ಪದೇ ಪದೇಽಶ್ವಮೇಧಸ್ಯ ಫಲಂ ಪ್ರಾಪ್ನೋತಿ ಮಾನವಃ ।
ದುರ್ಬಲೋ ದೂರದೇಶಸ್ಥಃ ಪಂಗುರಂಧೋಽಪಿ ವಾ ಜನಃ ॥ ೬೬ ॥

---

೬೩. ಸಂಪೂರ್ಣ ಸತ್ಯವ್ರತವನ್ನು ಪ್ರದಕ್ಷಿಣಮಾಡಲು ಶಕ್ತಿಯಿಲ್ಲದವನು ಮುಕ್ತಿದಾಯಕವಾದ ಕಾಂಚೀನಗರವನ್ನು ಪ್ರದಕ್ಷಿಣೆಮಾಡಬೇಕು. ಆ ಶಕ್ತಿಯು ಕೂಡ ಯಾರಿಗೆ ಇಲ್ಲವೋ ಅವನು ಹಸ್ತಿಪರ್ವತದ ಸುತ್ತಲೂ ಐದು ಹರಿದಾರಿಯಷ್ಟು ಪ್ರದೇಶವನ್ನಾದರೂ ಪ್ರದಕ್ಷಿಣೆಮಾಡಲಿ.

೬೪. ಅಲ್ಲಲ್ಲಿದ್ದ ಅನೇಕ ತೀರ್ಥಗಳಲ್ಲಿಯೂ ಮತ್ತು ಜಲಾಶಯಗಳಲ್ಲಿಯೂ ಸ್ನಾನಮಾಡಿ ಭಕ್ತಿಯಿಂದ ಶ್ರಾದ್ಧಗಳನ್ನು ಅನುಷ್ಠಾನಮಾಡಿ ಪಿತೃದೇವತೆಗಳನ್ನು ಆರಾಧಿಸಿ ವಿಷ್ಣುವನ್ನು ಧ್ಯಾನಿಸಬೇಕು.

೬೫. ಅನಂತರದಲ್ಲಿ ಘೃತ-ಸೂಪಾದಿ ವಿವಿಧ ಪರಿಕರಗಳಿಂದ ಕೂಡಿದ ಅನ್ನವನ್ನು ವಿಪ್ರರಿಗೆ ಭೋಜನಮಾಡಿಸಬೇಕು. ಇದು ಈ ಕ್ಷೇತ್ರಭೂಮಿಯ ಪ್ರದಕ್ಷಿಣೆಯನ್ನು ಮಾಡುವ ವಿಧಾನವು.

೬೬. ಮಹಾರಾಜನೆ! ಈ ವಿಧಾನವನ್ನು ಅನುಸರಿಸಿ ಕ್ಷೇತ್ರಭೂಮಿಯ ಪ್ರದಕ್ಷಿಣೆಯನ್ನು ಸಾಂಗವಾಗಿ ಆಚರಿಸಿದ ಮಾನವನು ಒಂದೊಂದು ಹೆಜ್ಜೆಗೂ ಅಶ್ವಮೇಧಯಾಗದ ಫಲವನ್ನು ಹೊಂದುತ್ತಾನೆ.

ಸಂಸ್ಮರ್ರ್ಮನಸಾ ಕಾಂಚೀಂ ಪ್ರಣಮೇತ್ತಾಂ ದಿಶಂ ಯದಿ ।
ಸೋऽಪಿ ಪಾಪಾದ್ವಿನಿರ್ಮುಕ್ತೋ ಭವೇತ್ತತ್ರ ನ ಸಂಶಯಃ ॥ ೬೭ ॥

ಯಾ ವಿಷ್ಣುಂ ಯಜತಾ ಪುರಾ ಹಿ ವಿಧಿನಾ ಸತ್ಯವ್ರತೇ ನಿರ್ಮಿತಾ
ಯಾ ಮರ್ತ್ಯಾರ್ತಿ ವಿತನೋತಿ ವೀತಕಲುಷಾನಾತ್ಮಾಶ್ರಿತಾನಂಜಸಾ ।
ತಾಮಾಸಾದ್ಯ ನರೋ ವಸೇದನುದಿನಂ ಭಕ್ತ್ಯಾऽರ್ಚಯನ್ನಚ್ಯುತಂ
ಕಾಂಚೀಂ ವಾಂಛಿತದಾಯಿನೀಂ ಕಲಿಮಲಪ್ರಧ್ವಂಸಿನೀಂ ಪಾವನೀಂ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಚತುರ್ಥೋऽಧ್ಯಾಯಃ

---

೬೭. ಅಶಕ್ತನೂ, ದೂರದೇಶದಲ್ಲಿರುವವನೂ, ಮತ್ತು ಕುಂಟ ಅಥವಾ ಕುರುಡನೂ ಆದ ನರನು ಕೂಡ ಮನಸ್ಸಿನಿಂದ ಕಾಂಚಿಯನ್ನು ಸ್ಮರಿಸಿ ಆ ದಿಕ್ಕನ್ನು ನಮಸ್ಕರಿಸಿದರೆ ಆ ಸುಕೃತದಿಂದ ಪಾಪಗಳಿಂದ ಮುಕ್ತನಾಗುವನು. ಈ ವಿಷಯದಲ್ಲಿ ಸಂಶಯವಿಲ್ಲ.

೬೮. ಯಾವ ಕಾಂಚೀನಗರವು ಸತ್ಯವ್ರತ ಕ್ಷೇತ್ರದಲ್ಲಿ ವಿಷ್ಣುವನ್ನು ಅಶ್ವಮೇಧಯಾಗದಿಂದ ಆರಾಧಿಸಲು ಬ್ರಹ್ಮನಿಂದ ರಚಿಸಲ್ಪಟ್ಟಿತೋ, ಯಾವ ಕಾಂಚೀನಗರವು ತನ್ನನ್ನು ಆಶ್ರಯಿಸಿದ ಭಕ್ತಾಗ್ರೇಸರರ ಪಾತಕಗಳನ್ನು ಬೇಗ ನಾಶಮಾಡುವುದೋ ಅಂತಹ ಕಲಿಕಾಲದ ಕಾಲುಷ್ಯವನ್ನು ದೂರಮಾಡಿ ಪಾವನರನ್ನಾಗಿಮಾಡುವುದೂ ಮತ್ತು ಇಷ್ಟಾರ್ಥಗಳನ್ನು ಕೊಡುವುದೂ ಆದ ಕಾಂಚೀನಗರವನ್ನು ಹೊಂದಿ ಮಾನವನು ಭಕ್ತಿಯಿಂದ ಪ್ರತಿದಿನ ವಿಷ್ಣುವನ್ನು ಪೂಜಿಸುತ್ತ ಅಲ್ಲಿ ವಾಸಮಾಡಬೇಕು.

ಕಾಂಚೀಮಾಹಾತ್ಮ್ಯದಲ್ಲಿ ಚತುರ್ಥೋಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀ ಮಾಹಾತ್ಮ್ಯಮ್

ಪಂಚಮೋಽಧ್ಯಾಯಃ

ಕಥಂ ಸತ್ಯವ್ರತಕ್ಷೇತ್ರೇ ಬ್ರಹ್ಮಾ ಲೋಕಪಿತಾಮಹಃ ।
ಕಿಮರ್ಥಮಯಜತ್ತತ್ರ ಹಯಮೇಧೇನ ಶಾರ್ಙ್ಗಿಣಂ ॥ ೧ ॥

ಕಥಂ ವಾ ನಿರ್ಮಿತಾ ಕಾಂಚೀ ವಿಖ್ಯಾತಾ ಕೇನ ಹೇತುನಾ ।
ಕಸ್ಮಿನ್ ಕಾಲೇ ದ್ವಿಜಶ್ರೇಷ್ಠ ನಿರ್ಮಿತಾ ವಿಶ್ವಕರ್ಮಣಾ ॥ ೨ ॥

ತಸ್ಮಿನ್ ಕ್ಷೇತ್ರೇ ಮಹಾಪುಣ್ಯೇ ಹಸ್ತಿಶೈಲಸ್ಯ ಮೂರ್ಧನಿ ।
ಕಥಮಾವಿರಭೂದ್ದೇವಃ ಪುಣ್ಯಕೋಟ್ಯಾಂ ಹರಿಃ ಸ್ವಯಂ ॥ ೩

---

೧. ಅಂಬರೀಷರಾಜನು ಈ ಮಾಹಾತ್ಮ್ಯವನ್ನು ಕೇಳಿ ಪುನಃ ಪ್ರಶ್ನೆ ಮಾಡಿದನು :—ಸಕಲ ಲೋಕಗಳಿಗೆ ಪಿತಾಮಹನಾದ ಬ್ರಹ್ಮನು ಈ ಸತ್ಯವ್ರತಕ್ಷೇತ್ರದಲ್ಲಿ ಅಶ್ವಮೇಧಯಾಗವನ್ನು ಮಾಡಿ ವಿಷ್ಣುವನ್ನು ಹೇಗೆ ಮತ್ತು ಏತಕ್ಕೋಸ್ಕರ ಆರಾಧಿಸಿದನು?

೨. ದ್ವಿಜೋತ್ತಮನೆ! ಈ ಪ್ರಸಿದ್ಧವಾದ ಕಾಂಚೀನಗರವು ಯಾವ ಕಾರಣದಿಂದ, ಹೇಗೆ, ಯಾವ ಕಾಲದಲ್ಲಿ ವಿಶ್ವಕರ್ಮದೇವನಿಂದ ರಚಿಸಲ್ಪಟ್ಟಿತು?

೩. ಮಹಾಪುಣ್ಯಕರವಾದ ಆ ಕ್ಷೇತ್ರದಲ್ಲಿ ಹಸ್ತಿಪರ್ವತದ ಶಿಖರದಲ್ಲಿ ಪುಣ್ಯಕೋಟಿ ಎಂಬ ವಿಮಾನದಲ್ಲಿ ವಿಷ್ಣುಪರಮಾತ್ಮನು ತಾನಾಗಿ ಹೇಗೆ ಅವತರಿಸಿದನು?

ಅಶ್ವಮೇಧೇ ಮಹಾಯಜ್ಞೇ ಬ್ರಹ್ಮಣಾ ಸಮನುಷ್ಠಿತೇ ।
ಯಜ್ಞಮೂರ್ತಿರನಂತಾತ್ಮಾ ತತ್ರ ಪ್ರಾದುರ್ಬಭೂವ ಹ ॥ ೪ ॥

ತತ್ರ ತೀರ್ಥಾನಿ ಪುಣ್ಯಾನಿ ವಿಷ್ಣೋರಾಯತನಾನಿ ಚ ।
ಅನ್ಯಾನಿ ಕತಿ ಪುಣ್ಯಾನಿ ಸಂತಿ ಸತ್ಯವ್ರತೇ ಶುಭೇ ॥ ೫ ॥

ಶ್ರೇಷ್ಠಾನಿ ಕತಿ ತೀರ್ಥಾನಿ ತಥೈವಾಯತನಾನಿ ಚ ।
ಕಾನಿ ನಾಮಾನಿ ತೀರ್ಥಾನಾಂ ರೂಪಾಣಾಂ ವಾ ಮಧುದ್ವಿಷಃ ॥ ೬ ॥

ರೂಪೈರ್ವಾ ಕೀದೃಶೈರ್ವಿಷ್ಣುಸ್ತತ್ರಾಸ್ತೇ ಕೈಶ್ಚ ಪೂಜಿತಃ ।
ಸರ್ವಮೇತದಶೇಷೇಣ ವಿಸ್ತರಾದ್ವಕ್ತುಮರ್ಹಸಿ ॥ ೭ ॥

ಇತಿ ಸಂಪೃಚ್ಛತಸ್ತಸ್ಯ ರಾಜ್ಞೋ ವಚನಮುತ್ತಮಂ ।
ಶ್ರುತ್ವಾ ದೇವಋಷಿಶ್ರೇಷ್ಠಃ ಪ್ರವಕ್ತುಮುಪಚಕ್ರಮೇ ॥ ೮ ॥

---

೪. ಬ್ರಹ್ಮನು ಆಚರಿಸಿದ ಅಶ್ವಮೇಧ ಮಹಾಯಜ್ಞದಲ್ಲಿ ಯಜ್ಞಮೂರ್ತಿಯಾದ ಶ್ರೀಮನ್ನಾರಾಯಣನು ಅಲ್ಲಿ ಪ್ರಾದುರ್ಭವಿಸಿದನಲ್ಲವೆ?

೫. ಆ ಸತ್ಯವ್ರತವೆಂಬ ಮಂಗಲಕರಕ್ಷೇತ್ರದಲ್ಲಿ ಪವಿತ್ರವಾದ ತೀರ್ಥಗಳೂ ವಿಷ್ಣುದೇವತಾಲಯಗಳೂ ಮತ್ತು ಪವಿತ್ರವಾದ ಇತರ ಸ್ಥಾನಗಳೂ ಎಷ್ಟಿವೆ?

೬. ಅವುಗಳಲ್ಲಿ ಬಹಳ ಶ್ರೇಷ್ಠವಾದ ತೀರ್ಥಗಳು ಎಷ್ಟು? ಹಾಗೆಯೇ ವಿಷ್ಣುಪರಮಾತ್ಮನ ಆಯತನಗಳು ಎಷ್ಟು? ಆಯಾಯ ತೀರ್ಥಗಳ ಮತ್ತು ಮಧುದಾನವನನ್ನು ಸಂಹರಿಸಿದ ವಿಷ್ಣುವಿನ ರೂಪಗಳ ಪವಿತ್ರ ನಾಮಗಳು ಯಾವುವು?

೭. ವಿಷ್ಣುವು ಯಾವ ಯಾವ ರೂಪಗಳಿಂದ ಆ ಸ್ಥಳದಲ್ಲಿ ನೆಲೆಸಿ ಯಾರಿಂದ ಪೂಜಿಸಲ್ಪಟ್ಟಿರುವನು? ಈ ಎಲ್ಲ ವಿಷಯಗಳನ್ನೂ ಸಂಪೂರ್ಣವಾಗಿ ಮತ್ತು ವಿಸ್ತಾರವಾಗಿ ಹೇಳಲು ಅರ್ಹನಾಗಿದ್ದೀ.

೮. ದೇವಋಷಿಗಳಲ್ಲಿ ಶ್ರೇಷ್ಠನಾದ ನಾರದಮುನಿಯು ಈ ರೀತಿಯಾಗಿ ಪ್ರಶ್ನೆಗಳನ್ನು ಮಾಡಿದ ಅಂಬರೀಷರಾಜನ ಉತ್ತಮವಾದ ವಾಣಿಯನ್ನು ಕೇಳಿ ಉತ್ತರವನ್ನು ಹೇಳಲು ಉಪಕ್ರಮಿಸಿದನು.

ನಾರದ ಉವಾಚ :—

ಹಂತ ತೇ ಕಥಯಿಷ್ಯಾಮಿ ರಾಜನ್ನೇಕಮನಾಃ ಶೃಣು ।
ಸತ್ಯವ್ರತಸ್ಯ ಕ್ಷೇತ್ರಸ್ಯ ಮಾಹಾತ್ಮ್ಯಂ ಪುಣ್ಯವರ್ಧನಂ ॥ ೯ ॥

ತೀರ್ಥಾನಾಂ ಕಥಯಿಷ್ಯಾಮಿ ಮಾಹಾತ್ಮ್ಯಂ ಪಾಪನಾಶನಂ ।
ವರಾಹಾಂಗಸಮುದ್ಭೂತಮನಂತಾಖ್ಯಂ ಚ ಯತ್ಸರಃ ॥ ೧೦ ॥

ತದ್ಧಿ ಪುಣ್ಯತಮಂ ಪ್ರೋಕ್ತಂ ಮಹಾಪಾತಕನಾಶನಂ ।
ಹೇಮಾಂಭೋಜಾಖ್ಯಮಪರಮೈಶಾನ್ಯಾಂ ಹಸ್ತಿಭೂಭೃತಃ ॥ ೧೧ ॥

ಶ್ರಿಯಾ ವಿನಿರ್ಮಿತಂ ವಿಷ್ಣುಮರ್ಚಯಂತ್ಯಾ ಪುರಾಂಬುಜೈಃ ।
ಲಕ್ಷ್ಮೀತೀರ್ಥಮಿತಿ ಖ್ಯಾತಂ ಪುಣ್ಯದಂ ಶ್ರೀವಿವರ್ಧನಂ ॥ ೧೨ ॥

ಬ್ರಹ್ಮಾಖ್ಯಮಪರಂ ತೀರ್ಥಂ ಬ್ರಹ್ಮಣಾ ನಿರ್ಮಿತಂ ಹಿ ತತ್ ।
ಆಗ್ನೇಯ್ಯಾಂ ದಿಶಿ ಶೈಲಸ್ಯ ಚಾಗ್ನ್ಯಾಖ್ಯಂ ತೀರ್ಥಮುತ್ತಮಂ ॥ ೧೩ ॥

---

೯. ನಾರದಮುನಿಯು ಹೇಳಿದುದೇನೆಂದರೆ:—ಶ್ರವಣದಿಂದ ಪುಣ್ಯವನ್ನು ಅಭಿವೃದ್ಧಿಮಾಡುವ ಸತ್ಯವ್ರತಕ್ಷೇತ್ರದ ಮಾಹಾತ್ಮ್ಯವನ್ನು ನಿನಗೆ ಸಂತೋಷದಿಂದ ಹೇಳುವೆನು, ರಾಜನೆ! ಅಚಲವಾದ ಮನಸ್ಸಿನಿಂದ ಕೇಳು.

೧೦. ಅಲ್ಲಿರುವ ಅನೇಕ ತೀರ್ಥಗಳ ಪಾಪಭಂಜಕವಾದ ಮಾಹಾತ್ಮ್ಯವನ್ನು ವರ್ಣಿಸುತ್ತೇನೆ. ಮತ್ತು ವರಾಹಾವತಾರದ ಅಂಗದಿಂದ ಹುಟ್ಟಿದ ಅನಂತ ಸರೋವರದ ಮಹಿಮೆಯನ್ನೂ ಹೇಳುವೆನು. ಆ ಅನಂತಸರೋವರವು ಮಹಾಪಾತಕಗಳನ್ನು ನಾಶಮಾಡುವುದೂ ಅತ್ಯಂತ ಪವಿತ್ರವೂ ಆಗಿರುವುದು.

೧೧. ಆ ಹಸ್ತಿಪರ್ವತದ ಈಶಾನ್ಯದಿಕ್ಕಿನಲ್ಲಿ ಸುವರ್ಣಕಮಲಗಳಿಂದ ಪ್ರಕಾಶಿಸುವುದರಿಂದ ಹೇಮಾಂಭೋಜವೆಂಬ ಹೆಸರುಳ್ಳ ಮತ್ತೊಂದು ತೀರ್ಥವಿರುವುದು.

೧೨. ಲಕ್ಷ್ಮೀದೇವಿಯು ಪೂರ್ವದಲ್ಲಿ ಕಮಲಗಳಿಂದ ವಿಷ್ಣುವನ್ನು ಅರ್ಚಿಸುವ ಸಮಯದಲ್ಲಿ ನಿರ್ಮಿಸಿರುವುದರಿಂದ ಪುಣ್ಯ-ಸಂಪತ್ತುಗಳನ್ನು ವೃದ್ಧಿಪಡಿಸುವ ಆ ತೀರ್ಥವು ಲಕ್ಷ್ಮೀತೀರ್ಥವೆಂದು ಪ್ರಸಿದ್ಧಿಗೊಂಡಿತು.

೧೩. ಮತ್ತೊಂದು ಬ್ರಹ್ಮತೀರ್ಥವೆಂದು ಪ್ರಸಿದ್ಧವಾದ ಒಂದು ತೀರ್ಥವು ಬ್ರಹ್ಮನಿಂದ ನಿರ್ಮಿತವಾಗಿದೆ. ಮತ್ತು ಹಸ್ತಿಶೈಲದ ಆಗ್ನೇಯ ದಿಕ್ಕಿನಲ್ಲಿ ಅಗ್ನಿತೀರ್ಥವೆಂದು ಪ್ರಸಿದ್ಧವಾದ ಒಂದು ಉತ್ತಮ ತೀರ್ಥವೂ ಇರುವುದು.

ಬ್ರಹ್ಮಣಾ ಮಥ್ನತಾ ಯಜ್ಞೇ ತ್ವರಣಿಂ ಚೋತ್ತರಾರಣಿಂ ।
ಉತ್ಪನ್ನಃ ಪಾವಕೋ ಯತ್ರ ತತ್ರ ಕೃತ್ವಾ ಬಿಲಂ ವಿಧಿಃ ॥ ೧೪ ॥

ಉತ್ಸಸರ್ಜ ಬಿಲೇ ತೋಯಂ ಸಾಕ್ಷತಂ ಶಾಸ್ತ್ರತಸ್ತದಾ ।
ತಸ್ಮಾತ್ತದಗ್ನಿತೀರ್ಥಾಖ್ಯಮಭೂದೋಜಸ್ಕರಂ ನೃಣಾಂ ॥ ೧೫ ॥

ನೈರ್ಋತ್ಯಾಂ ಪೂರ್ಣಪಾತ್ರಸ್ಥಮುದಕಂ ತು ಕುಶೈಃ ಸಹ ।
ಉತ್ಸೃಷ್ಟಂ ಬ್ರಹ್ಮಣಾ ಯತ್ರ ತತ್ಕುಶಾಖ್ಯಮಭೂತ್ಸರಃ ॥ ೧೬ ॥

ಕುಶತೀರ್ಥಮಿತಿ ಖ್ಯಾತಂ ಸ್ನಾನಾತ್ಪಾಪಹರಂ ನೃಣಾಂ ।
ಅಶ್ವಮೇಧೇ ಮಹಾಯಜ್ಞೇ ಬ್ರಹ್ಮಣಾ ಪರಮೇಷ್ಠಿನಾ ॥ ೧೭ ॥

ವಾಯವ್ಯೇ ಗಾರ್ಹಪತ್ಯಸ್ಯ ಕುಂಡೇ ಯತ್ರ ಸರಸ್ವತೀ ।
ನಿರ್ಗತಾ ಜಲರೂಪೇಣ ಪ್ಲಾವಯಂತೀ ಮಖಂ ಯತಃ ॥ ೧೮ ॥

---

೧೪. ಬ್ರಹ್ಮನು ಅಶ್ವಮೇಧಯಾಗವನ್ನು ಮಾಡುತ್ತಿರುವಾಗ ಅಗ್ನಿಯನ್ನು ಅಧರಾರಣಿ ಮತ್ತು ಉತ್ತರಾರಣಿಗಳೆಂಬ ಎರಡು ಅರಣಿಗಳಿಂದ ಮಥನ ಮಾಡುತ್ತಿರುವಾಗ ಯಾವ ಸ್ಥಳದಲ್ಲಿ ಅಗ್ನಿಯು ಉತ್ಪನ್ನವಾಯಿತೋ ಆ ಸ್ಥಳದಲ್ಲಿ ಭೂಮಿಯಲ್ಲಿ ಒಂದು ಬಿಲವನ್ನು ಮಾಡಿದನು.

೧೫. ಮತ್ತು ಆಗ ಆ ಬಿಲದಲ್ಲಿ ಶಾಸ್ತ್ರವಿಧಿಯನ್ನು ಅನುಸರಿಸಿ ಅಕ್ಷತಗಳಿಂದ ಸಹಿತವಾಗಿ ಜಲವನ್ನು ಹಾಕಿದನು. ಆಗ ಪ್ರಜೆಗಳಿಗೆ ತೇಜಸ್ಸನ್ನು ಹೆಚ್ಚಿಸುವ ಅಗ್ನಿತೀರ್ಥವೆಂಬ ನಾಮಾಂಕಿತವಾದ ತೀರ್ಥವು ಹುಟ್ಟಿತು.

೧೬. ಮತ್ತು ಆ ಯಾಗವಲ್ಲಿಯೇ ಪೂರ್ಣಪಾತ್ರವೆಂಬ ಯಜ್ಞಪಾತ್ರದಲ್ಲಿದ್ದ ಉದಕವನ್ನು ಶಾಸ್ತ್ರವಿಧಿಯಂತೆ ದರ್ಭೆಗಳ ಜೊತೆಗೆ ನೈರ್ಋತ್ಯ ದಿಕ್ಕಿನಲ್ಲಿ ಬಿಡಲ್ಪಡಲಾಗಿ ಅದು ಕುಶವೆಂಬ ಹೆಸರಿನಿಂದ ಒಂದು ಸರೋವರವಾಗಿ ಪರಿಣಮಿಸಿತು.

೧೭. ಆ ಸರೋವರವು ಸ್ನಾನಮಾತ್ರದಿಂದ ಜನಗಳ ಪಾಪಬಂಧವನ್ನು ಕಳೆಯುವ ಕುಶತೀರ್ಥವೆಂದು ಕರೆಯಲ್ಪಡುವುದು. ಇದು ಪರಮಸ್ಥಾನದಲ್ಲಿ ವಾಸಮಾಡುವ ಬ್ರಹ್ಮನು ಮಾಡಿದ ಅಶ್ವಮೇಧಯಾಗದ ಸಮಯದಲ್ಲಿ ಹುಟ್ಟಿರುವುದು.

೧೮. ಮತ್ತು ಯಾಗಶಾಲೆಯ ವಾಯವ್ಯದಿಕ್ಕಿನಲ್ಲಿ ಗಾರ್ಹಪತ್ಯ ಅಗ್ನಿಯ ಕುಂಡದಿಂದ ಸರಸ್ವತಿಯು ಆ ಯಾಗೋಪಕರಣಗಳನ್ನು ತೇಲಿಸುವಂತೆ ಒಂದು ಜಲಮಯ ನದೀರೂಪದಿಂದ ಹುಟ್ಟಿದಳು.

ಅಂತಸ್ತತ್ಕುಂಡತೀರ್ಥಾಽಖ್ಯಮಭೂತ್ ಪರಮಪಾವನಂ ।
ಹಸ್ತಿಶೈಲಸ್ಯ ವಾಯವ್ಯೇ ತೀರ್ಥಂ ಪೌರಂದರಾಭಿಧಂ ॥ ೧೯ ॥

ಗೌತಮೇನ ಪುರಾ ಶಪ್ತೋ ಮಹೇಂದ್ರಃ ಪಾಕಶಾಸನಃ ।
ಅಹಲ್ಯಾಸಂಗಮಾದ್ರಾಜನ್ನಫಲೋಽಭೂತ್ ಸುದುಃಖಿತಃ ॥ ೨೦ ॥

ಪರ್ಯಟನ್ ಪೃಥಿವೀಂ ಸರ್ವಾಂ ನಿರ್ವೀರ್ಯೋ ಭಯವಿಹ್ವಲಃ ।
ಸ ತು ಸತ್ಯವ್ರತಂ ಕ್ಷೇತ್ರಂ ಸಮಾಸಾದ್ಯ ಪುರಂದರಃ ॥ ೨೧ ॥

ತತ್ರ ದೇವಾನ್ ಋಷೀನ್ ದೃಷ್ಟ್ವಾ ಪ್ರಾರ್ಥಯಾಮಾಸ ದುಃಖಿತಃ ।
ತತ್ರ ದೇವಾಶ್ಚ ಪಿತೃಭಿರ್ಯಜಂತಿ ಪುರುಷೋತ್ತಮಂ ॥ ೨೨ ॥

---

೧೯. ಆದುದರಿಂದ ಪರಮಪಾವನವಾದ ಆ ತೀರ್ಥವು ಕುಂಡತೀರ್ಥವೆಂಬ ಖ್ಯಾತಿಯನ್ನು ಹೊಂದಿತು, ಮತ್ತು ಹಸ್ತಿಶೈಲದ ವಾಯುವ್ಯದಿಕ್ಕಿನಲ್ಲಿ ಪುರಂದರ ತೀರ್ಥವೆಂದು ಒಂದು ತೀರ್ಥವಿರುವುದು.

೨೦. ರಾಜನೆ! ಪಾಕಾಸುರನನ್ನು ಕೊಂದ ವಿಕ್ರಮಿಯಾದ ದೇವೇಂದ್ರನು ಪೂರ್ವದಲ್ಲಿ ಗೌತಮಮುನಿ ಪತ್ನಿಯಾದ ಅಹಲ್ಯೆಯ ಸಂಗವನ್ನು ಮಾಡಿ ಗೌತಮ ಮಹರ್ಷಿಯ ಶಾಪದಿಂದ ವೃಷಣೇಂದ್ರಿಯಗಳನ್ನು ಕಳೆದುಕೊಂಡು ಅತಿ ದುಃಖಿಯಾದನು.

೨೧. ಇಂದ್ರನು ಆ ದುಃಖದಿಂದ ತಪ್ತನಾಗಿ ದುಃಖಶಾಂತಿಗಾಗಿ ಸಕಲ ಪೃಥಿವಿಯನ್ನು ಸುತ್ತಿ ನಿರ್ವೀರ್ಯನೂ ಭಯದಿಂದ ಕುಗ್ಗಿಹೋದವನೂ ಆಗಿ ಸತ್ಯವ್ರತಕ್ಷೇತ್ರಕ್ಕೆ ಬಂದು ಸೇರಿದನು.

೨೨. ಆ ಸ್ಥಳದಲ್ಲಿ ಸಕಲ ದೇವತೆಗಳು ಪಿತೃದೇವತೆಗಳ ಜೊತೆಯಲ್ಲಿ ಪುರುಷೋತ್ತಮನಾದ ಮಹಾವಿಷ್ಣುವನ್ನು ಆರಾಧಿಸುತ್ತಿದ್ದರು. ದುಃಖಿತನಾದ ಇಂದ್ರನು ಅಲ್ಲಿದ್ದ ದೇವತೆಗಳನ್ನೂ ಋಷಿಗಳನ್ನೂ ಕಂಡು ದುಃಖಶಾಂತಿಯ ಉಪಾಯವನ್ನು ಪ್ರಾರ್ಥಿಸಿದನು

ದೃಷ್ಟ್ವಾ ತೇ ವಿಫಲಂ ಶಕ್ರಂ ಮೇಷಸ್ಯ ವೃಷಣೌ ನೃಪ ।
ದದುಃ ಶಕ್ರಾಯ ಪಿತರಸ್ತಾನಿಂದ್ರಃ ಪ್ರತ್ಯಪದ್ಯತ ॥ ೨೩ ॥

ತತಃ ಶಕ್ರಃ ಸವೃಷಣಸ್ತತ್ರ ಕೃತ್ವಾ ಸರೋ ಮಹತ್ ।
ತಸ್ಮಿನ್ ತ್ಸರಸಿ ದೇವೇಂದ್ರಃ ಸ್ನಾತ್ವಾ ದೇವಗಣೈಃ ಸಹ ॥ ೨೪ ॥

ಧ್ಯಾಯನ್ ಜನಾರ್ದನಂ ದೇವಂ ಚಕಾರ ತಪ ಉತ್ತಮಂ ।
ಪಶ್ಯಂಶ್ಚ ಹಸ್ತಿಶೈಲಾಗ್ರೇ ಪುಣ್ಯಕೋಟ್ಯಾಂ ಹರಿಂ ಮುಹುಃ ॥ ೨೫ ॥

ಏವಂ ವರ್ಷಶತಂ ರಾಜನ್ ಉಷಿತ್ವಾ ಪಾಕಶಾಸನಃ ।
ಮುಕ್ತಶಾಪಃ ಶ್ರಿಯಂ ಲಬ್ಧ್ವಾ-ಜಗಾಮ ಹಿ ಪುನರ್ದಿವಂ ॥ ೨೬ ॥

ಯದಿಂದ್ರನಿರ್ಮಿತಂ ತೀರ್ಥಂ ತಸ್ಮಾತ್ಪೌರಂದರಾಭಿಧಂ ।
ತಸ್ಮಿನ್ನೇವ ಚ ದಿಗ್ಭಾಗೇ ತೀರ್ಥಾನ್ಯನ್ಯಾನಿ ಭೂಮಿಪ ॥ ೨೭ ॥

---

೨೩. ರಾಜನೆ! ಆಗ ಅವರೆಲ್ಲರೂ ವೃಷಣರಹಿತನಾದ ಇಂದ್ರನನ್ನು ಕಂಡರು. ಆಗ ಪಿತೃದೇವರು ಇಂದ್ರನಿಗೆ ಆಡಿನ ವೃಷಣಗಳನ್ನು ಕೊಟ್ಟರು. ಇಂದ್ರನು ಆ ವೃಷಣಗಳನ್ನು ಹೊಂದಿ ವೀರ್ಯವಂತನಾದನು.

೨೪. ಅನಂತರದಲ್ಲಿ ದೇವೇಂದ್ರನಾದ ಇಂದ್ರನು ವೃಷಣಸಹಿತನಾಗಿ ಅಲ್ಲಿ ಒಂದು ಮಹತ್ತಾದ ಸರೋವರವನ್ನು ನಿರ್ಮಿಸಿ ಆ ಸರೋವರದಲ್ಲಿ ಅನೇಕ ದೇವ ಪರಿವಾರದ ಜೊತೆಗೆ ಸ್ನಾನಮಾಡಿದನು.

೨೫. ಮತ್ತು ಜನಾರ್ದನ ಸ್ವಾಮಿಯನ್ನು ಮನಸ್ಸಿನಿಂದ ಧ್ಯಾನಮಾಡುತ್ತ ಹಸ್ತಿಶೈಲದ ಶಿಖರದಲ್ಲಿದ್ದ ಪುಣ್ಯಕೋಟಿ ವಿಮಾನದಲ್ಲಿ ಮತ್ತೆ ಮತ್ತೆ ಹರಿಯನ್ನು ಸಂದರ್ಶನಮಾಡುತ್ತ ಉತ್ತಮವಾದ ತಪಸ್ಸನ್ನು ಆಚರಿಸಿದನು.

೨೬. ರಾಜನೇ! ಈ ರೀತಿಯಾಗಿ ಇಂದ್ರನು ಒಂದು ನೂರು ವರ್ಷಗಳ ಕಾಲ ಅಲ್ಲಿ ವಾಸಮಾಡಿ ಶಾಪದಿಂದ ಮುಕ್ತನಾಗಿ ತನ್ನ ದೇವೈಶ್ವರ್ಯವನ್ನು ಮತ್ತೆ ಹೊಂದಿ ಮೊದಲಿನಂತೆ ಸ್ವರ್ಗಲೋಕವನ್ನು ಆಳಿದನು.

೨೭. ಆ ತೀರ್ಥವು ಇಂದ್ರನಿಂದ ನಿರ್ಮಿಸಲ್ಪಟ್ಟಿದ್ದರಿಂದ ಇಂದ್ರನ ಪುರಂದರ ಎಂಬ ಹೆಸರಿನಿಂದ ಪುರಂದರ ತೀರ್ಥವೆಂದು ಪ್ರಸಿದ್ಧವಾಯಿತು. ಭೂಪತಿಯೆ! ಆ ದಿಗ್ಭಾಗದಲ್ಲಿ ಇತರ ತೀರ್ಥಗಳು ಅನೇಕವಾಗಿವೆ.

**ಸಂತಿ ತಾನ್ಯಪಿ ವಕ್ಷ್ಯಾಮಿ ಶೃಣುಷ್ವ ಗದತೋ ಮಮ ।
ವಾಮನಾಖ್ಯಂ ಪಾಪಹರಂ ತೀರ್ಥಂ ಪುಣ್ಯಪ್ರವರ್ಧನಂ ॥ ೨೮ ॥**

**ವಾಮನೇನ ಪುರಾ ರಾಜನ್ ಬಲಿಯಜ್ಞದಿದೃಕ್ಷುಣಾ ।
ನಿರ್ಮಿತಂ ತತ್ರ ದೇವೇನ ತದಾಖ್ಯಮಭವದ್ಭುವಿ ॥ ೨೯ ॥**

**ಅಥಾಪರಂ ಪುಣ್ಯತಮಂ ತೀರ್ಥಂ ಶೃಣು ನೃಪೋತ್ತಮ ।
ಪಾತಾಲಾತ್ ಸ್ವಯಮಭ್ಯೇತ್ಯ ವಿಷ್ಣುನಾ ಶೇಷರೂಪಿಣಾ ॥ ೩೦ ॥**

**ನಿರ್ಮಿತಂ ಪಂಚತೀರ್ಥಾಖ್ಯಂ ಪಂಚಪಾತಕನಾಶನಂ ।
ಬಲೇಶ್ಚ ಯಜಮಾನಸ್ಯ ಬ್ರಹ್ಮರ್ಷೇಸ್ತಪ್ಯತೋ ಭೃಗೋಃ ॥ ೩೧ ॥**

---

೨೮. ಆ ತೀರ್ಥಗಳನ್ನು ಕ್ರಮವಾಗಿ ಹೇಳುವೆನು. ಅವುಗಳನ್ನು ವಿವರಿಸುವ ನನ್ನ ವಚನವನ್ನು ಲಾಲಿಸು, ಅವುಗಳಲ್ಲಿ ವಾಮನತೀರ್ಥವೆಂಬುದು ಸಕಲ ಪಾಪಗಳನ್ನು ಕಳೆದು ಪುಣ್ಯವನ್ನು ಹೆಚ್ಚಿಸುವ ಒಂದು ತೀರ್ಥವು.

೨೯. ರಾಜೇಂದ್ರನೆ! ಪೂರ್ವಕಾಲದಲ್ಲಿ ಆ ಸ್ಥಳದಲ್ಲಿ ಬಲಿಚಕ್ರವರ್ತಿಯು ಮಾಡಿದ ಯಜ್ಞವನ್ನು ನೋಡಬೇಕೆಂಬ ಇಷ್ಟದಿಂದ ಅಲ್ಲಿ ಅವತರಿಸಿದ ವಾಮನದೇವನಿಂದ ನಿರ್ಮಿಸಲ್ಪಟ್ಟ ಸರೋವರವು ಭೂಮಿಯಲ್ಲಿ ವಾಮನನ ಹೆಸರಿನಿಂದ ಪ್ರಸಿದ್ಧಿ ಹೊಂದಿತು.

೩೦. ರಾಜಶ್ರೇಷ್ಠನೆ! ಇನ್ನು ಮುಂದೆ ಬಹು ಪವಿತ್ರವಾದ ಮತ್ತೊಂದು ತೀರ್ಥವನ್ನು ಕೇಳು, ಅದನ್ನು ಶೇಷರೂಪಿಯಾದ ವಿಷ್ಣುವು ಪಾತಾಳದಿಂದ ಮೇಲಕ್ಕೆ ಬಂದು ನಿರ್ಮಿಸಿರುವನು. ಅದು ಪಂಚಮಹಾಪಾತಕಗಳನ್ನು ನಿರ್ಮೂಲಮಾಡುವ ಪಂಚತೀರ್ಥವೆಂದು ಪ್ರಸಿದ್ಧವಾಗಿದೆ.

೩೧. ಯಾಗದೀಕ್ಷಿತನಾದ ಬಲಿಚಕ್ರವರ್ತಿ ಮತ್ತು ತಪವನ್ನು ಮಾಡುತ್ತಲಿರುವ ಬ್ರಹ್ಮರ್ಷಿಯಾದ ಭೃಗುಮುನಿ ಇವರಿಬ್ಬರನ್ನು ಅನುಗ್ರಹಿಸಲೋಸ್ಕರ ವಾಮನನು ತಾನಾಗಿ ಬಂದಿರುವನು.

ತಯೋರನುಗ್ರಹಾರ್ಥಾಯ ವಾಮನಃ ಸ್ವಯಮಾಗತಃ ।
ದರ್ಶಯಾಮಾಸ ರೂಪಾಣಿ ದಿವ್ಯಾನಿ ವಿವಿಧಾನಿ ಚ ॥ ೩೨ ॥

ಯತ್ರ ಕಾಮೇಷ್ಟಿಮಕರೋದ್ ಭೃಗುರ್ಬ್ರಹ್ಮರ್ಷಿಸತ್ತಮಃ ।
ಶ್ರಿಯಾ ವಿಹೀನೋ ದುಃಖಾರ್ತಃ ಪ್ರಪೇದೇ ಚ ಶ್ರಿಯಂ ಪುನಃ ॥

ಯತ್ರ ಗೌರೀ ಸಮಭ್ಯೇತ್ಯ ಶಂಕರೇಣ ಪ್ರಕೋಪಿತಾ ।
ಶ್ರಿಯಾ ವಿಹೀನಾ ಪತ್ಯಾ ಚ ಚಕಾರ ತಪ ಉತ್ತಮಂ ॥ ೩೪ ॥

ಕಾಮಗೋಷ್ಠೇ ಬಿಲದ್ವಾರೇ ಸಮ್ಯಗಾರಾಧ್ಯ ವಾಮನಂ ।
ಪುನಃ ಪತಿಂ ಸಮಾಸಾದ್ಯ ಮುಮುದೇ ಗಿರಿಜಾ ನೃಪ ॥ ೩೫ ॥

ಯತ್ರ ವೇದಿಂ ಕಲ್ಪಯಿತ್ವಾ ಭೃಗುಃ ಕಾಮಿತಸಿದ್ಧಯೇ ।
ಚಕಾರ ಕಾಮಿಕಾಮಿಷ್ಟಿಂ ಶ್ರೀರ್ಮೇ ಭೂಯಾತ್ಸುತೇತಿ ಹಿ ॥ ೩೬ ॥

---

೩೨. ಬಲಿ, ಭೃಗುಮುನಿಗಳ ಸಮೀಪಕ್ಕೆ ಬಂದು ವಾಮನನು ತನ್ನ ನಾನಾ ರೂಪಗಳನ್ನು ತೋರ್ಪಡಿಸಿದನು.

೩೩. ಯಾವ ಪಾವನಸ್ಥಳದಲ್ಲಿ ಬ್ರಹ್ಮರ್ಷಿಗಳಲ್ಲಿಯೂ ಸಾಧುಗಳಲ್ಲಿಯೂ ಉತ್ತಮನಾದ ಭೃಗುಮುನಿಯು ಪುತ್ರಕಾಮೇಷ್ಟಿಯನ್ನು ಮಾಡಿ ಶ್ರೀದೇವಿಯಿಂದ ವಿಹೀನನಾಗಿ ದುಃಖಗಳನ್ನು ಅನುಭವಿಸಿ ಮತ್ತೆ ಶ್ರೀದೇವಿಯನ್ನು ಹೊಂದಿರುವನೋ ಅಂತಹ ಪವಿತ್ರತೀರ್ಥವದು.

೩೪. ಶಂಕರನಿಂದ ಕೋಪಗೊಳಿಸಲ್ಪಟ್ಟ ಗೌರಿಯು ಶ್ರೀದೇವಿಯಿಂದಲೂ ಪತಿಯಿಂದಲೂ ವಿಹೀನಳಾಗಿ ಉತ್ತಮವಾದ ತಪವನ್ನು ಯಾವ ಸ್ಥಳದಲ್ಲಿ ಆಚರಿಸಿದಳೋ ಅಂತಹ ಪವಿತ್ರತೀರ್ಥವದು.

೩೫. ರಾಜನೆ! ಕಾಮ್ಯಫಲಗಳಿಂದ ತುಂಬಿರುವ ಆ ಬಿಲದ್ವಾರದಲ್ಲಿ ಗೌರಿಯು ವಾಮನನನ್ನು ಚನ್ನಾಗಿ ಆರಾಧಿಸಿ ಮತ್ತೆ ಪತಿಯಿಂದ ಸಂಯುಕ್ತಳಾಗಿ ಸಂತೋಷವನ್ನು ಅನುಭವಿಸಿದಳು.

೩೬. ಯಾವ ತೀರ್ಥಸ್ಥಾನದಲ್ಲಿ ಶ್ರೀದೇವಿಯು ತನಗೆ ಮಗಳಾಗಿ ಹುಟ್ಟಲೆಂಬ ಕಾಮನೆಯಿಂದ ಆ ಫಲಸಿದ್ಧಿಗೋಸ್ಕರ ವೇದಿಕೆಯನ್ನು ಸಿದ್ಧಮಾಡಿ ಕಾಮ್ಯೇಷ್ಟಿಯನ್ನು ನೆರವೇರಿಸಿದನೋ ಅಂತಹ ಪಾವನತೀರ್ಥವದು.

ಜುಹ್ವತಸ್ತಸ್ಯ ವಿಪ್ರರ್ಷೇರಗ್ನಿಕುಂಡಾತ್ ಸಮುತ್ಥಿತಾ ।
ಕನ್ಯಾರೂಪಧರಾ ಲಕ್ಷ್ಮೀಸ್ತಾಂ ದೃಷ್ಟ್ವಾ ಮುಮುದೇ ಭೃಗುಃ ॥ ೩೭ ॥

ತತೋ ಹೋಮೇ ಸಮಾಪ್ತೇ ತು ತಸ್ಮಿನ್ ಕುಂಡೇಽಥ ವಾಮನಃ ।
ಉತ್ಸಸರ್ಜ ತದಾ ಪುಣ್ಯಮುದಕಂ ಸ್ವಕಮಂಡಲೋಃ ॥ ೩೮ ॥

ಶೇಷರೂಪೇಣ ಹರಿಣಾ ಭೃಗುಣಾ ಬಲಿನಾ ತಥಾ ।
ವಾಮನೇನ ಚ ಲಕ್ಷ್ಮ್ಯಾ ಚಾಪ್ಯುಷಿತಂ ಪಂಚಭಿರ್ಯುತೈಃ ॥ ೩೯ ॥

ತಸ್ಮಾತ್ತತ್ಪಂಚತೀರ್ಥಾಖ್ಯಂ ಪಾವನಂ ಶ್ರೀಕರಂ ನೃಣಾಂ ।
ತತ್ರಾಪರಂ ಮಂಗಲಾಖ್ಯಂ ತೀರ್ಥಮಸ್ತಿ ಮಹತ್ತರಂ ॥ ೪೦ ॥

ಯತ್ರ ಗಂಗಾ ನೃಪಶ್ರೇಷ್ಠ ಶಪ್ತಾ ಗಿರಿಜಯಾ ಪುರಾ ।
ತಪ ಉಗ್ರಂ ಸಮಾಸ್ಥಾಯ ಮುಕ್ತಶಾಪಾ ಬಭೂವ ಹ ॥ ೪೧ ॥

---

೩೭. ಆ ಕಾಮ್ಯೇಷ್ಟಿಯ ಅನುಷ್ಠಾನದಲ್ಲಿ ಬ್ರಹ್ಮರ್ಷಿಯಾದ ಭೃಗುಮುನಿಯು ಹೋಮಮಾಡುತ್ತಲಿದ್ದ ಹಾಗೆಯೇ ಅಗ್ನಿಕುಂಡದಿಂದ ಕನ್ಯಾರೂಪವನ್ನು ಧರಿಸಿ ಲಕ್ಷ್ಮಿಯು ಆವಿರ್ಭವಿಸಿದಳು. ಭೃಗುಮುನಿಯು ಅವಳನ್ನು ಕಂಡು ಆನಂದಿಸಿದನು.

೩೮. ಆಗ ಹೋಮವು ಸಂಪೂರ್ಣ ಮುಗಿಯಲಾಗಿ ವಾಮನನು ಆ ಕುಂಡದಲ್ಲಿ ತನ್ನ ಕಮಂಡಲುವಿನಿಂದ ಪವಿತ್ರವಾದ ಉದಕವನ್ನು ಬಿಟ್ಟನು.

ಹೀಗೆ ಆ ತೀರ್ಥದಲ್ಲಿ ಶೇಷರೂಪಿಯಾದ ವಿಷ್ಣು, ಭೃಗುಮಹರ್ಷಿ, ಬಲಿಚಕ್ರವರ್ತಿ, ವಾಮನ ಮತ್ತು ಲಕ್ಷ್ಮಿಯೂ ಒಟ್ಟು ಸೇರಿ ಐದು ಮಂದಿಯು ವಾಸಮಾಡಿದರು.

೪೦. ಈ ಕಾರಣದಿಂದ ಅದು ಪಂಚತೀರ್ಥವೆಂದು ಕರೆಯಲ್ಪಡುವುದೂ ಜನಗಳಿಗೆ ಪಾವನವೂ ಮತ್ತು ಸಂಪತ್ತನ್ನು ಕೊಡುವುದೂ ಆಗಿದೆ. ಅಲ್ಲಿ ಮಂಗಳತೀರ್ಥವೆಂಬ ಅತಿ ಮಹತ್ತ್ವವುಳ್ಳ ಒಂದು ತೀರ್ಥವಿರುವುದು.

೪೧. ರಾಜೋತ್ತಮನೆ! ಇದು ಪೂರ್ವದಲ್ಲಿ ಗಿರಿಜೆಯಿಂದ ಶಪಿಸಲ್ಪಟ್ಟ ಗಂಗೆಯು ಉಗ್ರವಾದ ತಪಸ್ಸನ್ನು ಆಚರಿಸಿ ಶಾಪದಿಂದ ಬಿಡುಗಡೆಯಾದ ಪವಿತ್ರವಾದ ತೀರ್ಥವು.

ಶಾಪಾದಮಂಗಲಾ ಭೂತ್ವಾ ಪುನರ್ಮಂಗಲಮಾಪ ಯತ್ ।
ತಸ್ಮಾತ್ ತನ್ಮಂಗಲಂ ನಾಮ್ನಾ ತೀರ್ಥಂ ಖ್ಯಾತಂ ಸುಮಂಗಲಂ ॥

ಚಂದ್ರಾಖ್ಯಮಪರಂ ತೀರ್ಥಂ ಚಂದ್ರರೂಪೇಣ ವಿಷ್ಣುನಾ ।
ನಿರ್ಮಿತಂ ರಕ್ಷತಾ ಗೌರೀಂ ಪ್ರಪನ್ನಾಂ ಭಯವಿಹ್ವಲಾಂ ॥ ೪೩ ॥

ತದ್ವೈ ಚಂದ್ರಸರೋ ನಾಮ್ನಾ ಖ್ಯಾತಮಾಸೀತ್ ಸುಶೋಭನಂ ।
ಯಸ್ಮಿನ್ ಶಿವಜಟಾಜೂಟಾದ್ಗಂಗಾ ನಿಪತಿತಾಽಭವತ್ ॥ ೪೪ ॥

ಕ್ರುದ್ಧಾಯಾಃ ಪರ್ವತೇಂದ್ರಸ್ಯ ಪುತ್ರ್ಯಾಃ ಶಾಪಾತ್ ಪ್ರಕಂಪಿತಾ ।
ತಸ್ಮಾತ್ ತಚ್ಛಿವಗಂಗಾಽಖ್ಯಮಭೂಚ್ಚಂದ್ರಸರಃ ಪುನಃ ॥ ೪೫ ॥

ಪುನರನ್ಯಚ್ಚ ರಾಜೇಂದ್ರ ತೀರ್ಥಾನಾಮುತ್ತಮಂ ಪರಂ ।
ಸರ್ವತೀರ್ಥಮಿತಿ ಖ್ಯಾತಂ ಸರ್ವಪಾಪಪ್ರಣಾಶನಂ ॥ ೪೬ ॥

---

೪೨. ಮೊದಲು ಗಿರಿಜೆಯು ಶಾಪದಿಂದ ಅಮಂಗಲಭಾವವನ್ನು ಹೊಂದಿ ಮತ್ತೆ ತಪೋಬಲದಿಂದ ಮಂಗಲಸ್ವರೂಪವನ್ನು ಹೊಂದಿರುವುದರಿಂದ ಸುಮಂಗಲಗಳನ್ನು ಪ್ರದಾನಮಾಡುವ ಈ ತೀರ್ಥವು ಮಂಗಲತೀರ್ಥವೆಂದು ಹೆಸರುವಾಸಿಯಾಯಿತು.

೪೩. ಚಂದ್ರತೀರ್ಥವೆಂಬುದು ಮತ್ತೊಂದು ತೀರ್ಥವು, ಇದನ್ನು ಚಂದ್ರರೂಪಿಯಾದ ವಿಷ್ಣುವು ಭಯಾಕ್ರಾಂತಳೂ ಶರಣಹೊಂದಿದವಳೂ ಆದ ಗೌರಿಯನ್ನು ರಕ್ಷಿಸುವ ಸಲುವಾಗಿ ನಿರ್ಮಾಣಮಾಡಿರುವನು.

೪೪. ಅತ್ಯಂತ ಮಂಗಳಪ್ರದಾಯಕವಾದ ಆ ತೀರ್ಥವು ಚಂದ್ರಸರೋವರವೆಂಬ ಹೆಸರಿನಿಂದ ಪ್ರಖ್ಯಾತಿಗೊಂಡಿತು. ಹಿಂದೆ ಆ ಚಂದ್ರ ಸರೋವರದಲ್ಲಿ ಶಿವನ ಜಟಾಜೂಟದಿಂದ ಗಂಗೆಯ ಪ್ರವಾಹವು ಬಿದ್ದಿತ್ತು.

೪೫. ಕ್ರುದ್ಧಳಾದ ಪರ್ವತರಾಜನ ಮಗಳಾದ ಪಾರ್ವತಿಯಶಾಪದಿಂದ ನಡುಗಿಹೋದ ಗಂಗೆಯು ಬಿದ್ದಿರುವ ಈ ಚಂದ್ರಸರೋವರವು ಈ ಕಾರಣದಿಂದ ಮತ್ತೆ ಶಿವಗಂಗಾ ಎಂಬ ಹೆಸರನ್ನು ಹೊಂದಿತು.

೪೬. ರಾಜೇಂದ್ರನೆ! ಎಲ್ಲ ತೀರ್ಥಗಳಲ್ಲಿ ಬಹು ಉತ್ತಮವಾದ ಸರ್ವತೀರ್ಥವೆಂಬ ಹೆಸರಿನ ಮತ್ತೊಂದು ತೀರ್ಥವಿರುವುದು, ಇದು ಸರ್ವ ಪಾತಕಗಳನ್ನು ನಾಶಮಾಡುವ ಮಹಿಮೆಯುಳ್ಳದ್ದಾಗಿದೆ.

ಪುರಾ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ತೀರ್ಥಾನಿ ಯಾನಿ ಲೋಕೇಷು ಹ್ರದಾ ನದ್ಯೋ ನದಾಸ್ತಥಾ ॥ ೪೭ ॥

ಸರ್ವೇ ಸಮೇತ್ಯ ಸಹಿತಾಸ್ತುಷ್ಟುವುರ್ಯತ್ರ ಕೇಶವಂ ।
ಕರ್ತುಂ ವಿಕಲುಷಾಂ ಗಂಗಾಂ ಗೌರೀಶಾಪಾದಮಂಗಲಾಂ ॥ ೪೮ ॥

ತತ್ರ ತೀರ್ಥವರಂ ಪುಣ್ಯಂ ಸರ್ವತೀರ್ಥೈಃ ಸಮನ್ವಿತಂ ।
ತಸ್ಯ ದಕ್ಷಿಣದೇಶೇಽಸ್ತಿ ಪಾಂಡವಂ ತೀರ್ಥಮುತ್ತಮಂ ॥ ೪೯ ॥

ಪಾರೀಕ್ಷಿತೇನ ಯತ್ರೇಷ್ಟಂ ಪುರಾ ಕೃಷ್ಣಂ ದಿದೃಕ್ಷುಣಾ ।
ತಸ್ಯ ತೀರ್ಥಸ್ಯ ಚಾಽಗ್ನೇಯೇ ದೇಶೇ ಜ್ವರಹರಾಭಿಧಂ ॥ ೫೦ ॥

ತೀರ್ಥಂ ತಪಸ್ವಿನಾ ಪೂರ್ವಂ ಬ್ರಾಹ್ಮಣೇನ ವಿನಿರ್ಮಿತಂ ।
ತಸ್ಯ ದಕ್ಷಿಣದಿಗ್ಭಾಗೇ ಗಾರುಡಂ ತೀರ್ಥಮುತ್ತಮಂ ॥ ೫೧ ॥

---

೪೭. ಪೂರ್ವ ಕಾಲದಲ್ಲಿ ದೇವತೆಗಳು, ಗಂಧರ್ವರು, ಸಿದ್ಧರು, ಮಹರ್ಷಿಗಳು ಮತ್ತು ಲೋಕದಲ್ಲಿ ನದೀ-ನದ-ಹ್ರದರೂಪವಾಗಿ ಪ್ರಸಿದ್ಧವಾದ ಸಕಲ ತೀರ್ಥಗಳು ಇವರೆಲ್ಲರೂ ಆ ಪವಿತ್ರಸ್ಥಾನದಲ್ಲಿ ಸೇರಿದ್ದರು.

೪೮. ಗೌರಿಯ ಶಾಪದಿಂದ ಅಮಂಗಲ ಸ್ವರೂಪಳಾದ ಗಂಗೆಯನ್ನು ಪಾಪನಿರ್ಮುಕ್ತಳನ್ನಾಗಿಯೂ ಪವಿತ್ರಳನ್ನಾಗಿಯೂ ಮಾಡಲು ದೇವ-ಗಂಧರ್ವಾದಿಗಳು ಅಲ್ಲಿ ಸಂಘವಾಗಿ ಸೇರಿ ವಿಷ್ಣುವನ್ನು ಸ್ತೋತ್ರಮಾಡಿದರು.

೪೯. ಆದುದರಿಂದ ಸಕಲ ತೀರ್ಥ ಸಮಷ್ಟಿಯಿಂದ ಸೇರಿದ ಆ ತೀರ್ಥವು ಉತ್ತಮ ಮತ್ತು ಅತ್ಯಂತ ಪವಿತ್ರವಾದುದು. ಅದಕ್ಕೆ ದಕ್ಷಿಣಭಾಗದಲ್ಲಿ ಪಾಂಡವವೆಂಬ ಉತ್ತಮವಾದ ಒಂದು ತೀರ್ಥವಿರುವುದು.

೫೦. ಪಾರೀಕ್ಷಿತನೆಂಬ ರಾಜನು ಪೂರ್ವದಲ್ಲಿ ಕೃಷ್ಣನನ್ನು ನೋಡಬೇಕೆಂಬ ಆಕಾಂಕ್ಷೆಯಿಂದ ಪರಮಾತ್ಮನನ್ನು ಅಲ್ಲಿ ಪೂಜಿಸಿದನು. ಆ ತೀರ್ಥದ ಆಗ್ನೇಯದಿಕ್ಕಿನಲ್ಲಿ ಜ್ವರಹರವೆಂಬುದು ಒಂದು ತೀರ್ಥವಿರುವುದು.

೫೧. ಆ ತೀರ್ಥವು ತಪಸ್ವಿಯಾದ ಒಬ್ಬ ಬ್ರಾಹ್ಮಣನಿಂದ ನಿರ್ಮಿಸಲ್ಪಟ್ಟಿರುವುದು. ಅದರ ದಕ್ಷಿಣಭಾಗದಲ್ಲಿ ಗಾರುಡವೆಂಬ ಒಂದು ಉತ್ತಮ ತೀರ್ಥವಿರುವುದು.

ಗರುಡೇನ ಕೃತಂ ಪೂರ್ವಂ ವಿಪ್ರಯೋರ್ಮುಕ್ತಿಮಿಚ್ಛತಾ ।
ತಸ್ಯ ಚೈಶಾನ್ಯದಿಗ್ಭಾಗೇ ಸಿದ್ಧಾಖ್ಯಂ ತೀರ್ಥಮುತ್ತಮಂ ॥ ೫೨ ॥

ಪುರಾ ಸಿದ್ಧಾಶ್ಚ ಗಂಧರ್ವಾಃ ಸೇಂದ್ರಾಶ್ಚೈವ ದಿವೌಕಸಃ ।
ವೃತ್ರಂ ಸಂಹರ್ತುಮುದ್ಯುಕ್ತಾಃ ಶಕ್ರಂ ದೃಷ್ಟ್ವಾ ನಿರಾಯುಧಂ ॥ ೫೩ ॥

ತತಃ ಪ್ರಹರಣಸ್ಯಾರ್ಥೇ ಸರ್ವೇ ಬ್ರಹರ್ಷಿಮುತ್ತಮಂ ।
ದಧೀಚಿಂ ತತ್ರ ತಪ್ಯಂತಂ ವಜ್ರಾರ್ಥಂ ಶರಣಂ ಯಯುಃ ॥ ೫೪ ॥

ಅಭ್ಯಯಾಚಂತ ತಂ ವಿಪ್ರಂ ವಜ್ರಂ ತದ್ದೇಹಸಂಭವಂ ।
ತದ್ದಾಸ್ಯಾಮೀತಿ ತೇನೋಕ್ತಾಸ್ತಮೇವ ಪರಿಚಕ್ರಮುಃ ॥ ೫೫ ॥

ಬ್ರಹ್ಮರೂಪಧರಾಃ ಸರ್ವೇ ಜಟಾವಲ್ಕಲಧಾರಿಣಃ ।
ತತ್ರೇಂದ್ರೋ ನಿರ್ಮಮೇ ತೀರ್ಥಂ ಸಿದ್ಧ್ಯರ್ಥಂ ಸ್ವಸ್ಯ ಕರ್ಮಣಃ ॥

---

೫೨. ಪೂರ್ವದಲ್ಲಿ ಇಬ್ಬರು ಬ್ರಾಹ್ಮಣರ ಮುಕ್ತಿಗೋಸ್ಕರ ಆ ಗಾರುಡತೀರ್ಥವನ್ನು ಗರುಡನು ಮಾಡಿರುವನು. ಅದರ ಈಶಾನ್ಯದಿಕ್ಕಿನ ಮೂಲೆಯಲ್ಲಿ ಉತ್ತಮವಾದ ಸಿದ್ಧತೀರ್ಥವೆಂಬುದು ಒಂದು ಇರುವುದು.

೫೩. ಹಿಂದೆ ಸಿದ್ಧರು, ಗಂಧರ್ವರು, ಇಂದ್ರ ಮುಂತಾದ ಸಕಲ ದೇವತೆಗಳು ವೃತ್ರಾಸುರನನ್ನು ಸಂಹರಿಸಲು ಉದ್ಯುಕ್ತರಾದರು, ಆದರೆ ದೇವರಾಜನಾದ ಇಂದ್ರನಲ್ಲಿ ವೃತ್ರಸಂಹಾರಕ್ಕೆ ಬೇಕಾದ ಆಯುಧವಿಲ್ಲದಿರುವುದನ್ನು ಕಂಡು ಚಿಂತಿಸಿದರು.

೫೪. ತರುವಾಯ ಅವರೆಲ್ಲರೂ ವಜ್ರಾಯುಧವೆಂಬ ಆಯುಧವನ್ನು ಸಂಗ್ರಹಿಸುವುದಕ್ಕೋಸ್ಕರ ಅಲ್ಲಿ ತಪಸ್ಸನ್ನು ಮಾಡುತ್ತಿದ್ದ ಬ್ರಹ್ಮರ್ಷಿಯಾದ ದಧೀಚಿಮುನಿಯನ್ನು ಶರಣಹೊಂದಿದರು.

೫೫. ಆಗ ದೇವತೆಗಳು ದಧೀಚಿಮುನಿಯನ್ನು ಶರಣ ಹೊಂದಿ ಮುನಿಯ ದೇಹದ ಮೂಳೆಯಿಂದ ಆಗುವ ವಜ್ರಾಯುಧವನ್ನು ಪ್ರಾರ್ಥಿಸಿಕೊಂಡರು. ಮುನಿಯು ಅದನ್ನು ಕೊಡುವೆನೆಂದು ಹೇಳಲು ಸಕಲ ದೇವತೆಗಳು ಮುನಿಯನ್ನು ಸುತ್ತುವರಿದು ನಿಂತರು.

೫೬. ಮುನಿಯನ್ನು ಸೇವಿಸಲು ನಿಂತಿದ್ದ ದೇವತೆಗಳು ಜಟೆ-ನಾರುಬಟ್ಟೆಗಳನ್ನು ಧರಿಸಿ ಬ್ರಹ್ಮರೂಪರಾಗಿ ಕಾಣುತ್ತಿದ್ದರು. ಅಲ್ಲಿ ಇಂದ್ರನು ಸ್ವಕಾರ್ಯವು ಸಿದ್ಧಿಯಾಗುವುದಕ್ಕೋಸ್ಕರ ಒಂದು ತೀರ್ಥವನ್ನು ನಿರ್ಮಿಸಿದನು.

ತಸ್ಮಿನ್ ದೇವಗಣೈಃ ಸಾರ್ಧಂ ತ್ರಿಕಾಲಕೃತಮಜ್ಜನಃ ।
ಸಿಷೇವೇ ತಂ ಮಹೇಂದ್ರೋಽಪಿ ವಜ್ರಾರ್ಥಂ ಬ್ರಹ್ಮರೂಪಧೃಕ್ ॥

ಏವಂ ವರ್ಷಸಹಸ್ರಾಣಿ ಸೇವಮಾನಂ ನಿರೀಕ್ಷ್ಯ ಸಃ ।
ಬ್ರಹ್ಮರೂಪಧರಂ ಶಕ್ರಂ ವಿಜ್ಞಾಯ ದ್ವಿಜಪುಂಗವಃ ॥ ೫೮ ॥

ದೇವಾನಾಮರ್ಥಸಿದ್ಧ್ಯರ್ಥಂ ವೃತ್ರಂ ಹಂತುಂ ಚ ದಾನವಂ ।
ಶಕ್ರಾಯ ವಜ್ರಂ ಪ್ರದದಾವುತ್ಸೃಜ್ಯ ಸ್ವಕಲೇವರಂ ॥ ೫೯ ॥

ಸಂಗೃಹ್ಯ ವಜ್ರಂ ಶಕ್ರೋಽಪಿ ಸರ್ವೈರ್ದೇವಗಣೈಃ ಸಹ ।
ವೃತ್ರಂ ಜಘಾನ ಸಮರೇ ವಜ್ರೇಣ ಶತಪರ್ವಣಾ ॥ ೬೦ ॥

ತತ್ರ ತೀರ್ಥವರೇ ಸ್ನಾತ್ವಾ ದೇವಾಃ ಶಕ್ರಪುರೋಗಮಾಃ ।
ಸಿದ್ಧಿಂ ಪ್ರಾಪ್ತಾ ಯತೋ ರಾಜನ್ ಸಿದ್ಧತೀರ್ಥಮಭೂದತಃ ॥೬೧॥

---

೫೭. ಮಹೇಂದ್ರನು ಆ ತೀರ್ಥದಲ್ಲಿ ದೇವಸಂಘದ ಜೊತೆಯಲ್ಲಿ ತ್ರಿಕಾಲ ಸ್ನಾನವನ್ನು ಮಾಡಿ ಬ್ರಹ್ಮರೂಪವನ್ನು ಧರಿಸಿ ವಜ್ರಾಯುಧ ಪ್ರಾಪ್ತಿಗೋಸ್ಕರ ದಧೀಚಿ ಮುನಿಯನ್ನು ಸೇವಿಸಿದನು.

೫೮. ಆ ದ್ವಿಜೋತ್ತಮನಾದ ದಧೀಚಿಯು ಬ್ರಹ್ಮರೂಪವನ್ನು ಧರಿಸಿ ಸಹಸ್ರ ವರ್ಷಕಾಲ ಇಂದ್ರನು ತನ್ನನ್ನು ಸೇವಿಸುತ್ತಿದ್ದುದನ್ನು ನೋಡಿದನು.

೫೯. ಮತ್ತು ದೇವತೆಗಳ ಮನೋರಥವು ಸಿದ್ಧಿಸಲೋಸ್ಕರವೂ ದುಷ್ಟ ವೃತ್ರಾಸುರನ ಸಂಹಾರಕ್ಕೋಸ್ಕರವೂ ತಾನು ದೇಹವನ್ನು ಬಿಟ್ಟು ತನ್ನ ಅಸ್ಥಿ ನಿರ್ಮಿತವಾದ ವಜ್ರಾಯುಧವನ್ನು ಇಂದ್ರನಿಗೆ ಕೊಟ್ಟನು.

೬೦. ಇಂದ್ರನು ವಜ್ರಾಯುಧವನ್ನು ಸಂಗ್ರಹಿಸಿ ಸಕಲ ದೇವಗಣದೊಂದಿಗೆ ವೃತ್ರಾಸುರನನ್ನು ಸಂಹಾರಮಾಡಿದನು.

೬೧. ಇಂದ್ರ ಮುಂತಾದ ಸಮಸ್ತ ದೇವತೆಗಳು ಆ ಉತ್ತಮತೀರ್ಥದಲ್ಲಿ ಸ್ನಾನಮಾಡಿ ತಮ್ಮ ಇಷ್ಟದ ಸಿದ್ಧಿಯನ್ನು ಹೊಂದಿರುವುದರಿಂದ ಆ ತೀರ್ಥವು ಸಿದ್ಧ ತೀರ್ಥವೆಂದು ಕರೆಯಲ್ಪಟ್ಟಿತು.

ಸಿದ್ಧತೀರ್ಥೇ ನರಃ ಸ್ನಾತ್ವಾ ವಿಷ್ಣುಂ ದೃಷ್ಟ್ವೇಷ್ಟ ಸಿದ್ಧಿದಂ
ಸರ್ವಪಾಪವಿನಿರ್ಮುಕ್ತಃ ಸರ್ವಸಿದ್ಧಿಮವಾಪ್ನುಯಾತ್ ॥ ೬೨ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಪಂಚಮೋಧ್ಯಾಯಃ

---

೬೨. ಮಾನವನು ಅಂತಹ ಸಿದ್ಧತೀರ್ಥದಲ್ಲಿ ಸ್ನಾನಮಾಡಿ ಇಷ್ಟಸಿದ್ಧಿಯನ್ನುಂಟು ಮಾಡುವ ವಿಷ್ಣುವನ್ನು ಸಾಕ್ಷಾತ್ಕರಿಸಿ ಸಕಲ ಪಾಪಗಳಿಂದ ಮುಕ್ತನಾಗಿ ಸರ್ವಮನೋರಥಗಳ ಸಿದ್ಧಿಯನ್ನು ಹೊಂದುವನು.

ಕಾಂಚೀಮಾಹಾತ್ಮ್ಯದಲ್ಲಿ ಪಂಚಮಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಷಷ್ಠೋಽಧ್ಯಾಯಃ

ನಾರದ ಉವಾಚ :—

ಗಾರುಡಾಖ್ಯಸ್ಯ ತೀರ್ಥಸ್ಯ ಮಾಹಾತ್ಮ್ಯಂ ಪುನರೇವ ಹಿ ।
ವಕ್ಷ್ಯಾಮಿ ಶೃಣು ರಾಜೇಂದ್ರ ಸರ್ವಪಾಪಹರಂ ಪರಂ ॥ ೧ ॥

ಆಸೀದ್ರಾಜಾ ವಿದೇಹಾನಾಂ ಸಾರ್ವಭೌಮಃ ಪ್ರತಾಪವಾನ್ ।
ವೀರಃ ಪುರಂಜಯೋ ನಾಮ ಧರ್ಮನಿತ್ಯೋ ದೃಢವ್ರತಃ ॥ ೨ ॥

ಸೋಽಶ್ವಮೇಧೇನ ಯಜ್ಞೇನ ಯಷ್ಟುಕಾಮೋ ಮಹೀಪತಿಃ ।
ಗತ್ವಾ ಹಿಮವತಃ ಪಾರ್ಶ್ವಂ ಯಜ್ಞಭೂಮಿಮಕಲ್ಪಯತ್ ॥ ೩ ॥

---

೧. ನಾರದಮುನಿಯು ಕಥೆಯನ್ನು ಮುಂದುವರಿಸಿ ಹೇಳಿದ್ದೇನೆಂದರೆ:— ರಾಜೇಂದ್ರನೆ! ಶ್ರವಣದಿಂದ ಸಕಲ ಪಾಪಗಳನ್ನು ಧ್ವಂಸಮಾಡುವ ಶ್ರೇಷ್ಠವಾದ ಗಾರುಡತೀರ್ಥದ ಮಾಹಾತ್ಮ್ಯವನ್ನು ಮತ್ತೆ ವಿಸ್ತರಿಸಿ ಹೇಳುತ್ತೇನೆ, ಕೇಳು.

೨. ವಿದೇಹದೇಶದಲ್ಲಿ ಚಕ್ರವರ್ತಿಯೂ, ಪ್ರತಾಪವಂತನೂ, ನಿತ್ಯವಾದ ಧರ್ಮಾಚರಣೆಯುಳ್ಳವನೂ, ಮತ್ತು ದೃಢವಾದ ವ್ರತನಿಯಮವುಳ್ಳವನೂ ಆದ ಪುರಂಜಯನೆಂಬ ಒಬ್ಬ ರಾಜನಿದ್ದನು.

೩. ಆ ರಾಜನು ಅಶ್ವಮೇಧಯಾಗವನ್ನು ಮಾಡಬೇಕೆಂಬ ಕುತೂಹಲವುಳ್ಳವನಾಗಿ ಹಿಮವತ್ಪರ್ವತದ ಸಮೀಪಕ್ಕೆ ಹೋಗಿ ಯಜ್ಞಶಾಲೆಯನ್ನು ಕಲ್ಪಿಸಿದನು.

ಬ್ರಾಹ್ಮಣೈಃ ಸಹಿತಸ್ತತ್ರ ಋತ್ವಿಗ್ಭಿಃ ಸಚಿವೈರಪಿ ।
ಚಕಾರ ಯಜ್ಞಂ ವಿಪ್ರಾನ್ ವೈ ಗೋಭೀ ರತ್ನೈಶ್ಚ ತರ್ಪಯನ್ ॥ ೪ ॥

ಸುಯಾಜೋ ಯಾಜಕಶ್ಚೇತಿ ಖ್ಯಾತೌ ನಾಮ್ನಾ ದ್ವಿಜರ್ಷಭೌ ।
ಭ್ರಾತರೌ ಶಾಸ್ತ್ರಸಂಪನ್ನೌ ವೇದವೇದಾಂತಪಾರಗೌ ॥ ೫ ॥

ತಯೋರ್ಜ್ಯೇಷ್ಠಃ ಸುಯಾಜೋಽಭೂತ್ ಕನೀಯಾನ್
ಯಾಜಕೋಽಭವತ್ ॥
ಪುರಂಜಯಸ್ಯಾಶ್ವಮೇಧೇ ಋತ್ವಿಜೌ ತೌ ಬಭೂವತುಃ ॥ ೬ ॥

ಜ್ಯೇಷ್ಠೋ ಬ್ರಹ್ಮಾಽಭವತ್ತಸ್ಮಿನ್ನಧ್ವರ್ಯುರನುಜೋಽಭವತ್ ।
ಕ್ರತುಂ ಸಮಾಪ್ಯ ವಿಧಿವದ್ ಬ್ರಾಹ್ಮಣಾ ಋತ್ವಿಜಶ್ಚ ಯೇ ॥ ೭ ॥

ಗೃಹೀತದಕ್ಷಿಣಾಃ ಸರ್ವೇ ಪುನರ್ಜಗ್ಮುರ್ಯಥಾಗತಂ ।
ಸುಯಾಜೋ ಯಾಜಕಶ್ಚೋಭೌ ಗಚ್ಛಂತೌ ಸಹಿತೌ ಪಥಿ ॥ ೮ ॥

---

೪. ಅಲ್ಲಿ ರಾಜನು ಅನೇಕ ಬ್ರಾಹ್ಮಣರು, ಋತ್ವಿಜರು ಮತ್ತು ಮಂತ್ರಿಗಳಿಂದೊಡಗೂಡಿ ಗೋದಾನ, ರತ್ನದಾನಗಳಿಂದ ವಿಪ್ರರನ್ನು ತೃಪ್ತಿಪಡಿಸುತ್ತ ಮಹಾ ವಿಜೃಂಭಣೆಯಿಂದ ಯಾಗವನ್ನು ಮಾಡಿದನು.

೫. ಅಲ್ಲಿ ನೆರೆದವರಲ್ಲಿ ಸುಯಾಜ ಮತ್ತು ಯಾಜಕ ಎಂಬ ಇಬ್ಬರು ಬ್ರಾಹ್ಮಣ ಶ್ರೇಷ್ಠರು ವೇದ-ವೇದಾಂತ ಪಾರಂಗತರೂ ಶಾಸ್ತ್ರಜ್ಞಾನಸಂಪನ್ನರೂ ಮತ್ತು ಸಹೋದರರೂ ಆಗಿದ್ದರು.

೬. ಅವರಲ್ಲಿ ಸುಯಾಜನೆಂಬುವನು ಜ್ಯೇಷ್ಠನೂ, ಯಾಜಕನು ಕನಿಷ್ಠನೂ ಆಗಿದ್ದನು. ಅವರಿಬ್ಬರು ಪುರಂಜಯರಾಜನ ಅಶ್ವಮೇಧಯಾಗದಲ್ಲಿ ಋತ್ವಿಜರಾಗಿದ್ದರು.

೭. ಜ್ಯೇಷ್ಠನಾದ ಸುಯಾಜನು ಬ್ರಹ್ಮಋತ್ವಿಜನೂ ಕನಿಷ್ಠನಾದ ಯಾಜಕನು ಅಧ್ವರ್ಯು ಋತ್ವಿಜನೂ ಆಗಿದ್ದನು. ಅಲ್ಲಿ ಸೇರಿದ ಸಮಸ್ತ ಬ್ರಾಹ್ಮಣರೂ ಋತ್ವಿಜರೂ ಕೂಡ ವಿಧಿವತ್ತಾಗಿ ಆ ಯಜ್ಞವು ಸಮಾಪ್ತಿಯಾದ ಬಳಿಕ ದಕ್ಷಿಣೆಯನ್ನು ತೆಗೆದುಕೊಂಡು ತಾವು ಬಂದ ದಾರಿಯಲ್ಲಿ ಹಿಂತಿರುಗಿಹೋದರು.

೮. ಒಂದು ಕಡೆ ಈ ಸುಯಾಜ-ಯಾಜಕರೆಂಬ ಸಹೋದರರರೂ ಒಟ್ಟುಗೂಡಿ ದಾರಿ ನಡೆಯಲಾರಂಭಿಸಿದರು.

ಕಸ್ಮಿಂಶ್ಚಿದಾಹ್ನಿಕಂ ಕರ್ತುಂ ವನೇ ತೌ ಸನ್ನಿಷೀದತುಃ ।
ತತ್ರ ದೃಷ್ಟ್ವಾಽನುಜಂ ಜ್ಯೇಷ್ಠಃ ಸುಯಾಜೋ ವಾಕ್ಯಮಬ್ರವೀತ್ ॥

ಅಧ್ವರ್ಯುಸ್ತ್ವಮಹಂ ಬ್ರಹ್ಮಾ ಯಜ್ಞೇಽಸ್ಮಿನ್ನಭವೋಽಭವಂ ।
ಅನುಜೇನಾಧಿಕಂ ಲಬ್ಧಂ ಜ್ಯೇಷ್ಠೇನಾಲ್ಪಂ ಧನಂ ಮಯಾ ॥ ೧೦ ॥

ಜ್ಯೇಷ್ಠಾದಪ್ಯಧಿಕತಾಂ ಪ್ರಾಪ್ತುಂ ಕನೀಯಾನ್ನಾರ್ಹತಿ ಕ್ವಚಿತ್ ।
ತಸ್ಮಾತ್ತ್ವನ ಧನಂ ಮೇಽಸ್ತು ಮದೀಯಂ ತೇ ಭವತ್ವಿತಿ ॥ ೧೧ ॥

ಸ ತು ತಸ್ಯ ವಚಃ ಶ್ರುತ್ವಾ ಕನಿಷ್ಠೋ ವಾಕ್ಯಮಬ್ರವೀತ್ ।
ಅಧ್ವರ್ಯುಣಾ ಮಯಾ ಪ್ರಾಪ್ತಮಧಿಕಂ ಧರ್ಮತೋ ಧನಂ ॥ ೧೨ ॥

ಬ್ರಹ್ಮಣಾ ಚ ತ್ವಯಾ ಲಬ್ಧಮಲ್ಪಂ ಭಾಗಕ್ರಮಾತ್ ಕ್ರತೋಃ ।
ತಸ್ಮಾನ್ನ ತೇ ಪ್ರಯಚ್ಛಾಮಿ ಧನಂ ಲಬ್ಧಂ ಮಯಾ ಕ್ರತೌ ॥ ೧೩ ॥

---

೯. ಮಧ್ಯಮಾರ್ಗದಲ್ಲಿ ಒಂದಾನೊಂದು ಅರಣ್ಯದಲ್ಲಿ ತಮ್ಮ ಆಹ್ನಿಕವನ್ನು ಸಕಾಲದಲ್ಲಿ ಮಾಡಲೋಸ್ಕರ ಒಂದು ಕಡೆ ಕುಳಿತುಕೊಂಡರು. ಆ ಸಮಯದಲ್ಲಿ ಜ್ಯೇಷ್ಠನಾದ ಸುಯಾಜನು ತಮ್ಮನನ್ನು ಕಂಡು ಈ ವಚನವನ್ನು ಆಡಿದನು :—

೧೦. ಯಾಜಕನೆ! ಈ ಯಜ್ಞದಲ್ಲಿ ನೀನು ಅಧ್ವರ್ಯುವಾಗಿಯೂ ನಾನು ಬ್ರಹ್ಮನಾಗಿಯೂ ಆರ್ತ್ವಿಜ್ಯವನ್ನು ಮಾಡಿದೆವು. ಅದರಂತೆ ದಕ್ಷಿಣೆಯನ್ನು ಹೊಂದುವಾಗ ತಮ್ಮನಾದ ನಿನಗೆ ಅಧಿಕಭಾಗವೂ ಹಿರಿಯನಾದ ನನಗೆ ನ್ಯೂನಭಾಗವೂ ಬಂದಿರುವುದು.

೧೧. ಆದರೆ ಯಾವ ಸಂದರ್ಭದಲ್ಲಿಯೂ ಜ್ಯೇಷ್ಠನಿಗಿಂತ ಕನಿಷ್ಠನು ಆಧಿಕ್ಯವನ್ನು ಹೊಂದುವುದು ಅರ್ಹವಲ್ಲ. ಆದ್ದರಿಂದ ನೀನು ತೆಗೆದುಕೊಂಡಿರುವ ದಕ್ಷಿಣಾ ಧನವು ನನಗಿರಲಿ, ನನ್ನ ಧನವು ನಿನಗೆ ಇರಲಿ, ಈರೀತಿಯಾಗಿ ಪರಿವರ್ತಿಸಿಕೊಳ್ಳಬಹುದೆಂದನು.

೧೨. ಆಗ ಕಿರಿಯವನಾದ ಯಾಜಕನು ಅವನ ಮಾತನ್ನು ಕೇಳಿ ತಾನು ಪ್ರತ್ಯುತ್ತರವಿತ್ತನು. ನಾನು ಅಧ್ವರ್ಯುಋತ್ವಿಜನಾಗಿ ಯಜ್ಞಕಾರ್ಯಗಳನ್ನು ಆಚರಿಸಿ ಅದಕ್ಕೆ ತಕ್ಕಂತೆ ಅಧಿಕಭಾಗ ಧನವನ್ನು ಧರ್ಮದಿಂದ ಹೊಂದಿರುವೆನು.

೧೩. ನೀನು ಬ್ರಹ್ಮಋತ್ವಿಜನಾಗಿ ಕ್ರತುವಿನಲ್ಲಿ ವಿಹಿತವಾದ ದಕ್ಷಿಣಾಭಾಗವನ್ನು ಅನುಸರಿಸಿ ಅಲ್ಪಭಾಗವನ್ನು ಹೊಂದಿರುತ್ತೀಯೆ. ಆದುದರಿಂದ ಯಜ್ಞದಲ್ಲಿ ನನಗೆ ಲಭಿಸಿದ ಧನವನ್ನು ನಿನಗೆ ಕೊಡುವುದಿಲ್ಲ.

ತ್ವದ್ಧನಂ ಯತ್ತವೈವಾಸ್ತು ಮಮೈವಾಸ್ತು ಧನಂ ಮಮ ।
ಇತಿ ತಸ್ಯ ಬ್ರುವಾಣಸ್ಯ ಶ್ರುತ್ವಾ ವಚನಮಗ್ರಜಃ ॥ ೧೪ ॥

ಕ್ರೋಧಸಂರಕ್ತನಯನಃ ಸ್ಫುರದೋಷ್ಠಪುಟಸ್ತದಾ ।
ಹಸ್ತೇನ ಸಲಿಲಂ ಗೃಹ್ಯ ಶಪ್ತುಂ ತಮುಪಚಕ್ರಮೇ ॥ ೧೫ ॥

ಸೋಽಪಿ ಕ್ರುದ್ಧಃ ಸ್ವಹಸ್ತೇನ ಸಲಿಲಂ ಗೃಹ್ಯ ತತ್ಕ್ಷಣಾತ್ ।
ಶಪ್ತುಮಾರಬ್ಧವಾಂಸ್ತಂ ಚ ಶೇಪತುಶ್ಚ ಪರಸ್ಪರಂ ॥ ೧೬ ॥

ಶಾಪದಗ್ಧೌ ಚ ಪತಿತೌ ಮೃತೌ ತತ್ರ ಬಭೂವತುಃ ।
ಭ್ರಾತೃಘ್ನೌ ಚೈವ ಬ್ರಹ್ಮಘ್ನೌ ಭ್ರೂಣಘ್ನೌ ಚ ಬಭೂವತುಃ ॥ ೧೭ ॥

ಕರ್ಮಣಾ ತೇನ ರಾಜೇಂದ್ರ ತಾವಭೂತಾಂ ಕುಯೋನಿಜೌ ।
ತಯೋರೇಕಃ ಕಚ್ಛಪೋಽಭೂದಗ್ರಜಸ್ತ್ವನುಜೋ ಗಜಃ ॥ ೧೮ ॥

---

೧೪. ನಿನ್ನ ಧನವು ನಿನಗೇ ಇರಲಿ, ನನ್ನ ಧನವು ನನಗೇ ಇರಲಿ ಎಂದ ಕನಿಷ್ಠನು ಹೇಳಿರುವ ಮಾತನ್ನು ಅಗ್ರಜನು ಕೇಳಿದನು.

೧೫. ಆಗ ಅಗ್ರಜನು ಈ ಮಾತನ್ನು ಸಹಿಸಲಾರದೆ ಕೋಪಗೊಂಡು ಕೋಪಾವೇಶದಿಂದ ಕೆಂಪಾದ ಕಣ್ಣುಗಳುಳ್ಳವನಾಗಿಯೂ ಫುರಫುರನೆಂದು ಚಲಿಸುವ ತುಟಿಗಳುಳ್ಳವನಾಗಿಯೂ ಕೈಯಲ್ಲಿ ನೀರನ್ನು ತೆಗೆದುಕೊಂಡು ಅನುಜನಿಗೆ ಶಾಪಕೊಡಲಾರಂಭಿಸಿದನು.

೧೬. ಆಗ ಅನುಜನು ಕ್ರುದ್ಧನಾಗಿ ಅದೇ ಕ್ಷಣದಲ್ಲಿ ತಾನು ಕೈಯ್ಯಲ್ಲಿ ನೀರನ್ನು ತೆಗೆದುಕೊಂಡು ಅಗ್ರಜನಿಗೆ ಶಾಪಕೊಡಲಾರಂಭಿಸಿದನು. ಹೀಗೆ ಪರಸ್ಪರವಾಗಿ ಶಪಿಸಿಕೊಂಡರು.

೧೭. ಹೀಗೆ ಶಾಪದಿಂದ ಇಬ್ಬರೂ ಸತ್ತು ಭಸ್ಮವಾಗಿ ಕೆಳಕ್ಕೆಬಿದ್ದರು. ಮತ್ತು ಪರಸ್ಪರ ಮಾಡಿಕೊಂಡ ಈ ಹತ್ಯೆಯು ಬ್ರಹ್ಮ-ಭ್ರಾತೃ-ಭ್ರೂಣಹತ್ಯಾತ್ರಯರೂಪವಾಯಿತು. ಆದ್ದರಿಂದ ಆ ಸಹೋದರರು ಈ ಹತ್ಯಾಪಾತಕಕ್ಕೆ ಭಾಜನರಾದರು.

೧೮. ರಾಜೇಂದ್ರನೆ! ಆ ವಿಪ್ರರಿಬ್ಬರು ಈ ದುಷ್ಕೃತದಿಂದ ಕೆಟ್ಟದಾದ ತಿರ್ಯಕ್ ಜನ್ಮವನ್ನು ತೆಗೆದುಕೊಂಡರು. ಇಬ್ಬರಲ್ಲಿ ಒಬ್ಬನಾದ ಅಗ್ರಜನು ಆಮೆಯ ಜನ್ಮವನ್ನೂ ಮತ್ತೊಬ್ಬ ಅನುಜನು ಆನೆಯ ಜನ್ಮವನ್ನೂ ಎತ್ತಿದರು.

ತಸ್ಮಿನ್ಮಹತಿ ಕಾಂತಾರೇ ಚೇರತುಸ್ತೌ ಸುದುಃಖಿತೌ ।
ಕಚ್ಛಪಸ್ತತ್ರ ಕಾಸಾರೇ ಶತಯೋಜನಮಾಯತೇ ॥ ೧೯ ॥

ಮಹಾಕಾಯೋಽವಸದ್ರಾಜನ್ ಬಹುವರ್ಷಶತಾಯುತಂ ।
ಗಜೋಽಪಿ ತತ್ರ ನ್ಯವಸತ್ ಕಾನನೇ ಪರ್ವತೋಪಮಃ ॥ ೨೦ ॥

ಏವಂ ತು ವಸತೋಸ್ತತ್ರ ಮಹಾನ್ ಕಾಲೋ ಬಭೂವ ಹ ।
ಅಥೈಕದಾ ಗಜೋಽರಣ್ಯೇ ತೃಷಾರ್ತಃ ಪಾತುಮಾತುರಃ ॥ ೨೧ ॥

ಜಲಂ ಕಾಸಾರಮಗಮದ್ಯತ್ರಾಸ್ತೇ ಕಚ್ಛಪೋ ಜಲೇ ।
ತತ್ರ ಪೃಷ್ಠೇ ಕಚ್ಛಪಸ್ಯ ಪಾದಂ ನಿಕ್ಷಿಪ್ಯ ಕುಂಜರಃ ॥ ೨೨ ॥

ಪಪೌ ಜಲಂ ಪುಷ್ಕರೇಣ ತೃಷಾರ್ತೋ ಮದವಿಹ್ವಲಃ ।
ನಿಕ್ಷಿಪ್ತಮಾತ್ರೇ ಪಾದೇ ತು ಸ್ವಪೃಷ್ಠೇ ಕುಂಜರೇಣ ಹಿ ॥ ೨೩ ॥

---

೧೯. ರಾಜನೆ! ಕುತ್ಸಿತವಾದ ಜನ್ಮವನ್ನೆತ್ತಿ ಆ ದೊಡ್ಡ ಕಾಡಿನಲ್ಲಿ ದುಃಖ ಪೀಡಿತರಾಗಿ ಸಂಚರಿಸಿದರು. ಆ ವನದಲ್ಲಿದ್ದ ಒಂದು ನೂರು ಯೋಜನ ವಿಸ್ತಾರವುಳ್ಳ ತಟಾಕದಲ್ಲಿ ಆಮೆಯು ಮಹಾಕಾಯದಿಂದ ಕೂಡಿ ಅನೇಕ ವರ್ಷಕಾಲ ವಾಸ ಮಾಡಿತು.

೨೦. ಅದೇ ಅರಣ್ಯದಲ್ಲಿ ಆನೆಯು ಪರ್ವತದಂತೆ ಅತಿಸ್ಥೂಲಾಕಾರವುಳ್ಳದ್ದಾಗಿ ವಾಸಮಾಡಿತು.

೨೧. ಈರೀತಿಯಾಗಿ ಆ ಆನೆ ಮತ್ತು ಆಮೆಗಳು ಅರಣ್ಯದಲ್ಲಿ ವಾಸಮಾಡುತ್ತ ಬಹಳ ದೀರ್ಘಕಾಲ ಕಳೆಯಲಾಗಿ ಒಂದಾನೊಂದು ಸಮಯದಲ್ಲಿ ಆನೆಯು ನೀರಡಿಕೆಯಿಂದ ಬಳಲಿ ಆ ಅರಣ್ಯದಲ್ಲಿ ನೀರನ್ನು ಕುಡಿಯಲು ಆತುರತೆಯನ್ನು ಹೊಂದಿತು.

೨೨. ಆಗ ಆನೆಯು ನೀರಿನಲ್ಲಿ ಆಮೆಯು ವಾಸಮಾಡುತ್ತಿದ್ದ ತಟಾಕಕ್ಕೆ ಬಂದು ಆಮೆಯ ಬೆನ್ನಿನ ಮೇಲೆ ಕಾಲನ್ನು ಇಟ್ಟು ನೀರನ್ನು ಕುಡಿಯಲು ಯತ್ನಿಸಿತು.

೨೩. ನೀರಡಿಕೆಯಿಂದ ಬಳಲಿರುವ ಮದೋನ್ಮತ್ತವಾದ ಆನೆಯು ತನ್ನ ಸೊಂಡಲಿನಿಂದ ನೀರನ್ನು ಕುಡಿಯಲು ಆರಂಭಿಸಿತು. ಆನೆಯು ತನ್ನ ಬೆನ್ನಿನ ಮೇಲೆ ಕಾಲನ್ನು ಇಟ್ಟಕೂಡಲೆ ರೋಷದಿಂದ ಕೂಡಿದ ಆಮೆಯು ಆನೆಯ ಕಾಲನ್ನು ತಪ್ಪಿಸಿಕೊಂಡು ಹೋಗದಂತೆ ದೃಢವಾಗಿ ಹಿಡಿದುಕೊಂಡಿತು.

ರೋಷಾನ್ವಿತಃ ಕಚ್ಛಪಸ್ತು ತತ್ಪಾದಂ ಜಗೃಹೇ ದೃಢಂ ।
ಗೃಹೀತಪಾದಸ್ತು ಗಜಃ ಕಚ್ಛಪೇನ ತದಾ ಜಲೇ ॥ ೨೪ ॥

ಯುಯುಧೇ ತೇನ ರಾಜೇಂದ್ರ ಕಚ್ಛಪೋಽಪ್ಯಗ್ರಸದ್ಗಜಂ ।
ಬುದ್ಧ್ಯಾ ನಿಯುಕ್ತೌ ತೌ ತತ್ರ ಪೂರ್ವವೈರಾನುಬದ್ಧಯಾ ॥ ೨೫ ॥

ಏವಂ ಸಂಯುಧ್ಯತೋಸ್ತತ್ರ ಗಜಕಚ್ಛಪಯೋರ್ನೃಪ ।
ಅತಿಕ್ರಾಂತಮಭೂತ್ ಸಮ್ಯಗ್ವತ್ಸರಾಣಾಂ ಶತಂ ತದಾ ॥ ೨೬ ॥

ತತಃ ಕಾಲೇ ತು ಕಸ್ಮಿಂಶ್ಚಿದ್ಗರುಡಃ ಪತತಾಂ ವರಃ ।
ಸ್ವಮಾತುರ್ವಚನಾತ್ ಸ್ವರ್ಗಾದಮೃತಂ ಹರ್ತುಮುದ್ಯತಃ ॥ ೨೭ ॥

ಗಚ್ಛನ್ ಮಾರ್ಗೇ ಕ್ಷುಧಾವಿಷ್ಟೋ ದದರ್ಶ ಗಜಕಚ್ಛಪೌ ।
ತೌ ದೃಷ್ಟ್ವಾಽಧಃ ಪತನ್ ಪಕ್ಷೀ ಜಂತೂ ಜಗ್ರಾಹ ವೈ ಬಲಾತ್ ॥ ೨೮ ॥

---

೨೪. ಆಗ ನೀರನ್ನು ಕುಡಿಯಲು ಹೋದ ಆನೆಯು ಆಮೆಯಿಂದ ಕಾಲಿನಲ್ಲಿ ದೃಢವಾಗಿ ಹಿಡಿಯಲ್ಪಟ್ಟು ದುರವಸ್ಥೆಯನ್ನು ಅನುಭವಿಸಿತು.

೨೫. ರಾಜೇಂದ್ರನೆ! ಆದರೆ ಆನೆಯು ಆಮೆಯೊಡನೆ ಕಾದಾಡಿತು. ಆಮೆಯು ಆನೆಯನ್ನು ನುಂಗಲು ಯತ್ನಿಸಿತು. ಹೀಗೆ ಆ ನೀರಿನಲ್ಲಿ ಪೂರ್ವಜನ್ಮದ ವೈರ ಸಂಸ್ಕಾರವನ್ನುಳ್ಳ ಕಾದಾಡುವ ಬುದ್ಧಿಯಿಂದ ಪ್ರೇರಿತಗಳಾಗಿ ಇವೆರಡೂ ಬಿಡದೆ ಯುದ್ಧಮಾಡಿದುವು.

೨೬. ರಾಜನೆ! ಅಲ್ಲಿ ಈರೀತಿಯಾಗಿ ಯುದ್ಧಮಾಡುತ್ತಲಿದ್ದ ಆನೆ-ಆಮೆಗಳಿಗೆ ಆಗ ನೂರಾರು ವರ್ಷಗಳು ತಿಳಿಯದ ಹಾಗೆ ಕಳೆದುಹೋದವು.

೨೭. ಅನಂತರದಲ್ಲಿ ಒಂದಾನೊಂದು ಸಮಯದಲ್ಲಿ ಪಕ್ಷಿಶ್ರೇಷ್ಠನಾದ ಗರುಡನು ತನ್ನ ಜನನಿಯ ಪ್ರಾರ್ಥನೆಯಂತೆ ಸ್ವರ್ಗಲೋಕದಿಂದ ಅಮೃತವನ್ನು ತರಲು ಉದ್ಯುಕ್ತನಾದನು.

೨೮. ಗರುಡನು ಮಾರ್ಗದಲ್ಲಿ ಪ್ರಯಾಣಮಾಡುತ್ತ ಹೆಚ್ಚಾಗಿ ಹಸಿವಿನಿಂದ ಪೀಡಿತನಾಗಿ ಕಾದಾಡುತ್ತಲಿದ್ದ ಆಮೆ ಮತ್ತು ಆನೆಗಳನ್ನು ನೋಡಿದನು. ಮತ್ತು ಕೆಳ ಭಾಗದಲ್ಲಿ ಆ ಜಂತುಗಳನ್ನು ಕಂಡಕೂಡಲೆ ಗರುಡನು ಕೆಳಕ್ಕೆ ಧುಮುಕಿ ಬಂದು ಬಲಾತ್ಕಾರದಿಂದ ಆ ಪ್ರಾಣಿಗಳನ್ನು ಎತ್ತಿಕೊಂಡನು.

ತುಂಡೇನ ಚೈಕಂ ಸಂಗೃಹ್ಯ ಚರಣೇನಾಪರಂ ತದಾ ।
ಜಗಾಮ ವಾಯುವೇಗೇನ ಕುರ್ವನ್ನುಡ್ಡೀನಮಂಬರೇ ॥ ೨೯ ॥

ಗಚ್ಛನ್ನೇವ ದದರ್ಶಾಗ್ರೇ ನ್ಯಗ್ರೋಧಂ ಗಿರಿಸನ್ನಿಭಂ ।
ಪಶ್ಚಿಮಸ್ಯೋದಧೇಸ್ತೀರೇ ಮಹಾಂತಂ ಪಕ್ಷಿಸಂಕುಲಂ ॥ ೩೦ ॥

ಯತ್ರ ವಿಪ್ರಾ ವಾಲಖಿಲ್ಯಾಸ್ತಪಸ್ಯಂತಿ ಮರೀಚಿಪಾಃ ।
ತಸ್ಯ ಶಾಖಾಂ ಸುವಿಪುಲಾಂ ದೃಷ್ಟ್ವಾ ತತ್ರ ನ್ಯಷೀದತ ॥ ೩೧ ॥

ನಿಷಣ್ಣಮಾತ್ರೇ ಗರುಡೇ ಶಾಖಾ ಭಗ್ನಾ ಬಭೂವ ಹ ।
ದೃಷ್ಟ್ವಾಽಥಸ್ತಾದ್ದ್ವಿಜಾನ್ ಪಕ್ಷೀ ಕುರ್ವತಸ್ತಪ ಉತ್ತಮಂ ॥ ೩೨ ॥

ಶಾಖಾಪತನಮಾತ್ರೇಣ ಮ್ರಿಯಂತೇ ಬ್ರಾಹ್ಮಣಾ ಇತಿ ।
ಶಾಖಾಂ ತುಂಡೇನ ಚಾಕ್ರಮ್ಯ ಚರಣಾಭ್ಯಾಂ ಚ ತಾವುಭೌ ॥ ೩೩ ॥

---

೨೯. ಆಗ ಆ ಎರಡು ಪ್ರಾಣಿಗಳ ಪೈಕಿ ಒಂದನ್ನು ತನ್ನ ಮುಖದಿಂದಲೂ ಮತ್ತೊಂದನ್ನು ಪಾದದಿಂದಲೂ ಹಿಡಿದುಕೊಂಡು ಆಕಾಶದಲ್ಲಿ ಹಾರಿಹೋಗುತ್ತ ವಾಯು ವೇಗದಿಂದ ಪ್ರಯಾಣಮಾಡಿದನು.

೩೦. ಈರೀತಿಯಾಗಿ ಹೋಗುತ್ತಲಿರಲು ತನ್ನ ಮುಂಭಾಗದಲ್ಲಿ ಪಶ್ಚಿಮ ಸಮುದ್ರದ ತೀರದಲ್ಲಿ ಪರ್ವತಾಕಾರವಾಗಿ ಅತಿ ವಿಶಾಲವಾಗಿ ಬೆಳೆದ ಪಕ್ಷಿಗಳಿಂದ ಪೂರ್ಣವಾದ ಒಂದು ಆಲದಮರವನ್ನು ಕಂಡನು.

೩೧. ಆಲದಗಿಡದ ಬುಡದಲ್ಲಿ ವಾಲಖಿಲ್ಯ ಬ್ರಹ್ಮರ್ಷಿಗಳು ಸೂರ್ಯ-ಚಂದ್ರರ ರಶ್ಮಿಗಳನ್ನು ಪಾನಮಾಡುತ್ತ ತಪಸ್ಸನ್ನು ಮಾಡುತ್ತಲಿದ್ದರು. ಆ ಮರದ ರೆಂಬೆಯು ವಿಶಾಲವಾಗಿರುವುದನ್ನು ಕಂಡು ಗರುಡನು ಅಲ್ಲಿ ಕುಳಿತುಕೊಂಡನು.

೩೨. ಗರುಡನು ಕುಳಿತುಕೊಂಡ ಕ್ಷಣದಲ್ಲಿ ಆ ಶಾಖೆಯು ಮುರಿದು ಹೋಯಿತು. ಆಗ ಗರುಡನು ತಲಭಾಗದಲ್ಲಿ ಉತ್ತಮವಾದ ತಪಸ್ಸನ್ನು ಮಾಡುತ್ತಲಿದ್ದ ದ್ವಿಜರನ್ನು ಕಂಡನು.

೩೩. ಆ ಶಾಖೆಯು ಕೆಳಕ್ಕೆ ಬಿದ್ದರೆ ಆ ತಪಸ್ವಿ ಬ್ರಾಹ್ಮಣರೆಲ್ಲರೂ ಮರಣ ಹೊಂದುವರೆಂದು ಚಿಂತಿಸಿ ಅದನ್ನು ತಪ್ಪಿಸಲು ತನ್ನ ಮುಖಾಗ್ರದಿಂದ ಶಾಖೆಯನ್ನೂ ಎರಡು ಪಾದಗಳಿಂದ ಆ ಎರಡು ಜಂತುಗಳನ್ನೂ ಹಿಡಿದುಕೊಂಡನು.

ಉತ್ಪಪಾತಾಥ ವೇಗೇನ ತತ್ಕ್ಷಣಾತ್ ಶತಯೋಜನಂ ।
ಶಾಖಾಂ ಸಮುದ್ರೇ ಪ್ರಕ್ಷಿಪ್ಯ ಕ್ಷುಧಾರ್ತೋಽಭಿಯಯೌ ದ್ರುತಂ॥ ೩೪ ॥

ಆಗ್ನೇಯೀಂ ದಿಶಮುದ್ದಿಶ್ಯ ವ್ಯೋಮಮಾರ್ಗೇಣ ಪಕ್ಷಿರಾಟ್ ।
ಗಚ್ಛತಸ್ತಸ್ಯ ಪಾದಾಭ್ಯಾಂ ನಿಃಸೃತೌ ಪತಿತೌ ಭುವಿ ॥ ೩೫ ॥

ಸತ್ಯವ್ರತೇ ತದಾ ಕ್ಷೇತ್ರೇ ತಾವುಭೌ ಗಜಕಚ್ಛಪೌ ।
ಪತಿತೌ ತೌ ಸಮುದ್ವೀಕ್ಷ್ಯ ಗರುಡೋಽತಿಬುಭುಕ್ಷಿತಃ ॥ ೩೬ ॥

ವಿವೇಷ್ಟಂತೌ ಧರಾಪೃಷ್ಠೇ ಮಂದಪ್ರಾಣೌ ತ್ವರಾಽನ್ವಿತಃ ।
ಗರುಡೋಽಪಿ ಸಮಾಕ್ರಮ್ಯ ಪಾದಾಭ್ಯಾಂ ತೌ ಬಭಕ್ಷ ಹ ॥ ೩೭ ॥

ಭುಂಜತಸ್ತಸ್ಯ ತುಂಡೇನ ನಖೈರ್ದಾರಿತಯೋಸ್ತಯೋಃ ।
ಪೂರ್ವಸ್ಮೃತಿರಭೂದ್ರಾಜನ್ ಕ್ಷೇತ್ರವಾಸಪ್ರಭಾವತಃ ॥ ೩೮ ॥

---

೩೪. ಹಾಗೆಯೇ ಬಲುವೇಗದಿಂದ ಹೋಗಿ ಒಂದು ನಿಮಿಷದಲ್ಲಿ ಶತಯೋಜನ ದೂರದಲ್ಲಿದ್ದ ಸಮುದ್ರದಲ್ಲಿ ಶಾಖೆಯನ್ನು ಬಿಟ್ಟು ಹಸಿವಿನಿಂದ ಪೀಡಿತವಾಗಿ ಮತ್ತೆ ಹಿಂದಕ್ಕೆ ವೇಗವಾಗಿ ಬಂದನು.

೩೫. ಗರುಡನು ಆಗ್ನೇಯ ದಿಕ್ಕಿಗೆ ಅಭಿಮುಖನಾಗಿ ಆಕಾಶಮಾರ್ಗದಿಂದ ಬರುತ್ತಿರುವಾಗ ಕಾಲುಗಳಲ್ಲಿ ಹಿಡಿಯಲ್ಪಟ್ಟಿದ್ದ ಆ ಜಂತುಗಳು ವೇಗವಶದಿಂದ ಕಾಲುಗಳಿಂದ ಜಾರಿ ಭೂಮಿಯಲ್ಲಿ ಬಿದ್ದವು.

೩೬. ಆನೆ-ಆಮೆಗಳೆಂಬ ಆ ಎರಡು ಪ್ರಾಣಿಗಳು ಅಕಸ್ಮಾತ್ತಾಗಿ ಸತ್ರವ್ರತವೆಂಬ ಕ್ಷೇತ್ರದಲ್ಲಿ ಬಿದ್ದಿರುವುದನ್ನು ಕಂಡು ಗರುಡನು ಅತಿಯಾಗಿ ಹಸಿದವನಾದನು.

೩೭. ನೆಲದ ಮೇಲೆ ಬಿದ್ದು ಅಲ್ಪವಾದ ಪ್ರಾಣ ವ್ಯಾಪಾರದಿಂದ ಹೊರಳಾಡುತ್ತಿದ್ದ ಪ್ರಾಣಿಗಳನ್ನು ವೇಗದಿಂದ ಬಂದಿಳಿದ ಗರುಡನು ಕಾಲಿನಿಂದ ಆಕ್ರಮಿಸಿ ಭಕ್ಷಿಸಿದನು.

೩೮. ರಾಜನೆ! ಆ ಎರಡು ಪ್ರಾಣಿಗಳನ್ನು ಗರುಡನು ತನ್ನ ನಖಾಗ್ರಗಳಿಂದ ಸೀಳಿ ಮುಖಾಗ್ರದಿಂದ ಸ್ವಚ್ಛಂದವಾಗಿ ತಿನ್ನುತ್ತಿರಲು ಆ ಪವಿತ್ರಕ್ಷೇತ್ರದಲ್ಲಿ ವಾಸ ಮಾಡಿದ ಮಹಿಮೆಯಿಂದ ಅವುಗಳಿಗೆ ಪೂರ್ವಜನ್ಮದ ಸ್ಮೃತಿಯು ಉಂಟಾಯಿತು.

ಸ್ಮೃತ್ವಾ ತೌ ಪೂರ್ವಚರಿತಂ ಸಂತಪ್ತಹೃದಯೌ ಶುಚಾ ।
ಊಚತುರ್ಗರುಡಂ ತತ್ರ ತಾವುಭೌ ಗಜಕಚ್ಛಪೌ ॥ ೩೯ ॥

ಮಾ ಮಾರಯ ಕಖಶ್ರೇಷ್ಠ ಬ್ರಾಹ್ಮಣೌ ವೇತ್ತು ನೌ ಭವಾನ್ ।
ಸ್ವಾಪರಾಧಹರೌ ಮೂರ್ಖೌ ಬ್ರಹ್ಮಘ್ನೌ ಸೌ ಕುಯೋನಿಜೌ ॥ ೪೦ ॥

ತ್ರಾತುಮರ್ಹಸಿ ಪಕ್ಷೀಂದ್ರ ಪಾಪಾದಸ್ಮಾತ್ ಸ್ವಯಂ ಕೃತಾತ್ ।
ತಯೋಸ್ತದ್ವಚನಂ ಶ್ರುತ್ವಾ ಗರುಡೋ ಭಯವಿಹ್ವಲಃ । ॥ ೪೧ ॥

ಕಥಮೇತೌ ದ್ವಿಜಶ್ರೇಷ್ಠೌ ಗಜಕಚ್ಛಪರೂಪಿಣೌ ।
ಮಯೈವ ಚ ಹತಾವದ್ಯ ಸಪ್ರಾಣಾವರ್ಧಭಕ್ಷಿತೌ ॥ ೪೨ ॥

ಅಹಂ ತು ವಿಪ್ರಾಮಿಷಭುಗಭವಂ ರಾಕ್ಷಸೋ ಯಥಾ ।
ಕಥಂ ಪಾಪಾದ್ವಿಮುಕ್ತಿರ್ಮೇ ಭವೇದಿತಿ ವಿಚಿಂತಯನ್ ॥ ೪೩ ॥

---

೩೯. ಆ ಆನೆ ಮತ್ತು ಆಮೆಗಳು ಎರಡೂ ತಮ್ಮ ಹಿಂದಿನ ಚರಿತ್ರವನ್ನು ನೆನೆಸಿಕೊಂಡು ಶೋಕದಿಂದ ತಪಿಸಿದ ಹೃದಯವುಳ್ಳವುಗಳಾಗಿ ಅಲ್ಲಿ ಗರುಡನನ್ನು ನೋಡಿ ಈ ಮಾತನ್ನು ಆಡಿದವು.

೪೦. ಪಕ್ಷಿಶ್ರೇಷ್ಠನೆ! ನಮ್ಮನ್ನು ಕೊಂದುಹಾಕಬೇಡ. ನೀನು ನಮ್ಮನ್ನು ಬ್ರಾಹ್ಮಣರೆಂದು ತಿಳಿ. ನಾವು ಪರಮಮೂರ್ಖತನದಿಂದ ಸ್ವಯಂಕೃತವಾದ ಅಪರಾಧದಿಂದ ಬ್ರಹ್ಮಹತ್ಯಾಪಾತಕಕ್ಕೆ ಭಾಗಿಗಳಾಗಿ ಈ ನೀಚಜನ್ಮದಲ್ಲಿ ಹುಟ್ಟಿರುವೆವು.

೪೧. ಪಕ್ಷೀಂದ್ರನೆ! ಸ್ವಯಂಕೃತವಾದ ನಮ್ಮ ಈ ಪಾತಕದಿಂದ ನಮ್ಮನ್ನು ಉದ್ಧಾರಮಾಡಲು ಯೋಗ್ಯನಾಗಿದ್ದೀ. ಅವರ ಆ ಮಾತನ್ನು ಕೇಳಿ ಗರುಡನು ಭೀತಿಯಿಂದ ದಿಗ್ಭ್ರಾಂತನಾದನು.

೪೨. ಇದೇನಿದು? ಆನೆ-ಆಮೆಗಳ ರೂಪದಿಂದಿರುವ ಇವರಿಬ್ಬರು ಬ್ರಾಹ್ಮಣೋತ್ತಮರೇ! ಇವರನ್ನು ನಾನೇ ಹಿಂಸಿಸಿ ಅರ್ಧಪ್ರಾಣವು ಮಾತ್ರ ಉಳಿದಿರುವ ಹಾಗೆ ಈಗ ಭಕ್ಷಿಸಿರುವೆನಲ್ಲ.

೪೩. ಇವರನ್ನು ತಿಂದು ನಾನು ರಾಕ್ಷಸನ ಹಾಗೆ ಬ್ರಾಹ್ಮಣನ ಮಾಂಸವನ್ನು ಭುಂಜಿಸಿದವನಾದೆನು. ಈ ಪಾತಕದಿಂದ ನನಗೆ ಬಿಡುಗಡೆಯಾಗುವುದು ಹೇಗೆ? ಎಂದು ಚಿಂತಾಕ್ರಾಂತನಾದನು.

ಪಪ್ರಚ್ಛ ತೌ ಖಗಶ್ರೇಷ್ಠಃ ಕುಯೋನಿರ್ನಾಂ ಕಥಂ ದ್ವಿಜೌ।
ಕೇನ ಪಾಪವಿಪಾಕೇನ ಪ್ರಾಪಿತಾವೀದೃಶೀಂ ಗತಿಂ ॥ ೪೪ ॥

ಕೇನ ಪುಣ್ಯಪ್ರಭಾವೇನ ಪೂರ್ವಸ್ಮೃತಿರಭೂಚ್ಚ ವಾಂ ।
ಇತಿ ಪೃಷ್ಟೌ ತು ತೌ ರಾಜನ್ ಗರುಡೇನ ಮಹಾತ್ಮನಾ ॥ ೪೫ ॥

ಭಕ್ಷಿತಾರ್ಧತನೂ ತೇನ ಮಂದಾಸೂ ಮಂದಮೂಚತುಃ ।
ಆವಾಂ ನಿಬೋಧ ಗರುಡ ಭ್ರಾತರೌ ಬ್ರಾಹ್ಮಣಾವುಭೌ ॥ ೪೬ ॥

ಸುಯಾಜೋ ಯಾಜಕಶ್ಚೇತಿ ವಿಖ್ಯಾತೌ ತಪಸಾನ್ವಿತೌ ।
ಪುರಂಜಯಸ್ಯ ರಾಜರ್ಷೇರ್ಯಜ್ಞೇ ಲಬ್ಧ್ವಾ ಧನಂ ಮಹತ್ ॥ ೪೭ ॥

---

೪೪. ಅನಂತರ ಪಕ್ಷಿಶ್ರೇಷ್ಠನಾದ ಗರುಡನು ದ್ವಿಜರನ್ನು ಕುರಿತು ಪ್ರಶ್ನಿಸಿದನು. ದ್ವಿಜರೇ! ನಿಮಗೆ ಈ ಕುತ್ಸಿತವಾದ ಜನ್ಮವು ಯಾವ ಕಾರಣದಿಂದ ಪ್ರಾಪ್ತವಾಯಿತು? ನೀವು ಯಾವ ದುಷ್ಕೃತಪರಿಣಾಮದಿಂದ ಈರೀತಿಯ ದುರವಸ್ಥೆಯನ್ನು ಹೊಂದಿರುವಿರಿ.

೪೫. ಮತ್ತು ಈಗ ಪೂರ್ವಜನ್ಮದ ಸ್ಮೃತಿಯುಂಟಾಗಲು ಯಾವ ಪುಣ್ಯಪ್ರಭಾವ ಕಾರಣವಾಯಿತು? ರಾಜನೆ! ಮಹಾತ್ಮನಾದ ಗರುಡನಿಂದ ಆ ದ್ವಿಜರು ಈ ರೀತಿಯಾಗಿ ಪ್ರಶ್ನಿಸಲ್ಪಟ್ಟರು.

೪೬. ಆಗ ಅದುವರೆಗೆ ಶರೀರದ ಅರ್ಧಭಾಗವೆಲ್ಲ ಭಕ್ಷಿಸಲ್ಪಟ್ಟು ಮಂದವಾದ ಪ್ರಾಣವ್ಯಾಪಾರವುಳ್ಳ ಆ ಎರಡು ಪ್ರಾಣಿಗಳು ಮೆಲ್ಲಗೆ ಮಾತನಾಡಿದವು, ಗರುಡನೆ! ನಮ್ಮನ್ನು ಸೋದರರಾಗಿ ಹುಟ್ಟಿದ ಬ್ರಾಹ್ಮಣರೆಂದು ತಿಳಿಯುವವನಾಗು.

೪೭. ಸುಯಾಜ ಮತ್ತು ಯಾಜಕರೆಂದು ಪ್ರಸಿದ್ಧರೂ ತಪಸ್ವಿ ಬ್ರಾಹ್ಮಣರೂ ಆದ ನಾವಿಬ್ಬರು ಪುರಂಜಯನೆಂಬ ರಾಜರ್ಷಿಯು ಮಾಡಿದ ಯಜ್ಞದಲ್ಲಿ ಋತ್ವಿಜರಾಗಿ ಅಲ್ಲಿ ಅತಿಶಯವಾಗಿ ದಕ್ಷಿಣಾಧನವನ್ನು ಹೊಂದಿದೆವು.

ವಿವದಂತೌ ಧನಪ್ರೇಪ್ಸೂ ಮಾರ್ಗೇ ಕಾನನಸಂವೃತೇ ।
ಪರಸ್ಪರಂ ವಿಹಿಂಸಂತೌ ಪ್ರಾಪಿತಾವೀದೃಶೀಂ ಗತಿಂ ॥ ೪೮ ॥

ಆವಯೋರ್ದುಷ್ಕೃತಂ ಸರ್ವಮೇತದುಕ್ತಂ ತವಾಂಡಜ ।
ತವ ಸಂದರ್ಶನಾತ್ ಪುಣ್ಯಾತ್ ಪೂರ್ವಸ್ಮೃತಿರಭೂಚ್ಚ ನೌ ॥ ೪೯ ॥

ತ್ರಾತುಮರ್ಹಸಿ ನಾವದ್ಯ ದುಃಖಾದಸ್ಮಾತ್ ಕುಯೋನಿಜಾತ್ ।
ತಯೋಸ್ತದ್ವಚನಂ ಶ್ರುತ್ವಾ ಗರುಡಸ್ತು ಕೃಪಾನ್ವಿತಃ ॥ ೫೦ ॥

ಉದ್ಧರ್ತುಕಾಮಸ್ತರಸಾ ಸಸ್ಮಾರ ಪಿತರಂ ತದಾ ।
ಸ್ಮೃತಮಾತ್ರಸ್ತು ಪುತ್ರೇಣ ಕಾಶ್ಯಪಸ್ತಪಸಾಂ ನಿಧಿಃ ॥ ೫೧ ॥

ತತ್ರಾಜಗಾಮ ಯತ್ರೈತೇ ಗಜಕಚ್ಛಪಪಕ್ಷಿಣಃ ।
ಗರುಡಃ ಪಿತರಂ ದೃಷ್ಟ್ವಾ ಪ್ರಣಿಪತ್ಯ ಕೃತಾಂಜಲಿಃ ॥ ೫೨ ॥

---

೪೮. ಧನದ ಲೋಭದಿಂದ ಅರಣ್ಯದಿಂದ ಗಹನವಾದ ಮಾರ್ಗದಲ್ಲಿ ವಿವಾದವನ್ನು ಮಾಡುತ್ತ ಪರಸ್ಪರವಾಗಿ ಹಿಂಸೆಯನ್ನು ಮಾಡಿ ಈ ದುರವಸ್ಥೆಯನ್ನು ಹೊಂದಿರುತ್ತೇವೆ.

೪೯. ಪಕ್ಷಿಶ್ರೇಷ್ಠನೇ! ನಮ್ಮ ದುಷ್ಕೃತವೆಲ್ಲವನ್ನೂ ನಿನಗೆ ಹೇಳಿರುವೆವು. ಈಗ ನಿನ್ನ ಪವಿತ್ರವಾದ ಸಂದರ್ಶನದಿಂದ ನಮಗೆ ಪೂರ್ವಜನ್ಮದ ಸ್ಮೃತಿಯು ಜನಿಸಿತು.

೫೦. ಈ ಕುಯೋನಿಯಿಂದ ಉಂಟಾದ ದುಃಖ ಪರಂಪರೆಯಿಂದ ಈಗ ನಮ್ಮಿಬ್ಬರನ್ನು ಸಲಹಲು ನೀನು ಅರ್ಹನಾಗಿರುತ್ತೀ, ಗುರುಡನು ಅವರ ಆ ಮಾತನ್ನು ಕೇಳಿ ದಯಾಪೂರ್ಣನಾದನು.

೫೧-೫೨. ಅವರನ್ನು ಬೇಗ ಉದ್ಧಾರಮಾಡಬೇಕೆಂದು ಅಪೇಕ್ಷಿಸಿ ಆಗ ಗರುಡನು ತನ್ನ ತಂದೆಯನ್ನು ಸ್ಮರಿಸಿದನು. ಪುತ್ರನಾದ ಗರುಡನು ಸ್ಮರಿಸಿದ ಕೂಡಲೆ ತಪೋನಿಧಿಯಾದ ಕಶ್ಯಪಮುನಿಯು ಆನೆ, ಆಮೆ ಮತ್ತು ಗರುಡಪಕ್ಷಿಗಳು ಇರುವ ಸ್ಥಳಕ್ಕೆ ಬಂದನು. ಗರುಡನು ತಂದೆಯನ್ನು ಕಂಡು ಅಂಜಲಿಬದ್ಧನಾಗಿ ವಿನಯದಿಂದ ನಮಸ್ಕರಿಸಿದನು.

ತಯೋಶ್ಚರಿತಮಾಚಷ್ಟೇ ಕಾಶ್ಯಪಾಯ ಕುಜನ್ಮನೋಃ ।
ಅಜ್ಞಾನಾದ್ಭಕ್ಷಿತಾವೇತೌ ಕ್ಷುಧಿತೇನ ಮಯಾಽಧುನಾ ॥ ೫೩ ॥

ಪಾಪಂ ವ್ಯಪೋಹಯ ಕ್ಷಿಪ್ರಂ ವಿಪ್ರಮಾಂಸಾಶಿನೋ ಮಮ ।
ಏತೌ ಚ ಪತಿತೌ ಪಾಪಾದ್ಗಜಕಚ್ಛಪರೂಪಿಣೌ ॥ ೫೪ ॥

ಬ್ರಹ್ಮಘ್ನೌ ದುಃಖಿತೌ ವಿಪ್ರೌ ಮಾಮದ್ಯ ಶರಣಂ ಗತೌ ।
ತ್ರಾತುಮರ್ಹಸಿ ವಿಪ್ರೇಂದ್ರ ಮಯಾಽತಃ ಸಂಸ್ಮೃತೋ ಭವಾನ್ ॥ ೫೫ ॥

ಪೂರ್ವಸ್ಮೃತಿರಭೂತ್ಕೇನ ಪುಣ್ಯೇನ ಪಿತರೇತಯೋಃ ।
ಇತಿ ತಸ್ಯ ವಚಃ ಶ್ರುತ್ವಾ ವೈನತೇಯಸ್ಯ ಕಾಶ್ಯಪಃ ॥ ೫೬ ॥

ಉವಾಚ ಪುತ್ರ ಜಾನೇಽಹಮೇತೌ ವಿಪ್ರೌ ತಪಸ್ವಿನೌ ।
ಧನಲೋಭಾದ್ವಿಹಿಂಸಂತಾ ವಭೂತಾಂ ಗಜಕಚ್ಛಪೌ ॥ ೫೭ ॥

---

೫೩. ಆಗ ಕಶ್ಯಪಮುನಿಗೆ ಗರುಡನು ನೀಚಜನ್ಮವನ್ನೆತ್ತಿದ ದ್ವಿಜರ ಚರಿತ್ರವನ್ನು ಹೇಳಿದನು. ಮತ್ತು ತಂದೆಯೆ! ಈಗ ಅತಿಯಾದ ಹಸಿವಿನಿಂದ ಪೀಡಿತನಾಗಿ ಅಜ್ಞಾನದಿಂದ ಇವರನ್ನು ನಾನು ತಿಂದುಹಾಕಿದೆನು.

೫೪. ವಿಪ್ರರ ಮಾಂಸವನ್ನು ತಿಂದಿರುವ ನನ್ನನ್ನು ಈ ಮಹಾಪಾತಕದಿಂದ ಬಿಡುಗಡೆಮಾಡು. ಮತ್ತು ಪಾಪದಿಂದ ಪತಿತವಾಗಿ ಆನೆ-ಆಮೆಗಳ ಸ್ವರೂಪದಿಂದಿರುವ ಈ ದ್ವಿಜರನ್ನು ಉದ್ಧರಿಸು.

೫೫. ಈ ಬ್ರಾಹ್ಮಣರು ಬ್ರಹ್ಮಹತ್ಯೆಯನ್ನು ಆಚರಿಸಿ ಆ ದುಃಖಕ್ಕೆ ಪಾತ್ರರಾಗಿ ನನ್ನನ್ನು ಶರಣಹೊಂದಿರುವರು. ವಿಪ್ರೇಂದ್ರನೆ! ಇವರನ್ನು ನೀನು ರಕ್ಷಿಸಲು ಸಮರ್ಥನಾಗಿದ್ದೀಯೆ. ಇದಕ್ಕೋಸ್ಕರ ನಾನು ನಿನ್ನನ್ನು ಸ್ಮರಿಸಿರುವೆನು.

೫೬. ತಂದೆಯೆ! ಇವರಿಗೆ ಈಗ ಪೂರ್ವಜನ್ಮದ ಸ್ಮೃತಿಯು ಉಂಟಾಗಲು ಕಾರಣವಾದ ಪುಣ್ಯವಾವುದು? ಈ ರೀತಿಯಾಗಿ ಪುತ್ರನಾದ ಗರುಡನು ಕೇಳಿದ ಪ್ರಶ್ನವಾಕ್ಯಗಳನ್ನು ಕಶ್ಯಪಮುನಿಯು ಕೇಳಿದನು.

೫೭. ಪುತ್ರನಿಗೆ ಕಶ್ಯಪಮುನಿಯು ಇಂತೆಂದನು :—ಪುತ್ರನೆ! ಈ ತಪಸ್ವಿ ಬ್ರಾಹ್ಮಣರೀರ್ವರನ್ನು ನಾನು ತಿಳಿದಿರುವೆನು. ಇವರು ಧನಲೋಭದಿಂದ ಒಬ್ಬರನ್ನೊಬ್ಬರು ಹಿಂಸಿಸಿ ಈ ಆನೆ-ಆಮೆಗಳ ಕಷ್ಟಜನ್ಮವನ್ನು ಹೊಂದಿರುವರು.

ಸ್ವಾಪರಾಧಾದಘಂ ಪ್ರಾಪ್ತೌ ಭ್ರೂಣಘ್ನಾವಿತಿ ಪುತ್ರಕ ।
ನೈವಾದ್ಯಮನ್ನಂ ಮತ್ತಸ್ಯ ಬ್ರಹ್ಮಘ್ನಸ್ಯ ಸುರಾಪಿಣಃ ॥ ೫೮ ॥

ಸುವರ್ಣಸ್ತೇಯಿನಶ್ಚಾಪಿ ಗುರುತಲ್ಪಗತಸ್ಯ ಚ ।
ಯದಿ ಭುಂಕ್ತೇಽನ್ನಮೇತೇಷಾಂ ಭೋಕ್ತಾ ಶಮಲಮಶ್ನುತೇ ॥ ೫೯ ॥

ತಸ್ಮಾತ್ತ್ವಮೇತಯೋರ್ಮಾಂಸಂ ಜಗ್ಧ್ವಾ ಶಮಲಮಾದದಃ ।
ಏತಯೋರಪಿ ತೇ ವತ್ಸ ಕ್ಷುಧಿತಸ್ಯಾನ್ನದಾನತಃ ॥ ೬೦ ॥

ಕ್ಷೇತ್ರೇಽಸ್ಮಿನ್ ಪಾವನೇ ಪುಣ್ಯೇ ಪೂರ್ವಸ್ಮೃತಿರಭೂತ್ಕಿಲ ।
ಇದಂ ಸತ್ಯವ್ರತಂ ನಾಮ ಕ್ಷೇತ್ರಂ ಪಾಪಪ್ರಣಾಶನಂ । ॥ ೬೧ ॥

ಅತ್ರ ತ್ವಾಂ ಪಲ್ವಲಂ ಕೃತ್ವಾ ಸ್ನಾಪಯಾಮ್ಯಘನಾಶನಂ ।
ಇತ್ಯುಕ್ತ್ವಾ ಪಲ್ವಲಂ ಖಾತ್ವಾ ಕಾಶ್ಯಪಃ ಪುತ್ರಮಂಡಜಂ ॥ ೬೨ ॥

---

೫೮. ಪುತ್ರನೆ! ತಮ್ಮ ಅಪರಾಧದಿಂದ ಪಾಪಿಷ್ಠರಾಗಿ ಭ್ರೂಣಹತ್ಯಾ ದೋಷಕ್ಕೆ ಭಾಗಿಗಳಾಗಿರುವರು, ಮದೋನ್ಮತ್ತರಾಗಿ ಬ್ರಹ್ಮಹತ್ಯಾ ಮತ್ತು ಸುರಾಪಾನ ಮಹಾಪಾತಕಗಳನ್ನು ಮಾಡಿದವರ ಮಾಂಸವನ್ನು ಅಶನಮಾಡಬಾರದು.

೫೯. ಮತ್ತು ಸುವರ್ಣಸ್ತೇಯ ಅಥವಾ ಗುರುತಲ್ಪ ಗಮನವೆಂಬ ಪಾತಕ ಮಾಡಿದವರ ಅನ್ನವನ್ನು ಭುಂಜಿಸಿದರೆ ಭೋಕ್ತೃವು ಇವರ ಪಾಪಕ್ಕೆ ಭಾಗಿಯಾಗುವನು.

೬೦. ಆದುದರಿಂದ ನೀನು ಇವರಿಬ್ಬರ ಮಾಂಸವನ್ನು ತಿಂದು ಅವರ ಪಾಪವನ್ನು ಸ್ವೀಕರಿಸಿರುತ್ತಿ, ಪುತ್ರನೆ! ಇವರಿಗಾದರೂ ಕ್ಷುಧಾಪೀಡಿತನಾದ ನಿನಗೆ ಅನ್ನದಾನಮಾಡಿದ ಪುಣ್ಯವು ಲಭಿಸಿರುವುದು.

೬೧. ಈ ಪವಿತ್ರವೂ ಪುಣ್ಯಪ್ರದವೂ ಆದ ಕ್ಷೇತ್ರದಲ್ಲಿ ಅನ್ನದಾನ ಪುಣ್ಯದಿಂದ ಪೂರ್ವಜನ್ಮಸ್ಮೃತಿಯುಂಟಾಗಿದೆ, ಇದು ಜಂತುಗಳ ಪಾಪವನ್ನು ಕಳೆಯುವ ಸತ್ಯವ್ರತವೆಂಬ ಪಾವನಕ್ಷೇತ್ರವು.

೬೨. ಈ ಕ್ಷೇತ್ರದಲ್ಲಿ ಒಂದು ಸಣ್ಣ ಸರೋವರವನ್ನು ನಿರ್ಮಿಸಿ ಪಾಪವನ್ನು ಕಳೆಯುವಂತೆ ಸ್ನಾನಮಾಡಿಸುತ್ತೇನೆ, ಎಂದು ತಂದೆಯಾದ ಕಶ್ಯಪಮುನಿಯು ಪಕ್ಷಿಯಾದ ಗರುಡಪುತ್ರನಿಗೆ ಹೇಳಿ ಸರೋವರವನ್ನು ನಿರ್ಮಿಸಿದನು.

ಸ್ನಾಪಯಾಮಾಸ ವಿಧಿವನ್ಮಂತ್ರೈಸ್ತತ್ರಾಘಮರ್ಷಣೈಃ ।
ಸೋಽಪಿ ಸ್ನಾತ್ವಾ ಮುಕ್ತಪಾಪೋ ಬಭೂವ ಗರುಡೋ ಯತಃ ॥ ೬೩ ॥

ಅತಸ್ತದ್ಗಾರುಡಂ ತೀರ್ಥಮಭೂತ್ ಪಾಪಪ್ರಣಾಶನಂ ।
ತತಸ್ತೌ ಗರುಡೋ ವೀಕ್ಷ್ಯ ಕೃಪಯಾ ಗಜಕಚ್ಛಪೌ ॥ ೬೪ ॥

ಉದ್ಧರ್ತುಕಾಮೋ ಧರ್ಮಾತ್ಮಾ ಪಿತರಂ ವಾಕ್ಯಮಬ್ರವೀತ್ ।
ಏತಾವಪಿ ಸುದುಃಖಾರ್ತೌ ಮಾಮೇವ ಶರಣಂ ಗತೌ ॥ ೬೫ ॥

ಅನಾಥೌ ದುರ್ಬಲೌ ಬ್ರಹ್ಮನ್ ಮತ್ತುಂಡನಖವಿಕ್ಷತೌ ।
ತ್ರಾತುಮರ್ಹಸಿ ಧರ್ಮಜ್ಞ ಕೃಪಯಾ ಗಜಕಚ್ಛಪೌ ॥ ೬೬ ॥

ತದಾ ಪುತ್ರವಚಃ ಶ್ರುತ್ವಾ ತಾವಪ್ಯುದ್ವೀಕ್ಷ್ಯ ಕಾಶ್ಯಪಃ ।
ಬ್ರಹ್ಮಘ್ನಯೋಃ ಕಥಂ ಮುಕ್ತಿರ್ಭವೇದಿತಿ ವಿಚಿಂತಯನ್ ॥ ೬೭ ॥

---

೬೩. ಆ ಸರಸ್ಸಿನಲ್ಲಿ ಪಾಪಮೋಚಕವಾದ ಮಂತ್ರಪಠನಪೂರ್ವಕವಾಗಿ ವಿಧಿನಿಯಮಾನುಸಾರವಾಗಿ ಸ್ನಾನಮಾಡಿಸಿದನು, ಆ ಗರುಡನು ಸ್ನಾನಮಾಡಿದ ತರುವಾಯ ಆ ತೀರ್ಥಸ್ನಾನಬಲದಿಂದ ಪಾಪಮುಕ್ತನಾದನು.

೬೪. ಗರುಡನು ಸ್ನಾನಮಾಡಿದ್ದರಿಂದ ಪಾಪಮೋಚಕವಾದ ಆ ಪವಿತ್ರ ತೀರ್ಥವು ಗರುಡತೀರ್ಥವೆಂಬ ಖ್ಯಾತಿಯನ್ನು ಹೊಂದಿತು, ತರುವಾಯ ಗರುಡನು ಆ ಆನೆ ಮತ್ತು ಆಮೆಗಳನ್ನು ಕರುಣೆಯಿಂದ ನೋಡಿದನು.

೬೫. ಅವುಗಳನ್ನು ಪಾಪದಿಂದ ಉದ್ಧರಿಸಬೇಕೆಂಬ ಇಷ್ಟವುಳ್ಳ ಧರ್ಮಾತ್ಮನಾದ ಗರುಡನು ತಂದೆಯಲ್ಲಿ ಈ ಮಾತನ್ನು ಹೇಳಿದನು. ಇವುಗಳು ಕೂಡ ಅತಿ ದುಃಖಪೀಡಿತರಾಗಿ ನನ್ನನ್ನು ಶರಣಹೊಂದಿರುವರು.

೬೬. ಬ್ರಹ್ಮಜ್ಞನೆ! ಅನಾಥರೂ ದುರ್ಬಲರೂ ಆದ ಈ ಪ್ರಾಣಿಗಳು ನನ್ನ ಮುಖಾಗ್ರ ಮತ್ತು ನಖಗಳಿಂದ ಗಾಯಮಾಡಲ್ಪಟ್ಟಿರುವರು, ಧರ್ಮಜ್ಞನೆ! ಈ ಗಜ ಮತ್ತು ಆಮೆಗಳನ್ನು ಕರುಣೆಯಿಂದ ರಕ್ಷಿಸಲು ಅರ್ಹನಾಗಿದ್ದೀ.

೬೭. ಆಗ ಕಶ್ಯಪಮುನಿಯು ತನ್ನ ಪುತ್ರನ ಮಾತನ್ನು ಕೇಳಿ ದೀನಗಳಾದ ಆ ಜಂತುಗಳನ್ನು ನೋಡಿ ಇವುಗಳಿಗೆ ಬ್ರಹ್ಮಹತ್ಯೆಯಿಂದ ಹೇಗೆ ಬಿಡುಗಡೆಯಾದೀತೆಂದು ಚಿಂತಿಸಿದನು.

ದಧ್ಯೌ ಪರಮಧರ್ಮಜ್ಞೋ ಬ್ರಹ್ಮಘ್ನಾನಾಂ ಚ ನಿಷ್ಕೃತಿಂ ।
ಕಪಾಲಪಾಣಿಃ ಪಾಷಂಡೋ ಮುಕ್ತಕೇಶೋ ದಿಗಂಬರಃ ॥ ೬೮ ॥

ಮೃದಾಲೇಪಿತಸರ್ವಾಂಗೋ ವೈಷ್ಣವಂ ಬಿಂಬಮರ್ಚಯನ್ ।
ಯಾವದಾಯುಶ್ಚರೇದ್ಭೂಮಿಂ ಬ್ರಹ್ಮಘ್ನೋಽಹಮಿತಿ ಬ್ರುವನ್ ॥ ೬೯ ॥

ಏವಂ ಹಿ ಬ್ರಹ್ಮಹತ್ಯಾಯಾ ನಿಷ್ಕೃತಿಃ ಸ್ಮೃತಿಚೋದಿತಾ ।
ಇತ್ಯಾಲೋಚ್ಯ ತದಾ ರಾಜನ್ ಕಾಶ್ಯಪಸ್ತೈಃ ಸಮನ್ವಿತಃ ॥ ೭೦ ॥

ಸಿದ್ಧತೀರ್ಥಮಗಾತ್ಪುಣ್ಯಂ ಯತ್ಪುರಾ ವಾಸವೋಷಿತಂ ।
ಹತ್ವಾ ದಧೀಚಿಂ ವಜ್ರಾರ್ಥಂ ಬ್ರಹ್ಮರ್ಷಿಂ ಪಾಕಶಾಸನಃ ॥ ೭೧ ॥

ವ್ಯಪೋಹಯದ್ ಬ್ರಹ್ಮಹತ್ಯಾಂ ಯತ್ರ ವಿಷ್ಣುಂ ಸಮರ್ಚಯನ್ ।
ಯತ್ರೇಷ್ಟಸಿದ್ಧಿದಂ ಲಿಂಗಂ ಸಿದ್ಧತೀರ್ಥಸ್ಯ ಚೋತ್ತರೇ ॥ ೭೨ ॥

೬೮-೬೯. ಸಕಲ ಧರ್ಮತತ್ತ್ವವನ್ನು ಅರಿತಿರುವ ಮುನಿಯು ಬ್ರಹ್ಮಘ್ನರ ಪ್ರಾಯಶ್ಚಿತ್ತವನ್ನು ಸ್ಮರಿಸಿದನು. ಬ್ರಹ್ಮಘ್ನನು ಕೈಯಲ್ಲಿ ನರಕಪಾಲವನ್ನು ಧರಿಸಿ ಪಾಷಂಡನೂ ಮುಕ್ತಕೇಶನೂ ದಿಗಂಬರನೂ ಆಗಿ ಮೃತ್ತಿಕೆಯಿಂದ ಸರ್ವಾಂಗವನ್ನು ಲೇಪಿಸಿಕೊಂಡವನಾಗಿ ವಿಷ್ಣುಬಿಂಬವನ್ನು ಅರ್ಚಿಸುತ್ತಾ ನಾನು ಬ್ರಹ್ಮಘ್ನನಾಗಿರುವೆನೆಂದು ಹೇಳಿಕೊಳ್ಳುತ್ತ ಸಮಸ್ತ ಭೂಮಿಯನ್ನು ಆಯುಷ್ಯವಿರುವವರೆಗೆ ಸಂಚರಿಸಬೇಕು.

೭೦. ಬ್ರಹ್ಮಹತ್ಯೆಗೆ ಈ ವಿಧವಾದ ಪ್ರಾಯಶ್ಚಿತ್ತವು ಸ್ಮೃತಿಶಾಸ್ತ್ರಗಳಿಂದ ವಿಧಿಸಲ್ಪಟ್ಟಿರುವುದು. ರಾಜನೆ! ಆಗ ಕಾಶ್ಯಪಮುನಿಯು ಇದನ್ನು ಆಲೋಚಿಸಿ ಅವರೆಲ್ಲರಿಂದಲೂ ಕೂಡಿ ಕಾರ್ಯವಿಧಿಯಲ್ಲಿ ತೊಡಗಿ ಪೂರ್ವದಲ್ಲಿ ಇಂದ್ರನು ವಾಸ ಮಾಡಿದ್ದ ಪವಿತ್ರವಾದ ಸಿದ್ಧತೀರ್ಥಕ್ಕೆ ಬಂದನು.

೭೧. ಪಾಕಾಸುರನನ್ನು ಸಂಹರಿಸಿದ ಇಂದ್ರನು ವಜ್ರಾಯುಧಕ್ಕೋಸ್ಕರ ಬ್ರಹ್ಮರ್ಷಿಯಾದ ದಧೀಚಿಮುನಿಯನ್ನು ಕೊಂದು ಅದರಿಂದ ಉಂಟಾದ ಬ್ರಹ್ಮಹತ್ಯೆಯನ್ನು ಯಾವ ತೀರ್ಥದಲ್ಲಿ ವಿಷ್ಣುಪೂಜೆಯನ್ನು ಮಾಡಿ ಕಳೆದುಕೊಂಡಿರುವನೋ ಅಂತಹ ಪವಿತ್ರಸಿದ್ಧತೀರ್ಥವು ಅದು.

೭೨. ಯಾವ ಸ್ಥಳದಲ್ಲಿ ಸಿದ್ಧತೀರ್ಥದ ಉತ್ತರಭಾಗದಲ್ಲಿ ಇಷ್ಟಸಿದ್ಧಿಗಳನ್ನು ಕೊಡುವ ಲಿಂಗವಿರುವುದೋ ಆ ಪವಿತ್ರಸ್ಥಳಕ್ಕೆ ಕಾಶ್ಯಪಮುನಿಯು ಗಜಕಚ್ಛಪಗಳನ್ನು ಕರೆದುಕೊಂಡು ಬಂದನು.

ತತ್ರಾಜಗಾಮ ತೌ ಗೃಹ್ಯ ಕಾಶ್ಯಪೋ ಗಜಕಚ್ಛಪೌ ।
ಸ್ನಾಪಯಿತ್ವಾ ಸಿದ್ಧತೀರ್ಥೇ ಜಪ್ತ್ವಾ ಮಂತ್ರೈಃ ಸುಪಾವನೈಃ ॥ ೭೩ ॥

ನಿಷ್ಕೃತಿಂ ಬ್ರಹ್ಮಹತ್ಯಾಯಾಃ ಕಾರಯಾಮಾಸ ಶಾಸ್ತ್ರತಃ ।
ಲಿಂಗಂ ಸಂಸ್ಥಾಪ್ಯ ರುದ್ರಸ್ಯ ತಾಭ್ಯಾಂ ಬಲಿಮಕಾರಯತ್ ॥ ೭೪ ॥

ಸಿದ್ಧತೀರ್ಥಸ್ಯ ಚೈಶಾನ್ಯೇ ದೇಶೇ ಲಿಂಗಂ ಗಜಾಭಿಧಂ ।
ದಕ್ಷಿಣೇ ಕಚ್ಛಪಾಽಖ್ಯಂ ಹಿ ಲಿಂಗಂ ಕಚ್ಛಪಮುಕ್ತಿದಂ ॥ ೭೫ ॥

ಏವಂ ಕೃತ್ವಾ ತತಸ್ತಾಭ್ಯಾಂ ನಿಷ್ಕೃತಿಂ ಕಾಶ್ಯಪೋ ಯಯೌ ।
ಗರುಡೋಽಪ್ಯಮೃತಪ್ರೇಪ್ಸುರ್ಜಗಾಮ ತ್ರಿದಿವಂ ತತಃ ॥ ೭೬ ॥

ಕಾಶ್ಯಪೇನ ಸಪುತ್ರೇಣ ತಾರಿತೌ ಬ್ರಾಹ್ಮಣಾವುಭೌ ।
ದಿವ್ಯರೂಪಧರೌ ಭೂತ್ವಾ ದಿವಮಾರುಹತುರ್ನೃಪ ॥ ೭೭ ॥

---

೭೩. ಅಲ್ಲಿ ಪಾವನವಾದ ಮಂತ್ರಗಳನ್ನು ಜಪಿಸಿ ಸಿದ್ಧತೀರ್ಥದಲ್ಲಿ ಸ್ನಾನ ಮಾಡಿಸಿ ಶಾಸ್ತ್ರಾನುಸಾರವಾಗಿ ಬ್ರಹ್ಮಹತ್ಯಾಪ್ರಾಯಶ್ಚಿತ್ತವನ್ನು ಮಾಡಿಸಿದನು.

೭೪. ಮತ್ತು ಅಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಿ ಅವರಿಬ್ಬರಿಂದ ಬಲಿದಾನವನ್ನು ಮಾಡಿಸಿದನು.

೭೫. ಆ ಸಿದ್ಧತೀರ್ಥದ ಈಶಾನ್ಯದೇಶದಲ್ಲಿ ಗಜಕ್ಕೆ ಮುಕ್ತಿಯನ್ನು ಕೊಟ್ಟಿರುವ ಗಜೇಶ್ವರವೆಂಬ ಲಿಂಗವಿರುವುದು. ದಕ್ಷಿಣಭಾಗದಲ್ಲಿ ಕಚ್ಛಪಕ್ಕೆ ಮುಕ್ತಿಯನ್ನು ಕೊಟ್ಟಿರುವ ಕಚ್ಛಪೇಶ್ವರವೆಂಬ ಲಿಂಗವಿರುವುದು.

೭೬. ಕಾಶ್ಯಪಮುನಿಯು ಈ ರೀತಿಯಾಗಿ ಅವರಿಬ್ಬರಿಗೆ ಬ್ರಹ್ಮಹತ್ಯಾಪ್ರಾಯಶ್ಚಿತ್ತವನ್ನು ಮಾಡಿ ಪ್ರಯಾಣಮಾಡಿದನು. ತರುವಾಯ ಗರುಡನು ಅಮೃತಾಹರಣಕ್ಕೋಸ್ಕರ ಸ್ವರ್ಗಲೋಕಕ್ಕೆ ಪ್ರಯಾಣಮಾಡಿದನು.

೭೭. ರಾಜನೆ! ಪಿತಾಪುತ್ರರಾದ ಕಾಶ್ಯಪ-ಗರುಡರಿಂದ ಪಾಪನಿರ್ಮುಕ್ತರಾದ ಇಬ್ಬರು ಬ್ರಾಹ್ಮಣರು ದಿವ್ಯರೂಪವನ್ನು ಧರಿಸಿ ಪುಣ್ಯಲೋಕವನ್ನು ಹೊಂದಲು ವಿಮಾನಾರೂಢರಾದರು.

ಏವಂ ಪುರಾ ಗರುಡೇನಾಭ್ಯುಪೇತ್ಯ
ಸತ್ಯವ್ರತಂ ನಿರ್ಮಿತಂ ಕಾಶ್ಯಪೇನ ।
ತತ್ಪಾಪಹಂ ಪುಣ್ಯದಂ ಚಾಪಿ ಯಸ್ಮಾತ್
ತದ್ಗಾರುಡಂ ತೀರ್ಥಮಭೂನ್ನೃಪೇಂದ್ರ ॥ ೭೮ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಷಷ್ಠೋಽಧ್ಯಾಯಃ

---

೭೮. ರಾಜೇಂದ್ರನೆ! ಪೂರ್ವಕಾಲದಲ್ಲಿ ಕಾಶ್ಯಪಪುತ್ರನಾದ ಗರುಡನು ಸತ್ಯವ್ರತಕ್ಷೇತ್ರಕ್ಕೆ ಬಂದು ಪಾಪವನ್ನು ಭಂಜನಮಾಡಿ ಪುಣ್ಯವನ್ನು ಅನುಗ್ರಹಿಸುವ ತೀರ್ಥವನ್ನು ಹಿಂದೆ ಹೇಳಿದಂತೆ ರಚಿಸಿರುವುದರಿಂದ ಆ ತೀರ್ಥವು ಗರುಡತೀರ್ಥವೆಂದು ಪ್ರಖ್ಯಾತವಾಯಿತು.

ಕಾಂಚೀಮಾಹಾತ್ಮ್ಯದಲ್ಲಿ ಷಷ್ಠಾಧ್ಯಾಯವು ಮುಗಿದುದು.

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಸಪ್ತಮೋಽಧ್ಯಾಯಃ

ನಾರದ ಉವಾಚ:—

ತಸ್ಯ ದಕ್ಷಿಣದಿಗ್ಭಾಗೇ ತೀರ್ಥಂ ಯತ್ ಪಾಪನಾಶನಂ
ಅಸ್ತಿ ಪುಣ್ಯತಮಂ ರಾಜಂಸ್ತತ್ಕಾಯಾರೋಹಣಾಭಿಧಂ ॥ ೧ ॥

ಸಹೈವ ಕಾಯೇನಾಽರೂಢಃ ಸ್ವರ್ಗಂ ಯಸ್ಮಾದ್ದ್ವಿಜಃ ಪುರಾ ।
ತತ್ಕಾಯಾರೋಹಣಂ ಲೋಕೇ ಖ್ಯಾತಂ ತೀರ್ಥಂ ಸುಪಾವನಂ ॥ ೨ ॥

ಪುರಾ ರಾಜಋಷಿಃ ಕಶ್ಚಿತ್ ಕೌಶಾಂಬೀಮಾವಸತ್ಪುರೀಂ ।
ಕೌಶಿಕೋ ನಾಮ ಧರ್ಮಾತ್ಮಾ ಪ್ರಜಾ ಧರ್ಮೇಣ ರಂಜಯನ್ ॥ ೩ ॥

---

೧. ನಾರದಮುನಿಯು ಇಂತೆಂದನು :—ರಾಜನೆ ! ಹಿಂದೆ ಹೇಳಿದ ಗರುಡ ತೀರ್ಥದ ಬಲಭಾಗದಲ್ಲಿ ಸಕಲ ಪಾಪ ನಾಶಕರವೂ ಪುಣ್ಯಸಂಪಾದಕವೂ ಆದ ಕಾಯಾರೋಹಣವೆಂಬ ಹೆಸರಿನ ಒಂದು ತೀರ್ಥವಿರುವುದು.

೨. ಪೂರ್ವಕಾಲದಲ್ಲಿ ಒಬ್ಬ ದ್ವಿಜನು ಆ ತೀರ್ಥದಲ್ಲಿ ಸಶರೀರನಾಗಿ ಸ್ವರ್ಗವನ್ನು ಆರೋಹಣಮಾಡಿದನು. ಆದುದರಿಂದ ಪವಿತ್ರವಾದ ಆ ತೀರ್ಥವು ಲೋಕದಲ್ಲಿ ಕಾಯಾರೋಹಣವೆಂದು ಸಂಜ್ಞೆಯನ್ನು ಪಡೆಯಿತು.

೩. ಪೂರ್ವದಲ್ಲಿ ಕೌಶಾಂಬಿಯೆಂಬ ನಗರಿಯಲ್ಲಿ ಧರ್ಮಾತ್ಮನಾದ ಕೌಶಿಕನೆಂಬ ಒಬ್ಬ ರಾಜರ್ಷಿಯು ಧರ್ಮದಿಂದ ಪ್ರಜೆಗಳನ್ನು ರಂಜನಮಾಡುತ್ತಲಿದ್ದನು.

ಸ ಕದಾಚಿನ್ಮಹೀಂ ಕೃತ್ಸ್ನಾಂ ಪರ್ಯಟನ್ನಾಜಗಾಮ ಹ ।
ವಸಿಷ್ಠಸ್ಯಾಶ್ರಮಂ ತೇನ ಯುಯುಧೇ ಧೇನುಕಾರಣಾತ್ ॥ ೪ ॥

ತಪಸ್ವಿನಾ ಬ್ರಾಹ್ಮಣೇನ ಪರಾಭೂತಃ ಸ ತತ್ಕ್ಷಣಾತ್ ।
ಹತದರ್ಪೋ ಹತೋತ್ಸಾಹೋ ಹತಸೈನ್ಯಸ್ತು ದುಃಖಿತಃ ॥ ೫ ॥

ಕ್ಷತ್ರಿಯೋಽಹಂ ಕಥಂ ವೀರೋ ಬ್ರಾಹ್ಮಣೇನಾಸ್ಮಿ ನಿರ್ಜಿತಃ ।
ಇತಿ ಚಿಂತಾಸಮಾಯುಕ್ತೋ ರಾಜ್ಯಮುತ್ಸೃಜ್ಯ ಕೌಶಿಕಃ ॥ ೬ ॥

ಕ್ಷಾತ್ರಾತ್ಪರತರಂ ಮತ್ವಾ ಬ್ರಾಹ್ಮಂ ತೇಜಸ್ತದಾ ನೃಪ ।
ಬ್ರಾಹ್ಮಣ್ಯಂ ಪ್ರಾಪ್ತುಕಾಮೋ ವೈ ಜಗಾಮ ತಪಸೇ ವನಂ ॥ ೭ ॥

ದಕ್ಷಿಣಾಂ ದಿಶಮುದ್ದಿಶ್ಯ ಯತ್ರ ಸತ್ಯವ್ರತಾಭಿಧಂ ।
ಕ್ಷೇತ್ರಂ ಸುಪಾವನಂ ತತ್ರ ಚಕಾರ ತಪ ಉತ್ತಮಂ ॥ ೮ ॥

---

೪. ಆ ರಾಜರ್ಷಿಯು ಒಂದಾನೊಂದು ಸಮಯದಲ್ಲಿ ಸಕಲ ಭೂಮಿಯನ್ನು ಸಂಚಾರಮಾಡುತ್ತ ವಸಿಷ್ಠಋಷಿಯ ಆಶ್ರಮಕ್ಕೆ ಬಂದನು. ಅಲ್ಲಿ ಒಂದು ಧೇನುವಿನ ಕಾರಣದಿಂದ ವಸಿಷ್ಠಮುನಿಯೊಡನೆ ಯುದ್ಧಮಾಡಿದನು.

೫. ರಾಜರ್ಷಿಯು ಆ ಯುದ್ಧದಲ್ಲಿ ತಪಸ್ವಿಯಾದ ವಸಿಷ್ಠಬ್ರಾಹ್ಮಣನಿಂದ ಒಂದು ನಿಮಿಷದಲ್ಲಿ ಅಪಜಯವನ್ನು ಹೊಂದಿದನು. ಆಗ ತನ್ನ ದರ್ಪ-ಉತ್ಸಾಹಗಳನ್ನು ಕಳೆದುಕೊಂಡು ಸೈನ್ಯದಲ್ಲಿ ಬಹಳವಾದ ನಷ್ಟವುಳ್ಳವನಾಗಿ ಬಲು ದುಃಖಿತನಾದನು.

೬. ಕ್ಷತ್ರಿಯ ವೀರನಾದ ನಾನು ಈ ತಪಸ್ವಿ ಬ್ರಾಹ್ಮಣನಿಂದ ಪರಾಜಯವನ್ನು ಹೊಂದಿರುವುದು ಹೇಗೆ? ಎಂದು ಕೌಶಿಕರಾಜರ್ಷಿಯು ಚಿಂತೆಯಿಂದ ಕೂಡಿ ರಾಜ್ಯವನ್ನು ಬಿಟ್ಟುಹೊರಟನು.

೭. ರಾಜನೆ! ಆಗ ಕೌಶಿಕನು ಕ್ಷತ್ರಿಯ ತೇಜಸ್ಸಿಗಿಂತಲೂ ಬ್ರಹ್ಮತೇಜಸ್ಸು ಬಲು ಉತ್ಕೃಷ್ಟವಾದುದೆಂದು ತಿಳಿದು ಅಂತಹ ಬ್ರಾಹ್ಮಣ್ಯವನ್ನು ಸಂಪಾದಿಸಲು ತಪಸ್ಸನ್ನು ಮಾಡಲು ಅರಣ್ಯಕ್ಕೆ ಹೋದನು.

೮. ಮೊದಲು ದಕ್ಷಿಣದಿಕ್ಕಿಗೆ ಬಂದು ಸತ್ಯವ್ರತವೆಂಬ ಹೆಸರಿನ ಪರಮಪಾವನ ತೀರ್ಥದ ಸಮೀಪದಲ್ಲಿ ಕುಳಿತು ಉತ್ತಮವಾದ ತಪಸ್ಸನ್ನು ಆಚರಿಸಿದನು.

ಊರ್ಧ್ವಬಾಹುಃ ಪಂಚತಪಾ ವಾಯುಭಕ್ಷೋ ಜಿತೇಂದ್ರಿಯಃ ।
ಏವಂ ವರ್ಷಸಹಸ್ರಾಣಿ ವ್ಯತೀತಾನಿ ತಪಸ್ಯತಃ ॥ ೯ ॥

ತಸ್ಮಿನ್ನೇವ ತದಾ ಕಾಲೇ ತ್ರಿಶಂಕುರ್ನಾಮ ನಾಮತಃ ।
ಅಯೋಧ್ಯಾಧಿಪತಿಃ ಶ್ರೀಮಾನ್ ಯಷ್ಟುಕಾಮೋ ಮಹೀಪತಿಃ ॥ ೧೦ ॥

ಸಹ ವೈ ಸ್ವಶರೀರೇಣ ಸ್ವರ್ಗಂತವ್ಯಮಿತಿ ಸ್ಮಯನ್ ।
ಚಕಾರ ಕ್ರತುಸಂಭಾರಾನ್ ಸುಬಹೂನ್ ನೃಪತಿಸ್ತದಾ ॥ ೧೧ ॥

ತಂ ದೃಷ್ಟ್ವಾ ಕೃತಸಂಭಾರಂ ಯಷ್ಟುಕಾಮಂ ಮಹೀಪತಿಂ ।
ವಾಕ್ಯಂ ಪ್ರೋವಾಚ ಭಗವಾನ್ ವಸಿಷ್ಠೋ ಬ್ರಹ್ಮಣಃ ಸುತಃ ॥ ೧೨ ॥

---

೯. ಆಗ ಅವನು ಮಾಡಿದ ತಪಸ್ಸು ಅತಿ ಕ್ಲೇಶಕರವಾಗಿದ್ದಿತು. ತನ್ನ ಬಾಹುಗಳನ್ನು ಮೇಲಕ್ಕೆ ಎತ್ತಿಕೊಂಡವನಾಗಿಯೂ, ನಾಲ್ಕು ದಿಕ್ಕುಗಳಲ್ಲಿ ಅಗ್ನಿಯನ್ನು ಸ್ಥಾಪಿಸಿ ನಡುವೆ ಸೂರ್ಯನಿಗೆ ಅಭಿಮುಖವಾಗಿ ಕುಳಿತು ಆಚರಿಸಬೇಕಾದ ಪಂಚಾಗ್ನಿ ಮಧ್ಯದ ತಪವುಳ್ಳವನಾಗಿಯೂ, ವಾಯು ಆಹಾರವನ್ನು ಸೇವಿಸುವವನಾಗಿಯೂ ಮತ್ತು ಜಿತೇಂದ್ರಿಯನಾಗಿಯೂ ಕ್ಲೇಶದಿಂದ ತಪವನ್ನು ಆಚರಿಸಿದನು. ಈರೀತಿಯಾಗಿ ತಪಸ್ಸನ್ನು ಆಚರಿಸುತ್ತ ಸಾವಿರಾರು ವರ್ಷಗಳು ಕಳೆದವು.

೧೦. ಆ ಕಾಲದಲ್ಲಿ ಐಶ್ವರ್ಯಸಂಪನ್ನನೂ ಅಯೋಧ್ಯೆಗೆ ಅಧಿಪತಿಯೂ ಆದ ತ್ರಿಶಂಕುವೆಂದು ಪ್ರಖ್ಯಾತನಾದ ರಾಜನು ಯಾಗಮಾಡಬೇಕೆಂಬ ಕುತೂಹಲವುಳ್ಳವನಾದನು.

೧೧. ತಾನು ಯಜ್ಞವನ್ನು ಅನುಷ್ಠಾನಮಾಡಿ ಸ್ವಶರೀರದ ಜೊತೆಗೆ ಸ್ವರ್ಗವನ್ನು ಹೊಂದಬೇಕೆಂಬ ಆಶ್ಚರ್ಯಕರವಾದ ಅಭಿಲಾಷೆಯನ್ನು ಇಟ್ಟುಕೊಂಡು ರಾಜನು ಸಮೃದ್ಧಿಯಿಂದ ಕೂಡಿದ ಯಜ್ಞಸಂಭಾರಗಳನ್ನು ಸಂಗ್ರಹಮಾಡಿದನು.

೧೨. ಯಜ್ಞಸಾಮಗ್ರಿಯನ್ನು ಸಿದ್ಧಪಡಿಸಿರುವ ಮತ್ತು ಯಜ್ಞಾನುಷ್ಠಾನದಲ್ಲಿ ಇಚ್ಛೆಯುಳ್ಳ ಆ ರಾಜನನ್ನು ಕುರಿತು ಷಡ್ಗುಣೈಶ್ವರ್ಯಸಂಪನ್ನನೂ ಬ್ರಹ್ಮನ ಮಾನಸಪುತ್ರನೂ ರಾಜಪುರೋಹಿತನೂ ಆದ ವಸಿಷ್ಠಮುನಿಯು ಈ ಮಾತನ್ನು ಆಡಿದನು.

ಪ್ರಾಪ್ತುಂ ಸ್ವರ್ಗಮಶಕ್ಯಂ ಹಿ ಸ್ವದೇಹೇನ ಸಹ ತ್ವಯಾ ।
ತಸ್ಮಾನ್ನ ಯಾಜಯಿಷ್ಯಾಮಿ ತ್ವಾಮದ್ಯ ನೃಪಸತ್ತಮ ॥ ೧೩ ॥

ಇತ್ಯುಕ್ತಃ ಸ ವಸಿಷ್ಠೇನ ರಾಜಾ ಕ್ರೋಧಸಮನ್ವಿತಃ ।
ವಾಸಿಷ್ಠಾನುಗ್ರತಪಸಃ ಪ್ರಣಿಪತ್ಯೇದಮಬ್ರವೀತ್ ॥ ೧೪ ॥

ಯಾಜಯಂತು ಭವಂತೋ ಮಾಂ ಯಥಾ ಸ್ವರ್ಗಮವಾಪ್ನುಯಾಂ ।
ತೈಶ್ಚಾಪ್ಯಶಕ್ಯಮಿತ್ಯುಕ್ತಃ ಸ ಬಭೂವ ರುಷಾನ್ವಿತಃ ॥ ೧೫ ॥

ರೋಷಾತ್ ಪ್ರಸ್ಫುರಮಾಣೋಷ್ಠಃ ಸ್ಮಯಮಾನೋಽಬ್ರವೀದ್ವಚಃ ।
ಪ್ರತ್ಯಾಖ್ಯಾತೋಽಸ್ಮಿ ಗುರುಣಾ ಭವದ್ಭಿಶ್ಚಾಕೃತಾತ್ಮಭಿಃ ॥ ೧೬ ॥

---

೧೩. ರಾಜಶ್ರೇಷ್ಠನೇ! ಸಶರೀರನಾಗಿ ನೀನು ಸ್ವರ್ಗವನ್ನು ಎಂದಿಗೂ ಹೊಂದಲಾರೆ. ಆದ್ದರಿಂದ ಈಗ ನಿನಗೆ ಅಂತಹ ಯಾಗವನ್ನು ನಾನು ಮಾಡಿಸುವುದಿಲ್ಲ.

೧೪. ವಸಿಷ್ಠ ಗುರುವಿನಿಂದ ಈ ರೀತಿಯಾಗಿ ನಿರಾಕರಿಸಲ್ಪಟ್ಟಿರುವ ರಾಜನು ಬಹಳ ಕ್ರೋಧದಿಂದ ಕೂಡಿದವನಾಗಿ ಉಗ್ರ ತಪಸ್ಸಿನಿಂದ ಕೂಡಿರುವ ವಸಿಷ್ಠಪುತ್ರರನ್ನು ಕುರಿತು ಈ ರೀತಿಯಾದ ವಚನವನ್ನು ಆಡಿದನು.

೧೫. ನಾನು ಸಶರೀರನಾಗಿ ಸ್ವರ್ಗವನ್ನು ಹೊಂದಲು ಸಾಧನವಾದ ಯಾಗವನ್ನು ನೀವು ಮಾಡಿಸಬೇಕು, ಎಂದು ಕೇಳಿಕೊಳ್ಳಲಾಗಿ ಆ ವಸಿಷ್ಠಪುತ್ರರಿಂದಲೂ ಇದು ಸಾಧ್ಯವಲ್ಲವೆಂದು ನಿರಾಕರಿಸಲ್ಪಟ್ಟು ತರುವಾಯ ರಾಜನು ಅತಿಯಾಗಿ ಕೋಪಗ್ರಸ್ತನಾದನು.

೧೬. ಕೋಪವಿಕಾರದಿಂದ ನಡುಗುತ್ತಿದ್ದ ತುಟಿಯುಳ್ಳವನಾಗಿ ಮತ್ತು ಅತಿಗರ್ವಪೂರಿತನಾಗಿ ಮಾತನ್ನು ಆಡಿದನು. ಈ ನನ್ನ ಸಂಕಲ್ಪಿತಕಾರ್ಯದಲ್ಲಿ ಗುರುವಿನಿಂದಲೂ ಅಸಂಸ್ಕೃತ ಬುದ್ಧಿಯುಳ್ಳ ನಿಮ್ಮಿಂದಲೂ ನಾನು ನಿರಾಕರಿಸಲ್ಪಟ್ಟಿರುವೆನಲ್ಲವೆ.

ಕಿಂ ನ ಸಂತಿ ಮಹಾತ್ಮಾನೋ ಯಾಜಕಾ ಭವತೋ ವಿನಾ ।
ಶಾಖಾಂತರಂ ವಾ ಸಂಪ್ರಾಪ್ಯ ಸಾಧಯಿಷ್ಯಾಮ್ಯಹಂ ಕ್ರತುಂ ॥ ೧೭ ॥

ತ್ರಿವಿಷ್ಟಪಂ ಮಮಾಪ್ರಾಪ್ಯಂ ಕಥಂ ಭೂಯಾನ್ಮಹಾತ್ಮನಃ ।
ಭವತ್ಸು ಪ್ರೇಕ್ಷಮಾಣೇಷು ಯಾಸ್ಯಾಮ್ಯೇವ ತ್ರಿವಿಷ್ಟಪಂ ॥ ೧೮ ॥

ಇತ್ಯುಕ್ತವಂತಂ ರಾಜಾನಂ ಶೇಪುಃ ಕ್ರೋಧಸಮನ್ವಿತಾಃ ।
ವಸಿಷ್ಠಪುತ್ರಾ ರಾಜೇಂದ್ರ ಸರ್ವೇ ಚ ಸಮಹೋದಯಾಃ ॥ ೧೯ ॥

ಅವಮತ್ಯ ಗುರೂನಸ್ಮಾನ್ ಯಚ್ಛಾಖಾಂತರಮಿಚ್ಛಸಿ ।
ತಸ್ಮಾತ್ ತ್ವಮದ್ಯ ದುರ್ಮೇಧಶ್ಚಂಡಾಲೋ ಭವ ಪಾರ್ಥಿವ ॥ ೨೦ ॥

ಇತಿ ಶಪ್ತಸ್ತದಾ ರಾಜಾ ಬ್ರಾಹ್ಮಣೈಃ ಶಂಸಿತವ್ರತೈಃ ।
ಬಭೂವ ಸದ್ಯಶ್ಚಂಡಾಲೋ ವಿಕೃತೋ ಘೋರದರ್ಶನಃ ॥ ೨೧ ॥

---

೧೭. ನಿಮ್ಮನ್ನು ಬಿಟ್ಟರೆ ಮಹಾತ್ಮರಾದ ಬೇರೆ ಯಾಜಕರು ಇಲ್ಲವೆಂಬುದಾಗಿ ತಿಳಿದಿರುವಿರಾ ? ಅಥವಾ ಸ್ವಶಾಖೆಯನ್ನು ಬಿಟ್ಟು ಮತ್ತೊಂದು ಶಾಖೆಯನ್ನಾದರೂ ಹೊಂದಿ ನಾನು ಈ ಯಜ್ಞಾನುಷ್ಠಾನವನ್ನು ಸಾಧಿಸಬಲ್ಲೆನು.

೧೮. ಮಹಾತ್ಮನಾದ ನನಗೆ ಸ್ವರ್ಗವು ಹೇಗೆ ತಾನೆ ಅಪ್ರಾಪ್ಯವಾದೀತು ? ನೀವೆಲ್ಲರೂ ನೋಡುತ್ತಿರುವ ಹಾಗೆಯೇ ನಾನು ಸಶರೀರನಾಗಿ ಸ್ವರ್ಗವನ್ನು ಹೊಂದಿಯೇ ಹೊಂದುವೆನು.

೧೯. ರಾಜೇಂದ್ರನೇ ! ತ್ರಿಶಂಕುರಾಜನು ಈ ರೀತಿಯಾಗಿ ಹೇಳಲಾಗಿ ಮಹೋದಯನೇ ಮುಂತಾದ ವಸಿಷ್ಠ ಪುತ್ರರೆಲ್ಲರೂ ಕೋಪದಿಂದ ರಾಜನನ್ನು ಶಪಿಸಿದರು.

೨೦. ಗುರುಗಳಾದ ನಮ್ಮನ್ನು ಧಿಕ್ಕರಿಸಿ ಶಾಖಾಂತರವನ್ನು ಪ್ರವೇಶಿಸಲು ನೀನು ಇಷ್ಟಪಡುತ್ತಿರುವುದರಿಂದ ದುರ್ಬುದ್ಧಿಯಿಂದ ಕೂಡಿದ ನೃಪತಿಯೆ ! ಈಗಲೆ ನೀನು ಚಂಡಾಲನಾಗು.

೨೧. ಪ್ರಶಸ್ತವಾದ ವ್ರತನಿಯಮಾನುಷ್ಠಾನದಿಂದ ತೇಜಸ್ವಿಗಳಾದ ಬ್ರಾಹ್ಮಣರು ಹೀಗೆ ಶಪಿಸಿದ ಕೂಡಲೆ ರಾಜನು ಕರಾಲವಾದ ದರ್ಶನವುಳ್ಳವನೂ ವಿಕಾರರೂಪವುಳ್ಳವನೂ ಆದ ಚಂಡಾಲನಾದನು.

ನೀಲವಸ್ತ್ರಧರೋ ನೀಲೋ ಧ್ವಸ್ತಕೇಶೋ ವಿಲೋಚನಃ ।
ತಂ ದೃಷ್ಟ್ವಾ ಮಂತ್ರಿಣಃ ಸರ್ವೇ ಬ್ರಾಹ್ಮಣಾ ನೈಗಮಾಸ್ತಥಾ ॥ ೨೨ ॥

ತತ್ಯಜುರ್ದೂರತೋ ಭೀತಾಃ ಸಾಕ್ಷಾಚ್ಚಂಡಾಲರೂಪಿಣಂ ।
ತತಃ ಶೋಕಸಮಾವಿಷ್ಟೋ ರಾಜಾ ಭ್ರಷ್ಟಮನೋರಥಃ ॥ ೨೩ ॥

ವಿಹೀನೋ ರಾಜ್ಯಭೋಗಾಭ್ಯಾಂ ಬಂಧುಭಿಃ ಸ್ವಜನೈರಪಿ ।
ಸಂತಪ್ತಹೃದಯೋ ನಿತ್ಯಂ ಕ್ರೋಧೇನ ಕಲುಷೀಕೃತಃ ॥ ೨೪ ॥

ಕರೇಣಾಸಿಂ ಸಮುದ್ಯಮ್ಯ ರಾತ್ರಾವಾಗತ್ಯ ಚಾಶ್ರಮಂ ।
ಜಘಾನ ಸ್ವಪತಸ್ತತ್ರ ಸರ್ವಾನೇವ ಗುರೋಃ ಸುತಾನ್ ॥ ೨೫ ॥

---

೨೨. ತ್ರಿಶಂಕುವಿಗೆ ಆ ಕ್ಷಣದಲ್ಲಿ ನಿಜವಾದ ಚಂಡಾಲರೂಪವು ಪ್ರಾಪ್ತವಾದುದರಿಂದ ನೀಲವಸ್ತ್ರವನ್ನುಟ್ಟವನೂ, ನೀಲವಾದ ಆಕಾರವುಳ್ಳವನೂ, ಧ್ವಂಸವಾದ ಕೇಶಗಳುಳ್ಳವನೂ ಮತ್ತು ವಿಕಾರನೇತ್ರವುಳ್ಳವನೂ ಆದನು, ಆಗ ಮಂತ್ರಿಗಳು, ಬ್ರಾಹ್ಮಣರು,ಮತ್ತು ವರ್ತಕರು ಮುಂತಾದ ಪ್ರಜೆಗಳು ಈ ರೂಪದಲ್ಲಿದ್ದ ರಾಜನನ್ನು ನೋಡಿದರು.

೨೩. ಪ್ರಜೆಗಳು ಸಾಕ್ಷಾತ್ತಾಗಿ ಚಂಡಾಲರೂಪಿಯಾದ ದೊರೆಯನ್ನು ನೋಡಿ ಭೀತರಾಗಿ ದೂರದಲ್ಲಿ ಪರಿತ್ಯಾಗಮಾಡಿದರು. ಆಗ ರಾಜನು ತನ್ನ ಮನೋರಥವು ಸಿದ್ಧಿಯಾಗದೇ ಈ ಅನರ್ಥವೂ ಒದಗಿದುದರ ನಿಮಿತ್ತದಿಂದ ಹೆಚ್ಚಾಗಿ ಶೋಕದಿಂದ ತಪ್ತನಾದನು.

೨೪. ರಾಜ್ಯ ಮತ್ತು ಸುಖಭೋಗಗಳಿಂದ ಭ್ರಷ್ಟನೂ ಬಂಧು-ಸ್ವಜನರಿಂದ ತ್ಯಜಿಸಲ್ಪಟ್ಟವನೂ ತಪ್ತವಾದ ಹೃದಯವುಳ್ಳವನೂ ಮತ್ತು ಯಾವಾಗಲೂ ಕೋಪದಿಂದ ಆವಿಷ್ಟವಾದ ಹೃದಯವುಳ್ಳವನೂ ಆದನು.

೨೫. ಆಗ ಒಂದು ರಾತ್ರಿಯಲ್ಲಿ ಕೈಯ್ಯಲ್ಲಿ ಕತ್ತಿಯನ್ನು ಎತ್ತಿಕೊಂಡು ಗುರುವಿನ ಆಶ್ರಮಕ್ಕೆ ಬಂದು ಅಲ್ಲಿ ನಿದ್ರಿಸುತ್ತಿದ್ದ ಎಲ್ಲ ಗುರುಪುತ್ರರನ್ನೂ ಕೊಂದು ಹಾಕಿದನು.

ಹತ್ವಾ ತಾನ್ ಪೂರ್ವವೈರೇಣ ಕಾನನೇಷು ಚಚಾರ ಹ ।
ಚಂಡಾಲರೂಪೋಽಪಿ ಸದಾ ಪೀಡಿತೋ ಬ್ರಹ್ಮಹತ್ಯಯಾ ॥ ೨೬ ॥

ಏವಂ ವರ್ಷಶತಂ ರಾಜಂಸ್ತತ್ರ ತತ್ರ ವನೇ ಚರನ್ ।
ಕದಾಚಿದ್ದೈವಯೋಗೇನ ಕ್ಷೇತ್ರಂ ಸತ್ಯವ್ರತಂ ಯಯೌ ॥ ೨೭ ॥

ತತ್ರ ದೃಷ್ಟ್ವಾ ತಪಸ್ಯಂತಂ ಕೌಶಿಕಂ ಗಾಧಿನಂದನಂ ।
ಪಪಾತ ಪಾದಯೋಸ್ತಸ್ಯ ಕ್ರೋಶನ್ನುಚ್ಚೈಃ ಸುದುಃಖಿತಃ ॥ ೨೮ ॥

ತ್ರಾಹಿ ಮಾಮದ್ಯ ಗಾಧೇಯ ಪ್ರಪನ್ನಂ ಶರಣೈಷಿಣಂ ।
ಗುರುಶಾಪಾದ್ವಿರೂಪಾಢ್ಯಮಾವೃತಂ ಬ್ರಹ್ಮಹತ್ಯಯಾ ॥ ೨೯ ॥

ವಿಶ್ವಾಮಿತ್ರಸ್ತತೋ ವೀಕ್ಷ್ಯ ರಾಜಾನಂ ಘೋರರೂಪಿಣಂ ।
ಕೃಪಯಾ ಪರಯಾಽವಿಷ್ಟೋ ವಾಕ್ಯಮೇತದುವಾಚ ಹ ॥ ೩೦ ॥

---

೨೬. ಪೂರ್ವದಿಂದ ಇದ್ದ ವೈರದಿಂದ ಅವರೆಲ್ಲರನ್ನೂ ಕೊಂದು ಅನೇಕ ಅರಣ್ಯಗಳಲ್ಲಿ ಸಂಚರಿಸಿದನು. ಅವನಿಗೆ ಆಗ ಚಂಡಾಲರೂಪವು ಪ್ರಾಪ್ತವಾದುದರ ಜೊತೆಗೆ ಬ್ರಹ್ಮಹತ್ಯೆಯು ಪೀಡಿಸಲಾರಂಭಿಸಿತು.

೨೭. ರಾಜನೆ! ಈ ರೀತಿಯಾಗಿ ನೂರಾರು ವರ್ಷಗಳ ಕಾಲ ಆಯಾಯ ಅರಣ್ಯಗಳಲ್ಲಿ ಸಂಚರಿಸುತ್ತ ಒಂದಾನೊಂದು ಸಮಯದಲ್ಲಿ ದೈವಯೋಗದಿಂದ ಅಕಸ್ಮಾತ್ತಾಗಿ ಸತ್ಯವ್ರತಕ್ಷೇತ್ರಕ್ಕೆ ಬಂದನು.

೨೮. ಅಲ್ಲಿ ತಪಸ್ಸನ್ನು ಮಾಡುತ್ತಿದ್ದ ಗಾಧಿರಾಜನ ಮಗನಾದ ಕೌಶಿಕ (ವಿಶ್ವಾಮಿತ್ರ) ನನ್ನು ಕಂಡು ಬಹು ದುಃಖಿತನಾದ ರಾಜನು ಗಟ್ಟಿಯಾಗಿ ಕೂಗುತ್ತ ವಿಶ್ವಾಮಿತ್ರನ ಪಾದಗಳಲ್ಲಿ ಬಿದ್ದನು.

೨೯. ಗಾಧಿಪುತ್ರನೆ! ಗುರುಶಾಪದಿಂದ ವಿರೂಪಾಕಾರವುಳ್ಳ, ಬ್ರಹ್ಮಹತ್ಯೆಯಿಂದ ಸುತ್ತುವರಿಯಲ್ಪಟ್ಟು ಪೀಡಿತನಾದ ಮತ್ತು ಅನನ್ಯಭಕ್ತಿಯಿಂದ ನಿನ್ನನ್ನು ಶರಣಹೊಂದಿರುವ ನನ್ನನ್ನು ಈಗ ರಕ್ಷಿಸು.

೩೦. ವಿಶ್ವಾಮಿತ್ರಮುನಿಯು ಆ ತರುವಾಯ ಘೋರ ರೂಪಿಯಾದ ರಾಜನನ್ನು ನೋಡಿ ಅತಿಶಯವಾದ ಕರುಣೆಯಿಂದ ಕೂಡಿ ಈ ವಚನವನ್ನು ಆಡಿದನು.

ಉತ್ತಿಷ್ಠೋತ್ತಿಷ್ಠ ರಾಜೇಂದ್ರ ಶರಣಂ ತೇ ಭವಾಮ್ಯಹಂ ।
ಜಾನಾಮಿ ತ್ವಾಂ ಮಹಾತ್ಮಾನಂ ಧರ್ಮಜ್ಞಂ ಸತ್ಯವಾದಿನಂ ॥ ೩೧ ॥

ಕೇನೇಹ ಕಾರಣೇನ ತ್ವಂ ಚಾಂಡಾಲೀಂ ಪ್ರಾಪಿತಸ್ತನುಂ ।
ತಸ್ಮೈ ತದಾ ಸಮಾಚಷ್ಟ ವೃತ್ತಂ ನಿಖಿಲಮಾದಿತಃ ॥ ೩೨ ॥

ತಸ್ಯಾಭಿಲಷಿತಂ ಶ್ರುತ್ವಾ ವಿಶ್ವಾಮಿತ್ರೋ ಮಹಾಮುನಿಃ ।
ನ ಭೇತವ್ಯಂ ತ್ವಯೇತ್ಯುಕ್ತ್ವಾ ಪ್ರತಿಜ್ಞಾಮಕರೋತ್ತದಾ ॥ ೩೩ ॥

ನ ಹಿ ಮಾಂ ಶರಣಂ ಪ್ರಾಪ್ತೋ ವೃಥಾ ಗಚ್ಛೇನ್ನರಃ ಕ್ವಚಿತ್ ।
ಅದ್ಯ ತ್ವಾಂ ಪ್ರಾಪಯಿಷ್ಯಾಮಿ ಸ್ವದೇಹೇನ ತ್ರಿವಿಷ್ಟಪಂ ॥ ೩೪ ॥

ಇತ್ಯುಕ್ತ್ವಾ ಸ ಸಮಾಹೂಯ ಬ್ರಾಹ್ಮಣಾನ್ ವೇದಪಾರಗಾನ್ ।
ಯಷ್ಟುಮಾರಬ್ಧವಾನ್ ಯಜ್ಞಂ ಯೇನ ರಾಜಾ ದಿವಂ ವ್ರಜೇತ್ ॥

---

೩೧. ರಾಜೇಂದ್ರನೆ! ಮೇಲಕ್ಕೇಳು, ಮೇಲಕ್ಕೇಳು, ನಾನು ನಿನಗೆ ಶರಣ ದಾನಮಾಡುವೆನು, ನಾನು ಮಹಾತ್ಮನೂ, ಧರ್ಮವನ್ನು ಅರಿತವನೂ ಮತ್ತು ಸತ್ಯವಾದಿಯೂ ಆದ ನಿನ್ನನ್ನು ತಿಳಿದಿರುವೆನು.

೩೨. ನೀನೀಗ ಯಾವ ಕಾರಣದಿಂದ ಚಂಡಾಲದೇಹವನ್ನು ಹೊಂದಿರುತ್ತಿ? ಎಂದು ಕೇಳಲಾಗಿ ರಾಜನು ತನ್ನ ಸಕಲ ಸಮಾಚಾರವನ್ನು ಆದಿಯಿಂದ ಅವನಿಗೆ ಹೇಳಿದನು.

೩೩. ಉದಾರವಾದ ಮನಸ್ಸುಳ್ಳ ಮತ್ತು ಮಹಾಮಾನಿಯಾದ ವಿಶ್ವಾಮಿತ್ರನು ರಾಜನ ಅಭಿಲಾಷವನ್ನು ಕೇಳಿ ನೀನು ಇದಕ್ಕಾಗಿ ಹೆದರಬೇಡವೆಂದು ಹೇಳಿ ಆಗ ಪ್ರತಿಜ್ಞೆಯನ್ನು ಮಾಡಿದನು.

೩೪. ನನ್ನನ್ನು ಶರಣಹೊಂದಿದ ನರನು ಯಾವಾಗಲೂ ಇಷ್ಟಸಿದ್ಧಿಯನ್ನು ಹೊಂದದೆ ವ್ಯರ್ಥವಾಗಿ ಹೋಗಿರುವುದಿಲ್ಲ. ಈಗ ನಿನ್ನನ್ನು ಸಶರೀರವಾಗಿ ಸ್ವರ್ಗಕ್ಕೆ ಕಳಿಸುವೆನು.

೩೫. ಹೀಗೆ ಅವನಿಗೆ ವಚನವನ್ನಿತ್ತು ವೇದಪಾರಂಗತರಾದ ಬ್ರಾಹ್ಮಣರನ್ನು ಕರೆದು ಸಶರೀರವಾಗಿ ಸ್ವರ್ಗವನ್ನು ಕೊಡುವ ಯಜ್ಞವನ್ನು ಮಾಡಲು ಉಪಕ್ರಮಿಸಿದನು.

ತತ್ರ ವೇಗವತೀತೀರೇ ಕ್ಷೇತ್ರೇ ಸತ್ಯವ್ರತೇ ಶುಭೇ ।
ವೇದಿಂ ಕೃತ್ವಾ ವಿಧಾನೇನ ಜುಹಾವಾಗ್ನೌ ಮಹಾತಪಾಃ ॥ ೩೬ ॥

ತತ್ರ ಭಾಗಾರ್ಥಿನೋ ಯಜ್ಞೇ ಜ್ಞಾತ್ವಾ ದೇವಾನನಾಗತಾನ್ ।
ಸ್ರುವಮುದ್ಯಮ್ಯ ಹಸ್ತೇನ ರೋಷಾದ್ವಚನಮಬ್ರವೀತ್ ॥ ೩೭ ॥

ಗಚ್ಛ ಮತ್ತಪಸಾ ರಾಜನ್ ಗುಪ್ತಃ ಸ್ವರ್ಗಮಿತಃ ಸುಖಂ ।
ಇತ್ಯುಕ್ತಮಾತ್ರೇ ವಚನೇ ಕೌಶಿಕೇನ ಮಹಾತ್ಮನಾ ॥ ೩೮ ॥

ಉತ್ಪಪಾತ ಮಹಾರಾಜಾ ಸ್ವಶರೀರೇಣ ಹೃಷ್ಟಧೀಃ ।
ತಮಾಗತಮಭಿಪ್ರೇಕ್ಷ್ಯ ವಾಸವಃ ಸಮರುದ್ಗಣಃ ॥ ೩೯ ॥

---

೩೬. ಮಂಗಲಕರವಾದ ಆ ಸತ್ಯವ್ರತಕ್ಷೇತ್ರದಲ್ಲಿ ವೇಗವತೀ ನದೀತೀರದಲ್ಲಿ ವಿಧಿಯಿಂದ ವೇದಿಕೆಯನ್ನು ಮಾಡಿ ಮಹಾತಪಸ್ವಿಯಾದ ಕೌಶಿಕನು ಅಗ್ನಿಯಲ್ಲಿ ಹೋಮಮಾಡಿದನು.

೩೭. ಆ ಯಜ್ಞದಲ್ಲಿ ಹವಿರ್ಭಾಗವನ್ನು ಅರ್ಥಿಸುವ ದೇವತೆಗಳು ಚಂಡಾಲನ ಯಜ್ಞವೆಂದು ಅರಿತು ಯಜ್ಞಶಾಲೆಗೆ ಬರದಿರುವುದನ್ನು ತಿಳಿದು ವಿಶ್ವಾಮಿತ್ರನು ಕೋಪಾವಿಷ್ಟನಾಗಿ ಕೈಯ್ಯಲ್ಲಿದ್ದ ಸ್ರುವನ್ನು ಮೇಲಕ್ಕೆತ್ತಿ ಈ ಕ್ರೂರವಾದ ವಚನವನ್ನು ಆಡಿದನು.

೩೮. ರಾಜನೇ! ನಾನು ಮಾಡಿದ ತಪಸ್ಸನ್ನು ನಿನಗೆ ಧಾರೆಯೆರೆಯುವೆನು. ಆ ತಪೋಬಲದಿಂದ ರಕ್ಷಿತನಾಗಿ ಸುಖವಾಗಿ ಇಲ್ಲಿಂದ ಸ್ವರ್ಗಕ್ಕೆ ತೆರಳು, ಹೀಗೆಂದು ಕೌಶಿಕ ಮುನಿಯು ಹೇಳಿದನು.

೩೯. ಮಹಾತ್ಮನಾದ ಕೌಶಿಕಮುನಿಯು ಈ ಮಾತನ್ನು ಹೇಳಿದ ಕ್ಷಣದಲ್ಲಿ ಮಹಾರಾಜನು ಸಂತುಷ್ಟಚಿತ್ತನಾಗಿ ಸಶರೀರನಾಗಿ ಸ್ವರ್ಗಕ್ಕೆ ಹಾರಿದನು. ಆಗ ಮರುದ್ದೇವತೆಗಳಿಂದ ಕೂಡಿದ ಇಂದ್ರನು ತ್ರಿಶಂಕುವು ಸ್ವರ್ಗಕ್ಕೆ ಬಂದಿರುವುದನ್ನು ಕಂಡನು.

ಉವಾಚ ರೋಷತಾಮ್ರಾಕ್ಷೋ ವಜ್ರಮುದ್ಯಮ್ಯ ದೇವರಾಟ್ ।
ತ್ರಿಶಂಕೋ ಪತ ಭೂಯೋಽಪಿ ಕೌಶಿಕಸ್ಯ ಮಖಾಲಯೇ ॥ ೪೦ ॥

ವಿಪ್ರಶಾಪಹತೋ ಮೂಢ ಸ್ವರ್ಗಂ ನಾರ್ಹಸಿ ಪಾಪಕೃತ್ ।
ಇತ್ಯುಕ್ತೋ ವಾಸವೇನಾಸೌ ವೇದ್ಯಾಮಗ್ನೌ ಪಪಾತ ಹ ॥ ೪೧ ॥

ಪಾತ್ಯಮಾನಂ ನೃಪಂ ದೃಷ್ಟ್ವಾ ಮಘೋನಾ ಕೌಶಿಕಸ್ತದಾ ।
ಜಲಂ ಚಕಾರ ತತ್ರಾಗ್ನಿಂ ಕುಂಡಸ್ಥಂ ತಪಸಾ ಕಿಲ ॥ ೪೨ ॥

ಶಾಂತೋ ಭವ ನೃಪೇತ್ಯುಕ್ತ್ವಾ ಸಸೃಜೇ ರಾಕ್ಷಸಾನ್ ಪುನಃ ।
ನಿಬರ್ಹಣಾರ್ಥಂ ಶಕ್ರಸ್ಯ ಸವಜ್ರಸ್ಯ ರುಷಾನ್ವಿತಃ ॥ ೪೩ ॥

ಪ್ರೇಷಯಾಮಾಸ ರಕ್ಷಾಂಸಿ ಶಕ್ರಂ ಪೀಡಯಿತುಂ ತದಾ ।
ಪೀಡಯಿತ್ವಾಹಮದ್ಯೈವ ಶಕ್ರಂ ಸಹಮರುದ್ಗಣೈಃ ॥ ೪೪ ॥

---

೪೦. ಮತ್ತು ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ದೇವೇಂದ್ರನು ವಜ್ರಾಯುಧವನ್ನು ಮೇಲಕ್ಕೆ ಎತ್ತಿ ತ್ರಿಶಂಕುವೆ! ಮತ್ತೆ ವಿಶ್ವಾಮಿತ್ರನ ಯಾಗಶಾಲೆಯಲ್ಲಿ ಹೋಗಿ ಬೀಳು ಎಂದನು.

೪೧. ಮೂರ್ಖನೆ! ಬ್ರಾಹ್ಮಣ ಶಾಪದಿಂದ ಹತನಾಗಿರುವ ನೀನು ಸ್ವರ್ಗಕ್ಕೆ ಬರಲು ಅರ್ಹನಲ್ಲ. ಇಂದ್ರನು ಈ ರೀತಿಯಾಗಿ ಗರ್ಜಿಸಿ ಹೇಳಲು ಮತ್ತೆ ಯಜ್ಞಶಾಲೆಯುಲ್ಲಿದ್ದ ವೇದಿಕೆಯ ಅಗ್ನಿಮಧ್ಯದಲ್ಲಿ ಬಿದ್ದನು.

೪೨. ಇಂದ್ರನಿಂದ ಕೆಳಕ್ಕೆ ಕೆಡವಲ್ಪಡುತ್ತಿರುವ ರಾಜನನ್ನು ವಿಶ್ವಾಮಿತ್ರನು ಕಂಡು ಆಗ ಅಗ್ನಿಕುಂಡದಲ್ಲಿದ್ದ ಅಗ್ನಿಯನ್ನು ತನ್ನ ತಪಃಶಕ್ತಿಯಿಂದ ನೀರನ್ನಾಗಿ ಮಾಡಿದನು.

೪೩. ನೃಪತಿಯೆ! ನೀನು ಶಾಂತನಾಗು ಎಂದು ಹೇಳಿ ಮತ್ತೆ ಕೋಪದಿಂದ ಕೂಡಿ, ವಜ್ರಾಯುಧದ ದರ್ಪದಿಂದ ಕೂಡಿದ ಇಂದ್ರನನ್ನು ಗರ್ವಭಂಗಮಾಡಲು ರಾಕ್ಷಸರನ್ನು ಸೃಷ್ಟಿಮಾಡಿದನು.

೪೪. ಆಗ ಇಂದ್ರನನ್ನು ಪೀಡಿಸಲು ಸೃಷ್ಟಿಮಾಡಿದ್ದ ರಾಕ್ಷಸರ ಗಣವನ್ನು ಕಳುಹಿಸಿದನು. ಮರುದ್ದೇವತೆಗಳನ್ನೂ, ಇಂದ್ರನನ್ನೂ ಈ ದಿನವೇ ಪೀಡಿಸಿ ಆಯಾಯ ಪದವಿಯಿಂದ ಹೊರಡಿಸುವೆನು.

ತಪಃ ಸ್ಥಾಪಯಿಷ್ಯಾಮಿ ತ್ವಾಮೇವೇಂದ್ರಪದೇ ನೃಪ ।
ಇತ್ಯುಕ್ತ್ವಾ ಸ ಪುನರ್ಲೋಕಾನ್ ಅನ್ಯಾನ್ ಸ್ರಷ್ಟುಮಿಯೇಷ ಚ ॥ ೪೫ ॥

ತತಃ ಸೇಂದ್ರಾ ದಿವಿಷದಃ ಪೀಡ್ಯಮಾನಾಃ ಸಮಂತತಃ ।
ರಕ್ಷೋಭಿಃ ಕೌಶಿಕೋತ್ಸೃಷ್ಟೈಸ್ತಮೇವ ಶರಣಂ ಯಯುಃ ॥ ೪೬ ॥

ಪಾಹಿ ಕೌಶಿಕ ಭದ್ರಂ ತೇ ದೇವಾನ್ ನಃ ಶರಣಂ ಗತಾನ್ ।
ತ್ರಿಶಂಕುಃ ಸಹ ದೇಹೇನ ಸ್ವರ್ಗಂ ಸಮಧಿಗಚ್ಛತು ॥ ೪೭

ಇತಿ ತೇಷು ಬ್ರುವಾಣೇಷು ದೇವೇಷು ಕುಶಿಕಾತ್ಮಜಃ ।
ಸುಪ್ರಸನ್ನಮನಾ ಭೂತ್ವಾ ಶಮಯಾಮಾಸ ರಾಕ್ಷಸಾನ್ ॥ ೪೮ ॥

---

೪೫. ರಾಜನೆ! ತರುವಾಯ ನಿನ್ನನ್ನು ಇಂದ್ರಪದವಿಯಲ್ಲಿ ನನ್ನ ತಪೋಬಲದಿಂದ ಇರಿಸುವೆನು ಎಂಬುದಾಗಿ ರಾಜನಿಗೆ ವಿಶ್ವಾಮಿತ್ರನು ವಚನವನ್ನಿತ್ತು ಬೇರೆ ಲೋಕಗಳನ್ನು ಸೃಷ್ಟಿಮಾಡಲು ಕುತೂಹಲಿಯಾದನು.

೪೬. ಅನಂತರದಲ್ಲಿ ವಿಶ್ವಾಮಿತ್ರಮುನಿಯಿಂದ ಸೃಷ್ಟಿಸಲ್ಪಟ್ಟ ರಾಕ್ಷಸರು ಇಂದ್ರಾದಿ ಸಕಲ ದೇವತೆಗಳನ್ನು ಆಕ್ರಮಿಸಿ ಪೀಡಿಸುತ್ತಿರಲು ದೇವತೆಗಳು ಮುನಿಯನ್ನು ಶರಣಹೊಂದಿದರು.

೪೭. ಕೌಶಿಕಮುನಿಯೆ! ನಿನಗೆ ಕಲ್ಯಾಣವಾಗಲಿ. ಶರಣಾಗತರಾದ ನಮ್ಮನ್ನು ಕಾಪಾಡು ತ್ರಿಶಂಕುರಾಜನು ದೇವತೆಗಳ ಜೊತೆಯಲ್ಲಿ ಸ್ವರ್ಗಲೋಕವನು ಹೊಂದಲಿ.

೪೮. ಕೌಶಿಕಪುತ್ರನಾದ ವಿಶ್ವಾಮಿತ್ರಮುನಿಯು ತನ್ನನ್ನು ಶರಣಹೊಂದಿರುವ ತ್ರಿಶಂಕುರಾಜನಿಗೆ ಸ್ವರ್ಗಕ್ಕೆ ಹೋಗಲು ಅನುಮತಿಯನ್ನು ದೇವಗಳು ಕೊಟ್ಟು ತಾನು ಮಾಡುವ ಲೋಕಾಂತರ ಸೃಷ್ಟಿಯಿಂದ ಭೀತರಾಗಿ ತನ್ನನ್ನು ಕುರಿತು ಈ ರೀತಿಯಾಗಿ ದೀನವಚನವನ್ನು ಆಡುತ್ತಿರುವುದನ್ನು ಕೇಳಿ ಪ್ರಸನ್ನವಾದ ಚಿತ್ತವುಳ್ಳವನಾಗಿ ರಾಕ್ಷಸರನ್ನು ಶಮನ ಮಾಡಿದನು.

ತತಸ್ತ್ರಿಶಂಕುಮಾಹೂಯ ದಿವ್ಯರೂಪಧರಂ ನೃಪಂ ।
ಕುಂಡಾಗ್ನಿನಾ ದಗ್ಧಪಾಪಮಭಿಷಿಕ್ತಂ ಜಲೈಃ ಪುನಃ ॥ ೪೯ ॥

ತಂ ವಿಮಾನೇ ಸಮಾರೋಪ್ಯ ಸ್ವರ್ಗಮಾರೋಪಯನ್ಮುನಿಃ ।
ತತ್ರಾನ್ಯಂ ಸ್ವರ್ಗಸದೃಶಂ ಸ್ವಾತಂತ್ರ್ಯೇಣಾವಸನ್ನೃಪಃ ॥ ೫೫ ॥

ತತೋ ದೇವಾಃ ಸಹೇಂದ್ರೇಣ ದೃಷ್ಟ್ವಾ ತತ್ ಕರ್ಮ ಚಾದ್ಭುತಂ ।
ಸತ್ಯವ್ರತಸ್ಯ ಕ್ಷೇತ್ರಸ್ಯ ಮಹಿಮ್ನಾ ಕುಶಿಕಾತ್ಮಜಃ ॥ ೫೧ ॥

ಪ್ರವೃದ್ಧಸ್ತಪಸಾ ಚಾಭೂದಗ್ನಿಂ ಚಾಪ್ಯಕರೋಜ್ಜಲಂ ।
ಅದ್ಯ ಪ್ರಭೃತಿ ಲೋಕೇಽಸ್ಮಿಂಸ್ತೀರ್ಥೇ ಮಜ್ಜಂತಿ ಯೇ ನರಾಃ ॥ ೫೨ ॥

ಸಹೈವ ಕಾಯೈಸ್ತೇ ಸರ್ವೇ ಪ್ರಯಾಂತು ತ್ರಿದಶಾಲಯಂ ।
ಇತಿ ತೀರ್ಥಸ್ಯ ತೇ ಸರ್ವೇ ವರಂ ದತ್ವಾ ದಿವೌಕಸಃ ॥ ೫೩ ॥

---

೪೯. ಅನಂತರದಲ್ಲಿ ಅಗ್ನಿಕುಂಡಲದಲ್ಲಿ ಬಿದ್ದು ಅಗ್ನಿಯಿಂದಲೂ ಮತ್ತೆ ಪವಿತ್ರ ತೀರ್ಥದಿಂದ ಸ್ನಾನಮಾಡಿದ್ದರಿಂದ ಉದಕದಿಂದಲೂ ಪಾಪಗಳಿಂದ ಬಿಡುಗಡೆ ಹೊಂದಿ ದಿವ್ಯರೂಪವನ್ನು ಧರಿಸಿದ ತ್ರಿಶಂಕುರಾಜನನ್ನು ತನ್ನ ಬಳಿಗೆ ಕರೆದನು.

೫೦. ಮುನಿಯು ಆ ನೃಪತಿಯನ್ನು ವಿಮಾನದಲ್ಲಿ ಕುಳ್ಳಿರಿಸಿ ಸ್ವರ್ಗಕ್ಕೆ ಏರಿಸಿದನು. ಅಲ್ಲಿ ಸ್ವರ್ಗಕ್ಕೆ ಸಮಾನವಾದ ಮತ್ತೊಂದು ಲೋಕವನ್ನು ಕಲ್ಪಿಸಿ ತ್ರಿಶಂಕುರಾಜನು ಸ್ವತಂತ್ರತೆಯಿಂದ ಅಲ್ಲಿ ವಾಸಮಾಡಿದನು.

೫೧. ಅನಂತರದಲ್ಲಿ ಇಂದ್ರಾದಿ ಸಕಲ ದೇವತೆಗಳು ಮುನಿಯ ಆ ಅದ್ಭುತ ಕರ್ಮವನ್ನು ನೋಡಿದರು. ಕುಶಿಕರಾಜನ ಮಗನಾದ ವಿಶ್ವಾಮಿತ್ರಮುನಿಯು ಈ ಸತ್ಯವ್ರತಕ್ಷೇತ್ರದ ಮಹಿಮೆಯಿಂದ ಬಲಶಾಲಿಯಾದನು.

೫೨. ಮತ್ತು ತಪಸ್ಸಿನ ಬಲದಿಂದ ಅತಿಯಾದ ವೃದ್ಧಿಯನ್ನು ಹೊಂದಿ ಅಗ್ನಿಯನ್ನು ಕೂಡ ಜಲವನ್ನಾಗಿ ಪರಿವರ್ತಿಸಿದನು. ಈ ದಿನ ಮೊದಲು ಗೊಂಡು ಈ ತೀರ್ಥವು ಈ ಲೋಕದ ಜನರಿಗೆ ಸ್ನಾನಮಾಡಲು ಅರ್ಹವಾದ ಪವಿತ್ರತೀರ್ಥವಾಗಲಿ.

೫೩. ಹಾಗೆ ಸ್ನಾನಮಾಡಿದ ಜನರೆಲ್ಲರೂ ಸಶರೀರರಾಗಿ ದೇವತೆಗಳ ಆವಾಸವಾದ ಸ್ವರ್ಗವನ್ನು ಹೊಂದಲಿ ಎಂಬುದಾಗಿ ಸಮಸ್ತ ದೇವತೆಗಳು ತೀರ್ಥಕ್ಕೆ ವರವನ್ನು ಕೊಟ್ಟರು.

ವಿಶ್ವಾಮಿತ್ರಂ ಸಮಾಭಾಷ್ಯ ಪ್ರತಿಜಗ್ಮುರ್ಯಥಾಗತಂ ।
ವಿಶ್ವಾಮಿತ್ರೋಽಪಿ ಧರ್ಮಾತ್ಮಾ ಪ್ರೇಷಯಿತ್ವಾ ನೃಪಂ ದಿವಂ ॥ ೫೪ ॥

ಪಶ್ಚಿಮಾಂ ದಿಶಮುದ್ದಿಶ್ಯ ಜಗಾಮ ತಪಸೇ ವನಂ ।

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಸಪ್ತಮೋಽಧ್ಯಾಯಃ.

---

೫೪. ಮತ್ತು ವಿಶ್ವಾಮಿತ್ರನನ್ನು ಕೇಳಿಕೊಂಡು ಅವನ ಅನುಮತಿಯಿಂದ ದೇವತೆಗಳೆಲ್ಲರೂ ತಮ್ಮ ಸ್ಥಾನಕ್ಕೆ ಹಿಂತಿರುಗಿ ಹೋದರು. ಧರ್ಮಾತ್ಮನಾದ ವಿಶ್ವಾಮಿತ್ರನು ರಾಜನನ್ನು ಸ್ವರ್ಗಕ್ಕೆ ಕಳುಹಿಸಿ ಮತ್ತೆ ತಪಸ್ಸನ್ನು ಮಾಡಲು ಅಲ್ಲಿಂದ ಪಶ್ಚಿಮದಿಕ್ಕಿನ ಅರಣ್ಯಕ್ಕೆ ತೆರಳಿದನು.

ಕಾಂಚೀಮಾಹಾತ್ಮ್ಯದಲ್ಲಿ ಸಪ್ತಮಾಧ್ಯಾಯವು ಮುಗಿದುದು.

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಅಷ್ಟಮೋಽಧ್ಯಾಯಃ

ನಾರದ ಉವಾಚ :—

ಆಸೀತ್ ಕಶ್ಚಿತ್ಪುರಾ ರಾಜನ್ ಬ್ರಾಹ್ಮಣೋ ಮದ್ರಕೇ ಪುರೇ ।
ಕೃಷೀವಲ ಇತಿ ಖ್ಯಾತೋ ದುರ್ಬುದ್ಧಿರಜಿತೇಂದ್ರಿಯಃ ॥ ೧ ॥

ಪಿಶುನಶ್ಚೌರ್ಯತಂತ್ರಜ್ಞಃ ಪಿತುರರ್ಥಾಪಹಾರಕಃ ।
ದ್ಯೂತಾಸವರತೋ ನಿತ್ಯಂ ಗಣಿಕಾಸಂಗಲೋಲುಪಃ ॥ ೨ ॥

ವಂಚಯಿತ್ವಾ ತು ಪಿತರಂ ಚೌರ್ಯಾತ್ಸಂಗೃಹ್ಯ ತದ್ಧನಂ ।
ಗಣಿಕಾಭ್ಯಶ್ಚ ಸರ್ವಾಭ್ಯಃ ಪ್ರಯಚ್ಛತಿ ಹಿ ಮಂದಧೀಃ ॥ ೩ ॥

---

೧. ನಾರದಮುನಿಯು ಹೀಗೆ ಹೇಳಿದನು :—ರಾಜನೆ! ಪೂರ್ವಕಾಲದಲ್ಲಿ ಮದ್ರಕವೆಂಬ ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅತಿ ದುರ್ಬುದ್ಧಿಯೂ ಇಂದ್ರಿಯ ಪರವಶನೂ ಆದ ಆ ಬ್ರಾಹ್ಮಣನಿಗೆ ಕೃಷೀವಲನೆಂಬ ಹೆಸರು ಪ್ರಖ್ಯಾತವಾಗಿತ್ತು.

೨. ಅವನು ಚಾಡಿಕೋರನೂ ಚೌರ್ಯತಂತ್ರವನ್ನು ತಿಳಿದವನೂ, ತಂದೆಯ ಧನವನ್ನು ಅಪಹರಿಸಿದವನೂ, ದ್ಯೂತ-ಮದ್ಯಪಾನಗಳಲ್ಲಿ ನಿತ್ಯವೂ ಆಸಕ್ತನೂ ಮತ್ತು ವೇಶ್ಯಾಸಂಗದಲ್ಲಿ ಅಭಿರುಚಿಯುಳ್ಳವನೂ ಆಗಿ ಕೇವಲ ದುರ್ನಡತೆಯುಳ್ಳದ್ದನು.

೩. ಮೂರ್ಖಬುದ್ಧಿಯುಳ್ಳ ಬ್ರಾಹ್ಮಣನು ತಂದೆಯನ್ನು ಮೋಸಪಡಿಸಿ ಅವನ ಧನವನ್ನು ಕಳ್ಳತನದಿಂದ ತೆಗೆದುಕೊಂಡು ವೇಶ್ಯೆಯರಿಗೆಲ್ಲ ಕೊಟ್ಟು ವೇಶ್ಯಾಸಂಗ ಸೌಖ್ಯವನ್ನು ಅನುಭವಿಸುತ್ತಿದ್ದನು.

ಏವಂ ಪಾಪಸಮಾಚಾರಃ ಪಿತ್ರಾ ನಿರ್ವಾಸಿತೋ ಗೃಹಾತ್ ।
ತತಃ ಸ ಗತ್ವಾ ನ್ಯವಸದ್ ಗಣಿಕಾಯಾ ನಿವೇಶನೇ ॥ ೪ ॥

ಭುಂಜಾನಶ್ಚ ತಯಾ ಸಾರ್ಧಂ ಕ್ರೀಡಮಾನೋ ದಿವಾನಿಶಂ ।
ಪತಿತಃ ಕರ್ಮಣಾ ಭ್ರಷ್ಟಃ ಸ್ನಾನಸಂಧ್ಯಾಗ್ನಿವರ್ಜಿತಃ ॥ ೫ ॥

ಕಿರಾತಸದೃಶೋ ನಿತ್ಯಂ ಮಾಂಸಾದೋ ಮದ್ಯಪೋಽಭವತ್ ।
ತಸ್ಯೈವಂ ವರ್ತಮಾನಸ್ಯ ಸರ್ವಂ ಕ್ಷೀಣಮಭೂದ್ಧನಂ ॥ ೬ ॥

ಸಾ ಚಾಭೂದ್ಗಣಿಕಾ ರುಷ್ಟಾ ನಿಸ್ಸ್ವಂ ಪ್ರೇಕ್ಷ್ಯ ದ್ವಿಜಾಧಮಂ ।
ತಯಾ ಸಂತರ್ಜಿತಶ್ಚಾಸೌ ದುಃಖಿತೋಽಭೂದ್ಧನಕ್ಷಯಾತ್ ॥ ೭ ॥

ದುರ್ಮನಾ ದುಷ್ಕುಲೋಽತ್ಯಂತಂ ದುರ್ಬಲೋಽನಶನೇನ ಚ ।
ಸ ಚಿಂತಯಾಮಾಸ ತದಾ ಕಥಂ ಸ್ಯಾನ್ಮೇ ಧನಂ ಬಹು ॥ ೮ ॥

---

೪. ಈ ರೀತಿಯ ದುರ್ನಡತೆಗಳಲ್ಲಿ ಆಸಕ್ತನಾದ ಬ್ರಾಹ್ಮಣನನ್ನು ಅವನ ತಂದೆಯು ಮನೆಯಿಂದ ಹೊರಕ್ಕೆ ಓಡಿಸಿದನು. ತರುವಾಯ ಆ ಪಾಪಿಯು ವೇಶ್ಯಾ ಗೃಹಕ್ಕೆ ಹೋಗಿ ಅಲ್ಲಿಯೇ ವಾಸಮಾಡಿದನು.

೫. ಅಲ್ಲಿ ಅವಳ ಜೊತೆಯಲ್ಲಿ ಊಟಮಾಡುತ್ತ ರಾತ್ರಿ ಹಗಲೂ ಅವಳ ಸಂಗಡ ವಿಹರಿಸುತ್ತ ಸ್ನಾನ-ಸಂಧ್ಯೋಪಾಸನ-ಅಗ್ನಿಹೋತ್ರಾದಿ ಸ್ವಕರ್ಮವರ್ಜಿತನಾಗಿ ಸ್ವಧರ್ಮದಿಂದ ಭ್ರಷ್ಟನಾಗಿ ಪತಿತನಾದನು.

೬. ಮತ್ತು ಕಿರಾತ ಜನರಿಗೆ ತುಲ್ಯನಾಗಿ ಯಾವಾಗಲೂ ಮಾಂಸ ಭೋಜನ, ಮದ್ಯಪಾನ ಇವುಗಳಲ್ಲಿ ತತ್ಪರನಾದನು. ಈ ಪಾಪಾಚಾರದಿಂದ ಕೆಲವು ದಿನಗಳು ಕಳೆದ ತರುವಾಯ ಅವನಲ್ಲಿದ್ದ ಸಮಸ್ತ ಧನವು ವ್ಯಯವಾಯಿತು.

೭. ಆ ಗಣಿಕೆಯು ಧನವಿರುವವರೆಗೆ ಅವನನ್ನು ಉತ್ತಮವಾಗಿ ಉಪಚರಿಸಿ ಧನವು ವ್ಯಯವಾದುದನ್ನು ಕಂಡು ಆ ದ್ವಿಜಾಧಮನ ಮೇಲೆ ಅತ್ಯಂತ ಕುಪಿತ ಳಾದಳು. ಮತ್ತು ಆಕೆಯಿಂದ ಬೆದರಿಸಲ್ಪಟ್ಟವನಾಗಿ ಧನವು ವ್ಯಯವಾಗಿ ಹೋದುದ ಕ್ಕಾಗಿ ಅತ್ಯಂತ ದುಃಖಿತನಾದನು.

೮. ಆಗ ದುಷ್ಟವಾದ ಮನವುಳ್ಳವನೂ, ದುಷ್ಕುಲವಂತನೂ, ಮತ್ತು ಅನಶನ ದಿಂದ ಅತ್ಯಂತ ದುರ್ಬಲನೂ ಆದ ಆ ಕೃಷೀವಲನು ಆಗ ತನಗೆ ಹೆಚ್ಚು ಧನವು ದೊರೆಯುವುದು ಹೇಗೆಂದು ತುಂಬ ಚಿಂತಿಸಿದನು.

ಇತಿ ಪ್ರಮತ್ತವದ್ರಾಜಂಶ್ಚಿಂತಯಿತ್ವಾ ಧನಾತುರಃ ।
ಪ್ರವಿಶ್ಯ ರಾಜಭವನಂ ನಿಶಿ ನಾವೇಕ್ಷಿತೋ ಭಟೈಃ ॥ ೯ ॥

ತತ್ರ ಸ್ವಪಂತಂ ಶಯನೇ ಸರ್ವಾಭರಣಭೂಷಿತಂ ।
ದೃಷ್ಟ್ವಾ ರಾಜಸುತಂ ವಿಪ್ರೋ ಬಾಲಮಪ್ರಾಪ್ತಯೌವನಂ ॥ ೧೦ ॥

ಗೋವತ್ಸಮಿವ ಶಾರ್ದೂಲೋ ಹತ್ವಾ ತಂ ನಿಶಿ ದಾರುಣಃ ।
ತದಾಭರಣಸರ್ವಸ್ವಂ ಗೃಹೀತ್ವಾ ಪ್ರಾದ್ರವದ್ಬಹಿಃ ॥ ೧೧ ॥

ದ್ರವಮಾಣಂ ಬಹಿರ್ದ್ವಾರೇ ದೃಷ್ಟ್ವಾ ರಾಜಭಟಾ ದ್ವಿಜಂ ।
ಜಗೃಹುಸ್ತಂ ಧನೇನೈವ ಸಹ ರಾಜ್ಞೇ ನ್ಯವೇದಯನ್ ॥ ೧೨ ॥

ಮ್ರಿಯಮಾಣಸ್ತದಾ ಬಾಲೋ ರುರಾವ ಭೃಶಪೀಡಿತಃ ।
ಶ್ರುತ್ವಾ ತು ರುದತಃ ಶಬ್ದಂ ಭೀತಾಸ್ತತ್ರಾಂತಪಾಲಕಾಃ ॥ ೧೩ ॥

---

೯. ರಾಜನೆ! ಇದೇ ಚಿಂತೆಯಿಂದ ಹುಚ್ಚು ಹಿಡಿದವನಂತೆ ಮತ್ತೆ ಮತ್ತೆ ಚಿಂತೆಯಲ್ಲಿ ಮುಳುಗಿ ಧನಲೋಭದಿಂದ ಪೀಡಿತನಾಗಿ ಒಂದು ರಾತ್ರಿಯಲ್ಲಿ ಭಟರ ಕಣ್ಣಿಗೆ ಬೀಳದಂತೆ ರಾಜಗೃಹವನ್ನು ಪ್ರವೇಶಿಸಿದನು.

೧೦. ಆ ರಾಜಗೃಹದಲ್ಲಿ ಹಾಸಿಗೆಯಲ್ಲಿ ಮಲಗಿ ನಿದ್ರೆಮಾಡುತ್ತಲಿದ್ದ ಸಮಸ್ತಾಭರಣಗಳಿಂದ ಶೃಂಗರಿಸಲ್ಪಟ್ಟ, ತಾರುಣ್ಯ ವಯಸ್ಸನ್ನು ಹೊಂದದಿರುವ, ರಾಜಪುತ್ರನಾದ ಬಾಲಕನನ್ನು ನೋಡಿದನು.

೧೧. ಕ್ರೂರಕರ್ಮಿಯಾದ ಈ ಕೃಷೀವಲನು ಹುಲಿಯು ಹಸುವಿನ ಕರುವನ್ನು ಕೊಂದಂತೆ ಆ ಬಾಲಕನನ್ನು ರಾತ್ರಿಯಲ್ಲಿ ಕೊಂದು ಆ ಆಭರಣಗಳ ಸಂಪೂರ್ಣ ಆಸ್ತಿಯನ್ನು ಬಾಚಿಕೊಂಡು ಅಲ್ಲಿಂದ ಹೊರಕ್ಕೆ ಬಂದು ಓಡಲಾರಂಭಿಸಿದನು.

೧೨. ಹಾಗೆ ಓಡಿಹೋಗುತ್ತಿದ್ದಾಗ ಹೊರಬಾಗಲಿನಲ್ಲಿ ಭಟರು ಆ ದ್ವಿಜನನ್ನು ಕಂಡು ಕಳುಮಾಡಿದ ಆಸ್ತಿಯೊಡನೆ ಅವನನ್ನು ಹಿಡಿದುಕೊಂಡು ರಾಜನಿಗೆ ಒಪ್ಪಿಸಿದರು.

೧೩. ಈ ಕಳ್ಳನಿಂದ ಹೊಡೆಯಲ್ಪಟ್ಟ ರಾಜಪುತ್ರನು ಮರಣವು ಸಮೀಪಿಸಿ ಮರಣವೇದನೆಯಿಂದ ಬಲು ಪೀಡಿತನಾಗಿ ಗಟ್ಟಿಯಾಗಿ ಕೂಗಿಕೊಂಡನು. ಆಗ ದ್ವಾರಪಾಲಕರೆಲ್ಲರೂ ಆ ರೋದನ ಧ್ವನಿಯನ್ನು ಕೇಳಿ ಬಹಳ ಭಯಪಟ್ಟರು.

ದದೃಶುಸ್ತಂ ಮೃತಂ ಬಾಲಂ ಬಾಲಘ್ನಂ ಚ ಭಟೈರ್ಧೃತಂ ।
ಚುಕ್ರುಶುಶ್ಚಾಪಿ ದುಃಖಾರ್ತಾಃ ಪರಿವಾರ್ಯ ಸಮಂತತಃ ॥ ೧೪ ॥

ರಾಜಾ ಚ ಸ್ವಸುತಂ ದೃಷ್ಟ್ವಾ ಮೃತಂ ಚೋರೇಣ ಘಾತಿತಂ ।
ಶೋಕಸಂವಿಗ್ನಹೃದಯೋ ವಿಲಲಾಪ ಭೃಶಂ ಕಿಲ ॥ ೧೫ ॥

ವಿಲಪ್ಯ ಸುಚಿರಂ ಕಾಲಂ ಬಾಂಧವೈಃ ಸಚಿವೈಃ ಸಹ ।
ಸಮಾಶ್ವಸ್ತೋಽಭವದ್ವಿಪ್ರೈಃ ಕಾಲಧರ್ಮಾನುವಾದಿಭಿಃ ॥ ೧೬ ॥

ಪರೇದ್ಯುಃ ಪ್ರಾತರುತ್ಥಾಯ ಮೃತಸ್ಯ ಸಲಿಲಕ್ರಿಯಾಂ ।
ಕಾರಯಾಮಾಸ ವಿಧಿವಚ್ಛೋಕವ್ಯಾಕುಲಮಾನಸಃ ॥ ೧೭ ॥

---

೧೪. ಅಷ್ಟರಲ್ಲಿ ಸಕಲ ಜನರು ಒಂದು ಕಡೆಯಲ್ಲಿ ಮೃತನಾದ ಬಾಲನನ್ನೂ ಮತ್ತೊಂದು ಕಡೆಯಲ್ಲಿ ಬಾಲನನ್ನು ಕೊಂದಿರುವ ಭಟರಿಂದ ಹಿಡಿಯಲ್ಪಟ್ಟಿರುವ ಚೋರನನ್ನೂ ಕಂಡು ಬಹಳ ದುಃಖಗೊಂಡವರಾಗಿ ಸುತ್ತಲೂ ಸುತ್ತುವರಿದು ನಿಂತು ಎಲ್ಲರೂ ಗೋಳಾಡಿದರು.

೧೫. ರಾಜನು ಈ ಚೋರನಿಂದ ಸಂಹರಿಸಲ್ಪಟ್ಟು ಮರಣಹೊಂದಿದ ಸ್ವಪುತ್ರನನ್ನು ಕಂಡು ಶೋಕದಿಂದ ಕಳವಳಗೊಂಡ ಹೃದಯವುಳ್ಳವನಾಗಿ ಅತಿಯಾಗಿ ವಿಲಾಪಿಸಿದನು.

೧೬. ಹೀಗೆಯೇ ಬಹಳ ಹೊತ್ತು ವಿಲಾಪಮಾಡಿ ಆಗ ಬಂಧುಗಳಿಂದಲೂ ಮಂತ್ರಿಗಳಿಂದಲೂ ಮತ್ತು ಬ್ರಾಹ್ಮಣರಿಂದಲೂ ಕೂಡ ಕಾಲಗತಿಯನ್ನು ಮೀರಲಾಗುವುದಿಲ್ಲವಾದ್ದರಿಂದ ಭವಿತವ್ಯತೆಗೆ ಎಲ್ಲರೂ ಕಟ್ಟುಬಿದ್ದಿರುವರೆಂದು ಮೊದಲಾಗಿ ಹೇಳಿ ಸಮಾಧಾನಮಾಡಲ್ಪಟ್ಟನು.

೧೭. ಮಾರನೆಯ ದಿನ ಪ್ರಾತಃಕಾಲದಲ್ಲಿ ಎದ್ದು ಮೃತನಾದ ಪುತ್ರನಿಗೆ ವಿಧಿವಿಹಿತವಾದಂತೆ ಉತ್ತರಕ್ರಿಯೆಯನ್ನು ಬಹು ಶೋಕಪೂರ್ಣವಾದ ಹೃದಯವುಳ್ಳವನಾಗಿ ಹೇಗೋ ನೆರವೇರಿಸಿದನು.

ತತಶ್ಚೋರಂ ಸಮುದ್ವೀಕ್ಷ್ಯ ಬ್ರಾಹ್ಮಣಂ ಬಾಲಘಾತಿನಂ ।
ಬ್ರಾಹ್ಮಣೋ ನೈವ ಹಂತವ್ಯಃ ಸ್ತೇನಃ ಸ್ಯಾದ್ಬ್ರಹ್ಮಹಾಽಪಿ ವಾ ॥ ೧೮ ॥

ತಸ್ಯ ಸಂಗೃಹ್ಯ ಸರ್ವಸ್ವಂ ಕೃತ್ವಾ ವಪನಮಾಗಳಂ ।
ಕಪಾಲಂ ಚ ಕರೇ ದತ್ವಾ ಶ್ವಾನಪಾದೇನ ಲಾಂಛನಂ ॥ ೧೯ ॥

ಚತ್ವರೇ ತಂ ಸಮಾಘೋಷ್ಯ ರಾಷ್ಟ್ರಾನ್ನಿಷ್ಕಾಸಯೇದ್ಬುಹಿಃ ।
ಇತಿ ಸ್ಮೃತಿಂ ಸಮಾಲೋಚ್ಯ ತಥಾ ತಮಕರೋನ್ನೃಪಃ ॥ ೨೦ ॥

ತತಃ ಕೃಷೀವಲೋ ವಿಪ್ರೋ ರಾಜ್ಯಾದ್ವಿಪ್ರೋಷಿತೋ ವನೇ ।
ಚಚಾರ ದುಃಖಸಂತಪ್ತಃ ಪಶ್ಚಾತ್ತಾಪೇನ ಯಂತ್ರಿತಃ ॥ ೨೧ ॥

ವಿಪ್ರೋಽಹಂ ಕರ್ಮಣಾ ಭ್ರಷ್ಟೋ ಮಾತಾಪಿತ್ರೋರ್ಧನಾಪಹಃ ।
ಸ್ತೇಯೀ ಚ ಮದ್ಯಪಾಯೀ ಚ ಸದಾ ಶೂದ್ರಾನ್ನಭೋಜನಃ ॥ ೨೨ ॥

---

೧೮. ಆ ತರುವಾಯ ಬಾಲಹತ್ಯೆಯನ್ನು ಮಾಡಿದ ಚೋರನು ಬ್ರಾಹ್ಮಣನಾಗಿರುವುದನ್ನು ಕಂಡು ಈ ರೀತಿ ಯೋಚಿಸಿದರು. ಬ್ರಾಹ್ಮಣನು ಚೌರ್ಯವನ್ನು ಮಾಡಲಿ, ಅಥವಾ ಬ್ರಹ್ಮಹತ್ಯೆ ಮುಂತಾದ ಮಹಾಪಾತಕವನ್ನು ಮಾಡಲಿ, ಅವನನು ಮರಣದಂಡದಿಂದ ದಂಡಿಸಲು ಅನರ್ಹನು.

೧೯. ಅವನ ಸರ್ವಸ್ವವನ್ನು ಕಿತ್ತುಕೊಂಡು ಶಿರವನ್ನು ಪೂರ್ತಿಯಾಗಿ ಮುಂಡನಮಾಡಿ ಹಸ್ತದಲ್ಲಿ ಶಿರಃಕಪಾಲವನ್ನು ಕೊಟ್ಟು ನಾಯಿಯ ಕಾಲಿನ ಮುದ್ರೆಯಿಂದ ಲಾಂಛನವನ್ನು ಹಾಕಬೇಕು.

೨೦. ಮತ್ತು ಚೌಕ ಚೌಕಗಳಲ್ಲಿ ಅವನು ಮಾಡಿದ ಇಂತಹ ತಪ್ಪಿಗೆ ಇದು ಶಿಕ್ಷೆಯೆಂದು ಸಾರಿಹೇಳಿ ಅವನನ್ನು ರಾಷ್ಟ್ರದ ಗಡಿಯಿಂದ ಹೊರಕ್ಕೆಹಾಕಬೇಕು. ಎಂಬ ಧರ್ಮಶಾಸ್ತ್ರ ಸ್ಮೃತಿಯನ್ನು ಸ್ಮರಿಸಿ ರಾಜನು ಹಾಗೆಯೇ ಎಲ್ಲವನ್ನೂ ಮಾಡಿದನು.

೨೧. ಅನಂತರದಲ್ಲಿ ಕೃಷೀವಲ ವಿಪ್ರನು ರಾಜ್ಯದಿಂದ ಹೊರಕ್ಕೆ ತಳ್ಳಲ್ಪಟ್ಟವನಾಗಿ ದುಃಖದಿಂದ ಬೆಂದವನಾಗಿ ಮತ್ತು ಪಶ್ಚಾತ್ತಾಪದಿಂದ ಬದ್ಧನಾಗಿ ಅಲ್ಲಲ್ಲಿ ಅರಣ್ಯದಲ್ಲಿ ಅಲೆದಾಡಿದನು.

೨೨. ವಿಪ್ರನಾಗಿ ಹುಟ್ಟಿದ ನಾನು ಸ್ವಕರ್ಮದಿಂದ ಭ್ರಷ್ಟನಾಗಿ ಮಾತಾಪಿತೃಗಳ ಧನವನ್ನು ಅಪಹರಿಸಿದವನೂ, ಚೌರ್ಯವನ್ನು ನಡೆಸಿದವನೂ, ಮದ್ಯಪಾನತತ್ಪರನೂ ಮತ್ತು ಶೂದ್ರಾನ್ನಭೋಜಿಯೂ ಆಗಿ ಮಾಡಬಾರದ ಸಕಲ ದುಷ್ಕೃತ್ಯಗಳನ್ನು ಮಾಡಿದೆನು.

ಅವಕೀರ್ಣೀ ಚ ಪಾಪಾತ್ಮಾ ಪತಿತಶ್ಚಾಭವಂ ಕಿಲ ।
ಕಥಂ ಮೇ ನಿಷ್ಕೃತಿರ್ಭೂಯಾದಿತಿ ದುಃಖಸಮನ್ವಿತಃ ॥ ೨೩ ॥

ಚಚಾರ ದಕ್ಷಿಣೇ ಪಾರ್ಶ್ವೇ ವಿಂಧ್ಯಾರಣ್ಯೇ ಕೃಷೀವಲಃ ।
ಧರ್ಮಾದ್ವಿಹೀನಂ ಪತಿತಂ ಪಾಹಿ ಮಾಂ ಪುರುಷೋತ್ತಮ ।

ಪುಂಡರೀಕಾಕ್ಷ ವಿಶ್ವೇಶ ಪುಣ್ಯಶ್ರವಣಕೀರ್ತನ ।
ಸಮುದ್ಧರೋದ್ಧರ ಹರೇ ನಾನ್ಯೋಽಸ್ತಿ ಶರಣಂ ಮಮ ॥ ೨೫ ॥

ಇತ್ಯೇವಂ ಪ್ರಲಪನ್ ವಿಪ್ರೋ ನಿಶ್ವಸಂಶ್ಚ ಮುಹುರ್ಮುಹುಃ ।
ಕ್ರೋಶನ್ನುಚ್ಚೈಃ ಕ್ವಚಿದ್ಭ್ರಾಂತಸ್ತ್ರಾಹಿ ನಾರಾಯಣೇತಿ ಚ ॥ ೨೬ ॥

ಕಾನನಾತ್ ಕಾನನಂ ಗಚ್ಛನ್ನದ್ರೇರದ್ರಿಂ ಹ್ರದಾದ್ಧ್ರದಂ ।
ತತ್ರ ತತ್ರ ಚ ತೀರ್ಥೇಷು ಹ್ರದೇಷು ಚ ನದೀಷು ಚ ॥ ೨೭ ॥

---

೨೩. ವ್ರತಕೆಟ್ಟವನೂ ಪಾಪಿಯೂ ಮತ್ತು ಪತಿತನೂ ಆಗಿರುವೆನು, ಈ ಪಾತಕಗಳ ಭಾರದಿಂದ ನನಗೆ ಯಾವ ಪ್ರಾಯಶ್ಚಿತ್ತದಿಂದ ಮುಕ್ತಿಯಾದೀತೆಂದು ಅತಿ ದುಃಖದಿಂದ ಬಗೆ ಬಗೆಯಾಗಿ ಚಿಂತಿಸಿದನು.

೨೪. ಮತ್ತು ಆ ಕೃಷೀವಲನು ದಕ್ಷಿಣ ದಿಗ್ಭಾಗದಲ್ಲಿ ವಿಂಧ್ಯಪರ್ವತದ ಅರಣ್ಯದಲ್ಲಿ ಸಂಚರಿಸುತ್ತ ಪುರುಷೋತ್ತಮನಾದ ವಿಷ್ಣುವೆ! ಧರ್ಮಭ್ರಷ್ಟನೂ ಪತಿತನೂ ಆದ ನನ್ನನ್ನು ಕಾಪಾಡು ಎಂದು ಪ್ರಾರ್ಥಿಸಿ ವಿಷ್ಣುವನ್ನು ಸ್ಮರಿಸಿಕೊಂಡನು.

೨೫. ಕಮಲಗಳಂತೆ ರಾಜಿಸುವ ನೋಟವುಳ್ಳವನೆ! ವಿಶ್ವದ ಈಶ್ವರನೆ! ಪವಿತ್ರವಾದ ಶ್ರವಣ, ಕೀರ್ತನ ಭಾಜನನೆ! ಹರಿಯೆ! ನನ್ನನ್ನು ಉದ್ಧರಿಸು, ಉದ್ಧರಿಸು, ನನಗೆ ಬೇರೆ ಯಾರೂ ಶರಣರಿಲ್ಲ.

೨೬. ಹೀಗೆ ಪ್ರಲಪಿಸುತ್ತ ಮತ್ತು ಮತ್ತೆ ಮತ್ತೆ ಬೇಸತ್ತು ಉಸುರು ಬಿಡುತ್ತ ಒಂದು ಕಡೆಯಲ್ಲಿ ಭ್ರಾಂತನಾಗಿ ನಾರಾಯಣನೆ! ಕಾಪಾಡು ಎಂದು ಗಟ್ಟಿಯಾಗಿ ಕೂಗಿಕೊಂಡನು.

೨೭. ಹಾಗೆಯೇ ಒಂದು ಕಡೆ ನಿಲ್ಲಲಾರದೆ ಕಾಡಿನಿಂದ ಕಾಡಿಗೂ, ಬೆಟ್ಟದಿಂದ ಬೆಟ್ಟಕ್ಕೂ, ಮತ್ತು ಒಂದು ಮಡುವಿನಿಂದ ಮತ್ತೊಂದು ಮಡುವಿಗೂ ಸಂಚರಿಸುತ್ತ ಅನೇಕ ತೀರ್ಥ, ನದೀ, ಮಡುಗಳನ್ನು ನೋಡಿದನು.

ಕುರ್ವನ್ನಿಮಜ್ಜನಂ ಸ್ಮೃತ್ವಾ ಪುಂಡರೀಕಾಕ್ಷಮಚ್ಯುತಂ ।
ಆಜಗಾಮಾಥ ಕಾಲೇನ ಕ್ಷೇತ್ರಂ ಸತ್ಯವ್ರತಂ ನೃಪ ॥ ೨೮ ॥

ತತ್ರ ತೀರ್ಥವರಂ ದೃಷ್ಟ್ವಾ ಕೌಶಿಕೇನ ವಿನಿರ್ಮಿತಂ ।
ಧ್ಯಾತ್ವಾ ದೇವಂ ರಮಾನಾಥಂ ಸ್ನಾತುಂ ಸಮುಪಚಕ್ರಮೇ ॥ ೨೯ ॥

ತಸ್ಮಿನ್ ಕಾಲೇ ದ್ವಿಜೇಂದ್ರಸ್ಯ ದಕ್ಷಿಣೋ ಬಾಹುರಸ್ಫುರತ್ ।
ದಕ್ಷಿಣಂ ಚಾಸ್ಯ ನಯನಂ ಪ್ರಸನ್ನಮಭವನ್ಮನಃ ॥ ೩೦ ॥

ತಾನಿ ದೃಷ್ಟ್ವಾ ನಿಮಿತ್ತಾನಿ ಹರ್ಷಾತ್ ಸಂಪೂರ್ಣಮಾನಸಃ ।
ಗರ್ಜನ್ನಾರಾಯಣೇತ್ಯುಚ್ಚೈರ್ನ್ಯಮಜ್ಜಾಂಭಸಿ ಸುವ್ರತಃ ॥ ೩೧ ॥

ತಸ್ಮಿನ್ ಕಾಲೇ ಸುರಾಃ ಸೇಂದ್ರಾಃ ಸಮುಪೇತ್ಯ ತದಂತಿಕಂ ।
ಮುಮುಚುಃ ಪುಷ್ಪವರ್ಷಾಣಿ ನನೃತುಶ್ಚಾಪ್ಸರೋಗಣಾಃ ॥ ೩೨ ॥

---

೨೮. ರಾಜನೆ! ಆಯಾಯ ತೀರ್ಥಗಳಲ್ಲಿ ಸ್ನಾನಮಾಡಿ ಪುಂಡರೀಕದಂತೆ ಕಣ್ಣುಗಳುಳ್ಳ ನಾರಾಯಣನನ್ನು ಸ್ಮರಿಸಿ ಕೆಲವು ಕಾಲದ ಅನಂತರದಲ್ಲಿ ಸತ್ಯವ್ರತ ಕ್ಷೇತ್ರಕ್ಕೆ ಬಂದನು.

೨೯. ಅಲ್ಲಿ ಕೌಶಿಕಮುನಿಯಿಂದ ನಿರ್ಮಿಸಲ್ಪಟ್ಟ ಉತ್ಕೃಷ್ಟವಾದ ತೀರ್ಥವನ್ನು ಕಂಡು ಲಕ್ಷ್ಮೀಪತಿಯಾದ ವಿಷ್ಣುವನ್ನು ಸ್ಮರಿಸಿ ಅಲ್ಲಿ ಸ್ನಾನಮಾಡಲು ಉಪಕ್ರಮಿಸಿದನು.

೩೦. ಆ ಕಾಲದಲ್ಲಿ ಆ ವಿಪ್ರನ ಬಲ ಭುಜವು ಸ್ಫುರಿಸಿತು. ಬಲಗಣ್ಣು ಹಾರಿತು. ಮತ್ತು ಮನಸ್ಸು ಅತ್ಯಂತ ಪ್ರಸನ್ನವಾಯಿತು. ಇವೇ ಮೊದಲಾದ ಶುಭನಿಮಿತ್ತಗಳು ಆ ತೀರ್ಥ ಮಹಿಮೆಯಿಂದ ಅವನಿಗೆ ಕಾಣಿಸಿದವು.

೩೧. ಆ ಶುಭನಿಮಿತ್ತಗಳುಂಟಾದುದನ್ನು ಕಂಡು ಸಂತೋಷಭರದಿಂದ ತುಂಬಿದ ಹೃದಯವುಳ್ಳವನಾಗಿ ಮತ್ತು ಉತ್ತಮವಾದ ವ್ರತನಿಯಮಗಳುಳ್ಳವನಾಗಿ ನಾರಾಯಣ ನಾಮವನ್ನು ಗಟ್ಟಿಯಾಗಿ ಗರ್ಜಿಸುತ್ತ ಆ ತೀರ್ಥದಲ್ಲಿ ಸ್ನಾನ ಮಾಡಿದನು.

೩೨. ಹಾಗೆ ಸ್ನಾನಮಾಡಿರುವ ಸಮಯದಲ್ಲಿ ಇಂದ್ರಾದಿ ಸಕಲ ದೇವತೆಗಳು ಆ ದ್ವಿಜನ ಸಮೀಪಕ್ಕೆ ಬಂದು ಆ ಪುಣ್ಯವಂತನಾದ ದ್ವಿಜನಮೇಲೆ ಪುಷ್ಪವೃಷ್ಟಿಯನ್ನು ಕರೆದರು, ಮತ್ತು ಅಪ್ಸರಸ್ತ್ರೀಯರು ನರ್ತನಮಾಡಿದರು.

ಸ್ನಾತ್ವೋತ್ತೀರ್ಣಂ ತು ತೀರಸ್ಥಂ ದೃಷ್ಟ್ವಾ ದೇವಗಣಾ ದ್ವಿಜಂ ।
ವಿಮುಕ್ತಂ ಕಿಲ್ಬಿಷಾತ್ ಸರ್ವಾಚ್ಚಂದ್ರಂ ರಾಹುಮುಖಾದಿವ ॥ ೩೩ ॥

ಸಂಪ್ರಹೃಷ್ಟಮುಖಾಃ ಸರ್ವೇ ತಮೂಚುರ್ಹಿ ಕೃಷೀವಲಂ ।
ಕೃಷೀವಲ ಮಹಾಪ್ರಾಜ್ಞ ಸರ್ವಪುಣ್ಯವತಾಂ ವರ ॥ ೩೪ ॥

ಸಕೃತ್ ಸ್ನಾನೇನ ತೀರ್ಥೇಽಸ್ಮಿನ್ನಭವೋ ಮುಕ್ತಕಿಲ್ಬಿಷಃ ।
ಸಹೈವ ತಂ ಸ್ವಕಾಯೇನ ಕ್ಷಿಪ್ರಮೇಹಿ ತ್ರಿವಿಷ್ಟಪಂ ॥ ೩೫ ॥

ಇತ್ಯುಕ್ತ್ವಾ ವಿಪ್ರಮಾರೋಪ್ಯ ವಿಮಾನೇ ಹಂಸಸಂಯುತೇ ।
ನಿನ್ಯುಃ ಸುರಗಣಾಃ ಸರ್ವೇ ಪ್ರಶಂಸಂತಸ್ತ್ರಿವಿಷ್ಟಪಂ ॥ ೩೬ ॥

ಯಸ್ಮಾತ್ ಸಹೈವ ಕಾಯೇನ ಸಮಾರೂಢಸ್ತ್ರಿವಿಷ್ಟಪಂ ।
ತಸ್ಮಾತ್ತೀರ್ಥವರಂ ಪುಣ್ಯಂ ತತ್ಕಾಯಾರೋಹಣಾಭಿಧಂ ॥ ೩೭ ॥

---

೩೩. ಅಲ್ಲಿ ಸ್ನಾನಮಾಡಿ ಆ ಪುಣ್ಯಮಹಿಮೆಯಿಂದ ಇದುವರೆಗೂ ಆಚರಿಸಿದ ಸಕಲ ಪಾತಕಗಳಿಂದ ವಿಮುಕ್ತನಾಗಿ ರಾಹುಗ್ರಹಣದಿಂದ ಮುಕ್ತನಾದ ಚಂದ್ರನು ಪ್ರಕಾಶಿಸುವಂತೆ ಪ್ರಕಾಶಿಸುತ್ತಲಿದ್ದ ತೀರ್ಥದ ತೀರದಲ್ಲಿ ನಿಂತಿದ್ದ ದ್ವಿಜನನ್ನು ದೇವತೆಗಳು ನೋಡಿದರು.

೩೪. ಮತ್ತು ಅವನ ವಿಷಯದಲ್ಲಿ ಹರ್ಷವನ್ನು ಸೂಚಿಸುತ್ತಲಿದ್ದ ಮುಖವುಳ್ಳವರಾಗಿ ಆ ಕೃಷೀವಲನನ್ನು ಕುರಿತು ಮಾತನಾಡಿದರು :—ಸಕಲ ಪುಣ್ಯವಂತರಲ್ಲಿ ಉತ್ತಮನೂ ಮಹಾಪ್ರಜ್ಞಾಶಾಲಿಯೂ ಆದ ಕೃಷೀವಲನೆ! ಕೇಳು.

೩೫. ಈ ಪವಿತ್ರತೀರ್ಥದಲ್ಲಿ ನೀನು ಒಂದು ಸಲ ಸ್ನಾನಮಾಡಿದ ಮಾತ್ರದಿಂದಲೇ ಪಾಪಗಳಿಂದ ಬಿಡುಗಡೆಯನ್ನು ಹೊಂದಿದ್ದೀ. ಈಗ ನೀನು ಈ ಶರೀರಸಹಿತನಾಗಿ ಸ್ವರ್ಗಲೋಕಕ್ಕೆ ಬೇಗ ಬಾ.

೩೬. ದೇವತೆಗಳೆಲ್ಲರೂ ಈ ರೀತಿಯಾಗಿ ಹೇಳಿ ಹಂಸಗಳಿಂದ ಕೂಡಿದ ವಿಮಾನದಲ್ಲಿ ಆ ದ್ವಿಜನನ್ನು ಕುಳ್ಳಿರಿಸಿ ತಾವು ಆ ಸುಕೃತಿಯನ್ನು ಪ್ರಶಂಸೆಮಾಡುತ್ತ ಸ್ವರ್ಗಕ್ಕೆ ಕರೆದುಕೊಂಡುಹೋದರು.

೩೭. ಹೀಗೆ ಈ ತೀರ್ಥದಲ್ಲಿ ಸ್ನಾನಮಾಡಿದ ಸುಕೃತಿಯು ಕಾಯ (ಶರೀರ) ಸಹಿತನಾಗಿ ಸ್ವರ್ಗಕ್ಕೆ ತೆರಳಿರುವುದರಿಂದ ಆ ಉತ್ತಮವೂ ಪವಿತ್ರವೂ ಆದ ತೀರ್ಥವು ಕಾಯಾರೋಹಣ ತೀರ್ಥವೆಂಬ ಸಂಕೇತವನ್ನು ಹೊಂದಿರುವುದು.

ಕಾಯಾರೋಹಣತೀರ್ಥಸ್ಯ ಪ್ರಾಚ್ಯಾಮಸ್ತಿ ಸುಪಾವನಂ ।
ತೀರ್ಥಂ ಗಜಾಹ್ವಯಂ ಪುಣ್ಯಂ ಗಜೇಂದ್ರೇಣ ವಿನಿರ್ಮಿತಂ ॥ ೩೮ ॥

ಏವಮೇತಾನಿ ತೀರ್ಥಾನಿ ಕಾಂಚ್ಯಾಮುಕ್ತಾನಿ ಮುಖ್ಯತಃ ।
ಶ್ರೇಷ್ಠಾನಿ ತತ್ರ ತೀರ್ಥಾನಾಮೇತಾನ್ಯಷ್ಟಾದಶೈವ ಹಿ ॥ ೩೯ ॥

ಸಂತ್ಯನ್ಯಾನಿ ಚ ತೀರ್ಥಾನಿ ಕ್ಷೇತ್ರೇ ಸತ್ಯವ್ರತೇ ಶುಭೇ ।
ಹಸ್ತಿಶೈಲಸ್ಯ ಗವ್ಯೂತ್ಯಾಂ ಪಶ್ಚಿಮೇ ತೀರ್ಥಮುತ್ತಮಂ ॥ ೪೦ ॥

ಯನ್ನಿರ್ಮಿತಂ ರಾಘವೇಣ ದಂಡಕಾರಣ್ಯವಾಸಿನಾ ।
ನೈವಾಪಮುದಕಂ ದಾತುಮುದ್ಯತೇನ ಜಟಾಯವೇ ॥ ೪೧ ॥

ರಾವಣೇನ ಹತಸ್ಯಾಜೌ ಸದ್ಯಃ ಕೈವಲ್ಯಮಿಚ್ಛತಃ ।
ಗೃಧ್ರಸ್ಯ ದರ್ಶಯಾಮಾಸ ಸ್ವಂ ರೂಪಂ ಯತ್ರ ರಾಘವಃ ॥ ೪೨ ॥

---

೩೮. ಈ ಕಾಯಾರೋಹಣ ತೀರ್ಥಕ್ಕೆ ಪೂರ್ವಭಾಗದಲ್ಲಿ ಗಜೇಂದ್ರನಿಂದ ನಿರ್ಮಿಸಲ್ಪಟ್ಟ ಪರಮಪಾವನವೂ ಪುಣ್ಯಕರವೂ ಆದ ಗಜತೀರ್ಥವೆಂಬ ಹೆಸರಿನ ಒಂದು ಉತ್ತಮತೀರ್ಥವು ಇರುವುದು.

೩೯. ಈ ರೀತಿಯಾಗಿ ಕಾಂಚೀಕ್ಷೇತ್ರದಲ್ಲಿರುವ ತೀರ್ಥಗಳಲ್ಲಿ ಮುಖ್ಯವಾದ ಕೆಲವು ತೀರ್ಥಗಳು ಹೇಳಲ್ಪಟ್ಟವೆ. ಅಲ್ಲಿರುವ ಸಮಸ್ತ ತೀರ್ಥಗಳಲ್ಲಿ ಹಿಂದೆ ಹೇಳಿದ ಈ ಹದಿನೆಂಟು ತೀರ್ಥಗಳು ಮಾತ್ರ ಬಹಳ ಶ್ರೇಷ್ಠವಾದವುಗಳು.

೪೦. ಮಂಗಳಕರವಾದ ಸತ್ಯವ್ರತಕ್ಷೇತ್ರದಲ್ಲಿ ಇನ್ನು ಅನೇಕ ತೀರ್ಥಗಳು ಇವೆ. ಹಸ್ತಿಶೈಲದ ಎರಡು ಹರದಾರಿ ದೂರದಲ್ಲಿ ಪಶ್ಚಿಮದಿಕ್ಕಿನಲ್ಲಿ ಉತ್ತಮವಾದ ಒಂದು ತೀರ್ಥವಿದೆ.

೪೧. ದಂಡಕಾರಣ್ಯದಲ್ಲಿ ವಾಸಮಾಡುವಾಗ ಜಟಾಯುವಿನ ನಿಧನವಾದ ತರುವಾಯ ಜಟಾಯುವಿಗೆ ಜಲಾಂಜಲಿಯನ್ನು ಕೊಡಲು ಶ್ರೀರಾಮಚಂದ್ರನು ಆ ತೀರ್ಥವನ್ನು ನಿರ್ಮಿಸಿರುವನು.

೪೨. ರಾವಣನ ಸಂಗಡ ಯುದ್ಧಮಾಡಿ ಅವನಿಂದ ಸಂಹರಿಸಲ್ಪಟ್ಟು ಕೈವಲ್ಯ ಸುಖವನ್ನು ಅಪೇಕ್ಷಿಸುತ್ತಿದ್ದ ಜಟಾಯುವಿಗೆ ಆ ತೀರ್ಥಸನ್ನಿಧಿಯಲ್ಲಿ ಶ್ರೀರಾಮನು ಸ್ವಸ್ವರೂಪವನ್ನು ತೋರಿಸಿದನು.

ದತ್ವಾ ತು ಮುಕ್ತಿಂ ಗೃಧ್ರಸ್ಯ ವಿಚಿನ್ವನ್ ಮೈಥಿಲೀಂ ವನೇ ।
ನ್ಯವಸತ್ಸಾನುಜೋ ಯತ್ರ ಕಂಚಿತ್ ಕಾಲಮರಿಂದಮಃ ॥ ೪೩ ॥

ಅತಸ್ತು ರಾಘವಂ ಪ್ರಾಹುರ್ನಾಮ್ನಾ ವಿಚಯರಾಘವಂ ।
ತತ್ರ ತದ್ಗೃಧ್ರತೀರ್ಥಾಽಽಖ್ಯಂ ಪುಣ್ಯಂ ರಾಮೇಣ ನಿರ್ಮಿತಂ ॥ ೪೪ ॥

ಜಟಾಯುಮುಕ್ತಿದೇ ತೀರ್ಥೇ ಸ್ನಾತ್ವಾ ವಿಚಯರಾಘವಂ ।
ಯೇ ಪಶ್ಯಂತಿ ನರಾ ಲೋಕೇ ಮುಕ್ತಾಃ ಸದ್ಯೋ ಭವಂತಿ ಹಿ ॥ ೪೫ ॥

ತಸ್ಯಾಸ್ತಿ ಪಶ್ಚಿಮೇ ದೇಶೇ ತೀರ್ಥಂ ಕ್ರೋಶದ್ವಯೇ ಪರಂ ।
ಪಾಪನಾಶನಮಾಖ್ಯಾತಂ ಪುಣ್ಯಂ ಪಾಪಪ್ರಣಾಶನಂ ॥ ೪೬ ॥

---

೪೩. ಹೀಗೆ ಗೃಧ್ರರಾಜನಾದ ಜಟಾಯುವಿಗೆ ಮುಕ್ತಿಯನ್ನು ಕೊಟ್ಟು ವನದಲ್ಲಿ ಸೀತಾದೇವಿಯನ್ನು ಹುಡುಕುತ್ತ ಶತ್ರುನಿಗ್ರಹಕ್ಕೋಸ್ಕರ ಅವತರಿಸಿದ ಶ್ರೀರಾಮನು ಅನುಜನಾದ ಲಕ್ಷ್ಮಣನಿಂದ ಕೂಡಿ ಕೆಲವು ಕಾಲ ಅಲ್ಲಿ ವಾಸ ಮಾಡಿದನು.

೪೪. ಶ್ರೀರಾಮನು ಸೀತೆಯನ್ನು ವಿಚಯನ (ಹುಡುಕುವಿಕೆ) ಮಾಡುತ್ತ ಕೆಲವು ಕಾಲ ಅಲ್ಲಿ ವಾಸಮಾಡಿದ್ದರಿಂದ ಆ ವನವನ್ನು ವಿಚಯರಾಘವವೆಂದು ಕರೆಯುವರು. ಅಲ್ಲಿ ಶ್ರೀರಾಮನು ನಿರ್ಮಾಣಮಾಡಿದ ತೀರ್ಥವು ಗೃಧ್ರರಾಜನಾದ ಜಟಾಯುವಿಗೆ ಮುಕ್ತಿಯನ್ನು ಕೊಟ್ಟಿದ್ದರಿಂದ ಗೃಧ್ರತೀರ್ಥವೆಂಬ ಹೆಸರನ್ನು ಹೊಂದಿತು.

೪೫. ಜಟಾಯುವಿಗೆ ಮುಕ್ತಿಯನ್ನು ಕೊಟ್ಟ ತೀರ್ಥದಲ್ಲಿ ಸ್ನಾನಮಾಡಿ ವಿಚಯರಾಘವಕ್ಷೇತ್ರವನ್ನು ಯಾರು ದರ್ಶನಮಾಡುವರೋ ಅಂತಹ ಮಾನವರು ಲೋಕದಲ್ಲಿ ಸದ್ಯಃ ಕಾಲದಲ್ಲಿಯೇ ಮೋಕ್ಷವನ್ನು ಹೊಂದುವರು.

೪೬. ಆ ತೀರ್ಥದ ಪಶ್ಚಿಮ ದಿಗ್ಭಾಗದಲ್ಲಿ ಎರಡು ಹರದಾರಿಯ ದೂರದಲ್ಲಿ ಮತ್ತೊಂದು ತೀರ್ಥವು ಇರುವುದು. ಆ ತೀರ್ಥವು ಸೇವಿಸಿದವರ ಪಾಪವನ್ನು ಕಳೆಯುವ ಮಹಿಮೆಯನ್ನು ಹೊಂದಿರುವುದರಿಂದ ಪಾಪನಾಶನ ತೀರ್ಥವೆಂಬ ಅನ್ವರ್ಥ ಸಂಜ್ಞೆಯನ್ನು ಹೊಂದಿಕೊಂಡಿದೆ.

ಶಿಶ್ಯೇ ಯತ್ರ ನದೀಂ ರೋದ್ಧುಂ ಹರಿರರ್ಣವಸನ್ನಿಭಾಂ
ತಂ ವದಂತಿ ಹರಿಂ ತತ್ರ ನಾಮ್ನಾ ಪ್ರಲಯರೋಧಕಂ ॥ ೪೭ ॥

ತತಃ ಪಶ್ಚಿಮದಿಗ್ಭಾಗೇ ಸೀಮಾಂತೇ ಯೋಜನತ್ರಯೇ ।
ಅಸ್ತಿ ಸಾರಸ್ವತಂ ನಾಮ ತೀರ್ಥಂ ಗಜಗಿರೇರಧಃ ॥ ೪೮ ॥

ವಿಧಾತುರಶ್ವಮೇಧಸ್ಯ ಬ್ರಹ್ಮಣಃ ಪರಮೇಷ್ಠಿನಃ ।
ಕಾಂಚೀಂ ಪ್ಲಾವಯಿತುಂ ವೇಗಾದುದ್ವೃತ್ತಾಮರ್ಣವಸನ್ನಿಭಾಂ ॥ ೪೯ ॥

ಆಯಾಂತೀಮಭಿಸಂಕ್ರುದ್ಧಾಂ ಹರಿರ್ವೀಕ್ಷ್ಯ ಸರಸ್ವತೀಂ ।
ಶಯಾನಃ ಶೇಷಪರ್ಯಂಕೇ ನ್ಯರುಣದ್ಯತ್ರ ತಾಂ ನದೀಂ ॥ ೫೦ ॥

ತಂ ವಿಷ್ಣುಂ ಶಯನೇಶಾಖ್ಯಮದ್ಯಾಪಿ ಪ್ರವದಂತಿ ಹಿ ।
ತತ್ರ ಸಾರಸ್ವತಂ ತೀರ್ಥಮೈಶಾನ್ಯೇ ತತ್ರ ವೈ ಹರೇಃ ॥ ೫೧ ॥

---

೪೭. ಸಮುದ್ರದಂತೆ ಉಕ್ಕಿ ಬರುತ್ತಿದ್ದ ನದಿಯನ್ನು ತಡೆಗಟ್ಟಲು ವಿಷ್ಣು ಪರಮಾತ್ಮನು ಅಲ್ಲಿ ಶಯನಮಾಡಿದನು. ಅಲ್ಲಿದ್ದ ವಿಷ್ಣುಮೂರ್ತಿಯನ್ನು ಪ್ರಲಯರೋಧಕನೆಂದು ಕರೆಯುವರು.

೪೮. ಅಲ್ಲಿಂದ ಪಶ್ಚಿಮದೇಶದಲ್ಲಿ ಮೂರು ಯೋಜನ ದೂರದ ಆ ಕ್ಷೇತ್ರದ ಸೀಮೆಯ ಅಂತದಲ್ಲಿ ಹಸ್ತಿಶೈಲದ ಅಧೋಭಾಗದಲ್ಲಿ ಸಾರಸ್ವತವೆಂಬ ಒಂದು ತೀರ್ಥ ವಿರುವುದು.

೪೯. ಉತ್ಕೃಷ್ಟವಾದ ಪರಮಪದವಿಯಲ್ಲಿದ್ದ ಮತ್ತು ಪ್ರಪಂಚ ಸೃಷ್ಟಿಕರ್ತನಾದ ಬ್ರಹ್ಮನು ಅಶ್ವಮೇಧಯಾಗವನ್ನು ಮಾಡಿರುವ ಕ್ಷೇತ್ರದಲ್ಲಿ ಸರಸ್ವತಿ ನದಿಯು ಸಮುದ್ರದಂತೆ ಪ್ರವಹಿಸಿ ದರ್ಪದಿಂದ ಕಾಂಚೀನಗರಿಯನ್ನು ಕೊಚ್ಚಿಕೊಂಡು ಹೋಗಲು ಭರದಿಂದ ಬರುತ್ತಿದ್ದುದನ್ನು ಹರಿಯು ನೋಡಿದನು.

೫೦. ಅತಿ ಕ್ರೋಧದಿಂದ ಪ್ರವಹಿಸಿ ಬರುತ್ತಿದ್ದ ಸರಸ್ವತೀ ನದಿಯನ್ನು ಕಂಡೊಡನೆ ಹರಿಯು ಆ ಸ್ಥಳದಲ್ಲಿ ಶೇಷಶಯನದಲ್ಲಿ ಶಯನಮಾಡಿ ಆ ನದಿಯನ್ನು ತಡೆಗಟ್ಟಿದನು.

೫೧. ಈಗ ಕೂಡ ಅಲ್ಲಿ ಶಯನಮಾಡಿರುವ ವಿಷ್ಣುವಿಗ್ರಹವನ್ನು ಶಯನೇಶನೆಂಬ ಹೆಸರಿನಿಂದ ಕರೆಯುತ್ತಾರೆ. ಅಲ್ಲಿ ಆ ವಿಷ್ಣುಮೂರ್ತಿಯ ಈಶಾನ್ಯದೇಶದಲ್ಲಿ ಸಾರಸ್ವತ ತೀರ್ಥವು ಇರುವುದು.

ಸಾರಸ್ವತೇ ಪುಣ್ಯತಮೇ ತೀರ್ಥೇ ಕೃತ್ವಾ ನಿಮಜ್ಜನಂ ।
ಶಯನೇಶಂ ಹರಿಂ ದೃಷ್ಟ್ವಾ ನರಃ ಪಾಪಾದ್ವಿಮುಚ್ಯತೇ ॥ ೫೨ ॥

ಹಸ್ತಿಶೈಲಸ್ಯ ವಾಯವ್ಯೇ ದೇಶೇ ಗವ್ಯೂತಿಪಂಚಕೇ ।
ಅಸ್ತಿ ತೀರ್ಥದ್ವಯಂ ಪುಣ್ಯಂ ಮುಕ್ತಿದಂ ಸರ್ವದೇಹಿನಾಂ ॥ ೫೩ ॥

ಬ್ರಹ್ಮಾಖ್ಯಂ ಚ ವಸಿಷ್ಠಾಖ್ಯಂ ಘಟಿಕಾದ್ರೇರಧೋ ನೃಪ ।
ಯತ್ರ ಹಂತುಂ ಚ ದಿತಿಜಾನುದ್ಯತಸ್ತು ನೃಕೇಸರೀ ॥ ೫೪ ॥

ಶೈಲಾಗ್ರಂ ಸ ಸಮಾರುಹ್ಯ ನ್ಯವಸದ್ಘಟಿಕಾಂ ಯತಃ ।
ಘಟಿಕಾದ್ರಿರತಃ ಪ್ರೋಕ್ತಃ ಸರ್ವಪಾಪಹರೋ ಭುವಿ ॥ ೫೫ ॥

ಉತ್ತರೇ ಹಸ್ತಿಶೈಲಸ್ಯ ಪ್ರದೇಶೇ ಯೋಜನದ್ವಯೇ ।
ಹೃತ್ತಾಪನಾಶನಂ ನಾಮ ತೀರ್ಥಮಸ್ತಿ ಸುಪಾವನಂ ॥ ೫೬ ॥

---

೫೨. ಆ ಪವಿತ್ರವಾದ ಸಾರಸ್ವತತೀರ್ಥದಲ್ಲಿ ಸ್ನಾನವನ್ನು ಮಾಡಿ ಶಯನೇಶ್ವರನಾದ ಹರಿಯನ್ನು ದರ್ಶನಮಾಡಿದ ಮಾನವನು ಪಾಪಗಳಿಂದ ಮುಕ್ತನಾಗುವನು.

೫೩. ಹಸ್ತಿಶೈಲದ ವಾಯವ್ಯದೇಶದಲ್ಲಿ ಹತ್ತು ಹರದಾರಿಯ ಅಥವಾ ಐದು ಗವ್ಯೂತಿಪರಿಮಾಣದ ದೂರದಲ್ಲಿ ಸರ್ವಪ್ರಾಣಿಗಳಿಗೆ ಮುಕ್ತಿಯನ್ನುಂಟುಮಾಡುವ ಪವಿತ್ರವಾದ ಎರಡು ತೀರ್ಥಗಳು ಇವೆ.

೫೪. ರಾಜನೆ! ಆ ಎರಡು ತೀರ್ಥಗಳು ಘಟಿಕಾದ್ರಿಯೆಂಬ ಒಂದು ಪರ್ವತದ ಅಧೋಭಾಗದಲ್ಲಿ ಬ್ರಹ್ಮತೀರ್ಥ ಮತ್ತು ವಸಿಷ್ಠತೀರ್ಥವೆಂಬ ಹೆಸರಿನಿಂದ ಪ್ರಸಿದ್ಧವಾಗಿವೆ. ಅಲ್ಲಿ ನರಸಿಹ್ಮಸ್ವಾಮಿಯು ದೈತ್ಯರನ್ನು ಸಂಹರಿಸಲು ಉದ್ಯುಕ್ತನಾಗಿದ್ದನು.

೫೫. ನರಸಿಹ್ಮಸ್ವಾಮಿಯು ರಾಕ್ಷಸರನ್ನು ನಿರ್ಮೂಲಮಾಡಿ ಆ ಶೈಲದ ಶಿಖರವನ್ನು ಏರಿ ಒಂದು ಘಳಿಗೆಯ ಹೊತ್ತು ಅಲ್ಲಿ ವಾಸಮಾಡಿರುವುದರಿಂದ ಆ ಅದ್ರಿಯು ಘಟಿಕಾದ್ರಿಯೆಂದು ಪ್ರಸಿದ್ಧಿಗೊಂಡಿತು. ಅದು ಭೂಮಿಯಲ್ಲೆಲ್ಲ ಸಮಸ್ತ ಪಾಪಗಳನ್ನು ಕಳೆಯುವ ಉತ್ತಮ ಪ್ರದೇಶವಾಯಿತು.

೫೬. ಹಸ್ತಿಶೈಲದ ಉತ್ತರಭಾಗದಲ್ಲಿ ಎರಡು ಯೋಜನಗಳ ದೂರ ಪ್ರದೇಶದಲ್ಲಿ ಹೃತ್ತಾಪನಾಶನವೆಂಬ ಪವಿತ್ರತೀರ್ಥವು ಒಂದು ಇರುವುದು.

ಯತ್ರ ರಾಮಃ ಪುರಾ ರಾಜನ್ ನಿವಸನ್ ದಂಡಕಾವನೇ ।
ಬ್ರಾಹ್ಮಣಾನಾಂ ಹಿತಾರ್ಥಾಯ ಬ್ರಹ್ಮಘ್ನಾನ್ ದುಷ್ಟಚಾರಿಣಃ ॥ ೫೭ ॥

ನಿಹತ್ಯ ಸ್ವೇನ ವೀರ್ಯೇಣ ಖರಪ್ರಮುಖರಾಕ್ಷಸಾನ್ ।
ತತೋ ಯುದ್ಧಪರಿಶ್ರಾಂತಃ ಕ್ಷುತ್ತೃಡ್ಭ್ಯಾಂ ಪರಿಪೀಡಿತಃ ॥ ೫೮ ॥

ಶಿಶ್ಯೇ ಮುಹೂರ್ತಂ ವಿಪ್ರೇಣ ಶಾಲಿಹೋತ್ರೇಣ ಚಾರ್ಚಿತಃ ।
ಹೃತ್ತಾಪನಾಶನಾಖ್ಯಸ್ಯ ತೀರ್ಥಸ್ಯೋತ್ತರತಸ್ತಟೇ ॥ ೫೯ ॥

ಶಾಲಿಹೋತ್ರಾಶ್ರಮೇ ಪುಣ್ಯೇ ಶಯಾನಂ ವೀರರಾಘವಂ ।
ದೃಷ್ಟ್ವಾ ಸ್ನಾತ್ವಾ ಚ ತತ್ತೀರ್ಥೇ ನರಃ ಪಾಪಾದ್ವಿಮುಚ್ಯತೇ ॥ ೬೦ ॥

ಏವಂ ತೀರ್ಥಾನಿ ಪುಣ್ಯಾನಿ ಸಂತಿ ಸತ್ಯವ್ರತೇ ಶುಭೇ ।
ಅಶ್ವಮೇಧೇ ಮಹಾಯಜ್ಞೇ ಸುಕೃತೇ ಪದ್ಮಯೋನಿನಾ ॥ ೬೧ ॥

---

೫೭. ಪೂರ್ವಕಾಲದಲ್ಲಿ ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದ ಶ್ರೀರಾಮನು ಈ ತೀರ್ಥ ಸಮೀಪದಲ್ಲಿ ಬ್ರಹ್ಮಘ್ನರಾದ ದುಷ್ಟರನ್ನು ನಿಗ್ರಹಿಸಿ ಶಿಷ್ಟರಾದ ತಪಸ್ವಿ ಬ್ರಾಹ್ಮಣರನ್ನು ರಕ್ಷಿಸಿದನು.

೫೮. ಇಲ್ಲಿ ಶ್ರೀರಾಮನು ದುಷ್ಟರಾದ ಖರ ಮುಂತಾದ ರಾಕ್ಷಸರನ್ನು ಸ್ವವೀರ್ಯದಿಂದ ಸಂಹರಿಸಿ ಯುದ್ಧದಲ್ಲಿ ಸ್ವಲ್ಪ ಶ್ರಮವನ್ನು ಹೊಂದಿದವನೂ ಮತ್ತು ಹಸಿವು ನೀರಡಿಕೆಗಳಿಂದ ಪೀಡಿತನಾದವನೂ ಆದನು.

೫೯. ಆಗ ಹೃತ್ತಾಪನಾಶನವೆಂಬ ತೀರ್ಥದ ಉತ್ತರ ತೀರದಲ್ಲಿ ಸ್ವಲ್ಪಹೊತ್ತು ನಿದ್ರಿಸಿದನು. ಮತ್ತು ಅಲ್ಲಿ ಶಾಲಿಹೋತ್ರನೆಂಬ ಬ್ರಾಹ್ಮಣನಿಂದ ಅರ್ಚಿಸಲ್ಪಟ್ಟನು.

೬೦. ಪವಿತ್ರವಾದ ಆ ಶಾಲಿಹೋತ್ರಾಶ್ರಮದಲ್ಲಿ ಶಯನಮಾಡಿರುವ ಶತ್ರುಗಳನ್ನು ಸ್ವವೀರ್ಯದಿಂದ ಸಂಹರಿಸಿದ ವೀರರಾಘವನನ್ನು ದರ್ಶನಮಾಡಿ ಹೃತ್ತಾಪನಾಶನ ತೀರ್ಥದಲ್ಲಿ ಸ್ನಾನಮಾಡಿದ ಮನುಜನು ಸಕಲ ಪಾಪಗಳನ್ನು ಕಳೆದುಕೊಳ್ಳುತ್ತಾನೆ.

೬೧. ಹೀಗೆ ಆ ಮಂಗಳಕರವಾದ ಸತ್ಯವ್ರತಕ್ಷೇತ್ರದಲ್ಲಿ ಅನೇಕವಾದ ಪವಿತ್ರ ತೀರ್ಥಗಳು ಇರುತ್ತವೆ. ಅವುಗಳೆಲ್ಲವೂ ಬ್ರಹ್ಮನು ಅಶ್ವಮೇಧಯಾಗವನ್ನು ಅನುಷ್ಠಾನಮಾಡಿದ ಸಂದರ್ಭದಲ್ಲಿ ಉತ್ಪನ್ನವಾದುವು.

ಅನಿಶಂ ಭುಂಜಮಾನಾನಾಂ ವಿಪ್ರಾಣಾಂ ತತ್ರ ಕೋಟಿಶಃ ।
ತೇಷಾಂ ತೃಪ್ತ್ಯರ್ಥಮಸೃಜದ್ವಿಶ್ವಕರ್ಮಾ ಸಮಂತತಃ ॥ ೬೨ ॥

ಸರ್ಪಿಷಾಂ ಪಯಸಾಂ ದಧ್ನಾಂ ಹ್ರದಾನಮೃತಸಂಭವಾನ್ ।
ಶರ್ಕರಾಽಸವ ಮಾಧ್ವೀಕಪುಷ್ಪಾಽಸವಫಲಾಽಸವೈಃ ॥ ೬೩ ॥

ಇಕ್ಷೂದಕೈಶ್ಚ ಸಂಪೂರ್ಣಾ ಹ್ರದಾಸ್ತತ್ರ ವಿನಿರ್ಮಿತಾಃ ।
ತೇಽಪಿ ಪುಣ್ಯಪ್ರದಾ ನೃಣಾಂ ಮಜ್ಜನಾದಘನಾಶನಾಃ ॥ ೬೪ ॥

ಏತಾನಿ ರಾಜನ್ ಪರಮಾದ್ಭುತಾನಿ
ತೀರ್ಥಾನಿ ಪುಣ್ಯಾನಿ ಸುಪಾವನಾನಿ ॥
ಏಷ್ವಾಪ್ಲುತೋ ಮುಕ್ತಿಮುಪೈತಿ ಜಂತುಃ
ಸದ್ಯಃ ಪ್ರಮುಕ್ತೋಽಖಿಲಪಾಪಬಂಧೈಃ ॥ ೬೫ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇಽಷ್ಟಮೋಽಧ್ಯಾಯಃ.

---

೬೨. ಆ ಯಾಗ ವಿಜೃಂಭಣೆಯಲ್ಲಿ ಹಗಲು ರಾತ್ರಿಗಳಲ್ಲಿ ಬ್ರಾಹ್ಮಣರು ಕೋಟಿ ಸಂಖ್ಯೆಯಿಂದ ಸೇರಿ ತೃಪ್ತಿಯಾಗಿ ಭುಂಜಿಸುತ್ತಿರಲು ಅವರ ತೃಪ್ತಿಗೋಸ್ಕರವಾಗಿ ಆ ಸುತ್ತಮುತ್ತ ಪ್ರದೇಶಗಳಲ್ಲಿ ವಿಶ್ವಕರ್ಮನು ಅನೇಕ ತೀರ್ಥಗಳನ್ನು ನಿರ್ಮಿಸಿರುವನು.

೬೩. ಅವುಗಳಲ್ಲಿ ಕೆಲವು ಅಮೃತಸಮಾನವಾದ ಆಜ್ಯ, ದಧಿ ಮತ್ತು ಕ್ಷೀರಗಳಿಂದ ಪೂರ್ಣವಾದ ಹ್ರದಗಳಾಗಿ ವಿಪ್ರರಿಗೆ ತೃಪ್ತಿಯನ್ನುಂಟುಮಾಡಿದವು. ಇನ್ನು ಕೆಲವು ಸಕ್ಕರೆ, ಜೇನು, ಪುಷ್ಪ ಅಥವಾ ಫಲಗಳಿಂದ ಆಗುವ ಮದ್ಯಗಳಿಂದ ಪೂರ್ಣವಾಗಿದ್ದವು.

೬೪. ಮತ್ತು ಕಬ್ಬಿನ ರಸದಿಂದ ಕೆಲವು ಪೂರ್ಣವಾಗಿದ್ದವು. ಹೀಗೆ ಅನೇಕ ವಿಧವಾದ ಹ್ರದಗಳು ರಚಿಸಲ್ಪಟ್ಟಿದ್ದವು. ಆ ತೀರ್ಥಗಳೆಲ್ಲವೂ ಮನುಷ್ಯರಿಗೆ ಸ್ನಾನಮಾತ್ರದಿಂದ ಸಕಲ ಪಾಪಗಳನ್ನು ಭಂಜನಮಾಡಿ ಪುಣ್ಯವನ್ನು ಕೊಡುವುವು.

೬೫. ರಾಜನೇ! ಇವುಗಳೆಲ್ಲವೂ ಪರಮಾಶ್ಚರ್ಯಕರವೂ ಪವಿತ್ರವೂ ಪುಣ್ಯಕರವೂ ಆದ ಉತ್ತಮತೀರ್ಥಗಳು, ಇವುಗಳಲ್ಲಿ ಸ್ನಾನಮಾಡಿದ ಪ್ರಾಣಿಯು ಕೂಡಲೆ ಸಕಲ ಪಾಪಗಳೆಂಬ ಬಂಧನದಿಂದ ಮುಕ್ತನಾಗಿ ಮುಕ್ತಿಸುಖವನ್ನು ಹೊಂದುವನು.

ಕಾಂಚೀಮಾಹಾತ್ಮ್ಯದಲ್ಲಿ ಅಷ್ಟಮಾಧ್ಯಾಯವು ಮುಗಿದುದು.

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ನವಮೋಽಧ್ಯಾಯಃ

ಅಥ ತೇಽಹಂ ಪ್ರವಕ್ಷ್ಯಾಮಿ ಶೃಣುಷ್ವೈಕಮನಾ ನೃಪ ।
ಯಥಾ ಹಸ್ತಿಗಿರೇರಗ್ರೇ ಹರಿಃ ಪ್ರಾದುರಭೂತ್ಕಿಲ ॥ ೧ ॥

ಆಸೀತ್ಪುರಾ ಜಗತ್ಸರ್ವಂ ಸಲಿಲೇನ ಸಮಾವೃತಂ ।
ತತ್ರೋಪರಿ ನಭಶ್ಚಾಸೀದಂಧೇನ ತಮಸಾ ವೃತಂ ॥ ೨ ॥

ತತಃ ಕದಾಚಿತ್ತತ್ರಾಭೂದ್ಭಿತ್ತ್ವಾಂಭಃ ಪದ್ಮಮುತ್ಥಿತಂ ।
ಸಹಸ್ರಾಽದಿತ್ಯಸಂಕಾಶಂ ಸಹಸ್ರದಳಮದ್ಭುತಂ ॥ ೩ ॥

---

೧. ರಾಜನೆ! ಈ ಹಸ್ತಿ ಪರ್ವತದ ಶಿಖರದಲ್ಲಿ ವಿಷ್ಣುವು ಹೇಗೆ ಅವತರಿಸಿದ ನೆಂಬ ವಿಷಯವನ್ನು ನಿನಗೆ ಹೇಳುವೆನು. ಆ ಚರಿತ್ರೆಯನ್ನು ಗಮನವಿಟ್ಟು ಕೇಳು.

೨. ಈ ಜಗತ್ತಿನ ಸೃಷ್ಟಿಯ ಪೂರ್ವಕಾಲದಲ್ಲಿ ಸಕಲ ಪ್ರಪಂಚವೂ ಜಲದಿಂದ ಮುಚ್ಚಲ್ಪಟ್ಟು ಕೇವಲ ಜಲಮಯವಾಗಿದ್ದಿತು. ಅದರ ಊರ್ಧ್ವಭಾಗದಲ್ಲಿ ಅಂಧ ಕಾರದಿಂದ ಆವೃತವಾದ ಆಕಾಶವು ಇತ್ತು.

೩. ಆಗ ಒಂದು ಸಮಯದಲ್ಲಿ ನೂರಾರು ಸೂರ್ಯಬಿಂಬಗಳಂತೆ ತೇಜಸ್ಸಿ ನಿಂದ ಕೂಡಿದ ಮತ್ತು ಸಾವಿರಾರು ದಳಗಳಿಂದ ಕೂಡಿದ ಒಂದು ಅದ್ಭುತವಾದ ಕಮಲವು ನೀರನ್ನು ಭೇದಿಸಿಕೊಂಡು ಉದ್ಭವಿಸಿತು.

ತದಾದಿಪದ್ಮಮಾಖ್ಯಾತಂ ಯಸ್ಮಿನ್ನಾಸೀತ್ಪುರಾ ಪುಮಾನ್ ।
ತತ್ರೋಪವಿಷ್ಟಃ ಪುರುಷಃ ಪದ್ಮಗರ್ಭಸಮುದ್ಭವಃ ॥ ೪ ॥

ಚಿಂತಯಾಮಾಸ ಕಿಮಿದಂ ಕೋಽಹಂ ಕೇನೇಹ ನಿರ್ಮಿತಃ ।
ಇತಿ ಚಿಂತಯತಸ್ತಸ್ಯ ತೇಜಸಾ ತತ್ರ ತಜ್ಜಲಂ ॥ ೫ ॥

ಸಂಶೋಷಿತಮಭೂತ್ಸರ್ವಂ ಸೋಽಪ್ಯಭೂಚ್ಚತುರಾನನಃ ।
ತತಶ್ಚತುರ್ಭಿರ್ವದನೈರ್ದಿಶಃ ಸರ್ವಾಃ ಸಮಂತತಃ ॥ ೬ ॥

ವಿಲೋಕ್ಯ ವ್ಯಾಪ್ತಮಾಕಾಶಮಭೂದ್ವಿಸ್ಮಿತಮಾನಸಃ ।
ತಂ ಕರ್ತವ್ಯಮಜಾನಂತಂ ವಿಸ್ಮಯಾವಿಷ್ಟಮಾನಸಂ ॥ ೭ ॥

ಧ್ಯಾಯಂತಂ ಪದ್ಮಜಂ ಪ್ರೇಕ್ಷ್ಯ ವಾಗುವಾಚಾಶರೀರಿಣೀ ।
ಭೋ ಭೋ ಬ್ರಹ್ಮನ್ ಜಗತ್ಸ್ರಷ್ಟುಮಿಚ್ಛತಾ ಪರಮಾತ್ಮನಾ ॥ ೮ ॥

---

೪. ಆ ಪದ್ಮವು ಆದಿಪದ್ಮವೆಂದು ಪ್ರಖ್ಯಾತವಾಯಿತು. ಪೂರ್ವಕಾಲದಲ್ಲಿ ಆ ಪದ್ಮದ ಗರ್ಭದಿಂದ ಹುಟ್ಟಿದ ಒಬ್ಬ ಪುರುಷನು ಆ ಪದ್ಮದಲ್ಲಿ ಕುಳಿತುಕೊಂಡಿದ್ದನು.

೫. ಅಲ್ಲಿ ಕುಳಿತುಕೊಂಡಿದ್ದ ಪುರುಷನು ಇದೇನು? ನಾನು ಯಾರು? ಯಾರಿಂದ ನಾನು ಸೃಷ್ಟಿಸಲ್ಪಟ್ಟೆನು? ಎಂಬುದಾಗಿ ಚಿಂತಿಸಿದನು. ಹೀಗೆ ಪುರುಷನು ಚಿಂತಿಸುತ್ತಿರುವಾಗ ಆ ಪುರುಷನ ತೇಜಸ್ಸು ಆ ಜಲರಾಶಿಯಲ್ಲಿ ಪ್ರಸರಿಸಿತು.

೬. ಆ ತೇಜಸ್ಸಿನಿಂದ ಎಲ್ಲ ಜಲವು ಒಣಗಿಹೋಯಿತು. ಕಮಲದಲ್ಲಿದ್ದ ಆ ಪುರುಷನು ನಾಲ್ಕು ಮುಖಗಳಿಂದ ಕೂಡಿದ ಬ್ರಹ್ಮದೇವನಾದನು. ಅನಂತರದಲ್ಲಿ ನಾಲ್ಕು ಮುಖಗಳಿಂದ ನಾಲ್ಕು ದಿಕ್ಕುಗಳನ್ನು ನೋಡಿದನು.

೭. ಆಗ ಸುತ್ತಲೂ ಏಕಪ್ರಕಾರವಾಗಿ ಆಕಾಶವು ವ್ಯಾಪಿಸಿರುವುದನ್ನು ಕಂಡು ವಿಸ್ಮಯವನ್ನು ಹೊಂದಿದ ಅಂತಃಕರಣವುಳ್ಳವನಾದನು. ಹೀಗೆ ಆಶ್ಚರ್ಯಚಕಿತವಾದ ಮನಸ್ಸುಳ್ಳವನಾಗಿ ಕರ್ತವ್ಯದ ವಿವೇಕದಿಂದ ಶೂನ್ಯನಾಗಿ ಬ್ರಹ್ಮನು ಚಿಂತಾಮಗ್ನನಾಗಿರಲು ಅವನನ್ನು ಅಶರೀರವಾಣಿಯು ಈ ರೀತಿಯಾಗಿ ಬೋಧಿಸಿತು.

೮. ಎಲೈ ಬ್ರಹ್ಮನೆ! ಪರಮಾತ್ಮನು ಪ್ರಪಂಚವನ್ನು ಸೃಷ್ಟಿಮಾಡಬೇಕೆಂಬ ಅಪೇಕ್ಷೆಯುಳ್ಳವನಾಗಿ ನಿನ್ನನ್ನು ಆದಿಯಲ್ಲಿ ಸೃಷ್ಟಿಸಿರುವನು.

ಉತ್ಪಾದಿತಸ್ತ್ವಮೇತಸ್ಮಿಂಸ್ತನ್ನಾಭೀರುಹಪಂಕಜೇ ।
ಅನಂತಶಕ್ತಿರವ್ಯಕ್ತಃ ಪರಮಾತ್ಮಾ ಸನಾತನಃ ॥ ೯ ॥

ಸೃಷ್ಟ್ವಾ ಭವಂತಮೇತಸ್ಯ ಧಾತಾರಂ ಕರ್ತುಮಿಚ್ಛತಿ ।
ಪದಂ ಚ ಪಾರಮೇಷ್ಠ್ಯಂ ತೇ ದತ್ತಮವ್ಯಕ್ತಮೂರ್ತಿನಾ ॥ ೧೦ ॥

ತಸ್ಮಾತ್ ಸೃಜಸ್ವ ಲೋಕಾಂಸ್ತ್ರೀನಿತ್ಯುಕ್ತ್ವಾ ವಿರರಾಮ ಚ ।
ತತಸ್ತದ್ವಾಕ್ಯಮಾಕರ್ಣ್ಯ ಧಾತಾ ವಿಗತಸಾಧ್ವಸಃ ॥ ೧೧ ॥

ಕಾ ಶಕ್ತಿರ್ಮೇ ಜಗತ್ಸ್ರಷ್ಟುಮಿತಿ ಮತ್ವಾಽಬ್ಜಸಂಭವಃ ।
ಅವ್ಯಕ್ತಂ ಮನಸಾ ಧ್ಯಾಯಂಸ್ತಪ ಉಗ್ರಂ ಚಚಾರ ಹ ॥ ೧೨ ॥

ತಸ್ಯ ಸಂತಪ್ಯತೋ ಧಾತುರತ್ಯಗಾದ್ವತ್ಸರಾಯುತಂ ।
ದದರ್ಶ ಸ ತತೋ ಹಂಸಂ ಶ್ವೇತಪಕ್ಷಚಯಾಂಚಿತಂ ॥ ೧೩ ॥

---

೯. ಅನಂತವಾದ ಶಕ್ತಿಗಳಿಂದ ಕೂಡಿದವನೂ ಅತೀಂದ್ರಿಯನೂ ಮತ್ತು ಅನಾದಿಯೂ ಆದ ಪರಮಾತ್ಮನು ತನ್ನ ನಾಭಿಕಮಲದಲ್ಲಿ ನಿನ್ನನ್ನು ಸೃಷ್ಟಿ ಮಾಡಿರುವನು.

೧೦. ಹೀಗೆ ನಿನ್ನನ್ನು ಸೃಷ್ಟಿಸಿ ಈ ಚರಾಚರಪ್ರಪಂಚಕ್ಕೆ ಸೃಷ್ಟಿಕರ್ತನನ್ನಾಗಿ ಮಾಡಲು ಅಪೇಕ್ಷಿಸುತ್ತಾನೆ. ಮತ್ತು ಅತೀಂದ್ರಿಯಸ್ವರೂಪವುಳ್ಳ ಪರಮಾತ್ಮನು ನಿನಗೆ ಉತ್ತಮವಾದ ಬ್ರಹ್ಮಪದವಿಯನ್ನು ಅನುಗ್ರಹಿಸಿರುವನು.

೧೧. ಆದುದರಿಂದ ಸೃಷ್ಟಿಯ ಅಧಿಕಾರವನ್ನು ಹೊತ್ತಿರುವ ನೀನು ಮೂರು ಲೋಕಗಳನ್ನು ಸೃಜಿಸು, ಹೀಗೆಂದು ನುಡಿದು ಆಕಾಶವಾಣಿಯು ನಿಂತುಹೋಯಿತು. ಆ ಮಾತನ್ನು ಬ್ರಹ್ಮನು ಕೇಳಿ ಭಯನಿರ್ಮುಕ್ತನಾದನು.

೧೨. ತರುವಾಯ ಕಮಲದಲ್ಲಿ ಜನ್ಮವೆತ್ತಿದ ಬ್ರಹ್ಮದೇವನು ನನಗೆ ಜಗತ್ತನ್ನು ಸೃಷ್ಟಿಮಾಡಲು ಶಕ್ತಿ ಎಲ್ಲಿಯದು? ಹೀಗೆಂದು ತಿಳಿದು ಅವ್ಯಕ್ತನಾದ ಪರಮಾತ್ಮನನ್ನು ಅಂತರಂಗದಲ್ಲಿ ಧ್ಯಾನಿಸುತ್ತ ಉಗ್ರವಾದ ತಪಸ್ಸನ್ನು ಮಾಡಿದನು.

೧೩. ಬ್ರಹ್ಮದೇವನು ಈ ರೀತಿಯಾಗಿ ತಪಸ್ಸನ್ನು ಮಾಡುತ್ತಿರಲು ಹತ್ತು ಸಾವಿರ ವರ್ಷಗಳ ದೀರ್ಘಕಾಲವು ಕಳೆದುಹೋಯಿತು. ಅನಂತರದಲ್ಲಿ ಒಂದು ಸಮಯದಲ್ಲಿ ಬಿಳಿಯ ವರ್ಣದ ರೆಕ್ಕೆ ಮತ್ತು ಗರಿಗಳಿಂದ ಕೂಡಿದ ಒಂದು ಹಂಸಪಕ್ಷಿಯನ್ನು ನೋಡಿದನು.

ದೃಷ್ಟ್ವಾ ಚತುರ್ಮುಖೋ ಹಂಸಮಪೃಚ್ಛತ್ಕೋ ಭವಾನಿತಿ ।
ತಮಬ್ರವೀತ್ತದಾ ರಾಜನ್ ಹಂಸಾಕೃತಿರಧೋಕ್ಷಜಃ ॥ ೧೪ ॥

ಅಹಂ ಪ್ರಸುಪ್ತೋಽಭವಮುಪ್ಸು ಲೋಕಾ-
ನ್ನಿಗೃಹ್ಯ ಕುಕ್ಷೌ ಸ ಚರಾಚರಾನ್ ಪುರಾ ।
ಸ್ವಯೋಗಸೃಷ್ಟಾಮನುಸೃತ್ಯ ನಿದ್ರಾ-
ಮದ್ಯ ಪ್ರಬುದ್ಧೋಽಸ್ಮಿ ಚಿರಾಯ ವಿದ್ವನ್ ॥ ೧೫ ॥

ಸಂಸ್ರಷ್ಟುಕಾಮಂ ಪುನರಾತ್ಮಕುಕ್ಷೇ-
ರ್ಜಗದ್ಯಥಾಪೂರ್ವಮಿದಂ ಸ್ವಯೇಚ್ಛಯಾ ।
ಅನಂತಮವ್ಯಕ್ತಮಜಂ ತ್ವಮದ್ಯ
ಮಾಂ ವಿದ್ಧಿ ನಾರಾಯಣಮಬ್ಜಜನ್ಮನ್ ॥ ೧೬ ॥

ಯದೀಯನಾಭೀಸರಸೀಸಮುದ್ಭವಾ-
ನ್ಮಹಾಂಬುಜಾದಾವಿರಭೂದ್ಭವಾನಿಹ ।

---

೧೪. ಆ ಹಂಸಪಕ್ಷಿಯನ್ನು ನೋಡಿದ ಕೂಡಲೆ ಬ್ರಹ್ಮದೇವನು ಅದನ್ನು ಕುರಿತು ನೀನು ಯಾರೆಂದು ಪ್ರಶ್ನಿಸಿದನು. ರಾಜನೆ! ಆಗ ಹಂಸದ ಮೂರ್ತಿಯನ್ನು ಧರಿಸಿ ಬಂದ ವಿಷ್ಣುಪರಮಾತ್ಮನು ಉತ್ತರಪಿತ್ತನು.

೧೫. ಜ್ಞಾನಿಯೆ! ನಾನು ನನ್ನ ಯೋಗಬಲದಿಂದ ಸೃಜಿಸಿರುವ ಯೋಗ ನಿದ್ರೆಯ ವಶನಾಗಿ ಚರಾಚರಗಳಿಂದ ಕೂಡಿದ ಪ್ರಪಂಚವನ್ನು ನನ್ನ ಕುಕ್ಷಿಯಲ್ಲಿ ಅಡಗಿಸಿಕೊಂಡು ಪೂರ್ವದಲ್ಲಿ ಜಲರಾಶಿಯಲ್ಲಿ ನಿದ್ರೆಮಾಡುತ್ತಿದ್ದೆನು. ಹೀಗೆ ಬಹುಕಾಲ ನಿದ್ರೆಯಿಂದ ಕಳೆದು ಈಗ ಎಚ್ಚರವಾಗಿರುವೆನು.

೧೬. ಕಮಲದಲ್ಲಿ ಹುಟ್ಟಿದ ಬ್ರಹ್ಮದೇವನೆ! ನನ್ನ ಉದರದಲ್ಲಿ ಉಪಸಂಹರಿಸಲ್ಪಟ್ಟ ಪ್ರಪಂಚವನ್ನು ಸ್ವಸಂಕಲ್ಪದಿಂದ ಮೊದಲಿನಂತೆ ಮತ್ತೆ ಉದರದಿಂದ ಹೊರಗೆ ಸೃಷ್ಟಿಮಾಡಲು ಇಷ್ಟವುಳ್ಳವನೂ, ಅಂತವಿಲ್ಲದವನೂ, ಅತೀಂದ್ರಿಯನೂ ಮತ್ತು ಜನ್ಮರಹಿತನೂ ಆದ ನನ್ನನ್ನು ನಾರಾಯಣನೆಂದು ಭಾವಿಸು.

೧೭. ನೀನು ನನ್ನ ಗಂಭೀರವಾದ ನಾಭಿಯೆಂಬ ಸರೋವರದಲ್ಲಿ ಹುಟ್ಟಿದ ಮಹಾಪದ್ಮದಿಂದ ಆವಿರ್ಭಾವವನ್ನು ಹೊಂದಿರುತ್ತೀ. ಚರಾಚರಗಳಿಂದ ಕೂಡಿದ

ಅಹಂ ತ್ರಿಲೋಕ್ಯಾಃ ಸಚರಾಚರಾಯಾಃ
ಸಿಸೃಕ್ಷಯಾ ತ್ವಾಮಸೃಜಂ ಜಗದ್ಗುರುಂ ॥ ೧೭ ॥

ತಪಶ್ಚ ಮತ್ಪ್ರೀತಿಕರಂ ಸುತಪ್ತಂ
ತ್ವಯಾದ್ಯ ಮದ್ಭಕ್ತಿಯುತೇನ ಚೇತಸಾ ।
ಮಯಾ ಪ್ರದತ್ತಂ ತವ ಪಾರಮೇಷ್ಠ್ಯಂ
ಪದಂ ತ್ವದನ್ಯೈರ್ದುರವಾಪಮಗ್ರ್ಯಂ ॥ ೧೮ ॥

ತಸ್ಮಾತ್ ತ್ವಮದ್ಯೈವ ಸೃಜಾಶು ಸರ್ವಂ
ಜಗದ್ಯಥಾಪೂರ್ವಮಿದಂ ಮದಾಜ್ಞಯಾ ।
ಅಥೈವಮುಕ್ತ್ವಾ ಪ್ರದದೌ ಸ ತಸ್ಮೈ
ವೇದಾನನಂತಾನ್ ಹರಿರಂಡಜಾಕೃತಿಃ ॥ ೧೯ ॥

ವಿಜ್ಞಾತವೇದಃ ಕಮಲಾಸನಸ್ತದಾ
ಪ್ರಣಮ್ಯ ಹಂಸಾಕೃತಿಮಪ್ರಮೇಯಂ ।
ತತಸ್ತದಾಜ್ಞಾಂ ಶಿರಸಾ ಪ್ರಗೃಹ್ಯ
ಸ್ರಷ್ಟುಂ ಜಗತ್ಸರ್ವಮಿಯೇಷ ತತ್ಕ್ಷಣಾತ್ ॥ ೨೦ ॥

ಲೋಕತ್ರಯವನ್ನು ಮತ್ತೆ ಸೃಜಿಸಬೇಕೆಂಬ ಕುತೂಹಲದಿಂದ ಜಗದ್ಗುರುವಾದ ನಿನ್ನನ್ನು ಆದಿಯಲ್ಲಿ ಸೃಷ್ಟಿಮಾಡಿರುವೆನು.

೧೮. ನೀನು ನನಗೆ ಪ್ರೀತಿಯನ್ನುಂಟುಮಾಡುವ ತಪಸ್ಸನ್ನು ನನ್ನಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟಿರುವ ಅಂತಃಕರಣದಿಂದ ಮಾಡಿರುತ್ತೀ. ಅದರಿಂದ ಪ್ರಸನ್ನನಾದ ನಾನು ಇತರರಿಗೆ ದುರ್ಲಭವಾದ ಮತ್ತು ಶ್ರೇಷ್ಠವಾದ ಪರಮೇಷ್ಠಿಪದ (ಬ್ರಹ್ಮಪದವಿಯು) ವನ್ನು ಕೊಟ್ಟಿರುವೆನು.

೧೯. ಆದುದರಿಂದ ಈಗ ನೀನು ನನ್ನ ಆಜ್ಞೆಯಂತೆ ಪೂರ್ವದಲ್ಲಿದ್ದಂತೆ ಸಕಲ ಚರಾಚರ ಪ್ರಪಂಚವನ್ನು ಬೇಗ ಸೃಷ್ಟಿಮಾಡು, ಹಂಸಪಕ್ಷಿರೂಪದಿಂದ ಬಂದ ನಾರಾಯಣನು ಈ ರೀತಿಯಾಗಿ ಹೇಳಿದ ತರುವಾಯ ಆ ಬ್ರಹ್ಮದೇವನಿಗೆ ಅನಂತವಾದ ವೇದರಾಶಿಯನ್ನು ಉಪದೇಶಮಾಡಿದನು.

೨೦. ಆಗ ವೇದಾರ್ಥವನ್ನು ತಿಳಿದು ಪೂರ್ವಸೃಷ್ಟಿಕ್ರಮವನ್ನು ಅರಿತುಕೊಂಡಿರುವ ಕಮಲೋದ್ಭವನಾದ ಬ್ರಹ್ಮನು ಪ್ರಮಾಣಾಗೋಚರನೂ ಹಂಸಾಕೃತಿಯಿಂದ ಬಂದಿರುವನೂ ಆದ ಪರಮಾತ್ಮನನ್ನು ನಮಸ್ಕರಿಸಿ ಪರಮಾತ್ಮನ ಆಜ್ಞೆಯನ್ನು ತಲೆ ಬಗ್ಗಿಸಿ ಧರಿಸಿಕೊಂಡವನಾಗಿ ಆ ನಿಮಿಷದಲ್ಲಿ ಸಮಸ್ತ ಜಗತ್ತನ್ನು ಸೃಷ್ಟಿಮಾಡಲು ಇಚ್ಛಿಸಿದನು.

ಅನುಗ್ರಹಾದ್ಧಂಸತನೋರ್ಹರೇರತಿ-
ಪ್ರವೃದ್ಧವಿಜ್ಞಾನಘನಾತ್ಮಶಕ್ತಿಃ ।
ಮೇನೇ ವಿಧಾತಾ ಜಗತಃ ಕೃತಿಂ ತದಾ
ಕರಸ್ಥಜಂಬೂಫಲಸನ್ನಿಕಾಶಾಂ ॥ ೨೧ ॥

ತತೋಽಂತರ್ಹಿತ ಆಕಾಶೇ ಹರೌ ಹಂಸಸ್ವರೂಪಿಣಿ ।
ತೇನಾಧಿಗತವಿಜ್ಞಾನೋ ಬ್ರಹ್ಮಾ ಬ್ರಹ್ಮವಿದಾಂ ವರಃ ॥ ೨೨ ॥

ಸಸೃಜೇ ಸರ್ವಭೂತಾನಿ ಭೂತಾನಾಮಾಶ್ರಯಾನಪಿ ।
ಖಂ ವಾಯುಂ ಜ್ಯೋತಿರುದಕಂ ಭುವಂ ಸರ್ವಾಶ್ರಯಾಮಪಿ ॥ ೨೩ ॥

ರೂಪಾದೀನ್ ವಿಷಯಾಂಶ್ಚೈವ ತಥಾ ಸರ್ವೇಂದ್ರಿಯಾಣಿ ಚ ।
ಮನೋ ಬುದ್ಧಿಮಹಂಕಾರಂ ಧೃತಿಂ ಶ್ರದ್ಧಾಂ ಗುಣಾನಪಿ ॥ ೨೪ ॥

---

೨೧. ಹಂಸಪಕ್ಷಿಯ ವಿಗ್ರಹವನ್ನು ಧರಿಸಿದ ಪರಮಾತ್ಮನ ವೇದೋಪದೇಶ ರೂಪವಾದ ಅನುಗ್ರಹದಿಂದ ವೃದ್ಧಿಯಾದ ವಿಜ್ಞಾನಶಕ್ತಿ ಸಂಪೂರ್ಣನೂ ವಿವಿಧಶಕ್ತಿ ಸಂಪೂರ್ಣನೂ ಆದ ಬ್ರಹ್ಮನು ಮುಂದೆ ಮಾಡಬೇಕಾದ ಸೃಷ್ಟಿಯ ಕ್ರಮವನ್ನು ಕೈಯ್ಯಲ್ಲಿದ್ದ ನೇರಳೆಯ ಹಣ್ಣಿನಂತೆ ಸ್ಫುಟವಾಗಿ ತಿಳಿದುಕೊಂಡನು.

೨೨. ಅನಂತರದಲ್ಲಿ ಹಂಸಪಕ್ಷಿಸ್ವರೂಪನಾದ ಹರಿಯು ಆಕಾಶದಲ್ಲಿ ಅಂತರ್ಧಾನ ಹೊಂದಲಾಗಿ ಹರಿಯ ಉಪದೇಶದಿಂದ ಜ್ಞಾನಸಂಪತ್ತನ್ನು ಆರ್ಜಿಸಿರುವ ಬ್ರಹ್ಮವೇತ್ತರವಲ್ಲಿ ಉತ್ತಮನಾದ ಬ್ರಹ್ಮನು ಸೃಷ್ಟಿಮಾಡಲಾರಂಭಿಸಿದನು.

೨೩. ಹೀಗೆ ಸೃಷ್ಟಿಮಾಡಲು-ಉದ್ಯುಕ್ತನಾದ ಬ್ರಹ್ಮನು ಜಗತ್ತಿನಲ್ಲಿ ಸೇರಿದ ನಿಖಿಲ ಪ್ರಾಣಿಗಳನ್ನೂ ಪ್ರಾಣಿಗಳಿಗೆ ಆಧಾರವಾದ ಕರಚರಣಾದಿಗಳಿಂದ ಕೂಡಿದ ಶರೀರಗಳನ್ನೂ ಆಕಾಶ, ವಾಯು, ಜ್ಯೋತಿ, ಉದಕ ಮತ್ತು ಸರ್ವಕ್ಕೆ ಆಧಾರವಾದ ಭೂಮಿ ಎಂಬ ಪಂಚ ಮಹಾಭೂತಗಳನ್ನೂ ಸೃಷ್ಟಿಮಾಡಿದನು.

೨೪. ಮತ್ತು ರೂಪಾದಿ ವಿಷಯಗಳನ್ನು ಗ್ರಹಿಸುವ ಚಕ್ಷುರಾದಿ ಸಕಲೇಂದ್ರಿಯಗಳನ್ನೂ ಮನಸ್ಸು, ಬುದ್ಧಿ, ಅಹಂಕಾರವೆಂಬ ಅಂತಃಕರಣವನ್ನೂ ಮತ್ತು ಧೃತಿ, ಶ್ರದ್ಧಾ ಮುಂತಾದ ಮಾನಸ ಗುಣಗಳನ್ನೂ ಸೃಷ್ಟಿಮಾಡಿದನು.

ಕಾಲಾನ್ ಕರ್ಮಾಣಿ ಚ ತಥಾ ಭುವನಾನಿ ಚತುರ್ದಶ ।
ತಥಾ ಬ್ರಹ್ಮವಿದೋ ಮುಖ್ಯಾನ್ ಬ್ರಹ್ಮರ್ಷೀನಸೃಜದ್ವಿಭುಃ ॥ ೨೫ ॥

ತತ್ರ ತತ್ರ ಪ್ರಜಾನಾಥಾಂಲ್ಲೋಕಪಾಲಾನ್ ಸಮಂತತಃ ।
ದಿಕ್ಪಾಲಕಾನಪಿ ತಥಾ ವರ್ಣಾಂಶ್ಚೈವಾಽಶ್ರಮಾಂಸ್ತಥಾ ॥ ೨೬ ॥

ದೇವರ್ಷಿಪಿತೃಗಂಧರ್ವಸಿದ್ಧವಿದ್ಯಾಧರೋರಗಾನ್ ।
ದಾನವಾಸುರಭೇತಾಳಯಕ್ಷರಕ್ಷಃಪಿಶಾಚಕಾನ್ ॥ ೨೭ ॥

ಮೃಗಪಕ್ಷಿಮನುಷ್ಯಾಂಶ್ಚ ವೃಕ್ಷಗುಲ್ಮಲತಾ ಅಪಿ ।
ಸರಿತ್ಸಮುದ್ರಶೈಲಾಂಶ್ಚ ಹ್ರದಾಂಶ್ಚ ವಿವಿಧಾನಪಿ ॥ ೨೮ ॥

ದ್ವೀಪಾನ್ ಖಂಡಾಂಶ್ಚ ವಿವಿಧಾನ್ ಕ್ಷೇತ್ರಾಣಿ ವಿವಿಧಾನಿ ಚ ।
ಸಸರ್ಜ ಭಗವಾನ್ ಬ್ರಹ್ಮಾ ಹರೇರಾಜ್ಞಾಯ ಶಾಸನಂ ॥ ೨೯ ॥

---

೨೫. ಸರ್ವಶಕ್ತನಾದ ಬ್ರಹ್ಮನು ಕರ್ಮಾನುಷ್ಠಾನಕ್ಕೆ ಪ್ರಶಸ್ತವಾದ ಕಾಲಾಂಶಗಳನ್ನೂ ಕರ್ಮಗಳನ್ನೂ ಹಾಗೆಯೇ ಹದಿನಾಲ್ಕು ಭುವನಗಳನ್ನೂ ಮತ್ತು ಬ್ರಹ್ಮಜ್ಞಾನಿಗಳಾದ ಅತಿ ಮುಖ್ಯರಾದ ಬ್ರಹ್ಮರ್ಷಿಗಳನ್ನೂ ಸೃಜಿಸಿದನು.

೨೬. ಮತ್ತು ಅಲ್ಲಲ್ಲಿ ಪ್ರಜಾನಾಥರನ್ನೂ ಲೋಕಪಾಲಕರನ್ನೂ ಹಾಗೆಯೇ ದಿಕ್ಪಾಲಕರನ್ನೂ ಮತ್ತು ವರ್ಣ ಆಶ್ರಮಗಳನ್ನೂ ಸುತ್ತಮುತ್ತಲೂ ಕಲ್ಪಿಸಿದನು.

೨೭. ಬ್ರಹ್ಮನು ಮಾಡಿರುವ ಸೃಷ್ಟಿಯಲ್ಲಿ ದಾನವ, ಅಸುರ, ಭೇತಾಳ, ಯಕ್ಷ, ರಕ್ಷ, ಪಿಶಾಚಿ ಮುಂತಾದ ದುಷ್ಟಪ್ರಜೆಗಳೂ ದೇವ, ಋಷಿ, ಪಿತೃ, ಗಂಧರ್ವ. ಸಿದ್ಧ, ವಿದ್ಯಾಧರ, ನಾಗ ಮುಂತಾದ ಸಾಧುಪ್ರಜೆಗಳೂ ಸೇರಿರುವರು

೨೮. ಮತ್ತು ಮೃಗ, ಪಕ್ಷಿ, ಮನುಷ್ಯರನ್ನೂ ವೃಕ್ಷ, ಪೊದೆ, ಲತೆಗಳನ್ನೂ ನದೀ, ಸಮುದ್ರ, ಗಿರಿಗಳನ್ನೂ ವಿವಿಧವಾದ ಹ್ರದಗಳನ್ನೂ ಸೃಷ್ಟಿಮಾಡಿದನು.

೨೯. ಹರಿಯ ಶಾಸನದಿಂದ ಬದ್ಧನಾದ ಪೂಜ್ಯನಾದ ಬ್ರಹ್ಮನು ಅನೇಕ ದ್ವೀಪಗಳನ್ನೂ ಅವುಗಳಲ್ಲಿ ಅನೇಕ ಖಂಡಗಳನ್ನೂ ಮತ್ತು ನಾನಾ ವಿಧವಾದ ಪವಿತ್ರ ಕ್ಷೇತ್ರಗಳನ್ನೂ ಸೃಷ್ಟಿಮಾಡಿದನು.

ಏವಂ ಸೃಷ್ಟ್ವಾ ಜಗತ್ಸರ್ವಂ ಬ್ರಹ್ಮಾ ಬ್ರಹ್ಮವಿದಾಂ ವರಃ ।
ತತಃ ಶಾಂತಮನಾ ಭೂತ್ವಾ ಕಾರ್ಯಶೇಷಮಚಿಂತಯತ್ ॥ ೩೦ ॥

ಹರೇರನುಜ್ಞಯಾ ಸೃಷ್ಟಿರ್ಜಗತೋ ಹಿ ಮಯಾ ಕೃತಾ ।
ಕಥಂ ಭೂಯಾತ್ ಸ್ವರೂಪೇಣ ಹರಿರ್ಮೇ ದೃಷ್ಟಿಗೋಚರಃ ॥ ೩೧ ॥

ಸ ತು ಹಂಸಸ್ವರೂಪೇಣ ಮಯಾ ದೃಷ್ಟಃ ಪುರಾ ಕಿಲ ।
ಧರಣ್ಯಾಂ ನಿಗೃಹೀತಾಯಾಮಸುರೇಣ ಮಯಾ ಸ್ಮೃತಃ ॥ ೩೨ ॥

ತದಾಽಪಿ ಕ್ರೋಡರೂಪೇಣ ಕೇವಲಂ ಹರಿರೀಕ್ಷಿತಃ ।
ಜಾತಮಾತ್ರಂ ವಿಮುಹ್ಯಂತಂ ಭೀತಂ ಪಂಕಜಮಧ್ಯಗಂ ॥ ೩೩ ॥

---

೩೦. ಬ್ರಹ್ಮಜ್ಞಾನಿಗಳಲ್ಲಿ ಉತ್ತಮನಾದ ಬ್ರಹ್ಮನು ಈ ರೀತಿಯಾಗಿ ಸಕಲ ಪ್ರಪಂಚವನ್ನು ಸೃಷ್ಟಿಮಾಡಿ ಕರ್ತವ್ಯವನ್ನು ಸಾಂಗವಾಗಿ ಅನುಷ್ಠಾನಮಾಡಿದ್ದರಿಂದ ಶಾಂತವಾದ ಮಾನಸವುಳ್ಳವನಾಗಿ ಮುಂದೆ ಮಾಡಬೇಕಾಗಿರುವ ಶೇಷಕಾರ್ಯವನ್ನು ಚಿಂತಿಸಿದನು.

೩೧. ಹರಿಯ ಆಜ್ಞಾವಶನಾಗಿ ನಾನು ಈ ಜಗತ್ತಿನ ಸೃಷ್ಟಿಯನ್ನು ಮಾಡಿ ಆಜ್ಞೆಯನ್ನು ಪಾಲಿಸಿರುವೆನು. ನನಗೆ ಶಾಸಕನಾದ ಹರಿಯು ತನ್ನ ಸ್ವರೂಪದಿಂದ ಪ್ರತ್ಯಕ್ಷನಾಗುವುದು ಹೇಗೆ ?

೩೨. ಈ ಜಗತ್ತಿನ ಸೃಷ್ಟಿಯನ್ನು ನಾನು ಮಾಡುವ ಮೊದಲು ಆ ಹರಿಯನ್ನು ಪಕ್ಷಿಸ್ವರೂಪದಿಂದ ಸಾಕ್ಷಾತ್ಕರಿಸಿದೆನು. ಹಿಂದೆ ಹಿರಣ್ಯಾಕ್ಷನೆಂಬ ಅಸುರನಿಂದ ಭೂದೇವಿಯು ಅಪಹರಿಸಲ್ಪಟ್ಟಿರುವಾಗ ನಾನು ಹರಿಯನ್ನು ಧ್ಯಾನಿಸಿದ್ದೆನು.

೩೩. ಆದರೆ ಆಗ ಕೂಡ ವರಾಹಮೂರ್ತಿಯ ರೂಪದಿಂದ ನಾನು ಹರಿಯನ್ನು ಕಂಡಿರುವೆನು. ಸ್ವ ಸ್ವರೂಪದಿಂದ ಹರಿಯ ಸಾಕ್ಷಾತ್ಕಾರವು ನನಗೆ ದೊರೆತಿರುವುದಿಲ್ಲ. ಪೂರ್ವದಲ್ಲಿ ಆ ಹರಿಯ ನಾಭಿಕಮಲದಲ್ಲಿ ಜನ್ಮವನ್ನೆತ್ತಿದ ಕ್ಷಣದಲ್ಲಿ ನಾನು ಅತಿಭೀತನೂ ಮತ್ತು ಭ್ರಾಂತನೂ ಆಗಿದ್ದೆನು.

ಮಾಮಾಶ್ವಾಸಯದವ್ಯಕ್ತೋ ವಾಙ್ಮಾತ್ರೇಣೈವ ಯಃ ಪುರಾ ।
ದತ್ವಾ ಮೇ ಮಹತೀಂ ಶಕ್ತಿಂ ವೇದಾಂಶ್ಚೋಪದಿದೇಶ ಯಃ ॥ ೩೪ ॥

ತಮದ್ಯ ದೇವದೇವೇಶಂ ಶಂಖಚಕ್ರಗದಾಧರಂ ।
ಪೀತಾಂಬರಧರಂ ವಿಷ್ಣುಂ ದ್ರಷ್ಟುಮಿಚ್ಛತಿ ಮೇ ಮನಃ ॥ ೩೫ ॥

ಯಾವನ್ನ ಪಶ್ಯಾಮಿ ಹರಿಂ ವರದಂ ವಾರಿಜೇಕ್ಷಣಂ ।
ಶ್ರೀವತ್ಸಲಾಂಛನಂ ತಾವನ್ನ ಮೇ ಶಾಂತಿರ್ಭವಿಷ್ಯತಿ ॥ ೩೬ ॥

ಯಾವನ್ನ ಪದ್ಮನಯನಂ ಪಶ್ಯಾಮಿ ಶುಭಕುಂಡಲಂ ।
ಉನ್ನಸಂ ಚಾರುದಶನಂ ಬಿಂಬೋಷ್ಠಂ ಸುಸ್ಮಿತಾಧರಂ ॥ ೩೭ ॥

---

೩೪. ಆ ಸಮಯದಲ್ಲಿ ಅವ್ಯಕ್ತನಾದ ವಿಷ್ಣುಪರಮಾತ್ಮನು ಮೂರ್ತಿಯನ್ನು ಧರಿಸಿ ಪ್ರತ್ಯಕ್ಷನಾಗದೆ ಆಕಾಶವಾಣಿಯ ರೂಪದಿಂದ ನನ್ನನ್ನು ಸಮಾಧಾನಮಾಡಿದನು. ಮತ್ತು ನನಗೆ ಅಸಾಧಾರಣವಾದ ಮಹಾಶಕ್ತಿಯನ್ನು ಕೊಟ್ಟು ವೇದಗಳನ್ನು ಉಪದೇಶಮಾಡಿದನು.

೩೫. ಅಂತಹ ದೇವೋತ್ತಮನೂ, ಶಂಖ, ಚಕ್ರ, ಗದೆಗಳನ್ನು ಭುಜಗಳಲ್ಲಿ ಧರಿಸಿದವನೂ ಮತ್ತು ಪೀತಾಂಬರವನ್ನು ಉಟ್ಟವನೂ ಆದ ಪರಮಾತ್ಮನನ್ನು ನೋಡಲು ನನ್ನ ಮನಸ್ಸು ಅಪೇಕ್ಷಿಸುತ್ತಿರುವುದು.

೩೬. ಭಕ್ತರಿಗೆ ವರದಾನಮಾಡುವ, ಕಮಲದಂತೆ ನೇತ್ರಗಳುಳ್ಳ, ಮತ್ತು ಶ್ರೀವತ್ಸವೆಂಬ ಲಾಂಛನವುಳ್ಳ ಹರಿಯನ್ನು ನಾನು ಸಾಕ್ಷಾತ್ಕರಿಸುವವರೆಗೂ ನನ್ನ ಮನಸ್ಸಿಗೆ ಶಾಂತಿಯಿಲ್ಲ.

೩೭. ಪದ್ಮದಂತೆ ಕಣ್ಣುಗಳಿಂದ ಪ್ರಕಾಶಿಸುವ, ಮಂಗಲಕರವಾದ ಕುಂಡಲಗಳಿಂದ ಕೂಡಿದ ಉನ್ನತವಾದ ನಾಸಿಕೆಯುಳ್ಳ, ಸುಂದರವಾದ ದಂತಗಳುಳ್ಳ, ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಗಳುಳ್ಳ, ಮತ್ತು ಮಂದಹಾಸದಿಂದ ಕೂಡಿದ ಕೆಳತುಟಿಯುಳ್ಳ ವಿಷ್ಣುವನ್ನು ನಾನು ಸಾಕ್ಷಾತ್ಕರಿಸುವವರೆಗೆ ನನಗೆ ಶಾಂತಿಯಿಲ್ಲವು.

ಚಾಲಲೋಲಗುಡಾಕೇಶೈರಾವೃತಂ ಚಂದ್ರಸನ್ನಿಭಂ ।
ಮುಕುಂದಸ್ಯ ಮುಖಂ ತಾವನ್ನ ಮೇ ಶಾಂತಿರ್ಭವಿಷ್ಯತಿ ॥ ೩೮ ॥

ಯದಾ ಪಶ್ಯಾಮಿ ಲೋಕೇಶಂ ದಿವ್ಯರೂಪಿಣಮಚ್ಯುತಂ ।
ತದಾ ಮೇ ಮನಸಃ ಶಾಂತಿರ್ಭವಿಷ್ಯತಿ ನ ಸಂಶಯಃ ॥ ೩೯ ॥

ಶಂಖಚಕ್ರಗದಾಪಾಣಿಂ ಯೋಗಿಧ್ಯೇಯಂ ನಿರಂಜನಂ ।
ಅಪಶ್ಯತೋ ಮತ್ಪಿತರಂ ಕಾ ಶಾಂತಿರ್ಹೃದಯಸ್ಯ ಮೇ ॥ ೪೦ ॥

ಶ್ರೀಭೂಮಿಸಹಿತಂ ಶಾಂತಂ ವರದಂ ಭಕ್ತವತ್ಸಲಂ ।
ತಸ್ಮಾದ್ಯಜ್ಞೇನ ವಾ ಸಮ್ಯಕ್ ಸಂಪೂಜ್ಯ ತಪಸಾಽಪಿ ವಾ ॥ ೪೧ ॥

---

೩೮. ಎಳೆಯದಾಗಿಯೂ ಮತ್ತು ಚಂಚಲವಾಗಿಯೂ ಇರುವ ಕೂದಲುಗಳಿಂದ ಆವರಿಸಲ್ಪಟ್ಟ ಚಂದ್ರನಂತೆ ಸುಂದರವಾದ ಮುಕುಂದನ ಮುಖವನ್ನು ನಾನು ಎದುವರೆಗೂ ನೋಡುವುದಿಲ್ಲವೋ ಅದುವರೆಗೆ ನನಗೆ ಮನಃಶಾಂತಿಯಿಲ್ಲವು.

೩೯. ಸಕಲ ಲೋಕ ನಿಯಾಮಕನೂ, ದಿವ್ಯವಾದ ರೂಪವನ್ನು ಧರಿಸಿದವನೂ ಆದ ಅಚ್ಯುತನನ್ನು ನಾನು ಎಂದು ಸಾಕ್ಷಾತ್ಕಾರಮಾಡುವೆನೋ ಆಗ ನನ್ನ ಮಾನಸವು ಶಾಂತಿಯಿಂದಿರುವುದು. ಇದರಲ್ಲಿ ಸಂಶಯವಿಲ್ಲ.

೪೦. ಶಂಖ, ಚಕ್ರ, ಗದೆಗಳಿಂದ ಅಲಂಕರಿಸಲ್ಪಟ್ಟ ಹಸ್ತಗಳುಳ್ಳ, ಯೋಗಿಗಳಿಂದ ಧ್ಯಾನಿಸಲ್ಪಡುವ, ನಿರ್ದೋಷಿಯಾದ ಮತ್ತು ನನ್ನ ಜನಕನಾದ ವಿಷ್ಣು ಪರಮಾತ್ಮನನ್ನು ನೋಡುವವರೆಗೆ ನನ್ನ ಹೃದಯಕ್ಕೆ ಶಾಂತಿ ಎಲ್ಲಿಯದು?

೪೧. ಶ್ರೀ ದೇವಿ ಭೂದೇವಿಯರಿಂದ ಸಹಿತನೂ, ಶಾಂತನೂ, ವರದಾನ ಮಾಡುವವನೂ, ಮತ್ತು ಭಕ್ತರಲ್ಲಿ ಪ್ರೇಮವನ್ನಿಟ್ಟವನೂ, ಆದ ವಿಷ್ಣುವನ್ನು ಸಾಕ್ಷಾತ್ಕರಿಸಲು ಯಜ್ಞದಿಂದಲಾಗಲಿ ತಪಸ್ಸಿನಿಂದಾಗಲಿ ಉತ್ತಮವಾದ ಆರಾಧನೆಯನ್ನು ಕೈಗೊಳ್ಳುವೆನು.

ವಾಸುದೇವಂ ಪ್ರಪಶ್ಯಾಮಿ ನಾನ್ಯಥಾ ತು ಕಥಂ ಚನ ।
ಇತಿ ನಿಶ್ಚಿತ್ಯ ಮನಸಾ ಪದ್ಮಯೋನಿಃ ಪುರಾ ನೃಪ ॥ ೪೨ ॥

ಸ್ವಲೋಕಂ ಸಂಪರಿತ್ಯಜ್ಯ ಸತ್ಯಾಖ್ಯಮಮರೈಃ ಸಹ ।
ಭೂಮಿಂ ಪ್ರತ್ಯಾಗತಃ ಶ್ರೀಮಾನ್ ಕ್ಷಿಪ್ರಂ ಕರ್ಮಫಲಪ್ರದಾಂ ॥ ೪೩ ॥

ವಾಸುದೇವಪ್ರಿಯಾಂ ದೇವೀಂ ಮನ್ಯಮಾನಃ ಸ್ವಮಾತರಂ ।
ಜಂಬೂದ್ವೀಪೇ ಮಹಾಪುಣ್ಯೇ ಖಂಡೇ ಭಾರತಸಂಜ್ಞಕೇ ॥ ೪೪ ॥

ಸಂಪಶ್ಯನ್ ವಿವಿಧಾನ್ ದೇಶಾನ್ ತತ್ರ ತತ್ರ ಮನೋಹರಾನ್ ।
ಕ್ರಮೇಣ ಯಮುನಾತೀರಮಾಜಗಾಮ ಪಿತಾಮಹಃ ॥ ೪೫ ॥

ತತ್ರ ದೃಷ್ಟ್ವಾ ಶುಭಂ ಕ್ಷೇತ್ರಂ ಪುಣ್ಯೋಪವನಶೋಭಿತಂ ।
ಅತ್ರೈವ ಹಯಮೇಧೇನ ಯಕ್ಷ್ಯಾಮಿ ಪುರುಷೋತ್ತಮಂ ॥ ೪೬ ॥

---

೪೨. ರಾಜನೆ! ಪದ್ಮದಲ್ಲಿ ಹುಟ್ಟಿದ ಬ್ರಹ್ಮನು ಪೂರ್ವಕಾಲದಲ್ಲಿ ಮೇಲೆ ಹೇಳಿದ ಯಾವುದಾದರೊಂದು ವಿಧಾನದಿಂದ ವಿಷ್ಣುವನ್ನು ಸಾಕ್ಷಾತ್ಕರಿಸುವೆನೆಂದೂ ಪರಮಾತ್ಮಸಾಕ್ಷಾತ್ಕಾರವಿಲ್ಲದೆ ಇರಲಾರೆನೆಂದೂ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು.

೪೩. ಬ್ರಹ್ಮಲೋಕದಲ್ಲಿದ್ದ ಬ್ರಹ್ಮನು ಈ ರೀತಿಯಾಗಿ ನಿಶ್ಚಯಿಸಿದ ಮೇಲೆ ದೇವತೆಗಳೊಂದಿಗೆ ತನ್ನ ಸತ್ಯಲೋಕವನ್ನು ಬಿಟ್ಟು ಬೇಗ ಕರ್ಮಫಲದ ಸಿದ್ಧಿಯನ್ನು ಉಂಟುಮಾಡುವ ಭೂಮಿಗೆ ಬಂದನು.

೪೪. ಶ್ರೀಮನ್ನಾರಾಯಣನ ಪತ್ನಿಯಾದ ಲಕ್ಷ್ಮೀದೇವಿಯನ್ನು ಜನನಿಯೆಂದು ಭಾವಿಸಿ ಭೂಲೋಕಕ್ಕೆ ಇಳಿದು ಬಂದು ಮಹಾ ಪವಿತ್ರವಾದ ಜಂಬೂದ್ವೀಪದಲ್ಲಿ ಭರತಖಂಡವೆಂಬ ಹೆಸರುಳ್ಳ ಖಂಡದಲ್ಲಿ ವಾಸಮಾಡಿದನು.

೪೫. ಬ್ರಹ್ಮದೇವನು ಆಯಾಯ ಸ್ಥಳಗಳಲ್ಲಿ ಮನೋರಂಜಕವಾದ ವಿವಿಧ ದೇಶಗಳನ್ನು ಸಂದರ್ಶನಮಾಡುತ್ತ ಕಾಲಕ್ರಮದಿಂದ ಯಮುನಾ ನದಿಯ ತೀರಕ್ಕೆ ಬಂದನು.

೪೬. ಅಲ್ಲಿ ಪವಿತ್ರವಾದ ಉಪವನಗಳಿಂದ ಶೋಭಿಸಲ್ಪಟ್ಟ ಮಂಗಲಕರಕ್ಷೇತ್ರವನ್ನು ನೋಡಿ ಈ ಸ್ಥಳದಲ್ಲಿಯೇ ಅಶ್ವಮೇಧಯಾಗವನ್ನು ಆಚರಿಸಿ ಪುರುಷೋತ್ತಮನಾದ ಮಹಾವಿಷ್ಣುವನ್ನು ಆರಾಧಿಸುವೆನು, ಎಂದು ನಿಶ್ಚಯಿಸಿದನು.

ಇತಿ ನಿಶ್ಚಿತ್ಯ ಮನಸಾ ಬ್ರಹ್ಮಾ ಬ್ರಹ್ಮರ್ಷಿಭಿಃ ಸಹ ।
ಕಾಲಿಂದ್ಯಾಶ್ಚೋತ್ತರೇ ತೀರೇ ಯಜ್ಞಭೂಮಿಮಕಲ್ಪಯತ್ ॥ ೪೭ ॥

ಕೃತ್ವಾ ತು ಯಜ್ಞಸಂಭಾರಾನ್ ಯಷ್ಟುಂ ಸಮುಪಚಕ್ರಮೇ ।
ತತ್ರ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೪೮ ॥

ದ್ರಷ್ಟುಂ ಪೈತಾಮಹಂ ಯಜ್ಞಂ ಸಮವೇತಾ ಹಿ ಸರ್ವಶಃ ।
ತತ್ರ ಯಜ್ಞೋಽಪಿ ವವೃಧೇ ಬಹ್ವನ್ನೋ ಭೂರಿದಕ್ಷಿಣಃ ॥ ೪೯ ॥

ಉತ್ತಮೋಽನುಪಮೋ ಲೋಕೇಷ್ವಾಶ್ಚರ್ಯಾನಂದವರ್ಧನಃ ।
ಪಿತಾಮಹಸ್ಯ ದೇವಸ್ಯ ಕೇಶವಂ ದ್ರಷ್ಟುಮಿಚ್ಛತಃ ॥ ೫೦ ॥

ತತೋ ಯಜ್ಞೇ ಸಮಾಪ್ತೇ ತು ಕೃತ್ವಾಽವಭೃಥಮಜ್ಜನಂ ।
ಚಿಂತಯಾಮಾಸ ಲೋಕೇಶಃ ಕೇಶವಂ ನಾವಲೋಕಯನ್ ॥ ೫೧ ॥

---

೪೭. ಬ್ರಹ್ಮನು ಬ್ರಹ್ಮರ್ಷಿಗಳ ಸಂಗಡ ಈ ರೀತಿಯಾಗಿ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಯಮುನಾನದಿಯ ಉತ್ತರ ತೀರದಲ್ಲಿ ಅಶ್ವಮೇಧಯಾಗಕ್ಕೆ ಅನುಕೂಲವಾದ ಯಜ್ಞಭೂಮಿಯನ್ನು ಕಲ್ಪಿಸಿದನು.

೪೮. ಮತ್ತು ಯಜ್ಞಕ್ಕೆ ಬೇಕಾದ ಸಕಲ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಯಾಗಮಾಡಲು ಉಪಕ್ರಮಮಾಡಿದನು. ಆಗ ಆ ಯಜ್ಞಶಾಲೆಯಲ್ಲಿ ದೇವತೆಗಳು, ಗಂಧರ್ವರು, ಸಿದ್ಧರು ಮತ್ತು ಮಹರ್ಷಿಗಳು ಅನೇಕರು ಸೇರಿದ್ದರು.

೪೯. ಮೇಲೆ ಹೇಳಿದಂತೆ ದೇವಾದಿಗಳನೇಕರು ಬ್ರಹ್ಮನು ಮಾಡುವ ಅತಿ ವೈಭವದ ಯಜ್ಞವನ್ನು ನೋಡಲು ಯಜ್ಞಶಾಲೆಯಲ್ಲಿ ಸೇರಿದರು. ಆಗಅಲ್ಲಿ ಅನ್ನದಾನ, ದಕ್ಷಿಣಾದಾನಗಳ ವಿಜೃಂಭಣೆಯಿಂದ ಕೂಡಿ ಯಜ್ಞವು ಅತಿ ವೈಭವದಿಂದ ಬೆಳೆಯಿತು.

೫೦. ವಿಷ್ಣುವನ್ನು ಸಾಕ್ಷಾತ್ಕರಿಸಲು ಕುತೂಹಲವುಳ್ಳವನಾದ ಬ್ರಹ್ಮದೇವನ ಆ ಯಜ್ಞವು ಬಹು ಉತ್ತಮವೂ, ನಿರುಪಮವೂ, ಲೋಕಕ್ಕೆಲ್ಲ ಆಶ್ಚರ್ಯ ಮತ್ತು ಆನಂದಗಳನ್ನುಂಟುಮಾಡುವುದೂ ಆಗಿತ್ತು.

೫೧. ಆ ಮೇಲೆ ಆ ಯಜ್ಞವು ಸಮಾಪ್ತಿಹೊಂದಲಾಗಿ ಅಂತ್ಯದಲ್ಲಿ ಮಾಡಬೇಕಾದ ಅವಭೃಥಸ್ನಾನವನ್ನು ಮಾಡಿ ಲೋಕೇಶ್ವರನಾದ ಬ್ರಹ್ಮನು ತನ್ನ ಇಷ್ಟದಂತೆ ವಿಷ್ಣು ಸಾಕ್ಷಾತ್ಕಾರವನ್ನು ಪಡೆಯದೆ ಚಿಂತಿಸಿದನು.

ಯದೇಕೇನಾಶ್ವಮೇಧೇನ ಹರಿರ್ನಾವೇಕ್ಷಿತೋ ಮಯಾ ।
ತಚ್ಛತಂ ಚಾಶ್ವಮೇಧಾನಾಂ ಕರ್ತವ್ಯಂ ವಿಷ್ಣುತುಷ್ಟಯೇ ॥ ೫೨ ॥

ಇತಿ ನಿಶ್ಚಿತ್ಯ ಮನಸಾ ಧಾತಾ ವಿಷ್ಣುಮನುಸ್ಮರನ್ ।
ಶತಾಶ್ವಮೇಧಾನಾಜಹ್ರೇ ತತ್ರೈವ ಯಮುನಾತಟೇ ॥ ೫೩ ॥

ಪ್ರಕೃಷ್ಟೈರಶ್ವಮೇಧೈರ್ಯದಯಜತ್ಕಮಲಾಸನಃ ।
ತಸ್ಮಾತ್ಸ ದೇಶೋ ವಿಖ್ಯಾತಃ ಪ್ರಯಾಗ ಇತಿ ಪುಣ್ಯದಃ ॥ ೫೪ ॥

ಏವಂ ಪ್ರಯಜತಸ್ತಸ್ಯ ಹರೇರ್ದರ್ಶನಕಾಂಕ್ಷಯಾ ।
ಬ್ರಹ್ಮಣಃ ಪ್ರತ್ಯಗಾದ್ರಾಜನ್ ವತ್ಸರಾಣಾಂ ಶತಂ ತದಾ ॥ ೫೫ ॥

ಕೃತೇಷು ಚಾಶ್ವಮೇಧಾನಾಂ ಶತೇಷು ವಿಧಿನಾ ನೃಪ ।
ನೈವ ಪ್ರಾದುರಭೂದ್ವಿಷ್ಣುಸ್ತಸ್ಮಿನ್ ಕ್ಷೇತ್ರೇ ತು ಯಾಮುನೇ ॥ ೫೬ ॥

---

೫೨. ಈಗ ನಾನು ಒಂದು ಅಶ್ವಮೇಧಯಾಗವನ್ನು ಮಾಡಿದ ಮಾತ್ರದಿಂದ ನನಗೆ ಹರಿಯ ಸಾಕ್ಷಾತ್ಕಾರ ದೊರೆಯದಿರುವುದರಿಂದ ವಿಷ್ಣು ಪ್ರಸಾದಕ್ಕೋಸ್ಕರ ನೂರು ಅಶ್ವಮೇಧಯಾಗಗಳನ್ನು ಆಚರಿಸಬೇಕು.

೫೩. ಹೀಗೆಂದು ಪಿತಾಮಹನಾದ ಬ್ರಹ್ಮನು ಮನಸ್ಸಿನಲ್ಲಿ ನಿಶ್ಚಯಿಸಿ ವಿಷ್ಣು ವನ್ನು ಸ್ಮರಿಸುತ್ತ ಅದೇ ಯಮುನಾತೀರದಲ್ಲಿ ಮತ್ತೆ ಒಂದು ನೂರು ಅಶ್ವಮೇಧ ಯಾಗಗಳನ್ನು ಆಚರಿಸಿದನು.

೫೪. ಕಮಲವೇ ಆಸನವಾಗಿ ಉಳ್ಳ ಬ್ರಹ್ಮನು ಆ ದೇಶದಲ್ಲಿ ಪ್ರಕೃಷ್ಟವಾದ ಅಶ್ವಮೇಧಯಾಗವೆಂಬ ಸತ್ಕರ್ಮಗಳನ್ನು ಮಾಡಿರುವುದರಿಂದ ಆ ಪವಿತ್ರ ದೇಶವು ಪ್ರಯಾಗವೆಂದು ಪ್ರಸಿದ್ಧವಾಯಿತು.

೫೫. ರಾಜನೆ! ಬ್ರಹ್ಮನು ಹರಿಯ ದರ್ಶನದ ಅಭಿಲಾಷೆಯಿಂದ ಮಹತ್ತರ ವಾದ ಯಾಗಗಳನ್ನು ಕೈಗೊಂಡಿರಲು ನೂರು ವರ್ಷಗಳು ಯಜ್ಞಾನುಷ್ಠಾನದಿಂದ ಕಳೆದುಹೋದುವು.

೫೬. ನೃಪತಿಯೆ! ಬ್ರಹ್ಮನು ಒಂದು ನೂರು ಅಶ್ವಮೇಧಯಾಗಗಳನ್ನು ಆಚರಿಸಿದರೂ ಯಮುನಾನದಿಯ ಆ ಕ್ಷೇತ್ರದಲ್ಲಿ ವಿಷ್ಣುವು ಪ್ರಾದುರ್ಭವಿಸಿ ದರ್ಶನ ವನ್ನು ಕೊಡಲಿಲ್ಲ.

ತತಃ ಸ ಚಿಂತಯಾಮಾಸ ಬ್ರಹ್ಮಾ ಕಮಲಸಂಭವಃ ।
ಅಶ್ವಮೇಧ ಶತೇನಾಪಿ ನೈವಾದ್ರಾಕ್ಷಮಹಂ ವಿಭುಂ ॥ ೫೭ ॥

ಇಹ ವಿಷ್ಣುರ್ನ ತುಷ್ಟೋಽಭೂದಶ್ವಮೇಧೈರ್ಮಯಾ ಕೃತೈಃ ।
ತಸ್ಮಾದಿಹಾದ್ಯ ತಪಸಾ ತೋಷಯಿಷ್ಯಾಮಿ ಕೇಶವಂ ॥ ೫೮ ॥

ಯಾವತ್ಪ್ರತುಷ್ಟೋ ಭಗವಾನ್ ಭೂಯಾನ್ಮೇ ದೃಷ್ಟಿಗೋಚರಃ ।
ತಾವತ್ತಪಃ ಪ್ರತಪ್ಸ್ಯಾಮಿ ನ್ಯರ್ಬುದಾನ್ಯಪಿ ವತ್ಸರಾನ್ ॥ ೫೯ ॥

ಇತಿ ನಿಶ್ಚಿತ್ಯ ಮನಸಾ ತಪಸ್ತಪ್ತುಂ ಪಿತಾಮಹಃ ।
ದೀಕ್ಷಾಂ ವರ್ಷಸಹಸ್ರಸ್ಯ ಕೃತ್ವಾ ತಪ ಉಪಾರಮತ್ ॥ ೬೦ ॥

ಧ್ಯಾತ್ವಾ ನಾರಾಯಣಂ ದೇವಂ ಪ್ರಾಣಾನಾಯಮ್ಯ ವಾಗ್ಯತಃ ।
ಹೃತ್ಪುಂಡರೀಕಮಧ್ಯಸ್ಥಂ ಯೋಗಿಧ್ಯೇಯಂ ನಿರಂಜನಂ ॥ ೬೧ ॥

---

೫೭. ಕಮಲಪುಷ್ಪದಲ್ಲಿ ಉತ್ಪನ್ನನಾದ ಬ್ರಹ್ಮನು ಶತ ಅಶ್ವಮೇಧಗಳನ್ನು ಆಚರಿಸಿದರೂ ಸರ್ವ ನಿಯಾಮಕನಾದ ಹರಿಯನ್ನು ಸಾಕ್ಷಾತ್ಕರಿಸಲಿಲ್ಲವೆಂದು ಮತ್ತೆ ಚಿಂತಿಸಲಾರಂಭಿಸಿದನು.

೫೮. ಈ ದೇಶದಲ್ಲಿ ಮಾಡಿದ ಅಶ್ವಮೇಧಯಾಗಗಳಿಂದ ವಿಷ್ಣುವು ಪ್ರಸನ್ನನಾಗಲಿಲ್ಲ. ಆದಕಾರಣದಿಂದ ಈಗ ಈ ಸ್ಥಳದಲ್ಲಿಯೇ ತಪಸ್ಸನ್ನು ಮಾಡಿ ವಿಷ್ಣುವನ್ನು ಸಂತೋಷಪಡಿಸುವೆನು.

೫೯. ಭಗವಂತನಾದ ವಿಷ್ಣುಪರಮಾತ್ಮನು ಎಷ್ಟು ಕಾಲದಲ್ಲಿ ನನ್ನ ತಪಸ್ಸಿನಿಂದ ತುಷ್ಟನಾಗಿ ಪ್ರತ್ಯಕ್ಷನಾಗಿ ಆವಿರ್ಭವಿಸುವನೋ, ನ್ಯರ್ಬುದ ವರ್ಷಗಳಷ್ಟು ದೀರ್ಘ ಕಾಲವಾದರೂ ನಾನು ಬಿಡದೇ ತಪಸ್ಸನ್ನು ಆಚರಿಸುವೆನು.

೬೦. ಬ್ರಹ್ಮನು ಹೀಗೆಂದು ಮನದಲ್ಲಿ ನಿಶ್ಚಯಿಸಿ ಒಂದು ಸಹಸ್ರ ವರ್ಷಗಳವರೆಗೆ ತಪಸ್ಸನ್ನು ಆಚರಿಸಬೇಕೆಂಬ ಸಂಕಲ್ಪದಿಂದ ಆದಿಯಲ್ಲಿ ದೀಕ್ಷೆಯನ್ನು ಸ್ವೀಕರಿಸಿ ತಪವನ್ನು ಆಚರಿಸಿದನು.

೬೧. ಹೃದಯ ಕಮಲದ ಮಧ್ಯದಲ್ಲಿ ವಾಸಮಾಡುವ ಯೋಗಿಗಳಿಂದ ಧ್ಯಾನಿಸಲ್ಪಡುವ ಮತ್ತು ನಿರ್ದೋಷನಾದ ನಾರಾಯಣನನ್ನು ಧ್ಯಾನಿಸಿ ಪ್ರಾಣಾಯಾಮವಿಧಿಯಿಂದ ಪ್ರಾಣವ್ಯಾಪಾರವನ್ನು ನಿಗ್ರಹಿಸಿ ಮೌನ ಮುಂತಾದ ನಿಯಮಗಳನ್ನು ಸೇವಿಸಿದನು.

ನಿಮೀಲಿತಾಕ್ಷಃ ಸತತಂ ತತಾಪ ತಪ ಉತ್ತಮಂ ।
ತತ್ರಾಬ್ದಾನಾಂ ಶತಂ ರಾಜನ್ನಭೂತ್ಸಂತಪ್ಯತೋ ವಿಧೇಃ ॥ ೬೨ ॥

ತತೋ ದೃಷ್ಟ್ವಾಽಬ್ಜಯೋನಿಂ ತಂ ತಪ್ಯಂತಂ ಪರಮಂ ತಪಃ ।
ಅಂತರಿಕ್ಷಾದುವಾಚೇದಂ ವಾಣೀ ಭಾಗವತೀ ಕಿಲ ॥ ೬೩ ॥

ಭೋ ಭೋ ಬ್ರಹ್ಮನ್ನಿಬೋಧೇದಂ ವಚನಂ ಯದ್ಬ್ರವೀಮಿ ತೇ ।
ತಪಶ್ಚ ಸುಮಹತ್ತಪ್ತಂ ಯಜ್ಞಾಶ್ಚೈವ ಕೃತಾಸ್ತ್ವಯಾ ॥ ೬೪ ॥

ದೇಶೋಽಯಂ ಪುಣ್ಯದೋ ನೃಣಾಂ ಪ್ರಯಾಗಾಽಖ್ಯಃ ಕೃತಸ್ತ್ವಯಾ ।
ತಥಾಽಪ್ಯತ್ರ ತಪೋಯೋಗೈರ್ಯಜ್ಞೈರ್ವಾ ಸುಕೃತೈರಪಿ ॥ ೬೫ ॥

ನೈವ ತುಷ್ಟಿಂ ಗಮಿಷ್ಯಾಮಿ ನ ಚ ದಾಸ್ಯಾಮಿ ತೇ ವರಂ ।
ಸಹಸ್ರೇಣಾಶ್ವಮೇಧಾನಾಂ ಯದಾ ಯಷ್ಟಾಽಸಿ ಸುವ್ರತ ॥ ೬೬ ॥

---

೬೨. ಯಾವಾಗಲೂ ನೇತ್ರಗಳನ್ನು ಮುಚ್ಚಿಕೊಂಡು ಉತ್ತಮವಾದ ತಪಸ್ಸನ್ನು ಆಚರಿಸಿದನು. ರಾಜನೆ! ಈ ರೀತಿಯಾಗಿ ಬ್ರಹ್ಮನು ತಪಸ್ಸನ್ನು ಆಚರಿಸುತ್ತಿರಲು ಮತ್ತೆ ಒಂದು ನೂರು ವರ್ಷಗಳ ದೀರ್ಘಕಾಲವು ಕಳೆಯಿತು.

೬೩. ಅನಂತರದಲ್ಲಿ ಕಮಲಪುಷ್ಪದಲ್ಲಿ ಸಂಭೂತನಾದ ಮತ್ತು ದುಷ್ಕರವಾದ ತಪಸ್ಸನ್ನು ಆಚರಿಸುತ್ತಿದ್ದ ಬ್ರಹ್ಮನನ್ನು ಕುರಿತು ಆಕಾಶದಿಂದ ಭಗವಂತನ ವಾಣಿಯು ಆಕಾಶವಾಣಿಯ ರೂಪದಿಂದ ನುಡಿಯಿತು.

೬೪. ಎಲೈ ಬ್ರಹ್ಮನೇ! ನಿನಗೆ ಉಪದೇಶಮಾಡುವ ಈ ನನ್ನ ವಚನವನು ಕೇಳು. ಉತ್ತಮ ಫಲಾಭಿಲಾಷೆಯಿಂದ ದೀರ್ಘಕಾಲ ಮಹಾ ತಪಸ್ಸನ್ನು ಮಾಡಿರುವೆ, ಮತ್ತು ಅಶ್ವಮೇಧಯಾಗಗಳನ್ನು ಅನುಷ್ಠಾನಮಾಡಿರುವೆ.

೬೫. ನೀನು ಈ ಸ್ಥಳದಲ್ಲಿ ಅಂತಹ ಸತ್ಕರ್ಮಗಳನ್ನು ಮಾಡಿದ್ದರಿಂದ ಈ ದೇಶವನ್ನು ಪ್ರಯಾಗವೆಂಬ ಹೆಸರಿನ ಪವಿತ್ರದೇಶವನ್ನಾಗಿ ಮಾಡಿರುತ್ತೀ. ಆದರೆ ಈ ಸ್ಥಳದಲ್ಲಿ ನೀನು ತಪಸ್ಸು, ಯಜ್ಞ ಅಥವಾ ಮತ್ತೆ ಯಾವುದಾದರೂ ಸುಕೃತವನ್ನು ಮಾಡಿದರೂ ನಾನು ತೃಪ್ತನಾಗದಿರುವುದರಿಂದ ನಿನ್ನ ಇಷ್ಟವಾದ ವರವನ್ನು ಕೊಡುವುದಿಲ್ಲ

೬೬. ಆದರೆ ನಿಯಮ ಪರಿಶುದ್ಧನಾದ ಬ್ರಹ್ಮನೆ! ನೀನು ಸಹಸ್ರ ಅಶ್ವಮೇಧ ಯಾಗಗಳನ್ನು ಯಾವಾಗ ಮಾಡುತ್ತೀಯೋ. ಆಗ ನಿನ್ನ ಇಷ್ಟವನ್ನು ಹೊಂದುತ್ತೀ.

ತದಾ ತೇ ದರ್ಶಯಿಷ್ಯಾಮಿ ಸ್ವರೂಪಂ ನಿರ್ಗುಣಂ ವಿಧೇ ।
ಶಂಖಚಕ್ರಧರಂ ದಿವ್ಯಂ ಚಿದಾನಂದಮಯಂ ಶುಭಂ ॥ ೬೭ ॥

ಸಹಸ್ರಮಶ್ವಮೇಧಾನಾಂ ದುಷ್ಕರಂ ಭವತಾ ಕಿಲ ।
ತಸ್ಮಾತ್ತ್ವೇಽಹಂ ಪ್ರವಕ್ಷ್ಯಾಮಿ ಮಮ ದರ್ಶನಮಿಚ್ಛತಃ ॥ ೬೮ ॥

ಯತ್ರೈಕಸ್ಯೈಕಾಶ್ವಮೇಧೇನ ಭವಾನ್ ಸಾಹಸ್ರಕೃದ್ಭವೇತ್ ।
ಯತ್ರಾಹಂ ಸಹಿತೋ ದೇವ್ಯಾ ನಿವಸಾಮ್ಯನಿಶಂ ವಿಧೇ ॥ ೬೯ ॥

ಯತ್ರ ಭೂಃ ಸಂವೃತಾ ಪೂರ್ವಂ ಮಯಾ ಸೂಕರಮೂರ್ತಿನಾ ।
ಯತ್ರೈಕೋಽಪಿ ಕೃತೋ ಧರ್ಮೋ ವರ್ಧತೇ ಚ ಸಹಸ್ರಶಃ ॥ ೭೦ ॥

ತತ್ ಕ್ಷೇತ್ರಂ ಪಾವನಂ ಪುಣ್ಯಂ ನಾಮ್ನಾ ಸತ್ಯವ್ರತಂ ಶುಭಂ ।
ಅಸ್ತಿ ಚೈತಸ್ಯ ದೇಶಸ್ಯ ಭವತಾ ನಿರ್ಮಿತಸ್ಯ ಹಿ ॥ ೭೧ ॥

---

೬೭. ಬ್ರಹ್ಮನೇ! ಸಹಸ್ರ ಅಶ್ವಮೇಧಯಾಗಗಳನ್ನು ಆಚರಿಸಿದ ಕೂಡಲೇ ಶಂಖ, ಚಕ್ರಾದಿಗಳನ್ನು ಧರಿಸಿರುವ, ಚಿದಾನಂದಸ್ವರೂಪನಾದ, ಮತ್ತು ಮಂಗಳಕರವಾದ ನನ್ನ ನಿರ್ಗುಣ ಸ್ವರೂಪವನ್ನು ತೋರಿಸುವೆನು.

೬೮. ಆದರೆ ಹಾಗೆ ಸಹಸ್ರ ಅಶ್ವಮೇಧಯಾಗಗಳನ್ನು ಆಚರಿಸುವುದು ನಿನಗೆ ಅಶಕ್ಯವು. ನನ್ನ ದರ್ಶನವನ್ನು ಕುತೂಹಲದಿಂದ ಆಶಿಸುತ್ತಿರುವ ನಿನಗೆ ಒಂದು ಸುಲಭೋಪಾಯ ಗರ್ಭಿತವಾದ ವಚನವನ್ನು ಹೇಳುತ್ತೇನೆ, ಕೇಳು.

೬೯. ಬ್ರಹ್ಮನೆ! ಯಾವ ಸ್ಥಳದಲ್ಲಿ ನೀನು ಒಂದು ಅಶ್ವಮೇಧಯಾಗವನ್ನು ಅನುಷ್ಠಾನಮಾಡಿದ್ದರಿಂದ ಸ್ಥಳ ಮಹಿಮೆಯಿಂದ ಸಹಸ್ರ ಅಶ್ವಮೇಧಗಳ ಫಲವನ್ನು ಹೊಂದಬಹುದೋ, ಮತ್ತು ಯಾವ ಪವಿತ್ರ ಸ್ಥಳದಲ್ಲಿ ಲಕ್ಷ್ಮೀದೇವಿಯೊಡನೆ ನಾನು ಸಂತತವೂ ವಾಸಮಾಡುವೆನೊ!

೭೦. ಯಾವ ಸ್ಥಳದಲ್ಲಿ ಪೂರ್ವದಲ್ಲಿ ವರಾಹಾವತಾರ ಸಮಯದಲ್ಲಿ ಭೂಮಿಯು ವರಾಹಮೂರ್ತಿಯಾದ ನನ್ನಿಂದ ಉದ್ಧರಿಸಲ್ಪಟ್ಟಿತೋ, ಯಾವ ಸ್ಥಳದಲ್ಲಿ ಒಂದು ಧರ್ಮವು ಕೂಡ ಸಹಸ್ರ ಗುಣವಾಗಿ ವೃದ್ಧಿಹೊಂದುವುದೋ,

೭೧. ಅಂತಹ ಪಾವನವೂ, ಪುಣ್ಯಕರವೂ, ಮತ್ತು ಮಂಗಲಕರವೂ ಆದ ಸತ್ಯವ್ರತವೆಂಬ ಒಂದು ಕ್ಷೇತ್ರಸ್ಥಳವು ನಿನ್ನಿಂದ ನಿರ್ಮಿತನಾದ ಈ ದೇಶದ ಸಮೀಪದಲ್ಲಿರುವುದು.

ಪ್ರಯಾಗಾಖ್ಯಸ್ಯ ಚಾಗ್ನೇಯೇ ದೇಶೇ ಕ್ರೋಶಸಹಸ್ರಕೇ ।
ತದುತ್ತಮಂ ಹಿ ಕ್ಷೇತ್ರಾಣಾಂ ಯತೋ ಮತ್ಪ್ರೀತಿವರ್ಧನಂ ॥ ೨೨ ॥

ತತ್ರ ಗತ್ವಾಽಶ್ವಮೇಧೇನ ಯಜ ಮಾಂ ಕಮಲೋದ್ಭವ ।
ತತ್ರಾಸ್ತಿ ಹಸ್ತಿಶೈಲಾಖ್ಯೋ ಗಿರಿರ್ಮತ್ಪ್ರೀತಿವರ್ಧನಃ ॥ ೨೩ ॥

ಗುಹಾಯಾಂ ತಸ್ಯ ಶೈಲಸ್ಯ ನಿವಸಾಮ್ಯನಿಶಂ ಯತಃ ।
ತಸ್ಮಾನ್ಮಮ ಪ್ರೀತಿಕರಂ ಕ್ಷೇತ್ರಂ ಸತ್ಯವ್ರತಾಭಿಧಂ ॥ ೨೪ ॥

ತತ್ರೈಕೇನಾಶ್ವಮೇಧೇನ ಸುಕೃತೇನ ತ್ವಯಾ ವಿಧೇ ।
ಪ್ರಸನ್ನೋಽಹಂ ಭವಿಷ್ಯಾಮಿ ತವ ನಾಸ್ತ್ಯತ್ರ ಸಂಶಯಃ ॥ ೨೫ ॥

ತಸ್ಮಾದ್ಗತ್ವಾ ತ್ವಮದ್ಯೈವ ಕ್ಷೇತ್ರಂ ಸತ್ಯವ್ರತಂ ವಿಧೇ ।
ಅಶ್ವಮೇಧಂ ಕುರು ಕ್ಷಿಪ್ರಮಿತ್ಯುಕ್ತ್ವಾ ವಿರರಾಮ ಹ ॥ ೨೬ ॥

---

೨೨. ನೀನು ನಿರ್ಮಿಸಿರುವ ಈ ಪ್ರಯಾಗಕ್ಷೇತ್ರದಿಂದ ಆಗ್ನೇಯ ದಿಕ್ಕಿನಲ್ಲಿ ಸಾವಿರ ಹರದಾರಿಯ ದೂರದಲ್ಲಿ ಆ ಸತ್ಯವ್ರತಕ್ಷೇತ್ರವು ಇರುವುದು. ಅದು ನನಗೆ ಪ್ರೀತಿಯನ್ನು ವೃದ್ಧಿಪಡಿಸುವುದರಿಂದ ಕ್ಷೇತ್ರಗಳಲ್ಲಿ ಅತ್ಯುತ್ತಮವಾದುದು.

೨೩. ಕಮಲದಲ್ಲಿ ಉತ್ಪತ್ತಿಯುಳ್ಳ ಬ್ರಹ್ಮನೇ! ಆ ಸತ್ಯವ್ರತಕ್ಷೇತ್ರಕ್ಕೆ ಹೋಗಿ ಅಶ್ವಮೇಧಯಾಗದಿಂದ ನನ್ನನ್ನು ಪೂಜಿಸು. ಅಲ್ಲಿ ನನ್ನ ಪ್ರೀತಿಯನ್ನು ವೃದ್ಧಿಪಡಿಸುವ ಹಸ್ತಿಶೈಲವೆಂಬ ಪರ್ವತವು ಇರುವುದು.

೨೪. ಆ ಹಸ್ತಿಶೈಲದ ಗವಿಯಲ್ಲಿ ನಾನು ಸಂತತವೂ ವಾಸಮಾಡುವುದರಿಂದ ಸತ್ಯವ್ರತವೆಂಬ ಹೆಸರುಳ್ಳ ಆ ಕ್ಷೇತ್ರವು ಅತ್ಯಂತವಾಗಿ ನನಗೆ ಪ್ರಿಯವಾದುದು.

೨೫. ಬ್ರಹ್ಮನೆ! ಅಲ್ಲಿ ನಿನ್ನಿಂದ ಮಾಡಲ್ಪಟ್ಟ ಒಂದು ಅಶ್ವಮೇಧಯಾಗದಿಂದ ನಾನು ಪ್ರಸನ್ನನಾಗುವೆನು. ಈ ವಿಷಯದಲ್ಲಿ ಸಂದೇಹವಿಲ್ಲ.

೨೬. ಬ್ರಹ್ಮದೇವನೆ! ಆದುದರಿಂದ ಈಗಲೇ ನೀನು ಸತ್ಯವ್ರತಕ್ಷೇತ್ರಕ್ಕೆ ಹೋಗಿ ಬೇಗ ಅಶ್ವಮೇಧಯಾಗವನ್ನು ಆಚರಿಸು, ಎಂಬುದಾಗಿ ಆಕಾಶವಾಣಿಯು ಹೇಳಿ ಸುಮ್ಮನಾಯಿತು.

ತತ್ರಾಂತರಿಕ್ಷಾದುದಿತಂ ಹರೇರ್ವಚಃ
ಶ್ರುತ್ವಾಽಬ್ಜಯೋನಿಃ ಪರಮಪ್ರಹೃಷ್ಟಃ ।
ನತ್ವಾ ಹರಿಂ ತೀರ್ಥವರಾತ್ಪ್ರಯಾಗಾತ್
ಸತ್ಯವ್ರತಂ ಕ್ಷೇತ್ರಮಿಯೇಷ ಗಂತುಂ ॥ ೭೭ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ನವಮೋಽಧ್ಯಾಯಃ

---

೭೭. ಅಲ್ಲಿ ಆಕಾಶವಾಣಿಯ ರೂಪವಾಗಿ ಬಂದ ಹರಿಯ ವಚನವನ್ನು ಬ್ರಹ್ಮನು ಕೇಳಿ ಅತ್ಯಂತ ಸಂತುಷ್ಟನಾಗಿ ಹರಿಯನ್ನು ಮನಸ್ಸಿನಿಂದ ನಮಸ್ಕರಿಸಿ ಆ ಪ್ರಯಾಗನೆಂಬ ಉತ್ತಮಕ್ಷೇತ್ರದಿಂದ ಸತ್ಯವ್ರತ ಕ್ಷೇತ್ರಕ್ಕೆ ಹೋಗಲು ಅಪೇಕ್ಷಿಸಿದನು.

ಕಾಂಚೀಮಾಹಾತ್ಮ್ಯದಲ್ಲಿ ನವಮೋಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ದಶಮೋಽಧ್ಯಾಯಃ

ನಾರದ ಉವಾಚ:—

ಹರೇರನುಜ್ಞಾಮಾಜ್ಞಾಯ ಬ್ರಹ್ಮಾ ಬ್ರಹ್ಮವಿದಾಂ ವರಃ ।
ವಿಮಾನವರಮಾರುಹ್ಯ ಬ್ರಹ್ಮರ್ಷಿಗಣಸೇವಿತಃ ॥ ೧ ॥

ಸಂಸ್ತೂಯಮಾನೋ ವಿಬುಧೈರ್ಯಯೌ ಸತ್ಯವ್ರತಂ ಪ್ರತಿ ।
ಸಂವೀಜ್ಯಮಾನೋ ವಿಬುಧೈಶ್ಚಾಮರೈರ್ವ್ಯಜನೈರಪಿ ॥ ೨ ॥

ಭೇರೀಮೃದಂಗಪಟಹಪಣವಾನಕವಾದಕೈಃ ।
ಗಂಧರ್ವಾಪ್ಸರಸಾಂ ಸಂಘೈಃ ಸಮಂತಾತ್ ಸಂವೃತೋ ಯಯೌ ॥ ೩ ॥

೧-೨. ನಾರದಮುನಿಯು ಹೀಗೆ ಹೇಳಿದನು :—ಬ್ರಹ್ಮಜ್ಞಾನಿಗಳಲ್ಲಿ ಗಣ್ಯನಾದ ಬ್ರಹ್ಮನು ಈ ರೀತಿಯಾಗಿ ಹರಿಯ ಅನುಜ್ಞೆಯನ್ನು ತೆಗೆದುಕೊಂಡು ಅನೇಕ ಬ್ರಹ್ಮರ್ಷಿಗಳ ವೃಂದದಿಂದ ಸತ್ಕರಿಸಲ್ಪಟ್ಟವನಾಗಿ ಶ್ರೇಷ್ಠವಾದ ವಿಮಾನವನ್ನು ಆರೋಹಣ ಮಾಡಿ ಆ ವಿಮಾನದಲ್ಲಿ ಅನೇಕ ದೇವತೆಗಳಿಂದ ಚಾಮರಗಳಿಂದಲೂ ಬೀಸಣಿಗೆಗಳಿಂದಲೂ ಗಾಳಿ ಬೀಸಲ್ಪಟ್ಟವನಾಗಿ ಇತರ ದೇವತೆಗಳಿಂದ ಸ್ತುತಿಸಲ್ಪಡುತ್ತ ಸತ್ಯವ್ರತಕ್ಷೇತ್ರಕ್ಕೆ ಪ್ರಯಾಣ ಮಾಡಿದನು.

೩. ಅವನು ಪ್ರಯಾಣಮಾಡುವಾಗ ವಿಮಾನದಲ್ಲಿದ್ದ ದಿವ್ಯೋಪಭೋಗವು ನಿರುಪಮವಾಗಿತ್ತು. ಅದಾವುದೆಂದರೆ ಭೇರಿ, ಮೃದಂಗ, ಪಟಹ, ಪಣವ, ಆನಕ, ಗೋಮುಖ- ಮುಂತಾದ ವಾದ್ಯಗಳನ್ನು ಧ್ವನಿ ಮಾಡುತ್ತಿರುವ ಗಂಧರ್ವರಿಂದಲೂ ಅಪ್ಸರಸ್ತ್ರೀಯರಿಂದಲೂ ಪರಿವೃತನಾಗಿ ಪ್ರಯಾಣಮಾಡಿದನು.

ಸ ತು ಗತ್ವಾ ಮಹಾರಾಜ ಕ್ಷೇತ್ರಂ ಸತ್ಯವ್ರತಂ ತದಾ ।
ದದರ್ಶ ತತ್ರ ಪುಣ್ಯಾನಿ ವನಾನ್ಯುಪವನಾನಿ ಚ ॥ ೪ ॥

ದಶಯೋಜನವಿಸ್ತಾರಂ ದಶಯೋಜನಮಾಯತಂ ।
ಪರಿತೋ ಹಸ್ತಿಶೈಲಸ್ಯ ಬಹುವೃಕ್ಷಲತಾಯುತಂ ॥ ೫ ॥

ಪುಣ್ಯದ್ವಿಜಸಮಾಕೀರ್ಣಂ ಮೃಗಯೂಥೈರಲಂಕೃತಂ ।
ಮಯೂರಹಂಸಭ್ರಮರನತ್ಯೂಹಕುಲನಾದಿತೈಃ ॥ ೬ ॥

ಸರ್ವರ್ತುಕುಸುಮೋಪೇತೈಃ ಫಲವದ್ಭಿಶ್ಚ ಪಾದಪೈಃ ॥
ಸಂವೃತಂ ಸರ್ವತೋ ರಮ್ಯಂ ಮಂದಾನಿಲನಿಷೇವಿತಂ ॥ ೭ ॥

ಕ್ಷೇತ್ರಂ ನೇತ್ರಮನಃಕಾಂತಂ ದದರ್ಶ ಕಮಲಾಸನಃ ।
ತತ್ರ ಹಸ್ತಿಗಿರಿಂ ದೃಷ್ಟ್ವಾ ದೃಷ್ಟ್ವಾ ವಾರಾಹಪಲ್ವಲಂ ॥ ೮ ॥

---

೪. ಮಹಾರಾಜನೆ! ಹೀಗೆ ಬ್ರಹ್ಮನು ಸತ್ಯವ್ರತಕ್ಷೇತ್ರಕ್ಕೆ ಹೋಗಿ ಆಗ ಅಲ್ಲಿರುವ ಪವಿತ್ರವಾದ ವನಗಳನ್ನೂ ಉಪವನಗಳನ್ನೂ ನೋಡಿದನು.

೫. ಆ ಸತ್ಯವ್ರತಕ್ಷೇತ್ರವು ಹತ್ತು ಯೋಜನ ವಿಸ್ತಾರವೂ ಹತ್ತು ಯೋಜನ ದೀರ್ಘವೂ ಆಗಿ ಅನೇಕ ವೃಕ್ಷ ಲತೆಗಳಿಂದ ಶೋಭಿತವಾಗಿ ಹಸ್ತಿಶೈಲದ ಸುತ್ತಲೂ ವ್ಯಾಪಿಸಿಕೊಂಡಿದ್ದಿತು.

೬. ಆ ಕ್ಷೇತ್ರವು ಅನೇಕ ವಿಪ್ರರಿಂದ ವ್ಯಾಪ್ತವಾಗಿಯೂ ಅನೇಕ ಪ್ರಾಣಿಗಳಿಂದ ಅಲಂಕರಿಸಲ್ಪಟ್ಟಿರುವುದಾಗಿಯೂ ಮತ್ತು ಮಯೂರ, ಹಂಸ, ಭ್ರಮರ, ನತ್ಯೂಹ ಮುಂತಾದ ಪಕ್ಷಿವೃಂದದ ಧ್ವನಿಯಿಂದ ಕೂಡಿರುವುದಾಗಿಯೂ ಇತ್ತು.

೭. ಸರ್ವ ಋತುಗಳಲ್ಲಿ ಆಗುವ ಅಸಾಧಾರಣ ಪುಷ್ಪಗಳಿಂದ ಮತ್ತು ಫಲಗಳಿಂದ ಕೂಡಿದ ವೃಕ್ಷಗಳಿಂದ ಶೋಭಿತವೂ ಮತ್ತು ಮಂದಮಾರುತದ ಸೌಭಾಗ್ಯವುಳ್ಳದ್ದೂ ಆಗಿ ಆ ಕ್ಷೇತ್ರವು ಅತಿ ರಮಣೀಯವಾಗಿತ್ತು.

೮. ಕಮಲಾಸನನಾದ ಬ್ರಹ್ಮನು ನಯನೇಂದ್ರಿಯಕ್ಕೂ ಅಂತಃಕರಣಕ್ಕೂ ಆಕರ್ಷಕವಾದ ಆ ಕ್ಷೇತ್ರವನ್ನು ನೋಡಿದನು. ಮತ್ತು ಅಲ್ಲಿ ಹಸ್ತಿ ಗಿರಿಯನ್ನೂ ವಾರಾಹ ಸರೋವರವನ್ನೂ ಸಂದರ್ಶಿಸಿದನು.

ಗುಹಾಯಾಂ ಹಸ್ತಿಶೈಲಸ್ಯ ದೃಷ್ಟ್ವಾ ನರಹರಿಂ ತದಾ ।
ಪ್ರಣಮ್ಯ ಸಹಿತೋ ದೇವೈರ್ನನಂದ ಚತುರಾನನಃ ॥ ೯ ॥

ತತಃ ಶೈಲಂ ಸಮಾರುಹ್ಯ ವೀಕ್ಷಮಾಣಃ ಸಮಂತತಃ ।
ಇದಂ ಸತ್ಯವ್ರತಂ ಕ್ಷೇತ್ರಂ ವಿಷ್ಣೋಃ ಪ್ರೀತಿಕರಂ ಪರಂ ॥ ೧೦ ॥

ಅತ್ರೈವ ಹಯಮೇಧೇನ ಯಕ್ಷ್ಯಾಮಿ ಪುರುಷೋತ್ತಮಂ ।
ಇತಿ ನಿಶ್ಚಿತ್ಯ ಮನಸಾ ತೈಶ್ಚ ಬ್ರಹ್ಮರ್ಷಿಭಿಃ ಸಹ ॥ ೧೧ ॥

ವಿಶ್ವಕರ್ಮಾಣಮಾಹೂಯ ತತೋ ವಚನಮಬ್ರವೀತ್ ।
ವಿಶ್ವಕರ್ಮನ್ ಕುರು ಕ್ಷಿಪ್ರಂ ಪುರೀಮತ್ರ ಮಹಾವನೇ ॥ ೧೨ ॥

ಸಪ್ತಯೋಜನವಿಸ್ತಾರಾಂ ಸಮಂತಾದಸ್ಯ ಭೂಭೃತಃ ।
ದೇವದಾನವಗಂಧರ್ವಮನುಷ್ಯೋರಗರಕ್ಷಸಾಂ ॥ ೧೩ ॥

---

೯. ಅಲ್ಲಿಂದ ಮುಂದೆ ಚತುರ್ಮುಖನಾದ ಬ್ರಹ್ಮನು ಆಗ ಹಸ್ತಿಗಿರಿಯ ಗುಹೆಯಲ್ಲಿದ್ದ ನರಸಿಹ್ಮಸ್ವಾಮಿಯನ್ನು ಸಕಲ ದೇವತೆಗಳೊಂದಿಗೆ ನಮಸ್ಕರಿಸಿ ಅತ್ಯಾನಂದ ಭರಿತನಾದನು.

೧೦. ಅನಂತರದಲ್ಲಿ ಆ ಗಿರಿಯನ್ನು ಆರೋಹಣಮಾಡಿ ಸುತ್ತಲೂ ನೋಡುತ್ತ ಬ್ರಹ್ಮನು ಈ ಸತ್ಯವ್ರತಕ್ಷೇತ್ರವು ವಿಷ್ಣುವಿನ ಪ್ರೀತಿಯನ್ನು ಸಂಪಾದಿಸುವ ಉತ್ತಮವಾದ ಕ್ಷೇತ್ರವು, ಮುಂತಾಗಿ ಮನಸ್ಸಿನಲ್ಲಿ ಯೋಚಿಸಿದನು.

೧೧. ಈ ಪವಿತ್ರಸ್ಥಳದಲ್ಲಿಯೇ ಪುರುಷೋತ್ತಮನ ಪ್ರೀತಿಗೋಸ್ಕರ ಅಶ್ವಮೇಧಯಾಗವನ್ನು ನೆರವೇರಿಸುತ್ತೇನೆ. ಹೀಗೆಂದು ಬ್ರಹ್ಮರ್ಷಿಗಳ ಸಂಗಡ ಮನಸ್ಸಿನಲ್ಲಿ ನಿಶ್ಚಯಿಸಿದನು.

೧೨. ಮತ್ತು ಅದರ ಸಾಮಗ್ರಿಯನ್ನು ಸಿದ್ಧಪಡಿಸಲೋಸ್ಕರ ವಿಶ್ವಕರ್ಮದೇವನನ್ನು ಕರೆದು ಈ ರೀತಿಯಾಗಿ ಅಪ್ಪಣೆಯಿತ್ತನು. ವಿಶ್ವಕರ್ಮನೆ! ಈ ಮಹಾವನದಲ್ಲಿ ಒಂದು ದೊಡ್ಡ ನಗರವನ್ನು ಬೇಗ ನಿರ್ಮಾಣಮಾಡು.

೧೩. ದೇವತೆಗಳು, ದಾನವರು, ಗಂಧರ್ವರು, ಮನುಷ್ಯರು, ಸರ್ಪಗಳು ಮತ್ತು ರಾಕ್ಷಸರು, ವಾಸಮಾಡಲು ತಕ್ಕ ಏಳು ಯೋಜನ ವಿಸ್ತಾರವುಳ್ಳ ನಗರಿಯನ್ನು ಈ ಪರ್ವತದ ಸುತ್ತಲೂ ಸೃಷ್ಟಿಮಾಡು.

ಬ್ರಾಹ್ಮಣಾನಾಮೃಷೀಣಾಂ ಚ ನಿವಾಸಾಯ ಕ್ಷಿತಾವಿಹ ।
ತೇಷಾಮಪಿ ಚ ಸರ್ವೇಷಾಂ ಯೇ ಸೃಷ್ಟಾ ಜಂತವೋ ಮಯಾ ॥ ೧೪ ॥

ತ್ರೈಲೋಕ್ಯಾಂತಃಸ್ಥಿತಾನ್ ಸರ್ವಾನ್ ಸಮಾನಯ ಮದಾಜ್ಞಯಾ ।
ತೇಷಾಮಪಿ ಚ ಸರ್ವೇಷಾಮನ್ನಾನಿ ಗುಣವಂತಿ ಚ ॥ ೧೫ ॥

ಬ್ರಾಹ್ಮಣಾನಾಂ ವಿಶೇಷೇಣ ಭಕ್ಷ್ಯೈರುಚ್ಚಾವಚೈಃ ಸಹ ।
ಸಂಸೃಜ್ಯತಾಂ ಕಾಮಧೇನ್ವಾ ಯಸ್ಯ ಯಸ್ಯ ಯಥೇಪ್ಸಿತಂ ॥ ೧೬ ॥

ಹಸ್ತಿಶೈಲಸ್ಯ ಪರಿತೋ ಯಜ್ಞಭೂಮಿರ್ವಿಧೀಯತಾಂ ।
ಶಾಲಾಂ ತತ್ರ ವಿಶಾಲಾಂ ಚ ಪಂಚಕ್ರೋಶಾಯತಾಂ ಕುರು ॥ ೧೭ ॥

ವೇದಿಂ ಚ ಹಸ್ತಿಶೈಲಾಗ್ರೇ ವಿಶಾಲಾಂ ಶುಭಲಕ್ಷಣಾಂ ।
ವಾಸ್ತುಭೂತಬಲಿಂ ಕೃತ್ವಾ ತಥಾ ತ್ರೈಯಂಬಕಂ ಬಲಿಂ ॥ ೧೮ ॥

---

೧೪. ಮತ್ತು ಅನೇಕ ಬ್ರಾಹ್ಮಣರು, ಮಹರ್ಷಿಗಳು ಅಥವಾ ಈ ಭೂಮಿಯಲ್ಲಿ ನಾನು ಸೃಷ್ಟಿಸಿರುವ ಸಕಲ ಜಂತುಗಳು ಈ ಎಲ್ಲರು ವಾಸಮಾಡುವ ಸೌಕರ್ಯದಿಂದ ಆ ನಗರಿಯು ಕೂಡಿಕೊಂಡಿರಬೇಕು.

೧೫. ಲೋಕತ್ರಯದಲ್ಲಿ ವಾಸವಾಗಿರುವವರೆಲ್ಲರನ್ನೂ ನನ್ನ ಆಜ್ಞಾನುಸಾರವಾಗಿ ಇಲ್ಲಿಗೆ ಕರೆದುಕೊಂಡು ಬಾ. ಮತ್ತು ಅವರೆಲ್ಲರಿಗೆ ಯೋಗ್ಯವೂ ಮತ್ತು ಉತ್ತಮ ಗುಣಗಳಿಂದ ಕೂಡಿದುದೂ ಆದ ಅನ್ನರಾಶಿಯನ್ನು ಸೃಜಿಸು.

೧೬. ಬ್ರಾಹ್ಮಣರಿಗೆ ಅಪೇಕ್ಷಿಸುವ ನಾನಾವಿಧವಾದ ಭಕ್ಷ್ಯಭೋಜ್ಯಗಳನ್ನೂ ಮತ್ತು ಯಾರಿಗೆ ಯಾವಯಾವುದು ಅಪೇಕ್ಷಿತವೋ, ಅದೆಲ್ಲವನ್ನೂ ಕಾಮಧೇನುವಿನಿಂದ ಸೃಷ್ಟಿಯಾಗುವಂತೆ ಮಾಡು.

೧೭. ಹಸ್ತಿಪರ್ವತದ ಸುತ್ತಲೂ ಯಜ್ಞಭೂಮಿಯು ಮಾಡಲ್ಪಡಲಿ. ಆ ಪ್ರದೇಶದಲ್ಲಿ ಐದು ಹರದಾರಿಯಷ್ಟು ದೀರ್ಘವೂ ಮತ್ತು ವಿಶಾಲವೂ ಆದ ಯಾಗಶಾಲೆಯನ್ನು ಕಲ್ಪಿಸು.

೧೮. ಮತ್ತು ಹಸ್ತಿಶೈಲದ ಅಗ್ರದಲ್ಲಿ ವಿಶಾಲವೂ ಶುಭಕರವಾದ ಲಕ್ಷಣಗಳಿಂದ ಶೋಭಿತವೂ ಆದ ವೇದಿಕೆಯನ್ನು ಮಾಡು. ಅದಿಯಲ್ಲಿ ತ್ರಿಯಂಬಕದೇವತೆಗೆ ಬಲಿದಾನ ಮಾಡುವುದರ ಪೂರ್ವಕವಾಗಿ ವಾಸ್ತುಭೂತಕ್ಕೆ ಬಲಿದಾನವನ್ನು ನೆರವೇರಿಸು.

ಯಥಾ ಹ್ಯವಿಘ್ನೋ ಭೂಯಾನ್ಮೇ ವಾಜಿಮೇಧಃ ಕ್ರತೂತ್ತಮಃ ।
ತಥಾ ವತ್ಸ ಕುರು ಕ್ಷಿಪ್ರಂ ಪುರೀಂ ಚಾನುಪಮಾಮಿಹ ॥ ೧೯ ॥

ಇತಿ ತಕ್ಷಂ ಸಮಾದಿಶ್ಯ ವಿಶ್ವಕರ್ಮಾಣಮಬ್ಜಭೂಃ ।
ಅವತೀರ್ಯಾಚಲಾತ್ತಸ್ಮಾದೃಷಿಸಂಘೈಃ ಸಮಾವೃತಃ ॥ ೨೦ ॥

ಉಪಾವಿಶಚ್ಛುಭೇ ದೇಶೇ ಶೇಷಕಾಸಾರಪಶ್ಚಿಮೇ ।
ತತ್ರೇಷ್ಟಿಂ ವಿಧಿವತ್ ಕೃತ್ವಾ ರಕ್ಷಾಮಶ್ವಸ್ಯ ಚಾಕರೋತ್ ॥ ೨೧ ॥

ದತ್ವಾ ಗಾ ಅಪಿ ವಿಪ್ರೇಭ್ಯೋ ಮುಮೋಚಾಶ್ವಂ ಸುಲಕ್ಷಣಂ ।
ಆದ್ಯರ್ತೌ ಪ್ರಥಮೇ ಮಾಸಿ ರಾಕಾಯಾಮಿಂದುವಾಸರೇ ॥ ೨೨ ॥

ಯಜ್ಞಾರ್ಥಮೃಷಿಭಿಃ ಸಾರ್ಧಮಶ್ವೋ ಮುಕ್ತಃ ಸ್ವಯಂಭುವಾ ।
ತದಾಽಶ್ವಮನ್ವಗಾದ್ರಾಜನ್ ಮಹೇಂದ್ರಃ ಪಾಕಶಾಸನಃ ॥ ೨೩ ॥

---

೧೯. ವತ್ಸನಾದ ವಿಶ್ವಕರ್ಮನೆ! ನನ್ನ ಉತ್ತಮವಾದ ಅಶ್ವಮೇಧಕ್ರತುವು ಹೇಗೆ ನಿರ್ವಿಘ್ನವಾಗಿ ಸಮಾಪ್ತಿಯನ್ನು ಹೊಂದಬಹುದೋ, ಆರೀತಿಯಾಗಿ ಎಲ್ಲವನ್ನೂ ಬೇಗ ಸಿದ್ಧಪಡಿಸು, ಮತ್ತು ನಿರುಪಮವಾದ ನಗರಿಯನ್ನು ನಿರ್ಮಾಣಮಾಡು.

೨೦. ಕಮಲದಲ್ಲಿ ಉತ್ಪನ್ನನಾದ ಬ್ರಹ್ಮನು ವಿಶ್ವಕರ್ಮನೆಂಬ ದೇವತಕ್ಷನಿಗೆ ಆಜ್ಞೆಯನ್ನು ಕೊಟ್ಟು ಮಹರ್ಷಿಸಂಘದಿಂದ ಸುತ್ತುವರಿಯಲ್ಪಟ್ಟವನಾಗಿ ಆ ಶೈಲದಿಂದ ಕೆಳಗೆ ಇಳಿದನು.

೨೧. ಆ ಕ್ಷೇತ್ರದಲ್ಲಿ ಅನಂತಸರೋವರದ ಪಶ್ಚಿಮಭಾಗದಲ್ಲಿರುವ ಶುಭಾಸ್ಪದವಾದ ಪ್ರದೇಶದಲ್ಲಿ ಕುಳಿತುಕೊಂಡು ವಿಧಿಪೂರ್ವಕವಾಗಿ ಒಂದು ಇಷ್ಟಿಯನ್ನು ಮಾಡಿ ಯಜ್ಞದ ಅಶ್ವಕ್ಕೆ ರಕ್ಷೆಯನ್ನು ಕಟ್ಟಿದನು.

೨೨. ಬ್ರಾಹ್ಮಣರಿಗೆ ಗೋವುಗಳನ್ನು ದಾನಮಾಡಿ ಶುಭಲಕ್ಷಣಗಳಿಂದ ಕೂಡಿದ ಅಶ್ವವನ್ನು ವಸಂತಋತುವಿನಲ್ಲಿ ಚೈತ್ರಮಾಸದ ಪೂರ್ಣಿಮಾತಿಥಿಯಿಂದ ಕೂಡಿದ ಸೋಮವಾರದಲ್ಲಿ ದಿಗ್ವಿಜಯಕ್ಕೆ ಬಿಟ್ಟನು.

೨೩. ಅನೇಕ ಋಷಿಗಳ ಸಂಗಡ ಯಜ್ಞಕ್ಕೋಸ್ಕರ ಬ್ರಹ್ಮನು ಅಶ್ವವನ್ನು ಬಿಟ್ಟನು. ರಾಜನೆ! ಆಗ ಆ ಅಶ್ವವನ್ನು ರಕ್ಷಿಸಲು ಪಾಕಾಸುರನನ್ನು ನಿಗ್ರಹಮಾಡಿದ ಮಹೇಂದ್ರನು ಹಿಂಬಾಲಿಸಿ ಹೋದನು

ಲಬ್ಧ್ವಾ ಬ್ರಹ್ಮಣ ಆದೇಶಂ ದೇವೈಃ ಸಹ ಮಹರ್ಷಿಭಿಃ ।
ಜುಹ್ವನ್ ಪದೇ ಪದೇಽಶ್ವಸ್ಯ ತತ್ರೈವಾಸೀಚ್ಚತುರ್ಮುಖಃ ॥ ೨೪ ॥

ಧ್ಯಾಯನ್ ಹೃದಾ ಜಗನ್ನಾಥಂ ಶಂಖಚಕ್ರಗದಾಧರಂ ।
ಬ್ರಹ್ಮಣಾ ಚ ಸಮಾಜ್ಞಪ್ತೋ ವಿಶ್ವಕರ್ಮಾ ಪ್ರಣಮ್ಯ ತಂ ॥ ೨೫ ॥

ನಿರ್ಮಮೇಽಥ ಪುರೀಂ ಶ್ರೇಷ್ಠಾಂ ಸ್ವರ್ಣಪ್ರಾಕಾರಗೋಪುರಾಂ ।
ಗೃಹೈಶ್ಚ ಗಿರಿಸಂಕಾಶೈರ್ಯುಕ್ತಾಂ ಸ್ಫಟಿಕತೋರಣೈಃ ॥ ೨೬ ॥

ನಾನಾರತ್ನಚಿತೈಶ್ಚಿತ್ರೈಃ ಸೌಧೈಶ್ಚಾಭ್ರಂಲಿಹೈರ್ವೃತಾಂ ।
ತಲ್ಪೈಃ ಸ್ಫಾಟಿಕಸಂಭಿನ್ನೈರುಪೇತಾಂ ಸ್ವರ್ಣಕುಟ್ಟಿಮಾಂ ॥ ೨೭ ॥

ಜಾಲವಾತಾಯನೋಪೇತಾಂ ವಿತರ್ದಿಶತಸಂಕುಲಾಂ ।
ಚತ್ವರಾಽಽಪಣರಥ್ಯಾಢ್ಯಾಮುಚ್ಚಾಟ್ಟಾಲಕಸಂಕುಲಾಂ ॥ ೨೮ ॥

---

೨೪. ಚತುರ್ಮುಖನಾದ ಬ್ರಹ್ಮನೆಂಬ ಯಜಮಾನನು ಬ್ರಹ್ಮನೆಂಬ ಋತ್ವಿಜನ ಆಜ್ಞೆಯನ್ನು ತೆಗೆದುಕೊಂಡು ಯಜ್ಞಾಶ್ವದ ಹೆಜ್ಜೆಹೆಜ್ಜೆಗೊಂದಾವರ್ತಿ ಹೋಮ ಮಾಡುತ್ತಾ ದೇವಮಹರ್ಷಿಸಂಘದೊಡಗೂಡಿ ಆ ಯಜ್ಞಶಾಲೆಯಲ್ಲಿ ನಿಂತನು.

೨೫. ಆಗ ಮನಸ್ಸಿನಲ್ಲಿ ಶಂಖಚಕ್ರಗದೆಗಳಿಂದ ಅಲಂಕರಿಸಲ್ಪಟ್ಟ ಜಗನ್ನಾಥನಾದ ವಿಷ್ಣುಪರಮಾತ್ಮನನ್ನು ಧ್ಯಾನಿಸುತ್ತಿದ್ದನು. ಹಿಂದೆ ಹೇಳಿದಂತೆ ಬ್ರಹ್ಮನ ಆದೇಶವನ್ನು ಪಡೆದ ವಿಶ್ವಕರ್ಮನು ಬ್ರಹ್ಮನಿಗೆ ಮತ್ತೆ ನಮಸ್ಕರಿಸಿ ತನ್ನ ಕಾರ್ಯವನ್ನು ಆರಂಭಿಸಿದನು.

೨೬. ಸುವರ್ಣಪ್ರಾಕಾರಗಳಿಂದಲೂ ಗೋಪುರಗಳಿಂದಲೂ ರಾಜಿಸುವ ಪರ್ವತದಂತೆ ಉನ್ನತಗಳಾದ ಸ್ಫಟಿಕಮಣಿಗಳ ತೋರಣವುಳ್ಳ ಅನೇಕ ಗೃಹಗಳಿಂದ ಶೋಭಿಸುವ ನಗರಿಯನ್ನು ನಿರ್ಮಿಸಿದನು.

೨೭. ಅನೇಕ ರತ್ನಖಚಿತವಾದ, ವಿಚಿತ್ರವಾದ ಮತ್ತು ಗಗನವನ್ನು ಮುಟ್ಟುವಂತಿರುವ ಮಹಡಿಗಳಿಂದಲೂ ಸ್ಫಟಿಕಮಣಿಗಳಿಂದ ಮುಚ್ಚಿಹೋಗಿರುವ ತಲಭಾಗಗಳಿಂದಲೂ ಕೂಡಿರುವ ಮತ್ತು ಚಿನ್ನದ ನೆಲದಿಂದ ಕೂಡಿರುವ ನಗರವನ್ನು ಮಾಡಿದನು.

೨೮. ಮತ್ತು ಆ ನಗರವು ಗಾಳಿಗೆ ಅವಕಾಶವನ್ನು ಕೊಡುವ ವಿಶಾಲವಾದ ಕಿಟಿಕಿಗಳಿಂದಲೂ ನೂರಾರು ಗೃಹಾವರಣದ ಅಗ್ರಗಳಿಂದಲೂ ವ್ಯಾಪ್ತವಾಗಿತ್ತು. ಚೌಕ

ವಾಪೀಕೂಪತಟಾಕಾದ್ಯೈರನ್ಯೈಶ್ಚೈವ ಜಲಾಶಯೈಃ ।
ಇಕ್ಷುಕಾಂಡರಸಾಂಭೋದ್ಯೈಃ ಸರ್ವತಃ ಸಮಲಂಕೃತಾಂ ॥ ೨೯ ॥

ಸರ್ವರ್ತುಕುಸುಮೋಪೇತೈರುಪೇತಾಂ ಚಿತ್ರಪಾದಪೈಃ ।
ಪುಣ್ಯೈರುಪವನೈಶ್ಚಾನ್ಯೈಃ ಸರ್ವತಃ ಸಮಲಂಕೃತಾಂ ॥ ೩೦ ॥

ವಸ್ತ್ರೈರಾಭರಣೈಶ್ಚಿತ್ರೈರ್ಧನೈರ್ಧಾನ್ಯೈಶ್ಚ ಸಂಕುಲಾಂ ।
ದೇವಾಯತನಸಂಬಾಧಾಂ ವಿಮಾನಶತಸಂಕುಲಾಂ ॥ ೩೧ ॥

ಅನುತ್ತಮಾಮೃದ್ಧಿಮತೀಂ ಗಜವಾಜಿರಥಾಕುಲಾಂ ।
ಸರ್ವಸಂಸ್ಕಾರಸುಕೃತಾಮಿಂದ್ರಸ್ಯೇವಾಮರಾವತೀಂ ॥ ೩೨ ॥

ಗಳು, ಅಂಗಡಿಗಳು, ಬೀದಿಗಳು, ಎತ್ತರವಾದ ಚಪ್ಪರಗಳು ಮುಂತಾದುವುಗಳಿಂದ ಕೂಡಿಕೊಂಡಿರುವುದು.

೨೯. ಹಾಗು, ವಾಪೀ-ಕೂಪ-ತಟಾಕ ಮುಂತಾದ ಕಬ್ಬಿನರಸರೂಪವಾದಜಲವನ್ನು ಕೊಡುವ ಅನೇಕ ರಮಣೀಯ ಜಲಾಶಯಗಳಿಂದ ಸರ್ವಪ್ರದೇಶಗಳಲ್ಲಿಯೂ ಅಲಂಕರಿಸಲ್ಪಟ್ಟಿತ್ತು.

೩೦. ಸಕಲ ಋತುಸಮಯಗಳ ಪುಷ್ಪಗಳಿಂದ ಕೂಡಿದ ಉತ್ತಮಜಾತಿಯ ವೃಕ್ಷಗಳಿಂದ ಕೂಡಿದುದಾಗಿಯೂ ಮತ್ತು ಪವಿತ್ರವಾದ ಅನೇಕ ಉಪವನಗಳಿಂದ ನಗರದ ಸುತ್ತಲೂ ಶೋಭಿಸಲ್ಪಟ್ಟಿದ್ದಾಗಿಯೂ ಇತ್ತು.

೩೧. ವಿಚಿತ್ರವಾದ ವಸ್ತ್ರ-ಆಭರಣಗಳ ಮತ್ತು ಧನ-ಧಾನ್ಯಗಳ ಸಮೃದ್ಧಿಯನ್ನು ಹೊಂದಿತ್ತು. ಎಲ್ಲೆಲ್ಲಿಯೂ ದೇವಾಲಯಗಳ ಮತ್ತು ಅನೇಕ ಸಂಖ್ಯೆಯ ವಿಮಾನಗಳ ಶ್ರೇಣಿಯು ನಗರವನ್ನು ವ್ಯಾಪಿಸಿಕೊಂಡಿತ್ತು.

೩೨. ಇದಕ್ಕಿಂತ ಮತ್ತೊಂದು ಉತ್ತಮನಗರವಿಲ್ಲದುದಾಗಿಯೂ, ಸಕಲ ಸಮೃದ್ಧಿಯಿಂದ ಕೂಡಿದುದಾಗಿಯೂ, ಗಜ-ಅಶ್ವ-ರಥಗಳ ಸಂದಣಿಯುಳ್ಳದ್ದಾಗಿಯೂ, ಇಂದ್ರನ ಅಮರಾವತೀಪಟ್ಟಣದಂತೆ ಸಕಲ ಸಂಸ್ಕಾರಗಳಿಂದ ಕೂಡಿದ್ದಾಗಿಯೂ ಇತ್ತು.

ಸಪ್ತಯೋಜನವಿಸ್ತೀರ್ಣಾಂ ಸಪ್ತಯೋಜನಮಾಯತಾಂ ।
ವಿಧಾತುರಶ್ವಮೇಧಾರ್ಥಂ ನಿರ್ಮಮೇ ತಾಂ ಪುರೀಂ ಶುಭಾಂ ॥ ೩೩ ॥

ವೀಥ್ಯಸ್ತತ್ರ ಶುಭಾ ದೀರ್ಘಾ ವಿಸ್ತೀರ್ಣಗೃಹಸಂಕುಲಾಃ ।
ಪತಾಕಾಧ್ವಜಸಂಪನ್ನಾಽ ಸಂಸಿಕ್ತಾಶ್ಚಂದನೋದಕೈಃ ॥ ೩೪ ॥

ದೇವಾಸುರಮನುಷ್ಯಾಣಾಂ ಗಂಧರ್ವೋರಗರಕ್ಷಸಾಂ ।
ಪೃಥಕ್ ಪೃಥಗಸಂಬಾಧಾ ನಿರ್ಮಿತಾ ವಿಶ್ವಕರ್ಮಣಾ ॥ ೩೫ ॥

ತತಃ ಸ ಮಧ್ಯಮೇ ದೇಶೇ ನಗರ್ಯಾಃ ಪುರತೋ ಗಿರೇಃ ।
ಯಜ್ಞಶಾಲಾಂ ಸುವಿಪುಲಾಂ ವಿಧಾತುಮುಪಚಕ್ರಮೇ ॥ ೩೬ ॥

ವಿಶ್ವಕರ್ಮಾ ವಿಧೇರಾಜ್ಞಾಮನುಸೃತ್ಯ ವಿಧಾನತಃ ।
ವಾಸ್ತುಭೂತಬಲಿಂ ಕರ್ತುಂ ಸ್ನಾತ್ವಾ ಶೇಷಹ್ರದೇ ಶುಭೇ ॥ ೩೭ ॥

---

೩೩. ಏಳು ಯೋಜನಗಳಷ್ಟು ವಿಸ್ತಾರ ಮತ್ತು ಏಳು ಯೋಜನಗಳಷ್ಟು ದೀರ್ಘಪರಿಮಾಣವುಳ್ಳದ್ದನ್ನಾಗಿ ಮಂಗಳಕರವಾದ ಆ ನಗರವನ್ನು ಬ್ರಹ್ಮನ ಅಶ್ವಮೇಧಯಾಗಕ್ಕೋಸ್ಕರವಾಗಿ ವಿಶ್ವಕರ್ಮನು ನಿರ್ಮಿಸಿದನು.

೩೪. ಆ ನಗರದ ಬೀದಿಗಳು ಮಂಗಲಕರವೂ, ಅತಿ ದೀರ್ಘವೂ, ವಿಸ್ತಾರವಾದ ಗೃಹಶ್ರೇಣಿಯಿಂದ ಪರಿಪೂರ್ಣವೂ, ಪತಾಕೆ, ಧ್ವಜಸ್ತಂಭಗಳಿಂದ ಕೂಡಿರುವುದೂ ಅಲ್ಲದೆ ಗಂಧೋದಕದಿಂದ ನೆನೆಸಲ್ಪಟ್ಟು ಮನೋಹರಗಳೂ ಆಗಿದ್ದವು.

೩೫. ಅಲ್ಲಿ ಬಂದು ವಾಸಮಾಡಲು ದೇವ-ಅಸುರ-ಮನುಷ್ಯ-ಗಂಧರ್ವ-ಸರ್ಪ-ರಾಕ್ಷಸ ಇವರೆಲ್ಲರಿಗೂ ಬೇರೆಬೇರೆಯಾಗಿ ಒಬ್ಬರಿಂದೊಬ್ಬರಿಗೆ ಸಂದಣಿಯ ಬಾಧೆಯಿಲ್ಲವಂತೆ ವಿಶ್ವಕರ್ಮನು ವಾಸಭೂಮಿಯನ್ನು ಕಲ್ಪಿಸಿದನು.

೩೬. ಅನಂತರದಲ್ಲಿ ವಿಶ್ವಕರ್ಮನು ಹಸ್ತಿಗಿರಿಯ ಪೂರ್ವದಲ್ಲಿ ಆ ನಗರದ ಮಧ್ಯಪ್ರದೇಶದಲ್ಲಿ ವಿಸ್ತೀರ್ಣವಾದ ಯಜ್ಞಶಾಲೆಯನ್ನು ರಚಿಸಲು ಆರಂಭಿಸಿದನು.

೩೭. ವಿಶ್ವಕರ್ಮನು ಬ್ರಹ್ಮನ ಆಜ್ಞೆಯನ್ನು ಹೊಂದಿ ಶಾಸ್ತ್ರವಿಧಾನವನ್ನು ಅನುಸರಿಸಿ ಶುಭವಾದ ಅನಂತಸರೋವರದಲ್ಲಿ ಸ್ನಾನಮಾಡಿ ವಾಸ್ತುಭೂತಬಲಿಯನ್ನು ಕೊಡಲು ಉದ್ಯುಕ್ತನಾದನು.

ಕೃತ್ವಾ ದಾರುಮಯಂ ಭೂತಂ ಫಲಪುಷ್ಪಾನ್ನಮೋದಕೈಃ ।
ದಧ್ಯಕ್ಷತಘೃತೈರ್ಮಾಂಸೈರ್ಲಾಜೈಶ್ಚ ಸತಿಲೌದನೈಃ ॥ ೩೮ ॥

ವಾಸ್ತುಂ ಸಂತರ್ಪಯಿತ್ವಾಥ ಹುತ್ವಾ ಚೈವಾನಲೇ ಪೃಥಕ್ ।
ಬ್ರಾಹ್ಮಣೈರ್ಋಷಿಭಿಶ್ಚೈವ ಸಹಿತೋ ವೇದಪಾರಗೈಃ ॥ ೩೯ ॥

ವಾಸ್ತುಂ ಸಂಗೃಹ್ಯ ವಿಧಿವನ್ಮಂತ್ರಾನಾಥರ್ವಣಾನ್ ಜಪನ್ ।
ಯಜ್ಞಭೂಮಿಂ ಪರಿಕ್ರಮ್ಯ ದಿಕ್ಷು ಪ್ರಾಗಾದಿಷು ಕ್ರಮಾತ್ ॥ ೪೦ ॥

ಹಸ್ತಿಶೈಲಸ್ಯ ಚೈಶಾನ್ಯೇ ಪ್ರದೇಶೇ ಯೋಜನದ್ವಯೇ ॥
ಖಾತ್ವಾ ಗರ್ತಂ ಸುವಿಪುಲಂ ಭೂತಂ ಸಂಸ್ಥಾಪ್ಯ ಶಾಸ್ತ್ರತಃ ॥ ೪೧ ॥

ನ್ಯಷಿಂಚಚ್ಛೇಷಕಾಸಾರಾದಾಹೃತೈಃ ಕಲಶೋದಕೈಃ ।
ತತ್ರ ಮಾಂಸೈರ್ಬಲಿಂ ದತ್ವಾ ಸಂಪೂಜ್ಯ ವಿಧಿವತ್ಪುನಃ ॥ ೪೨ ॥

---

೩೮. ವಾಸ್ತುಭೂತಬಲಿದಾನಕ್ಕೆ ಗೃಹೋಪಕರಣವಾದ ಮರದಿಂದ ಭೂತವನ್ನು ರಚಿಸಿ ಅದನ್ನು ಫಲ, ಪುಷ್ಪ, ಅನ್ನ, ಮೋದಕ, ಮೊಸರು, ಅಕ್ಷತೆ, ಘೃತ, ಮಾಂಸ, ಲಾಜ ಮತ್ತು ತಿಲಾನ್ನ ಮುಂತಾದುವುಗಳನ್ನು ಅರ್ಪಿಸಿದನು.

೩೯. ಈರೀತಿಯಾಗಿ ವಾಸ್ತುದೇವತೆಗೆ ಅನೇಕ ಸಂಭಾರಗಳಿಂದ ತೃಪ್ತಿಯನ್ನು ಉಂಟುಮಾಡಿ ವೇದಪಾರಂಗತರಾದ ಬ್ರಾಹ್ಮಣರಿಂದಲೂ ಮಹರ್ಷಿಗಳಿಂದಲೂ ಸೇರಿಕೊಂಡು ಬೇರೆಬೇರೆಯಾಗಿ ಅಗ್ನಿಯಲ್ಲಿ ಹವನಮಾಡಿದನು.

೪೦. ಹೀಗೆ ವಿಧಿವತ್ತಾಗಿ ವಾಸ್ತುವಿಧಾನವನ್ನು ಸಂಗ್ರಹಿಸಿ ಅಥರ್ವವೇದದ ಮುಖ್ಯಮಂತ್ರಗಳನ್ನು ಜಪಿಸುತ್ತ ಪೂರ್ವ ಮುಂತಾದ ಕ್ರಮದಿಂದ ಸಕಲ ದಿಕ್ಕುಗಳಲ್ಲಿಯೂ ಯಜ್ಞಭೂಮಿಯನ್ನು ಸುತ್ತಿದನು.

೪೧. ಹಸ್ತಿಪರ್ವತದ ಈಶಾನ್ಯದಿಕ್ಕಿನಲ್ಲಿ ಎರಡು ಯೋಜನ ದೂರದ ಒಂದು ಪ್ರದೇಶದಲ್ಲಿ ಒಂದು ವಿಸ್ತಾರವಾದ ಹಳ್ಳವನ್ನು ತೋಡಿ ಅಲ್ಲಿ ಶಾಸ್ತ್ರಾನುಸಾರವಾಗಿ ಭೂತವನ್ನು ಸ್ಥಾಪಿಸಿದನು.

೪೨. ಮತ್ತು ಅದಕ್ಕೆ ಶೇಷಸರೋವರದಿಂದ ಕಲಶಗಳಿಂದ ತುಂಬಿಕೊಂಡು ತಂದಿರುವ ನೀರಿನಿಂದ ಅಭಿಷೇಕಮಾಡಿದನು. ಅಲ್ಲಿಯೇ ಮಾಂಸಗಳಿಂದ ಬಲಿದಾನವನ್ನು ಮಾಡಿ ಮತ್ತೆ ವಿಧಿವತ್ತಾಗಿ ಪೂಜಿಸಿದನು.

ರಕ್ಷಾರ್ಥಂ ವಾಸ್ತುಭೂತಸ್ಯ ಲಿಂಗಂ ಸಂಸ್ಥಾಪ್ಯ ಶೂಲಿನಃ ।
ತ್ರ್ಯಂಬಕಬಲಿಂ ಕೃತ್ವಾ ಕೇಶವಂ ಮನಸಾ ಸ್ಮರನ್ ॥ ೪೩ ॥

ಸ್ವಾಗಾತ್ ಸಮನ್ವಿತೋ ವಿಪ್ರೈಃ ಪಶ್ಚಾನ್ನೈವಾವಲೋಕಯನ್ ।
ನ್ಯಷಿಂಚದ್ಯತ್ರ ವೈ ವಾಸ್ತುಂ ಶೇಷಕಾಸಾರಜೈರ್ಜಲೈಃ ॥ ೪೪ ॥

ತತ್ರಾಪ್ಯಭೂದನಂತಾಽಖ್ಯಂ ಸರೋ ರಾಜನ್ ಸುಪಾವನಂ ।
ವಿಶ್ವಕರ್ಮಾ ತತೋಽಭ್ಯೇತ್ಯ ಹಸ್ತಿಶೈಲಸ್ಯ ಮೂರ್ಧನಿ ॥ ೪೫ ॥

ಬಹ್ವಂತರಾಯಾನ್ ಯಜ್ಞಸ್ಯ ಸಮುದ್ವೀಕ್ಷ್ಯೈವ ಶಾಸ್ತ್ರತಃ ।
ಯಜ್ಞವಿಘ್ನವಿಘಾತಾಯ ಸೇನಾಧೀಶಮಪೂಜಯತ್ ॥ ೪೬ ॥

ಸ ಪೂಜಯಿತ್ವಾ ಗಣಪಂ ಚಕಾರೋತ್ತರವೇದಿಕಾಂ ।
ತತಃ ಶೈಲಸ್ಯ ಪರಿತಃ ಶಾಲಾಂ ಚೈವಾಕರೋನ್ನೃಪ ॥ ೪೭ ॥

---

೪೩. ಆ ವಾಸ್ತುಭೂತದ ರಕ್ಷಣೆಗಾಗಿ ಅಲ್ಲಿ ಒಂದು ಈಶ್ವರನ ಲಿಂಗವನ್ನು ಪ್ರತಿಷ್ಠೆಮಾಡಿ ಅಲ್ಲಿ ತ್ರಿಯಂಬಕಬಲಿಯನ್ನು ಕೊಟ್ಟು ಮನಸ್ಸಿನಲ್ಲಿ ವಿಷ್ಣುವನ್ನು ಧ್ಯಾನಿಸುತ್ತ ಅನುಷ್ಠಾನದಲ್ಲಿ ಆಸಕ್ತನಾದನು.

೪೪. ಅಲ್ಲಿಂದ ಮುಂದೆ ವಾಸ್ತುಭೂತವನ್ನು ಶೇಷಸರೋವರದ ತೀರ್ಥದಿಂದ ಅಭಿಷೇಕಮಾಡಿದ್ದ ಸ್ಥಳಕ್ಕೆ ಹಿಂತಿರುಗಿನೋಡದೆ ವಿಪ್ರರಿಂದ ಕೂಡಿ ಮತ್ತೆ ಬಂದನು.

೪೫. ರಾಜನೆ! ಅಲ್ಲಿ ಬರಲಾಗಿ ಪಾವನವಾದ ಅನಂತಸರೋವರವು ಆ ಸ್ಥಳದಲ್ಲಿ ಇದ್ದಿತು. ಅನಂತರ ವಿಶ್ವಕರ್ಮನು ಹಸ್ತಿಗಿರಿಯ ಶಿಖರವನ್ನು ಏರಿದನು.

೪೬. ಅಲ್ಲಿ ಶಾಸ್ತ್ರಾಧಾರದಿಂದಲೇ ಯಜ್ಞಕ್ಕೆ ಅನೇಕ ವಿಘ್ನಗಳು ಒದಗುವುವೆಂಬುದನ್ನು ಕಂಡು ಯಜ್ಞದ ಸಕಲ ವಿಘ್ನಗಳು ಶಮನವಾಗಲು ಸೇನಾಧಿಪತಿಯನ್ನು ಪೂಜಿಸಿದನು.

೪೭. ಹಾಗೆಯೇ ಗಣೇಶನನ್ನು ಪೂಜಿಸಿ ಉತ್ತರವೇದಿಕೆಯನ್ನು ಮಾಡಿದನು. ರಾಜನೆ! ತರುವಾಯ ಹಸ್ತಿಶೈಲದ ಸುತ್ತಲೂ ಯಜ್ಞಶಾಲೆಯನ್ನು ರಚಿಸಿದನು.

ಮಧ್ಯೇ ನಗರ್ಯಾ ವಿಪುಲಾಮುನ್ನತಾಂ ಶುಭಲಕ್ಷಣಾಂ ।
ಪೂರ್ವಪಶ್ಚಿಮತಃ ಶಾಲಾ ಪಂಚಕ್ರೋಶಾಯತಾ ಹಿ ಸಾ ॥ ೪೮ ॥

ದಕ್ಷಿಣೋತ್ತರತಶ್ಚಾಪಿ ತಥಾ ಗವ್ಯೂತಿವಿಸ್ತೃತಾ ।
ಸ್ತಂಭೈರನೇಕಸಾಹಸ್ರೈಃ ಕಾಂಚನೈ ರತ್ನಚಿತ್ರಿತೈಃ ॥ ೪೯ ॥

ಕೂಟಾಗಾರೈರ್ವಿಟಂಕೈಶ್ಚ ಜಾಲವಾತಾಯನೈರಪಿ ।
ತಲ್ಪೈಃ ಸ್ಫಾಟಿಕಸಂಛನ್ನೈರಿಷ್ಟಕಾಭಿಶ್ಚ ಸಂಚಿತಾ ॥ ೫೦ ॥

ಮುಕ್ತಾವೈಡೂರ್ಯಸಂಛನ್ನೈಃ ಕಾಂಚನೈರ್ದ್ವಾರತೋರಣೈಃ ।
ನಿರ್ವ್ಯೂಹೈ ರತ್ನವಿಕೃತೈರ್ಮಹಾವೃಗಗಣೈರಪಿ ॥ ೫೧ ॥

ವೃಕ್ಷೈಶ್ಚ ಕಾಂಚನೈರ್ದಿವ್ಯೈಃ ಸರ್ವತಃ ಸಮಲಂಕೃತಾ ।
ದಿವ್ಯೈರ್ಮಾಲ್ಯೈಃ ಸುಗಂಧೈಶ್ಚ ಧೂಪೈರಗರುಗಂಧಿಭಿಃ ॥ ೫೨ ॥

---

೪೮. ಆ ಯಜ್ಞಶಾಲೆಯು ಪೂರ್ವದಿಂದ ಪಶ್ಚಿಮಕ್ಕೆ ಐದು ಹರದಾರಿಗಳಷ್ಟು ದೀರ್ಘವಾಗಿಯೂ, ಮಂಗಲಲಕ್ಷಣಗಳಿಂದ ಕೂಡಿದ್ದಾಗಿಯೂ ಮತ್ತು ಉನ್ನತವಾಗಿಯೂ ಇದ್ದು ನಗರದ ಮಧ್ಯದಲ್ಲಿ ಅತಿ ವಿಸ್ತಾರವಾಗಿತ್ತು.

೪೯. ಹಾಗೆಯೇ ದಕ್ಷಿಣದಿಂದ ಉತ್ತರಕ್ಕೆ ಎರಡು ಹರದಾರಿಯಷ್ಟು ವಿಸ್ತಾರವಾಗಿತ್ತು. ಅನೇಕ ಸಹಸ್ರಸಂಖ್ಯೆಯ ರತ್ನಖಚಿತವಾದ ಸುವರ್ಣಸ್ತಂಭಗಳಿಂದ ಶೋಭಿಸಲ್ಪಟ್ಟಿತ್ತು.

೫೦. ಆ ಶಾಲೆಯು ಅನೇಕ ಚಿಕ್ಕಚಿಕ್ಕ ಗೃಹಗಳಿಂದಲೂ ಛಾವಣಿಗಳಿಂದಲೂ ಕಿಟಿಕಿಗಳಿಂದಲೂ ಸ್ಫಟಿಕಶಿಲೆಗಳಿಂದ ಹೊದಿಸಿದ ನೆಲಗಳಿಂದಲೂ ಅನೇಕವಿಧದ ಇಟ್ಟಿಗೆಗಳಿಂದಲೂ ರಚಿತವಾಗಿತ್ತು.

೫೧. ಮುತ್ತು, ವೈಡೂರ್ಯ ಮುಂತಾದ ನವರತ್ನಗಳಿಂದ ಅಲಂಕರಿಸಿರುವ ಸುವರ್ಣದ ಬಾಗಿಲು ತೋರಣಗಳಿಂದಲೂ ರತ್ನನಿರ್ಮಿತವಾದ ವ್ಯೂಹಾಲಂಕಾರಗಳಿಂದ ಕೂಡಿದ ಅನೇಕ ಮಹಾವೃಗಗಳಿಂದಲೂ ಪೂರ್ಣವಾಗಿತ್ತು.

೫೨. ಆ ಪುರವು ಸುವರ್ಣಮಯವಾದ ದಿವ್ಯವೃಕ್ಷಗಳಿಂದ ಸುತ್ತಲೂ ಅಲಂಕರಿಸಲ್ಪಟ್ಟದ್ದಾಗಿಯೂ ದಿವ್ಯವೂ ಸುಗಂಧವೂ ಆದ ಪುಷ್ಪ ಮತ್ತು ಕೃಷ್ಣಾಗರುಗಂಧದಿಂದ ಕೂಡಿದ ಧೂಪಗಳಿಂದ ರಮ್ಯವಾಗಿಯೂ ಇತ್ತು.

ದಿವ್ಯಾಂಬರೈರಾಭರಣೈರ್ದಿವ್ಯಸ್ರಗನುಲೇಪನೈಃ ।
ಸಂಪನ್ನಾ ಸರ್ವಕಾಮೈಶ್ಚ ಕಲಕ್ಮಾಷೀ ಪಶುಭಿರ್ವೃತಾ ॥ ೫೩ ॥

ಕಾಮಧೇನುಸ್ತದಾಽಭ್ಯೇತ್ಯ ತಸ್ಮಿನ್ ಯಜ್ಞೇ ದ್ವಿಜನ್ಮನಾಂ ।
ತೃಪ್ತ್ಯರ್ಥಮನ್ನಾನ್ಯಸೃಜನ್ಮೃಷ್ಟಾನಿ ಗುಣವಂತಿ ಚ ॥ ೫೪ ॥

ಸೂಪಾನುಚ್ಚಾವಚಾನ್ ಭಕ್ಷ್ಯಾನ್ ಲೇಹ್ಯಾನ್ ಪೇಯಾಂಶ್ಚ ಸರ್ವಶಃ ।
ದಧಿಕುಲ್ಯಾಂ ಪಯಃಕುಲ್ಯಾಂ ಘೃತಕುಲ್ಯಾಂ ಮಧೂನಿ ಚ ॥ ೫೫ ॥

ಲಾಜಾಂಶ್ಚೈವ ಸ್ರಜಸ್ತತ್ರ ಯಸ್ಯ ಯಸ್ಯ ಯಥೇಪ್ಸಿತಂ ।
ಭುಂಜತೇ ಕೋಟಿಶಸ್ತತ್ರ ಬ್ರಾಹ್ಮಣಾ ಹ್ಯನಿಶಂ ನೃಪ ॥ ೫೬ ॥

ತತ್ರ ದಾರುಮಯಾ ಯೂಪಾಃ ಕಾಂಚನಾಲಂಕೃತಾಃ ಶುಭಾಃ ।
ಏಕವಿಂಶತಿಸಂಖ್ಯಾಕಾ ದ್ವಾತ್ರಿಂಶತ್‌ಕಿಷ್ಕುಮುಚ್ಛ್ರಿತಾಃ ॥ ೫೭ ॥

---

೫೩. ಆಗ ದಿವ್ಯವಾದ ವಸ್ತ್ರಗಳಿಂದಲೂ ಮತ್ತು ಆಭರಣಗಳಿಂದಲೂ ದಿವ್ಯವಾದ ಪುಷ್ಪಮಾಲಿಕೆಗಳಿಂದಲೂ ಅನುಲೇಪನ ದ್ರವ್ಯಗಳಿಂದಲೂ ಮತ್ತು ಸರ್ವಕಾಮಗಳಿಂದಲೂ ಕೂಡಿದ ಚಿತ್ರವರ್ಣದ ಕಾಮಧೇನುವು ಪಶುಗಳಿಂದ ಸುತ್ತುವರಿಯಲ್ಪಟ್ಟು ಯಜ್ಞದಲ್ಲಿ ಉಪಕರಿಸುತ್ತಿತ್ತು.

೫೪. ಆ ಯಜ್ಞದಲ್ಲಿ ಕಾಮಧೇನುವು ಅಲ್ಲಿಗೆ ಬಂದು ಭೋಜನಮಾಡತಕ್ಕ ಬ್ರಾಹ್ಮಣರ ತೃಪ್ತಿಗೋಸ್ಕರ ಉತ್ತಮಗುಣದಿಂದ ಸಂಸ್ಕೃತವಾದ ಮಿಷ್ಟಾನ್ನವನ್ನು ಸೃಷ್ಟಿಮಾಡಿತು.

೫೫. ನಾನಾತರಹದ ತೊವೆಗಳನ್ನೂ ಭಕ್ಷ್ಯಗಳನ್ನೂ ಉಪದಂಶಗಳನ್ನೂ ಮತ್ತು ಸರ್ವಪ್ರಕಾರದ ಪಾನೀಯಗಳನ್ನೂ ಸೃಷ್ಟಿಮಾಡಿತು. ದಧಿ, ಕ್ಷೀರ, ಆಜ್ಯ ಮತ್ತು ಮಧುಗಳ ಕಾಲುವೆಗಳನ್ನು ಸೃಷ್ಟಿಮಾಡಿತು.

೫೬. ಅರಳನ್ನೂ, ವಿಚಿತ್ರವಾದ ಪುಷ್ಪಮಾಲಿಕೆಗಳನ್ನೂ ಮತ್ತು ಯಾರು ಏನನ್ನು ಅಪೇಕ್ಷಿಸಿದರೂ ಅದೆಲ್ಲವನ್ನೂ ಸೃಷ್ಟಿಸಿತು. ರಾಜನೆ! ಅಲ್ಲಿ ಕೋಟಿಗಿಂತಲೂ ಅಧಿಕರಾಗಿ ಬ್ರಾಹ್ಮಣರು ಹಗಲು ಮತ್ತು ರಾತ್ರಿಗಳಲ್ಲಿ ಭುಂಜಿಸುತ್ತಿದ್ದರು.

೫೭. ಆ ಯಜ್ಞಶಾಲೆಯಲ್ಲಿ ಸುವರ್ಣದಿಂದ ಅಲಂಕರಿಸಲ್ಪಟ್ಟು ಮಂಗಳಪ್ರದವಾದ ಮತ್ತು ಮೂವತ್ತೆರಡು ಕಿಷ್ಕುಪ್ರಮಾಣ ದೀರ್ಘವಾದ ಇಪ್ಪತ್ತೊಂದು ವೃಕ್ಷರಚಿತ ಯೂಪಸ್ತಂಭಗಳು ಸ್ಥಾಪಿಸಲ್ಪಟ್ಟಿದ್ದವು.

ವ್ಯಸ್ತಬಾಹುಪರಿಗ್ರಾಹ್ಯಾಃ ಕಾರಿತಾಃ ಶಾಸ್ತ್ರತಃ ಕ್ರಮಾತ್ ।
ಸ್ಥಾಪಿತಾಃ ಸರ್ವತೋ ದಿಕ್ಷು ವಿಂಶದ್ಯೂಪಾಃ ಸುಪೂಜಿತಾಃ ॥ ೫೮ ॥

ಮಧ್ಯೇಽಸ್ಯಾಃ ಸ್ಥಾಪಿತಸ್ತ್ವೇಕಃ ಪ್ರಧಾನಸ್ತುರಗಾಶ್ರಯಃ ।
ವಾಸೋಭಿರ್ಭೂಷಿತಾಃ ಸರ್ವೇ ಗಂಧೈಃ ಸ್ರಗ್ಭಿರಲಂಕೃತಾಃ ॥ ೫೯ ॥

ವಿರೇಜುಸ್ತತ್ರ ಯೂಪಾಸ್ತೇ ಸಪ್ತರ್ಷಯ ಇವಾಂಬರೇ ।
ಏವಂ ಪುರೀಂ ಚ ಶಾಲಾಂ ಚ ಯೂಪಾಂಶ್ಚೈವಾಥ ವೇದಿಕಾಃ ॥ ೬೦ ॥

ತಥೈವ ಸರ್ವಸಂಭಾರಾನ್ ನಿರ್ಮಮೇ ಮನಸಾ ಸ್ವಯಂ ।
ಯಥೋಕ್ತಂ ಬ್ರಹ್ಮಣಾ ಪೂರ್ವಂ ಕೃತ್ವಾ ತತ್ತ್ರಿಗುಣಂ ತಥಾ ॥ ೬೧ ॥

ವ್ಯಜಿಜ್ಞಪ ದ್ವಿಶ್ವಕರ್ಮಾ ತತ್ ಸ್ವಕರ್ಮ ಸ್ವಯಂಭುವೇ ।
ತತಃ ಸ್ವಯಂಭೂರ್ಭಗವಾನ್ ದೃಷ್ಟ್ವಾ ತತ್ ಕರ್ಮ ಚಾಖಿಲಂ ॥೬೨॥

---

೫೮. ಆ ಯೂಪಗಳು ಬಾಹುಗಳನ್ನು ವಿಸ್ತರಿಸಿ ಪರಿಗ್ರಹಿಸಲು ಅರ್ಹಗಳಾಗಿ ಶಾಸ್ತ್ರವಿಧಿಯನ್ನು ಅನುಸರಿಸಿ ಬೇರೆಬೇರೆಯಾಗಿ ನಿರ್ಮಿಸಲ್ಪಟ್ಟಿದ್ದವು. ಅವುಗಳಲ್ಲಿ ಇಪ್ಪತ್ತು ಸ್ತಂಭಗಳನ್ನು ಎಲ್ಲ ದಿಕ್ಕುಗಳಲ್ಲಿಯೂ ಸ್ಥಾಪಿಸಿ ಪೂಜಿಸಿದ್ದರು.

೫೯. ಶಾಲಾಮಧ್ಯದಲ್ಲಿ ಮತ್ತೊಂದು ಪ್ರಧಾನ ಪಶುವಾದ ಅಶ್ವವನ್ನು ಬಂಧಿಸಲು ಪ್ರಧಾನಯೂಪಸ್ತಂಭವಾಗಿ ಸ್ಥಾಪಿಸಲ್ಪಟ್ಟಿತು. ಈ ಎಲ್ಲ ಸ್ತಂಭಗಳೂ ವಸ್ತ್ರ, ಗಂಧ, ಮಾಲ್ಯ ಮುಂತಾದ ಸತ್ಕಾರಗಳಿಂದ ಪೂಜಿಸಿ ಭೂಷಿಸಲ್ಪಟ್ಟಿದ್ದವು.

೬೦. ಆ ಸ್ತಂಭಗಳು ಗಗನದಲ್ಲಿ ಸಪ್ತರ್ಷಿ ಮಂಡಲವು ಪ್ರಕಾಶಿಸಿದಂತೆ ಅತಿ ತೇಜಸ್ವಿಯಾಗಿ ಪ್ರಕಾಶಿಸಿದವು, ಈ ರೀತಿಯಾಗಿ ಆ ಯಜ್ಞಕ್ಕೋಸ್ಕರ ನಗರವು, ಶಾಲೆಯು, ಯೂಪ ಮತ್ತು ವೇದಿಕೆಗಳು ಈ ಎಲ್ಲ ಸಂಭಾರಗಳು ಸಂಗ್ರಹಿಸಲ್ಪಟ್ಟವು.

೬೧. ಹಾಗೆಯೇ ವಿಶ್ವಕರ್ಮನು ಹಿಂದೆ ಬ್ರಹ್ಮನ ಆದೇಶವನ್ನು ಪಡೆದಂತೆ ಪ್ರತಿಯೊಂದು ಸಂಭಾರವನ್ನೂ ಒಂದಕ್ಕೆ ತ್ರಿಗುಣಿತ ಸಮೃದ್ಧಿಯಿಂದ ಸೃಷ್ಟಿ ಮಾಡಿದನು.

೬೨. ಎಲ್ಲ ಸಾಮಗ್ರೀ ಸೃಷ್ಟಿಯನ್ನು ಮುಗಿಸಿ ಹಾಗೆಯೇ ವಿಶ್ವಕರ್ಮನು ತನ್ನ ಕರ್ತವ್ಯ ಮುಗಿದಿರುವುದನ್ನು ಬ್ರಹ್ಮನಿಗೆ ವಿಜ್ಞಾಪಿಸಿದನು. ಭಗವಂತನಾದ ಬ್ರಹ್ಮನು ಆಗ ಆ ವಿಶ್ವಕರ್ಮನ ಸಕಲ ಕರ್ಮಗಳನ್ನು ಪರೀಕ್ಷಿಸಿದನು.

ಪುರೀಂ ಶಾಲಾಂ ಚ ಸಂಪ್ರೇಕ್ಷ್ಯ ತುತೋಷಾತ್ಯಂತಮಬ್ಜಭೂಃ ।
ತುಷ್ಟಃ ಪ್ರೋವಾಚ ವಚನಂ ವಿಶ್ವಕರ್ಮಾಣಮೀಕ್ಷ್ಯ ಸಃ ॥ ೬೩ ॥

ಇಯಂ ಕಾಂಚೀತಿ ವಿಖ್ಯಾತಾ ಪುರೀ ಭವತು ನಾಮತಃ ।
ಅದ್ಯಪ್ರಭೃತಿ ಲೋಕೇಷು ಭೋಗಮೋಕ್ಷಪ್ರದಾಯಿನೀ ॥ ೬೪ ॥

ಸ್ಮರಣಾತ್ ಸರ್ವಪಾಪಘ್ನೀ ನೃಣಾಂ ಭೂತಲವಾಸಿನಾಂ ।
ಇತ್ಯುಕ್ತ್ವಾ ವಚನಂ ಧಾತಾ ಬ್ರಹ್ಮರ್ಷಿಗಣಸಂಯುತಃ ॥ ೬೫ ॥

ಅಶ್ವಮೇಧಸ್ಯ ಯಜ್ಞಸ್ಯ ದೀಕ್ಷಾಂ ಕರ್ತುಮಿಯೇಷ ಹ ।
ತತ್ರ ದೇವರ್ಷಿಗಂಧರ್ವಾಃ ಪಿತರಃ ಸಹ ಚಾರಣೈಃ ॥ ೬೬ ॥

ನಾಗಾ ವಿದ್ಯಾಧರಾ ಯಕ್ಷಾ ದಾನವಾಃ ಪತಗಾ ಅಪಿ ।
ಅಸುರಾ ರಾಕ್ಷಸೈಃ ಸಾರ್ಧಂ ಸಮಾಜಗ್ಮುಶ್ಚ ಸರ್ವಶಃ ॥ ೬೭ ॥

---

೬೩. ಕಮಲಸಂಭೂತನಾದ ಬ್ರಹ್ಮನು ಆ ನಗರ ಮತ್ತು ಶಾಲೆಗಳನ್ನು ನೋಡಿ ಹೆಚ್ಚಾಗಿ ಸಂತೋಷಿಸಿದನು. ಮತ್ತು ಬಹಳ ತೃಪ್ತನಾಗಿ ವಿಶ್ವಕರ್ಮನನ್ನು ಕುರಿತು ಮಾತನಾಡಿದನು.

೬೪. ನಿನ್ನ ಪ್ರಯತ್ನದ ಫಲವಾದ ನಗರಿಯು ಇನ್ನು ಮುಂದೆ " ಕಾಂಚೀ " ಎಂಬ ಹೆಸರಿನಿಂದ ಪ್ರಖ್ಯಾತವಾಗಲಿ, ಮತ್ತು ಮಹಾ ಪವಿತ್ರ ನಗರವಾಗಿ ಇದನ್ನು ಸೇವಿಸಿದವರಿಗೆ ಭೋಗ, ಮೋಕ್ಷಗಳನ್ನು ಕೊಡುವ ಮಹಿಮೆಯನ್ನು ಹೊಂದಲಿ.

೬೫. ಭೂಮಿಯಲ್ಲಿ ವಾಸಮಾಡುವ ಜನರು ಒಂದು ಸಲ ಸ್ಮರಣಮಾಡಿದ ಮಾತ್ರದಿಂದ ಸಕಲ ಪಾಪಗಳಿಂದ ಮುಕ್ತರಾಗುವರು. ಹೀಗೆಂದು ವಿಶ್ವಕರ್ಮನಿಗೆ ಬ್ರಹ್ಮನು ಹೇಳಿದನು.

೬೬. ಮುಂದೆ ಅನೇಕ ಬ್ರಹ್ಮರ್ಷಿಗಣದಿಂದ ಕೂಡಿದವನಾಗಿ ಮಾಡಬೇಕೆಂದಿರುವ ಅಶ್ವಮೇಧಯಾಗಕ್ಕೆ ಪೂರ್ವಾಂಗವಾದ ದೀಕ್ಷೆಯನ್ನು ಕೈಗೊಳ್ಳಲು ಅಪೇಕ್ಷಿಸಿದನು, ಆಗ ಅಲ್ಲಿಗೆ ದೇವ-ಋಷಿ-ಗಂಧರ್ವ-ಪಿತೃ-ಚಾರಣರೆಂಬ ದೇವವರ್ಗದವರೆಲ್ಲರೂ ಬಂದರು.

೬೭. ಮತ್ತು ನಾಗ, ವಿದ್ಯಾಧರ, ಯಕ್ಷ, ದಾನವ. ಪಕ್ಷಿ, ಅಸುರ ಮತ್ತು ರಾಕ್ಷಸ ಮುಂತಾದವರೆಲ್ಲರೂ ಎಲ್ಲ ಕಡೆಯಿಂದಲೂ ಅಲ್ಲಿಗೆ ಬಂದು ಸೇರಿದರು.

ತತ್ರೈವಾಪ್ಸರಸಾಂ ಸಂಘಾ ಗುಹ್ಯಕಾನಾಂ ಗಣೈಃ ಸಹ ।
ಆಜಗ್ಮುಃ ಸರ್ವಲೋಕೇಭ್ಯೋ ದ್ರಷ್ಟುಂ ಪೈತಾಮಹಂ ಮಖಂ ॥ ೬೮ ॥

ತತ್ರೈವ ಮಾನುಷಾಃ ಸರ್ವೇ ಬ್ರಾಹ್ಮಣಾಃ ಕ್ಷತ್ರಿಯಾ ವಿಶಃ ।
ಶೂದ್ರಾಶ್ಚೈವ ಸಮಾಜಗ್ಮುರ್ಯೇ ಸ್ಥಿತಾ ಧರಣೀತಲೇ ॥ ೬೯ ॥

ತತಃ ಸಂವತ್ಸರಸ್ಯಾಂತೇ ಶುಭನಕ್ಷತ್ರಸಂಯುತೇ ॥ ೭೦ ॥

ದಿವಸೇ ಸಹಿತಃ ಪತ್ನ್ಯಾ ಸಾವಿತ್ರ್ಯಾ ಕಮಲಾಸನಃ ।
ವಿವೇಶ ದೀಕ್ಷಾಂ ಪ್ರಯತಸ್ತ್ಯಕ್ತ್ವಾ ವಾಣೀ ಮನಾಗತಾಂ ॥ ೭೧ ॥

ತದಾ ಬ್ರಹ್ಮರ್ಷಯಃ ಸರ್ವೇ ಕರ್ಮ ಕುರ್ವಂತಿ ಚಾಧ್ವರೇ ।
ತತ್ರಾಧ್ವರ್ಯುರ್ವಸಿಷ್ಠೋಽಭೂದ್ಧೋತಾಽಭೂದಂಗಿರಾ ನೃಪ ॥ ೭೨ ॥

ಅಭೂನ್ಮರೀಚಿರುದ್ಗಾತಾ ಬ್ರಹ್ಮಾ ಭೃಗುರಭೂತ್ ಕ್ರತೌ ।
ಅತ್ರಿಃ ಪುಲಸ್ತ್ಯಃ ಪುಲಹಃ ಕಣ್ವೋ ದಕ್ಷಶ್ಚ ಕಾಶ್ಯಪಃ ॥ ೭೩ ॥

---

೬೮. ಹಾಗೆಯೇ ಗುಹ್ಯಕರೊಡನೆ ಅನೇಕ ಅಪ್ಸರ ಸ್ತ್ರೀಯರ ತಂಡವು ಎಲ್ಲ ಲೋಕಗಳಿಂದ ಬ್ರಹ್ಮನ ಅಶ್ವಮೇಧಯಾಗವನ್ನು ನೋಡಲು ಬಂದು ಸೇರಿತು.

೬೯. ಮತ್ತು ಭೂಮಿಯಲ್ಲಿರುವ ಚಾತುರ್ವರ್ಣ್ಯಕ್ಕೆ ಸೇರಿದ ಪ್ರಜೆಗಳಾದ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೆಂಬ ಸಕಲ ಜನಾಂಗದವರೂ ಯಜ್ಞದರ್ಶನಕ್ಕೋಸ್ಕರ ಬಂದರು.

೭೦-೭೧. ಅನಂತರ ಒಂದು ಸಂವತ್ಸರದ ಕಡೆಯಲ್ಲಿ ಶುಭವಾದ ನಕ್ಷತ್ರದಿಂದ ಕೂಡಿದ ಒಂದು ದಿವಸದಲ್ಲಿ ಕಮಲಾಸನದಲ್ಲಿ ಕುಳಿತ ಬ್ರಹ್ಮನು ಆಗ ಅಲ್ಲಿ ಬಾರದಿರುವ ವಾಣಿಯನ್ನು ಬಿಟ್ಟು ಪತ್ನಿಯಾದ ಸಾವಿತ್ರಿಯಿಂದ ಕೂಡಿ ಪವಿತ್ರನಾಗಿ ದೀಕ್ಷೆಯನ್ನು ಕೈಗೊಂಡನು.

೭೨. ರಾಜನೆ! ಆಗ ಅನೇಕ ಬ್ರಹ್ಮರ್ಷಿಗಳು ಯಜ್ಞಕರ್ಮಗಳನ್ನು ಸಾಂಗವಾಗಿ ಮಾಡುತ್ತಲಿದ್ದರು. ಅವರಲ್ಲಿ ವಸಿಷ್ಠಮುನಿಯು ಅಧ್ವರ್ಯು ಋತ್ವಿಜನೂ ಅಂಗಿರಮುನಿಯು ಹೋತೃವಾಗಿಯೂ ಇದ್ದರು.

೭೩. ಮರೀಚಿಮುನಿಯು ಉದ್ಗಾತೃ ಋತ್ವಿಜನೂ, ಭೃಗುಮುನಿಯು ಬ್ರಹ್ಮ ಋತ್ವಿಜನೂ ಆಗಿ ಆ ಯಜ್ಞವನ್ನು ನಿರ್ವಹಿಸುತ್ತಿದ್ದರು. ಮತ್ತು ಇತರ

ಬೃಹಸ್ಪತಿಃ ಕ್ರತುಃ ಕಾವ್ಯಃ ಸಂವರ್ತೋಽಸಿತ ಏವ ಚ ।
ಜಮದಗ್ನಿರ್ಭರದ್ವಾಜೋ ವಾಮದೇವೋಽಥ ಗೌತಮಃ ॥ ೭೪ ॥

ಸುಯಜ್ಞಶ್ಚೈವ ಜಾಬಾಲಿ ರ್ಯೇಽಚಾನ್ಯೇ ದ್ವಿಜಪುಂಗವಾಃ ।
ತತ್ರತತ್ಕುರ್ವಂತಿ ಕರ್ಮಾಣಿ ಶಾಸ್ತ್ರತಃ ಕ್ರತುಸತ್ತಮೇ ॥ ೭೫ ॥

ದ್ವಿಜಾನಾಂ ಭೋಜನೇ ಸಮ್ಯಕ್ ತಥಾಽನ್ನಪರಿವೇಷಣೇ ।
ಯಮೋಽಭೂತ್ ಸ್ವಗಣೈಃ ಸಾರ್ಧಂ ಸಮಾಜ್ಞಪ್ತಃ ಸ್ವಯಂಭುವಾ ॥

ಚಂದನಾನಾಂ ಚ ಪುಷ್ಪಾಣಾಂ ಸುಗಂಧಾನಾಂ ಸ್ರಜಾಂ ವ್ಯಯೇ ।
ವರುಣಃ ಸ್ವಗಣೈಃ ಸಾರ್ಧಮಭೂತ್ತತ್ರ ಕ್ರತೂತ್ತಮೇ ॥ ೭೭ ॥

ಕರ್ಮಗಳನ್ನು ಅಲ್ಲಿ ಸೇರಿದ ಅನೇಕ ಇತರ ಮಹರ್ಷಿಗಳು ನಡೆಸುತ್ತಿದ್ದರು. ಅತ್ರಿ, ಪುಲಸ್ತ್ಯ, ಪುಲಹ, ಕಣ್ವ, ದಕ್ಷ ಮತ್ತು ಕಶ್ಯಪ ಮುನಿಗಳು ಕೆಲ ಕೆಲವು ಕರ್ಮಗಳನ್ನು ಮಾಡುತ್ತಿದ್ದರು.

೭೪. ಬೃಹಸ್ಪತಿ, ಕ್ರತು, ಕಾವ್ಯ, ಸಂವರ್ತ, ಅಸಿತ, ಜಮದಗ್ನಿ, ಭರದ್ವಾಜ, ವಾಮದೇವ, ಮತ್ತು ಗೌತಮ ಇಷ್ಟು ಮಂದಿ ಮಹರ್ಷಿಗಳು ಯಜ್ಞಾನುಷ್ಠಾನದಲ್ಲಿ ಭಾಗಿಗಳಾಗಿದ್ದರು.

೭೫. ಮತ್ತು ಸುಯಜ್ಞ, ಜಾಬಾಲಿ ಮುಂತಾದವರಲ್ಲದೆ ಅಲ್ಲಿ ಸೇರಿದ ಇನ್ನು ಅನೇಕ ಪ್ರಶಸ್ತರಾದ ದ್ವಿಜರು ಆ ಶ್ರೇಷ್ಠವಾದ ಮಹಾಯಜ್ಞದಲ್ಲಿ ಶಾಸ್ತ್ರಾನುಸಾರವಾಗಿ ಆಯಾಯ ಕಾರ್ಯಗಳನ್ನು ಮಾಡುತ್ತಿದ್ದರು.

೭೬. ದ್ವಿಜರಿಗೆ ಊಟಮಾಡಿಸುವುದು ಮತ್ತು ಭಕ್ಷ್ಯ ಭೋಜ್ಯಾದಿ ಅನ್ನವನ್ನು ಬಡಿಸುವುದು ಮುಂತಾದ ಕೆಲಸದಲ್ಲಿ ಬ್ರಹ್ಮನು ಯಮನನ್ನು ಅವನ ಪರಿವಾರದೊಡನೆ ನಿರ್ವಹಿಸುವಂತೆ ಅಪ್ಪಣೆಮಾಡಿದನು.

೭೭. ಮತ್ತು ಉತ್ತಮ ಯಜ್ಞದಲ್ಲಿ ಚಂದನ, ಪುಷ್ಪ, ಸುವಾಸನೆಯ ಹೂಗಳ ಮಾಲಿಕೆ ಇವುಗಳನ್ನು ವಿನಿಯೋಗಮಾಡಲು ತನ್ನ ಪರಿವಾರದಿಂದ ಸಹಿತನಾದ ವರುಣನನ್ನು ಬ್ರಹ್ಮನು ನಿಯಮಿಸಿದನು.

ರತ್ನಾನಾಂ ಕಾಂಚನಾನಾಂ ಚ ರಜತಾನಾಂ ಚ ವಾಸಸಾಂ ।
ವ್ಯಯೇ ಕುಬೇರಸ್ತತ್ರಾಭೂದಾಜ್ಞಯಾ ಪರಮೇಷ್ಠಿನಃ ॥ ೭೮ ॥

ವಾಯುಶ್ಚ ಸ್ವಗಣೈರ್ಯುಕ್ತಶ್ಚಾಮರೈರ್ವ್ಯಜನೈರಪಿ ।
ಸಿಷೇವೇ ಬ್ರಾಹ್ಮಣಾಂಸ್ತತ್ರ ಭುಂಜತಸ್ತ್ವನಿಶಂ ಮಖೇ ॥ ೭೯ ॥

ಈಶಾನಶ್ಚ ಕ್ರತೋಃ ಕಾರ್ಯೇ ಪಶೂನಾಂ ಸಮಿಧಾಮಪಿ ।
ಆಸೀದಾನಯನೇ ತತ್ರ ಋತ್ವಿಜಾಮುಪಸೇವನೇ ॥ ೮೦ ॥

ಹವೀಂಷಿ ಶ್ರಪಯನ್ನಗ್ನಿರ್ಧೂಪೈಶ್ಚಾಗರುಗಂಧಿಭಿಃ ।
ದೀಪೈಃ ಸಭಾಮಲಂಕುರ್ವನ್ನಾಸೀತ್ ಸ್ವಗಣಸಂಯುತಃ ॥ ೮೧ ॥

ಪೌಲಸ್ತ್ಯೋ ನೈಋತಶ್ಚಾಸೀತ್ ಸ್ವಯೂಥ್ಯೈರಭಿಸಂವೃತಃ ।
ರತ್ನಚಿತ್ರೇಷು ಪೀಠೇಷು ವಿಪ್ರಾಣಾಮುಪವೇಶನೇ ॥ ೮೨ ॥

---

೭೮. ರತ್ನ, ಸುವರ್ಣ, ರಜತ ಮತ್ತು ವಸ್ತ್ರಗಳನ್ನು ವಿತರಣಮಾಡುವ ಅಧಿಕಾರದಲ್ಲಿ ಬ್ರಹ್ಮದೇವನ ಅಪ್ಪಣೆಯಂತೆ ಕುಬೇರನು ತನ್ನ ಪರಿವಾರಮೊಡನೆ ಇದ್ದನು.

೭೯. ವಾಯುದೇವನು ತನ್ನ ಪರಿವಾರ ಗಣದೊಂದಿಗೆ ಚಾಮರ, ವ್ಯಜನಗಳನ್ನು ಹಿಡಿದು ಆ ಯಜ್ಞದಲ್ಲಿ ಹಗಲು ರಾತ್ರಿಗಳಲ್ಲಿ ಭೋಜನಮಾಡಿ ಶ್ರಾಂತರಾದ ದ್ವಿಜರಿಗೆ ಗಾಳಿಯನ್ನು ಬೀಸಿ ಸೇವಿಸುತ್ತಿದ್ದನು.

೮೦. ಈಶ್ವರನು ಪಶು, ಸಮಿತ್ ಮುಂತಾದವುಗಳನ್ನು ತಂದು ಸಿದ್ಧಪಡಿಸುವುದು, ಋತ್ವಿಜರನ್ನು ಶುಶ್ರೂಷೆಮಾಡುವುದು ಮುಂತಾದ ಯಜ್ಞಾಂಗ ಕರ್ಮಗಳಲ್ಲಿ ನಿರತನಾದನು.

೮೧. ಅಗ್ನಿಯು ತನ್ನ ಗಣದಿಂದ ಕೂಡಿ ಹವಿಸ್ಸುಗಳನ್ನು ಪಚನಮಾಡುವುದರಲ್ಲಿಯೂ ಕೃಷ್ಣಾಗರು ವಾಸನೆಯುಳ್ಳ ಧೂಪ ಮತ್ತು ಉಜ್ಜ್ವಲವಾದ ದೀಪಗಳಿಂದ ಸಭೆಯನ್ನು ಅಲಂಕಾರಮಾಡುವುದರಲ್ಲಿಯೂ ಆಸಕ್ತನಾಗಿದ್ದನು.

೮೨. ಪುಲಸ್ತ್ಯ ಪುತ್ರನೂ ನೈಋತನೂ ತಮ್ಮ ಅನುಯಾಯಿಗಳಿಂದ ಕೂಡಿ ಬಂದಿರುವ ವಿಪ್ರರನ್ನು ರತ್ನಗಳಿಂದ ಚಿತ್ರಿತವಾದ ಆಸನಗಳಲ್ಲಿ ಕುಳ್ಳಿರಿಸುವ ಅಧಿಕಾರದಲ್ಲಿದ್ದರು.

ಇಂದ್ರಃ ಸರ್ವೇಷು ಕಾರ್ಯೇಷು ಸರ್ವೇಷಾಮುಪವೀಕ್ಷಕಃ ।
ವಸುಭಿಃ ಸಹಿತಸ್ತತ್ರ ವಿಚಚಾರ ಸಮಂತತಃ ॥ ೮೩ ॥

ಸೂರ್ಯಾಚಂದ್ರಮಸೌ ಚೋಭೌ ದಿವ್ಯಚಾಮರಧಾರಿಣೌ ॥
ಬ್ರಹ್ಮಾಣಮುಪತಸ್ಥಾತೇ ಪಾರ್ಶ್ವಯೋರುಭಯೋರಪಿ ॥ ೮೪ ॥

ವಸವೋ ಮನವಃ ಸಿದ್ಧಾ ವಿಶ್ವೇ ದೇವಾಸ್ತಥಾಶ್ವಿನೌ ।
ದೇವರ್ಷಿಪಿತೃಗಂಧರ್ವಾಃ ಪ್ರಮೋದಂ ಪ್ರಾಪುರುತ್ತಮಂ ॥ ೮೫ ॥

ತತ್ರ ಗಾಯಂತಿ ಗಂಧರ್ವಾ ನೃತ್ಯಂತ್ಯಪ್ಸರಸಾಂ ಗಣಾಃ ।
ತಾಲಸ್ವಸ್ತಿಕವೀಣಾಭಿರ್ಮೃದಂಗೈರಾಹತೈರ್ಮುಹುಃ ॥ ೮೬ ॥

ನಿಃಸೃತೋ ಮಧುರಃ ಶಬ್ದಃ ಶ್ರೂಯತೇ ತತ್ರ ಸಂಸದಿ ।
ಋಚಾಂ ಚ ಯಜುಷಾಂ ಚೈವ ಸಾಮ್ನಾಮಪಿ ವಿಶೇಷತಃ ॥ ೮೭ ॥

---

೮೩. ಇಂದ್ರನು ವಸುದೇವತಾ ಗಣದಿಂದ ಕೂಡಿ ಅಲ್ಲಿ ನಡೆಯುವ ಸಕಲ ಕರ್ಮಗಳಲ್ಲಿಯೂ ಎಲ್ಲರನ್ನೂ ನೋಡಿಕೊಳ್ಳುತ್ತ ಸುತ್ತಲೂ ಸಂಚರಿಸುತ್ತಿದ್ದನು.

೮೪. ಸೂರ್ಯ ಮತ್ತು ಚಂದ್ರ ಇಬ್ಬರು ದಿವ್ಯವಾದ ಚಾಮರಗಳನ್ನು ಕೈಯ್ಯಲ್ಲಿ ಹಿಡಿದು ಬ್ರಹ್ಮನ ಎರಡು ಪಾರ್ಶ್ವಗಳಲ್ಲಿ ನಿಂತು ಬ್ರಹ್ಮನನ್ನು ಸೇವಿಸಿದರು.

೮೫. ಆ ಯಜ್ಞದ ವೈಭವದಿಂದ ವಸುಗಳು, ಮನುಗಳು, ಸಿದ್ಧರು, ವಿಶ್ವೇ ದೇವರು, ಅಶ್ವನೀದೇವತೆಗಳು ಮತ್ತು ಇತರ ದೇವ, ಋಷಿ, ಪಿತೃ, ಗಂಧರ್ವರ ಗಣ ಎಲ್ಲರೂ ಬಹು ಸಂತೋಷವನ್ನು ಹೊಂದಿದರು.

೮೬. ಆ ಯಜ್ಞಶಾಲೆಯಲ್ಲಿ ತಾಳ, ಸ್ವಸ್ತಿಕ, ವೀಣಾ, ಮೃದಂಗ ಮುಂತಾದ ವಾದ್ಯಗಳನ್ನು ಮತ್ತೆ ಮತ್ತೆ ಬಾರಿಸಿ ಗಂಧರ್ವರು ಗಾನವನ್ನು ಹಾಡುತ್ತಾರೆ. ಅಪ್ಸರಃ ಸ್ತ್ರೀಯರ ತಂಡದವರು ನರ್ತನಮಾಡುತ್ತಾರೆ. ಆಗ ಆ ಸಭೆಯಲ್ಲಿ ಗಾನದ ಮಧುರ ನಾದ ಶಬ್ದವು ಸಭಿಕರಿಗೆ ಆನಂದಕರವಾಗಿ ಕೇಳಿಸಿತು.

೮೭. ಮತ್ತು ಯಜ್ಞಾನುಷ್ಠಾನದಲ್ಲಿ ಮಂತ್ರಗಳನ್ನು ಪಠಿಸುವಾಗ ಋಗ್ವೇದ, ಯಜುರ್ವೇದ, ಸಾಮವೇದಗಳ ಮಧುರಶಬ್ದವು ಪಾಪಗಳನ್ನು ಕಳೆಯುವುದೂ ಪುಣ್ಯ ಸಂಪಾದಕವೂ ಆಗಿ ದ್ಯಾವಾಭೂಮಿಗಳನ್ನು ಪ್ರತಿಧ್ವನಿಗೊಳಿಸಿತು.

ಶಬ್ದಃ ಪಾಪಹರಃ ಪುಣ್ಯೋ ರೋದಸೀ ಅನ್ವನಾದಯತ್ ।
ಬ್ರಾಹ್ಮಣಾ ಭುಂಜತೇ ತತ್ರ ಶತಶೋಽಥ ಸಹಸ್ರಶಃ ॥ ೮೮ ॥

ಅನ್ನಕೂಟಾಶ್ಚ ದೃಶ್ಯಂತೇ ಶಾಲಾಯಾಂ ಪರ್ವತೋಪಮಾಃ ।
ಭಕ್ಷ್ಯಾನ್ ಭೋಜ್ಯಾಂಶ್ಚ ವಿವಿಧಾನ್ ಪೇಯಾನ್ ಖಾದ್ಯಾಂಶ್ಚ ಭೂರಿಶಃ

ಭಕ್ಷಯಂತೋಽಪಿ ಸತತಂ ನ ತೃಪ್ತಿಂ ಪ್ರತಿಪೇದಿರೇ ।
ಭುಕ್ತಾನಾಂ ಭೋಕ್ಷ್ಯಮಾಣಾನಾಂ ಭುಂಜತಾಂ ಚ ದ್ವಿಜನ್ಮನಾಂ ॥೯೦॥

ಪರಿಚರ್ಯಾಂ ಪ್ರಕುರ್ವಂತಿ ಗಂಧರ್ವಾಃ ಸಮಲಂಕೃತಾಃ ।
ಷಷ್ಟಿಕೋಟ್ಯಸ್ತಥಾ ರಾಜನ್ ಯುವತ್ಯಃ ಶುಭಲಕ್ಷಣಾಃ ॥ ೯೧ ॥

ಬಭೂವುಸ್ತತ್ರ ವೈ ಯಜ್ಞೇ ವಿಪ್ರಾಣಾಂ ಪರಿವೇಷಕಾಃ ।
ದೀಯತಾಂ ದೀಯತಾಮನ್ನಂ ವಾಸಾಂಸ್ಯಾಭರಣಾನಿ ಚ ॥ ೯೨ ॥

---

೮೮. ನೂರು ಸಾವಿರ ಹೀಗೆ ಲೆಕ್ಕವಿಲ್ಲದಷ್ಟು ಮಂದಿ ಬ್ರಾಹ್ಮಣರು ಯಜ್ಞಾನ್ನವನ್ನು ಭುಂಜಿಸುತ್ತಿದ್ದರು. ಆಗ ಅಲ್ಲಿ ಹಾಕಿದ್ದ ಅನ್ನದ ರಾಶಿಗಳು ಪರ್ವತದಂತೆ ಕಾಣಿಸುತ್ತಿದ್ದವು.

೮೯. ಅನ್ನ ಆದಿಯಾದ ಭಕ್ಷ್ಯಗಳನ್ನೂ ಮೋದಕ ಮುಂತಾದ ಭೋಜ್ಯಗಳನ್ನೂ ವಿವಿಧವಾದ ಪಾನೀಯಗಳನ್ನೂ ಚಕ್ಕುಲಿ, ಉಂಡೆಗಳು ಮುಂತಾದ ಕಜ್ಜಾಯಗಳನ್ನೂ ಸಂತತವಾಗಿ ಭಕ್ಷಿಸುತ್ತಿದ್ದರೂ ತೃಪ್ತಿಯಿಲ್ಲದೆ ಮತ್ತಷ್ಟು ಭುಂಜಿಸುತ್ತಿದ್ದರು.

೯೦. ಭೋಜನ ಮಾಡಿ ಎದ್ದ, ಭೋಜನಮಾಡುತ್ತಿರುವ ಅಥವಾ ಇನ್ನೂ ಭೋಜನಕ್ಕೆ ಕುಳಿತುಕೊಳ್ಳದಿರುವ ವಿಪ್ರರನ್ನು ಅಲಂಕೃತರಾದ ಗಂಧರ್ವರು ಸೇವಿಸುತ್ತಲಿದ್ದರು.

೯೧. ರಾಜನೆ! ಶುಭ ಲಕ್ಷಣಗಳಿಂದ ಕೂಡಿದ ಅರವತ್ತು ಕೋಟಿ ಸಂಖ್ಯೆಯ ಯುವತಿಯರು ಆ ಯಜ್ಞಶಾಲಾ ಭೋಜನದಲ್ಲಿ ವಿಪ್ರರಿಗೆ ಬಡಿಸಲು ಸಿದ್ಧವಾಗಿದ್ದರು.

೯೨. ಎಲ್ಲಿ ನೋಡಿದರೂ ಅನ್ನವನ್ನು ಕೊಡಿ, ಅನ್ನವನ್ನು ಕೊಡಿ, ವಸ್ತ್ರಗಳನ್ನು ಕೊಡಿ, ಆಭರಣಗಳನ್ನು ಕೊಡಿ, ಎಂದು ಸಮೃದ್ಧಿಯಾದ ವಿತರಣವನ್ನು ಸೂಚಿಸುವ ದೇವತೆಗಳು ಉಚ್ಚರಿಸುವ ಶಬ್ದವು ಭಾರಿಯಾಗಿ ಕೇಳಿತು.

ಇತಿ ಶಬ್ದೋ ಮಹಾನಾಸೀಜ್ಜಲ್ಪತಾಂ ತ್ರಿದಿವೌಕಸಾಂ ।
ತತ್ರೇಂದ್ರಾದ್ಯಾಃ ಸುರಗಣಾಃ ಪರಮಾನಂದನಿರ್ಭರಾಃ ॥ ೯೩ ॥

ಪರಿಕ್ರಾಮಂತಿ ಸರ್ವೇಷು ಕಾರ್ಯೇಷು ಚ ವಿಶೇಷತಃ ।
ತೇಷಾಂ ಸ್ತ್ರಿಯೋಽಪಿ ಸಂಹೃಷ್ಟಾಃ ಸರ್ವಾಲಂಕಾರಶೋಭಿತಾಃ ॥ ೯೪ ॥

ಇಂದ್ರಾಣ್ಯಾ ಸಹಿತಾಃ ಸರ್ವಾಃ ಪೂಜಯಂತಿ ದ್ವಿಜಸ್ತ್ರಿಯಃ ।
ತಾನ್ ದೃಷ್ಟ್ವಾ ತತ್ರ ಸಂಹೃಷ್ಟಾನ್ ದೇವಾನಿಂದ್ರಪುರೋಗಮಾನ್ ॥ ೯೫ ॥

ಸಂತಪ್ತಹೃದಯಾಃ ಸರ್ವೇ ಬಭೂವುರಸುರಾಸ್ತದಾ ।
ಕಾಲನೇಮಿರ್ವಿಪ್ರಚಿತ್ತಿರ್ಬಾಣಃ ಶಂಬರ ಏವ ಚ ॥ ೯೬ ॥

ಹಯಗ್ರೀವೋ ಮುರಃ ಶಂಖೋ ಮಣಿಮಾನ್ನಿಶಠೋ ಮಯಃ ।
ಏತೇ ಚಾನ್ಯೇ ಚ ದೈತೇಯಾ ಯಜ್ಞಂ ದ್ರಷ್ಟುಮುಪಾಗತಾಃ ॥ ೯೭ ॥

---

೯೩. ಅಲ್ಲಿ ಇಂದ್ರನೇ ಮುಂತಾದ ದೇವತೆಗಳು ಪರಮಾನಂದಭರಿತರಾಗಿ ಆ ಯಜ್ಞದ ಕಾರ್ಯಗಳಲ್ಲಿ ವಿಶೇಷವಾಗಿ ಓಡಾಡುತ್ತಿರುವರು.

೯೪. ಆ ದೇವತೆಗಳ ಸ್ತ್ರೀಯರು ಕೂಡ ಸಂತೋಷದಿಂದ ಸರ್ವ ಅಲಂಕಾರಗಳನ್ನು ಧರಿಸಿಕೊಂಡು ಇಂದ್ರಾಣಿಯಿಂದ ಕೂಡಿ ಸರ್ವರೂ ವಿಪ್ರ ಸ್ತ್ರೀಯರನ್ನು ಪೂಜಿಸುತ್ತಿದ್ದರು.

೯೫. ಆಗ ಅಲ್ಲಿ ಸಂತುಷ್ಟರಾಗಿರುವ ಇಂದ್ರಾದಿ ದೇವತೆಗಳನ್ನು ಕಂಡ ಅಸುರರೆಲ್ಲರೂ ಸಹಜದ್ವೇಷಭಾವದಿಂದ ತಪಿಸಿದ ಹೃದಯವುಳ್ಳವರಾದರು.

೯೬-೯೭. ಆಗ ದುಃಖಗೊಂಡ ಅಸುರರಲ್ಲಿ ಕಾಲನೇಮಿ, ವಿಪ್ರಚಿತ್ತಿ, ಬಾಣ, ಶಂಬರ, ಹಯಗ್ರೀವ, ಮುರ, ಶಂಖ, ಮಣಿಮಾನ್, ನಿಶಠ ಮತ್ತು ಮಯ ಇವರೆಲ್ಲರೂ ಮುಖ್ಯ ಪಾತ್ರವನ್ನು ವಹಿಸಿದ್ದರು. ಅಲ್ಲದೆ ಯಜ್ಞವನ್ನು ನೋಡಲು ಬಂದ ಅನೇಕ ದೈತ್ಯರು ಮನಸ್ಸಿನಲ್ಲಿ ತುಂಬಾ ಅಸೂಯೆಯುಳ್ಳವರಾದರು.

ತಥಾಽಶ್ವಮೇಧೇನ ಸ ಪಾವನೇನ
ಯಜ್ಞೇನ ಯಜ್ಞಾಭಿಧಮಬ್ಜನಾಭಂ ।
ಯಷ್ಟುಂ ಕಿಲ ಪ್ರಾರಭದಬ್ಜಯೋನಿ-
ರಾದ್ವಾದಶಾಹಂ ತ್ವನುಸೃತ್ಯ ದೀಕ್ಷಾಂ ॥ ೯೮ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ದಶಮೋಽಧ್ಯಾಯಃ

---

೯೮. ಕಮಲಪುಷ್ಪದಲ್ಲಿ ಸಂಭೂತನಾದ ಬ್ರಹ್ಮನು ಹನ್ನೆರಡು ದಿವಸಗಳ ದೀಕ್ಷೆಯನ್ನು ಕೈಗೊಂಡವನಾಗಿ ಪಾವನವಾದ ಆ ಅಶ್ವಮೇಧಯಜ್ಞದಿಂದ ಯಜ್ಞಪುರುಷನೆಂಬ ಪವಿತ್ರನಾಮವುಳ್ಳ ಮತ್ತು ಕಮಲಪುಷ್ಪದಿಂದ ಕೂಡಿದ ನಾಭಿಯುಳ್ಳ ವಿಷ್ಣುಪರಮಾತ್ಮನನ್ನು ಪೂಜಿಸಲು ಆರಂಭಮಾಡಿದನು.

ಕಾಂಚೀಮಾಹಾತ್ಮ್ಯದಲ್ಲಿ ದಶಮಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಏಕಾದಶೋಽಧ್ಯಾಯಃ

ನಾರದ ಉವಾಚ:—

ತತೋ ಯಜ್ಞೋ ಹಿ ವವೃಧೇ ಬ್ರಾಹ್ಮಣೈರ್ವೇದಪಾರಗೈಃ ।
ಅಹನ್ಯಹನಿ ರಾಜೇಂದ್ರ ಬಹ್ವನ್ನೋ ಭೂರಿದಕ್ಷಿಣಃ ॥ ೧ ॥

ತತೋಽಗ್ನಿಚಯಮಾಧಾನಂ ಚಕ್ರುಃ ಷೋಡಶ ಋತ್ವಿಜಃ ।
ಪ್ರಾಗುದಕ್‌ಪ್ರವಣಾಂ ವೇದಿಂ ದಕ್ಷಿಣಾಗ್ನೇರಕಲ್ಪಯನ್ ॥ ೨ ॥

ಪ್ರತೀಚೀಂ ಗಾರ್ಹಪತ್ಯಸ್ಯ ವೇದಿಮಬ್ಜದಳಾಕೃತಿಂ ।
ತಥೈವಾಹವನೀಯಾಗ್ನೇರುದೀಚೀಂ ಚಕ್ರುರಾಯತಾಂ ॥ ೩ ॥

---

೧. ರಾಜೇಂದ್ರನೆ! ಆ ತರುವಾಯ ವೇದಪಾರಂಗತರಾದ ಬ್ರಾಹ್ಮಣರಿಂದ ನಡೆಸಲ್ಪಟ್ಟ ಆ ಯಜ್ಞವು ಅನ್ನದಾನ ದಕ್ಷಿಣಾದಾನಗಳ ಅತಿಶಯ ವಿಜೃಂಭಣೆಯಿಂದ ಕೂಡಿ ದಿನದಿನಕ್ಕೂ ಬೆಳೆಯುತ್ತ ಬಂದಿತು.

೨. ಅನಂತರದಲ್ಲಿ ಪ್ರತಿ ಗಣದಲ್ಲಿಯೂ ನಾಲ್ಕು ಜನರ ಒಳಗುಂಪಿನಿಂದ ಸೇರಿರುವ ಹೋತಾ, ಅಧ್ವರ್ಯು, ಉದ್ಗಾತಾ ಮತ್ತು ಬ್ರಹ್ಮಾ ಎಂಬ ನಾಲ್ಕು ಪ್ರಧಾನ ಋತ್ವಿಜರ ನಾಲ್ಕು ಗಣಗಳು ಸೇರಿ ಹದಿನಾರು ಜನ ಋತ್ವಿಜರು ಅಗ್ನಿಯನ್ನು ಉತ್ಪತ್ತಿಮಾಡುವ ಆಧಾನಕರ್ಮವನ್ನು ನೆರವೇರಿಸಿದರು. ಹಾಗೆ ಪೂರ್ವೋತ್ತರ ದಿಕ್ಕುಗಳಲ್ಲಿ ಸ್ವಲ್ಪ ಆಳವಾಗಿರುವ ದಕ್ಷಿಣಾಗ್ನಿಯ ವೇದಿಕೆಯನ್ನು ರಚಿಸಿದರು.

೩. ಪಶ್ಚಿಮದಲ್ಲಿ ಗಾರ್ಹಪತ್ಯಾಗ್ನಿಯ ಆಧಾರವಾದ ವೇದಿಕೆಯನ್ನು ಕಮಲ ದಳದ ಆಕಾರದಲ್ಲಿ ಕಲ್ಪಿಸಿದರು. ಹಾಗೆಯೇ ಉತ್ತರ ದಿಕ್ಕಿನಲ್ಲಿ ಆಹವನೀಯಾಗ್ನಿಗೆ ವಿಸ್ತಾರವಾದ ವೇದಿಕೆಯನ್ನು ನಿರ್ಮಿಸಿದರು.

ವಾಯವ್ಯೇ ಪಂಚಕೋಣೋಽಭೂದೈಶಾನ್ಯಾಂ ಚಂದ್ರಸನ್ನಿಭಃ ।
ದಕ್ಷಿಣೇ ಚಾಷ್ಟಕೋಣೋಽಭೂನ್ನೈರ್ಋತ್ಯಾಂ ಕೂರ್ಮಸನ್ನಿಭಃ ॥ ೪ ॥

ಆಗ್ನೇಯೇ ಚ ತ್ರಿಕೋಣೋಽಭೂತ್ ಪ್ರಾಚ್ಯಾಂ ಯೂಪಃ ಸಮುಚ್ಛ್ರಿತಃ
ಗಾರುಡಂ ಚಯನಂ ಚಕ್ರುಃ ಕೌರ್ಮಂ ಮಾಯೂರಮೇವ ಚ ॥ ೫ ॥

ಚಕ್ರಾಬ್ಜಮಂಡಲಂ ಚೈವ ಹಂಸಾಂಕುಶದಲಂ ತಥಾ ।
ದರ್ಭೈಃ ಸಮ್ಯೈಃ ಸಮಾಸ್ತೀರ್ಯ ಲಾಜೈಃ ಪುಷ್ಪೈಸ್ತಥಾಽಂಕುರೈಃ ॥ ೬ ॥

ದಧ್ಯಕ್ಷತತಿಲಾನಾಂ ಚ ತಥೈವ ಮಧುಸರ್ಪಿಷಾಂ ।
ಸುಸಂಸ್ಕೃತಾನಿ ಪಾತ್ರಾಣಿ ಸ್ಥಾಪಿತಾನಿ ದ್ವಿಜೋತ್ತಮೈಃ ॥ ೭ ॥

---

೪. ಶಾಸ್ತ್ರವಿಧಿಯನ್ನು ಅನುಸರಿಸಿ ಯೂಪಗಳ ಪೈಕಿ ವಾಯುವ್ಯದಿಕ್ಕಿನಲ್ಲಿರುವ ಯೂಪವು ಪಂಚಕೋಣ (ಐಮೂಲೆ) ವಾಗಿತ್ತು, ಈಶಾನ್ಯದಿಕ್ಕಿನಲ್ಲಿರುವ ಯೂಪವು ಚಂದ್ರನಂತೆ ವರ್ತುಲಾಕಾರವಾಗಿಯೂ ದಕ್ಷಿಣ ದಿಕ್ಕಿನಲ್ಲಿದ್ದ ಯೂಪವು ಅಷ್ಟಕೋಣವೂ ಮತ್ತು ನೈರ್ಋತ್ಯದಿಕ್ಕಿನಲ್ಲಿರುವ ಯೂಪವು ಆಮೆಯ ಆಕಾರವನ್ನು ಹೊಂದಿರುವುದೂ ಆಗಿದ್ದುವು.

೫. ಆಗ್ನೇಯ ದಿಕ್ಕಿನಲ್ಲಿರುವ ಯೂಪಸ್ತಂಭವು ತ್ರಿಕೋಣವಾಗಿದ್ದಿತು. ಪೂರ್ವದಿಕ್ಕಿನಲ್ಲಿರುವ ಯೂಪಸ್ತಂಭವು ಅತಿಯಾಗಿ ಉನ್ನತವಾಗಿದ್ದಿತು. ಅಗ್ನಿಯನ್ನು ಪ್ರತಿಷ್ಠೆಮಾಡುವ ವೇದಿಕೆಯನ್ನು ಗರುಡ, ಆಮೆ, ಮತ್ತು ನವಿಲು ಇವುಗಳ ಆಕಾರದಿಂದ ರಚಿಸಿ ಗರುಡಚಯನ, ಕೂರ್ಮಚಯನ ಮತ್ತು ಮಯೂರಚಯನವೆಂಬ ಕರ್ಮಗಳನ್ನು ಆಚರಿಸಿದರು.

೬. ಮತ್ತು ಚಕ್ರ, ಪದ್ಮ, ಹಂಸ, ಅಂಕುಶ ಮತ್ತು ಮಂಡಲಗಳ ವಿವಿಧ ಆಕಾರವನ್ನು ವೇದಿಕೆಯಲ್ಲಿ ಸಂಪಾದಿಸಿದರು. ಮತ್ತು ವೇದಿಕೆಯಲ್ಲಿ ದರ್ಭಗಳನ್ನು ಸಮವಾಗಿ ಆಸ್ತರಿಸಿ ಅವುಗಳ ಮೇಲೆ ಅರಳು, ಪುಷ್ಪ, ಅಂಕುರ ಮುಂತಾದುವುಗಳನ್ನು ಚೆಲ್ಲಿದರು.

೭. ಆ ದರ್ಭೆಗಳ ಮೇಲೆ ಮೊಸರು, ಅಕ್ಷತ, ಎಳ್ಳು, ಮಧು, ಆಜ್ಯ ಮುಂತಾದುವುಗಳನ್ನು ತುಂಬಿರುವ ಸಂಸ್ಕೃತವಾದ ಪಾತ್ರಗಳನ್ನು ಇಟ್ಟರು.

ನಾನಾವರ್ಣಜಲೈಃ ಪೂರ್ಣಾ ರತ್ನಪಲ್ಲವಶೋಭಿತಾಃ ।
ಸ್ಥಾಪಿತಾಃ ಸ್ವರ್ಣಕಲಶಾಸ್ತತ್ರ ತಂತುಭಿರಾವೃತಾಃ ॥ ೮ ॥

ಯಾಜಕಾಶ್ಚಕ್ರುರುತ್ಥಾನಮರಣಿಂ ಚೋತ್ತರಾರಣಿಂ ।
ಪ್ರವರ್ಗ್ಯಂ ಶಾಸ್ತ್ರತಶ್ಚಕ್ರುಸ್ತಥೋಪಸದನಂ ದ್ವಿಜಾಃ ॥ ೯ ॥

ತತೋಽಸ್ತಂ ಗತ ಆದಿತ್ಯೇ ಪ್ರಥಮೇಽಹನಿ ಋತ್ವಿಜಃ ।
ಬ್ರಹ್ಮಣಾ ಸಹಿತಾಸ್ತತ್ರ ಕರ್ಮ ಕುರ್ವಂತಿ ಶಾಸ್ತ್ರತಃ ॥ ೧೦ ॥

ರಾತ್ರೌ ಚೈವ ತಥಾ ಹುತ್ವಾ ಹೋಮಶೇಷಂ ಸಮಾಪಯನ್ ।
ಪರೇದ್ಯುಃ ಪ್ರಾತರುತ್ಥಾಯ ಸರ್ವೇ ಷೋಡಶ ಋತ್ವಿಜಃ ॥ ೧೧ ॥

ಬ್ರಹ್ಮಣಾ ಸಹಿತಾಸ್ತತ್ರ ಕರ್ಮ ಕುರ್ವಂತಿ ಶಾಸ್ತ್ರತಃ ।
ಪ್ರಾತಃಸವನಮಾಜಹ್ರುರ್ವಿಧಿವದ್ಯಜ್ಞಕೋವಿದಾಃ ॥ ೧೨ ॥

೮. ಚಿನ್ನದ ಕಲಶಗಳಲ್ಲಿ ನಾನಾವರ್ಣದ ತೀರ್ಥೋದಕಗಳನ್ನು ತುಂಬಿಸಿ ಅದರ ಮಧ್ಯದಲ್ಲಿ ರತ್ನ-ಪಲ್ಲವಗಳನ್ನು ಇಟ್ಟು ಸುತ್ತಲೂ ದಾರಗಳಿಂದ ಸುತ್ತಿ ಆ ಕಲಶ ಗಳನ್ನು ಸ್ಥಾಪನೆಮಾಡಿದರು.

೯. ಯಾಗಮಾಡುವ ಋತ್ವಿಜರು ಅಗ್ನಿಯನ್ನು ಮಥನದಿಂದ ಉತ್ಪತ್ತಿ ಮಾಡಲು ಅಧರಾರಣಿ ಮತ್ತು ಉತ್ತರಾರಣಿಗಳೆಂಬ ಅರಣಿಗಳನ್ನು ಸಿದ್ಧಪಡಿಸಿದರು. ಹಾಗೂ ಪ್ರವರ್ಗ್ಯ, ಉಪಸತ್ತು ಮುಂತಾದ ಮುಖ್ಯವಾದ ಅಂಗಕರ್ಮಗಳನ್ನು ಆಚರಿಸಿದರು.

೧೦. ಅನಂತರ ಸೂರ್ಯನು ಅಸ್ತವನ್ನು ಹೊಂದಲು ಋತ್ವಿಜರು ಪ್ರಥಮಾ ಹಸ್ಸಿನಲ್ಲಿ ಬ್ರಹ್ಮನ ಕೂಡ ಶಾಸ್ತ್ರಾನುಸಾರವಾಗಿ ಕರ್ಮವನ್ನು ಮುಂದುವರಿಸಿದರು.

೧೧. ರಾತ್ರಿವೇಳೆಯಲ್ಲಿ ಹೋಮಮಾಡಿ ಹೋಮಶೇಷವನ್ನು ಸಮಾಪ್ತಿ ಗೊಳಿಸಿದರು. ಮಾರನೆಯ ದಿನ ಪ್ರಾತಃಕಾಲದಲ್ಲಿ ಮಾಡಬೇಕಾದ ವಿಹಿತಕರ್ಮ ಗಳನ್ನು ಮಾಡಲು ಹದಿನಾರು ಮಂದಿ ಋತ್ವಿಜರು ಸಿದ್ಧರಾದರು.

೧೨. ಪ್ರತಿಯೊಂದು ಕರ್ಮವನ್ನು ಶಾಸ್ತ್ರಾನುಸಾರವಾಗಿ ಬ್ರಹ್ಮನಿಂದೊಡ ಗೂಡಿ ಮಾಡುತ್ತ ಯಜ್ಞಕರ್ಮದಲ್ಲಿ ನಿಷ್ಣಾತರಾದ ಋತ್ವಿಜರು ವಿಧಿಪೂರ್ವಕವಾಗಿ ಪ್ರಾತಃಸವನ ಕರ್ಮವನ್ನು ಅನುಷ್ಠಾನಮಾಡಿದರು.

ಯೂಪಾಸ್ತತ್ರ ವಿರಾಜಂತೇ ಸುಕೃತಾಃ ಸಮಲಂಕೃತಾಃ ।
ಷಡ್ ಬೈಲ್ವಾಃ ಖಾದಿರಾಃ ಸಪ್ತ ಷಟ್ ಪಲಾಶಮಯಾಸ್ತಥಾ ॥ ೧೩ ॥

ದೇವದಾರುಮಯಸ್ತ್ವೇಕ ಔದುಂಬರಮಯೋಽಪರಃ ।
ಯೂಪೇಷು ಬದ್ಧಾಃ ಪಶವಃ ಸಂಸ್ಕೃತಾಶ್ಚ ಸ್ವಲಂಕೃತಾಃ ॥ ೧೪ ॥

ಉರಗಾಃ ಪಕ್ಷಿಣಶ್ಚೈವ ತಥಾ ಜಲಚರಾ ಮೃಗಾಃ ।
ಪಶೂನಾಂ ತ್ರಿಶತಂ ತತ್ರ ಯೂಪೇಷು ಚ ನಿಯಂತ್ರಿತಂ ॥ ೧೫ ॥

ವಿಸೃಷ್ಟಾಶ್ಚ ತಥೈವಾನ್ಯೇ ವನಂ ಯಾಂತಿ ಸ್ವಲಂಕೃತಾಃ ।
ಅಗ್ನಿಷ್ಟೋಮಾತಿರಾತ್ರೇ ಚ ಪೌಂಡರೀಕಮಥೋದ್ಭಿದಂ ॥ ೧೬ ॥

---

೧೩. ಅಲ್ಲಿ ನೆಟ್ಟಿರುವ ಯೂಪಸ್ತಂಭಗಳ ಪೈಕಿ ಬಿಲ್ವವೃಕ್ಷದಿಂದ ಮಾಡಿರುವ ಆರು ಯೂಪಸ್ತಂಭಗಳು, ಖದಿರವೃಕ್ಷಮಯವಾದ ಏಳು ಯೂಪಗಳು, ಪಲಾಶವೃಕ್ಷ ನಿರ್ಮಿತವಾದ ಆರು ಯೂಪಗಳು ಇವೆಲ್ಲವೂ ರಮ್ಯವಾಗಿ ಮಾಡಲ್ಪಟ್ಟವುಗಳೂ ಅಲಂಕರಿಸಲ್ಪಟ್ಟವುಗಳೂ ಆಗಿದ್ದವು.

೧೪. ಒಂದು ದೇವದಾರು ವೃಕ್ಷದಿಂದ ಮಾಡಿದ ಯೂಪಸ್ತಂಭವೂ, ಮತ್ತೊಂದು ಉದುಂಬರ ವೃಕ್ಷದಿಂದ ಮಾಡಿದ ಯೂಪಸ್ತಂಭವೂ ಇತ್ತು. ಈ ಸ್ತಂಭಗಳಲ್ಲಿ ಸಂಸ್ಕಾರಗಳಿಂದಲೂ ಅಲಂಕಾರದಿಂದಲೂ ಕೂಡಿದ ಪಶುಗಳು ಕಟ್ಟಲ್ಪಟ್ಟಿದ್ದವು.

೧೫. ಆ ಯಜ್ಞೀಯ ಪಶುಗಳ ಪೈಕಿ ಸರ್ಪಗಳು, ಪಕ್ಷಿಗಳು, ಜಲಚರ ಪ್ರಾಣಿಗಳು ಮುಂತಾದ ಮೂರುನೂರು ಪಶುಗಳು ಯಜ್ಞ ಪಶುಗಳಾಗಿ ಯೂಪಗಳಲ್ಲಿ ಕಟ್ಟಲ್ಪಟ್ಟಿದ್ದವು.

೧೬. ಮತ್ತೆ ಕೆಲವು ಶಾಸ್ತ್ರವಿಧಾನದಂತೆ ಅಲಂಕರಿಸಿ ಬಿಡಲ್ಪಟ್ಟ ಪಶುಗಳು ವನಕ್ಕೆ ಹೋಗುತ್ತಲಿದ್ದವು. ಅಲ್ಲಿ ನಡೆದ ಯಜ್ಞಗಳ ಗುಂಪಿನಲ್ಲಿ ಅಗ್ನಿಷ್ಟೋಮ, ಅತಿರಾತ್ರ, ಪೌಂಡರೀಕ ಮತ್ತು ಉದ್ಭಿದನೆಂಬ ಯಜ್ಞಗಳು ಆಚರಿಸಲ್ಪಟ್ಟವು.

ಅಭಿವಿಶ್ವಜಿತೌ ಚೋಭೌ ವಾಜಪೇಯಮಥಾಪರಂ ।
ಆಹರಂತಿ ಹಿತಾಃ ಸರ್ವೇ ಚಾಶ್ವಮೇಧೇ ಮಹಾಕ್ರತೌ ॥ ೧೭ ॥

ಪರಿಕ್ರಾಮಂತಿ ವಿಧಿವದ್ಯಾಜಕಾ ಯಜ್ಞಕರ್ಮಸು ।
ಕೃತಾನಿ ತತ್ರ ಕರ್ಮಾಣಿ ಕುಶಲೈರ್ಯಾಜಕೈರ್ಮಖೇ ॥ ೧೮ ॥

ಆಸನ್ನ ಸ್ಖಲಿತಾನ್ಯೇವ ಮಂತ್ರೈಸ್ತಂತ್ರೈಶ್ಚ ಸರ್ವಶಃ ।
ನಾವಿದ್ವಾನ್ ಕಶ್ಚಿದಪ್ಯಾಸೀನ್ನಾವ್ರತೋ ನಾಬಹುಶ್ರುತಃ ॥ ೧೯ ॥

ಸರ್ವೇ ವೇದವಿದೋ ಮುಖ್ಯಾಸ್ತತ್ರಾಸನ್ ಕ್ರತುಸತ್ತಮೇ ।
ವಿಶಸ್ಯ ಚ ಪಶೂಂಸ್ತತ್ರ ತತ್ತದುದ್ದಿಶ್ಯ ದೈವತಂ ॥ ೨೦ ॥

ಪ್ರಕ್ಷಿಪಂತ್ಯನಲೇ ಪೂತೇ ತತ್ತನ್ಮಂತ್ರೈಃ ಪೃಥಕ್ ಪೃಥಕ್ ।
ಹವೀಂಷಿ ಹೂಯಮಾನಾನಿ ಋತ್ವಿಗ್ಭಿಃ ಕಮಲಾಸನಃ ॥ ೨೧ ॥

---

೧೭. ಮತ್ತು ವಿಸ್ತಾರವಾದ ಆ ಅಶ್ವಮೇಧಯಾಗದಲ್ಲಿ ಅಭಿಜಿದ್ಯಾಗ, ವಿಶ್ವಜಿದ್ಯಾಗ ಮತ್ತು ವಾಜಪೇಯ ಮುಂತಾದ ಅನೇಕ ಕರ್ಮಗಳನ್ನು ಗರ್ಭೀಕರಿಸಿ ವಿಜೃಂಭಣೆಯಿಂದ ಮಾಡಿದರು.

೧೮. ಯಜ್ಞಕರ್ಮದ ಅನುಷ್ಠಾನದಲ್ಲಿ ಯಾಜಕರು ವಿಧಿ ಬದ್ಧವಾಗಿ ಆಯಾಯ ಕರ್ಮಗಳಲ್ಲಿ ತೊಡಗಿ ನಡೆಯುತ್ತಿದ್ದರು. ಕುಶಲರಾದ ಯಾಜಕರು ಎಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ಲೋಪವಿಲ್ಲದಂತೆ ಯಜ್ಞವನ್ನು ಮಾಡಿದರು.

೧೯. ಅಲ್ಲಿ ವಿಧಿಪೂರ್ವಕವಾಗಿ ನಡೆಯಬೇಕಾದ ಮಂತ್ರ, ತಂತ್ರ, ಯಾವ ವಿಷಯಗಳಲ್ಲಿಯೂ ಲೋಪ ಬರಲಿಲ್ಲ. ಅಲ್ಲಿ ಸೇರಿದ ಯಾಜಕಗಣದಲ್ಲಿ ಬಹು ಶ್ರುತನಲ್ಲದವನೂ, ವ್ರತನಿಯಮವಿಲ್ಲದವನೂ ಮತ್ತು ಅಜ್ಞನೂ ಯಾರೂ ಇರಲಿಲ್ಲ.

೨೦. ಆ ಶ್ರೇಷ್ಠವಾದ ಯಜ್ಞವನ್ನು ನೇರವೇರಿಸಲು ಸಿದ್ಧರಾದ ಯಾಜಕರೆಲ್ಲರೂ ವೇದಜ್ಞರಾಗಿದ್ದರು, ಋತ್ವಿಜರು ಆಯಾಯ ಪಶುಗಳನ್ನು ಕತ್ತರಿಸಿ ಆಯಾಯ ದೇವತೆಯ ಉದ್ದೇಶದಿಂದ ಹವಿಸ್ಸನ್ನು ಸಿದ್ಧಗೊಳಿಸಿದರು.

೨೧. ಮತ್ತು ಆ ಹವಿಸ್ಸನ್ನು ಆಯಾಯ ಮಂತ್ರಗಳನ್ನು ಪಠಿಸುತ್ತ ಪವಿತ್ರವಾದ ಹೋಮಾಗ್ನಿಯಲ್ಲಿ ಹಾಕುತ್ತಲಿದ್ದರು. ಋತ್ವಿಜರು ಬ್ರಹ್ಮನೆಂಬ ಯಜಮಾನನ ಸನ್ನಿಧಿಯಲ್ಲಿ ಹವಿಸ್ಸನ್ನು ಹೋಮಮಾಡುತ್ತಿದ್ದರು.

ಅರ್ಪಯಾಮಾಸ ಸರ್ವಾಣಿ ವಿಷ್ಣವೇಽನಂತರೂಪಿಣೇ ।
ಯೋಽನಂತನಾಮಾನಂತಾತ್ಮಾ ಯಜ್ಞೋ ಯಜ್ಞಭುಗವ್ಯಯಃ ॥೨೨॥

ಹವಿರ್ಭಿರೇಭಿರ್ನಿರ್ದತ್ತೈಃ ಸ ವಿಷ್ಣುಃ ಪ್ರೀಯತಾಮಿತಿ ।
ಉಚ್ಚೈರ್ಮಂತ್ರಾನುಚ್ಚರಂತಿ ಯಾಜಕಾಸ್ತತ್ರ ಸುಸ್ವರೈಃ ॥ ೨೩ ॥

ಆಶ್ರಾವಯೇತಿ ಚಾಧ್ವರ್ಯುರಸ್ತುಶ್ರೌಷಡಿತೀತರಃ ।
ಯಜೇತಿ ಚಾಪರೋ ಬ್ರೂತೇ ಯೇ ಯಜಾಮಹ ಇತ್ಯಪಿ ॥ ೨೪ ॥

ಪುನಸ್ತೇ ವೌಷಡಿತ್ಯುಕ್ತ್ವಾ ಕ್ಷಿಪಂತ್ಯಾಜ್ಯಾಹುತೀರ್ಮಖೇ ।
ಏವಮುದ್ಘುಷ್ಯತಾಂ ತತ್ರ ಕಾಲೇ ಕಾಲೇ ಪ್ರಜುಹ್ವತಾಂ ॥ ೨೫ ॥

೨೨-೨೩. ಆಗ ಬ್ರಹ್ಮನು ಆ ಸಕಲ ಹವಿಸ್ಸುಗಳನ್ನು ಅನಂತ ರೂಪಿಯಾದ ವಿಷ್ಣುಪರಮಾತ್ಮನಿಗೆ ಅರ್ಪಿಸಿದನು. ಯಾವ ವಿಷ್ಣುವು ಅನಂತನೆಂಬ ಸಂಜ್ಞೆಯುಳ್ಳವನೂ, ಅನಂತವಾದ ಸ್ವರೂಪವುಳ್ಳವನೂ, ಯಜ್ಞರೂಪಿಯೂ, ಯಜ್ಞವನ್ನು ಭುಂಜಿಸುವನೂ ಮತ್ತು ಅವ್ಯಯನೂ ಆಗಿರುವನೋ, ಅಂತಹ ಪರಮಾತ್ಮನು ನಾನು ಕೊಟ್ಟಿರುವ ಈ ಹವಿಸ್ಸುಗಳಿಂದ ತೃಪ್ತಿಹೊಂದಲಿ, ಎಂದು ಉದ್ದೇಶಿಸಿ ಹವಿಸ್ಸನ್ನು ತ್ಯಜಿಸುತ್ತಿದ್ದನು. ಇತರ ಯಾಜಕರು ಸುಸ್ವರದಿಂದ ಮಂತ್ರಗಳನ್ನು ಗಟ್ಟಿಯಾಗಿ ಉಚ್ಚರಿಸಿರು.

೨೪. ಆ ಯಜ್ಞಸಮಾರಂಭದಲ್ಲಿ ಹವಿಸ್ಸನ್ನು ಹೋಮಮಾಡುವ ಮೊದಲು "ಆ....ಶ್ರಾವಯ" ಎಂದು ಅಧ್ವರ್ಯುವು ಹೇಳಿದನಂತರ ಆಗ್ನೀಧ್ರನು "ಅಸ್ತು ಶ್ರೌ....ಷಟ್" ಎಂದು ಹೇಳುವನು. ಮತ್ತೆ ಅಧ್ವರ್ಯುವು "ಯಜ" ಎಂದು ಹೇಳಿದೊಡನೆ ಹೋತೃವು "ಯೇ....ಯಜಾಮಹೇ" ಮುಂತಾದ ಮಂತ್ರಗಳನ್ನು ಪಠಿಸುವನು.

೨೫. ಹಾಗೆಯೇ ಅಂತದಲ್ಲಿ ವೌ....ಷಟ್ ಎಂದು ಹೇಳಿ ಯಜ್ಞದಲ್ಲಿ ಅನೇಕ ಆಜ್ಯಾಹುತಿಗಳನ್ನು ಹೋಮಮಾಡುತ್ತಾರೆ. ಹೀಗೆ ಆಯಾಯ ಕಾಲಗಳಲ್ಲಿ ಹೋಮ ಮಾಡುತ್ತ ಹೋಮಾಂಗಮಂತ್ರಗಳನ್ನು ಉಚ್ಚಧ್ವನಿಯಿಂದ ಪಠಿಸುತ್ತಲಿದ್ದರು.

ಋತ್ವಿಜಾಂ ಶ್ರೂಯತೇ ಶಬ್ದಃ ಸರ್ವಪಾಪಹರೋ ನೃಣಾಂ ।
ಪ್ರಾತಃಸವನಕಂ ಪೂರ್ವಂ ಕೃತ್ವಾ ಮಾಧ್ಯಂದಿನಂ ತತಃ ॥ ೨೬ ॥

ಕರ್ಮಾಂತರೇ ಹೇತುವಾದಾನ್ ಪ್ರವದಂತಿ ದ್ವಿಜೋತ್ತಮಾಃ ।
ಶಿಕ್ಷಾವ್ಯಾಕರಣಜ್ಞಾಶ್ಚ ಸರ್ವಶಾಸ್ತ್ರಾರ್ಥಕೋವಿದಾಃ ॥ ೨೭ ॥

ತತ್ರ ತತ್ರ ಸಭಾಯಾಂ ತು ಪರಸ್ಪರಜಿಗೀಷಯಾ ।
ಏವಂ ಮಖೇ ವರ್ತಮಾನೇ ಪ್ರಜುಹ್ವತಿ ವಿಧಾತರಿ ॥ ೨೮ ॥

ಸರ್ವಕಾರ್ಯೈಃ ಸಮೃದ್ಧೇಷು ಬ್ರಾಹ್ಮಣೇಷು ಸಮಂತತಃ ।
ತತ್ರ ಕರ್ಮಾಣಿ ಕುರ್ವಂತಃ ಪರಮಾನಂದಸಂಭೃತಾಃ ॥ ೨೯ ॥

ಸೇಂದ್ರಾಶ್ಚ ಕೇವಲಂ ದೇವಾಃ ಪರಿತಃ ಸಂಚರಂತಿ ಹಿ ।
ತಾನ್ ದೃಷ್ಟ್ವಾ ತತ್ರ ದೈತೇಯಾ ದೇವಾನಿಂದ್ರಪುರೋಗಮಾನ್ ॥೩೦॥

---

೨೬. ಋತ್ವಿಜರ ಈ ಮಂತ್ರೋಚ್ಚಾರಣ ಶಬ್ದವು ಮನುಷ್ಯರ ಸಕಲ ಪಾಪಗಳನ್ನು ಭಂಗಮಾಡುವಂತೆ ಕೇಳಿಸುತ್ತಿತ್ತು. ಹಾಗೆಯೇ ಪ್ರಾತಃಸವನವನ್ನು ಮೊದಲು ಪೂರೈಸಿ ಮಾಧ್ಯಂದಿನವೆಂಬ ದ್ವಿತೀಯ ಸವನವನ್ನು ನೆರವೇರಿಸಿದರು.

೨೭. ಕರ್ಮಗಳನ್ನು ಆಚರಿಸಿ ನಡುವೆ ಲಭಿಸುವ ವಿಲಂಬ ಸಮಯಗಳಲ್ಲಿ ಅನೇಕ ಶಿಕ್ಷಾ, ವ್ಯಾಕರಣ ಮುಂತಾದ ಸಕಲ ಶಾಸ್ತ್ರಕೋವಿದರಾದ ದ್ವಿಜೋತ್ತಮರು ಹೇತುವಾದವನ್ನು ಅಧಿಕರಿಸಿ ವಾದಿಸಿದರು.

೨೮. ಅಲ್ಲಲ್ಲಿ ಸಭೆ ಸೇರಿ ವಿದ್ವಾಂಸರು ಪರಸ್ಪರವಾಗಿ ಜಯಿಸಬೇಕೆಂಬ ಕುತೂಹಲದಿಂದ ವಾದಮಾಡಿದರು. ಈರೀತಿ ಬ್ರಹ್ಮನು ಹೋಮಮಾಡುತ್ತ ಆ ಯಜ್ಞವು ನಡೆಯುತ್ತಲಿತ್ತು.

೨೯. ಸಕಲ ಕರ್ತವ್ಯಸಮೃದ್ಧಿಯುಳ್ಳ ಬ್ರಾಹ್ಮಣರು ಸುತ್ತಲೂ ಇರಲು ಆ ಕರ್ಮವನ್ನು ಮಾಡುವವರು ಪರಮಾನಂದಸಂಪನ್ನರಾಗಿ ಕರ್ಮಗಳನ್ನು ಆಚರಿಸಿದರು.

೩೦. ಆಗ ಇಂದ್ರ ಮುಂತಾದ ದೇವತೆಗಳು ತಮ್ಮತಮ್ಮ ಅಧಿಕಾರದಿಂದ ಅಲ್ಲಲ್ಲಿ ಸಂಚರಿಸುತ್ತಿದ್ದರು. ಆಗ ಇಂದ್ರನೇ ಮುಂತಾದ ದೇವತೆಗಳನ್ನು ದೈತ್ಯರು ನೋಡಿದರು.

ವಿಪ್ರಚಿತ್ತಿಮುಖಾಃ ಸರ್ವೇ ಸಹಿತಾಃ ಸರ್ವರಾಕ್ಷಸೈಃ ।
ವಯಂ ಚ ಕುರ್ಮಃ ಕರ್ಮಾಣಿ ಸ್ವೀಯೇ ಪೈತಾಮಹೇ ಮಖೇ ॥ ೩೧ ॥

ನಿರೋದ್ಧುಮಸ್ಮಾನ್ ಕಃ ಶಕ್ತ ಇತಿ ಸಂಜಾತವಿಸ್ಮಯಾಃ ।
ಧನಾನಿ ತತ್ರ ವಾಸಾಂಸಿ ರತ್ನಾನಿ ವಿವಿಧಾನಿ ಚ ॥ ೩೨ ॥

ಬ್ರಾಹ್ಮಣೇಭ್ಯಃ ಪ್ರಯಚ್ಛಂತಃ ಸಭಾಯಾಂ ಪರಿಚಕ್ರಮುಃ ।
ಧನೇಭ್ಯೋ ದೇವದತ್ತೇಭ್ಯೋ ದದುರ್ದಶಗುಣಾಧಿಕಂ ॥ ೩೩ ॥

ಸ್ಪರ್ಧಯಾ ದದತಾಂ ತೇಷಾಮುದ್ಯಮಂ ವೀಕ್ಷ್ಯ ವಾಸವಃ ।
ಸ ಸಂರಬ್ಧತರೋ ಭೂತ್ವಾ ಕುಬೇರಂ ವೀಕ್ಷ್ಯ ಚಾಬ್ರವೀತ್ ॥ ೩೪ ॥

ಧನರತ್ನಪ್ರದಾನೇ ತ್ವಂ ನಿರ್ದಿಷ್ಟಃ ಕಿಲ ವೇಧಸಾ ।
ಧನಾಧ್ಯಕ್ಷೋಽಸಿ ಮಂದಾತ್ಮನ್ ಭೃತ್ಯಾ ಯಕ್ಷಾ ನ ಕಿಂ ತವ ॥ ೩೫ ॥

---

೩೧. ದೇವತೆಗಳನ್ನು ನೋಡಿದ ವಿಪ್ರಚಿತ್ತಿ ಮುಂತಾದ ರಾಕ್ಷಸರು ಇತರ ಸಕಲ ರಾಕ್ಷಸರೊಡಗೂಡಿ ನಮ್ಮ ಪಿತಾಮಹನಾದ ಬ್ರಹ್ಮದೇವನ ಯಜ್ಞದಲ್ಲಿ ನಾವು ಕೂಡ ಕರ್ಮಗಳನ್ನು ಆಚರಿಸೋಣವೆಂದು ಚಿಂತಿಸಿದರು.

೩೨. ಮತ್ತು ನಾವು ನಮ್ಮ ಕರ್ತವ್ಯ ಮಾಡುವುದನ್ನು ತಡೆಯಲು ಯಾರಿಗೆ ತಾನೆ ಶಕ್ತಿಯಿರುವುದು? ಎಂದು ಚಿಂತಿಸಿ ಆಶ್ಚರ್ಯಚಕಿತರಾಗಿ ಅನೇಕ ಧನ, ವಸ್ತ್ರ, ವಿವಿಧ ರತ್ನ ಮುಂತಾದುವುಗಳನ್ನು ಹಂಚಲಾರಂಭಿಸಿದರು.

೩೩. ಧನ ಮುಂತಾದುವುಗಳನ್ನು ಬ್ರಾಹ್ಮಣರಿಗೆ ಯಥೇಷ್ಟವಾಗಿ ದಾನ ಮಾಡುತ್ತ ಬ್ರಾಹ್ಮಣರ ಸಭೆಯಲ್ಲಿ ಸಂಚರಿಸಿದರು. ದೇವತೆಗಳು ದಾನಮಾಡಿದ್ದಕ್ಕಿಂತ ದಶಗುಣವಾಗಿ ಸ್ಪರ್ಧೆಯಿಂದ ತಾವು ದಾನಮಾಡಿದರು.

೩೪. ಹೀಗೆ ಸ್ಪರ್ಧೆಯಿಂದ ದಾನಮಾಡುತ್ತಿರುವ ರಾಕ್ಷಸರ ಉದ್ಯೋಗ ಸಂಭ್ರಮವನ್ನು ಇಂದ್ರನು ಕಂಡು ಸ್ವಲ್ಪ ಅಸಹನೆಯ ವೇಗವುಳ್ಳವನಾಗಿ ಕುಬೇರನನ್ನು ನೋಡಿ ಈರೀತಿಯಾಗಿ ಹೇಳಿದನು.

೩೫. ಕುಬೇರನೆ! ಧನ ರತ್ನಗಳನ್ನು ದಾನಮಾಡುವ ಅಧಿಕಾರದಲ್ಲಿ ಬ್ರಹ್ಮನು ನಿನ್ನನ್ನು ನಿಯಮಿಸಿರುವನಲ್ಲವೆ? ನೀನು ಧನಾಧ್ಯಕ್ಷನು, ಅಲ್ಪಬುದ್ಧಿಯುಳ್ಳವನೆ! ನಿನಗೆ ಯಕ್ಷರು ಸೇವಕರಾಗಿ ಬೇಕಾದಷ್ಟುಮಂದಿ ಇಲ್ಲವೆ?

ಅಸುರಾಣಾಂ ಕರೇ ದತ್ವಾ ಧನಂ ಸ್ವೈತಾನಿಕಂ ಬಹು ।
ದಾಪಯಸ್ಯಸುರೈರ್ದಾನಂ ವಿಪ್ರೇಭ್ಯಸ್ತ್ವಂ ವಿಶೇಷತಃ ॥ ೩೬ ॥

ಯದ್ದಾನಂ ಬ್ರಾಹ್ಮಣೇ ದತ್ತಂ ಸ್ಪರ್ಧಯಾಽವಜ್ಞಯಾಽಪಿ ವಾ ।
ತದ್ದಾನಮಾಸುರಂ ಪ್ರಾಹುರ್ನಿಷ್ಫಲಂ ಬ್ರಹ್ಮವಿತ್ತಮಾಃ ॥ ೩೭ ॥

ತಸ್ಮಾತ್ ತ್ವಯಾ ಕಥಂ ದತ್ತಮಸುರಾಣಾಂ ವಶೇ ಧನಂ ।
ಇತಿ ಶಕ್ರವಚಃ ಶ್ರುತ್ವಾ ಕುಬೇರೋ ವಾಕ್ಯಮಬ್ರವೀತ್ ॥ ೩೮ ॥

ಬ್ರಾಹ್ಮಣೇಭ್ಯೋ ವಯಮಪಿ ದಾಸ್ಯಾಮ ಇತಿ ಚಾಸುರಾಃ ।
ಧನಂ ಮಾಮಭ್ಯಯಾಚಂತ ರತ್ನಾನಿ ವಿವಿಧಾನಿ ಚ ॥ ೩೯ ॥

ನಚೇದಹಂ ಪ್ರದಾಸ್ಯಾಮಿ ಧನಂ ಮಾಮಭಿಯಾಚತಾಂ ।
ಬಲವಂತಃ ಪ್ರಕುಪ್ಯಂತಿ ಸೋಽನರ್ಥಃ ಸುಮಹಾನ್ ಭವೇತ್ ॥ ೪೦ ॥

---

೩೬. ಈ ಯಜ್ಞೀಯವಾದ ಬಹು ಧನವನ್ನು ಅಸುರರ ಕೈಯಲ್ಲಿ ಕೊಟ್ಟು ಬ್ರಾಹ್ಮಣರಿಗೆ ವಿಶೇಷವಾದ ಧನದಾನವನ್ನು ಅಸುರರ ಕೈಯಿಂದ ಮಾಡುತ್ತಿರುವೆಯಲ್ಲ.

೩೭. ಸ್ಪರ್ಧೆಯಿಂದ ಅಥವಾ ತಿರಸ್ಕಾರದಿಂದ ಯಾವ ದಾನವು ಬ್ರಾಹ್ಮಣನಿಗೆ ಕೊಡಲ್ಪಡುವುದೋ, ಅದನ್ನು ಶ್ರೇಷ್ಠರಾದ ಬ್ರಹ್ಮಜ್ಞಾನಿಗಳು ಆಸುರದಾನವೆಂದೂ ನಿಷ್ಫಲವೆಂದೂ ಹೇಳುವರು.

೩೮. ಆದ್ದರಿಂದ ನೀನು ನಿನ್ನ ಅಧಿಕಾರದಲ್ಲಿದ್ದ ಧನವನ್ನು ಅಸುರರ ಅಧೀನಕ್ಕೆ ಹೇಗೆ ಕೊಟ್ಟಿರುವೆ? ಎಂಬುದಾಗಿ ಇಂದ್ರನು ಹೇಳಿರುವುದನ್ನು ಕೇಳಿ ಕುಬೇರನು ಪ್ರತ್ಯುತ್ತರವನ್ನು ಆಡಿದನು.

೩೯. ಅಸುರರು ನನ್ನ ಬಳಿಗೆ ಬಂದು ಬ್ರಾಹ್ಮಣರಿಗೆ ನಾವು ಕೂಡ ದಾನವಮಾಡುವೆವೆಂದು ಹೇಳಿ ಅದಕ್ಕಾಗಿ ಧನ, ವಿವಿಧ ರತ್ನ ಮುಂತಾದವುಗಳನ್ನು ನನ್ನಲ್ಲಿ ಕೇಳಿಕೊಂಡರು.

೪೦. ನನ್ನನ್ನು ಕೇಳಿಕೊಂಡಿರುವಾಗ ನಾನು ಅವರಿಗೆ ಧನವನ್ನು ಕೊಡದೆ ನಿರಾಕರಿಸುವ ಸಂದರ್ಭದಲ್ಲಿ ಬಲಿಷ್ಠರಾದ ಆ ಅಸುರರು ಕೋಪಗೊಳ್ಳುವರು. ಮುಂದೆ ಇದರಿಂದ ಮಹತ್ತಾದ ಅನರ್ಥವು ಬಂದೀತು.

ಇತಿ ಸಂಚಿಂತ್ಯ ಮನಸಾ ದತ್ತಂ ತೇಭ್ಯೋ ಧನಂ ಮಯಾ ।
ಇಂದ್ರ ಉವಾಚ:—
ಮದಾಜ್ಞಯಾ ವಿನಾ ತೇಷಾಂ ನ ದಾತವ್ಯಮಿತಃ ಪರಂ ॥ ೪೧ ॥

ಕಿಂ ಕುರ್ವಂತಿ ಪ್ರಪಶ್ಯಾಮಃ ಸರ್ವಾನಸ್ಮಾನ್ ಪ್ರಕೋಪಿತಾಃ ।
ಇತ್ಯುಕ್ತ್ವಾ ವಾಸವಃ ಕ್ರೋಧಾದ್ಗಂಧರ್ವೈಃ ಸಹಿತಸ್ತದಾ ॥ ೪೨ ॥

ಬಹಿರ್ನಿಷ್ಕಾಸಯಾಮಾಸ ಸರ್ವಾನಸುರಪುಂಗವಾನ್ ।
ಶಾಲಾಯಾಃ ಪಶ್ಚಿಮೇ ದೇಶೇ ಗಂಧರ್ವೈರ್ವಾಸವಾಜ್ಞಯಾ ॥ ೪೩ ॥

ನಿಷ್ಕಾಸಿತಾಸ್ತೇ ದೈತೇಯಾಃ ಸಂಕ್ರುದ್ಧಾಃ ಶಸ್ತ್ರಪಾಣಯಃ ।
ಪ್ರಜಘ್ನುಸ್ತತ್ರ ಗಂಧರ್ವಾನ್ ಶತಶೋಽಥ ಸಹಸ್ರಶಃ ॥ ೪೪ ॥

ಹನ್ಯಮಾನಾಸ್ತು ಗಂಧರ್ವಾ ದೈತೇಯೈಃ ಕ್ರೋಧಮೂರ್ಛಿತೈಃ ।
ದಿಶಃ ಪ್ರದುದ್ರುವುಃ ಕೇಚಿತ್ ಕೇಚಿಚ್ಛಾಲಾಂ ಪ್ರಪೇದಿರೇ ॥ ೪೫ ॥

---

೪೧. ಹೀಗೆಂದು ಮನದಲ್ಲಿ ಯೋಚಿಸಿ ನಾನು ನಿರಾಕರಿಸದೆ ಅವರಿಗೆ ಧನವನ್ನು ಕೊಟ್ಟೆನು. ಅದನ್ನು ಕೇಳಿ ಇಂದ್ರನು ಹೀಗೆ ಹೇಳಿದನು :—ಇನ್ನುಮುಂದೆ ನಾನು ಆಜ್ಞೆಮಾಡಿದ ವಿನಹ ಅವರಿಗೆ ಧನವನ್ನು ಕೊಡಕೂಡದು.

೪೨. ಇದರಿಂದ ಅಸುರರು ಕೋಪಗೊಂಡು ನಮ್ಮೆಲ್ಲರನ್ನೂ ಏನುಮಾಡುವರೋ ನೋಡೋಣ ಎಂದು ಹೇಳಿ ಆಗ ಕೋಪದಿಂದ ಇಂದ್ರನು ಗಂಧರ್ವರನ್ನು ಕರೆದನು.

೪೩. ಆ ಗಂಧರ್ವರ ಮೂಲಕವಾಗಿ ಎಲ್ಲ ಶ್ರೇಷ್ಠರಾದ ರಾಕ್ಷಸರನ್ನು ಹೊರಕ್ಕೆ ತಳ್ಳಿಸಿದನು. ಹೀಗೆ ಇಂದ್ರನ ಅಪ್ಪಣೆಯಿಂದ ಗಂಧರ್ವರು ಯಜ್ಞಶಾಲೆಯಿಂದ ಪಶ್ಚಿಮಕ್ಕೆ ರಾಕ್ಷಸರನ್ನು ತಳ್ಳಿದರು.

೪೪. ಹೊರಕ್ಕೆ ತಳ್ಳಲ್ಪಟ್ಟ ದೈತ್ಯರು ಕುಪಿತರಾಗಿ ಶಸ್ತ್ರಗಳನ್ನು ತೆಗೆದುಕೊಂಡು ಶತ-ಸಹಸ್ರಸಂಖ್ಯೆಯಿಂದ ಗಂಧರ್ವರನ್ನು ಹೊಡೆದರು.

೪೫. ಕೋಪದಿಂದ ಉದ್ರಿಕ್ತರಾದ ರಾಕ್ಷಸರಿಂದ ಹೊಡೆಯಲ್ಪಡುತ್ತಿದ್ದ ಗಂಧರ್ವರಲ್ಲಿ ಕೆಲವರು ದೇಶ-ದಿಗಂತಗಳಿಗೆ ಓಡಿಹೋದರು. ಮತ್ತೆ ಕೆಲವರು ಯಜ್ಞಶಾಲೆಯೊಳಕ್ಕೆ ಬಂದು ಸೇರಿದರು.

ತಾನ್ ದೃಷ್ಟ್ವಾ ವಿಕ್ಷತಾನ್ ಶಸ್ತ್ರೈರ್ಗಂಧರ್ವಾನಸುರೈರ್ಭೃಶಂ ।
ಬಭೂವುರ್ಭಯಸಂವಿಗ್ನಾಃ ಸರ್ವೇ ತತ್ರ ಸಭಾಸದಃ ॥ ೪೬ ॥

ಬ್ರಾಹ್ಮಣಾ ಋತ್ವಿಜಶ್ಚೈವ ಯೇ ಚ ಬ್ರಹ್ಮರ್ಷಯೋಽಪರೇ ।
ತ್ಯಕ್ತ್ವಾ ವೈತಾನಿಕಂ ಕರ್ಮ ತೂಷ್ಣೀಂ ಸಂಭ್ರಾಂತಮಾನಸಾಃ ॥ ೪೭ ॥

ಕೇನೇದಂ ಕಿಮಿದಂ ಚೇತಿ ಜಜಲ್ಪುಶ್ಚ ಪರಸ್ಪರಂ ।
ಅಸುರಾಶ್ಚಾಪಿ ಶಾಲಾಯಾ ಬಹಿಃ ಪಶ್ಚಿಮತಃ ಪೃಥಕ್ ॥ ೪೮ ॥

ರಾಕ್ಷಸೈಃ ಸಹಿತಾಃ ಸರ್ವೈಸ್ತತೋ ಮಂತ್ರಮಮಂತ್ರಯನ್ ।
ಬಾಣಶ್ಚ ವಿಪ್ರಚಿತ್ತಿಶ್ಚ ಮುರಃ ಶಂಬರ ಏವ ಚ ॥ ೪೯ ॥

ಧುಂಧುರ್ನಾಘಃ ಕಾಲನೇಮಿರ್ಮಣಿರ್ನಾ ನಿಶಠೋ ಮಯಃ ।
ಏತೇ ಚಾನ್ಯೇ ಚ ರಾಜೇಂದ್ರ ದೈತೇಯಾ ರಾಕ್ಷಸೈಃ ಸಹ ॥ ೫೦ ॥

---

೪೬. ಆಗ ಅಲ್ಲಿದ್ದ ಎಲ್ಲ ಸಭಿಕರು ರಾಕ್ಷಸರಿಂದ ಅತಿಯಾಗಿ ಶಸ್ತ್ರಗಳಿಂದ ಹೊಡೆದು ಗಾಯಮಾಡಲ್ಪಟ್ಟ ಗಂಧರ್ವರನ್ನು ನೋಡಿ ಭೀತಿವಶರಾದರು.

೪೭. ಅಲ್ಲಿ ನೆರೆದ ಬ್ರಾಹ್ಮಣರು, ಋತ್ವಿಜರು, ಇತರ ಅನೇಕ ಬ್ರಹ್ಮರ್ಷಿಗಳು ಇವರೆಲ್ಲರೂ ಯಜ್ಞಅಂಗ ಕರ್ಮವನ್ನು ಬಿಟ್ಟು ಸುಮ್ಮನೆಇದ್ದು ಮನಸ್ಸಿನಲ್ಲಿ ಹೆಚ್ಚಾಗಿ ಗಾಬರಿಯನ್ನು ಹೊಂದಿದರು.

೪೮. ಮತ್ತು ಇದೇನು ? ಯಾರು ಹೀಗೆ ಮಾಡಿದರು ? ಎಂದು ಅನ್ಯೋನ್ಯ ವಾಗಿ ಮಾತನಾಡಿಕೊಂಡರು. ಅಸುರರು ಆ ಯಜ್ಞಶಾಲೆಯ ಪಶ್ಚಿಮದಲ್ಲಿ ಪ್ರತ್ಯೇಕ ವಾಗಿ ನಿಂತರು.

೪೯. ಮತ್ತು ಅವರಲ್ಲಿ ಮುಖ್ಯರಾದ ಬಾಣ, ವಿಪ್ರಚಿತ್ತಿ, ಮುರ ಮತ್ತು ಶಂಬರ ಮುಂತಾದ ರಾಕ್ಷಸರು ಸಕಲ ರಾಕ್ಷಸರನ್ನೂ ಸೇರಿಸಿ ಮಂತ್ರಾಲೋಚನೆಯನ್ನು ನಡೆಸಿದರು.

೫೦. ರಾಜೇಂದ್ರನೆ! ಇವರುಗಳಲ್ಲದೇ ಧುಂಧು, ಕಾಲನೇಮಿ, ಮಣಿರ್ನಾ, ನಿಶಠ, ಮತ್ತು ಮಯ ಇವರು, ಮತ್ತೆ ಇತರ ಅನೇಕ ದೈತ್ಯರು, ರಾಕ್ಷಸರೆಲ್ಲರೂ ಕೂಡ ಮಂತ್ರಾಲೋಚನೆ ಮಾಡಿದರು.

ತೇಷಾಂ ಮಧ್ಯೇ ವಿಪ್ರಚಿತ್ತಿರ್ಮಹಾನಸುರಪುಂಗವಃ ।
ತಾಂಶ್ಚ ಸರ್ವಾನ್ ಸಮಾಲೋಕ್ಯ ವಾಕ್ಯಮೇತದುವಾಚ ಹ ॥ ೫೧ ॥

ದೃಷ್ಟಾನಿ ಖಲು ದೇವಾನಾಮಕಾರ್ಯಾಣಿ ಸಭಾತಲೇ ।
ದೃಷ್ಟಃ ಖಲ್ವಸ್ಯ ದುರ್ಬುದ್ಧೇರನಯೋ ವಾಸವಸ್ಯ ಚ ॥ ೫೨ ॥

ಕಿಂ ಕರ್ತವ್ಯಮಿಹಾಸ್ಮಾಭಿರ್ವಾಸವೇನ ನಿರಾಕೃತೈಃ ।
ಏತೇ ಹಿ ಸರ್ವಶೋ ದೃಪ್ತಾಃ ಸ್ವಯಮಾಜಾನವೈರಿಣಃ ॥ ೫೩ ॥

ಅವಮಂತುಂ ಕಿಲೇಚ್ಛಂತಿ ಸರ್ವಾನಸ್ಮಾನ್ ದಿವೌಕಸಃ ।
ವಯಂ ಧಾತ್ರಾ ಸಮಾಹೂತಾ ಯಜ್ಞಂ ದ್ರಷ್ಟುಮಿಹಾಗತಾಃ ॥ ೫೪ ॥

ತೇಽಪ್ಯಾಗತಾಸ್ತಥಾ ಚಾನ್ಯೇ ಯಜ್ಞಂ ದ್ರಷ್ಟುಂ ವಯಂ ಯಥಾ ।
ಯಷ್ಟಾ ತು ಭಗವಾನ್ ಬ್ರಹ್ಮಾ ಸರ್ವೇಷಾಂ ನಃ ಪಿತಾಮಹಃ ॥ ೫೫ ॥

೫೧. ಆ ಎಲ್ಲ ರಾಕ್ಷಸರಲ್ಲಿ ವಿಪ್ರಚಿತ್ತಿಯೆಂಬ ಮಹಾ ರಾಕ್ಷಸಶ್ರೇಷ್ಠನು ಮಿಕ್ಕವರೆಲ್ಲರನ್ನೂ ನೋಡಿ ಮುಂದೆ ಹೇಳುವಂತೆ ಈ ವಚನವನ್ನು ಆಡಿದನು.

೫೨. ಈ ಸಭೆಯಲ್ಲಿ ದೇವತೆಗಳು ನಡೆಸಿದ ಅಕಾರ್ಯಗಳನ್ನು ನೀವೆಲ್ಲರೂ ನೋಡಿರುವಿರಷ್ಟೆ. ಅವರಲ್ಲಿ ದುರ್ಬುದ್ಧಿಯಿಂದ ಕೂಡಿದ ಈ ಇಂದ್ರನು ತೋರಿಸಿರುವ ಅನ್ಯಾಯವನ್ನು ಪ್ರತ್ಯಕ್ಷವಾಗಿ ಕಂಡಿರುವಿರಷ್ಟೆ.

೫೩. ಇಂದ್ರನಿಂದ ನಿರಾಕರಿಸಲ್ಪಟ್ಟಿರುವ ನಾವು ಇನ್ನುಮುಂದೆ ಮಾಡಬೇಕಾದ ಕಾರ್ಯವೇನು? ಈ ಇಂದ್ರಾದಿ ದೇವತೆಗಳು ನಮಗೆ ಜನ್ಮಶತ್ರುಗಳಾಗಿ ಉದ್ಭವಿಸಿ ಈಗ ಸರ್ವಪ್ರಕಾರಗಳಲ್ಲಿ ನಮ್ಮೆದುರಿಗೆ ದರ್ಪಪಡುತ್ತಿರುವರು.

೫೪. ಈ ದೇವತೆಗಳೆಲ್ಲರೂ ನಮ್ಮೆಲ್ಲರನ್ನೂ ಅವಮಾನಮಾಡಲು ಅಪೇಕ್ಷಿಸಿರುವಂತೆ ತೋರುತ್ತದೆ. ನಾವಾದರೋ ಬ್ರಹ್ಮದೇವನ ಆಹ್ವಾನವನ್ನು ತೆಗೆದುಕೊಂಡು ಯಜ್ಞವನ್ನು ಸಂದರ್ಶಿಸಲು ಬಂದಿರುವೆವು.

೫೫. ಅವರು ಕೂಡ ಯಜ್ಞದರ್ಶನಾರ್ಥಿಗಳಾಗಿ ನಮ್ಮಂತೆ ಇಲ್ಲಿಗೆ ಬಂದವರಲ್ಲಿ ಕೆಲವರಾಗಿರುವರು. ಯಾಗಮಾಡುವ ಯಜಮಾನನು ನಮ್ಮೆಲ್ಲರಿಗೂ ಪಿತಾಮಹನಾದ ಬ್ರಹ್ಮದೇವನು.

ಕಿಮಾಧಿಕ್ಯಮಿಹೈತೇಷಾಂ ನ್ಯೂನತಾ ವಾ ಕಿಮದ್ಯ ನಃ ।
ಕೋ ನಾಮಾಯಂ ಹಿ ದುರ್ಬುದ್ಧಿರ್ವಾಸವೋ ವಿಸ್ಮಯಾನ್ವಿತಃ ॥ ೫೬ ॥

ಸ್ಪರ್ಧತೇಽಸ್ಮಾಭಿರತ್ಯರ್ಥಂ ಸ್ವಾತಂತ್ರ್ಯೇಣ ಕ್ರತಾವಿಹ ।
ವಿರುದ್ಧ್ಯ ಚಾಸ್ಮಾನಖಿಲಾನ್ ಕಥಮನೇನ ಜೀವಿತುಂ ॥ ೫೭ ॥

ಶಕ್ಯಂ ತದಿಹ ಪಶ್ಯಾಮೋ ದುರ್ಬುದ್ಧೇಸ್ತಸ್ಯ ವಿಕ್ರಮಂ ।
ಅದ್ಯ ಹತ್ವಾ ಸುರಾನ್ ಸರ್ವಾನ್ ತಂ ಜಾಲ್ಮಮಪಿ ವಾಸವಂ ॥ ೫೮ ॥

ಸುಖೇನ ಕಾರಯಿಷ್ಯಾಮೋ ವಯಂ ಪೈತಾಮಹಂ ಮಖಂ ।
ಇತಿ ನಿಶ್ಚಿತ್ಯ ಮನಸಾ ಯೋದ್ಧುಂ ತತ್ರಾಮರೈಃ ಸಹ ॥ ೫೯ ॥

ಹಂತುಂ ಚ ತಾನ್ ಸಮುದ್ವೇಗಂ ಚಕ್ರುಃ ಸರ್ವೇ ಸುರಾರಯಃ ।
ತತ್ರ ಯಾನೈರ್ವಿಮಾನೈಶ್ಚ ರಥವಾಜಿಗಜೈರಪಿ ॥ ೬೦ ॥

---

೫೬. ಹೀಗಿರಲು ಈ ಅವಸರದಲ್ಲಿ ದೇವತೆಗಳಿಗೆ ಆಧಿಕ್ಯವಾಗಲಿ ನಮಗೆ ನ್ಯೂನತೆಯಾಗಲಿ ಬರಲು ಕಾರಣವೇನು ? ದುರ್ಬುದ್ಧಿ ಮತ್ತು ಮದದಿಂದ ಕೂಡಿದ ಈ ಇಂದ್ರನು ಯಾರು ?

೫೭. ಅವನು ಈ ಯಜ್ಞದಲ್ಲಿ ಸ್ವಾತಂತ್ರ್ಯವನ್ನು ತೆಗೆದುಕೊಂಡು ನಮ್ಮೊಡನೆ ಅತಿಯಾಗಿ ಸ್ಪರ್ಧೆಮಾಡುತ್ತಲಿರುವನು. ಆದರೆ ಇವನು ಇನ್ನುಮುಂದೆ ನಮ್ಮೊಡನೆ ವಿರೋಧಮಾಡಿ ಹೇಗೆ ಬದುಕುವನು ?

೫೮. ಅವನು ಯಾವ ಭಾರಿ ಪರಾಕ್ರಮದಿಂದ ನಮ್ಮೆದುರಿಗೆ ಬದುಕುವನೋ ಅಂತಹ ದುರ್ಬುದ್ಧಿಯಾದ ಇಂದ್ರನ ಪರಾಕ್ರಮವನ್ನು ನೋಡೋಣ. ಈದಿನ ನಿಖಿಲ ದೇವತೆಗಳನ್ನೂ ವಂಚಕನಾದ ಇಂದ್ರನನ್ನೂ ಸಂಹರಿಸೋಣ.

೫೯. ದೇವತೆಗಳನ್ನೆಲ್ಲ ಸಂಹರಿಸಿ ಮುಂದೆ ನಿಂತು ಬ್ರಹ್ಮನ ಅಶ್ವಮೇಧಯಾಗವನ್ನು ಸುಖವಾಗಿ ಮಾಡಿಸೋಣ. ಹೀಗೆಂದು ಚಿಂತಿಸಿ ದೇವತೆಗಳ ಸಂಗಡ ಅಲ್ಲಿ ಯುದ್ಧಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿದರು.

೬೦. ಮತ್ತು ದೇವಶತ್ರುಗಳಾದ ಸಕಲ ರಾಕ್ಷಸರು ದೇವತೆಗಳನ್ನು ಸಂಹರಿಸಲು ವೃಥಸಂಭ್ರಮವನ್ನು ಮಾಡಿದರು. ಆಗ ಯುದ್ಧಕ್ಕೆ ಸಿದ್ಧವಾಗಿ ನಿಂತ ರಾಕ್ಷಸ

ರಾಕ್ಷಸೈರ್ದಾನವೈಃ ಪೂರ್ಣಾ ದೈತೇಯೈಶ್ಚ ಸಮಂತತಃ ।
ಅಕ್ಷೋಹಿಣ್ಯಃ ಷಷ್ಟಿಕೋಟ್ಯಃ ಸಂಕ್ಷುಬ್ಧಾರ್ಣವಸನ್ನಿಭಾಃ ॥ ೬೧ ॥

ಸಮಾಗತಾಸ್ತದಾ ದೃಷ್ಟಾ ಭೂಮೌ ಚೈವಾಂಬರೇಽಪಿ ಚ ।
ನೈರ್ಋತ್ಯಾಂ ರಾಕ್ಷಸೀ ಸೇನಾ ಪಶ್ಚಿಮೇ ಚಾಸುರೀ ಚಮೂಃ ॥ ೬೨ ॥

ಏವಂ ದ್ವಿಧಾ ವಿಭಜ್ಯೈವ ತಾಂ ಸೇನಾಂ ಚತುರಂಗಿಣೀಂ ।
ಹತ್ವಾ ದೇವಗಣಾನ್ ಸರ್ವಾನ್ ದಗ್ಧ್ವಾ ಕಾಂಚೀಪುರೀಮಿತಃ ॥ ೬೩ ॥

ಬದ್ಧ್ವಾ ಗೃಹೀತ್ವಾ ದೇವೇಂದ್ರಂ ಪ್ರಯಾಮ ಇತಿ ದರ್ಪಿತಾಃ ।
ವಿಸೃಜಂತಃ ಶರಾನ್ ಘೋರಾನ್ ಪ್ರಾಸಶಕ್ತ್ಯೃಷ್ಟಿಮುದ್ಗರಾನ್ ॥ ೬೪ ॥

ಸೈನ್ಯಗಳಲ್ಲಿ ವಾಹನಗಳು, ವಿಮಾನಗಳು, ರಥಗಳು, ಕುದುರೆಗಳು ಮತ್ತು ಆನೆ ಮುಂತಾದ ಸೇನಾಂಗಗಳು ಕಾಣಿಸಿದುವು.

೬೧. ರಾಕ್ಷಸರಿಂದಲೂ, ದಾನವರಿಂದಲೂ ಮತ್ತು ದೈತ್ಯರಿಂದಲೂ ಸುತ್ತಲೂ ವ್ಯಾಪಿಸಲ್ಪಟ್ಟು ಕ್ಷೋಭೆಗೊಂಡಿರುವ ಪ್ರಲಯಸಮುದ್ರದಂತೆ ಅರವತ್ತುಕೋಟಿ ಅಕ್ಷೋಹಿಣಿಸೈನ್ಯವು ಯುದ್ಧಕ್ಕೆ ಸಿದ್ಧವಾಯಿತು.

೬೨. ಆ ಸೈನಿಕರು ಬಹುದರ್ಪದಿಂದ ಕೆಲವರು ಭೂಮಿಯಲ್ಲಿಯೂ ಮತ್ತೆ ಕೆಲವರು ಆಕಾಶದಲ್ಲಿಯೂ ಬಂದರು. ಮತ್ತು ನೈರ್ಋತ್ಯ ದಿಕ್ಕಿನಲ್ಲಿ ರಾಕ್ಷಸರ ಸೇನೆಯನ್ನೂ ಪಶ್ಚಿಮದಲ್ಲಿ ಅಸುರಸೇನೆಯನ್ನೂ ವ್ಯವಸ್ಥೆಮಾಡಿದರು.

೬೩. ಹೀಗೆ ತಮ್ಮ ಆನೆ, ಕುದುರೆ, ರಥ, ಮತ್ತು ಕಾಲಾಳುಗಳೆಂಬ ಚತುರಂಗಗಳಿಂದ ಕೂಡಿದ ಸೈನ್ಯವನ್ನು ಎರಡಾಗಿ ಭಾಗಿಸಿ ವ್ಯವಸ್ಥೆಮಾಡಿ ಯುದ್ಧದ ಪರಿಣಾಮದಲ್ಲಿ ಹೀಗೆಂದು ನಿಶ್ಚಯಿಸಿಕೊಂಡರು. ಇಲ್ಲಿ ದೇವತೆಗಳನ್ನೆಲ್ಲಾ ಕೊಂದುಹಾಕುವುದು. ಇತ್ತಕಡೆಯಲ್ಲಿ ಕಾಂಚೀನಗರವನ್ನು ಸುಟ್ಟುಹಾಕುವುದು.

೬೪. ಮತ್ತು ದೇವೇಂದ್ರನನ್ನು ಹಿಡಿದು ಬಂಧಿಸಿ ಕರೆದುಕೊಂಡುಹೋಗುವುದು ಎಂದು ನಿಶ್ಚಯಿಸಿ ದೃಪ್ತರಾಗಿ ಕ್ರೂರವಾದ ಬಾಣಗಳನ್ನೂ ಪ್ರಾಸ, ಶಕ್ತಿ, ಋಷ್ಟಿ, ಮುದ್ಗರವೆಂಬ ಆಯುಧಗಳನ್ನೂ ಪ್ರಯೋಗಮಾಡಿದರು.

ಗರ್ಜಂತಿ ತತ್ರ ದೈತೇಯಾಃ ಪ್ರಾವೃಣ್ಮೇಘಾ ಇವಾಂಬರೇ ।
ಪ್ರಹರಂತಿ ಚ ಗಾತ್ರೇಷು ಗಂಧರ್ವಾಣಾಂ ದಿವೌಕಸಾಂ ॥ ೬೫ ॥

ಗದಾಭಿರ್ಭಿಂದಿಪಾಲೈಶ್ಚ ಪುರೀಂ ವಿಧ್ವಂಸಯಂತಿ ಚ ।
ತೈರರ್ದಿತಾ ಜನಾಃ ಸರ್ವೇ ಕ್ರೋಶಂತಃ ಪುರವಾಸಿನಃ ॥ ೬೬ ॥

ತ್ಯಕ್ತ್ವಾ ಗೃಹಾಣಿ ಪರಿತೋ ದುದ್ರುವುರ್ಭಯಕಂಪಿತಾಃ ।
ಶಾಲಾಯಾಮಪಿ ಗಂಧರ್ವಾ ಬ್ರಾಹ್ಮಣಾ ಋತ್ವಿಜಶ್ಚ ಯೇ ॥ ೬೭ ॥

ಸಹ ಸ್ತ್ರೀಬಾಲವೃದ್ಧೈಶ್ಚ ಶಾಲಾಂ ತ್ಯಕ್ತ್ವಾ ಪ್ರದುದ್ರುವುಃ ।
ತತಃ ಸೇಂದ್ರಾ ದಿವಿಷದೋ ಯುದ್ಧ್ವಾ ತೈರ್ಬಹುಶೋ ನೃಪ ॥ ೬೮ ॥

ಯಾವಚ್ಛಕ್ತಿ ಪರಿಶ್ರಾಂತಾ ಬ್ರಹ್ಮಾಣಂ ಶರಣಂ ಯಯುಃ ।
ತಾನುದ್ವೀಕ್ಷ್ಯ ತದಾ ಬ್ರಹ್ಮಾ ದೇವಾನಸುರವಿಕ್ಷತಾನ್ ॥ ೬೯ ॥

---

೬೫. ಆಕಾಶದಲ್ಲಿ ವರ್ಷಾಕಾಲದ ಮೇಘಗಳಂತೆ ದೈತ್ಯರು ಆ ಯುದ್ಧರಂಗದಲ್ಲಿ ಗರ್ಜಿಸುತ್ತಿದ್ದರು. ಮತ್ತು ದೇವತೆಗಳ, ಗಂಧರ್ವರ ಶರೀರಗಳಲ್ಲಿ ಪ್ರಹರಿಸುತ್ತಲಿದ್ದರು.

೬೬. ಗದೆ, ಭಿಂದಿಪಾಲ ಮುಂತಾದ ಆಯುಧಗಳಿಂದ ಕಾಂಚೀನಗರಿಯನ್ನು ಧ್ವಂಸಮಾಡುತ್ತಲಿದ್ದರು. ಆಗ ಅವರಿಂದ ಪೀಡಿತರಾದ ಪುರವಾಸಿಗಳಾದ ಸಕಲ ಜನರು ಬಹು ಆಕ್ರೋಶಿಸಿದರು.

೬೭. ಮತ್ತು ಅತ್ಯಂತ ಭಯದಿಂದ ಕಂಪಿತರಾಗಿ ತಮ್ಮ ಮನೆಗಳನ್ನು ಬಿಟ್ಟು ಸುತ್ತಲೂ ಓಡಿಹೋದರು. ಇತ್ತ ಯಜ್ಞಶಾಲೆಯಲ್ಲಿ ಗಂಧರ್ವರು, ಬ್ರಾಹ್ಮಣರು ಮತ್ತು ಋತ್ವಿಜರೆಲ್ಲರೂ ನಿಲ್ಲಲಾರದೇ ಹೋದರು.

೬೮. ಆದುದರಿಂದ ಸ್ತ್ರೀ-ಬಾಲ-ವೃದ್ಧರಿಂದ ಕೂಡಿ ಆ ಶಾಲೆಯನ್ನು ಬಿಟ್ಟು ಧಾವಿಸಿದರು. ರಾಜನೆ! ಆಗ ಇಂದ್ರನಿಂದ ಕೂಡಿ ಸಮಸ್ತ ದೇವತೆಗಳೂ ಬಹಳ ಹೊತ್ತು ಯುದ್ಧಮಾಡಿದರು.

೬೯. ತಮ್ಮ ಶಕ್ತಿಮೀರಿ ಯುದ್ಧಮಾಡಿ ಕಡೆಯಲ್ಲಿ ದಣಿದವರಾಗಿ ಬ್ರಹ್ಮನನ್ನು ಶರಣುಹೊಂದಿದರು. ಆಗ ಬ್ರಹ್ಮನು ರಾಕ್ಷಸರಿಂದ ಛಿನ್ನಭಿನ್ನರಾದ ದೇವತೆಗಳನ್ನು ನೋಡಿದನು.

ಭೀತಾನ್ ಬ್ರಹ್ಮರ್ಷೀಂಶ್ಚೈವ ಪುರೀಂ ಶಾಲಾಂ ಚ ನಿರ್ಜನಾಂ ।
ಉದ್ಧತಾನಸುರಾಂಶ್ಚೈವ ಯೋದ್ಧುಕಾಮಾನುಪಸ್ಥಿತಾನ್ ॥ ೭೦ ॥

ಮಹಾವಿಘ್ನಃ ಪ್ರವೃತ್ತೋಽಯಂ ಯಜ್ಞಸ್ಯೇತಿ ವಿಚಿಂತಯನ್ ।
ದಧ್ಯೌ ವಿಘ್ನವಿಘಾತಾಯ ದೇವಂ ನಾರಾಯಣಂ ಹರಿಂ ॥ ೭೧ ॥

ತಂ ವಿನಾ ಯಜ್ಞಗೋಪ್ತಾರಂ ನ ಜಾನೇಽನ್ಯಂ ಜಗತ್ತ್ರಯೇ ।
ಸರ್ವವಿಘ್ನಪ್ರಶಮನಂ ವ್ರಜಾಮಿ ಶರಣಂ ಹರಿಂ ॥ ೭೨ ॥

ಇತ್ಯಂಬುಜಾಕ್ಷಂ ಮನಸಾಽನುಚಿಂತಯ-
ನ್ನುದ್ವೀಕ್ಷ್ಯ ವಿಘ್ನಂ ಸಮುಪಸ್ಥಿತಂ ಕ್ರತೋಃ ।
ನಿಮೀಲಿತಾಕ್ಷಃ ಕಮಲಾಸನಸ್ತದಾ
ಪ್ರಣಮ್ಯ ಬದ್ಧಾಂಜಲಿರಸ್ತುವದ್ಧರಿಂ ॥ ೭೩ ॥

೭೦. ಮತ್ತು ಬ್ರಹ್ಮನು ಭೀತಿಗೊಂಡಿರುವ ಬ್ರಹ್ಮರ್ಷಿಗಳನ್ನೂ, ಕಾಂಚೀ ನಗರ ಯಜ್ಞಶಾಲೆಗಳು ನಿರ್ಜನವಾಗಿರುವುದನ್ನೂ ಮತ್ತೆ ಮತ್ತೆ ಉದ್ಧತರಾಗಿ ಯುದ್ಧ ಮಾಡುವ ಇಷ್ಟದಿಂದ ಬರುತ್ತಿದ್ದ ಅಸುರರನ್ನೂ ನೋಡಿದನು.

೭೧. ಆಗ ತನ್ನ ಯಜ್ಞಕ್ಕೆ ಇದೊಂದು ದೊಡ್ಡ ವಿಘ್ನವು ಪ್ರಾಪ್ತವಾಯಿತೆಂದು ಚಿಂತಿಸಿ ಆ ವಿಘ್ನಶಾಂತಿಗೋಸ್ಕರ ಸಕಲಜೀವ ಸಂರಕ್ಷಕನಾದ ಮತ್ತು ದೀಪ್ಯಮಾನ ನಾದ ವಿಷ್ಣುಪರಮಾತ್ಮನನ್ನು ಧ್ಯಾನಿಸಿದರು.

೭೨. ಲೋಕತ್ರಯದಲ್ಲಿ ಶ್ರೀಮನ್ನಾರಾಯಣನನ್ನು ಬಿಟ್ಟು ಮತ್ತೊಬ್ಬ ಯಜ್ಞ ರಕ್ಷಕನನ್ನು ನಾನು ತಿಳಿಯಲಿಲ್ಲ. ಆದುದರಿಂದ ಸಮಸ್ತ ವಿಘ್ನಭಂಜಕನಾದ ಹರಿ ಯನ್ನು ನಾನು ಶರಣುಹೊಂದುವೆನು.

೭೩. ಹೀಗೆಂದು ಪದ್ಮದಳದಂತೆ ಕಣ್ಣುಗಳುಳ್ಳ ಹರಿಯನ್ನು ಮನಸ್ಸಿನಲ್ಲಿ ಸ್ಮರಿಸುತ್ತ ಯಜ್ಞಕ್ಕೆ ಒದಗಿದ ಮಹತ್ತಾದ ವಿಘ್ನವನ್ನು ನೋಡಿ ಆಗ ಪದ್ಮದಲ್ಲಿ ಹುಟ್ಟಿದ ಬ್ರಹ್ಮದೇವನು ಕಣ್ಣುಗಳನ್ನು ಮುಚ್ಚಿಕೊಂಡವನಾಗಿ ಅಂಜಲಿ ಕಟ್ಟಿಕೊಂಡು ಹರಿಯನ್ನು ನಮಸ್ಕರಿಸಿ ಸ್ತುತಿಸಿದನು.

ನಮೋ ನಮಸ್ತೇ ಜಗದಾದಿಹೇತವೇ
ನಾರಾಯಣಾಯಾಖಿಲಕರ್ಮಸಾಕ್ಷಿಣೇ ।
ನಿರಂಜನಾನಂತಗುಣಾಮೃತಾಬ್ಧಯೇ
ನಿಜಾಶ್ರಿತಾನಂದಫಲಪ್ರದಾಯಿನೇ ॥ ೨೪ ॥

ನಿರೀಶ್ವರಂ ನಿರ್ಮಲಬೋಧಬೋಧ್ಯಂ
ನಿರಂಜನಂ ನಿರ್ಗುಣಮಪ್ರಮೇಯಂ ।
ನಿರಂತರಾನಂದಘನಂ ನಿರೀಹಂ
ನಿರಾಶ್ರಯಂ ತ್ವಾಂ ಶರಣಂ ಪ್ರಪದ್ಯೇ ॥ ೨೫ ॥

ಸತ್ಯಂ ಪರಂ ಸತ್ಯನಿಧಿಂ ವಿಶುದ್ಧಂ
ಸತ್ಯಸ್ಯ ಯೋನಿಂ ಸಚರಾಚರಸ್ಯ ।
ಸತ್ಯಾತ್ಮಕಂ ಸತ್ಯರತಿಂ ಪ್ರಶಾಂತಂ
ಸತ್ಯವ್ರತೇಶಂ ಶರಣಂ ಪ್ರಪದ್ಯೇ ॥ ೨೬ ॥

---

೨೪. ಪರಮಾತ್ಮನೆ ! ಸಕಲ ಪ್ರಪಂಚಕ್ಕೆ ಆದಿಕಾರಣನೂ, ಜೀವರಾಶಿಯು ಮಾಡುವ ನಿಖಿಲ ಕರ್ಮಗಳಿಗೆ ಸಾಕ್ಷಿಸ್ವರೂಪನೂ, ನಿರ್ದೋಷನೂ, ಅನಂತಗುಣಾಮೃತಗಳಿಗೆ ಸಮುದ್ರಪ್ರಾಯನೂ ಮತ್ತು ಆಶ್ರಿತರಾದ ಭಕ್ತರಿಗೆ ಆನಂದಫಲವನ್ನು ಅನುಗ್ರಹಿಸುವವನೂ ಆದ ನಾರಾಯಣನೆಂಬ ಪವಿತ್ರನಾಮವುಳ್ಳ ನಿನಗೆ ನಮಸ್ಕಾರವು.

೨೫. ನಿನ್ನ ಮೂರ್ತಿಯು ಬೇರೆ ನಿಯಾಮಕನಿಲ್ಲದುದು, ನಿರ್ದೋಷವಾದ ತತ್ತ್ವಜ್ಞಾನದಿಂದ ತಿಳಿಯಲು ಯೋಗ್ಯವು, ದೋಷಸಂಪರ್ಕವಿಲ್ಲದುದು, ನಿರ್ಗುಣವು, ಸಕಲ ಪ್ರಮಾಣಗಳಿಗೆ ಅಗೋಚರವು, ತತ್ತ್ವಾಂತರಸಂಪರ್ಕವಿಲ್ಲದ ಆನಂದಘನದ ಸ್ವರೂಪವು, ಆಪ್ತಕಾಮವು ಮತ್ತು ಪ್ರತ್ಯೇಕವಾದ ಆಧಾರರಹಿತವು. ಇಂತಹ ನಿನ್ನನ್ನು ನಾನು ಶರಣುಹೊಂದುವೆನು.

೨೬. ಮತ್ತು ಸತ್ಯವಸ್ತುಗಳಲ್ಲೆಲ್ಲ ಅಬಾಧಿತವಾದ ಸತ್ಯಸ್ವರೂಪವು, ಸತ್ಯಕ್ಕೆ ನಿಧಿಯಂತಿರುವುದು, ಪವಿತ್ರವಾದುದು, ಶಾಶ್ವತವಾದ ಚರಾಚರಪ್ರಪಂಚಕ್ಕೆ ಕಾರಣವು, ಸತ್ಯಸ್ವರೂಪವು, ಸತ್ಯದಲ್ಲಿ ಪ್ರೇಮವುಳ್ಳದ್ದು, ಸಕಲ ವಿಕಾರ ಶಾಂತ್ಯಾಧಾರವು ಮತ್ತು ಸತ್ಯವ್ರತಕ್ಷೇತ್ರಕ್ಕೆ ನಿಯಾಮಕವು, ಇಂತಹ ನಿನ್ನನ್ನು ಶರಣುಹೊಂದುವೆನು.

ತ್ವದಾಜ್ಞಯೈವಾಭವಮತ್ರ ಯಷ್ಟುಂ
ಸಮುದ್ಯತೋಽಹಂ ಸಹಿತಃ ಸುರಾದ್ಯೈಃ ।
ಅತಸ್ತ್ವಮೇವಾಶು ಸಮೇತ್ಯ ಸಾಂಪ್ರತಂ
ನಿರಂತರಾಯಂ ಕುರು ಮೇ ಮಖಂ ವಿಭೋ ॥ ೭೭ ॥

ಏವಂ ತದಾ ಸಂಸ್ತುವತೋಽಬ್ಜಜಸ್ಯ
ಗೋಪ್ತುಂ ಮಖಂ ಭಕ್ತಜನಾರ್ತಿಹಾ ಹರಿಃ ।
ತತ್ರಾವಿರಾಸೀದಸುರಾನ್ ಮಖಘ್ನಾನ್
ನಿಹಂತುಮುದ್ಯಮ್ಯ ಕರೇಣ ಶಾರ್ಙ್ಗಂ ॥ ೭೮ ॥

ರಥೇ ಸ್ಥಿತಃ ಕಾಂಚನಶೈಲಕಲ್ಪೇ
ಗದೀ ನಿಷಂಗೀ ಕವಚೀ ಕಿರೀಟೀ ।
ಮನುಷ್ಯರಾಜನ್ಯವಪುರ್ಮಹಾತ್ಮಾ
ವಿಗರ್ಜಮಾನೋಽಂಬುದವದ್ಘನಾಭಃ ॥ ೭೯ ॥

---

೭೭. ಸ್ವಾಮಿಯೆ ! ನಿನ್ನ ಆಜ್ಞೆಯಿಂದಲೇ ನಾನು ಇಲ್ಲಿ ದೇವಾದಿಗಳೊಂದಿಗೆ ಸೇರಿ ಯಜ್ಞಮಾಡಲು ಆರಂಭಿಸಿರುವೆನು. ಆದುದರಿಂದ ಈಗ ನೀನು ಬೇಗ ಇಲ್ಲಿಗೆ ಬಂದು ನನ್ನ ಯಜ್ಞವನ್ನು ವಿಘ್ನವಿಲ್ಲದೆ ಸಮಾಪ್ತಿಯಾಗುವಂತೆ ಮಾಡು.

೭೮. ಈರೀತಿಯಾಗಿ ಬ್ರಹ್ಮನಿಂದ ಸ್ತುತಿಸಲ್ಪಟ್ಟ ಭಕ್ತಜನರ ಪೀಡಾಪರಿಹಾರ ವ್ರತದಲ್ಲಿ ಪರಾಯಣನಾದ ಹರಿಯು ಸ್ತುತಿಮಾಡುತ್ತಲಿದ್ದ ಬ್ರಹ್ಮನ ಯಜ್ಞವನ್ನು ರಕ್ಷಿಸಲು ಕೈಯ್ಯಲ್ಲಿ ಶಾರ್ಙ್ಗಾಯುಧವನ್ನು ಎತ್ತಿಹಿಡಿದು ಯಜ್ಞಭಂಜಕರಾದ ಅಸುರರನ್ನು ಸಂಹರಿಸಲು ಅಲ್ಲಿ ಪ್ರಾದುರ್ಭವಿಸಿದನು.

೭೯. ಮಹಾತ್ಮನೂ ನೀಲಮೇಘಶ್ಯಾಮನೂ ಆದ ಹರಿಯು ಸುವರ್ಣಮಯವಾದ ಮೇರುಪರ್ವತದಂತೆ ಇರುವ ರಥದಲ್ಲಿ ಕುಳಿತುಕೊಂಡು ಗದೆ, ಬತ್ತಳಿಕೆ, ಕವಚ ಮತ್ತು ಕಿರೀಟಾದಿ ಉಪಕರಣಗಳಿಂದ ಮನುಷ್ಯಲೋಕದ ರಾಜನ ವೇಷವನ್ನು ಧರಿಸಿ ಮೇಘಗಳಂತೆ ಗರ್ಜಿಸುತ್ತ ಆವಿರ್ಭವಿಸಿದನು.

ಸ ಚಾಪಮುದ್ಯಮ್ಯ ಭುಜಂಗಕಲ್ಪಂ
ಶರೈಶ್ಚ ವಜ್ರಾಶನಿಸನ್ನಿಕಾಶೈಃ ।
ವವರ್ಷ ರಕ್ಷಸ್ಸು ತಥಾಽಸುರೇಷು
ಯಥಾಽಶ್ಮವೃಷ್ಟ್ಯಾ ಕಲಮೇಷು ವಜ್ರೀ ॥ ೮೦ ॥

ತೈರರ್ದಿತಾ ವಿಷ್ಣುಸಮೀರಿತೈಃ ಶರೈಃ
ಪ್ರಭಿನ್ನಬಾಹೂದರಪಾದಕಂಧರಾಃ ।
ನಿಪೇತುರುರ್ವ್ಯಾಂ ನಿಮಿಷಾತ್ ಸಹಸ್ರಶಃ
ಪ್ರದುದ್ರುವುಃ ಪ್ರಾಣಪರೀಪ್ಸವೋಽಪರೇ ॥ ೮೧ ॥

ತದಾ ನೃಪಂ ವೀಕ್ಷ್ಯ ಸವಾಸವಾಃ ಸುರಾ-
ಸ್ತಂ ಮನ್ಯಮಾನಾ ಹರಿಮಪ್ರಮೇಯಮ್ ।
ತದಾಶ್ರಯಾದಾಗತಸತ್ತ್ವಧೈರ್ಯಾ
ನಿಜಘ್ನುರೇತೇಽಪ್ಯಸುರಾನ್ ಸಮಂತಾತ್ ॥ ೮೨ ॥

---

೮೦. ಆಗ ಹರಿಯು ಸರ್ಪಪಾಶದಂತೆ ಇರುವ ಬಿಲ್ಲನ್ನು ಎತ್ತಿ ವಜ್ರಾಯುಧದಂತೆ ಇರುವ ಬಾಣಗಳನ್ನು ಸಂಧಾನಮಾಡಿ ಮೇಘಾಧಿಪತಿಯಾದ ಇಂದ್ರನು ಭತ್ತದ ಪೈರಿನಲ್ಲಿ ಕಲ್ಲಿನ ಮಳೆಯನ್ನು ಸುರಿಸಿ ಭಂಗಪಡಿಸಿದಂತೆ ಅಸುರರು ಮತ್ತು ರಾಕ್ಷಸರಲ್ಲಿ ಬಾಣಪ್ರಯೋಗ ಮಾಡಿದನು.

೮೧. ಆಗ ಅನೇಕ ಸಾವಿರಾರು ರಾಕ್ಷಸರು ವಿಷ್ಣುವಿನಿಂದ ಪ್ರಯೋಗಿಸಲ್ಪಟ್ಟ ಬಾಣಗಳಿಂದ ಹಿಂಸಿಸಲ್ಪಟ್ಟವರಾಗಿ ಬಾಹು, ಉದರ, ಪಾದ, ಮತ್ತು ಕಂಠಗಳು ಕತ್ತರಿಸಲ್ಪಟ್ಟವರಾಗಿ ಒಂದುನಿಮಿಷಮಾತ್ರಕ್ಕೆ ನೆಲದಮೇಲೆ ಬಿದ್ದರು. ಮತ್ತೆ ಕೆಲವರು ಪ್ರಾಣರಕ್ಷಣೆಗೋಸ್ಕರ ಓಡಿಹೋದರು.

೮೨. ಇಂದ್ರಾದಿ ದೇವತೆಗಳು ಆಗ ಆ ರಾಜನನ್ನು ನೋಡಿ ಅವನನ್ನು ನಿಖಿಲ ಪ್ರಮಾಣಾಗೋಚರನಾದ ಹರಿಯೆಂದು ತಿಳಿದು ಆ ಹರಿಯ ಅವಲಂಬನದಿಂದ ಶಕ್ತಿ ಧೈರ್ಯಗಳನ್ನು ಮತ್ತೆ ತೆಗೆದುಕೊಂಡವರಾಗಿ ತಾವು ಕೂಡ ಸುತ್ತಲೂ ರಾಕ್ಷಸರನ್ನು ನಿಗ್ರಹಿಸಿದರು.

ಯತೋ ಹರಿರ್ನೈರ್ಋತನಾಹಿನೀಂತಾ
ಮುದ್ಯಮ್ಯ ಶಾರ್ಙ್ಗಂ ವಿನಿಹಂತುಮಭ್ಯಗಾತ್ ।
ಅತಸ್ತಮದ್ಯಾಪಿ ವದಂತಿ ದೇವಾಃ
ಸತ್ಯವ್ರತೇ ಶಾರ್ಙ್ಗಧರಾಭಿಧಾನಂ ॥ ೮೩ ॥

ಸ ಶಾರ್ಙ್ಗಪಾಣಿರ್ವಿಸೃಜಂಶ್ಶರೌಘಾ-
ನ್ವಿದ್ರಾವ್ಯ ಸೇನಾಮಮರಾಹಿತಾನಾಂ ।
ರರಾಜ ತತ್ರೈವ ಸುರೈಃ ಸಮೀಡಿತ-
ಸ್ತಮೋ ವಿಧೂರ್ನ್ಯ ಸವಿತೇವ ರಶ್ಮಿಭಿಃ ॥ ೮೪ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಏಕಾದಶೋಽಧ್ಯಾಯಃ

---

೮೩. ಹೀಗೆ ಹರಿಯು ತನ್ನ ಶಾರ್ಙ್ಗಾಯುಧವನ್ನು ತೆಗೆದುಕೊಂಡು ಆ ರಾಕ್ಷಸರ ಸೈನ್ಯವನ್ನು ಸಂಹರಿಸಲು ಪ್ರಾದುರ್ಭವಿಸಿ ಬಂದನು. ಆದುದರಿಂದ ಆ ಸತ್ಯವ್ರತದಲ್ಲಿರುವ ವಿಷ್ಣುಮೂರ್ತಿಯನ್ನು ಸಕಲ ದೇವತೆಗಳು ಈಗಲೂ ಶಾರ್ಙ್ಗಧರ ನೆಂಬ ಸಂಜ್ಞೆಯಿಂದ ವ್ಯವಹರಿಸುತ್ತಾರೆ.

೮೪. ಶಾರ್ಙ್ಗಚಾಪವನ್ನು ಕೈಯ್ಯಲ್ಲಿ ಧರಿಸಿದ ಆ ವಿಷ್ಣುವು ಬಾಣಪರಂಪರೆ ಗಳನ್ನು ಪ್ರಯೋಗಿಸುತ್ತ ದೇವಶತ್ರುಗಳಾದ ರಾಕ್ಷಸರ ಸೈನ್ಯವನ್ನು ಓಡಿಸಿ ಕಿರಣಪುಂಜ ದಿಂದ ಅಂಧಕಾರವನ್ನು ದೂರಮಾಡುವ ತೇಜಸ್ವಿಯಾದ ಸೂರ್ಯನಂತೆ ಆ ಕ್ಷೇತ್ರದಲ್ಲಿ ದೇವತೆಗಳಿಂದ ಸ್ತುತಿಸಲ್ಪಡುವವನಾಗಿ ಪ್ರಕಾಶಿಸಿದನು.

ಕಾಂಚೀಮಾಹಾತ್ಮ್ಯದಲ್ಲಿ ಏಕಾದಶಾಧ್ಯಾಯವು ಮುಗಿದುದು.

॥ ಶ್ರೀಃ ॥

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ದ್ವಾದಶೋಽಧ್ಯಾಯಃ

ನಾರದ ಉವಾಚ:—

ಹನ್ಯಮಾನಾಂ ಸ್ವಕಾಂ ಸೇನಾಂ ದೇವೈರ್ವಿಷ್ಣುಬಲೋದ್ಧತೈಃ ।
ತತ್ರ ವಿಷ್ಣೋರ್ಬಲಂ ಚಾಪಿ ದೃಷ್ಟ್ವಾ ದೈತೇಯಪುಂಗವಾಃ ॥ ೧ ॥

ವಿಪ್ರಚಿತ್ತಿಮುಖಾಃ ಸರ್ವೇ ಗಾತ್ರೇಷು ಶರವಿಕ್ಷತಾಃ ।
ಕರ್ತವ್ಯಮೂಢಾಃ ಸಂಭ್ರಾಂತಾಃ ಸಂಲೀನಾಃ ಪುರವೇಶ್ಮಸು ॥ ೨ ॥

ಮಂತ್ರಯಂತಿ ಮಿಥಃ ಸರ್ವೇ ದೇವೈಸ್ತತ್ರಾನಿರೀಕ್ಷಿತಾಃ ।
ಯೋದ್ಧುಂ ನೈವಾದ್ಯ ಕಾಲೋ ನಃ ಸರ್ವೈರ್ದೇವಗಣೈಃ ಸಹ ॥ ೩ ॥

---

೧. ನಾರದಮುನಿಯು ಇಂತೆಂದನು:—ಬಲಿಷ್ಠರಾದ ದಾನವರು ವಿಷ್ಣುವಿನ ಬಲದಿಂದ ಮದೋದ್ಧತರಾದ ದೇವತೆಗಳಿಂದ ತಮ್ಮ ಸೇನೆಯು ಸಂಹರಿಸಲ್ಪಡುತ್ತಲಿರುವುದನ್ನೂ ವಿಷ್ಣುವಿನ ಅತಿಶಯವಾದ ಬಲವನ್ನೂ ನೋಡಿದರು.

೨. ವಿಪ್ರಚಿತ್ತಿ ಮುಂತಾದ ಎಲ್ಲ ರಾಕ್ಷಸರು ಬಾಣಗಳಿಂದ ದೇಹದಲ್ಲಿ ಗಾಯ ಹೊಂದಿದವರಾಗಿ ಮುಂದಿನ ಕರ್ತವ್ಯವನ್ನು ಅರಿಯದೇ ಗಾಬರಿಗೊಂಡು ಆ ನಗರದ ಮನೆಗಳಲ್ಲಿ ಅಲ್ಲಲ್ಲಿ ಅವಿತುಕೊಂಡರು.

೩. ಎಲ್ಲ ರಾಕ್ಷಸರು ದೇವತೆಗಳಿಗೆ ಕಾಣಿಸದಂತೆ ಸೇರಿಕೊಂಡು ಪರಸ್ಪರವಾಗಿ ಈರೀತಿಯಾಗಿ ಚಿಂತಿಸುತ್ತಿದ್ದರು. ಎಲ್ಲ ದೇವತೆಗಳೊಂದಿಗೆ ಯುದ್ಧಮಾಡಲು ನಮಗೆ ಇದು ಸರಿಯಾದ ಸಮಯವಲ್ಲ.

ಕಾಲೇನ ಪ್ರಹರಿಷ್ಯಾಮೋ ವಯಂ ಸರ್ವಾನ್ ದಿವೌಕಸಃ ।
ಕ್ಷಿಪ್ರಮುದ್ಯ ವಯಂ ಯಾಮಃ ಪಾತಾಲಂ ದಾನವಾಲಯಂ ॥ ೪ ॥

ತತ್ರಾಸ್ತಿ ಹಸ್ತಿಶೈಲಸ್ಯ ಗುಹಾಯಾಂ ಸುಮಹದ್ಬಿಲಂ ।
ತತ್ಪ್ರವಿಶ್ಯೈವ ಗಚ್ಛಾಮೋ ಯೇನ ಪೂರ್ವಂ ಗತಾ ವಯಂ ॥ ೫ ॥

ನೃಸಿಹ್ಮೇನ ಕೃತಂ ಪೂರ್ವಂ ಹಿರಣ್ಯಕಶಿಪೋರ್ವಧೇ ।
ವಿದ್ರಾವಿತಾಸ್ತದಾ ತೇನ ಸರ್ವೇ ವಯಮಿತೋ ಬಿಲಾತ್ ॥ ೬ ॥

ಅಲಕ್ಷಿತಾ ನೃಸಿಹ್ಮೇಣ ಪ್ರವಿಷ್ಟಾ ದಾನವಾಲಯಂ ।
ಪುರೈತತ್ ಕಾನನಮಭೂದ್ ವಿಧಿನಾದ್ಯ ಕೃತಾ ಪುರೀ ॥ ೭ ॥

ಶಾಲಾ ಚ ಯಷ್ಟುಕಾಮೇನ ಗುಹಾಯಾಃ ಪರಿತಃ ಕೃತಾ ।
ಅದ್ಯ ಶಾಲಾಂ ಪ್ರವಿಶ್ಯೈವ ಪ್ರವಿಶ್ಯ ಚ ಗಿರೇರ್ಗುಹಾಂ ॥ ೮ ॥

೪. ನಾವು ಎಲ್ಲ ದೇವತೆಗಳನ್ನು ಸ್ವಲ್ಪ ಸರಿಯಾದ ಕಾಲವನ್ನು ನಿರೀಕ್ಷಿಸಿ ಅನಂತರ ಪ್ರಹರಿಸಬಹುದು. ಈಗಲಾದರೋ ಬಹಳ ಬೇಗ ನಾವೆಲ್ಲರೂ ದಾನವರ ವಾಸಸ್ಥಳವಾದ ಪಾತಾಳಕ್ಕೆ ಹೋಗೋಣ.

೫. ಅಲ್ಲಿ ಹಸ್ತಿಶೈಲದ ಗವಿಯಲ್ಲಿ ಒಂದು ದೊಡ್ಡದಾದ ಬಿಲವು ಇರುವುದು. ಆ ಬಿಲದ ಮೂಲಕವಾಗಿ ಹಿಂದೆ ನಾವು ಪಾತಾಲಕ್ಕೆ ಹೋಗಿದ್ದೆವು. ಈಗಲೂ ಆ ಬಿಲವನ್ನು ಪ್ರವೇಶಿಸಿ ಪಾತಾಲಕ್ಕೆ ಇಳಿದುಹೋಗೋಣ.

೬. ಹಿಂದೆ ಹಿರಣ್ಯಕಶಿಪುರಾಕ್ಷಸನ ವಧವಾದ ಸಮಯದಲ್ಲಿ ನೃಸಿಹ್ಮನಿಂದ ಈ ಬಿಲವು ರಚಿತವಾಗಿತ್ತು. ಆಗ ನೃಸಿಹ್ಮನಿಂದ ನಾವೆಲ್ಲರೂ ಈ ಬಿಲದ ಮೂಲಕವಾಗಿ ಓಡಿಸಲ್ಪಟ್ಟಿದ್ದೆವು.

೭. ನೃಸಿಹ್ಮಸ್ವಾಮಿಗೆ ಕಾಣಿಸದಂತೆ ಆಗ ನಾವು ಪಾತಾಳಲೋಕವನ್ನು ಸೇರಿದ್ದೆವು. ಹಿಂದೆ ಈ ಸ್ಥಳವು ಪೂರ್ತಿ ಅರಣ್ಯವಾಗಿತ್ತು. ಈಗ ಬ್ರಹ್ಮನಿಂದ ಇದು ನಗರಿಯಾಗಿ ಪರಿವರ್ತಿಸಲ್ಪಟ್ಟಿದೆ.

೮. ವಿಧಿಯು ಯಾಗಮಾಡಬೇಕೆಂದು ಯೋಚಿಸಿ ಈ ಗುಹೆಯ ಸುತ್ತಲೂ ಯಾಗಶಾಲೆಯನ್ನು ನಿರ್ಮಿಸಿರುವನು. ಈಗ ನಾವು ಶಾಲೆಯನ್ನು ಪ್ರವೇಶಿಸಿ ಅಲ್ಲಿಂದ ಅಲ್ಲಿದ್ದ ಗುಹೆಯನ್ನು ಪ್ರವೇಶಮಾಡಬೇಕು.

ಗಂತವ್ಯಂ ಬಿಲಮಾರ್ಗೇಣ ತದ್ಯತಧ್ವಮತಂದ್ರಿತಾಃ ।
ನ ಸಂತಿ ದೇವಾಃ ಶಾಲಾಯಾಂ ಸರ್ವೇ ಯೋದ್ಧುಂ ಬಹಿರ್ಗತಾಃ ॥೯॥

ಏಕ ಏವ ಜಪನ್ನಾಸ್ತೇ ಶಾಲಾಯಾಂ ಪದ್ಮಸಂಭವಃ ।
ಇತಿ ಸರ್ವೇಽಪಿ ನಿಶ್ಚಿತ್ಯ ಶಾಲಾಂ ದುದ್ರುವುರಂಜಸಾ ॥ ೧೦ ॥

ಹಸ್ತಿಶೈಲಸ್ಯ ಚ ಬಿಲಾತ್ ಪಾತಾಲಂ ಗಂತುಮುದ್ಯತಾಃ ।
ಗಮನತ್ವರಯಾ ತತ್ರ ಮೃದ್ನಂತಃ ಕುಶಸಂಚಯಾನ್ ॥ ೧೧ ॥

ಲೋಲಯಂತಶ್ಚ ಕಲಶಾನ್ ಭಿಂದಂತೋ ವೇದಿಕಾಮಪಿ ।
ಗುಹಾಂ ಪ್ರವಿಷ್ಟಮಾತ್ರೈಸ್ತೈರ್ದೃಷ್ಟಸ್ತತ್ರ ನೃಕೇಸರೀ ॥ ೧೨ ॥

ತಂ ದೃಷ್ಟ್ವಾ ಭೀತಭೀತಾಸ್ತೇ ನಿವೃತ್ತಾಃ ಪುನರಂಜಸಾ ।
ತದಾ ನೃಸಿಹ್ಮಃ ಕುಪಿತೋ ದೃಷ್ಟ್ವಾ ತಾನ್ ಪೂರ್ವವೈರಿಣಃ ॥ ೧೩ ॥

---

೯. ಅನಂತರ ಆ ಬಿಲದ ಮೂಲಕವಾಗಿ ಮುಂದಕ್ಕೆ ಹೋಗಬೇಕು. ಆದುದರಿಂದ ಈಗ ಆಲಸ್ಯಮಾಡದೆ ತ್ವರೆಯಿಂದ ಯತ್ನ ತೋರಿಸಿರಿ. ಈಗ ಯಾಗಶಾಲೆಯಲ್ಲಿ ದೇವತೆಗಳು ಯಾರೂ ಇಲ್ಲ. ಅವರು ಎಲ್ಲರೂ ಯುದ್ಧಮಾಡಲು ಹೊರಗೆ ಬಂದಿರುವರು.

೧೦. ಕಮಲದಲ್ಲಿ ಹುಟ್ಟಿದ ಬ್ರಹ್ಮನು ಒಬ್ಬನು ಮಾತ್ರ ಶಾಲೆಯಲ್ಲಿ ಜಪಮಾಡುತ್ತಲಿರುವನು. ಮಂತ್ರಾಲೋಚನೆಯಿಂದ ಈರೀತಿಯಾಗಿ ಎಲ್ಲ ರಾಕ್ಷಸರು ನಿಶ್ಚಯಿಸಿ ಬೇಗ ಯಾಗಶಾಲೆಯೊಳಗೆ ಪಲಾಯನಮಾಡಿದರು.

೧೧. ಹಸ್ತಿಶೈಲದ ಬಿಲದಿಂದ ಮುಂದೆ ಪಾತಾಲಕ್ಕೆ ಹೋಗಲು ಯತ್ನಿಸಿದರು. ಓಡಿಹೋಗುವ ವೇಗದ ಭರದಿಂದ ಆ ಶಾಲೆಯಲ್ಲಿ ಇದ್ದ ಯಾಗಾಂಗವಾದ ದರ್ಭಗಳ ಸಂಗ್ರಹವನ್ನು ಮರ್ದಿಸುತ್ತ ಹೋದರು.

೧೨. ಮತ್ತು ಪ್ರತಿಷ್ಠೆಮಾಡಿದ್ದ ಕಲಶಗಳನ್ನು ಚಲನಮಾಡಿಸುತ್ತಲೂ ವೇದಿಕೆಯನ್ನು ಒಡೆಯುತ್ತಲೂ ಪ್ರಯಾಣಮಾಡಿದರು. ಈರೀತಿಯಾಗಿ ಗವಿಯನ್ನು ಪ್ರವೇಶಮಾಡುವಷ್ಟರಲ್ಲಿ ಅಲ್ಲಿದ್ದ ನೃಸಿಹ್ಮನನ್ನು ಕಂಡರು.

೧೩. ಆಗ ಆ ರಾಕ್ಷಸರು ನೃಸಿಹ್ಮನನ್ನು ನೋಡಿ ಅತ್ಯಂತ ಭೀತರಾಗಿ ಮತ್ತೆ ಬೇಗ ಅಲ್ಲಿಂದ ಹಿಂದಿರುಗಿದರು. ಆಗ ನೃಸಿಹ್ಮಸ್ವಾಮಿಯು ಪೂರ್ವವೈರಿಗಳಾದ ಆ ದಾನವರನ್ನು ಕಂಡಕೂಡಲೆ ಕುಪಿತನಾದನು.

ಹಂತುಮಭ್ಯಾಯಯೌ ವೇಗಾದ್ಗರ್ಜನ್ ಘೋರಂ ಮುಹುರ್ಮುಹುಃ ।
ಉತ್ಪತನ್ನೇಕಮುತ್ಪಾತಂ ಸಟಾ ದಂಷ್ಟ್ರಾಶ್ಚ ದರ್ಶಯನ್ ॥ ೧೪ ॥

ಸೃಕ್ವಣೀ ಲೇಲಿಹಂಶ್ಚಾಪಿ ಜಿಹ್ವಯಾ ತಟಿದಾಭಯಾ ।
ಸಂಸ್ಥಿತಸ್ತ್ವೇಕರೂಪೇಣ ತತ್ರೈವ ಬಿಲರಕ್ಷಣೇ ॥ ೧೫ ॥

ರೂಪಾಂತರೇಣ ಚಾಭ್ಯಾಗಾದ್ವಿನಿಷ್ಕ್ರಮ್ಯ ಗುಹಾಮುಖಾತ್ ।
ಶೈಲಸ್ಯ ಪಶ್ಚಿಮೇ ದೇಶೇ ಸಭಾಯಾಂ ಪದ್ಮಜನ್ಮನಃ ॥ ೧೬ ॥

ವಿದ್ರುತಾನ್ ವೀಕ್ಷ್ಯ ದೈತೇಯಾಂಸ್ತತ್ರೈವಾಸೀತ್ ಸಮಾಸ್ಥಿತಃ ।
ಪಾದಾಭ್ಯಾಂ ಚಂಕ್ರಮಂ ಕುರ್ವನ್ನುದಗ್ದಕ್ಷಿಣತೋಽಸಕೃತ್ ॥ ೧೭ ॥

ಚಕ್ಷುಷಾಽನಲಕಲ್ಪೇನ ಪಶ್ಯನ್ ಪಶ್ಚಿಮತೋ ಮುಹುಃ ।
ವಿಭೀಷಯನ್ ಸ ನಾದೇನ ಸರ್ವಾನಸುರಪುಂಗವಾನ್ ॥ ೧೮ ॥

---

೧೪. ನೃಸಿಹ್ಮಸ್ವಾಮಿಯು ಒಂದೇಸಲಕ್ಕೆ ತನ್ನ ಸ್ಥಳದಿಂದ ನೆಗೆದು ಸಿಹ್ಮದ ಜಟೆ, ದವಡೆಗಳನ್ನು ತೋರಿಸುತ್ತ ಘೋರವಾಗಿ ಮತ್ತೆಮತ್ತೆ ಗರ್ಜನಮಾಡಿ ವೇಗದಿಂದ ರಾಕ್ಷಸರನ್ನು ಕೊಲ್ಲಲು ಬಂದನು.

೧೫. ಮುಖದ ಪ್ರಾಂತಭಾಗಗಳನ್ನು ಮಿಂಚಿನಂತೆ ಹೊಳೆಯುತ್ತಿರುವ ನಾಲಿಗೆಯಿಂದ ನೆಕ್ಕುತ್ತ ಮುಂದಕ್ಕೆ ಬಂದನು. ಅದುವರೆಗೆ ಆ ಬಿಲವನ್ನು ಕಾಪಾಡಲು ಒಂದೇ ಶಾಂತರೂಪದಿಂದ ಅಲ್ಲಿಯೇ ಇದ್ದನು.

೧೬. ಈ ಸಮಯದಲ್ಲಿ ಗುಹಾದ್ವಾರದಿಂದ ಬೇರೆ ರೂಪವನ್ನು ಧರಿಸಿ ಬಂದಿರುವನು. ಇದಕ್ಕೆ ಈ ಹಸ್ತಿಶೈಲದ ಪಶ್ಚಿಮದೇಶದಲ್ಲಿ ಬ್ರಹ್ಮನ ಯಜ್ಞಸಭೆಯಲ್ಲಿ ರಾಕ್ಷಸರು ಧಾವಿಸಿರುವುದೇ ಕಾರಣವು.

೧೭. ಈಗ ಅತ್ತಕಡೆಗೆ ಓಡಿಹೋದ ದೈತ್ಯರನ್ನು ಕಂಡು ದಕ್ಷಿಣ-ಉತ್ತರಭಾಗಗಳಲ್ಲಿ ಕಾಲುಗಳಿಂದ ಮೆಲ್ಲಗೆ ಅನೇಕಸಲ ಸಂಚರಿಸುತ್ತ ಅಲ್ಲಿಯೇ ನಿಂತಿರುವನು.

೧೮. ಯಜ್ಞಭೂಮಿಯ ಪಶ್ಚಿಮದಿಕ್ಕಿನಲ್ಲಿ ಮತ್ತೆಮತ್ತೆ ಅಗ್ನಿಯಂತೆ ಜ್ವಲಿಸುತ್ತಿದ್ದ ನೋಟದಿಂದನೋಡುತ್ತ ಎಲ್ಲರಾಕ್ಷಸಶ್ರೇಷ್ಠರನ್ನು ಸಿಹ್ಮನಾದದಿಂದ ಬೆದರಿಸುತ್ತಿರುವನು.

ಜಗರ್ಜ ತೇನ ನಾದೇನ ಯೇನ ವಿತ್ರಾಸಿತಾ ದಿಶಃ ।
ಸಯಜ್ಞಶಾಲಾ ಚ ಮಹೀ ಸಾಽಚಲಾ ಕಂಪಿತಾಽಭವತ್ ॥ ೧೯ ॥

ದೃಷ್ಟ್ವಾ ತಮಸುರಾಃ ಸರ್ವೇ ಶ್ರುತ್ವಾ ಚಾಸ್ಯ ವಿಗರ್ಜಿತಂ ।
ನೃಸಿಹ್ಮೋಽಪ್ಯದ್ಯ ನೋ ಹಂತುಮುಪಯಾತೋ ಹಿ ಪೂರ್ವವತ್ ॥

ತನ್ನ ಸ್ಥೇಯಮಿಹಾಸ್ಮಾಭಿರಿದಾನೀಮಿತಿ ದುದ್ರುವುಃ ।
ಉತ್ತರಾಂ ದಿಶಮುದ್ದಿಶ್ಯ ನ ಹ್ಯತ್ರೇತಿ ನೃಕೇಸರೀ ॥ ೨೦ ॥

ತೇ ವಿಂಧ್ಯಾದ್ರಿಂ ಸಮಾಸಾದ್ಯ ಬಹುಕಂದರನಿರ್ಝರಂ ।
ಸಮೇತಾಸ್ತತ್ರ ಕಾಂತಾರೇ ಸ್ವಾರ್ಥಂ ಸರ್ವೇಽನ್ವಚಿಂತಯನ್ ॥ ೨೧ ॥

ದೇವಾ ಅಪಿ ಸಗಂಧರ್ವಾಃ ಸಹಿತಾಃ ಶಾರ್ಙ್ಗಪಾಣಿನಾ ।
ನೈರ್ಋತ್ಯಾಂ ಪಶ್ಚಿಮೇ ಚಾಪಿ ಸಂರುದ್ಧಾಂ ರಾಕ್ಷಸೀಂ ಚಮೂಂ ॥೨೨॥

---

೧೯. ಮತ್ತು ಸಕಲ ದಿಕ್ಕುಗಳು, ಯಜ್ಞಶಾಲೆ, ಭೂಮಂಡಲ, ಮತ್ತು ಪರ್ವತಗಳು ಇವೆಲ್ಲವೂ ಭಯದಿಂದ ಕಂಗೆಟ್ಟು ಕಂಪಿಸುವಂತೆ ಗಟ್ಟಿಯಾಗಿ ಗರ್ಜಿಸಿದನು.

೨೦. ಸಮಸ್ತ ರಾಕ್ಷಸರು ಆ ನೃಸಿಹ್ಮನನ್ನು ನೋಡಿ ಮತ್ತು ಉಗ್ರವಾದ ಅವನ ಸಿಹ್ಮನಾದವನ್ನು ಕೇಳಿ ಮೊದಲಿನಂತೆ ಈಗ ಮತ್ತೆ ನಮ್ಮನ್ನು ಕೊಲ್ಲಲು ನೃಸಿಹ್ಮನು ಬಂದನು ಎಂದು ಹೇಳಿಕೊಂಡರು.

೨೧. ಆದುದರಿಂದ ಈಗ ನಾವು ಇಲ್ಲಿ ಇರುವುದು ಯುಕ್ತವಲ್ಲ, ಎಂದು ಹೇಳಿ ಉತ್ತರದಿಕ್ಕನ್ನು ನೋಡಿ ಇಲ್ಲಿ ನೃಸಿಹ್ಮನು ಇಲ್ಲವೆಂದು ತಿಳಿದು ಆ ಕಡೆಗೆ ಓಡಿ ಹೋದರು.

೨೨. ಹಾಗೆಯೇ ಅನೇಕ ಗುಹೆಗಳಿಂದಲೂ ಕಾಡುನದಿಗಳಿಂದಲೂ ಸೇರಿದ ವಿಂಧ್ಯಪರ್ವತಕ್ಕೆ ಬಂದು ಅಲ್ಲಿಯ ಒಂದು ಕಾಡಿನಲ್ಲಿ ಸೇರಿ ಎಲ್ಲರೂ ತಮ್ಮ ಸ್ವಾರ್ಥವನ್ನು ಚಿಂತಿಸಿದರು.

೨೩. ಇತ್ತ ಗಂಧರ್ವರಿಂದ ಕೂಡಿದ ದೇವತೆಗಳು ಶಾರ್ಙ್ಗಚಾಪವನ್ನು ಧರಿಸಿದ ವಿಷ್ಣುವಿನ ಪ್ರಭಾವದಿಂದ ನೈರ್ಋತ್ಯ ಪಶ್ಚಿಮ ದಿಗ್ಭಾಗಗಳಲ್ಲಿ ರಾಕ್ಷಸ ಸೈನ್ಯವನ್ನು ಸುತ್ತುವರಿದರು.

ಅಸುರಾಣಾಂ ಚಮೂಂ ಚಾಪಿ ಯುದ್ಧ್ವಾ ವಿದ್ರಾವ್ಯ ತತ್ಕ್ಷಣಾತ್ ।
ಶುಶ್ರುವುರ್ನರಸಿಹ್ಮಸ್ಯ ಶಾಲಾಯಾಂ ಗರ್ಜತಃ ಸ್ವನಂ ॥ ೨೪ ॥

ಕಿಮೇತದಿತಿ ಸಂಭ್ರಾಂತಾಃ ಪುನರಾಜಗ್ಮುರಂಜಸಾ ।
ತೇನ ಚಾತ್ಮಸಹಾಯೇನ ಸಹಿತಾಃ ಶಾರ್ಙ್ಗಪಾಣಿನಾ ॥ ೨೫ ॥

ಅಜಾನಂತೋ ನೃಸಿಹ್ಮೇಣ ನಿರ್ಗತೇನ ಗುಹಾಮುಖಾತ್ ।
ಅಸುರಾನ್ ದ್ರಾವಿತಾನ್ ಸರ್ವಾನ್ ಗುಹಾಂ ಪ್ರವಿಶತೋ ಭಯಾತ್ ॥

ಆಗತ್ಯ ಚ ಸುರಾಃ ಸರ್ವೇ ವಿಜ್ಞಾಯಾಸುರಚೇಷ್ಟಿತಂ ।
ನೃಸಿಹ್ಮಂ ಯಜ್ಞರಕ್ಷಾರ್ಥಮಾವಿರ್ಭೂತಂ ಗುಹಾಮುಖಾತ್ ॥ ೨೭ ॥

ದೃಷ್ಟ್ವಾ ಸಂತುಷ್ಟಹೃದಯಾಃ ಸಂಪ್ರಣೇಮುಃ ಸಮಂತತಃ ।
ತುಷ್ಟುವುರ್ವಿವಿಧೈಃ ಸ್ತೋತ್ರೈರ್ಬದ್ಧಾಂಜಲಿಪುಟಾಸ್ತಥಾ ॥ ೨೮ ॥

---

೨೪. ಮತ್ತು ಅಸುರರ ಸೈನ್ಯವನ್ನು ಯುದ್ಧದಿಂದ ಕ್ಷಣಮಾತ್ರದಿಂದ ಹಿಂದಕ್ಕೆ ಅಟ್ಟಿಸಿ ಯಜ್ಞಶಾಲೆಯಲ್ಲಿ ನರಸಿಹ್ಮಸ್ವಾಮಿಯು ಗರ್ಜನಧ್ವನಿಯನ್ನು ಕೇಳಿದರು.

೨೫. ಈ ಗರ್ಜನವೇನಿರಬಹುದು ? ಎಂದು ಶಂಕಿಸಿ ಗಾಬರಿಗೊಂಡವರಾಗಿ ತಮಗೆ ಸಹಾಯಕನಾಗಿ ಬಂದ ಆ ಶಾರ್ಙ್ಗಚಾಪಧಾರಿಯಾದ ವಿಷ್ಣುವಿನೊಡನೆ ಮತ್ತೆ ಬೇಗ ಯಾಗಶಾಲೆಗೆ ಬಂದರು.

೨೬. ನೃಸಿಹ್ಮಸ್ವಾಮಿಯು ಗುಹಾದ್ವಾರದಿಂದ ಹೊರಟು ದೇವತೆಗಳೊಡನೆ ಸೇರಿ ಯುದ್ಧದಲ್ಲಿ ಭಯಗೊಂಡು ಗುಹೆಯನ್ನು ಪ್ರವೇಶಿಸುತ್ತಿದ್ದ ಸಕಲ ರಾಕ್ಷಸರನ್ನು ಓಡಿಸಿರುವುದನ್ನು ದೇವತೆಗಳು ತಿಳಿಯಲಿಲ್ಲ.

೨೭. ಸಕಲ ದೇವತೆಗಳು ಶಾಲೆಗೆ ಬಂದು ರಾಕ್ಷಸರು ಮಾಡಿರುವ ಕೆಲಸವನ್ನೂ ಯಜ್ಞದ ರಕ್ಷಣಕ್ಕೋಸ್ಕರ ಗುಹಾದ್ವಾರದಿಂದ ಆವಿರ್ಭಾವ ಹೊಂದಿ ಬಂದ ನೃಸಿಹ್ಮಸ್ವಾಮಿಯನ್ನು ನೋಡಿದರು.

೨೮. ಆನಂತರ ನೃಸಿಹ್ಮದರ್ಶನದಿಂದ ಸಂತೋಷಗೊಂಡ ಹೃದಯವುಳ್ಳವರಾಗಿ ಸುತ್ತಲೂ ನಮಸ್ಕರಿಸಿದರು. ಮತ್ತು ಆಗ ಅಂಜಲಿಯನ್ನು ಕಟ್ಟಿಕೊಂಡು ವಿವಿಧವಾದ ಸ್ತೋತ್ರಗಳಿಂದ ನೃಸಿಂಹನನ್ನು ಸ್ತುತಿಸಿದರು.

ನಮೋ ಮತ್ಸ್ಯಕೂರ್ಮಾದಿ ನಾನಾಸ್ವರೂಪೈಃ
ಸದಾ ಭಕ್ತಕಾರ್ಯೋದ್ಯತಾಯಾರ್ತಿಹಂತ್ರೇ ।
ಸುರಾರಾತಿಸಂಹಾರಹೇತೋರಿಹಾದ್ರೇ-
ರ್ಗುಹಾದ್ವಾರದೇಶಾದ್ ಬಹಿರ್ನಿರ್ಗತಾಯ ॥ ೨೯ ॥

ಚಕ್ರಾಬ್ಜಹಸ್ತಾಯ ಭಕ್ತಾಭಯಾಯ
ಸಂವರ್ತಕಾಲಾನಲಾಭಾನನಾಯ ।
ದಂಷ್ಟ್ರಾಕರಾಲಾಯ ವಿದ್ಯುತ್ಸಟಾಯ
ಸಿಂಹಾಯ ತುಭ್ಯಂ ನತಾಃ ಸ್ಮೋ ನತಾಃ ಸ್ಮಃ ॥ ೩೦ ॥

ಇತಿ ಸ್ತುತ್ವಾ ನಾರಸಿಹ್ಮಂ ದೇವಾಸ್ತತ್ರ ಸವಾಸವಾಃ ।
ನತ್ವಾ ಶಾರ್ಙ್ಗಧರಂ ಚಾಪಿ ಯಜ್ಞಕರ್ಮಾರಭಂತ ವೈ ॥ ೩೧ ॥

---

೨೯. ಮತ್ಸ್ಯ-ಕೂರ್ಮ ಮುಂತಾದ ಅನೇಕ ಅವತಾರಗಳನ್ನು ಮಾಡಿ ಯಾವಾಗಲೂ ಭಕ್ತರಿಗೆ ಉಂಟಾದ ಪೀಡೆಯನ್ನು ಹೋಗಲಾಡಿಸಿ ಇಷ್ಟಾರ್ಥವನ್ನು ಪ್ರದಾನ ಮಾಡುವ ಮತ್ತು ದೇವಶತ್ರುಗಳಾದ ರಾಕ್ಷಸರನ್ನು ಸಂಹಾರಮಾಡಲೋಸ್ಕರ ಗುಹೆಯ ದ್ವಾರದೇಶದಿಂದ ಹೊರಕ್ಕೆ ಬಂದಿರುವ ನರಸಿಹ್ಮಸ್ವಾಮಿಗೆ ನಮಸ್ಕಾರವು.

೩೦. ಚಕ್ರ ಮತ್ತು ಕಮಲಗಳನ್ನು ಕರಗಳಲ್ಲಿ ಧರಿಸಿದವನೂ, ಭಕ್ತರಿಗೆ ಅಭಯಪ್ರದನೂ, ಪ್ರಲಯಕಾಲದ ಅಗ್ನಿಯಂತೆ ಜ್ವಲಿಸುವ ಕಾಂತಿಯಿಂದ ಕೂಡಿದ ಮುಖವುಳ್ಳವನೂ, ಕೋರೆದವಡೆಗಳಿಂದ ಭಯಂಕರನೂ, ಮತ್ತು ಮಿಂಚಿನಂತಿರುವ ಸಟೆಗಳುಳ್ಳವನೂ ಆದ ಸಿಹ್ಮಸ್ವರೂಪಿಯಾದ ನಿನಗೆ ನಮಸ್ಕಾರವು. ನಿನ್ನನ್ನು ಮತ್ತೆ ಮತ್ತೆ ನಮಸ್ಕರಿಸುವೆವು.

೩೧. ಇಂದ್ರಾದಿ ದೇವತೆಗಳು ಹೀಗೆಂದು ನರಸಿಹ್ಮಸ್ವಾಮಿಯನ್ನು ಸ್ತುತಿಸಿ ಶಾರ್ಙ್ಗಾಯುಧಧಾರಿಯಾದ ವಿಷ್ಣುವನ್ನು ನಮಸ್ಕರಿಸಿ ಮತ್ತೆ ಯಜ್ಞಾನುಷ್ಠಾನವನ್ನು ಆರಂಭಿಸಿದರು.

ನೃಸಿಂಹೋ ಯಜ್ಞಶಾಲಾಯಾ ಮಧ್ಯೇ ಶೈಲಸ್ಯ ಪಶ್ಚಿಮೇ ।
ತತ್ರೈವಾಸೀನ್ಮಖಂ ರಕ್ಷನ್ನಸುರೇಭ್ಯಃ ಸಮಂತತಃ ॥ ೩೨ ॥

ನೈರ್ಋತ್ಯಾಂ ಹಸ್ತಿಶೈಲಸ್ಯ ದಿಶಿ ಶಾರ್ಙ್ಗಧರೋಽಪ್ಯಭೂತ್ ।
ನಿಧಾವಯ್ಯ ಚಮೂಂ ಸರ್ವಾಂ ದಾನವಾಸುರರಕ್ಷಸಾಂ ॥ ೩೩ ॥

ತತಶ್ಚತುರ್ಮುಖೋ ಹೃಷ್ಟಃ ಸರ್ವೈರ್ದೇವಗಣೈಃ ಸಹ ।
ಪುನರ್ಯಷ್ಟುಮುಪಾಕ್ರಾಮತ್ತೃತೀಯೇ ದಿವಸೇ ತದಾ ॥ ೩೪ ॥

ದೇವರ್ಷಿಪಿತೃಗಂಧರ್ವಾ ಯೇ ಜನಾಃ ಪುರವಾಸಿನಃ ।
ಭಯಾತ್ ಪ್ರವಿದ್ರುತಾಃ ಪೂರ್ವಂ ತೇಽಪ್ಯಾಜಗ್ಮುರ್ಯಥಾಪುರಂ ॥ ೩೫ ॥

ಪುರೀಂಚ ವಿಶ್ವಕರ್ಮಾಪಿ ದಾನವೈರ್ಭಿನ್ನಗೋಪುರಾಂ ।
ಭಿನ್ನತೋರಣವೇಶ್ಮಾಢ್ಯಾಂ ನಿರ್ಮಮೇ ನಿಮಿಷಾತ್ಪುನಃ ॥ ೩೬ ॥

೩೨. ನೃಸಿಂಹಸ್ವಾಮಿಯು ಆ ಹಸ್ತಿಗಿರಿಯ ಪಶ್ಚಿಮದಲ್ಲಿ ಯಾಗಶಾಲೆಯ ಮಧ್ಯದಲ್ಲಿ ಸುತ್ತಲೂ ರಾಕ್ಷಸರಿಂದ ಬಾಧೆಯಾಗದಂತೆ ಯಜ್ಞವನ್ನು ರಕ್ಷಿಸಲು ಅಲ್ಲಿಯೇ ನಿಂತುಕೊಂಡನು.

೩೩. ಶಾರ್ಙ್ಗಧರಸ್ವಾಮಿಯು ಹಸ್ತಿಪರ್ವತದ ನೈರ್ಋತ್ಯದಿಕ್ಕಿನಲ್ಲಿ ದಾನವ-ಅಸುರ-ರಾಕ್ಷಸರ ಸಕಲ ಸೈನ್ಯವನ್ನು ನಿವಾರಿಸುತ್ತ ನಿಂತುಕೊಂಡನು.

೩೪. ಅನಂತರದಲ್ಲಿ ಚತುರ್ಮುಖಬ್ರಹ್ಮನು ಸಕಲ ದೇವತೆಗಳೊಡನೆ ಬಹು ಸಂತುಷ್ಟನಾಗಿ ಆಗ ಮೂರನೆಯ ದಿವಸದಲ್ಲಿ ಮತ್ತೆ ಯಾಗಮಾಡಲು ಆರಂಭ ಮಾಡಿದನು.

೩೫. ದೇವ-ಮುನಿ-ಗಂಧರ್ವರು ಮತ್ತು ಆ ಪುರದಲ್ಲಿ ನಿವಾಸಿಸುವ ಜನಗಳು ಮೊದಲು ರಾಕ್ಷಸರ ಭೀತಿಯಿಂದ ಓಡಿಹೋದವರೆಲ್ಲರೂ ಮೊದಲಿನಂತೆ ಬಂದು ಸೇರಿದರು.

೩೬. ಆ ನಗರದಲ್ಲಿ ದಾನವರ ಹಾವಳಿಯಿಂದ ತೋರಣ-ಗೋಪುರ-ಗೃಹಗಳ ಪಂಕ್ತಿಗಳು ಭಿನ್ನವಾಗಿ ಹೋದುದೆಲ್ಲವನ್ನೂ ವಿಶ್ವಕರ್ಮನು ಮತ್ತೆ ಒಂದು ನಿಮಿಷ ಮಾತ್ರದಿಂದ ನಿರ್ಮಾಣಮಾಡಿದನು.

ತೇಽಪಿ ಬ್ರಹ್ಮರ್ಷಯಃ ಸರ್ವೇ ಯಾಜಕಾ ಹೃಷ್ಟಮಾನಸಾಃ ।
ಹುತ್ವಾ ವ್ಯಾಹೃತಿಭಿಸ್ತತ್ರ ಶಾಂತಿಂ ಕೃತ್ವಾ ವಿಧಾನತಃ ॥ ೩೭ ॥

ಇಷ್ಟಕಾಚಯನಂ ಹೃತ್ವಾ ಪ್ರವರ್ಗ್ಯಂ ಚಕ್ರುರಂಜಸಾ ।
ತತಃ ಪ್ರವವೃಧೇ ಯಜ್ಞೋ ಬಹ್ವನ್ನೋ ಭೂರಿದಕ್ಷಿಣಃ ॥ ೩೮ ॥

ಪಿತಾಮಹಸ್ಯ ದೇವಸ್ಯ ಕೇಶವಂ ದ್ರಷ್ಟುಮಿಚ್ಛತಃ ।
ತತ್ರ ನಂದಂತಿ ಸುಭೃಶಂ ದೇವಾಃ ಶಕ್ರಪುರೋಗಮಾಃ ॥ ೩೯ ॥

ಪಿತೃಗಂಧರ್ವಮನುಜಾಃ ಸರ್ವೇ ಸಂಪೂರ್ಣಮಾನಸಾಃ ।
ಅಸುರಾಶ್ಚಾಪಿ ವಿಂಧ್ಯಾದ್ರೌ ಸಮೇತಾಃ ಸಮಚಿಂತಯನ್ ॥ ೪೦ ॥

ನಿಹಂತವ್ಯೋಽಯಮಸ್ಮಾಭಿರ್ನರಸಿಹ್ಮಃ ಸುರಾಶ್ರಯಃ ।
ಕೇನಮುಪಾಯಮುಪಾಶ್ರಿತ್ಯ ನಿಹನ್ಮೋ ನೃಹರಿಂ ವಯಂ ॥ ೪೧ ॥

---

೩೭. ಆಗ ಅಲ್ಲಿ ಯಾಜಕರಾಗಿದ್ದ ಸಕಲ ಬ್ರಹ್ಮರ್ಷಿಗಳು ಸಂತೋಷಪಟ್ಟ ಮಾನಸವುಳ್ಳವರಾಗಿ ವ್ಯಾಹೃತಿ ಮಂತ್ರಗಳನ್ನು ಪಠಿಸಿ ವಿಧಿಪೂರ್ವಕವಾಗಿ ಶಾಂತಿಯನ್ನು ಮಾಡಿದರು.

೩೮. ಇಷ್ಟಕೆಗಳಿಂದ ಅಗ್ನಿ ಚಯನವನ್ನು ಯಥಾವಿಧಿಯಾಗಿ ಮಾಡಿ ಪ್ರವರ್ಗ್ಯ ಕರ್ಮವನ್ನು ಶೀಘ್ರವಾಗಿ ಆಚರಿಸಿದರು. ತರುವಾಯ ಅನ್ನದಾನ ದಕ್ಷಿಣಾದಾನಗಳ ವಿಜೃಂಭಣೆಯಿಂದ ಕೂಡಿದ ಯಜ್ಞವು ಬೆಳೆಯಿತು.

೩೯. ವಿಷ್ಣುಪರಮಾತ್ಮನನ್ನು ಸಾಕ್ಷಾತ್ಕರಿಸಲು ಬ್ರಹ್ಮದೇವನು ಆಚರಿಸಿದ ಯಜ್ಞಸಮಾರಂಭದಲ್ಲಿ ಇಂದ್ರ ಮೊದಲಾದ ಸಕಲ ದೇವತೆಗಳು ಅತಿಶಯವಾಗಿ ಆನಂದಿಸಿದರು.

೪೦. ಅಲ್ಲಿ ಸೇರಿದ ಪಿತೃ, ಗಂಧರ್ವ, ಮನುಷ್ಯರು ಎಲ್ಲರೂ ಸಂಪೂರ್ಣವಾದ ಮಾನಸವುಳ್ಳವರಾದರು. ಇತ್ತ ಕಡೆ ವಿಂಧ್ಯಾದ್ರಿಯಲ್ಲಿ ಸೇರಿದ ರಾಕ್ಷಸರು ಮಂತ್ರಾಲೋಚನೆ ನಡೆಸಿದರು.

೪೧. ದೇವತೆಗಳಿಗೆ ಆಶ್ರಯವನ್ನು ಕೊಟ್ಟಿರುವ ಈ ನರಸಿಹ್ಮನನ್ನು ನಾವು ಸಂಹರಿಸಲೇ ಬೇಕು. ಆದರೆ ನಾವು ಯಾವ ಉಪಾಯವನ್ನು ಅವಲಂಬಿಸಿ ನೃಸಿಹ್ಮನನ್ನು ಸಂಹರಿಸಬಹುದು ?

ಇತಿ ಮಂತ್ರಯತಾಂ ತೇಷಾಮಸುರಾಣಾಂ ಸುರಾರಿಣಾಂ ।
ಶಂಬರೋ ನಾಮ ದೈತೇಯಃ ಶತಮಾಯೋ ಮಹಾಬಲಃ ॥ ೪೨ ॥

ಆಭಾಷ್ಯ ದಿತಿಜಾನ್ ಸರ್ವಾನಿದಂ ವಚನಮಬ್ರವೀತ್ ।
ವಿದ್ಯಾ ಚಕ್ಷುರ್ಮುಷೀ ನಾಮ ತಾಮಸೀ ಶುಕ್ರನಿರ್ಮಿತಾ ॥ ೪೩ ॥

ಅಗ್ನ್ಯರ್ಕೇಂದುಮುಖಾನಾಂ ಚ ಜ್ಯೋತಿಷಾಮಪಕರ್ಷಿಣೀ ।
ದೇವಗಂಧರ್ವಮರ್ತ್ಯಾದಿ ಜಂತೂನಾಮಂಧಭಾವದಾ ॥ ೪೪ ॥

ಮಯ್ಯಸ್ತಿ ತಾಮಸೀ ಮಾಯಾ ಜಗತ್ಯಂಧತ್ವಕಾರಿಣೀ ।
ತಾಮದ್ಯ ಸಂಪ್ರಯೋಕ್ಷ್ಯಾಮಿ ಮಾಯಾಂ ದೇವಗಣೇಷ್ವಹಂ ॥ ೪೫ ॥

ಗಾಢೇಽಂಧ ತಮಸಿ ವ್ಯಾಪ್ತೇ ದೇವಸಂಘೇಷು ಸರ್ವಶಃ ।
ಜ್ಯೋತಿರ್ಗಣೇಷು ಸ್ತಬ್ಧೇಷು ಹನಿಷ್ಯಾಮಃ ಸುರಾನ್ ವಯಂ ॥ ೪೬ ॥

೪೨. ಈ ರೀತಿಯಾಗಿ ದೇವಶತ್ರುಗಳಾದ ಅಸುರರೆಲ್ಲರೂ ನರಸಿಂಹನನ್ನು ಧ್ವಂಸಮಾಡುವ ಉಪಾಯಾನ್ವೇಷಣಮಾಡುವಾಗ ಆ ರಾಕ್ಷಸರಲ್ಲಿ ಮಹಾಬಲಿಷ್ಠನಾದ ಮತ್ತು ಮಹಾ ಮಾಯಾವಿಯಾದ ಶಂಬರಾಸುರನೆಂಬ ದೈತ್ಯನು ಇಂತೆಂದನು.

೪೩. ಶಂಬರಾಸುರನು ದೈತ್ಯರನ್ನೆಲ್ಲರನ್ನೂ ಬೋಧಿಸಿ ಈ ಮಾತನ್ನು ಆಡಿದನು. ದೈತ್ಯಗುರುವಾದ ಶುಕ್ರಾಚಾರ್ಯರಿಂದ ಚಕ್ಷುರ್ಮುಷೀ ಎಂಬ ಒಂದು ತಮೋಗುಣಾತ್ಮಕವಾದ ವಿದ್ಯೆಯು ನಿರ್ಮಿತವಾಗಿದೆ.

೪೪. ಆ ವಿದ್ಯೆಯನ್ನು ಪ್ರಯೋಗಮಾಡಲು ಅಗ್ನಿ, ಸೂರ್ಯ ಮತ್ತು ಚಂದ್ರ ಮುಂತಾದ ಜ್ಯೋತಿರ್ಗಣವನ್ನು ಆಕರ್ಷಿಸುವುದು, ಮತ್ತು ದೇವ, ಗಂಧರ್ವ, ಮಾನವ ಮುಂತಾದ ಪ್ರಾಣಿಗಳನ್ನು ಅಂಧರನ್ನಾಗಿಮಾಡುವುದು.

೪೫. ಜಗತ್ತಿನಲ್ಲಿ ಅಂಧತ್ವವನ್ನು ಉಂಟುಮಾಡುವ ತಾಮಸೀ ಮಾಯೆಯು ನನ್ನಲ್ಲಿರುವುದು. ಈಗ ನಾನು ಆ ಮಾಯೆಯನ್ನು ದೇವಗಣದಲ್ಲಿ ಪ್ರಯೋಗಿಸುವೆನು.

೪೬. ಆ ಮಾಯಾ ಪ್ರಭಾವದಿಂದ ಗಾಢಾಂಧಕಾರವು ಎಲ್ಲೆಲ್ಲಿಯೂ ವ್ಯಾಪ್ತವಾಗಿ ಸಕಲ ದೇವಸಂಘಗಳೂ ಸಮಸ್ತ ಜ್ಯೋತಿರ್ಮಂಡಲಗಳೂ ಸ್ತಬ್ಧವಾಗಿರಲು ನಾವು ದೇವತೆಗಳನ್ನು ಕೊಂದುಹಾಕೋಣ.

ನೃಸಿಹ್ಮಂ ಕೇವಲಂ ಹಂತುಂ ನಿಯೋಕ್ಷ್ಯಾಮಃ ಪಿನಾಕಿನಂ ।
ಸ ಕಿಲಾತ್ರೈವ ವಸತಿ ಶ್ರೀಶೈಲಾಖ್ಯೇಽಚಲೋತ್ತಮೇ ॥ ೪೭ ॥

ಸಮ್ಯಗಾರಾಧಿತಃ ಸದ್ಯೋ ಭಕ್ತಾನಾಮಿಷ್ಟದೋ ಭವೇತ್ ।
ತಂ ತೋಷಯಿತ್ವಾ ವಿಧಿವತ್ ಸಹ ತೇನೈವ ಶಂಭುನಾ ॥ ೪೮ ॥

ಗತ್ವಾ ಸತ್ಯವ್ರತಂ ಕ್ಷೇತ್ರಂ ಧ್ವಂಸಯಾಮಃ ಸುರಾನ್ವಯಂ ।
ಇತಿ ತಸ್ಯ ವಚಃ ಶ್ರುತ್ವಾ ಸರ್ವೇ ತೇ ದಾನವೋತ್ತಮಾಃ ॥ ೪೯ ॥

ಸಂಪ್ರಹೃಷ್ಟಾಃ ಸಮುತ್ತಸ್ಥುಃ ಶ್ರೀಶೈಲೇ ಶಂಭುಮರ್ಚಿತುಂ ।
ತತ್ರ ಗತ್ವಾ ಮಹಾದೇವಂ ಶ್ರೀಶೈಲಾಧಃಸ್ಥಿತಂ ಹರಂ ॥ ೫೦ ॥

ದಕ್ಷಾಧ್ವರಹರಂ ಶಂಭುಂ ತ್ರಿಪುರಘ್ನಂ ತ್ರಿಲೋಚನಂ ।
ಭಕ್ತಾನಾಮಿಷ್ಟದಂ ಸದ್ಯೋಭವಂ ಭಕ್ತಭಯಾಪಹಂ ॥ ೫೧ ॥

---

೪೭. ನರಸಿಹ್ಮನನ್ನು ಮಾತ್ರ ಸಂಹರಿಸಲು ಪಿನಾಕಾಯುಧಧಾರಿಯಾದ ಈಶ್ವರನನ್ನು ನಿಯಮಿಸಬೇಕು, ಈಶ್ವರನು ಇಲ್ಲಿಯೇ ಶ್ರೀ ಶೈಲವೆಂಬ ಪ್ರಶಸ್ತಪರ್ವತದಲ್ಲಿ ವಾಸಮಾಡುತ್ತಿರುವನಲ್ಲವೆ!

೪೮. ಈಶ್ವರನನ್ನು ಭಕ್ತಿಯಿಂದ ಆರಾಧಿಸಿದರೆ ಕೂಡಲೆ ಭಕ್ತರ ಇಷ್ಟಾರ್ಥವನ್ನು ಕೊಡುವನು. ಆದುದರಿಂದ ಈಶ್ವರನನ್ನು ಯಥಾವಿಧಿಯಾದ ಆರಾಧನೆಯಿಂದ ಸಂತೋಷಪಡಿಸಿ ಈಶ್ವರನೊಡನೆ ಪ್ರಯತ್ನಿಸೋಣ.

೪೯. ಈಶ್ವರನನ್ನು ಜೊತೆಯಲ್ಲಿ ಕರೆದುಕೊಂಡು ಸತ್ಯವ್ರತಕ್ಷೇತ್ರಕ್ಕೆ ಹೋಗಿ ದೇವತೆಗಳನ್ನು ಧ್ವಂಸಮಾಡೋಣ, ಹೀಗೆಂದು ಹೇಳಿರುವ ಶಂಬರಾಸುರನ ವಚನವನ್ನು ಆ ದಾನವಶ್ರೇಷ್ಠರು ಶ್ರವಣಮಾಡಿದರು.

೫೦. ತರುವಾಯ ಬಹಳ ಸಂತೋಷಪಟ್ಟವರಾಗಿ ಶ್ರೀಶೈಲದ ಅಧೋಭಾಗದಲ್ಲಿದ್ದ ದೇವಾಧಿಪತಿಯಾದ, ಸರ್ವರಿಗೆ ಸುಖದಾಯಕನಾದ ಈಶ್ವರನನ್ನು ಅರ್ಚಿಸಲು ಶ್ರೀ ಶೈಲಕ್ಕೆ ಪ್ರಯಾಣಮಾಡಿದರು.

೫೧. ಆ ಶ್ರೀ ಶೈಲದಲ್ಲಿ ದಕ್ಷಯಜ್ಞ ವಿಧ್ವಂಸಕನೂ, ಸರ್ವ ಜಗತ್ತಿಗೆ ಸುಖಕರನೂ, ತ್ರಿಪುರಾಸುರನನ್ನು ಕೊಂದುಹಾಕಿದವನೂ, ಮೂರು ಕಣ್ಣುಗಳಿಂದ ಕೂಡಿದವನೂ, ಭಕ್ತರಿಗೆ ಇಷ್ಟವನ್ನು ಅನುಗ್ರಹಿಸುವವನೂ, ಸದ್ಯೋಜಾತಸ್ವರೂಪನೂ ಮತ್ತು ಭಕ್ತರ ಭಯವನ್ನು ನಿವಾರಿಸುವವನೂ ಆದ ಈಶ್ವರನನ್ನು ಕಂಡರು.

ದೃಷ್ಟ್ವಾ ಪ್ರಣಮ್ಯ ಸಹಸಾ ತುಷ್ಟುವುರ್ವಿವಿಧೈಃ ಸ್ತವೈಃ ।
ದೇವದೇವ ಜಗನ್ನಾಥ ಪ್ರಣತಾರ್ತಿಹರಾವ್ಯಯ ॥ ೫೨ ॥

ನೃಸಿಹ್ಮಂ ಹಂತುಕಾಮಾ ವೈ ತ್ವಾಮದ್ಯ ಶರಣಂ ಗತಾಃ ।
ಇತ್ಯುಕ್ತ್ವಾ ವೇದಿಕಾಂ ತತ್ರ ಸಮ್ಯಕ್ ಕೃತ್ವಾ ವಿಧಾನತಃ ॥ ೫೩ ॥

ಶಸ್ತ್ರೈಶ್ಚ ಶರಪತ್ರೈಶ್ಚ ದರ್ಭೈರಾಸ್ತೀರ್ಯ ವೇದಿಕಾಂ ।
ತತ್ರ ಪಾವಕಮಾದಾಯ ಸಮಿಧೋಽಥ ವಿಭೀತಕಾಃ ॥ ೫೪ ॥

ರಕ್ತಚಂದನಪುಷ್ಪಾದ್ಯೈರಲಂಕೃತ್ಯ ಸಮಂತತಃ ।
ಕಾಷ್ಠಾರ್ಣಯಸ್ಯೈಃ ಸ್ರುವೈಃ ಸ್ರುಗ್ಭಿರ್ಹುತ್ವಾ ಚಾಜ್ಯಾಹುತೀಸ್ತತಃ ॥

೫೨. ಈಶ್ವರನನ್ನು ಸಾಕ್ಷಾತ್ಕರಿಸಿದೊಡನೆಯೇ ಎಲ್ಲರೂ ಶೀಘ್ರವಾಗಿ ನಮಸ್ಕರಿಸಿ ವಿವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು. ದೇವತೆಗಳಿಗೆಲ್ಲ ದೇವತಾ ಸ್ವರೂಪನೆ! ಪ್ರಪಂಚಕ್ಕೆ ನಾಥನೆ! ನಿನ್ನನ್ನು ನಮಸ್ಕರಿಸಿದ ಭಕ್ತರ ಪೀಡೆಯನ್ನು ನಿವಾರಿಸುವವನೆ! ನಾಶರಹಿತನೆ! ಎಂದು ಮೊದಲಾಗಿ ಸಂಬೋಧಿಸಿ ಈಶ್ವರನ ಮಹಿಮೆಯನ್ನು ಕೊಂಡಾಡಿ ಸ್ತುತಿಸಿದರು.

೫೩. ನೃಸಿಹ್ಮನನ್ನು ಸಂಹರಿಸಬೇಕೆಂಬ ಅಭಿಲಾಷೆಯಿಂದ ನಾವು ನಿನ್ನನ್ನು ಶರಣಾಗತರಾಗಿರುವೆವು. ಎಂಬುದಾಗಿ ವಿಜ್ಞಾಪಿಸಿ ಆ ಸ್ಥಳದಲ್ಲಿ ಶಾಸ್ತ್ರವಿಧಿಯಂತೆ ಹೋಮಾಂಗವಾದ ವೇದಿಕೆಯನ್ನು ಚನ್ನಾಗಿ ಸಿದ್ಧಮಾಡಿದರು.

೫೪. ಆ ವೇದಿಕೆಯಲ್ಲಿ ಕರ್ಮಕ್ಕೆ ಉಪಕರಣಗಳಾದ ಶಸ್ತ್ರ, ಶರವೆಂಬ ಹುಲ್ಲು, ಮತ್ತು ದರ್ಭೆಗಳನ್ನು ಹಾಕಿ ಮತ್ತು ಅಗ್ನಿಯನ್ನು ವೇದಿಕೆಯಲ್ಲಿ ಪ್ರತಿಷ್ಠೆಮಾಡಿ ವಿಭೀತಕ (ಕಲಿ) ವೃಕ್ಷದ ಸಮಿತ್ತುಗಳನ್ನು ಹೋಮಕ್ಕೋಸ್ಕರ ಸಿದ್ಧಪಡಿಸಿಕೊಂಡರು.

೫೫. ಆ ಸಮಿತ್ತುಗಳನ್ನು ಕೆಂಪುಚಂದನ, ಪುಷ್ಪಗಳಿಂದ ಸುತ್ತಲೂ ಅಲಂಕರಿಸಿ ಕಬ್ಬಿಣದಿಂದ ಮಾಡಿದ ಸ್ರುಕ್-ಸ್ರುವವೆಂಬ ಯಜ್ಞಪಾತ್ರಗಳಿಂದ ತುಪ್ಪದ ಆಹುತಿಯನ್ನು ಅಗ್ನಿಯಲ್ಲಿ ಹೋಮವಡಿದರು.

ಭಾಗಸ್ಯ ಸರ್ವಕೃಷ್ಣಸ್ಯ ಜಗೃಹುರ್ಜೀವತೋ ಗಳಂ ।
ಅನೇನ ಕರ್ಮಣಾ ಶಂಭುಃ ಸರ್ವೇಷಾಂ ನಃ ಪ್ರಸೀದತು ॥ ೫೬ ॥

ಪ್ರಸನ್ನೋಽದ್ಯೈವ ನೋ ಭೂಯಾನ್ನೃಸಿಹ್ಮಂ ಹಂತುಮುದ್ಯತಃ ।
ಇತ್ಯುಕ್ತ್ವಾ ಪ್ರಾಕ್ಷಿಪನ್ನಗ್ನೌ ಭಾಗಂ ಸರ್ವಾಂಗಮಾಸುರಾಃ ॥ ೫೭ ॥

ಪ್ರಕ್ಷಿಪ್ತಮಾತ್ರೇ ದಿತಿಜೈಃ ಸಂತುಷ್ಟಸ್ತೇನ ಕರ್ಮಣಾ ।
ಉತ್ತಸ್ಥಾವಥ ಕುಂಡಾಗ್ನೇರದ್ಭುತಃ ಶರಭೋ ಮಹಾನ್ ॥ ೫೮ ॥

ತೀಕ್ಷ್ಣತುಂಡನಖೋ ಘೋರೋ ಜ್ವಲದ್ಘೋರಾಗ್ನಿಲೋಚನಃ ।
ಅಷ್ಟಪಾದಸ್ತಾಮ್ರಚೂಡಃ ಪ್ರಲಯಾನಿಲಸನ್ನಿಭಃ ॥ ೫೯ ॥

---

೫೬. ಅನಂತರದಲ್ಲಿ ಸರ್ವ ಅವಯವಗಳಲ್ಲಿಯೂ ಕಪ್ಪು ಬಣ್ಣದಿಂದ ಕೂಡಿದ, ಒಂದು ಬದುಕಿರುವ ಮೇಕೆಯನ್ನು ಹಿಡಿದು ಕತ್ತನ್ನು ಹಿಸುಕಿದರು. ಆಗ ಆ ಅಭಿಚಾರ ಕರ್ಮವನ್ನು ಆಚರಿಸುವಾಗ ಶಂಭುವು ಈ ನಮ್ಮ ಕರ್ಮದಿಂದ ನಮ್ಮೆಲ್ಲರ ಮೇಲೆ ಅನುಗ್ರಹವನ್ನು ತೋರಿಸಲಿ ಎಂದು ಪ್ರಾರ್ಥಿಸಿಕೊಂಡರು.

೫೭. ಈಗಲೇ ಈಶ್ವರನು ಪ್ರಸನ್ನನಾಗಿ ನಮ್ಮ ಶತ್ರುವಾದ ನೃಸಿಹ್ಮನನ್ನು ಸಂಹರಿಸಲು ಉದ್ಯುಕ್ತನಾಗಲಿ, ಎಂದು ಪ್ರಾರ್ಥಿಸಿ ಆ ಅಸುರರೆಲ್ಲರೂ ಸರ್ವಾವಯವಗಳಿಂದ ಕೂಡಿದ ಆ ಮೇಕೆಯನ್ನು ಅಗ್ನಿಯಲ್ಲಿ ಹೋಮಮಾಡಿದರು.

೫೮. ರಾಕ್ಷಸರು ಆ ಮೇಕೆಯನ್ನು ಅಗ್ನಿಯಲ್ಲಿ ಹೋಮಮಾಡುತ್ತಿರುವಷ್ಟರಲ್ಲಿಯೇ ಆ ಕರ್ಮದಿಂದ ಸಂತುಷ್ಟನಾದ ಈಶ್ವರನು ಆ ಅಗ್ನಿಕುಂಡದಿಂದ ಅದ್ಭುತವಾದ ಮಹಾಶರಭಮೃಗದ ರೂಪದಿಂದ ಎದ್ದುಬಂದನು.

೫೯. ಆ ಶರಭಮೃಗವು ಅತಿ ಕಠಿನವಾದ ಮುಖ ಮತ್ತು ಉಗುರುಗಳುಳ್ಳದ್ದೂ ಅತಿಯಾಗಿ ಭಯಂಕರವೂ, ಉರಿಯುವ ಘೋರವಾದ ಅಗ್ನಿಯಂತಿರುವ ಕಣ್ಣು, ಎಂಟು ಕಾಲು, ಕೆಂಪಾದ ಶಿಖೆ, ಮುಂತಾದುವುಗಳಿಂದ ಕೂಡಿರುವುದೂ ಮತ್ತು ಪ್ರಲಯಾಗ್ನಿಯಂತೆ ಉಗ್ರವಾದುದೂ ಆಗಿರುವುದು.

ವಿಗರ್ಜನ್ನುತ್ಪಪಾತೋರ್ಧ್ವಂ ತ್ರೈಲೋಕ್ಯಂ ಕ್ಷೋಭಯನ್ನಿವ ।
ತಸ್ಯ ಪಕ್ಷಾನಿಲೇನೈವ ಧರಾ ಸಾದ್ರಿವನಾ ಭೃಶಂ ॥ ೬೦ ॥

ಚಚಾಲ ಸಾಗರಾಶ್ಚೈವ ಸಂಕ್ಷುಬ್ಧಾಃ ಸರ್ವತೋ ದಿಶಃ ।
ತಂ ದೃಷ್ಟ್ವಾ ಶರಭಂ ಸರ್ವೇ ನೃಸಿಹ್ಮಂ ಹಂತುಮುದ್ಯತಂ ॥ ೬೧ ॥

ಬಭೂವುರಸುರಾಸ್ತತ್ರ ಬಲದರ್ಪಸಮನ್ವಿತಾಃ ।
ಮೇನಿರೇ ನಿಹತಂ ಸದ್ಯೋ ನೃಸಿಹ್ಮಂ ಸಮರುದ್ಗಣಂ ॥ ೬೨ ॥

ತತಸ್ತೇನೈವ ಸಹಿತಾಃ ಶರಭೇಣ ಬಲೋದ್ಧತಾಃ ।
ನಿಹಂತುಮಮರಾನ್ ಸರ್ವಾನ್ ಪುನರಾಜಗ್ಮುರಂಜಸಾ ॥ ೬೩ ॥

ತತ್ರ ಸತ್ಯವ್ರತಕ್ಷೇತ್ರೇ ಕಾಂಚೀಂ ದೃಷ್ಟ್ವಾಽಂತರಿಕ್ಷಗಾಃ ।
ಸಸೃಜುಃ ಶರಜಾಲಾನಿ ಶತಶೋಽಥ ಸಹಸ್ರಶಃ ॥ ೬೪ ॥

---

೬೦. ಆ ಪ್ರಾಣಿಯು ಗರ್ಜಿಸುತ್ತ ಮೂರು ಲೋಕಗಳಿಗೆ ಕ್ಷೋಭೆಯನ್ನುಂಟು ಮಾಡುವಂತೆ ಭೂಮಿಯಿಂದ ಆಕಾಶಕ್ಕೆ ನೆಗೆಯಿತು. ಅದರ ರೆಕ್ಕೆಗಳ ಗಾಳಿಯಿಂದ ಬೆಟ್ಟಕಾಡುಗಳಿಂದ ಕೂಡಿದ ಭೂಮಿಯು ಅತಿಶಯವಾಗಿ ಕಂಪಿಸಿತು.

೬೧. ಮತ್ತು ಸಮುದ್ರಗಳೂ ಸಕಲ ದಿಙ್ಮಂಡಲಗಳೂ ಅಲ್ಲೋಲಕಲ್ಲೋಲ ವಾದುವು. ಆಗ ನೃಸಿಹ್ಮನನ್ನು ಸಂಹರಿಸಲು ಉದ್ಯುಕ್ತವಾದ ಶರಭಮೃಗವನ್ನು ರಾಕ್ಷಸರು ಕಂಡು ಹಿಗ್ಗಿದರು.

೬೨. ಮತ್ತು ಅಸುರರು ಶರಭದ ವಿಕ್ರಮದ ಆಶ್ರಯದಿಂದ ಅತಿಶಯವಾದ ಬಲ-ದರ್ಪಗಳಿಂದ ಕೂಡಿದವರಾದರು. ಮತ್ತು ದೇವತಾಗಣದಿಂದ ಕೂಡಿದ ನೃಸಿಹ್ಮನನ್ನು ಸಂಹಾರವಾದಂತೆ ಭಾವಿಸಿದರು.

೬೩. ಅನಂತರದಲ್ಲಿ ಆ ಶರಭಮೃಗದಿಂದ ಸಹಿತರಾಗಿ ಬಲದಿಂದ ಕೊಬ್ಬಿದ ಅಸುರರು ಮತ್ತೆ ಸಕಲ ದೇವತೆಗಳನ್ನು ಕೊಲ್ಲಲು ವೇಗದಿಂದ ಆಕ್ರಮಿಸಿ ಬಂದರು.

೬೪. ಆಗ ಸತ್ಯವ್ರತ ಕ್ಷೇತ್ರದಲ್ಲಿ ಕಾಂಚೀನಗರಿಯನ್ನು ಕಂಡು ಅಲ್ಲಿ ಅಂತರಿಕ್ಷದಲ್ಲಿಯೇ ನಿಂತು ನೂರು-ಸಾವಿರ ಮುಂತಾದ ಅನೇಕಾನೇಕ ಸಂಖ್ಯೆಯಿಂದ ಬಾಣಗಳನ್ನು ಮಳೆ ಸುರಿಸಿದರು.

ತೇಷಾಂ ಮಧ್ಯೇ ಮಹಾಮಾಯಃ ಶಂಬರೋ ನಾಮ ದಾನವಃ ।
ಸಸೃಜೇ ತಾಮಸೀಂ ಮಾಯಾಂ ಯಯಾ ಸಂವ್ಯಾಪ್ಯತೇ ತಮಃ ॥ ೬೫ ॥

ಸರ್ವಂ ತತ್ತಮಸಾಽಕ್ರಾಂತಂ ಕ್ಷೇತ್ರಂ ಸತ್ಯವ್ರತಂ ತದಾ ।
ಗಾಢೇಽಂಧತಮಸಿ ವ್ಯಾಪ್ತೇ ನ ಪ್ರಾಜ್ಞಾಯತ ಕಿಂಚನ ॥ ೬೬ ॥

ನಾಗ್ನಿರ್ಜಜ್ವಾಲ ವೇದ್ಯಂತರ್ನಾಪಿ ಸೂರ್ಯಃ ಪ್ರಕಾಶತೇ ।
ನ ರಾಜತೇ ಶಶಾಂಕೋ ವಾ ನ ದೀಪೋ ವಾಽತ್ರ ದೀಪ್ಯತೇ ॥ ೬೭ ॥

ಸರ್ವಂ ಹಿ ತಿಮಿರಾಕ್ರಾಂತಂ ಜಗಚ್ಚ ಸಚರಾಚರಂ ।
ದೃಷ್ಟ್ವಾ ಭೀತಾಸ್ತದಾ ದೇವಾ ಬಭೂವುರ್ಭ್ರಾಂತಚೇತಸಃ ॥ ೬೮ ॥

ತಸ್ಮಿಂಸ್ತಮಸಿ ಸುವ್ಯೂಢೇ ದಾನವಾ ವ್ಯೋಮ್ನಿ ಸಂಸ್ಥಿತಾಃ ।
ನಾನಾಪ್ರಹರಣೈರ್ಘೋರೈರರ್ದಯಂತಿ ಸ್ಮ ಸರ್ವತಃ ॥ ೬೯ ॥

---

೬೫. ಆ ಅಸುರರ ಮಧ್ಯದಲ್ಲಿ ಮಹಾ ಮಾಯಾವಿಯಾದ ಶಂಬರಾಸುರನ ಜಗತ್ತನ್ನೆಲ್ಲ ಕತ್ತಲೆಯು ಆವರಿಸುವಂತೆ ತನ್ನ ತಮೋಮಯವಾದ ಮಾಯೆಯನ್ನು ಪ್ರಯೋಗಿಸಿದನು.

೬೬. ಆಗ ಆ ಮಾಯೆಯ ಬಲದಿಂದ ಸತ್ಯವ್ರತಕ್ಷೇತ್ರವೆಲ್ಲವೂ ಕತ್ತಲೆಯಿಂದ ಆವರಿಸಲ್ಪಟ್ಟಿತು. ಅಂತಹ ಗಾಢಾಂಧಕಾರವು ಎಲ್ಲೆಲ್ಲಿಯೂ ವ್ಯಾಪಿಸಿ ಅಂಧಕಾರ ವಿನಹ ಮತ್ತೊಂದು ವಸ್ತುವು ಕಾಣಿಸಲಿಲ್ಲ.

೬೭. ಈ ರೀತಿಯಾಗಿ ತೇಜೋಮಂಡಲಕ್ಕೆ ವಿರೋಧಿಯಾದ ಅಂಧಕಾರದ ವ್ಯಾಪ್ತಿಯಿಂದ ಎಲ್ಲ ತೇಜಸ್ಸುಗಳು ತಿರಸ್ಕಾರಹೊಂದಿ ವೇದಿಕೆಯಲ್ಲಿ ಜ್ವಲಿಸುತ್ತಿದ್ದ ಅಗ್ನಿಯು ಜ್ವಲಿಸದೆ ಹೋಯಿತು. ಸೂರ್ಯನು ಮೊದಲಿನಂತೆ ಪ್ರಕಾಶಿಸಲಿಲ್ಲ. ಚಂದ್ರನೂ ಪ್ರಕಾಶಿಸಲಿಲ್ಲ. ಮತ್ತು ದೀಪವು ಜ್ವಲಿಸಲಿಲ್ಲ.

೬೮. ಚರ-ಅಚರ ಸಹಿತವಾದ ಪ್ರಪಂಚವೆಲ್ಲ ಅಂಧಕಾರದಿಂದ ವ್ಯಾಪ್ತವಾಯಿತು. ಆಗ ಅಂಧಕಾರಮಯವಾದ ಸನ್ನಿವೇಶವನ್ನು ಕಂಡು ದೇವತೆಗಳು ಭೀತರೂ ಮತ್ತು ಭ್ರಾಂತಿಯನ್ನು ಹೊಂದಿದ ಬುದ್ಧಿಯುಳ್ಳವರೂ ಆದರು.

೬೯. ಆ ಅಂಧಕಾರದ ವ್ಯೂಹವು ನಿರಂತರವಾಗಿ ಗಾಢವಾಗಿರಲು ಆಕಾಶದಲ್ಲಿ ನಿಂತು ದಾನವರು ಘೋರವಾದ ಆಯುಧಗಳನ್ನು ಪ್ರಯೋಗಿಸಿ ಸಮಸ್ತ ವಿಧದಿಂದಲೂ ದೇವತೆಗಳನ್ನು ಪೀಡಿಸಲಾರಂಭಿಸಿದರು.

ಶರಭೋಽಪಿ ಸ್ವಪಕ್ಷಾಭ್ಯಾಂ ನಖೈಸ್ತುಂಡೇನ ಚಾಸಕೃತ್ ।
ಅರ್ದಯಾಮಾಸ ವೇಶ್ಮಾರ್ಘಾ ರಥವಾಜಿಗಜಾನಪಿ ॥ ೭೦

ತೈರರ್ದ್ಯಮಾನಾಃ ಶಸ್ತ್ರೌಘೈಸ್ತಮಸಾ ಚ ವಿಮೋಹಿತಾಃ ।
ಕರ್ತವ್ಯಮೂಢಾ ವಿವಶಾ ವಿಕ್ರೋಶಂತಿ ಸುರಾಸ್ತದಾ ॥ ೭೧ ॥

ಚಲಿತುಂ ನೈವ ಶಕ್ತಾಸ್ತೇ ನೇಕ್ಷಿತುಂ ವಾ ಪರಸ್ಪರಂ ।
ಕ್ರೋಶಂತಿ ತತ್ರ ತತ್ರಸ್ಥಾ ಬ್ರಹ್ಮಾಣಂ ಶರಣೈಷಿಣಃ ॥ ೭೨ ॥

ತೇಷಾಂ ವಿಕ್ರೋಶಮಾನಾನಾಂ ಶ್ರುತ್ವಾ ಶಬ್ದಂ ದಿವೌಕಸಾಂ ।
ದೃಷ್ಟ್ವಾ ಚ ತಾಮಸೀಂ ಮಾಯಾಂ ಸರ್ವಲೋಕವಿಮೋಹಿನೀಂ ॥

೭೦. ಶರಭಮೃಗವು ಕೂಡ ತನ್ನ ರೆಕ್ಕೆಗಳಿಂದಲೂ, ನಖಗಳಿಂದಲೂ ಮತ್ತು ಮುಖಾಗ್ರದಿಂದಲೂ ಆ ನಗರದ ಮನೆಗಳ ಸಾಲನ್ನೂ ರಥ-ಅಶ್ವ-ಗಜ ಮುಂತಾದ ಸೈನ್ಯವನ್ನೂ ಪುನಃ ಪುನಃ ಧ್ವಂಸಮಾಡಲಾರಂಭಿಸಿತು.

೭೧. ಆಗ ದೇವತೆಗಳು ಒಂದು ಕಡೆ ಆ ರಾಕ್ಷಸರು ಘೋರವಾದ ಶಸ್ತ್ರಗಳಿಂದ ಹಿಂಸಿಸುತ್ತಿರುವುದರಿಂದಲೂ ಮತ್ತೊಂದು ಕಡೆ ಗಾಢಾಂಧಕಾರ ಕವಿತು ಏನೇನೂ ಕಾಣದಿರುವುದರಿಂದಲೂ ಮೋಹಗೊಂಡವರಾಗಿ ಕರ್ತವ್ಯಬುದ್ಧಿಯಿಂದ ಮೂಢರೂ ಅಸ್ವತಂತ್ರರೂ ಆಗಿ ಕೂಗಿಕೊಂಡರು.

೭೨. ಆ ದೀನಾವಸ್ಥೆಯಲ್ಲಿ ದೇವತೆಗಳಿಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಚಲಿಸಲಾಗಲಿ ಪರಸ್ಪರ ವ್ಯಕ್ತಿಯನ್ನು ನೋಡುವುದಕ್ಕಾಗಲಿ ಸಾಧ್ಯವಾಗಲಿಲ್ಲ. ಆಗ ನಿಂತಲ್ಲಿಯೇ ನಿಂತುಕೊಂಡು ಬ್ರಹ್ಮನನ್ನು ಶರಣಾಗತರಾಗಬೇಕೆಂದು ಅಪೇಕ್ಷಿಸಿ ಕೂಗಿಕೊಂಡರು.

೭೩. ಬ್ರಹ್ಮನು ಕೂಗಿಕೊಳ್ಳುತ್ತಲಿದ್ದ ಆ ದೇವತೆಗಳ ಶಬ್ದವನ್ನು ಕೇಳಿದನು. ಮತ್ತು ಸಕಲ ಲೋಕಗಳನ್ನು ಮೋಹಪಡಿಸುವ ತಮೋಗುಣಮಯವಾದ ಮಾಯೆಯನ್ನು ನೋಡಿದನು.

ಚೋದಿತಾಮಸುರೇಂದ್ರೇಣ ಶಂಬರೇಣ ದುರಾತ್ಮನಾ ।
ತಮೋಭೂತಂ ಜಗತ್ ಸರ್ವಂ ವಿಜ್ಞಾಯ ಚತುರಾನನಃ ॥ ೭೪ ॥

ದಧ್ಯೌ ತದಾ ರಮಾನಾಥಂ ನಿಮೀಲಿತವಿಲೋಚನಃ ।
ಪ್ರಯತಃ ಪ್ರಣತೋ ಭೂತ್ವಾ ಬದ್ಧ್ವಾ ಶಿರಸಿ ಚಾಂಜಲಿಂ ॥ ೭೫ ॥

ನಮೋಽನಂತಾಯ ಶಾಂತಾಯ ಕರುಣಾಮೃತಸಿಂಧವೇ ।
ನಮಃ ಪಂಕಜನಾಭಾಯ ಪರಾನಂದಪ್ರದಾಯಿನೇ ॥ ೭೬ ॥

ಭಾವ್ಯಾಯ ಭಾವಗೋಪ್ತ್ರೇ ಚ ಭಯಘ್ನಾಯಾಭಯಾಯ ಚ ।
ಭವಬಂಧಚ್ಛಿದೇ ತುಭ್ಯಂ ಭಕ್ತಾನಾಮಿಷ್ಟದಾಯಿನೇ ॥ ೭೭ ॥

---

೭೪. ಬ್ರಹ್ಮದೇವನು ರಾಕ್ಷಸರಿಗೆಲ್ಲ ಪ್ರಭುವಾದ ಶಂಬರಾಸುರನು ಪ್ರಯೋಗಿಸಿದ ಮಾಯೆಯಿಂದ ಜಗತ್ತೆಲ್ಲವೂ ಅಂಧಕಾರಪೂರ್ಣವಾಗಿದೆಯೆಂಬುದನ್ನು ತಿಳಿದುಕೊಂಡನು.

೭೫. ಆಗ ಆ ರಾಕ್ಷಸೋಪದ್ರವದ ಪರಿಹಾರಕ್ಕೆ ಬೇರೆ ಯಾವ ಉಪಾಯವನ್ನೂ ಕಾಣದೇ ಪವಿತ್ರನಾಗಿಯೂ ಶಿರಸ್ಸಿನಲ್ಲಿ ಅಂಜಲಿಬಂಧವನ್ನಿಟ್ಟುಕೊಂಡು ನಮಸ್ಕಾರಮಾಡಿದವನಾಗಿಯೂ ಮತ್ತು ಧ್ಯಾನಾಸಕ್ತಿಯೋಗದಿಂದ ಮುಚ್ಚಿ ಹೋದ ಕಣ್ಣುಗಳುಳ್ಳವನಾಗಿಯೂ ಲಕ್ಷ್ಮೀಪತಿಯಾದ ವಿಷ್ಣುವನ್ನು ಧ್ಯಾನಿಸಿದನು.

೭೬. ಮತ್ತು ವಿಷ್ಣುವಿನ ನಾಮಮಹಿಮೆಯನ್ನು ಕೊಂಡಾಡುತ್ತ ಧ್ಯಾನಿಸಿದನು: ಅಂತವಿಲ್ಲದವನೂ, ನಿರ್ವಿಕಾರಸ್ವರೂಪನೂ, ಕರುಣೆಯೆಂಬ ಅಮೃತಕ್ಕೆ ಸಮುದ್ರಪ್ರಾಯನೂ, ಕಮಲಪುಷ್ಪದಿಂದ ಶೋಭಿಸುವ ನಾಭಿಯುಳ್ಳವನೂ, ಮತ್ತು ಪರಮಾನಂದವನ್ನು ಅನುಗ್ರಹಿಸುವವನೂ ಆದ ಪರಮಾತ್ಮನಿಗೆ ನಮಸ್ಕಾರವು.

೭೭. ಸುಂದರಸ್ವರೂಪನೂ, ವಸ್ತುಸಮೃದ್ಧಿಯನ್ನು ರಕ್ಷಿಸುವವನೂ, ಭೀತಿಯನ್ನು ಅಪಹರಿಸುವವನೂ, ಅಭಯಪ್ರದಾನಮಾಡುವವನೂ, ಸಂಸಾರಬಂಧವನ್ನು ಮೋಚನಮಾಡುವವನೂ ಮತ್ತು ಭಕ್ತರ ಇಷ್ಟಾರ್ಥವನ್ನು ಪ್ರಸವಿಸುವವನೂ ಆದ ಪರಮಾತ್ಮನಿಗೆ ನಮಸ್ಕಾರವು.

ತ್ರಾಹಿ ಮಾಂ ಪುಂಡರೀಕಾಕ್ಷ ಭಯಾದಸುರಜಾದಿಹ ।
ವ್ಯಪೋಹಯ ತಮಃ ಕ್ಷಿಪ್ರಂ ಯೇನ ಮೂಢಾ ದಿವೌಕಸಃ ॥ ೨೮

ಇತಿ ಸ್ತುತೋ ಜಗದ್ಧಾತ್ರಾ ಭಗವಾನ್ ಭಕ್ತವತ್ಸಲಃ ।
ವ್ಯಪೋಹನಾಯ ತಮಸಾಂ ತತ್ರೈವಾವಿರಭೂದ್ಧರಿಃ ॥ ೨೯ ॥

ಜ್ವಾಲಾರೂಪಧರೋ ವಹ್ನೇಃ ಪಾತಾಲಾದಾಗತೋ ವಿಭುಃ ।
ಜಜ್ವಾಲಾನಂತಸೂರ್ಯಾಭಸ್ತಮೋ ಧೂನ್ವನ್ ಸಮಂತತಃ ॥ ೩೦ ॥

ಅಧಸ್ತಾದ್ಯಜ್ಞಶಾಲಾಯಾಃ ಪ್ರಜ್ವಲನ್ನಪಿ ಚೋರ್ಧ್ವತಃ ।
ನ ದದಾಹ ತದಾ ಶಾಲಾಂ ತದದ್ಭುತಮಿವಾಭವತ್ ॥ ೩೧ ॥

ಜ್ವಾಲಾಮಧ್ಯೇ ತು ಪುರುಷಂ ಶಂಖಚಕ್ರಗದಾಧರಂ ।
ರಕ್ತಾಂಬರಂ ರಕ್ತತನುಂ ದದೃಶುಸ್ತತ್ರ ಕೇಚನ ॥ ೩೨ ॥

---

೨೮. ಕಮಲಪುಷ್ಪದಂತೆ ನಯನವುಳ್ಳ ದೇವನೆ! ಅಸುರರಿಂದ ಉಂಟಾದ ಈ ಭೀತಿಯಿಂದ ನನ್ನನ್ನು ಕಾಪಾಡು. ದೇವತೆಗಳನ್ನು ಮೋಹಾಂಧರನ್ನಾಗಿಮಾಡಿರುವ ಈ ತಮೋರಾಶಿಯನ್ನು ಬೇಗ ನಿವಾರಣಮಾಡು.

೨೯. ಜಗತ್ತಿನ ಸೃಷ್ಟಿಕರ್ತನಾದ ಬ್ರಹ್ಮನು ಭಕ್ತವತ್ಸಲನಾದ ಭಗವಂತನನ್ನು ಸ್ತೋತ್ರಮಾಡಲು ಹರಿಯು ಪ್ರಸನ್ನನಾಗಿ ಆ ತಮಸ್ಸನ್ನು ಹೋಗಲಾಡಿಸಲು ಆ ಸ್ಥಳದಲ್ಲಿ ಆವಿರ್ಭೂತನಾದನು.

೩೦. ಸಕಲ ನಿಯಾಮಕನಾದ ವಿಷ್ಣುವು ಅಗ್ನಿಜ್ವಾಲೆಯರೂಪವನ್ನು ಧರಿಸಿ ಪಾತಾಳಲೋಕದಿಂದ ಮೇಲಕ್ಕೆ ಬಂದಂತೆ ಆವಿರ್ಭವಿಸಿದನು. ಮತ್ತು ಸುತ್ತಲೂ ವ್ಯಾಪಿಸಿದ್ದ ತಮಸ್ಸನ್ನು ದೂರಮಾಡುತ್ತ ಅನೇಕ ಸೂರ್ಯಬಿಂಬಗಳಂತೆ ಜಾಜ್ವಲ್ಯಮಾನವಾದ ಸ್ವರೂಪವುಳ್ಳವನಾಗಿ ಪ್ರಕಾಶಿಸಿದನು.

೩೧. ಆ ಯಜ್ಞಶಾಲೆಯ ಕೆಳಭಾಗ ಮತ್ತು ಮೇಲುಭಾಗಗಳಲ್ಲಿ ಜ್ವಾಲಾಮಯವಾಗಿ ಉರಿಯುತ್ತಿದ್ದರೂ ಆ ಯಜ್ಞಶಾಲೆಯನ್ನು ಮಾತ್ರ ಸುಡದೆ ಇರುವುದು ಎಲ್ಲರ ದೃಷ್ಟಿಗೂ ಅತ್ಯಾಶ್ಚರ್ಯವೆನಿಸಿತು.

೩೨. ಆ ಜ್ವಾಲೆಯ ಮಧ್ಯದಲ್ಲಿ ಶಂಖ-ಚಕ್ರ-ಗದೆಗಳನ್ನು ಭುಜಗಳಲ್ಲಿ ಧರಿಸಿದ ರಕ್ತವರ್ಣದ ವಸ್ತ್ರವನ್ನು ಉಟ್ಟಿರುವ ಮತ್ತು ಕೆಂಪಾದ ಶರೀರವುಳ್ಳ ಪರಮಾತ್ಮನ ವಿಗ್ರಹವನ್ನು ಕಂಡರು.

ಪ್ರಕಾಶಿತಂ ಜಗತ್ ಸರ್ವಂ ಯದ್ದೀಪಾಭೇನ ವಿಷ್ಣುನಾ ।
ತಸ್ಮಾದ್ದೀಪಪ್ರಕಾಶಾಖ್ಯಾಂ ಲಭತೇ ಪುರುಷೋತ್ತಮಃ ॥ ೮೩ ॥

ಬ್ರಹ್ಮಣೋ ಯಜ್ಞಶಾಲಾಯಾಂ ಹಸ್ತಿಶೈಲಸ್ಯ ಪಶ್ಚಿಮೇ ।
ಹರಿರ್ದೀಪಪ್ರಕಾಶಾಖ್ಯಸ್ತತ್ರಾಸ್ತೇ ಮುಕ್ತಿದೋ ನೃಣಾಂ ॥ ೮೪ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ದ್ವಾದಶೋಽಧ್ಯಾಯಃ

---

೮೩. ವಿಷ್ಣುವು ದೀಪದಂತೆ ಪ್ರಭೆಯುಳ್ಳ ಮೂರ್ತಿಯನ್ನು ಧರಿಸಿ ಜಗತ್ತನ್ನು ಪ್ರಕಾಶಪಡಿಸಿ ಅಂಧಕಾರವನ್ನು ಹೋಗಲಾಡಿಸಿರುವುದರಿಂದ ಪುರುಷೋತ್ತಮನಾದ ವಿಷ್ಣುವು "ದೀಪಪ್ರಕಾಶ" ಎಂಬ ಸಂಜ್ಞೆಯನ್ನು ಹೊಂದಿರುವನು.

೮೪. ಹಸ್ತಿಶೈಲದ ಪಶ್ಚಿಮದಿಕ್ಕಿನಲ್ಲಿ ಬ್ರಹ್ಮನ ಯಜ್ಞಶಾಲೆಯಲ್ಲಿ ದೀಪಪ್ರಕಾಶ ಎಂಬ ಹೆಸರಿನಿಂದ ವಿಷ್ಣುವು ಭಕ್ತಜನರಿಗೆ ಮುಕ್ತಿಯನ್ನು ಕೊಡುತ್ತ ವಾಸ ಮಾಡಿರುವನು.

ಕಾಂಚೀಮಾಹಾತ್ಮ್ಯದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀ ಮಾಹಾತ್ಮ್ಯಮ್

ತ್ರಯೋದಶೋಽಧ್ಯಾಯಃ

ನಾರದ ಉವಾಚ :—

ತತೋ ವಿತಿಮಿರಂ ವ್ಯೋಮ ದೃಷ್ಟ್ವಾ ತೇ ಸುರಸತ್ತಮಾಃ ।
ತತ್ರ ಚೈವಾಸುರಾನ್ ದೃಷ್ಟ್ವಾ ಸಂರಂಭೇಣೋದ್ಯತಾಯುಧಾನ್ ॥ ೧ ॥

ತಥಾಷ್ಟಪಾದಂ ಶರಭಂ ವಿಕೃತಂ ಘೋರದರ್ಶನಂ ।
ನೃಸಿಹ್ಮಮುದ್ಯತಂ ಹಂತುಂ ವಜ್ರತುಂಡನಖೈರ್ಯುತಂ ॥ ೨ ॥

ಕ್ಷೋಭಯಂತಂ ಚ ಪಕ್ಷಾಭ್ಯಾಂ ಪುರೀಂ ಸಗೃಹಗೋಪುರಾಂ ।
ದೃಷ್ಟ್ವಾ ಪ್ರಕಂಪಿತಧಿಯೋ ಬಭೂವುರ್ಭೃಶದುಃಖಿತಾಃ ॥ ೩ ॥

---

೧. ಅನಂತರದಲ್ಲಿ ಆ ಶ್ರೇಷ್ಠರಾದ ದೇವತೆಗಳು ಅಂಧಕಾರವಿಲ್ಲದ ಆಕಾಶವನ್ನು ನೋಡಿ ವೇಗದಿಂದ ಆಯುಧಗಳನ್ನೆತ್ತಿ ಯುದ್ಧಕ್ಕೆ ಪ್ರವಾಹವಾಗಿ ಬರುತ್ತಿದ್ದ ಅಸುರರನ್ನು ಕಂಡರು.

೨. ಹಾಗೆ ಎಂಟು ಕಾಲು, ವಿಕಾರದಿಂದ ಕೂಡಿದ ವಿಗ್ರಹ ಮತ್ತು ಘೋರವಾದ ದರ್ಶನಗಳಿಂದ ಕೂಡಿದ ಶರಭಮೃಗವು ವಜ್ರಾಯುಧದಂತೆ ತೀಕ್ಷ್ಣವಾದ ಮುಖಾಗ್ರ, ನಖಗಳಿಂದ ನೃಸಿಂಹನನ್ನು ಸಂಹರಿಸಲು ಸಿದ್ಧವಾದುದನ್ನೂ ಕಂಡರು.

೩. ಮತ್ತು ಆ ಮೃಗವು ತನ್ನ ಪಕ್ಷಗಳಿಂದ ಆ ನಗರದ ಗೃಹ ಮತ್ತು ಗೋಪುರಗಳಿಗೆ ಕ್ಷೋಭೆಯನ್ನು ಉಂಟುಮಾಡುತ್ತಿರುವುದನ್ನು ದೇವತೆಗಳು ನೋಡಿ ನಡುಗಿದ ಬುದ್ಧಿಯುಳ್ಳವರೂ ಅತ್ಯಂತವಾಗಿ ದುಃಖಿತರೂ ಆದರು.

ಸಿಹ್ಮಾರಿಃ ಶರಭಶ್ಚಾಪಿ ಪಕ್ಷಾನುದ್ಧೃತ್ಯ ಭೀಷಯನ್ ।
ಅಸುರಾಣಾಂ ಹಿತಾರ್ಥಾಯ ನೃಸಿಹ್ಮಂ ಹಂತುಮಭ್ಯಗಾತ್ ॥ ೪ ॥

ಅಜಾನನ್ ಸಿಹ್ಮರೂಪೇಣ ತಿಷ್ಠಂತಂ ಹರಿಮವ್ಯಯಂ ।
ಉದ್ಯಮ್ಯೋಗ್ರನಖಾನ್ ಪಾದಾನಷ್ಟೌ ಪರ್ವತದಾರಣಾನ್ ॥ ೫ ॥

ಆಯಾಂತಂ ಶರಭಂ ವೀಕ್ಷ್ಯ ಚಕ್ರೇ ತತ್ರಾದ್ಭುತಂ ಹರಿಃ ।
ಸ್ವಯಂ ಚಾಷ್ಟಭುಜೋ ಭೂತ್ವಾ ಗರುಡಸ್ಕಂಧಮಾಸ್ಥಿತಃ ॥ ೬ ॥

ಹಂತುಮಭ್ಯಾಯಯೌ ವೇಗಾದಸುರಾನ್ ಶರಭಾಶ್ರಯಾನ್ ।
ಚಕ್ರಾಬ್ಜಪಾಶಶಾರ್ಙ್ಗೇಷುಗದಾಚರ್ಮಾಸ್ಯಲಂಕೃತೈಃ ॥ ೭ ॥

ಬಾಹುಭಿರ್ಬದ್ಧಕೇಯೂರೈರಷ್ಟಭಿಃ ಪರಿಘೋಪಮೈಃ ।
ಸಂಯುಕ್ತಃ ಶುಶುಭೇ ಶ್ರೀಮಾನ್ ಭುಜಂಗೈಃ ಪರ್ವತೋ ಯಥಾ ॥

---

೪. ಮೃಗರಾಜನಾದ ಸಿಹ್ಮಕ್ಕೆ ಅರಿಯಾದ ಶರಭಮೃಗವು ತನ್ನ ರೆಕ್ಕೆಗಳನ್ನು ಬಿಡಿಸಿ ಭಯಪಡಿಸುತ್ತ ಅಸುರರಿಗೆ ಹಿತವನ್ನು ಉಂಟುಮಾಡಲೋಸ್ಕರ ನೃಸಿಹ್ಮನನ್ನು ಸಂಹರಿಸಲು ಎದುರುಬಂದಿತು.

೫. ಆದರೆ ನಾಶವಿಲ್ಲದ ಹರಿಯು ಸಿಹ್ಮರೂಪದಿಂದ ಇರುವುದನ್ನು ಶರಭವು ತಿಳಿಯದೆ ತನ್ನ ಉಗ್ರವಾದ ನಖಗಳಿಂದ ಕೂಡಿದ, ಪರ್ವತಗಳನ್ನು ಕೂಡ ಭೇದಿಸುವಷ್ಟು ಶಕ್ತಿಯುಳ್ಳ ಎಂಟು ಕಾಲುಗಳನ್ನು ಎತ್ತಿ ಓಡಿಬಂದಿತು.

೬. ವಿಷ್ಣುಪರಮಾತ್ಮನು ಈ ರೀತಿಯಾಗಿ ಬರುತ್ತಲಿದ್ದ ಶರಭವನ್ನು ಕಂಡು ತಾನೂ ಎಂಟು ಭುಜಗಳನ್ನು ಧರಿಸಿ ಗರುಡನ ಸ್ಕಂಧವನ್ನು ಏರಿಕೊಂಡು ಎದುರಿಗೆ ಆವಿರ್ಭವಿಸಿ ಎಲ್ಲರಿಗೂ ಒಂದು ಆಶ್ಚರ್ಯವನ್ನು ಸಂದರ್ಶಿಸಿದನು.

೭. ಗರುಡವಾಹನನಾದ ವಿಷ್ಣುವು ಶರಭಮೃಗದ ಆಶ್ರಯದಲ್ಲಿದ್ದ ಅಸುರರನ್ನು ಸಂಹರಿಸಲು ವೇಗದಿಂದ ಬಂದನು. ಮತ್ತು ತಾನು ಚಕ್ರ, ಪದ್ಮ, ಪಾಶ, ಶಾರ್ಙ್ಗಚಾಪ, ಬಾಣ, ಗದಾ, ಚರ್ಮ ಮತ್ತು ಕತ್ತಿಗಳನ್ನು ಅಷ್ಟಭುಜಗಳಿಂದ ಧರಿಸಿದ್ದನು.

೮. ಪರಿಘ (ಅಗಣಿ) ಸಮಾನವಾದ ಮತ್ತು ಭುಜಕೀರ್ತಿಗಳಿಂದ ಅಲಂಕರಿಸಲ್ಪಟ್ಟ ತನ್ನ ಎಂಟು ಬಾಹುಗಳಿಂದ ಕೂಡಿದ ಹರಿಯು ಸರ್ಪಗಳಿಂದ ಶೋಭಿತವಾದ ಪರ್ವತದಂತೆ ಪ್ರಕಾಶಿಸಿದನು.

ಕೌಸ್ತುಭಾಖ್ಯೇನ ದಿವ್ಯೇನ ಮಣಿನೋರಸಿ ರಾಜತಾ ।
ಕಿರೀಟೇನಾರ್ಕವರ್ಣೇನ ವಿರರಾಜ ಸ್ವಲಂಕೃತಃ ॥ ೯ ॥

ಯಥಾ ಮೇರುಃ ಸ್ವಶೃಂಗೇಣ ಬಾಲಾರ್ಕಾತಪರಂಜಿತಃ ।
ವಿಸಸರ್ಜ ಶರಾನ್ ಘೋರಾನ್ ಶಾರ್ಙ್ಗಮುದ್ಯಮ್ಯ ಲೀಲಯಾ ॥ ೧೦ ॥

ತಂ ದೃಷ್ಟ್ವಾ ದಾನವಾಃ ಸರ್ವೇ ವಿಷ್ಣುಮುದ್ಯತಮಾಹವೇ ।
ಅರ್ದಿತಾಸ್ತಸ್ಯ ಬಾಣೌಘೈಃ ಪುನಸ್ತೇ ದುದ್ರುವುರ್ಭಯಾತ್ ॥ ೧೧ ॥

ಶರಭೋಽಷ್ಟಭುಜಂ ದೃಷ್ಟ್ವಾ ವಿಷ್ಣುಂ ಸರ್ವಾಯುಧೋದ್ಯತಂ ।
ಭೀತಃ ಪ್ರಣಮ್ಯ ದೇವೇಶಂ ಭಕ್ತ್ಯಾ ತಂ ಶರಣಂ ಯಯೌ ॥ ೧೨ ॥

---

೯. ಮತ್ತು ತನ್ನ ಹೃದಯದಲ್ಲಿ ಪ್ರಕಾಶಿಸುವ ಕೌಸ್ತುಭವೆಂಬ ಹೆಸರುಳ್ಳ ದಿವ್ಯವಾದ ಮಣಿಯಿಂದಲೂ ಸೂರ್ಯನಂತೆ ಹೊಳೆಯುತ್ತಿರುವ ಕಿರೀಟದಿಂದಲೂ ಶೋಭಿಸಲ್ಪಟ್ಟವನಾಗಿ ಪ್ರಕಾಶಿಸಿದನು.

೧೦. ಹೀಗೆ ಕೌಸ್ತುಭಮಣಿಯಿಂದೊಂದು ಕಡೆಯೂ ಕಿರೀಟದಿಂದ ಮತ್ತೊಂದು ಕಡೆಯೂ ಪ್ರಕಾಶಿಸುವುದರಿಂದ ಬಾಲಸೂರ್ಯನ ಬಿಸಿಲಿನಿಂದಲೂ ತನ್ನ ಸುವರ್ಣಶಿಖರದಿಂದಲೂ ರಂಜಿತವಾದ ಮೇರುಪರ್ವತದಂತೆ ಶೋಭಿಸುತ್ತಿದ್ದನು. ಇಂತಹ ಹರಿಯು ತನ್ನ ಶಾರ್ಙ್ಗವೆಂಬ ಬಿಲ್ಲನ್ನು ಲೀಲೆಯಿಂದ ಎತ್ತಿ ಘೋರವಾದ ಬಾಣಗಳನ್ನು ಬಿಟ್ಟನು.

೧೧. ಯುದ್ಧರಂಗದಲ್ಲಿ ದಾನವರೆಲ್ಲರೂ ವಿಷ್ಣುವು ತಮ್ಮೊಡನೆ ಯುದ್ಧಕ್ಕೆ ಸಿದ್ಧನಾದುದನ್ನು ನೋಡಿ ಮತ್ತು ವಿಷ್ಣುವಿನ ಬಾಣ ಪಂಕ್ತಿಗಳಿಂದ ಪೀಡಿಸಲ್ಪಟ್ಟವರಾಗಿ ಭೀತಿಯಿಂದ ಮತ್ತೆ ಓಡಿಹೋದರು.

೧೨. ಶರಭಮೃಗವು ಎಂಟು ಭುಜಗಳಿಂದ ಸಕಲಾಯುಧಗಳನ್ನು ಧರಿಸಿರುವ ವಿಷ್ಣುವನ್ನು ನೋಡಿ ಭಯಪಟ್ಟು ಆ ದೇವದೇವನಾದ ವಿಷ್ಣುವನ್ನು ಭಕ್ತಿಯಿಂದ ನಮಸ್ಕರಿಸಿ ಶರಣಹೊಂದಿತು.

ತತಃ ಪ್ರಣತಮಾಲೋಕ್ಯ ಶಂಕರಂ ಶರಭಾಕೃತಿಂ ।
ಉವಾಚಾಷ್ಟಭುಜೋ ವಿಷ್ಣುರಿದಂ ವಚನಮರ್ಥವತ್ ॥ ೧೩ ॥

ತ್ವಯಾತ್ರ ಯಜ್ಞಶಾಲಾಯಾಂ ರಕ್ಷಾರ್ಥಂ ಸ್ಥೀಯತಾಮಿತಿ ।
ತಸ್ಯಾಜ್ಞಾಂ ಶಿರಸಾ ಧೃತ್ವಾ ಶಂಕರೋಽಪ್ಯತಿಹೃಷ್ಟಧೀಃ ॥ ೧೪ ॥

ತತ್ರೈವ ಯಜ್ಞಶಾಲಾಯಾಂ ರಕ್ಷನ್ ಪೈತಾಮಹಂ ಮಖಂ ।
ಹಸ್ತಿಶೈಲಸ್ಯ ಪಶ್ಚಾದ್ವೈ ವಾಯವ್ಯಂ ದೇಶಮಾಸ್ಥಿತಃ ॥ ೧೫ ॥

ಶರಭೇಶ ಇತಿ ಖ್ಯಾತಃ ಸರ್ವಪಾಪಹರೋ ಹರಃ ।
ವಿಷ್ಣುರಷ್ಟಭುಜೋಽಪ್ಯಾಸೀದ್ಧಸ್ತಿಶೈಲಸ್ಯ ಪಶ್ಚಿಮೇ ॥ ೧೬ ॥

ದೀಪಾಕಾರಸ್ಯ ಚಾಗ್ನೇಯೇ ಪ್ರದೇಶೇಽದ್ಭುತದರ್ಶನಃ ।
ಕೇನ ಚಿತ್ತ್ವಥ ಕಾಲೇನ ವಿಪ್ರಃ ಕಶ್ಚಿನ್ಮಹಾತಪಾಃ ॥ ೧೭ ॥

---

೧೩. ತರುವಾಯ ಶರಭಾಕಾರದಿಂದ ಶಂಕರನು ಬಂದು ನಮಸ್ಕರಿಸಿರುವುದನ್ನು ನೋಡಿ ಅಷ್ಟಭುಜಗಳಿಂದ ಕೂಡಿದ ವಿಷ್ಣುವು ಅರ್ಥಗರ್ಭಿತವಾದ ಈವಚನವನ್ನು ಆಡಿದನು.

೧೪. ನೀನು ಈ ಯಜ್ಞಶಾಲೆಯಲ್ಲಿ ಸರ್ವರನ್ನು ರಕ್ಷಿಸಲೋಸ್ಕರ ವಾಸಮಾಡು, ಎಂದು ಹರಿಯು ಆಜ್ಞೆಮಾಡಲು ಶಂಕರನು ಆಜ್ಞೆಯನ್ನು ಶಿರಸ್ಸಿನಿಂದ ಧರಿಸಿ ಅತ್ಯಂತ ಸಂತುಷ್ಟಚಿತ್ತನಾದನು.

೧೫. ಮತ್ತು ಅಲ್ಲಿಯೇ ಯಜ್ಞಶಾಲೆಯಲ್ಲಿ ಬ್ರಹ್ಮದೇವನ ಯಜ್ಞವನ್ನು ರಕ್ಷಿಸುತ್ತ ಆ ಹಸ್ತಿಶೈಲದ ಪಶ್ಚಿಮದಲ್ಲಿ ವಾಯುವ್ಯದಿಕ್ಕನ್ನು ಆಶ್ರಯಿಸಿ ನಿಂತನು.

೧೬. ಆ ಶಿವನ ಮೂರ್ತಿಯು ಶರಭೇಶನೆಂಬ ಹೆಸರಿನಿಂದ ಪ್ರಸಿದ್ಧಿಹೊಂದಿ ಭಕ್ತರ ಪಾಪಗಳನ್ನು ನಿವಾರಣೆಮಾಡುತ್ತಿರುವನು. ಹಾಗೆಯೇ ಹಸ್ತಿಶೈಲದ ಪಶ್ಚಿಮದಿಕ್ಕಿನಲ್ಲಿ ಅಷ್ಟಭುಜಗಳಿಂದ ಕೂಡಿದ ವಿಷ್ಣುವೂ ವಾಸಮಾಡಿದನು.

೧೭-೧೮. ಅಷ್ಟಭುಜನಾದ ವಿಷ್ಣುವು ಹಿಂದೆ ಹೇಳಿದ ದೀಪಪ್ರಕಾಶಮೂರ್ತಿಯ ಆಗ್ನೇಯ ದಿಕ್ಕಿನಲ್ಲಿ ಅದ್ಭುತವಾದ ದರ್ಶನವುಳ್ಳವನಾಗಿದ್ದನು. ಕೆಲವು ಕಾಲಾನಂತರದಲ್ಲಿ ಒಬ್ಬ ಮಹಾ ತಪಸ್ವಿಯಾದ ಬ್ರಾಹ್ಮಣನು ಆನೆಯ ಜನ್ಮವನ್ನು

ಆಪನ್ನಃ ಕೌಂಜರೀಂ ಯೋನಿಮಟಮಾನೋ ವನಾದ್ವನಂ ।
ತತ್ರಾಭ್ಯೇತ್ಯಾರ್ಚಯದ್ವಿಷ್ಣುಮಷ್ಟಬಾಹುಂ ಸರೋರುಹೈಃ ॥ ೧೮ ॥

ತತಃ ಕದಾಚಿತ್ಕಮಲಮಾಹರ್ತುಮುದಕಸ್ಥಿತಂ ।
ತಮಭ್ಯೇತ್ಯಾಗ್ರಹೀತ್ಪಾದೇ ಗ್ರಾಹಃ ಕಶ್ಚಿಜ್ಜಲೇಚರಃ ॥ ೧೯ ॥

ಸ ಪೀಡ್ಯಮಾನೋ ಬಲಿನಾ ಮಕರೇಣ ಗಜೋತ್ತಮಃ ।
ಪ್ರಪೇದೇ ಶರಣಂ ದೇವಂ ತತ್ರೈವಾಷ್ಟಭುಜಂ ಹರಿಂ ॥ ೨೦ ॥

ಜ್ಞಾತ್ವಾ ತು ಮಕರಗ್ರಸ್ತಂ ಭಕ್ತಾನಾಮಾರ್ತಿಹಾ ಹರಿಃ ।
ಅಭ್ಯರಕ್ಷದ್ಗಜೇಂದ್ರಂ ತಂ ಹತ್ವಾ ಮಕರಮಂಜಸಾ ॥ ೨೧ ॥

ಗಜೇಂದ್ರೋಽಪಿ ಹರಿಂ ತತ್ರ ಕಂಚಿತ್ಕಾಲಂ ಪ್ರಪೂಜಯನ್ ।
ಕೃಪಯಾ ದೇವದೇವಸ್ಯ ಪ್ರಪೇದೇ ಪರಮಾಂ ಗತಿಂ ॥ ೨೨ ॥

ಹೊಂದಿದವನಾಗಿ ವನದಿಂದ ವನಕ್ಕೆ ತಿರುಗುತ್ತ ಅಷ್ಟಭುಜದೇವನ ಸನ್ನಿಧಿಗೆ ಬಂದು ಕಮಲಪುಷ್ಪಗಳಿಂದ ವಿಷ್ಣುವನ್ನು ಅರ್ಚಿಸಿದನು.

೧೯. ಒಂದಾನೊಂದು ದಿವಸದಲ್ಲಿ ಕಮಲವನ್ನು ಕಿತ್ತುಕೊಂಡು ಬರಲು ನೀರಿನೊಳಗೆ ಆ ಆನೆಯು ನಿಂತಿರುವ ಸಮಯದಲ್ಲಿ ಅಲ್ಲಿ ಜಲಚಾರಿಯಾಗಿದ್ದ ಒಂದು ಮೊಸಳೆಯು ಬಂದು ಆನೆಯ ಕಾಲನ್ನು ಹಿಡಿಯಿತು.

೨೦. ಬಲಿಷ್ಠವಾದ ಮೊಸಳೆಯಿಂದ ಸೆಳೆಯಲ್ಪಡುತ್ತಿದ್ದ ಆನೆಯು ಬಹಳ ಪೀಡೆಯನ್ನು ಅನುಭವಿಸಿ ಅಲ್ಲಿಂಪಲೇ ಅಷ್ಟಭುಜನಾದ ವಿಷ್ಣುಪರಮಾತ್ಮನನ್ನು ಶರಣಹೊಂದಿತು.

೨೧. ಭಕ್ತರ ಪೀಡೆಯನ್ನು ಪರಿಹರಿಸುವ ಹರಿಯು ಭಕ್ತನಾದ ಗಜೇಂದ್ರವು ಮೊಸಳೆಯ ಪೀಡೆಗೆ ಸಿಕ್ಕಿರುವುದನ್ನು ತಿಳಿದು ಕೂಡಲೇ ಮೊಸಳೆಯನ್ನು ಕೊಂದು ಆ ಗಜೇಂದ್ರನನ್ನು ಸಂರಕ್ಷಿಸಿದನು.

೨೨. ಗಜೇಂದ್ರನೂ ಕೂಡ ಅಲ್ಲಿಯೇ ಕೆಲವು ಕಾಲ ವಿಷ್ಣುವನ್ನು ಪೂಜೆ ಮಾಡುತ್ತಲಿದ್ದು ದೇವೋತ್ತಮನಾದ ವಿಷ್ಣುವಿನ ಕರುಣೆಯಿಂದ ಮೋಕ್ಷವನ್ನು ಹೊಂದಿತು.

ಇತ್ಥಂ ಪುರಾ ವಿಷ್ಣುರನಂತವೀರ್ಯ-
ಸ್ತತ್ರಾಷ್ಟಪಾದಂ ಶರಭಂ ನಿರೋದ್ಧುಂ ।
ದರಾರಿಚರ್ಮಾಸಿ ಗದೇಷು ಚಾಪ
ಪಾಶಾ್ ದಧಾನೋಽಷ್ಟಭುಜೋ ಬಭೂವ ॥ ೨೩ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ತ್ರಯೋದಶೋಽಧ್ಯಾಯಃ

---

೨೩. ಹೀಗೆ ಅನಂತ ವೀರ್ಯಗಳಿಂದ ಕೂಡಿದ ವಿಷ್ಣುವು ಪೂರ್ವ ಕಾಲದಲ್ಲಿ ಅಷ್ಟಪಾದಗಳಿಂದ ಕೂಡಿದ ಶರಭವನ್ನು ತಡೆಯಲು ಶಂಖ, ಚಕ್ರ, ಚರ್ಮ, ಕತ್ತಿ, ಗದೆ, ಬಾಣ, ಬಿಲ್ಲು ಮತ್ತು ಪಾಶಗಳನ್ನು ಧರಿಸಿರುವ ಅಷ್ಟಭುಜಗಳಿಂದ ಕೂಡಿದ ಮೂರ್ತಿಯನ್ನು ಧರಿಸಿದನು.

ಕಾಂಚೀಮಾಹಾತ್ಮ್ಯದಲ್ಲಿ ತ್ರಯೋದಶಾಧ್ಯಾಯವು ಮುಗಿದುದು.

॥ ಶ್ರೀಃ ॥

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಚತುರ್ದಶೋಽಧ್ಯಾಯಃ

ನಾರದ ಉವಾಚ :—

ತತೋ ದೇವರ್ಷಿಗಂಧರ್ವಾಃ ಸೇಂದ್ರಾಃ ಸರ್ವೇ ಸಭಾಸದಃ ।
ಸಂಪ್ರಹೃಷ್ಟಾ ಬಭೂವುಸ್ತೇ ವಿದ್ರುತಾನ್ ವೀಕ್ಷ್ಯ ಚಾಸುರಾನ್ ॥ ೧ ॥

ಶರಭಂ ಚಾಪಿ ಸಂಶಾಂತಂ ಯಜ್ಞರಕ್ಷಣತತ್ಪರಂ ।
ದೇವಂ ದೀಪಪ್ರಕಾಶಂ ಚ ತಥೈವಾಷ್ಟಭುಜಂ ಹರಿಂ ॥ ೨ ॥

ದೃಷ್ಟ್ವಾ ಪ್ರಮುದಿತಾಃ ಸರ್ವೇ ಯಜ್ಞಕರ್ಮಾರಭಂತ ವೈ ।
ಬ್ರಹ್ಮಾಪಿ ಸಹ ತೈರ್ವಿಪ್ರೈರ್ದೇವೇನ ಕೃತಮದ್ಭುತಂ ॥ ೩ ॥

---

೧. ನಾರದನು ಇಂತೆಂದನು :—ಅನಂತರದಲ್ಲಿ ದೇವ, ಋಷಿ, ಗಂಧರ್ವ, ಇಂದ್ರ ಮುಂತಾದವರಿಂದ ಕೂಡಿದ ಆ ಸಭಿಕರೆಲ್ಲರೂ ಅಸುರರು ಪಲಾಯನವಾಡಿದ್ದನ್ನು ಕಂಡು ಸಂತೋಷಭರಿತರಾದರು.

೨. ಶರಭಮೃಗವು ತಾನು ಮಾಡುವ ಉಪದ್ರವವನ್ನು ಬಿಟ್ಟು ಶಾಂತವಾಗಿ ಯಜ್ಞವನ್ನು ರಕ್ಷಣಮಾಡುವುದರಲ್ಲಿ ನಿರತವಾದುದನ್ನೂ ದೀಪಪ್ರಕಾಶನೆಂಬ ವಿಷ್ಣುವಿನ ಮೂರ್ತಿಯನ್ನೂ ಮತ್ತು ಅಷ್ಟಭುಜಗಳಿಂದ ಕೂಡಿದ ವಿಷ್ಣುವಿಗ್ರಹವನ್ನೂ ನೋಡಿ ಸಂತೋಷಪಟ್ಟರು.

೩. ಈರೀತಿಯಾಗಿ ವಿಷ್ಣುವಿನ ಅವತಾರವನ್ನೂ ಲೀಲೆಯನ್ನೂ ನೋಡಿ ಸರ್ವರೂ ಸಂತೋಷಪಟ್ಟು ಮತ್ತೆ ಯಜ್ಞಕರ್ಮಾನುಷ್ಠಾನವನ್ನು ಪ್ರಾರಂಭಮಾಡಿದರು. ಬ್ರಹ್ಮದೇವನು ಆ ವಿಪ್ರರ ಸಂಗಡ ಹರಿಯು ತೋರಿಸಿರುವ ಅದ್ಭುತವನ್ನು ನೋಡಿ ಆಶ್ಚರ್ಯಪಟ್ಟನು.

ದೃಷ್ಟ್ವಾ ಸಂತುಷ್ಟಹೃದಯಃ ಪುನರ್ಯಷ್ಟುಮುಪಾರಭತ್ ।
ಅಸುರಾ ವಿದ್ರುತಾಃ ಸರ್ವೇ ಸರ್ವತಃ ಶರವಿಕ್ಷತಾಃ ॥ ೪ ॥

ಮಂತ್ರಯಂತಿ ಪುನರ್ಮಂತ್ರಂ ಗತ್ವಾ ವಿಂಧ್ಯಾದ್ರಿಕಂದರಂ ।
ಕಥಂ ವಯಂ ವಿಜೇಷ್ಯಾಮೋ ದೇವಾನಿಂದ್ರಪುರೋಗಮಾನ್ ॥ ೫ ॥

ತೇ ವೈ ವಿಷ್ಣುಮುಪಾಶ್ರಿತ್ಯ ಸರ್ವಾನ್ ವಿದ್ರಾವಯಂತಿ ನಃ ।
ವಿಷ್ಣುರೇವೇಜ್ಯತೇ ತತ್ರ ಬ್ರಹ್ಮಣಾ ಪರಮೇಷ್ಠಿನಾ ॥ ೬ ॥

ಯಃ ಪುರಾ ವಂಚಯಿತ್ವಾಸ್ಮಾನ್ ದೇವೇಭ್ಯೋ ಹ್ಯಮೃತಂ ದದೌ ।
ವಂಚಕಃ ಪಿಶುನೋ ಮೂರ್ಖಃ ಸ ವಿಷ್ಣುರ್ಹಿ ಸುರಾಶ್ರಯಃ ॥ ೭ ॥

ತಸ್ಯೈವ ಬಲಮಾಶ್ರಿತ್ಯ ಹಂತುಮಿಚ್ಛಂತಿ ನಃ ಸುರಾಃ
ತಸ್ಮಾನ್ನ ಯೋದ್ಧುಂ ಕಾಲೋಽಯಮಸ್ಮಾಕಂ ತ್ರಿದಶೈಃ ಸಹ ॥ ೮ ॥

---

೪. ಮತ್ತು ಅದನ್ನು ಸಂತೋಷಪಟ್ಟ ಹೃದಯವುಳ್ಳವನಾಗಿ ಮತ್ತೆ ಯಾಗ ಮಾಡಲು ಆರಂಭಿಸಿದನು. ಅಸುರರು ಬಾಣಗಳಿಂದ ಶರೀರದಲ್ಲಿ ಹೆಚ್ಚಾದ ಗಾಯವುಳ್ಳವರಾಗಿ ಎಲ್ಲರೂ ಓಡಿಹೋದರು.

೫. ವಿಂಧ್ಯಪರ್ವತದ ಗವಿಯುವರೆಗೆ ಓಡಿಹೋಗಿ ಅಲ್ಲಿ ಮತ್ತೆ ಸೇರಿ ಮಂತ್ರಾಲೋಚನೆಯನ್ನು ಮಾಡಿದರು. ಇಂದ್ರನೇ ಮುಂತಾದ ದೇವತೆಗಳನ್ನು ನಾವು ಯಾವ ಉಪಾಯದಿಂದ ಜಯಿಸೋಣ?

೬. ಆ ದೇವತೆಗಳು ವಿಷ್ಣುಪರಮಾತ್ಮನನ್ನು ಆಶ್ರಯಿಸಿ ನಮ್ಮೆಲ್ಲರನ್ನೂ ಓಡಿಸುವರು. ಪರಮಪದದಲ್ಲಿರುವ ಬ್ರಹ್ಮದೇವನು ವಿಷ್ಣುವನ್ನೇ ಪೂಜಿಸುವನು.

೭. ಯಾವ ವಿಷ್ಣುವು ಪೂರ್ವಕಾಲದಲ್ಲಿ ಅಸುರರಾದ ನಮ್ಮನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನು ಹಂಚಿರುವನೋ ಅಂತಹ ವಿಷ್ಣುವು ವಂಚಕನು ಮತ್ತು ಪಿಶುನನು. ಅವನೇ ದೇವತೆಗಳಿಗೆ ಆಶ್ರಯದಾತೃವಾಗಿರುವನು.

೮. ಆ ವಿಷ್ಣುವಿನ ಬೆಂಬಲವನ್ನು ಆಶ್ರಯಿಸಿ ದೇವತೆಗಳು ನಮ್ಮನ್ನು ಸಂಹಾರಮಾಡಲು ಉತ್ಸಾಹವಂತರಾಗಿರುವರು. ಆದುದರಿಂದ ದೇವತೆಗಳ ಸಂಗಡ ಯುದ್ಧಮಾಡಲು ನಮಗೆ ಈ ಕಾಲವು ಯೋಗ್ಯವಲ್ಲವು.

ಕೇನೋಪಾಯೇನ ವಿಬುಧಾನ್ ಯುದ್ಧಾದನ್ಯೇನ ಸಾಂಪ್ರತಂ ।
ವಿಜೇಷ್ಯಾಮೋ ವಯಂ ಸರ್ವಾನ್ ಸ ಉಪಾಯೋ ವಿಚಿಂತ್ಯತಾಂ ॥ ೯ ॥

ಇಂತಿ ಮಂತ್ರಯತಾಂ ತೇಷಾಂ ಶ್ರುತ್ವಾ ವಚನಮರ್ಥವತ್ ।
ಕಾಲಜ್ಞಃ ಸಮ್ಯಗಾಲೋಚ್ಯ ಕಾಲನೇಮಿರ್ವಚೋಽಬ್ರವೀತ್ ॥ ೧೦ ॥

ಅದ್ಯ ಸರ್ವಾನ್ ಸುರಾನ್ ಹಂತುಮುಪಾಯಶ್ಚಿಂತಿತೋ ಮಯಾ ।
ಯೇನ ಭಗ್ನಾ ಭವಿಷ್ಯಂತಿ ಸರ್ವೇ ತೇ ದಾನವಾರಯಃ ॥ ೧೧ ॥

ತಮುಪಾಯಮಹಂ ವಕ್ಷ್ಯೇ ಶೃಣುಧ್ವಂ ದಾನವೋತ್ತಮಾಃ ।
ಆತ್ಮಪತ್ನ್ಯಾ ಸರಸ್ವತ್ಯಾ ವಿರುದ್ಧಃ ಕಮಲಾಸನಃ ॥ ೧೨ ॥

ತಯಾ ವಿನೈವಾಶ್ವಮೇಧಂ ಕುರುತೇ ಹ್ಯನ್ಯಯಾ ಸಹ ।
ಕೇನ ಚಿತ್ಕಾರಣೇನೈಷಾ ಕೋಪಿತಾ ಬ್ರಹ್ಮಣಾ ಪುರಾ ॥ ೧೩ ॥

---

೯. ಆದರೆ ಈಗ ಯುದ್ಧದ ವಿನಹ ಯಾವ ಉಪಾಯದಿಂದ ಸಕಲ ದೇವತೆಗಳನ್ನು ನಾವು ಗೆಲ್ಲಬಹುದೋ ಅಂತಹ ಒಂದು ಉಪಾಯವನ್ನು ಚಿಂತಿಸೋಣ.

೧೦. ಎಂದು ಮೊದಲಾಗಿ ಅಸುರರು ಯೋಚಿಸುತ್ತಿರಲು ಹಿಂದಿನ ಅರ್ಥಗರ್ಭಿತವಾದ ವಚನವನ್ನು ಕೇಳಿ ಕಾಲವನ್ನು ಅರಿತಿರುವ ಕಾಲನೇಮಿಯೆಂಬ ಅಸುರನು ಚನ್ನಾಗಿ ಯೋಚಿಸಿ ಈ ಮಾತನ್ನಾಡಿದನು.

೧೧. ಸಮಸ್ತ ದೇವತೆಗಳನ್ನು ಸಂಹರಿಸಲು ನಾನೊಂದು ಉಪಾಯವನ್ನು ಈಗ ಯೋಚಿಸಿರುವೆನು. ಆ ಉಪಾಯದಿಂದ ಸಕಲ ರಾಕ್ಷಸ ಶತ್ರುಗಳಾದ ದೇವತೆಗಳು ಭಗ್ನರಾಗುವರು.

೧೨. ದಾನವೋತ್ತಮರೆ! ಆ ಉಪಾಯವನ್ನು ಈಗ ನಾನು ಹೇಳುತ್ತೇನೆ, ಕೇಳಿರಿ. ಪದ್ಮವೇ ಆಸನವಾಗಿರುವ ಬ್ರಹ್ಮನು ತನ್ನ ಪತ್ನಿಯಾದ ಸರಸ್ವತಿಯೊಡನೆ ವಿರೋಧವನ್ನು ಆಚರಿಸಿರುವನು.

೧೩. ಆ ಸರಸ್ವತೀದೇವಿಯನ್ನು ಬಿಟ್ಟು ಇನ್ನೊಬ್ಬಳ ಸಂಗಡ ಸೇರಿ ಅಶ್ವಮೇಧಯಾಗವನ್ನು ಆಚರಿಸುತ್ತಿರುವನು. ಹಿಂದೆ ಯಾವುದೋ ಒಂದು ಕಾರಣದಿಂದ ಈ ಸರಸ್ವತಿದೇವಿಯು ಕುಪಿತಳಾಗಿರುವಳು.

ಗತಾ ಬ್ರಹ್ಮಾಣಮುತ್ಸೃಜ್ಯ ನದೀರೂಪಾತ್ರ ವಿದ್ಯತೇ ।
ತಯಾ ಕಾರಯಿತವ್ಯೋಽದ್ಯ ವಧಃ ಸರ್ವದಿವೌಕಸಾಂ ॥ ೧೪ ॥

ಯನ್ಮಯಾ ವ್ಯಾಹೃತಂ ವಾಕ್ಯಂ ಭವತಾಂ ಯದಿ ರೋಚತೇ ।
ಯತ್ನಂ ಕುರುಧ್ವಂ ಸಹಸಾ ವಾಣ್ಯಾಃ ಸಂಬೋಧನೇಽಧುನಾ ॥ ೧೫ ॥

ತೇ ಸರ್ವೇ ತದ್ವಚಃ ಶ್ರುತ್ವಾ ತತ್ತಥೇತ್ಯಭಿನಂದ್ಯ ತಂ ।
ಕ್ಷಿಪ್ರಂ ಪ್ರಜಗ್ಮುಸ್ತಾಂ ದೇವೀಂ ಭೂತ್ವಾ ವೈ ವಿಪ್ರರೂಪಿಣಃ ॥ ೧೬ ॥

ಗಂಗಾಯಮುನಯೋಃ ಸಂಗೇ ವಾಯವ್ಯೇ ತಾಂ ಸರಸ್ವತೀಂ ।
ನದೀರೂಪಾಂ ತದಾ ದೃಷ್ಟ್ವಾ ತುಷ್ಟುವುರ್ವಿವಿಧೈಃ ಸ್ತವೈಃ ॥ ೧೭ ॥

ನಮಸ್ತೇ ದೇವಿ ಕಲ್ಯಾಣಿ ನಮಸ್ತೇ ಕರುಣಾಕರೇ ।
ನಮಸ್ತೇ ತ್ರಿಜಗದ್ವಂದ್ಯೇ ಪ್ರಸನ್ನಾ ಭವ ನಃ ಶುಭೇ ॥ ೧೮ ॥

---

೧೪. ಅವಳು ಈಗ ಬ್ರಹ್ಮನನ್ನು ಬಿಟ್ಟು ಇಲ್ಲಿ ನದೀರೂಪಳಾಗಿರುವಳು. ಅವಳಿಂದ ಸಮಸ್ತ ದೇವತೆಗಳ ಸಂಹಾರವನ್ನು ಈಗ ಮಾಡಿಸಬೇಕು.

೧೫. ಈಗ ನಾನು ಹೇಳಿರುವ ವಚನವು ನಿಮ್ಮೆಲ್ಲರಿಗೂ ಯುಕ್ತವಾದುದೆಂದು ರುಚಿಸುವುದಾದರೆ ಶೀಘ್ರವಾಗಿ ಈಗ ಸರಸ್ವತಿಗೆ ಆ ರೀತಿಯಾಗಿ ಬೋಧಿಸಲು ಯತ್ನವನ್ನು ಮಾಡಿರಿ.

೧೬. ಆ ಅಸುರರೆಲ್ಲರೂ ಈ ಮಾತನ್ನು ಕೇಳಿ ಹಾಗೆ ಆಗಲೆಂದು ಸಂತೋಷದಿಂದ ಸಮ್ಮತಿಸಿ ಮಾರ್ಗದರ್ಶಿಯಾದ ಕಾಲನೇಮಿಯನ್ನು ಅಭಿನಂದಿಸಿ ವಿಪ್ರರೂಪವನ್ನು ಧರಿಸಿ ಆ ಸರಸ್ವತೀದೇವಿಯ ಬಳಿಗೆ ಬೇಗ ಹೋದರು.

೧೭. ಗಂಗಾನದೀ ಮತ್ತು ಯಮುನಾನದಿಗಳು ಸಂಗಮವಾಗುವ ಪ್ರದೇಶಕ್ಕೆ ವಾಯವ್ಯದಲ್ಲಿರುವ ಸ್ಥಳದಲ್ಲಿ ನದೀರೂಪದಿಂದ ಹರಿಯುತ್ತಿದ್ದ ಸರಸ್ವತಿಯನ್ನು ಕಂಡು ಆಗ ನಾನಾವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು.

೧೮. ಮಂಗಳಶೀಲಳಾದ ದೇವಿಯೆ! ನಿನಗೆ ನಮಸ್ಕಾರವು, ದಯಾಮೃತಕ್ಕೆ ಗಣಿಯಂತಿರುವ ದೇವಿಯೇ! ನಮಸ್ಕಾರವು, ತ್ರಿಲೋಕಗಳಿಗೆ ವಂದ್ಯಳೆ! ನಿನಗೆ ನಮಸ್ಕಾರವು. ಮಂಗಳಕರಳೆ! ನಮ್ಮಲ್ಲಿ ಪ್ರಸನ್ನಳಾಗು.

ತ್ವಂ ಚಕ್ಷುಃ ಸರ್ವಲೋಕಾನಾಂ ತ್ವಂ ಮತಿರ್ಧೃತಿರೇವ ಚ ।
ತ್ವಂ ವಿದ್ಯಾ ತ್ವಂ ಸ್ಮೃತಿಃ ಶಾಂತಿಸ್ತ್ವಂ ವಾಕ್ ಪ್ರಜ್ಞಾ ಚ ದೇಹಿನಾಂ ॥

ತ್ವಂ ಹವಿಸ್ತ್ವಂ ವಷಟ್ಕಾರಸ್ತ್ವಂ ಸ್ವಾಹಾ ತ್ವಂ ಸ್ವಧಾ ತಥಾ ।
ತ್ವಮೇವ ದೇವಿ ಛಂದಾಂಸಿ ಜ್ಯೋತೀಂಷಿ ಚ ಜಗತ್ರಯೇ ॥ ೨೦ ॥

ಸ್ಥಾವರಂ ಜಂಗಮಂ ಚಾಪಿ ಭೂತಂ ಭವ್ಯಂ ಭವಚ್ಚ ಯತ್ ।
ಸದೇವಾಸುರಗಂಧರ್ವಂ ತ್ವಮೇವ ಸಕಲಂ ಜಗತ್ ॥ ೨೧ ॥

ತ್ವಾಂ ಸ್ತೋತುಂ ನ ಸಮರ್ಥಾಃ ಸ್ಮೋ ವಯಮತ್ಯಲ್ಪಮೇಧಸಃ ।
ತ್ವಮಸ್ಮಾನ್ ಕೃಪಯಾ ಸರ್ವಾನ್ ಕಟಾಕ್ಷೇಣಾವಲೋಕಯ ॥ ೨೨ ॥

---

೧೯. ದೇವಿಯೆ! ಸಮಸ್ತ ಲೋಕಗಳಿಗೆ ನೀನು ಕಣ್ಣಿನಂತೆ ಇರುವವಳು. ನೀನು ಮತಿಯು, ನೀನು ಧೈರ್ಯವು, ನೀನು ವಿದ್ಯೆಯು, ನೀನು ಶಾಂತಿಸ್ವರೂಪಳು, ನೀನು ವಾಕ್‌ಸ್ವರೂಪಳು, ನೀನು ಪ್ರಾಣಿಗಳಿಗೆ ಪ್ರಜ್ಞೆಯು, ಹಾಗೆ ಪ್ರಾಣಿಯನ್ನು ವಿವೇಕಮಾರ್ಗದಲ್ಲಿ ನಡೆಸುವ ಪ್ರಶಸ್ತವಾದ ಬುದ್ಧಿವೃತ್ತಿಗಳು ನಿನ್ನ ಅಂಶವಾದುವು ಗಳು. ಈ ಎಲ್ಲ ಗುಣಗಳಿಗೆ ನೀನು ಆಧಾರಳು.

೨೦. ನೀನು ಹವಿಸ್ಸು, ನೀನು ವಷಟ್ಕಾರವು, ನೀನು ಸ್ವಾಹಾಕಾರವು, ನೀನು ಸ್ವಧಾರೂಪಳು, ಇಲ್ಲಿ ಯಾಗದಲ್ಲಿಯೂ, ಹೋಮದಲ್ಲಿಯೂ ಮತ್ತು ಪಿತೃಯಜ್ಞ ದಲ್ಲಿಯೂ ಆಯಾಯ ದೇವತೆಗೆ ಹವಿಸ್ಸನ್ನು ಅರ್ಪಿಸುವಾಗ ವೌಷಟ್, ಸ್ವಾಹಾ, ಸ್ವಧಾ ಎಂಬ ಶಬ್ದಗಳನ್ನು ಕ್ರಮವಾಗಿ ಉಚ್ಚರಿಸುವುದರಿಂದ ಆ ಹವಿಸ್ಸುಗಳಿಗೆ ಆಯಾ ಯ ಹೆಸರುಗಳು ಬಂದಿವೆ. ನೀನು ವಷಟ್, ಸ್ವಾಹಾ ಮತ್ತು ಸ್ವಧಾ ಎಂಬ ಹವಿಃ ಸ್ವರೂಪಳು. ಮೂರು ಲೋಕಗಳಲ್ಲಿ ಛಂದಸ್ಸುಗಳು ಮತ್ತು ಜ್ಯೋತಿಸ್ಸುಗಳೆಲ್ಲವೂ ನೀನೇ ಆಗಿರುವೆ.

೨೧. ಸ್ಥಾವರವೂ-ಜಂಗಮವೂ, ಭೂತ-ಭಾವಿ-ವರ್ತಮಾನ ವಸ್ತುವೂ, ದೇವ-ಅಸುರ-ಗಂಧರ್ವ ಮುಂತಾದ ಸಕಲ ಪ್ರಪಂಚವೂ ನಿನ್ನ ಸ್ವರೂಪವು.

೨೨. ಅಲ್ಪ ಬುದ್ಧಿಯುಳ್ಳ ನಾವು ನಿನ್ನನ್ನು ಸ್ತುತಿಮಾಡಲು ಸಮರ್ಥರಲ್ಲ ನೀನು ಕರುಣೆಯಿಟ್ಟು ನಮ್ಮೆಲ್ಲರನ್ನೂ ಕಟಾಕ್ಷದಿಂದ ಒಂದು ಸಲ ನೋಡು.

ಇತಿ ಸ್ತುತ್ವಾ ತದಾ ವಾಣೀ ದೈತೇಯೈಃ ಕಾಮರೂಪಿಭಿಃ ।
ಸಾ ಚ ಸದ್ಯಃ ಸ್ತುತಿಪ್ರೀತಾ ತೇಷಾಂ ದೃಷ್ಟಿಪಥಂ ದದೌ ॥ ೨೩ ॥

ಉವಾಚ ಸಮ್ಯಕ್ ತಾನ್ ಜ್ಞಾತ್ವಾ ದೈತೇಯಾನ್ ವಿಪ್ರರೂಪಿಣಃ ।
ಸರಸ್ವತ್ಯುವಾಚ :—
ಪ್ರಸನ್ನಾಹಂ ದ್ವಿಜಶ್ರೇಷ್ಠಾಃ ಸ್ತೋತ್ರೈರ್ಭಕ್ತಿಸಮನ್ವಿತೈಃ ॥ ೨೪ ॥

ವರಂ ವೃಣೀಧ್ವಂ ಭದ್ರಂ ವೋ ಯದರ್ಥಂ ಮಾಮುಪಾಗತಾಃ ।
ಇತ್ಯುಕ್ತಾಸ್ತೇ ಸರಸ್ವತ್ಯಾ ಪ್ರೋಚುಃ ಪ್ರಾಂಜಲಯೋಽಸುರಾಃ ॥ ೨೫ ॥

ತ್ವದ್ಭಕ್ತಾ ಹಿ ವಯಂ ದೇವಿ ತ್ವಾಮದೃಷ್ಟ್ವಾ ಸುದುಃಖಿತಾಃ ।
ಅದೃಶ್ಯಾ ತ್ವಂ ಕ್ವ ವಾ ಯಾತೇತ್ಯನುಚಿಂತ್ಯ ಮುಹುರ್ಮುಹುಃ ॥ ೨೬ ॥

---

೨೩. ಆಗ ಕಾಮರೂಪವುಳ್ಳ ಆ ದಾನವರಿಂದ ಸರಸ್ವತಿಯು ಅನೇಕ ವಿಧವಾಗಿ ಸ್ತುತಿಸಲ್ಪಡಲು ಸ್ತುತಿಯಿಂದ ತತ್‌ಕ್ಷಣದಲ್ಲಿ ಪ್ರೀತಳಾದ ಸರಸ್ವತಿಯು ಅವರಿಗೆ ಪ್ರತ್ಯಕ್ಷಳಾದಳು.

೨೪. ಮತ್ತು ಸ್ತುತಿಮಾಡಿರುವವರನ್ನು ವಿಪ್ರರೂಪರಾಗಿರುವ ದೈತ್ಯರೆಂಬುವನ್ನು ಚೆನ್ನಾಗಿ ತಿಳಿದು ಈ ವಚನವನ್ನು ಆಡಿದಳು. ಸರಸ್ವತೀದೇವಿಯು ಇಂತೆಂದಳು :—ವಿಪ್ರೋತ್ತಮರೆ! ಭಕ್ತಿಯಿಂದ ಕೂಡಿ ಮಾಡಿದ ನಿಮ್ಮ ಸ್ತೋತ್ರದಿಂದ ನಾನ ನಿಮಗೆ ಪ್ರಸನ್ನಳಾಗಿದ್ದೇನೆ.

೨೫. ಸರಸ್ವತೀದೇವಿಯು ಆ ಅಸುರರಿಗೆ ಪ್ರತ್ಯಕ್ಷಳಾಗಿ ಅಸುರರೆ! ನಿಮಗೆ ಕಲ್ಯಾಣವಾಗಲಿ. ನೀವು ಏತಕ್ಕೋಸ್ಕರ ನನ್ನ ಸಮೀಪಕ್ಕೆ ಬಂದಿರುವಿರೋ, ಆ ಇಷ್ಟಾರ್ಥದ ವರವನ್ನು ಕೇಳಿರಿ, ಎಂದು ಹೇಳಲಾಗಿ ಅಸುರರು ಅಂಜಲಿಬದ್ಧರಾಗಿ ಭಕ್ತಿಯಿಂದ ನಿಂತು ಈ ರೀತಿಯಾಗಿ ಹೇಳಿದರು :—

೨೬. ದೇವಿಯೆ! ನಾವು ನಿನ್ನ ಭಕ್ತರು. ನಿನ್ನನ್ನು ಕಾಣದೇ ತುಂಬಾ ದುಃಖಿತರಾದೆವು. ಮತ್ತು ನೀನು ಅದೃಶ್ಯಳಾಗಿ ಎಲ್ಲಿಗೆ ಹೋಗಿರುವೆಯೋ ಎಂದು ನಾವೆಲ್ಲರೂ ಮತ್ತೆ ಮತ್ತೆ ಚಿಂತಿಸಿದೆವು.

ಅಟಮಾನಾ ಜಗತ್ಸರ್ವಂ ದುಃಖೇನ ತ್ವಾಂ ವಿಚಿನ್ಮಹೇ ।
ಏತಸ್ಮಿನ್ನೇವ ಕಾಲೇ ತು ಯಷ್ಟುಕಾಮೇನ ವೇಧಸಾ ॥ ೨೭ ॥

ಯಜ್ಞಾರ್ಥಂ ವಯಮಾಹೂತಾ ದೇವಾಶ್ಚಾನ್ಯೇ ಮಹರ್ಷಯಃ ।
ದೇವಿ ಸತ್ಯವ್ರತೇ ಕ್ಷೇತ್ರೇ ಯಜತೇ ಕಿಲ ಪದ್ಮಭೂಃ ॥ ೨೮ ॥

ತವ ದರ್ಶನಮಸ್ಮಾಕಂ ತತ್ರ ನೂನಂ ಭವೇದಿತಿ ।
ನಿಶ್ಚಿತ್ಯ ಮನಸಾ ಸರ್ವೇ ತತ್ರ ದರ್ಶನಕಾಂಕ್ಷಿಣಃ ॥ ೨೯ ॥

ವಯಂ ಸತ್ಯವ್ರತಂ ಗತ್ವಾ ಯಜ್ಞಶಾಲಾಂ ಪ್ರವಿಶ್ಯ ಚ ।
ತತ್ರ ಸರ್ವಾನಮರಗಣಾನ್ ಪಶ್ಯಾಮೋ ಭವತೀಂ ವಿನಾ ॥ ೩೦ ॥

ಸಮಾಗತೇಷು ಚಾಸ್ಮಾಸು ತ್ವದ್ಭಕ್ತೇಷು ವಿಶೇಷತಃ ।
ಧರ್ಮಪತ್ನೀಂ ವಿಹಾಯ ತ್ವಾಂ ಧಾತಾ ಯಷ್ಟುಂ ಪ್ರಚಕ್ರಮೇ ॥ ೩೧ ॥

೨೭. ಚಿಂತಾಸಮುದ್ರದಲ್ಲಿ ಮಗ್ನರಾಗಿ ನಿಖಿಲ ಜಗತ್ತನ್ನು ಅಲೆದಾಡುತ್ತ ನಿನ್ನನ್ನು ಹುಡುಕುತ್ತಲಿದ್ದೆವು. ಈ ಸಮಯಕ್ಕೆ ಸರಿಯಾಗಿ ಬ್ರಹ್ಮನು ಅಶ್ವಮೇಧ ಯಾಗವನ್ನು ಮಾಡಲು ಇಷ್ಟವುಳ್ಳವನಾದನು.

೨೮. ದೇವಿಯೆ ! ಆ ಯಜ್ಞಸಮಾರಂಭಕ್ಕೆ ನಾವೆಲ್ಲರೂ ಆಹೂತರಾದೆವು. ಅನೇಕ ದೇವತೆಗಳು ಮತ್ತು ಮಹರ್ಷಿಗಳು ಆಹೂತರಾಗಿದ್ದರು. ಬ್ರಹ್ಮನು ಸತ್ಯವ್ರತ ಕ್ಷೇತ್ರದಲ್ಲಿ ಯಾಗಮಾಡುತ್ತಲಿರುವನು.

೨೯. ಆ ಯಜ್ಞವಾಟದಲ್ಲಿ ನಿನ್ನ ದರ್ಶನವು ನಮಗೆ ಖಂಡಿತವಾಗಿ ಲಭಿಸುವುದು ಎಂದು, ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ನಿನ್ನ ದರ್ಶನವನ್ನು ಅಪೇಕ್ಷಿಸಿ ಅಲ್ಲಿಗೆ ಹೋಗಬೇಕೆಂದು ಕುತೂಹಲಿಗಳಾದೆವು.

೩೦. ಮತ್ತು ನಾವೆಲ್ಲರೂ ಸತ್ಯವ್ರತಕ್ಷೇತ್ರಕ್ಕೆ ಹೋಗಿ ಅಲ್ಲಿ ಯಜ್ಞಶಾಲೆಯನ್ನು ಪ್ರವೇಶಮಾಡಿ ನಿನ್ನನ್ನು ಒಬ್ಬಳನ್ನು ವಿನಹ ಎಲ್ಲ ದೇವತಾವೃಂದವನ್ನು ಕಂಡೆವು.

೩೧. ಹೀಗೆ ಎಲ್ಲರೂ ಯಜ್ಞಶಾಲೆಯಲ್ಲಿ ಸೇರಿರಲು ವಿಶೇಷವಾಗಿ ನಿನ್ನ ಭಕ್ತರಾದ ನಮ್ಮೆದುರಿಗೆ ಬ್ರಹ್ಮನು ಧರ್ಮಪತ್ನಿಯಾದ ನಿನ್ನನ್ನು ಬಿಟ್ಟು ಯಜ್ಞಾನುಷ್ಠಾನವನ್ನು ಪ್ರಾರಂಭಿಸಿದನು.

ಸಾವಿತ್ರೀ ಹಿ ತವ ಸ್ಥಾನೇ ಋಷಿಭಿಶ್ಚೋಪವೇಶಿತಾ ।
ತ್ವಾಮೇವ ಕೇವಲಂ ತತ್ರ ಧಿಕ್ಕುರ್ವಂತಿ ಸುರಾದಯಃ ॥ ೩೨ ॥

ವಯಂ ಕಥಂ ತತ್ರ ದೇವ್ಯಾ ಯಶಃಪರಿಭವೇ ಕೃತೇ ।
ಸೋಢುಂ ವಿಶಕ್ನುಮೋ ದೇವಿ ತ್ವದ್ಭಕ್ತಾ ವರವರ್ಣಿನಿ ॥ ೩೩ ॥

ತದ್ದೃಷ್ಟ್ವಾ ಚ ವಯಂ ಕ್ರುದ್ಧಾಃ ಪ್ರತಿಕರ್ಮ ಚಿಕೀರ್ಷವಃ ।
ನಿವೇದಯಿತುಕಾಮಾಶ್ಚ ತ್ವತ್ಸಮೀಪಮಿಹಾಗತಾಃ ॥ ೩೪ ॥

ಪ್ರಮಾಣಮಿಹ ದೇವಿ ತ್ವಂ ಕರ್ತವ್ಯಂ ಯದನಂತರಂ ।
ತ್ವಯಾ ದೇವಾ ನಿಹಂತವ್ಯಾ ಇತ್ಯೇವಂ ಪ್ರತಿಭಾತಿ ನಃ ॥ ೩೫ ॥

ಅಪಕಾರಪ್ರತೀಕಾರಃ ಸತಾಂ ಸರ್ವತ್ರ ಸಮ್ಮತಃ।
ಅಪಕಾರಃ ಕೃತಸ್ತೇನ ವಿಧಾತ್ರಾ ತ್ವಯಿ ಭಾಮಿನಿ ॥ ೩೬ ॥

---

೩೨. ಯಜಮಾನ ಪತ್ನಿಯಾಗಿ ನೀನು ಇರಬೇಕಾದಸ್ಥಾನದಲ್ಲಿ ಋತ್ವಿಜರಾದ ಮಹರ್ಷಿಗಳು ಸಾವಿತ್ರಿಯನ್ನು ಇರಬಹುದೆಂದು ಉಪದೇಶಿಸಿ ಕಲ್ಪಿಸಿಕೊಂಡಿರುವರು. ಅಲ್ಲಿ ಸೇರಿದ ದೇವತೆಗಳು ವಿಶೇಷವಾಗಿ ನಿನ್ನನ್ನು ಧಿಕ್ಕರಿಸುತ್ತಲಿರುವರು.

೩೩. ವನಿತೆಯರಲ್ಲಿ ಉತ್ತಮಳಾದ ದೇವಿಯೆ! ಆ ಯಜ್ಞಶಾಲೆಯಲ್ಲಿ ದೇವಿಯು ಕೀರ್ತಿಗೆ ಕಳಂಕ ತಂದಿರುವುದನ್ನು ನಿನ್ನ ಭಕ್ತರಾಗಿ ನಾವು ಹೇಗೆ ಸಹಿಸುವುದು.

೩೪. ನಾವು ಅದನ್ನು ನೋಡಿ ಕೋಪಗೊಂಡವರಾಗಿ ಆದಕ್ಕೆ ಪ್ರತೀಕಾರವನ್ನು ಮಾಡಬೇಕೆಂಬ ಕುತೂಹಲದಿಂದ ಈ ವಿಷಯವನ್ನು ನಿನ್ನಲ್ಲಿ ವಿಜ್ಞಾಪನೆ ಮಾಡಿಕೊಳ್ಳಲೋಸ್ಕರ ನಿನ್ನ ಸಮೀಪಕ್ಕೆ ಬಂದಿರುವೆವು.

೩೫. ದೇವಿಯೆ! ನಡೆದ ಸಂಗತಿಯನ್ನು ವಿಜ್ಞಾಪಿಸಿಕೊಂಡಿರುವೆವು. ಮುಂದಿನ ಕರ್ತವ್ಯವನ್ನು ತೀರ್ಮಾನಿಸಲು ನೀನೇ ಸ್ವತಂತ್ರಳು. ಆದರೆ ದೇವಿಯಾದ ನೀನು ಇದಕ್ಕೆ ಪ್ರತೀಕಾರವಾಗಿ ದೇವತೆಗಳನ್ನು ಸಂಹರಿಸಬೇಕೆಂದು ನಮಗೆ ತೋರುತ್ತದೆ.

೩೬. ಒಬ್ಬನು ಮಾಡಿದ ಅಪಕಾರಕ್ಕೆ ಪ್ರತೀಕಾರಮಾಡಲೇಬೇಕೆಂಬುದು ಸಾಧು ಜನರಿಗೆ ಇಷ್ಟವು. ಭಾಮಿನಿಯೆ! ನಿನ್ನಲ್ಲಿ ಬ್ರಹ್ಮನು ಅಪಕಾರವನ್ನು ಆಚರಿಸಿರುವನು.

ನಾರದ ಉವಾಚ:—

ಇತ್ಯುಕ್ತ್ವಾ ದಾನವೈರ್ದೇವೀ ತಥೇತ್ಯಾಹ ಸರಸ್ವತೀ ।
ತತಸ್ತೇ ಸಮನುಜ್ಞಾತಾಃ ಪ್ರಯಯುಃ ಸುರಶತ್ರವಃ ॥ ೩೭ ॥

ತತೋ ದೇವೀ ಭೃಶಂ ಕ್ರುದ್ಧಾ ಸಹ್ಯಂ ಶೈಲಮುಪಾಯಯೌ ।
ತಸ್ಮಾಚ್ಛೈಲಾದ್ವಿನಿಷ್ಕ್ರಮ್ಯ ಕ್ಷೇತ್ರೇ ಸತ್ಯವ್ರತೇ ಮಖಂ ॥ ೩೮ ॥

ಗತ್ವಾ ಸಾ ಸ್ರೋತಸೋ ವೇಗಾದೈಚ್ಛತ್ ಪ್ಲಾವಯಿತುಂ ಕಿಲ ।
ಅಂಬರೀಷ ಉವಾಚ :—
ಕಿಮರ್ಥಂ ಮುನಿಶಾರ್ದೂಲ ಪುರಾ ರುಷ್ಟಾ ಸರಸ್ವತೀ ॥ ೩೯ ॥

ನದೀರೂಪಧರಾ ದೇವೀ ಗತಾ ಚೋತ್ಸೃಜ್ಯ ವೇಧಸಂ ।
ಕೇನ ವಾ ಕಾರಣೇನೇಯಂ ಜಗತ್ಪೂಜ್ಯಾ ಸರಸ್ವತೀ ॥ ೪೦ ॥

ವಿರೋಧಮನುಗಮತ್ಪತ್ಯಾ ಬ್ರಹ್ಮಣಾ ಪರಮೇಷ್ಠಿನಾ ।
ಹಂತುಮುದ್ಯತಾಂ ದೇವಾನ್ ಬಭೂವ ದಿತಿಜೈಃ ಸಹ ॥ ೪೧ ॥

---

೩೭. ನಾರದಮುನಿಯು ಮುಂಪೆ ಈ ರೀತಿಯಾಗಿ ಹೇಳಿದನು :—ದಾನವರಿಂದ ಈ ರೀತಿಯಾಗಿ ಪ್ರೇರೇಪಿಸಲ್ಪಟ್ಟ ಸರಸ್ವತೀದೇವಿಯು ಹಾಗೇ ಆಗಲೆಂದು ಒಪ್ಪಿಕೊಂಡಳು. ತರುವಾಯ ಸುರಶತ್ರುಗಳಾದ ದಾನವರು ದೇವಿಯ ಅನುಜ್ಞೆಯನ್ನು ಹೊಂದಿ ಹೊರಟುಹೋದರು.

೩೮-೩೯. ಅನಂತರದಲ್ಲಿ ದೇವಿಯು ಅತಿಯಾಗಿ ಕೋಪಿಸಿಕೊಂಡು ಸಹ್ಯಾದ್ರಿಗೆ ಬಂದಳು. ಆ ಸಹ್ಯಪರ್ವತದಿಂದ ಹೊರಟು ಸತ್ಯವ್ರತಕ್ಷೇತ್ರಕ್ಕೆ ಹೋಗಿ ಅಲ್ಲಿ ನಡೆಯುವ ಯಜ್ಞದ ಸಂಭಾರಗಳನ್ನು ಪ್ರವಾಹದ ವೇಗದಿಂದ ಕೊಚ್ಚಿಕೊಂಡು ಹೋಗಬೇಕೆಂದು ಇಚ್ಛಿಸಿದಳು. ಈ ಕಥೆಯನ್ನು ಕೇಳಿದ ಅಂಬರೀಷರಾಜನು ಪ್ರಶ್ನಿಸಿದನು. ಮುನಿಶ್ರೇಷ್ಠನೆ! ಸರಸ್ವತೀದೇವಿಯು ಪೂರ್ವದಲ್ಲಿ ಕುಪಿತಳಾದುದು ಏತಕ್ಕೆ ?

೪೦. ಪ್ರಪಂಚಕ್ಕೆ ವಂದ್ಯಳಾದ ಸರಸ್ವತೀದೇವಿಯು ಯಾವ ಕಾರಣದಿಂದ ಬ್ರಹ್ಮದೇವನನ್ನು ಬಿಟ್ಟು ನದೀರೂಪವಾಗಿ ಹೊರಟುಹೋದಳು ?

೪೧. ಮತ್ತು ಯಾವ ಕಾರಣದಿಂದ ಕೋಪಾವೇಶವುಳ್ಳವಳಾಗಿ ಪರಮಪೂಜ್ಯಸ್ಥಾನದಲ್ಲಿರುವ ಪತಿಯಾದ ಬ್ರಹ್ಮನೊಡನೆ ವಿರೋಧವನ್ನು ಹೊಂದಿ ರಾಕ್ಷಸರ ಸಂಗಡ ಸೇರಿ ದೇವತೆಗಳನ್ನು ಸಂಹರಿಸಲು ಉದ್ಯುಕ್ತಳಾದಳು ?

ಪ್ರಾರಂಭಮಶ್ವಮೇಧಸ್ಯ ಜ್ಯೇಷ್ಠಾಂ ಪತ್ನೀಂ ಸರಸ್ವತೀಂ ।
ಕಿಮಾಹೂಯ ವಿಧಿಶ್ಚಕ್ರೇ ಕಿಂ ವಾನಾಹೂಯ ಪದ್ಮಭೂಃ ॥ ೪೨ ॥

ವಿಗ್ರಹಸ್ತ್ವನಯೋರ್ಬ್ರಹ್ಮನ್ ದೃಶ್ಯತೇ ಸುಮಹಾನಿವ ।
ನಾಲ್ಪೇನ ಕಾರಣೇನಾಯಂ ವಿಗ್ರಹಃ ಪ್ರತಿಭಾತಿ ಮೇ ॥ ೪೩ ॥

ಏತದಿಚ್ಛಾಮ್ಯಹಂ ಶ್ರೋತುಂ ವಕ್ತುಮರ್ಹಸಿ ಮೇ ಮುನೇ ।
ಸೂತ ಉವಾಚ :—
ತಸ್ಯ ತದ್ವಚನಂ ಶ್ರುತ್ವಾ ನಾರದೋ ಭಗವಾನೃಷಿಃ ॥ ೪೪ ॥

ವಿಧಿವಾಣ್ಯೋರ್ವಿರೋಧಸ್ಯ ಕಾರಣಂ ವಕ್ತುಮಾರಭತ್ ।
ನಾರದ ಉವಾಚ :—
ಕದಾ ಚಿನ್ಮೇರುಶಿಖರೇ ಸಭಾಯಾಂ ಕಮಲಾಸನಃ ॥ ೪೫ ॥

---

೪೨. ಬ್ರಹ್ಮದೇವನು ತನ್ನ ಜ್ಯೇಷ್ಠಪತ್ನಿಯಾದ ಸರಸ್ವತೀದೇವಿಯನ್ನು ಆಹ್ವಾನಿಸಿ ಅಶ್ವಮೇಧಯಾಗವನ್ನು ಆರಂಭಿಸಿದನೇ? ಅಥವಾ ಆಹ್ವಾನಮಾಡದೇ ಯಜ್ಞವನ್ನು ಆರಂಭಿಸಿದನೇ?

೪೩. ಪೂಜ್ಯನಾದ ನಾರದಮುನಿಯೆ! ಹೀಗೆ ಬ್ರಹ್ಮ ಮತ್ತು ಸರಸ್ವತೀ ದೇವಿಯರಿಗೆ ಕಲಹವು ಮಹತ್ತಾಗಿರುವಂತೆ ತೋರುತ್ತದೆ. ಈ ಕಲಹವು ಅಲ್ಪಕಾರಣದಿಂದ ಇರಲಾರದೆಂದು ನನಗೆ ತೋರುತ್ತದೆ.

೪೪-೪೫. ಮುನಿಯೆ! ಈ ವಿಷಯವನ್ನು ಕೇಳಲು ಇಷ್ಟವುಳ್ಳವನಾಗಿದ್ದೇನೆ. ನೀನು ಇದನ್ನು ಉಪದೇಶಿಸಲು ಅರ್ಹನಾಗಿರುತ್ತೀ, ಸೂತಮುನಿಯು ಮತ್ತೆ ಇಂತೆಂದನು:—ರಾಜನ ಈ ಪ್ರಶ್ನೆಗಳನ್ನು ಕೇಳಿದ ಪೂಜ್ಯನಾದ ನಾರದಮುನಿಯು ವಿಧಿ ಮತ್ತು ವಾಣಿಯರಿಗೆ ಸಂಭವಿಸಿದ ಕಲಹದ ಕಾರಣವನ್ನು ಹೇಳಲು ಆರಂಭಿಸಿದನು. ನಾರದಮುನಿಯು ಹೀಗೆ ಕಥೆಯನ್ನು ಮುಂದುವರಿಸಿ ಹೇಳಿದನು :—ಪೂರ್ವದಲ್ಲಿ ಒಂದು ಸಮಯದಲ್ಲಿ ಬ್ರಹ್ಮನು ಮೇರುಪರ್ವತದ ಶಿಖರದಲ್ಲಿ ಸಭೆಯನ್ನು ಸೇರಿಸಿದನು.

ಉಪವಿಷ್ಟಃ ಸರಸ್ವತ್ಯಾ ಸಾರ್ಧಂ ದೇವಗಣೈರಪಿ ।
ಉಪಾಸತೇ ಚ ತಂ ದೇವಂ ತತ್ರ ಬ್ರಹ್ಮರ್ಷಯೋಽಪಿ ಚ ॥ ೪೬ ॥

ಗಾಯಂತಿ ತತ್ರ ಗಂಧರ್ವಾ ನೃತ್ಯಂತ್ಯಪ್ಸರಸಾಂ ಗಣಾಃ ।
ತಸ್ಮಿನ್ ಕಾಲೇ ಸಮಾಜಗ್ಮುರ್ಮುನಯಸ್ತತ್ರ ಕೇಚನ ॥ ೪೭ ॥

ವಾಣೀಭಕ್ತಾಃ ಶ್ರಿಯೋ ಭಕ್ತಾ ಇತಿ ದ್ವೇಧಾ ದ್ವಿಜಾತಯಃ ।
ವಾಣೀಮೇವೋತ್ತಮಾಂ ಕೇಚಿದ್ವದಂತ್ಯನ್ಯೇ ಶ್ರಿಯಂ ತಥಾ ॥ ೪೮ ॥

ವಾಗ್ಭಕ್ತಾಸ್ತಾಂ ಪ್ರಶಂಸಂತಿ ಶ್ರೀಭಕ್ತಾಃ ಶ್ರಿಯಮೇವ ಹಿ ।
ಪ್ರಷ್ಟುಕಾಮಾಶ್ಚತುರ್ವಕ್ತ್ರಂ ವಿವದಂತಃ ಪರಸ್ಪರಂ ॥ ೪೯ ॥

ತೇ ದೃಷ್ಟ್ವಾ ಋಷಯಃ ಸರ್ವೇ ಸಭಾಯಾಂ ಪದ್ಮಸಂಭವಂ ।
ನತ್ವಾ ಪ್ರಾಂಜಲಯಸ್ತತ್ರ ಪಪ್ರಚ್ಛುರ್ವಿನಯಾನ್ವಿತಾಃ ॥ ೫೦ ॥

---

೪೬. ಆ ಸಭೆಯಲ್ಲಿ ಬ್ರಹ್ಮನು ದೇವಗಣದ ಪರಿವಾರದಿಂದ ಕೂಡಿ ಸರಸ್ವತೀದೇವಿಯೊಡನೆ ಕುಳಿತುಕೊಂಡಿದ್ದನು. ಆಗ ಅಲ್ಲಿ ಬ್ರಹ್ಮದೇವನನ್ನು ಅನೇಕ ಬ್ರಹ್ಮರ್ಷಿಗಳು ಸೇವಿಸುತ್ತಲಿದ್ದರು.

೪೭. ಆ ಆಸ್ಥಾನಸಭೆಯಲ್ಲಿ ಬ್ರಹ್ಮನನ್ನು ಸೇವಿಸಲು ಗಂಧರ್ವರು ಗಾನ ಮಾಡುತ್ತಾರೆ. ಅಪ್ಸರಃ ಸ್ತ್ರೀಯರು ನರ್ತನಮಾಡುತ್ತಾರೆ. ಈ ಸಮಯದಲ್ಲಿ ಸಭೆಗೆ ಕೆಲವು ಮುನಿಗಳು ಬಂದು ಸೇರಿದರು.

೪೮. ಆಗ ಬಂದವರಲ್ಲಿ ಕೆಲವರು ವಾಣಿಯಲ್ಲಿ ಭಕ್ತರೂ ಮತ್ತೆ ಕೆಲವರು ಲಕ್ಷ್ಮೀದೇವಿಯಲ್ಲಿ ಭಕ್ತಿಯುಳ್ಳವರೂ ಆಗಿ ಎರಡು ಪಂಗಡವಾಗಿ ವಾಣಿಯನ್ನೇ ಉತ್ತಮಳೆಂದೂ, ಲಕ್ಷ್ಮಿಯನ್ನೇ ಉತ್ತಮಳೆಂದೂ ತಮ್ಮ ಭಕ್ತಿಯನ್ನನುಸರಿಸಿ ವಾದಿಸುತ್ತಿದ್ದರು.

೪೯. ವಾಗ್ದೇವೀಭಕ್ತರು ವಾಣಿಯನ್ನು, ಲಕ್ಷ್ಮೀಭಕ್ತರು ಲಕ್ಷ್ಮಿಯನ್ನು ಪ್ರಶಂಸೆಮಾಡುತ್ತಲಿದ್ದರು. ಮತ್ತು ಹೀಗೆ ವಾದ ಮಾಡಿ ಇದರ ತತ್ತ್ವವನ್ನು ಬ್ರಹ್ಮದೇವನಲ್ಲಿ ಪ್ರಶ್ನಮಾಡಬೇಕೆಂದು ಪರಸ್ಪರ ವಾದಮಾಡಿದರು.

೫೦. ಆ ಎಲ್ಲ ಮುನಿಗಳು ಸಭೆಯಲ್ಲಿ ಪದ್ಮದಲ್ಲಿ ಹುಟ್ಟಿದ ಬ್ರಹ್ಮನನ್ನು ಕಂಡು ವಿನಯದಿಂದ ಅಂಜಲಿಯನ್ನು ಕಟ್ಟಿಕೊಂಡು ನಮಸ್ಕರಿಸಿ ಪ್ರಶ್ನಿಸಿದರು.

ವಯಮತ್ರಾಗತಾ ಬ್ರಹ್ಮನ್ ಪ್ರಷ್ಟುಕಾಮಾ ಯಥಾತಥಂ ।
ಕಾ ಶ್ರೇಷ್ಠಾ ಶ್ರೀಸರಸ್ವತ್ಯೋರೇತನ್ನಃ ಕಥ್ಯತಾಮಿತಿ ॥ ೫೧ ॥

ತೈಶ್ಚ ಪೃಷ್ಟಸ್ತದಾ ಬ್ರಹ್ಮಾ ಸಂದಿಹಾನೈರ್ದ್ವಿಜೋತ್ತಮೈಃ ।
ಪ್ರೋವಾಚ ನಿಶ್ಚಯಂ ತೇಷಾಂ ಸರ್ವಲೋಕೋತ್ತಮಾಂ ರಮಾಂ ॥

ಈಶಾನಾ ಸರ್ವಲೋಕಸ್ಯ ವಿಷ್ಣುಪತ್ನೀ ಜಗತ್ಪ್ರಸೂಃ ।
ಮದಾದಿಸರ್ವದೇವಾನಾಮಾಧಾರಾ ಚಾಧಿದೇವತಾ ॥ ೫೩ ॥

ತತೋ ಲಕ್ಷ್ಮೀಸಮಾ ನಾಸ್ತಿ ಸೈವ ಸರ್ವೋತ್ತಮಾ ಮತಾ ।
ವಾಣೀ ತದ್ವಚನಂ ಶ್ರುತ್ವಾ ಸವ್ರೀಲಾ ವಾಕ್ಯಮಬ್ರವೀತ್ ॥ ೫೪ ॥

ಮಮ ಶ್ರೈಷ್ಠ್ಯಂ ನದೀಭ್ಯೋ ವಾ ಪ್ರಯಚ್ಛ ಕಮಲೋದ್ಭವ ।
ತ್ವತ್ಪ್ರಸಾದಾನ್ನದೀಶ್ರೇಷ್ಠಾಂ ಸರ್ವೇ ಸಂಭಾವಯಂತು ಮಾಂ ॥ ೫೫ ॥

---

೫೧. ಬ್ರಹ್ಮನೆ! ಶ್ರೀದೇವೀ ಮತ್ತು ಸರಸ್ವತೀದೇವಿಯರಲ್ಲಿ ಯಾರು ಉತ್ತಮಳೆಂಬುದನ್ನು ಪಾರಮಾರ್ಥಿಕವಾಗಿ ನಿನ್ನಿಂದ ಕೇಳಿ ತಿಳಿಯಲು ನಾವು ಇಲ್ಲಿಗೆ ಬಂದಿರುವೆವು. ಇದನ್ನು ನಮಗೆ ಹೇಳಬೇಕು ಎಂದು ಪ್ರಾರ್ಥಿಸಿದರು.

೫೨. ಈ ವಿಷಯದಲ್ಲಿ ಸಂದೇಹದಿಂದ ಕೂಡಿದ ದ್ವಿಜೋತ್ತಮರಿಂದ ಪ್ರಶ್ನಿಸಲ್ಪಟ್ಟ ಬ್ರಹ್ಮನು ಆಗ ಲಕ್ಷ್ಮೀದೇವಿಯು ಸಕಲ ಲೋಕಕ್ಕೂ ಉತ್ತಮಳಾದವಳೆಂದು ನಿಶ್ಚಯ ಗರ್ಭಿತವಾದ ಉತ್ತರವನ್ನು ಹೇಳಿದನು.

೫೩. ವಿಷ್ಣುಪತ್ನಿಯಾದ ಲಕ್ಷ್ಮೀದೇವಿಯು ಸಕಲ ಲೋಕಕ್ಕೆ ನಿಯಾಮಕಳು, ಜಗತ್ತಿಗೆ ಜನನನಿಯು ಮತ್ತು ನಾನು ಮೊದಲಾಗಿ ಎಲ್ಲ ದೇವತೆಗಳಿಗೆ ಆಧಾರಭೂತಳೂ ಅಧಿದೇವತೆಯೂ ಆಗಿರುವಳು.

೫೪. ಆದುದರಿಂದ ಲಕ್ಷ್ಮೀದೇವಿಗೆ ಸದೃಶಳು ಮತ್ತೊಬ್ಬಳಿಲ್ಲ. ಅವಳೇ ಸರ್ವೋತ್ತಮಳೆಂದು ಪ್ರಾಜ್ಞರ ಮತವು. ಈ ಮಾತನ್ನು ವಾಣಿಯು ಕೇಳಿ ನಾಚಿಕೆಗೊಂಡು ಹೀಗೆ ಮಾತನ್ನಾಡಿದಳು.

೫೫. ಕಮಲಾಸನನಾದ ಬ್ರಹ್ಮನೆ! ಸಕಲ ನದಿಗಳಿಗಿಂತಲಾದರೂ ನನಗೆ ಶ್ರೇಷ್ಠತ್ವವನ್ನು ಅನುಗ್ರಹಿಸು. ನಿನ್ನ ಅನುಗ್ರಹದಿಂದ ಎಲ್ಲರೂ ನನ್ನನ್ನು ನದಿಗಳಲ್ಲಿ ಉತ್ತಮಳನ್ನಾಗಿ ಗೌರವಮಾಡಲಿ.

ಇತಿ ಸಂಪ್ರಾರ್ಥಿತೋ ವಾಣ್ಯಾ ತಾಮನಾದೃತ್ಯ ಪದ್ಮಭೂಃ ।
ಮುನೀನಾಂ ಶೃಣ್ವತಾಂ ತತ್ರ ತದ್ಭಕ್ತಾನಾಂ ಚ ಸನ್ನಿಧೌ ॥ ೫೬ ॥

ನಿರ್ಭರ್ತ್ಸ್ಯ ವಾಣೀಂ ಸಂಕ್ರುದ್ಧ ಇದಂ ವಚನಮಬ್ರವೀತ್ ।
ಶ್ರೇಷ್ಠಾ ಸರ್ವನದೀನಾಂ ಚ ಗಂಗಾ ವಿಷ್ಣುಪದೋದ್ಭವಾ ॥ ೫೭ ॥

ವಿಷ್ಣುಪಾದೋದಕಸಮಂ ನ ಭೂತಂ ನ ಭವಿಷ್ಯತಿ ।
ತತೋ ವಾಣೀ ಭೃಶಂ ಕ್ರುದ್ಧಾ ಬ್ರಹ್ಮಣಾ ಪರಮೇಷ್ಠಿನಾ ॥ ೫೮ ॥

ಭಕ್ತಾನಾಂ ಪುರತಃ ಸ್ವೇಷಾಮೇವಂ ಪರಿಭವೇ ಕೃತೇ ।
ಸದ್ಯಃ ಪ್ರಣಮ್ಯ ಧಾತಾರಂ ಸಮುತ್ಥಾಯ ವರಾಸನಾತ್ ॥ ೫೯ ॥

ಅಂತರ್ಧಾನಂ ಗತಾ ದೇವೀ ಪ್ರಾಪ್ತಾ ಭೂತಲಮಂಜಸಾ ।
ಗಂಗಾಯಮುನಯೋಃ ಸಂಗೇ ಸ್ವಾಂಶಭೂತಾಂ ನದೀಂ ತದಾ ॥ ೬೦ ॥

---

೫೬. ಈ ರೀತಿಯಾಗಿ ವಾಣಿಯಿಂದ ಪ್ರಾರ್ಥಿಸಲ್ಪಟ್ಟ ಬ್ರಹ್ಮನು ಮುನಿಗಳು ಮತ್ತು ವಾಣೀಭಕ್ತರು ಕೇಳುತ್ತಿರುವ ಸಮಯದಲ್ಲಿ ಆ ವಾಣಿಯನ್ನು ಅಲಕ್ಷಿಸಿ ಮಾತನಾಡಿದನು.

೫೭. ಆಗ ಬ್ರಹ್ಮನು ಕೋಪಗೊಂಡು ವಾಣಿಯನ್ನು ಬೆದರಿಸಿ ಈ ಮಾತನ್ನು ಆಡಿದನು ವಿಷ್ಣುವಿನ ಪಾದದಲ್ಲಿ ಹುಟ್ಟಿದ ಗಂಗಾನದಿಯು ಎಲ್ಲ ನದಿಗಳಲ್ಲಿ ಉತ್ತಮವಾದುದು.

೫೮. ವಿಷ್ಣುವಿನ ಪಾದೋದಕಕ್ಕೆ ಸಮಾನವಾದ ತೀರ್ಥವು ಹಿಂದೆ ಯಾವುದೂ ಇಲ್ಲ, ಮುಂದೆ ಹುಟ್ಟುವುದೂ ಇಲ್ಲ, ಪರಮಪೂಜ್ಯನಾದ ಬ್ರಹ್ಮನು ಈ ರೀತಿಯಾಗಿ ಹೇಳಿದ್ದರಿಂದ ವಾಣಿಯು ಅತಿಯಾಗಿ ಕುಪಿತಳಾದಳು.

೫೯. ಸರಸ್ವತಿಯು ತನ್ನ ಭಕ್ತರ ಮುಂದೆ ತನಗೆ ಈ ರೀತಿಯಾಗಿ ಅವಮಾನವಾದುದನ್ನು ಸಹಿಸದೆ ಕೂಡಲೆ ತನ್ನ ಶ್ರೇಷ್ಠವಾದ ಆಸನವನ್ನು ಬಿಟ್ಟು ಎದ್ದು ಬ್ರಹ್ಮನನ್ನು ನಮಸ್ಕರಿಸಿದನು.

೬೦. ಅನಂತರದಲ್ಲಿ ಅಲ್ಲಿಂದ ಅಂತರ್ಧಾನಹೊಂದಿ ಶೀಘ್ರವಾಗಿ ಭೂಲೋಕಕ್ಕೆ ಬಂದಳು. ಆಗ ಗಂಗಾ ಮತ್ತು ಯಮುನಾನದಿಗಳ ಸಂಗಮಸ್ಥಳದಲ್ಲಿ ತನ್ನ ಅಂಶದಿಂದ ನದೀರೂಪವನ್ನು ಹೊಂದಿದಳು.

ಪ್ರವಿಶ್ಯ ವಾಣೀ ರಾಜೇಂದ್ರ ತತ್ರೈವ ನ್ಯವಸಚ್ಚಿರಂ ।
ಯದಾಶ್ವಮೇಧಮಾಹರ್ತುಮಾರಭತ್ಕಮಲಾಸನಃ ॥ ೬೧ ॥

ತದಾ ತಮೂಚುಃ ಸಹಿತಾಃ ಸರ್ವೇ ಷೋಡಶ ಋತ್ವಿಜಃ ।
ಆಹೂಯತಾಮಿಹ ಬ್ರಹ್ಮಂಸ್ತವ ಪತ್ನೀ ಸರಸ್ವತೀ ॥ ೬೨ ॥

ಸಮಾಗತಾಯಾಂ ತಸ್ಯಾಂ ಹಿ ಕರ್ತವ್ಯಂ ಯದನಂತರಂ ।
ಅತ ಆಹೂಯತಾಂ ಕ್ಷಿಪ್ರಂ ಯಜ್ಞೇ ಪತ್ನೀ ಸರಸ್ವತೀ ॥ ೬೩ ॥

ಇತಿ ತೇಷಾಂ ವಚಃ ಶ್ರುತ್ವಾ ಯಷ್ಟುಕಾಮಃ ಪಿತಾಮಹಃ ।
ವಸಿಷ್ಠಂ ಪ್ರೇಷಯಾಮಾಸ ವಾಣೀಮಾನೇತುಮಂಜಸಾ ॥ ೬೪ ॥

ಗತ್ವಾ ತತ್ರ ವಸಿಷ್ಠೋಽಸೌ ದೃಷ್ಟ್ವಾ ದೇವೀಂ ಪ್ರಣಮ್ಯ ಚ ।
ಸ್ತುತ್ವಾ ಬ್ರಹ್ಮಣ ಆದೇಶಂ ತಸ್ಯೈ ಸರ್ವಂ ನ್ಯಜಿಜ್ಞಪತ್ ॥ ೬೫ ॥

---

೬೧. ರಾಜೇಂದ್ರನೆ! ನದೀರೂಪಳಾಗಿ ಆ ಸ್ಥಳದಲ್ಲಿ ಬಹುಕಾಲದಿಂದ ವಾಸ ಮಾಡಿದಳು. ಇತ್ತಲಾಗಿ ಕಮಲಾಸನನು ಅಶ್ವಮೇಧಯಾಗವನ್ನು ಆಚರಿಸಲು ಉಪಕ್ರಮಿಸಿದನು.

೬೨. ಆಗ ಆ ಯಜ್ಞದಲ್ಲಿದ್ದ ಹದಿನಾರು ಮಂದಿ ಋತ್ವಿಜರು ಎಲ್ಲರೂ ಸೇರಿ ಬ್ರಹ್ಮನೆ! ನಿನ್ನ ಜ್ಯೇಷ್ಠಪತ್ನಿಯಾದ ಸರಸ್ವತಿಯನ್ನು ಕರೆಯಬೇಕು.

೬೩. ಈ ಯಜ್ಞಾಂಗವಾಗಿ ಮಾಡಬೇಕಾದ ಕರ್ತವ್ಯವು ಅವಳು ಬಂದ ತರುವಾಯ ನಡೆಯುವುದು. ಆದ್ದರಿಂದ ಯಜ್ಞಾರ್ಥವಾಗಿ ಪತ್ನಿಯಾದ ಸರಸ್ವತೀದೇವಿಯನ್ನು ಬೇಗ ಆಹ್ವಾನಿಸು.

೬೪. ಯಜ್ಞಮಾಡುವ ಕುತೂಹಲದಿಂದ ಕೂಡಿದ ಬ್ರಹ್ಮನು ಋತ್ವಿಜರ ಈ ಮಾತನ್ನು ಕೇಳಿ ಸರಸ್ವತಿಯನ್ನು ಕರೆಯಲು ಬೇಗ ವಸಿಷ್ಠಮುನಿಯನ್ನು ಕಳಿಸಿದನು.

೬೫. ವಸಿಷ್ಠಮುನಿಯು ಸರಸ್ವತೀದೇವಿಯ ಬಳಿಗೆ ಹೋಗಿ ಅಲ್ಲಿ ಸರಸ್ವತೀದೇವಿಯನ್ನು ನಮಸ್ಕರಿಸಿ ಬ್ರಹ್ಮದೇವನ ಆಜ್ಞೆಯನ್ನು ಪ್ರಶಂಸೆಮಾಡಿ ದೇವಿಗೆ ಎಲ್ಲವನ್ನು ವಿಜ್ಞಾಪಿಸಿದನು.

ನಾಯಾಸ್ಯಾಮೀತಿ ಚಾಪ್ಯುಕ್ತೋ ವಾಣ್ಯಾ ಸಂಕ್ರುದ್ಧಯಾ ತಯಾ ।
ತತಃ ಪ್ರಣಮ್ಯ ತಾಂ ದೇವೀಂ ಪುನರ್ಗತ್ವಾ ಯಥಾಗತಂ ॥ ೬೬ ॥

ನ್ಯವೇದಯದ್ಬ್ರಹ್ಮಋಷಿಸ್ತತ್ಸರ್ವಂ ಬ್ರಹ್ಮಣೇ ತದಾ ।
ವಸಿಷ್ಠವಚನಾಜ್ಜ್ಞಾತ್ವಾ ಕ್ರುದ್ಧಾಂ ವಾಣೀಮನಾಗತಾಂ ॥ ೬೭ ॥

ತಮೂಚುರ್ಮುನಯಃ ಸರ್ವೇ ಬ್ರಹ್ಮಾಣಂ ಬ್ರಹ್ಮವಾದಿನಃ ।
ಭಗವನ್ ಭರ್ತುರಾಜ್ಞಾಂ ಯಾ ಸಮುಲ್ಲಂಘಿತುಮಿಚ್ಛತಿ ॥ ೬೮ ॥

ತಸ್ಯಾಸ್ತ್ಯಾಗೇ ನ ದೋಷಃ ಸ್ಯಾದಿತಿ ವೇದಾನುಶಾಸನಂ ।
ಧರ್ಮವಿಘ್ನಕರೀಂ ಭಾರ್ಯಾಮಸತೀಂ ಚಾತಿಕೋಪನಾಂ ॥ ೬೯ ॥

---

೬೬. ಆಗ ಕುಪಿತಳಾದ ವಾಣಿಯು ತಾನು ಯಜ್ಞಶಾಲೆಗೆ ಬರುವುದಿಲ್ಲವೆಂದು ವಸಿಷ್ಠಮುನಿಗೆ ಹೇಳಲು ಮುನಿಯು ಪುನಃ ದೇವಿಗೆ ನಮಸ್ಕಾರಮಾಡಿ ಬಂದಂತೆ ಹಿಂದಿರುಗಿದನು.

೬೭. ಬ್ರಹ್ಮಋಷಿಯಾದ ವಸಿಷ್ಠಮುನಿಯು ಸರಸ್ವತೀದೇವಿಯನ್ನು ಕರೆತರಲು ಹೋದ ಸಮಯದಲ್ಲಿ ನಡೆದ ಎಲ್ಲ ವೃತ್ತಾಂತವನ್ನು ಹೇಳಿದನು. ಆಗ ವಸಿಷ್ಠ ಮುನಿಯ ವಚನದಿಂದ ವಾಣಿಯು ಕುಪಿತಳೆಂದೂ ಆದ್ದರಿಂದ ಯಜ್ಞಕ್ಕೆ ಬಂದಿಲ್ಲವೆಂದೂ ಬ್ರಹ್ಮನು ತಿಳಿದನು.

೬೮. ಆಗ ಬ್ರಹ್ಮವಾದಿಗಳಾದ ಮುನಿಗಳೆಲ್ಲರೂ ಬ್ರಹ್ಮನನ್ನು ಕುರಿತು ಈ ರೀತಿಯಾಗಿ ಹೇಳಿದರು. ಭಗವಂತನೆ! ಯಾವ ನಾರಿಯು ಪತಿಯ ಆಜ್ಞೆಯನ್ನು ಉಲ್ಲಂಘಿಸಲು ಇಷ್ಟಪಡುವಳೊ.

೬೯. ಆ ಪತ್ನಿಯನ್ನು ಪತಿಯು ತ್ಯಜಿಸಿದರೆ ಯಾವ ದೋಷವೂ ಇಲ್ಲವೆಂದು ವೇದದಲ್ಲಿ ಉಪದೇಶಮಾಡಿದೆ. ಕೆಲವು ದೋಷಗಳನ್ನು ಕಂಡು ಪತ್ನಿಯನ್ನು ತ್ಯಜಿಸಲು ಯಾವ ಧರ್ಮಲೋಪದ ಆತಂಕವೂ ಇಲ್ಲ. ಧರ್ಮಕಾರ್ಯಕ್ಕೆ ವಿಘ್ನಾಚರಣ, ವ್ಯಭಿಚಾರದೋಷ ಮತ್ತು ಅತಿಯಾಗಿ ಕೋಪಗೊಳ್ಳುವ ಶೀಲ-ಇವುಗಳು ಪತ್ನಿಯ ತ್ಯಾಗಕ್ಕೆ ನಿಮಿತ್ತಗಳಾದ ದೋಷಗಳು.

ತ್ಯಜೇದ್ಧರ್ಮಸ್ಯ ರಕ್ಷಾರ್ಥಂ ತಥೈವಾಪ್ರಿಯವಾದಿನೀಂ ।
ನಾಗತಾ ಖಲು ಸಾ ದೇವೀ ಧರ್ಮಪತ್ನೀ ಸರಸ್ವತೀ ॥ ೭೦ ॥

ಸಾವಿತ್ರೀ ಕಲ್ಪ್ಯತಾಮದ್ಯ ಪತ್ನೀತ್ವೇ ತವ ಪದ್ಮಜ ।
ಇತ್ಯುಕ್ತೋ ಮುನಿಭಿರ್ಬ್ರಹ್ಮಾ ತಥೇತಿ ಪ್ರೀತಮಾನಸಃ ॥ ೭೧ ॥

ಸಾವಿತ್ರೀಂ ಕಲ್ಪಯಾಮಾಸ ಪತ್ನಿತ್ವೇ ಯಜ್ಞಕರ್ಮಣಿ ।
ಏತತ್ತೇ ಕಥಿತಂ ರಾಜನ್ ವಾಣ್ಯಾಃ ಕೋಪಸ್ಯ ಕಾರಣಂ ॥ ೭೨ ॥

ತತಃ ಸಮುತ್ಸೃಜ್ಯ ವಿಧಿಃ ಸರಸ್ವತೀ-
ಮನಾಗತಾಮುಧ್ವರಕರ್ಮದೀಕ್ಷಿತಃ ।
ಚಕಾರ ಯಜ್ಞಂ ವಿಧಿವತ್ತಯಾ ವಿನಾ
ಜನಾರ್ದನಾವೇಕ್ಷಣಸೌಖ್ಯಲಾಲಸಃ ॥ ೭೩ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಚತುರ್ದಶೋಽಧ್ಯಾಯಃ.

---

೭೦. ಇಂತಹ ಭಾರ್ಯೆಯನ್ನು ಧರ್ಮರಕ್ಷಣೆಗೋಸ್ಕರ ತ್ಯಜಿಸಬೇಕು. ಹಾಗೂ ಅಪ್ರಿಯವನ್ನು ನುಡಿಯುವ ಅಭ್ಯಾಸವುಳ್ಳವಳನ್ನೂ ತ್ಯಜಿಸಬೇಕು. ಈಗ ನಿನ್ನ ಧರ್ಮಪತ್ನಿಯಾದ ಸರಸ್ವತಿಯು ಧರ್ಮಕಾರ್ಯಕ್ಕೆ ಬಂದಿರುವುದಿಲ್ಲ.

೭೧. ಪದ್ಮಾಸನನಾದ ಬ್ರಹ್ಮನೆ! ಈ ಯಾಗದಲ್ಲಿ ಪತ್ನೀಸ್ಥಾನದಲ್ಲಿ ಸಾವಿತ್ರೀ ದೇವಿಯನ್ನು ಕಲ್ಪಿಸಿ ನೀನು ಯಾಗವನ್ನು ಆಚರಿಸು. ಮಹರ್ಷಿಗಳಿಂದ ಹೀಗೆ ಹೇಳಲ್ಪಟ್ಟ ಬ್ರಹ್ಮನು ಹಾಗೆಯೇ ಆಗಲೆಂದು ಅಂಗೀಕರಿಸಿ ಮನದಲ್ಲಿ ಸಂತೋಷ ಗೊಂಡನು.

೭೨. ತನ್ನ ಯಜ್ಞಕರ್ಮದಲ್ಲಿ ಆದರಂತೆ ಸಾವಿತ್ರಿಯನ್ನು ಪತ್ನೀಸ್ಥಾನದಲ್ಲಿ ನಿಯಮಿಸಿದನು., ರಾಜನೆ! ವಾಣಿಯು ಕೋಪಕ್ಕೆ ಕಾರಣವನ್ನು ನಿನಗೆ ಈ ರೀತಿ ಯಾಗಿ ವಿವರಿಸಿರುವೆನು.

೭೩. ಆ ತರುವಾಯ ಬ್ರಹ್ಮನು ವಿಷ್ಣುಪರಮಾತ್ಮನನ್ನು ಸಾಕ್ಷಾತ್ಕರಿಸುವ ಲಾಲಸೆಯಿಂದ ಕೂಡಿದವನಾಗಿ ಸರಸ್ವತೀದೇವಿಯು ಬಾರದಿರುವುದರಿಂದ ಅವಳನ್ನು ಬಿಟ್ಟು ಯಾಗದೀಕ್ಷೆಯನ್ನು ಕೈಗೊಂಡವನಾಗಿ ಸರಸ್ವತೀ ರಹಿತನಾಗಿ ಯಜ್ಞವನ್ನು ಆಚರಿಸಿದನು.

ಕಾಂಚೀಮಾಹಾತ್ಮ್ಯದಲ್ಲಿ ಚತುರ್ದಶಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಪಂಚದಶೋಽಧ್ಯಾಯಃ

ಅಂಬರೀಷ ಉವಾಚ :—

ಸಂಪ್ರೇರಿತಾ ದಾನವೇಂದ್ರೈರ್ಮಖಭಂಗಾಯ ವೇಧಸಃ ।
ದತ್ವಾ ಚೈವಾಭಯಂ ತೇಷಾಂ ಸಂಕ್ರುದ್ಧಾ ಸಾ ಸರಸ್ವತೀ ॥ ೧ ॥

ಸಹ್ಯಪರ್ವತಮಾಸಾದ್ಯ ತತಃ ಕಿಮಕರೋನ್ಮುನೇ ।
ಚರಿತಂ ಮೇ ಸರಸ್ವತ್ಯಾ ವಕ್ತುಮರ್ಹಸ್ಯಶೇಷತಃ ॥ ೨ ॥

ನಾರದ ಉವಾಚ :—

ಸೋಽಪತ್ಯಕಾಯಾ ನಿರ್ಗತ್ಯ ವೇಗಾತ್ ಸಹ್ಯಾಖ್ಯಭೂಭೃತಃ ।
ಪ್ರಲಯಾಂಬುಧಿವದ್ಘೋರಂ ಗರ್ಜಮಾನಾ ಭಯಂಕರೀ ॥ ೩ ॥

---

೧. ಮತ್ತೆ ಅಂಬರೀಷರಾಜನು ಪ್ರಶ್ನಿಸಿದನು :—ಶ್ರೇಷ್ಠದಾನವರಿಂದ ಬ್ರಹ್ಮದೇವನ ಯಜ್ಞವನ್ನು ಭಂಗಪಡಿಸಲು ಪ್ರೇರಿತಳಾದ ಆ ಸರಸ್ವತಿಯು ದೇವತೆಗಳ ವಿಷಯದಲ್ಲಿ ಕುಪಿತಳಾಗಿ ರಾಕ್ಷಸರಿಗೆಲ್ಲ ಅಭಯವನ್ನು ದಾನ ಮಾಡಿರುವಳಷ್ಟೆ!

೨. ಮುನಿಯೆ! ಅಲ್ಲಿಂದ ಮುಂದೆ ಸಹ್ಯಪರ್ವತಕ್ಕೆ ಬಂದು ಏನು ಮಾಡಿದಳು? ಸರಸ್ವತೀದೇವಿಯ ಸಮಗ್ರ ಚರಿತ್ರೆಯನ್ನು ನೀನು ಹೇಳಲು ಅರ್ಹನಾಗಿದ್ದೀ.

೩. ನಾರದಮುನಿಯು ಪ್ರತ್ಯುತ್ತರವಿತ್ತನು! ಆ ಸರಸ್ವತೀದೇವಿಯು ನದೀಪ್ರವಾಹರೂಪದಿಂದ ಸಹ್ಯಪರ್ವತದ ತಪ್ಪಲಿನಿಂದ ವೇಗವಾಗಿ ಹೊರಟು ಪ್ರಲಯಕಾಲದ ಸಮುದ್ರದಂತೆ ಘೋರವಾಗಿ ಗರ್ಜಿಸುತ್ತ ಭಯಂಕರವಾದ ರೂಪವನ್ನು ತಾಳಿದಳು.

ಪ್ರಯಯೌ ಪ್ರಾಙ್ಮುಖೀ ರೋಷಾತ್ ಕ್ಷೇತ್ರಂ ಸತ್ಯವ್ರತಂ ಪ್ರತಿ ।
ಮಹತಾ ಸ್ರೋತಸಾ ಸರ್ವಾನ್ ಸಾಚಲಗ್ರಾಮಕಾನನಾನ್ ॥ ೪ ॥

ಪ್ಲಾವಯಂತೀ ಭುವೋ ಭಾಗಾಂಸ್ತತ್ರ ತತ್ರ ಪುರಃಸ್ಥಿತಾನ್ ।
ಉತ್ಪತದ್ಭಿಃ ಪತದ್ಭಿಶ್ಚ ಕಲ್ಲೋಲೈರಚಲೈರಿವ ॥ ೫ ॥

ಸಂಕ್ಷುಬ್ಧಾರ್ಣವಸಂಕಾಶೈರ್ಘೋಷವದ್ಭಿಃ ಸಮಂತತಃ ।
ಲೇಲಿಹಾನೇವ ಸಕಲಂ ಜಗಜ್ಜನಸಮಾಕುಲಂ ॥ ೬ ॥

ಅವಲೇಪಭರಾಕ್ರಾಂತಾ ಭೀಮವೇಗಾ ಸರಸ್ವತೀ ।
ಪ್ರೇರಿತಾ ದಾನವೈಃ ಸಮ್ಯಕ್ ಪಾರಿಪ್ಲವಗತಿಸ್ತದಾ ॥ ೭ ॥

ಸಯಜ್ಞಶಾಲಂ ಸಪುರಂ ಸನಾಗಾಚಲಕಾನನಂ ।
ಸದೇವಋಷಿಗಂಧರ್ವಂ ಕ್ಷೇತ್ರಂ ಸತ್ಯವ್ರತಾಭಿಧಂ ॥ ೮ ॥

---

೪. ಮತ್ತು ತನ್ನ ಪ್ರವಾಹದ ಮಹಾವೇಗದಿಂದ ಬೆಟ್ಟ, ಗ್ರಾಮ ಮತ್ತು ಅರಣ್ಯಗಳನ್ನೆಲ್ಲ ಮುಳುಗಿಸಿ ಪೂರ್ವಮುಖವಾಗಿ ಸತ್ಯವ್ರತಕ್ಷೇತ್ರಕ್ಕೆ ಹೊರಟಳು.

೫. ಮೇಲಕ್ಕೆ ಎದ್ದು ಹಾಗೆಯೇ ಕೆಳಕ್ಕೆ ಬೀಳುವ ಪರ್ವತಗಳಂತಿರುವ ತನ್ನ ಅಲೆಗಳಿಂದ ಮುಂದುಗಡೆಯಿರುವ ಸಕಲ ಭೂಭಾಗಗಳನ್ನು ಮುಳುಗಿಸಿದಳು.

೬. ಮತ್ತು ಕ್ಷೋಭಗೊಂಡಿರುವ ಸಮುದ್ರದಂತೆ ಘೋರ್ಗರೆಯುತ್ತಿರುವ ತನ್ನ ತರಂಗಗಳಿಂದ ಸುತ್ತಲೂ ಜನರಿಂದ ವ್ಯಾಪ್ತವಾದ ಸಕಲ ಜಗತ್ತನ್ನು ಆಸ್ವಾದಿಸುವಂತೆ ಹೊರಟಳು.

೭. ದಾನವೇಂದ್ರರಿಂದ ಚನ್ನಾಗಿ ಪ್ರೇರಿತಳಾದ ಸರಸ್ವತಿಯು ಅಹಂಕಾರದ ಭರದಿಂದ ಕೂಡಿದವಳಾಗಿಯೂ ಭಯಂಕರ ವೇಗವುಳ್ಳವಳಾಗಿಯೂ ಅತಿ ಚಂಚಲವಾದ ಗತಿಯನ್ನು ಅವಲಂಬಿಸಿದಳು.

೮. ಯಜ್ಞಶಾಲೆ, ಕಾಂಚೀನಗರ, ಹಸ್ತಿಶೈಲ, ಅರಣ್ಯ, ದೇವ, ಋಷಿ, ಗಂಧರ್ವ ಇದೆಲ್ಲದರಿಂದಲೂ ಕೂಡಿದ ಪೂರ್ಣವಾದ ಸತ್ಯವ್ರತಕ್ಷೇತ್ರವನ್ನು ಭಂಗಪಡಿಸುವೆನೆಂದು ಭಾವಿಸಿದಳು.

ವೇಗೇನ ಸ್ರೋತಸೋ ಗೃಹ್ಯ ಪೂರ್ವಾಬ್ಧಿಂ ಪ್ರವಿಶಾಮ್ಯಹಂ ।
ಇತಿ ನಿಶ್ಚಿತ್ಯ ಮನಸಾ ವೇಗಾದಾಗಾತ್ ಪ್ರಕೋಪಿತಾ ॥ ೯ ॥

ತಸ್ಯಾಃ ಕಲ್ಲೋಲವೇಗೇನ ವೃಕ್ಷಾಶ್ಚೋನ್ಮೂಲಿತಾಃ ಪಥಿ ।
ವಿಧೂಯಮಾನಾಃ ಶೋಭಂತೇ ವಾಯುನೇವ ಮಹಾಂಬುದಾಃ ॥

ವೇಗೇನೋನ್ಮೂಲಿತಾಸ್ತಸ್ಯಾಃ ಪುರಗ್ರಾಮಪ್ರಜಾದಯಃ ।
ಜಂತವೋಽಪಿ ಮನುಷ್ಯಾದ್ಯಾಃ ಪೀಡ್ಯಂತೇ ಪ್ರಲಯೇ ಯಥಾ ॥ ೧೧ ॥

ಸಾ ಭೀಷಯಂತೀ ಭುವನಂ ಗರ್ಜಂತೀ ಚ ಮುಹುರ್ಮುಹುಃ ।
ವ್ಯಾಘೂರ್ಣಿತತರಂಗೌಘಾ ವ್ಯಾಕ್ಷಿಪಂತೀವ ಪರ್ವತಾನ್ ॥ ೧೨ ॥

ಕ್ವಚಿದ್ದ್ರುತತರಂ ಯಾತಿ ಕ್ವಚಿದ್ಯಾತಿ ಶನೈಃ ಶನೈಃ ।
ಕ್ವಚಿತ್ ಸಂಕುಚಿತಂ ಯಾತಿ ಕುಟಿಲಂ ಕ್ವಚಿದಾಯತಂ ॥ ೧೩ ॥

---

೯. ಎಲ್ಲವನ್ನು ಪ್ರವಾಹದ ವೇಗದಿಂದ ಕೊಚ್ಚಿಕೊಂಡು ಪೂರ್ವ ಸಮುದ್ರವನ್ನು ಸೇರುತ್ತೇನೆ, ಹೀಗೆಂದು ಮನಸ್ಸಿನಲ್ಲಿ ನಿಶ್ಚಯಿಸಿ ವೇಗದಿಂದ ಕುಪಿತಳಾಗಿ ಪ್ರವಹಿಸಿದಳು.

೧೦. ಆ ನದಿಯು ತರಂಗಗಳ ವೇಗದಿಂದ ಮಾರ್ಗದಲ್ಲಿ ಕಿತ್ತುಹಾಕಲ್ಪಟ್ಟ ವೃಕ್ಷಗಳು ಗಾಳಿಯಿಂದ ಮಹತ್ತಾದ ಮೋಡಗಳು ಚಲಿಸಿದಂತೆ ಚಲಿಸುತ್ತ ಶೋಭಿಸುತ್ತಿದ್ದವು.

೧೧. ಆ ನದಿಯ ವೇಗದಿಂದ ಸೆಳೆಯಲ್ಪಟ್ಟ ಪುರ, ಗ್ರಾಮ, ಗೋಶಾಲೆ ಮುಂತಾದುವುಗಳೂ ಮತ್ತು ಮನುಷ್ಯ ಮುಂತಾದ ಪ್ರಾಣಿಗಳೂ ಪ್ರಲಯಕಾಲದಂತೆ ಪೀಡೆಯನ್ನು ಅನುಭವಿಸಿದರು.

೧೨. ಆ ನದಿಯು ಭುವನವನ್ನು ಭಯಪಡಿಸುತ್ತಲೂ ಮತ್ತೆ ಮತ್ತೆ ಗರ್ಜಿಸುತ್ತಲೂ ಕ್ಷೋಭಹೊಂದಿದ ತರಂಗಶ್ರೇಣಿಗಳಿಂದ ಪರ್ವತಗಳನ್ನು ಕಿತ್ತುಹಾಕುವಂತೆ ಪ್ರಕಾಶಿಸಿತು.

೧೩. ಆ ನದಿಯು ಕೆಲವು ಸ್ಥಳಗಳಲ್ಲಿ ವೇಗವಾಗಿ ಹರಿಯುವುದು, ಮತ್ತೆ ಕೆಲವು ಕಡೆಯಲ್ಲಿ ಮೆಲ್ಲಮೆಲ್ಲಗೆ ಹರಿಯುವುದು, ಕೆಲವು ಪ್ರದೇಶಗಳಲ್ಲಿ ಸಂಕುಚಿತ ಮತ್ತು ವಕ್ರವಾದ ಆಕಾರವನ್ನು ಇನ್ನು ಕೆಲವು ಸ್ಥಳದಲ್ಲಿ ದೀರ್ಘವಾದ ಆಕಾರವನ್ನು ಹೊಂದಿರುವುದು.

ಸಲಿಲೇನೈವ ಸಲಿಲಂ ಸಮಾಹತ್ಯ ಕ್ವಚಿತ್ ಕ್ವಚಿತ್ ।
ಕ್ವಚಿಚ್ಚಾಚಲಸಂಘರ್ಷಾದುತ್ಕ್ಷಿಪಂತ್ಯೂರ್ಧ್ವಮಂಬರೇ ॥ ೧೪ ॥

ಏವಂ ಸಾ ಪ್ರಯಯೌ ವೇಗಾತ್ ತದಾ ಸತ್ಯವ್ರತಂ ಪ್ರತಿ ।
ಪ್ರಲಯಾಂಬುಧಿಸಂಕಾಶಾಮಾಯಾಂತೀಂ ಯೋಜನೋನ್ನತಾಂ ॥

ಯೋಜನತ್ರಯವಿಸ್ತೀರ್ಣಾಂ ಗರ್ಜಂತೀಂ ಪ್ರೇಕ್ಷ್ಯ ತಾಂ ನದೀಂ ।
ಕಿಮೇತದಿತಿ ಸಂಭ್ರಾಂತಾಃ ಸತ್ಯವ್ರತನಿವಾಸಿನಃ ॥ ೧೬ ॥

ಜನಾಃ ಸರ್ವೇ ಭಯಾಕ್ರಾಂತಾ ಯಜ್ಞಶಾಲಾಂ ಪ್ರಪೇದಿರೇ ।
ತತಸ್ತೇ ಮುನಯೋ ದೇವಾ ಯೇ ಚ ತತ್ರ ಸಭಾಸದಃ ॥ ೧೭ ॥

ಯಕ್ಷವಿದ್ಯಾಧರಾಃ ಸರ್ವೇ ಸಂಪ್ರತಸ್ಥುರ್ಭಯಾನ್ವಿತಾಃ ।
ಘೋರರೂಪಾಂ ನದೀಂ ದೃಷ್ಟ್ವಾ ಬ್ರಹ್ಮಾಣಂ ಶರಣಂ ಯಯುಃ ॥

---

೧೪. ಕೆಲವು ಭಾಗಗಳಲ್ಲಿ ವೇಗದಿಂದ ತನ್ನ ತರಂಗಗಳಿಂದ ಜಲರಾಶಿಯನ್ನು ಹೊಡೆಯುತ್ತಲೂ ಕೆಲವು ಕಡೆ ಬೆಟ್ಟದ ಘರ್ಷಣೆಯಿಂದ ಊರ್ಧ್ವಭಾಗವನ್ನು ವ್ಯಾಪಿಸಿ ಆಕಾಶಕ್ಕೆ ಹರಿಯುವಂತೆ ತೋರುತ್ತಲೂ ಇತ್ತು.

೧೫-೧೬. ಈ ರೀತಿಯಾಗಿ ಸತ್ರವ್ರತಕ್ಷೇತ್ರವನ್ನು ಕುರಿತು ಆ ನದಿಯು ವೇಗದಿಂದ ಹರಿದು ಬಂದಿತು. ಆಗ ಸತ್ಯವ್ರತಕ್ಷೇತ್ರದಲ್ಲಿ ವಾಸಮಾಡುವ ಸಮಸ್ತ ಜನರು ಪ್ರಲಯಕಾಲದಲ್ಲಿ ಉಕ್ಕಿಬಂದ ಸಮುದ್ರಗಳಂತಿರುವ, ಸತ್ಯವ್ರತಕ್ಷೇತ್ರಕ್ಕೆ ವೇಗದಿಂದ ಬರುತ್ತಲಿದ್ದ ಒಂದು ಯೋಜನ ಉನ್ನತವಾದ ಮೂರು ಯೋಜನಗಳಷ್ಟು ವಿಸ್ತಾರವಾದ ಮತ್ತು ಭಯಂಕರವಾಗಿ ಗರ್ಜಿಸುತ್ತಿದ್ದ ಆ ನದಿಯನ್ನುಕಂಡು ಇದೇನು ಎಂದು ಗಾಬರಿಗೊಂಡವರಾದರು.

೧೭. ಮತ್ತು ಸಕಲ ಜನರೂ ಭೀತರಾಗಿ ಯಜ್ಞಶಾಲೆಯೊಳಕ್ಕೆ ಪ್ರವೇಶ ಮಾಡಿದರು. ಹಾಗೆಯೇ ಅಲ್ಲಿದ್ದ ಮುನಿ, ದೇವ, ಮುಂತಾದ ಸಭಾಸದರೆಲ್ಲರೂ ಅತಿ ಭೀತಿಗ್ರಸ್ತರಾದರು.

೧೮. ಹಾಗೆ ಯಕ್ಷರು, ವಿದ್ಯಾಧರರು ಆದಿಯಾಗಿ ಸಮಸ್ತರೂ ಘೋರವಾದ ರೂಪವುಳ್ಳ ನದಿಯನ್ನು ಕಂಡು ಭಯದಿಂದ ಕೂಡಿ ಬ್ರಹ್ಮದೇವನನ್ನು ಶರಣ ಹೊಂದಿದರು.

ಪಪ್ರಚ್ಛುಶ್ಚ ಭಯೋದ್ವಿಗ್ನಾಃ ಕಾರಣಂ ಪ್ರಲಯಾಗಮೇ ।
ತ್ವಮೇವ ಸರ್ವಂ ಜಾನಾಸಿ ಬ್ರೂಹಿ ನೋ ಭುವನೇಶ್ವರ ॥ ೧೯ ॥

ಆಗತಃ ಪ್ರಲಯಃ ಕೋ ವಾ ಜಲೈಃ ಸಂಪ್ಲಾವಯನ್ ಜಗತ್ ।
ರಕ್ಷಾಸ್ಮಾನ್ ಪ್ರಲಯಾದಸ್ಮಾತ್ ತ್ವಂ ಹಿ ನಃ ಪರಮಾ ಗತಿಃ ॥ ೨೦ ॥

ಕಿಮೇತದಸುರೈಃ ಸೃಷ್ಟಾ ಮಾಯಾ ವಾ ನಃ ಪ್ರಬಾಧಿತುಂ ।
ಮಾಯಯಾಂಧತಮಃ ಸೃಷ್ಟ್ವಾ ಪುರಾಸ್ಮಾನ್ ಯೇ ಹ್ಯಬಾಧಯನ್ ॥

ತ ಏವಾದ್ಯೇದೃಶೀಂ ಮಾಯಾಮಸೃಜನ್ ವಾ ಕಿಮದ್ಭುತಾಂ ।
ಜ್ಞಾತ್ವೈತದಖಿಲಂ ಸರ್ವಾಂಸ್ತ್ರಾತುಮರ್ಹಸಿ ನೋ ಭವಾನ್ ॥ ೨೨ ॥

ಇತ್ಯುಕ್ತಸ್ತೈಸ್ತದಾ ಬ್ರಹ್ಮಾ ಯಜಮಾನೋ ಜನಾರ್ದನಂ ।
ಧ್ಯಾತ್ವಾ ವಿಜ್ಞಾಯ ತತ್ಸರ್ವಮಸುರಾಣಾಂ ವಿಚೇಷ್ಟಿತಂ ॥ ೨೩ ॥

---

೧೯. ಪ್ರಲಯಕಾಲ ಬಂದಂತೆ ಭಯಚಕಿತರಾಗಿ ಬ್ರಹ್ಮದೇವನನ್ನು ಕುರಿತು ಜಗದೀಶ್ವರನೆ! ನೀನು ಸರ್ವವನ್ನೂ ತಿಳಿದವನಾಗಿರುತ್ತೀ. ಈಗ ಪ್ರಳಯವು ಪ್ರಾಪ್ತವಾಗಲು ಕಾರಣವೇನು? ಈ ಸನ್ನಿವೇಶವೆಲ್ಲವನ್ನೂ ಹೇಳಬೇಕೆಂದು ಕೇಳಿದರು.

೨೦. ಜಗತ್ತನ್ನೆಲ್ಲ ಜಲರಾಶಿಯಲ್ಲಿ ಮುಳುಗಿಸುವ ಇದಾವ ಪ್ರಲಯವು ಪ್ರಾಪ್ತವಾಯಿತೋ, ತಿಳಿಯದು. ಈ ಪ್ರಲಯದ ಭೀತಿಯಿಂದ ನಮ್ಮನ್ನು ರಕ್ಷಿಸು. ನೀನೇ ನಮಗೆ ಉತ್ತಮವಾದ ಶರಣವು.

೨೧. ಅಥವಾ ಹಿಂದೆ ಮಾಯೆಯಿಂದ ಅಂಧಕಾರವನ್ನು ಸೃಷ್ಟಿಸಿ ನಮ್ಮನ್ನು ಬಾಧಿಸಿದಂತೆ ಈಗ ಈ ನದಿಯ ಪ್ರವಾಹವು ಮತ್ತೆ ನಮ್ಮನ್ನು ಪೀಡಿಸಲು ಅಸುರರಿಂದ ಸೃಷ್ಟಿಸಲ್ಪಟ್ಟ ಮಾಯೆಯಾಗಿರಬಹುದೆ?

೨೨. ಆ ಅಸುರರೇ ಈಗ ಈ ವಿಧವಾದ ಮಾಯೆಯನ್ನು ಸೃಜಿಸಿದರೆ! ಇದೇನು ಅದ್ಭುತವು! ಇದರ ಸಮಸ್ತ ತತ್ತ್ವವನ್ನೂ ತಿಳಿದು ನೀನು ನಮ್ಮನ್ನು ರಕ್ಷಿಸಲು ಅರ್ಹನಾಗಿರುತ್ತೀಯೆ.

೨೩. ಯಜಮಾನನಾದ ಬ್ರಹ್ಮನು ಈ ವಿಧವಾಗಿ ಸಭಾಸದರಿಂದ ಹೇಳಲ್ಪಟ್ಟವನಾಗಿ ಆಗ ಮನದಲ್ಲಿ ವಿಷ್ಣುಪರಮಾತ್ಮನನ್ನು ಧ್ಯಾನಿಸಿ ಅದೆಲ್ಲವೂ ಅಸುರರ ಚೇಷ್ಟೆಯೆಂಬುದಾಗಿ ತಿಳಿದನು.

ದೃಷ್ಟ್ವಾ ವಾಣೀಂ ಚ ಸಂಕ್ರುದ್ಧಾಂ ಮುಖಭಂಗಾರ್ಥಮಾಗತಾಂ ।
ವಿಜ್ಞಾಯ ಪ್ರಾಣಿಪೀಡಾಂ ಚ ಚಿಂತಯಾಮಾಸ ಪದ್ಮಭೂಃ ॥ ೨೪ ॥

ಯದ್ಯೇತದ್ವಾರಯಿಷ್ಯಾಮಿ ಶಾಪಂ ದತ್ವಾ ಪ್ರಕೋಪಿತಃ ।
ಕೋಪಸ್ಯ ನ ಹಿ ಕಾಲೋಽಯಂ ದೀಕ್ಷಿತಸ್ಯ ಮಖೇ ಮಮ ॥ ೨೫ ॥

ತಸ್ಮಾದ್ವ್ರಜಾಮಿ ಶರಣಂ ದೇವದೇವಂ ರಮಾಪತಿಂ ।
ಇತಿ ನಿಶ್ಚಿತ್ಯ ಮನಸಾ ಬದ್ಧಾಂಜಲಿಪುಟೋಽಬ್ಜಭೂಃ ॥ ೨೬ ॥

ಅನನ್ಯಗತಿರೀಶಾನಂ ಕೇಶವಂ ಶರಣಂ ಯಯೌ ।
ಹೃತ್ಪುಂಡರೀಕಮಧ್ಯಸ್ಥಂ ಯೋಗಿಧ್ಯೇಯಂ ನಿರಂಜನಂ ॥ ೨೭ ॥

ತದಾ ತುಷ್ಟಾವ ವರದಂ ಪ್ರಣತಾರ್ತಿಹರಂ ಹರಿಂ ।
ಪಾಹಿ ಮಾಂ ಪುಂಡರೀಕಾಕ್ಷ ಪ್ರಣತಂ ಶರಣಾಗತಂ ॥ ೨೮ ॥

---

೨೪. ವಾಣಿಯು ಕುಪಿತಳಾಗಿ ಯಜ್ಞವನ್ನು ಭಂಜನಮಾಡುವುದಕ್ಕೋಸ್ಕರ ಸಂಭವಿರುವುದನ್ನೂ ಅನೇಕ ಪ್ರಾಣಿಗಳಿಗೆ ಅದರಿಂದ ಪೀಡೆಯಾಗುತ್ತಿರುವುದನ್ನೂ ನೋಡಿ ಬ್ರಹ್ಮದೇವನು ಚಿಂತಿಸಿದನು.

೨೫. ನಾನು ಕುಪಿತನಾಗಿ ಶಾಪವನ್ನು ಕೊಟ್ಟು ಪ್ರತೀಕಾರದಿಂದ ಇದನ್ನು ನಿವಾರಿಸಬಹುದು. ಆದರೆ ಯಜ್ಞದಲ್ಲಿ ದೀಕ್ಷೆಯ ವಿಧಿಯನ್ನು ವಹಿಸಿರುವ ನನಗೆ ಈ ಸಮಯದಲ್ಲಿ ಕೋಪಗೊಳ್ಳುವುದು ಉಚಿತವಲ್ಲ.

೨೬. ಆದ್ದರಿಂದ ದೇವೋತ್ತಮನಾದ, ಲಕ್ಷ್ಮೀಪತಿಯನ್ನು ಶರಣಹೊಂದುತ್ತೇನೆ. ಹೀಗೆಂದು ಮನಸ್ಸಿನಲ್ಲಿ ನಿಶ್ಚಯಿಸಿ ಬ್ರಹ್ಮನು ಕೈಗಳಿಂದ ಅಂಜಲಿಯನ್ನು ಕಟ್ಟಿಕೊಂಡು ನಮಸ್ಕರಿಸಿದನು.

೨೭. ಆ ಅನರ್ಥವನ್ನು ಪರಿಹರಿಸಲು ಬೇರೊಂದು ಗತಿಯಿಲ್ಲದೆ ಜಗದೀಶ್ವರನಾದ ವಿಷ್ಣುವನ್ನು ಶರಣಹೊಂದಿದನು. ಮತ್ತು ಯೋಗಿಗಳಿಂದ ಹೃದಯಪುಂಡರೀಕಮಧ್ಯದಲ್ಲಿ ಧ್ಯಾನಮಾಡಲ್ಪಟ್ಟವನೂ, ನಿರ್ದೋಷಿಯೂ ಆಗಿರುವನೆಂದು ಪರಮಾತ್ಮನ ಗುಣಗಳನ್ನು ಭಜನಮಾಡಿದನು.

೨೮. ಮತ್ತು ಆಗ ಭಕ್ತರ ಕಷ್ಟಗಳನ್ನು ಪರಿಹರಿಸುವ, ವರದನಾದ ಹರಿಯನ್ನು ಸ್ತುತಿಸಿದನು. ಪುಂಡರೀಕಾಕ್ಷನೇ ಶರಣಾಗತನಾದ ನನ್ನನ್ನು ಕಾಪಾಡು.

ಪಿತಾ ಮಾತಾ ಚ ಬಂಧುಶ್ಚ ತ್ವಮೇವ ಮಮ ಕೇಶವ ।
ಸುಹೃದ್ಧನಾನಿ ರತ್ನಾನಿ ವಿವಿಧಾನಿ ತ್ವಮೇವ ಮೇ ॥ ೨೯ ॥

ದುಃಖಶೋಕಭಯಾರ್ತಾನಾಂ ತ್ವಮೇವ ಗತಿರವ್ಯಯ ।
ತ್ವಾಮೇವ ಶರಣಂ ಯಾಂತಿ ಯೋಗಿನೋ ವೀತಕಲ್ಮಷಾಃ ॥ ೩೦ ॥

ನೈವ ತ್ವದ್ಭಕ್ತಿಯುಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।
ತತೋ ಮಾಂ ರಕ್ಷ ದೇವೇಶ ಭಯಾದಸ್ಮಾದುಪಸ್ಥಿತಾತ್ ॥ ೩೧ ॥

ಇತಿ ಬದ್ಧಾಂಜಲಿಂ ಮೂರ್ಧ್ನಿ ಸಂಮೀಲ್ಯ ನಯನೇ ಉಭೇ ।
ಮನಸಾ ದೇವಮೀಶಾನಂ ಪ್ರಧ್ಯಾಯತಿ ವಿಧಾತರಿ ॥ ೩೨ ॥

ತತ್ರ ಸರ್ವೇಷು ಭೀತೇಷು ಕ್ಷೇತ್ರೇ ಸತ್ಯವ್ರತೇ ತದಾ ।
ಆವಿರಾಸೀಜ್ಜಗನ್ನಾಥಸ್ತಾಂ ನಿರೋದ್ಧುಂ ಸರಸ್ವತೀಂ ॥ ೩೩ ॥

ರಕ್ಷಣಾರ್ಥಂ ಚ ಯಜ್ಞಸ್ಯ ಭಕ್ತಾನಾಮಿಷ್ಟದೋ ಹರಿಃ ।
ಸತ್ಯವ್ರತಸ್ಯ ಕ್ಷೇತ್ರಸ್ಯ ಸೀಮಾಂತೇ ಪಂಚಯೋಜನೇ ॥ ೩೪ ॥

---

೨೯. ಕೇಶವನೆ! ನೀನೇ ನನಗೆ ತಂದೆ, ತಾಯಿ, ಬಂಧು, ಮಿತ್ರ, ಧನ ವಿವಿಧ ರತ್ನರಾಶಿ-ಮುಂತಾದ ಸಕಲ ಪರಿವಾರವೂ ಆಗಿರುತ್ತೀ.

೩೦. ಜನ್ಮನಾಶರಹಿತನೆ! ನೀನು ದುಃಖ-ಶೋಕ-ಭಯಗಳಿಂದ ಪೀಡಿತರಾದವರಿಗೆ ರಕ್ಷಕನು, ಪಾಪಸಂಪರ್ಕವಿಲ್ಲದ ಯೋಗಿಗಳು ನಿನ್ನನ್ನು ಶರಣಹೊಂದುವರು.

೩೧. ನಿನ್ನಲ್ಲಿ ಭಕ್ತಿಯನ್ನು ಇಟ್ಟ ಮಹಾತ್ಮರಿಗೆ ಯಾವಾಗಲೂ ಅಶುಭವು ಸಂಭವಿಸುವುದಿಲ್ಲ. ದೇವೇಶನೆ! ಆದುದರಿಂದ ಈಗ ಬಂದಿರುವ ಈ ವಿಪತ್ತಿನ ಭಯದಿಂದ ನನ್ನನ್ನು ಪಾರುಮಾಡು.

೩೨. ಬ್ರಹ್ಮನು ಈ ರೀತಿಯಾಗಿ ಶಿರಸ್ಸಿನಲ್ಲಿ ಅಂಜಲಿಯನ್ನು ಕಟ್ಟಿಕೊಂಡು ಎರಡು ನೇತ್ರಗಳನ್ನು ಮುಚ್ಚಿಕೊಂಡು ಜಗದೀಶ್ವರನನ್ನು ಮನಸ್ಸಿನಲ್ಲಿ ಧ್ಯಾನಿಸಿದನು.

೩೩. ಆಗ ಸತ್ಯವ್ರತಕ್ಷೇತ್ರದಲ್ಲಿ ಸರ್ವರೂ ಭೀತರಾಗಿರಲು ಜಗತ್ಪತಿಯಾದ ವಿಷ್ಣುವು ಆ ಸರಸ್ವತೀ ನದಿಯನ್ನು ತಡೆಯಲು ಆವಿರ್ಭವಿಸಿದನು.

೩೪. ಭಕ್ತರ ಇಷ್ಟಾರ್ಥವನ್ನು ನೆರವೇರಿಸುವ ಹರಿಯು ಯಜ್ಞವನ್ನು ರಕ್ಷಿಸಲೋಸ್ಕರ ಸತ್ಯವ್ರತಕ್ಷೇತ್ರಕ್ಕೆ ಐದು ಯೋಜನ ದೂರದ ಗಡಿಯ ಸಮೀಪದಲ್ಲಿ ಆವಿರ್ಭವಿಸಿದನು.

ಪ್ರತೀಚ್ಯಾಂ ಹಸ್ತಿಶೈಲಸ್ಯ ದಿಶಿ ಬೀಜಗಿರೇರಧಃ ।
ದಕ್ಷಿಣೋತ್ತರತಸ್ತಿರ್ಯಕ್ ಶಿಶ್ಯೇ ಸೇತುರಿವಾದ್ಭುತಃ ॥ ೩೫ ॥

ಶಂಖಚಕ್ರಧರಃ ಶ್ರೀಮಾನ್ ಪೀತವಾಸಾ ಜಗತ್ಪತಿಃ ।
ಶಯಾನಃ ಶೇಷಪರ್ಯಂಕೇ ದದೃಶೇಽಚಲಸನ್ನಿಭಃ ॥ ೩೬ ॥

ತಂ ದೃಷ್ಟ್ವಾಽಚಲಸಂಕಾಶಂ ಶಯಾನಂ ಹರಿಮಗ್ರತಃ ।
ನಿರ್ವೇಗಾ ಸ್ತಂಭಿತಾ ಚಾಭೂನ್ಮುಹೂರ್ತಂ ಸಾ ಸರಸ್ವತೀ ॥ ೩೭ ॥

ಬೀಜಾದ್ರೇರುತ್ತರೇ ದೇಶೇ ಯತಃ ಶಿಶ್ಯೇ ಜನಾರ್ದನಃ ।
ಅತಸ್ತಂ ಶಯನೇಶಾಖ್ಯಂ ಪ್ರವದಂತಿ ಮನೀಷಿಣಃ ॥ ೩೮ ॥

ತತಃ ಸರಸ್ವತೀ ಸ್ಥಿತ್ವಾ ಕ್ಷಣಂ ತತ್ರ ವ್ಯಚಿಂತಯತ್ ।
ಮಾಂ ನಿರೋದ್ಧುಮಯಂ ಶೇತೇ ಬ್ರಹ್ಮಣಾ ಸಂಸ್ತುತೋ ಹರಿಃ॥ ೩೯ ॥

---

೩೫. ಹಸ್ತಿಶೈಲದ ಪಶ್ಚಿಮ ದಿಗ್ಭಾಗದಲ್ಲಿ ಬೀಜಗಿರಿಯೆಂಬ ಪರ್ವತದ ಕೆಳ ಭಾಗದಲ್ಲಿ ಅದ್ಭುತವಾದ ಒಂದು ಸೇತುವೆಯಂತೆ ದಕ್ಷಿಣದಿಂದ ಉತ್ತರಕ್ಕೆ ಅಡ್ಡಲಾಗಿ ಮಲಗಿದನು.

೩೬. ಹಸ್ತಗಳಿಂದ ಶಂಖ-ಚಕ್ರಗಳನ್ನು ಧರಿಸಿರುವ, ಪೀತಾಂಬರವನ್ನು ಉಟ್ಟುಕೊಂಡಿರುವ ಮತ್ತು ಲಕ್ಷ್ಮೀ ಸಹಿತನಾದ ಜಗದೀಶ್ವರನು ಆದಿಶೇಷನೆಂಬ ಮಂಚದ ಮೇಲೆ ಮಲಗಿ ದೊಡ್ಡ ಪರ್ವತದಂತೆ ಪ್ರಕಾಶಿಸಿದನು.

೩೭. ಆ ಸರಸ್ವತೀನದಿಯು ಪರ್ವತದಂತೆ ಮುಂದುಗಡೆಯಲ್ಲಿ ಶಯನವಮಾಡಿದ ಆ ಹರಿಯನ್ನು ನೋಡಿ ವೇಗಶೂನ್ಯಳಾಗಿ ಮುಹೂರ್ತ ಕಾಲದವರೆಗೆ ಸ್ತಬ್ಧವಾಯಿತು.

೩೮. ಬೀಜಪರ್ವತದ ಉತ್ತರದೇಶದಲ್ಲಿ ವಿಷ್ಣುಪರಮಾತ್ಮನು ಶಯನ ಮಾಡಿರುವುದರಿಂದ ವಿದ್ವಾಂಸರು ಆ ಮೂರ್ತಿಯನ್ನು ಶಯನೇಶ್ವರನೆಂದು ಕರೆಯುತ್ತಾರೆ.

೩೯. ಆ ಮೇಲೆ ಆ ಸ್ಥಳದಲ್ಲಿ ಸರಸ್ವತಿಯು ಕ್ಷಣ ಕಾಲ ಸುಮ್ಮನೆ ನಿಂತು ಈ ರೀತಿಯಾಗಿ ಚಿಂತಿಸಿದಳು. ಬ್ರಹ್ಮನಿಂದ ಸ್ತುತಿಸಲ್ಪಟ್ಟವನಾಗಿ ಹರಿಯು ನನ್ನನ್ನು ತಡೆಯಲೋಸ್ಕರ ಇಲ್ಲಿ ಶಯನಮಾಡಿರುವನು.

ಮಯಾ ವಂಚಯಿತವ್ಯೋಽಯಮಿತಿ ನಿಶ್ಚಿತ್ಯ ಚಾಂಜಸಾ ।
ಅದೃಶ್ಯಾಭೂತ್ತದಾ ಭೂಮೌ ಸದ್ಯಃ ಸಂಶೋಷಿತೋದಕಾ ॥ ೪೦ ॥

ಅದೃಷ್ಟ್ವಾ ತತ್ರ ದೈತೇಯಾ ನದೀಂ ಸಂಶೋಷಿತೋದಕಾಂ ।
ಶಯಾನಂ ಚ ಹರಿಂ ದೃಷ್ಟ್ವಾ ಪಾತಾಲಂ ದದ್ರುವುರ್ಭಯಾತ್ ॥ ೪೧ ॥

ಯಾಽಭೂದಂತರ್ಹಿತಾ ಭೂಮ್ಯಾಂ ಶಯನೇಶಸ್ಯ ಪಶ್ಚಿಮೇ ।
ಸಾ ನದೀ ಶಯನೇಶಾನಂ ವಂಚಯಿತ್ವಾ ತದಾ ಹರಿಂ ॥ ೪೨ ॥

ಅಂತರ್ಭೂಮಿಚರಾ ಭೂತ್ವಾ ಶಯಾನಸ್ಯ ಹರೇರಧಃ ।
ಮಾರ್ಗೇಣ ತಂ ಸಮುಲ್ಲಂಘ್ಯ ನಿರ್ಗತಾ ತಸ್ಯ ಪೂರ್ವತಃ ॥ ೪೩ ॥

ಭಿತ್ವಾ ಭೂಮಿಂ ಪುನರ್ವೇಗಾದ್ವಿನಿಷ್ಕ್ರಮ್ಯ ಮಹಾನದೀ ।
ಕ್ಷಣಾತ್ ಸತ್ಯವ್ರತಸ್ಯಾಂತಃ ಪ್ರವಿವೇಶ ಸರಸ್ವತೀ ॥ ೪೪ ॥

---

೪೦. ಈಗ ನಾನು ಈ ಹರಿಯನ್ನು ಹೇಗಾದರೂ ಶೀಘ್ರವಾಗಿ ವಂಚಿಸಬೇಕೆಂದು ಮನದಲ್ಲಿ ನಿಶ್ಚಯಿಸಿ ಕೂಡಲೇ ಭೂಮಿಯಲ್ಲಿ ಒಣಗಿಹೋದ ಜಲವುಳ್ಳವಳಾಗಿ ಅದೃಶ್ಯಳಾದಳು.

೪೧. ಅಲ್ಲಿ ದೈತ್ಯರು ಜಲವೆಲ್ಲವೂ ಒಣಗಿಹೋಗಿ ನದಿಯು ಅದೃಶ್ಯವಾದ್ದರಿಂದ ಅದನ್ನು ಕಾಣದೇ ಹರಿಯು ಅಡ್ಡಲಾಗಿ ಶಯನಮಾಡಿರುವುದನ್ನು ಕಂಡು ಭಯದಿಂದ ಪಾತಾಲಕ್ಕೆ ಓಡಿದರು.

೪೨. ಶಯನೇಶ್ವರನಿರುವ ಪಶ್ಚಿಮಭಾಗದಲ್ಲಿ ನೆಲದಲ್ಲಿ ಅಂತರ್ಧಾನಹೊಂದಿದ ನದಿಯು ಆಗ ಶಯನೇಶನಾದ ಹರಿಯನ್ನು ವಂಚಿಸಿತು.

೪೩. ಅಲ್ಲಿ ಶಯನಮಾಡಿದ ಹರಿಯ ಅಧೋಭಾಗದಲ್ಲಿ ಭೂಮಿಯ ಅಂತರ್ಭಾಗದಲ್ಲಿ ಗುಪ್ತಗಾಮಿಯಾಗಿ ಹರಿದು ಅಷ್ಟು ಭಾಗದ ಮಾರ್ಗವನ್ನು ಅತಿಕ್ರಮಿಸಿ ನದಿಯು ಶಯನೇಶನ ಪೂರ್ವಭಾಗದಲ್ಲಿ ಮತ್ತೆ ಆವಿರ್ಭವಿಸಿತು.

೪೪. ಮತ್ತೆ ಅಲ್ಲಿ ಭೂಮಿಯನ್ನು ಒಡೆದು ಮೇಲಕ್ಕೆ ಎದ್ದು ಬಂದು ಕ್ಷಣದಿಂದ ಮಹಾನದಿಯ ರೂಪವಾಗಿ ಸರಸ್ವತಿಯು ಸತ್ಯವ್ರತಕ್ಷೇತ್ರವನ್ನು ಪ್ರವೇಶಿಸಿದಳು.

ತದದ್ಭುತಂ ಸರಸ್ವತ್ಯಾ ದದೃಶುಃ ಸರ್ವತಃ ಸುರಾಃ ।
ಯಸ್ಮಾದಂತರ್ಹಿತಾ ಭೂತ್ವಾ ಸಾ ಸದ್ಯಃ ಪುನರುತ್ಥಿತಾ ॥ ೪೫ ॥

ಯತ್ರೋತ್ಥಿತಾಽಭವದ್ವೇಗಾದ್ಧರಾಂ ಭಿತ್ತ್ವಾ ಸರಸ್ವತೀ ।
ತತ್ರ ತೀರ್ಥಮಭೂದ್ರಾಜನ್ ನಾಮ್ನಾ ಸಾರಸ್ವತಂ ಶುಭಂ ॥ ೪೬ ॥

ಶಯನೇಶಸ್ಯ ಚೈಶಾನ್ಯೇ ಪ್ರದೇಶೇ ಪುಣ್ಯವರ್ಧನಂ ।
ತತಃ ಸರಸ್ವತೀಂ ವೀಕ್ಷ್ಯ ಶಯನೇಶೋ ಹರಿಸ್ತದಾ ॥ ೪೭ ॥

ಕಥಂ ಮಾಂ ವಂಚಯಿತ್ವೇಯಮಿತಃ ಪ್ರಾಚೀಂ ದಿಶಂ ಗತಾ ।
ಭೂಮ್ಯಾಮಂತರ್ಹಿತಾ ದೃಷ್ಟಾ ಮಮ ಪಶ್ಚಿಮತೋಽಧುನಾ ॥ ೪೮ ॥

ಸತ್ಯವ್ರತಂ ಪ್ಲಾವಯಂತೀ ಪ್ರಸಿದ್ಧಾ ಕಿಲ ವೇಗತಃ ।
ನಿಹಿಂಸಂತೀ ಜನಾನ್ ಯಾವದ್ಯಜ್ಞಶಾಲಾಂ ವಿಶೇದಿಯಂ ॥ ೪೯ ॥

---

೪೫. ದೇವತೆಗಳು ಸುತ್ತಲೂ ನಿಂತು ಸರಸ್ವತಿಯ ಅದ್ಭುತಕರ್ಮವನ್ನು ನೋಡಿದರು, ಮೊದಲು ಏನೂ ಕಾಣದ ಹಾಗೆ ಅದೃಶ್ಯವಾಗಿ ಮತ್ತೆ ಮಹಾನದಿಯಾಗಿ ಉದ್ಭವಿಸಿದುದು ಮಹಾದ್ಭುತವಾಯಿತು.

೪೬. ರಾಜನೆ! ಸರಸ್ವತೀನದಿಯು ಭೂಮಿಯನ್ನು ಭೇದಿಸಿ ವೇಗದಿಂದ ಆವಿರ್ಭಾವಹೊಂದಿರುವ ಪ್ರದೇಶದಲ್ಲಿ ಸಾರಸ್ವತವೆಂಬ ಒಂದು ಮಂಗಳಕರವಾದ ತೀರ್ಥವು ಉಂಟಾಯಿತು.

೪೭. ಪುಣ್ಯವನ್ನು ವೃದ್ಧಿಮಾಡುವ ಈ ತೀರ್ಥವು ಶಯನೇಶ್ವರನ ಈಶಾನ್ಯದಿಕ್ಕಿನಲ್ಲಿ ಇರುವುದು, ಆಗ ಶಯನೇಶನಾದ ಹರಿಯು ಮತ್ತೆ ಆವಿರ್ಭಾವ ಹೊಂದಿದ ಸರಸ್ವತಿಯನ್ನು ಕಂಡನು.

೪೮. ಈ ಸರಸ್ವತಿಯು ನನ್ನನ್ನು ವಂಚಿಸಿ ಇಲ್ಲಿಂದ ಪೂರ್ವದಿಕ್ಕಿಗೆ ಹೇಗೆ ಹೋದಳು, ಈಗ ತಾನೆ ನನಗೆ ಪಶ್ಚಿಮದಿಕ್ಕಿನಲ್ಲಿ ಭೂಮಿಯಲ್ಲಿ ಅಂತರ್ಗತಳಾದುದನ್ನು ನೋಡಿದೆನು.

೪೯. ಈಗ ಸತ್ಯವ್ರತಕ್ಷೇತ್ರವನ್ನು ಕೊಚ್ಚಿಕೊಂಡು ಹೋಗುವಂತೆ ವೇಗದಿಂದ ಮತ್ತೆ ಕಾಣಿಸುತ್ತಿರುವಳು, ಇವಳು ಯಜ್ಞಶಾಲೆಯನ್ನು ಪ್ರವೇಶಿಸಿ ಜನಗಳಿಗೆ ಹಿಂಸೆಯನ್ನು ಉಂಟುಮಾಡಬಹುದು.

ತಾವದೇಷಾ ನಿರೋದ್ಧವ್ಯಾ ಮಯಾ ಯಜ್ಞಂ ಹಿ ರಕ್ಷತಾ ।
ಇತಿ ಸಂಚಿಂತ್ಯ ಮನಸಾ ತ್ವರಮಾಣೋ ಹರಿಸ್ತದಾ ॥ ೫೦ ॥

ಸ್ವಯಂ ಚ ಲೀಲಾಂ ದೇವೇಶಃ ಸರಸ್ವತ್ಯೈ ನಿದರ್ಶಯನ್ ।
ಸರಸ್ವತ್ಯಾಶ್ಚ ಪುರತಃ ಪುನಃ ಶಿಶ್ಯೇ ಜನಾರ್ದನಃ ॥ ೫೧ ॥

ಪಶ್ಚಿಮೇ ಹಸ್ತಿಶೈಲಸ್ಯ ಪ್ರದೇಶೇ ಕ್ರೋಶಪಂಚಕೇ ।
ಸ ಶೇಷಶಯನೋ ಭೂತ್ವಾ ದದೃಶೇ ಗಿರಿರಾಡಿವ ॥ ೫೨ ॥

ಪ್ರಲಯಾಬ್ಧಿಸಮಾಂ ರೋದ್ಧುಂ ನದೀಂ ಶಿಶ್ಯೇ ಯತೋ ಹರಿಃ ।
ಅತಸ್ತಮಾಹುರ್ಮನುಜಾ ನಾಮ್ನಾ ಪ್ರಲಯರೋಧಕಂ ॥ ೫೩ ॥

ಸರಸ್ವತೀ ಹರಿಂ ದೃಷ್ಟ್ವಾ ಶಯಾನಂ ಪುರತಃ ಪುನಃ ।
ತಾಂ ಚ ದೃಷ್ಟ್ವಾ ಹರೇರ್ಲೀಲಾಮಾಸೀದಂತರ್ಹಿತಾ ಪುನಃ ॥ ೫೪ ॥

---

೫೦. ಆದರೆ ನಾನು ಅಷ್ಟರಲ್ಲಿಯೇ ಅಲ್ಲಿ ನಡೆಯುತ್ತಲಿರುವ ಯಜ್ಞವನ್ನು ರಕ್ಷಿಸುವುದಕ್ಕೋಸ್ಕರ ಅವಳನ್ನು ತಡೆಯಬೇಕು, ಹೀಗೆಂದು ಮನಸ್ಸಿನಲ್ಲಿ ಯೋಚಿಸಿ ಹರಿಯು ಅದಕ್ಕೆ ತ್ವರೆಪಟ್ಟನು.

೫೧. ದೇವೇಶ್ವರನಾದ ವಿಷ್ಣುವು ಸರಸ್ವತಿಗೆ ತನ್ನ ಲೀಲೆಯನ್ನು ತೋರಿಸುತ್ತ ಸರಸ್ವತೀನದಿಯ ಮುಂಭಾಗದಲ್ಲಿ ಬಂದು ಮತ್ತೆ ಶಯನಮಾಡಿದನು.

೫೨. ಹಸ್ತಿಶೈಲದ ಐದು ಹರದಾರಿಯ ದೂರದಲ್ಲಿರುವ ಪಶ್ಚಿಮಭಾಗದ ಒಂದು ಪ್ರದೇಶದಲ್ಲಿ ಶೇಷಶಯನನಾಗಿ ಹರಿಯು ಪರ್ವತರಾಜನಂತೆ ಪ್ರಕಾಶಿಸಿದನು.

೫೩. ಹರಿಯು ಪ್ರಲಯಕಾಲದ ಸಮುದ್ರಕ್ಕೆ ಸಮಾನವಾದ ನದಿಯನ್ನು ತಡೆಯಲು ಅಡ್ಡಲಾಗಿ ಶಯನಮಾಡಿದ್ದರಿಂದ ಆ ಹರಿಯ ಮೂರ್ತಿಯನ್ನು ಮಾನವರು ಪ್ರಲಯ ರೋಧಕೇಶ್ವರನನ್ನಾಗಿ ವ್ಯವಹರಿಸುತ್ತಾರೆ.

೫೪. ಸರಸ್ವತಿಯು ತನ್ನ ಮುಂದೆ ಮತ್ತೆ ಮಲಗಿರುವ ಆ ಹರಿಯ ಲೀಲೆಯನ್ನು ನೋಡಿ ಮತ್ತೆ ಅದೃಶ್ಯಳಾದಳು.

ಚಿಂತಯಾಮಾಸ ಸಂಹೃಷ್ಟಾ ಭೂಮಾವಂತರ್ಹಿತಾ ಸ್ಥಿತಾ ।
ಅತ್ರಾಶ್ವಮೇಧಂ ವಿಧಿವತ್ ಕೃತ್ವಾ ಕ್ಷೇತ್ರೇ ಸುಪಾವನೇ ॥ ೫೫ ॥

ದ್ರಷ್ಟುಮಿಚ್ಛತಿ ಯಂ ದೇವಂ ಶ್ರಮೇಣ ಕಮಲಾಸನಃ
ತಮೇವಾನಶ್ವಮೇಧಾಹಮಪಶ್ಯಂ ಹರಿಮವ್ಯಯಂ ॥ ೫೬ ॥

ದೈತೇಯೈಶ್ಚೋದಿತಾಯಾ ಮೇ ಯಜ್ಞಘ್ನ್ಯಾ ಅಪಿ ಕೇಶವಃ ।
ಆಗತಾಯಾಃ ಪ್ರಸನ್ನೋಽಭೂತ್ಯದ್ಯಃ ಕ್ಷೇತ್ರಾನುಭಾವತಃ ॥ ೫೭ ॥

ಸತ್ಯಂ ಸತ್ಯವ್ರತಕ್ಷೇತ್ರಂ ವಿಷ್ಣುಪ್ರಿಯಮಸಂಶಯಂ ।
ಯದ್ರೋಷಾದಾಗತಾಯಾ ಮೇ ರೋಷೋಽಸ್ಯಾಸೀನ್ಮಖೋಪಮಃ ॥

ಅಹಂ ಪೂರ್ವಂ ಸಮಾಹೂತಾ ಯಜ್ಞಾರ್ಥಂ ಬ್ರಹ್ಮಸೂನುನಾ ।
ಯದ್ಯಹಂ ಚಾಗತಾತ್ರ ಸ್ಯಾಂ ನೈವ ಪಶ್ಯಾಮಿ ಕೇಶವಂ ॥ ೫೯ ॥

---

೫೫. ಆಗ ಸರಸ್ವತಿಯು ಭೂಮಿಯಲ್ಲಿ ಅದೃಶ್ಯಳಾಗಿ ನಿಂತು ಈ ರೀತಿಯಾಗಿ ಚಿಂತಿಸಿದಳು, ಈ ಪವಿತ್ರವಾದ ಕ್ಷೇತ್ರದಲ್ಲಿ ವಿಧಿಯಿಂದ ಕೂಡಿ ಬ್ರಹ್ಮನು ಅಶ್ವಮೇಧ ಯಾಗವನ್ನು ಆಚರಿಸುತ್ತಿರುವನಲ್ಲವೆ !

೫೬. ಆದರೆ ಬ್ರಹ್ಮನು ಅಶ್ವಮೇಧಯಾಗವನ್ನು ಆಚರಿಸಿ ವಿಶೇಷವಾದ ಶ್ರಮವನ್ನು ಅನುಭವಿಸಿ ಯಾವ ಪರಮಾತ್ಮನನ್ನು ನೋಡಬೇಕೆಂದಿರುವನೋ ಅಂತಹ ಹರಿಯನ್ನು ನಾನು ಅಶ್ವಮೇಧಯಾಗವನ್ನು ಆಚರಿಸದೆ ನೋಡಿದೆನು.

೫೭. ದೈತ್ಯರಿಂದ ಪ್ರೇರೇಪಿಸಲ್ಪಟ್ಟು ಯಜ್ಞಘ್ನಳಾಗಿ ಪಾಪಕೃತ್ಯವನ್ನು ನಾನು ಆಚರಿಸಿದರೂ ಈ ಕ್ಷೇತ್ರಕ್ಕೆ ಬಂದಕೂಡಲೆ ಕ್ಷೇತ್ರದ ಮಹಿಮೆಯಿಂದ ಹರಿಯು ನನಗೆ ಪ್ರಸನ್ನನಾದನು.

೫೮. ಈ ಸತ್ಯವ್ರತಕ್ಷೇತ್ರವು ವಿಷ್ಣುವಿಗೆ ಅತ್ಯಂತ ಪ್ರಿಯವೆಂಬುದು ನಿಸ್ಸಂದೇಹವಾಗಿ ಸತ್ಯವಾದ ಅಂಶವು. ಇಲ್ಲಿಗೆ ರೋಷದಿಂದ ಹರಿದು ಬಂದ ನನಗೆ ರೋಷವು ಕೂಡ ಯಾಗಕ್ಕೆ ಸಮಾನವಾಯಿತು.

೫೯. ಬ್ರಹ್ಮನಪುತ್ರನಾದ ವಸಿಷ್ಠಮುನಿಯಿಂದ ಮೊದಲು ಇಲ್ಲಿ ನಡೆಯುವ ಯಜ್ಞಕ್ಕೆ ಬರಬೇಕೆಂದು ಕರೆಯಲ್ಪಟ್ಟಿದ್ದೆನು. ಒಂದು ವೇಳೆ ಇಲ್ಲಿಗೆ ಯಜ್ಞಕ್ಕೆ ಬಂದಿದ್ದರೆ ನಾನು ಹರಿಯ ಸಾಕ್ಷಾತ್ಕಾರವನ್ನು ಹೊಂದುತ್ತಿರಲಿಲ್ಲ.

ವಿದಿತ್ವಾ ಕಿಲ ಮಾಮದ್ಯ ಮಖಭಂಗಾರ್ಥಮುದ್ಯತಾಂ ।
ದರ್ಶಯಾಮಾಸ ಮೇ ರೂಪಂ ಕೃಪಯಾ ಪುರುಷೋತ್ತಮಃ ॥ ೬೦ ॥

ಮಯಾ ದುರ್ಮೇಧಯಾ ದೃಷ್ಟೋ ಹರಿಃ ಸ್ರೋತಸ್ಸ್ವರೂಪಯಾ ।
ನೈವಾಸೀದ್ವಂದಿತೋ ಭಕ್ತ್ಯಾ ನ ಚ ವಾಚಾಪಿ ಸಂಸ್ತುತಃ ॥ ೬೧ ॥

ನ ಚ ಪ್ರಾಯತ್ಯತ ಮಯಾ ಸ್ತೋತುಂ ವಾ ವಂದಿತುಂ ತಥಾ ।
ತಸ್ಮಾದಂತರ್ಹಿತೈವಾಹಮಿತೋ ಗತ್ವಾ ಮಖಾಲಯಂ ॥ ೬೨ ॥

ತತ್ರಾಹಂ ಕುಂಡಮಧ್ಯಾತ್ತು ಬಹಿರ್ನಿರ್ಗತ್ಯ ಋತ್ವಿಜಃ ।
ಅಲ್ಪಾಂಬುಧಾರಯಾ ಸರ್ವಾನ್ ಭೀಷಯಾಮಿ ಸಭಾಸದಃ ॥ ೬೩ ॥

ತೇ ಭೀತಾಸ್ತತ್ರ ಮಾಂ ದೃಷ್ಟ್ವಾ ಯಾಸ್ಯಂತಿ ಶರಣಂ ಹರಿಂ ।
ತತ್ರಾಸೌ ಮನ್ನಿರೋಧಾರ್ಥಮೇವ ಪ್ರಾದುರ್ಭವಿಷ್ಯತಿ ॥ ೬೪ ॥

---

೬೦. ಈಗ ಯಜ್ಞಭಂಗಕ್ಕೆ ನಾನು ಪ್ರಯತ್ನಪಟ್ಟಿರುವುದನ್ನು ತಿಳಿದು ಪುರುಷೋತ್ತಮನಾದ ವಿಷ್ಣುವು ಕರುಣೆಯಿಂದ ನನಗೆ ಸ್ವರೂಪವನ್ನು ತೋರಿಸಿದನು.

೬೧. ದುಷ್ಟವಾದ ಭಾವವುಳ್ಳ ನಾನು ನದೀರೂಪದಿಂದ ಹರಿಯನ್ನು ಸಂದರ್ಶಿಸಿದೆನು. ಆದುದರಿಂದ ಭಕ್ತಿಯಿಂದ ನಮಸ್ಕಾರ ಅಥವಾ ವಾಙ್ಮಯವಾದ ಸ್ತೋತ್ರವನ್ನು ಕೂಡ ಮಾಡಲಿಲ್ಲ.

೬೨. ಮತ್ತು ನಾನು ಸ್ತೋತ್ರ ಅಥವಾ ನಮಸ್ಕಾರಮಾಡುವುದಕ್ಕೆ ಪ್ರಯತ್ನವನ್ನು ಕೂಡ ಮಾಡಲಿಲ್ಲ. ಆದುದರಿಂದ ಇಲ್ಲಿ ಮತ್ತೆ ಅಂತರ್ಧಾನಹೊಂದಿ ಇಲ್ಲಿಂದ ಯಜ್ಞಶಾಲೆಗೆ ಹೋಗುವೆನು.

೬೩. ಅಲ್ಲಿಗೆ ಹೋಗಿ ನಾನು ಯಜ್ಞಕುಂಡದ ಮಧ್ಯದಿಂದ ಹೊರಕ್ಕೆ ಹೊರಟು ಬಂದು ಅಲ್ಪವಾದ ಜಲಪ್ರವಾಹದಿಂದ ಋತ್ವಿಜರನ್ನೂ ಸಭಾಸದರನ್ನೂ ಭಯಪಡಿಸುತ್ತೇನೆ.

೬೪. ಆಗ ಅವರೆಲ್ಲರೂ ಅಲ್ಲಿ ನನ್ನನ್ನು ನೋಡಿ ಭಯಪಟ್ಟು ಹರಿಯನ್ನು ಶರಣಹೊಂದುತ್ತಾರೆ. ಆಗ ಹರಿಯು ಮತ್ತೆ ನನ್ನನ್ನು ತಡೆಗಟ್ಟಲು ಅಲ್ಲಿ ಪ್ರಾದುರ್ಭವಿಸುವನು.

ತಂ ದೃಷ್ಟ್ವಾ ದೇವದೇವೇಶಂ ಸಮುತ್ಸೃಜ್ಯೌದಕೀಂ ತನುಂ ।
ಯೋಷಿದ್ರೂಪಧರಾ ಭೂತ್ವಾ ಸ್ತೌಮಿ ವಂದಾಮಿ ಕೇಶವಂ ॥ ೬೫ ॥

ಇತಿ ಸಂಚಿಂತ್ಯ ಮನಸಾ ದೇವೀ ಧ್ಯಾತ್ವಾ ಚ ಕೇಶವಂ ।
ತಸ್ಮೈ ಸ್ವಚಿಂತಿತಂ ಸರ್ವಂ ನಿವೇದ್ಯಾಭಿಪ್ರಣಮ್ಯ ಚ ॥ ೬೬ ॥

ಯಾಸ್ಯಾಮಿ ಶಾಲಾಂ ದೇವೇಶ ತತ್ರ ಮೇ ದೇಹಿ ದರ್ಶನಂ ।
ಇತ್ಯುಕ್ತ್ವಾ ಜಲರೂಪಾ ಸಾಽಗಾದಂತರ್ಭೂಚರ್ಯೈವ ಹಿ ॥ ೬೭ ॥

ತದಾ ತತ್ರ ಸರಸ್ವತ್ಯಾಃ ಸಪ್ತ ಸ್ರೋತಾಂಸಿ ಜಜ್ಞಿರೇ ।
ಅಂತರ್ಭೌಮೇನ ಮಾರ್ಗೇಣ ಕ್ಷಣೇನ ಮುಖಮಾಗತಾ ॥ ೬೮ ॥

ಏಕೇನ ಸ್ರೋತಸಾ ದೇವೀ ತತ್ರ ಕುಂಡಾದ್ವಿನಿರ್ಗತಾ ।
ಆಸೀದ್ವಿಪ್ಲಾವಯಂತೀವ ವೇಗಾತ್ಸರ್ವಾನ್ ಸಭಾಸದಃ ॥ ೬೯ ॥

---

೬೫. ದೇವತೆಗಳಿಗೆಲ್ಲ ದೇವತಾಸ್ವರೂಪನೂ ಈಶ್ವರನೂ ಆದ ವಿಷ್ಣುವನ್ನು ಈ ಜಲಮಯವಾದ ವಿಗ್ರಹವನ್ನು ಬಿಟ್ಟು ಸ್ತ್ರೀರೂಪವನ್ನು ಧರಿಸಿ ನಾನು ಸ್ತುತಿ ಮತ್ತು ನಮಸ್ಕಾರಗಳನ್ನು ಮಾಡುವೆನು.

೬೬. ಹೀಗೆ ಸರಸ್ವತಿಯು ಚಿಂತಿಸಿ ಮನಸ್ಸಿನಲ್ಲಿ ವಿಷ್ಣುವನ್ನು ಧ್ಯಾನಿಸಿ ವಿಷ್ಣುವಿಗೆ ತಾನು ಯೋಚಿಸಿದ ಅಂಶವನ್ನು ತಿಳಿಸಿ ನಮಸ್ಕರಿಸಿದಳು.

೬೭. ದೇವೇಶನೆ! ಯಜ್ಞಶಾಲೆಗೆ ನಾನು ಹೋಗುವೆನು, ಅಲ್ಲಿ ನನಗೆ ದರ್ಶನವನ್ನು ಅನುಗ್ರಹಿಸು, ಹೀಗೆಂದು ದೇವಿಯು ಹೇಳಿ ಮತ್ತೆ ಜಲರೂಪದಿಂದ ಭೂಮಿಯ ಒಳಭಾಗದಲ್ಲಿ ಗುಪ್ತಗಾಮಿಯಾಗಿ ಹರಿಯಿತು.

೬೮. ಆಗ ಆ ಸ್ಥಳದಲ್ಲಿ ಸರಸ್ವತೀನದಿಯ ಏಳು ಪ್ರವಾಹಗಳು ಉಂಟಾದುವು. ಭೂಮಿಯ ಒಳಮಾರ್ಗದಿಂದ ಒಂದು ನಿಮಿಷದಿಂದ ಯಜ್ಞಶಾಲೆಗೆ ಹೋದಳು.

೬೯. ಅಲ್ಲಿ ಸರಸ್ವತೀನದಿಯು ತನ್ನ ಒಂದು ಪ್ರವಾಹದಿಂದ ಯಜ್ಞಕುಂಡದಿಂದ ಸರ್ವ ಸಭಾಸದರನ್ನೂ ತೇಲಿಸುತ್ತಿರುವಂತೆ ವೇಗವಾಗಿ ಹೊರಗೆ ಆವಿರ್ಭವಿಸಿತು.

ಉದ್ವೀಕ್ಷ್ಯ ಯಜ್ಞಶಾಲಾಯಾ ಮಧ್ಯೇ ಕುಂಡಾದ್ವಿನಿರ್ಗತಾಂ ।
ತೋಯಧಾರಾಂ ಸರಸ್ವತ್ಯಾಸ್ತತ್ರ ಸರ್ವೇ ದಿವೌಕಸಃ ॥ ೨೦ ॥

ಕಿಮೇತದಿತಿ ಸಂಭ್ರಾಂತಾ ಬಭೂವುರ್ಭಯಕಂಪಿತಾಃ ।
ಚತುರ್ಮುಖಮುಖಾಃ ಸದ್ಯಃ ಶರಣಂ ಜಗ್ಮುರಚ್ಯುತಂ ॥ ೨೧ ॥

ತ್ರಾಹಿ ನಃ ಪುಂಡರೀಕಾಕ್ಷ ಭಯಾದಸ್ಮಾದುಪಸ್ಥಿತಾತ್ ।
ತ್ವನ್ನಾಯಕಾಂಸ್ತ್ವತ್ಪ್ರತೀಕ್ಷಾಂಸ್ತ್ವಾಮೇವ ಯಜತೋಽಧ್ವರೇ ॥ ೨೨ ॥

ತ್ರಾತುಮರ್ಹತಿ ಕೋವಾನ್ಯಸ್ತ್ವಾಂ ವಿನಾ ಭುವನತ್ರಯೇ ।
ಯತಃ ಪ್ರಪನ್ನಾಸ್ತ್ವಾಮೇವ ಪ್ರಣತಾರ್ತಿಹರಂ ವಯಂ ॥ ೨೩ ॥

ಅತಸ್ತ್ವಮೇತ್ಯ ತರಸಾ ರಕ್ಷಾಸ್ಮಾನ್ಮಧುಸೂದನ ।
ಇತ್ಥಂ ಸಂಪ್ರಾರ್ಥಿತೋ ದೇವೈರ್ಭಗವಾನ್ ಭಕ್ತವತ್ಸಲಃ ॥ ೨೪ ॥

---

೨೦. ಯಜ್ಞಶಾಲೆಯ ಮಧ್ಯದಲ್ಲಿ ಅಗ್ನಿಕುಂಡದಿಂದ ಹೊರಗೆ ಬಂದಿರುವ ಸರಸ್ವತೀನದಿಯ ಒಂದು ಜಲಧಾರೆಯನ್ನು ಅಲ್ಲಿದ್ದ ಸಕಲ ದೇವತೆಗಳೂ ನೋಡಿದರು.

೨೧. ಆಗ ಚತುರ್ಮುಖನಾದ ಬ್ರಹ್ಮನೇ ಮುಂತಾದ ನಿಖಿಲ ದೇವತೆಗಳು ಆ ಅಗ್ನಿಕುಂಡದಿಂದ ಹೊರಟ ಜಲಧಾರಾರೂಪವಾದ ನದಿಯನ್ನು ಕಂಡು ಇದೇನಿರಬಹುದೆಂದು ಗಾಬರಿಗೊಂಡು ಭೀತಿಯಿಂದ ನಡುಗಿದವರಾಗಿ ಕೂಡಲೇ ಶ್ರೀಮನ್ನಾರಾಯಣನನ್ನು ಶರಣುಹೊಂದಿದರು.

೨೨. ಕಮಲದಂತೆ ನೇತ್ರವುಳ್ಳ ಪರಮಾತ್ಮನೇ! ನಿನಗೆ ನಿಯಮ್ಯರಾದ ಮತ್ತು ನಿನ್ನನ್ನು ಪ್ರತೀಕ್ಷಿಸಿ ಯಾಗದಲ್ಲಿ ನಿನ್ನನ್ನು ಅರ್ಚಿಸುತ್ತಲಿರುವ ನಮ್ಮನ್ನು ಈಗ ಪ್ರಾಪ್ತವಾಗಿರುವ ಭಯದಿಂದ ರಕ್ಷಿಸು.

೨೩. ನಾವೆಲ್ಲರು ಭಕ್ತರ ಸಂಕಟಗಳನ್ನು ಪರಿಹರಿಸುವ ಸ್ವಾಮಿಯಾದ ನಿನ್ನನ್ನು ಮಾತ್ರವೇ ಶರಣಹೊಂದಿರುವುದರಿಂದ ಭುವನತ್ರಯದಲ್ಲಿ ನಿನ್ನನ್ನು ಬಿಟ್ಟರೆ ನಮಗೆ ಬೇರೊಬ್ಬ ರಕ್ಷಕನು ಯಾರಿರುವನು.

೨೪. ಮಧುವೆಂಬ ಅಸುರನನ್ನು ನಿಗ್ರಹಿಸಿದ ದೇವನೇ! ಈ ಕಾರಣದಿಂದ ನೀನು ಬೇಗ ಇಲ್ಲಿಗೆ ಬಂದು ನಮ್ಮನ್ನು ಕಾಪಾಡು. ಹೀಗೆಂದು ಭಕ್ತರಲ್ಲಿ ದಯಾಮಯನಾದ ನಾರಾಯಣನು ದೇವತೆಗಳಿಂದ ಪ್ರಾರ್ಥಿಸಲ್ಪಟ್ಟನು.

ಆವಿರ್ಬಭೂವ ಸಹಸಾ ಶಂಖಚಕ್ರಗದಾಧರಃ ।
ಶಯಾನಃ ಶೇಷಪರ್ಯಂಕೇ ಕುಂದೇಂದುಸದೃಶಪ್ರಭೇ ॥ ೭೫ ॥

ನವನೀಲಾಂಬುದಶ್ಯಾಮಃ ಪೀತವಾಸಾ ಜಗತ್ಪತಿಃ ।
ಪ್ರದೇಶೇ ಯಜ್ಞಶಾಲಾಯಾ ಹಸ್ತಿಶೈಲಸ್ಯ ಪಶ್ಚಿಮೇ ॥ ೭೬ ॥

ಯತ್ರೋತ್ಥಿತಾ ಚಾಗ್ನಿಕುಂಡಾತ್ತೋಯರೂಪಾ ಸರಸ್ವತೀ ।
ತಂ ದೃಷ್ಟ್ವಾ ಸಂಪ್ರಹೃಷ್ಟಾಸ್ತೇ ದೇವಾ ವಿಗತಸಾಧ್ವಸಾಃ ॥ ೭೭ ॥

ಬ್ರಹ್ಮಾಣಮಗ್ರತಃ ಕೃತ್ವಾ ತುಷ್ಟುವುರ್ಮಧುಸೂದನಂ ।
ತತಃ ಸರಸ್ವತೀ ಹೃಷ್ಟಾ ದ್ರಷ್ಟುಕಾಮಾ ಜಗತ್ಪತಿಂ ॥ ೭೮ ॥

ಯೋಷಿದ್ರೂಪಧರಾ ದೇವೀ ತಸ್ಮಾತ್ಕುಂಡಾದ್ವಿನಿರ್ಗತಾ ।
ದಿವ್ಯಾಭರಣಸಂಪನ್ನಾ ಶುಭ್ರಮಾಲ್ಯಾಂಬರಾವೃತಾ ॥ ೭೯ ॥

---

೭೫. ಆ ಕ್ಷಣದಲ್ಲಿ ಮಲ್ಲಿಗೆ, ಚಂದ್ರಬಿಂಬಗಳಂತೆ ಶುಭ್ರವಾದ ಕಾಂತಿಯುಳ್ಳ ಆದಿಶೇಷನೆಂಬ ಮಂಚದಲ್ಲಿ ಮಲಗಿರುವನೂ, ಶಂಖ-ಚಕ್ರ-ಗದೆಗಳನ್ನು ಹಸ್ತಗಳಲ್ಲಿ ಧರಿಸಿರುವನೂ ಆದ ವಿಷ್ಣುವು ಮುಂದುಗಡೆಯಲ್ಲಿ ಆವಿರ್ಭವಿಸಿದನು.

೭೬. ಹೊಸದಾಗಿ ನೀರುಂಡ ಮೇಘದಂತೆ ನೀಲವರ್ಣವುಳ್ಳವನೂ, ಪೀತಾಂಬರಧಾರಿಯೂ ಮತ್ತು ಜಗನ್ನಿಯಾಮಕನೂ ಆದ ವಿಷ್ಣುವು ಹಸ್ತಿಶೈಲದ ಪಶ್ಚಿಮ ದಿಕ್ಕಿನಲ್ಲಿದ್ದ ಯಜ್ಞಶಾಲೆಯ ಪ್ರದೇಶದಲ್ಲಿ ಪ್ರತ್ಯಕ್ಷನಾದನು.

೭೭. ಯಾವ ಸ್ಥಳದಲ್ಲಿ ಅಗ್ನಿಕುಂಡದಿಂದ ಜಲಧಾರಾರೂಪದಿಂದ ಸರಸ್ವತಿಯು ಮೇಲಕ್ಕೆ ಎದ್ದಳೋ ಆ ಸ್ಥಳದಲ್ಲಿ ವಿಷ್ಣುವಿನ ಆವಿರ್ಭಾವವಾಯಿತು. ವಿಷ್ಣುವನ್ನು ಕಂಡು ಸಕಲ ದೇವತೆಗಳು ಭಯದಿಂದ ಮುಕ್ತರಾಗಿ ಅತ್ಯಂತ ಸಂತೋಷವುಳ್ಳವರಾದರು.

೭೮. ಮತ್ತು ಬ್ರಹ್ಮನನ್ನು ಮುಂದಿಟ್ಟುಕೊಂಡು ಜನಾರ್ದನನ್ನು ಸ್ತೋತ್ರ ಮಾಡಿದರು. ಅನಂತರದಲ್ಲಿ ಸರಸ್ವತಿಯು ಸಂತುಷ್ಟಳಾಗಿ ಜಗದೀಶ್ವರನನ್ನು ನೋಡಬೇಕೆಂಬ ಕುತೂಹಲವುಳ್ಳವಳಾದಳು.

೭೯. ಮತ್ತು ದಿವ್ಯವಾದ ಆಭರಣಗಳಿಂದಲೂ ಶುಭ್ರವಾದ ಮಾಲ್ಯ-ವಸ್ತ್ರಗಳಿಂದಲೂ ಅಲಂಕರಿಸಲ್ಪಟ್ಟು ಸ್ತ್ರೀರೂಪವನ್ನು ಧರಿಸಿ ಆ ಅಗ್ನಿಕುಂಡದಿಂದ ಹೊರಟುಬಂದಳು.

ದೃಷ್ಟ್ವಾ ಪ್ರಣಮ್ಯ ದೇವೇಶಂ ಹರ್ಷೋತ್ಫುಲ್ಲಾನನಾಂಬುಜಾ ।
ಬದ್ಧಾಂಜಲಿಪುಟಾ ಭೂತ್ವಾ ಪಾದಭಾಗೇ ಸ್ಥಿತಾ ಹರೇಃ ॥ ೮೦ ॥

ತುಷ್ಟಾವ ದೇವಮೀಶಾನಂ ಹ್ರಿಯಾ ಕಿಂಚಿದವಾಙ್ಮುಖೀ ।
ಸರಸ್ವತ್ಯುವಾಚ :—
ನಮಸ್ತೇ ದೇವದೇವೇಶ ನಮಸ್ತೇ ಕರುಣಾಕರ ॥ ೮೧ ॥

ಪಾಹಿ ಮಾಂ ತ್ವಂ ಜಗನ್ನಾಥ ಪ್ರಣತಾಂ ಭಕ್ತವತ್ಸಲ ।
ತ್ವಮನಾದಿರನಂತಶ್ಚ ತ್ವಮನಿರ್ದೇಶ್ಯ ಏವ ಚ ॥ ೮೨ ॥

ಅದೃಶ್ಯಃ ಸರ್ವಭೂತಾನಾಮವಾಙ್ಮನಸಗೋಚರಃ ।
ಕೇವಲಂ ಕೃಪಯಾ ಮಹ್ಯಂ ರೂಪಂ ದರ್ಶಿತವಾನಸಿ ॥ ೮೩ ॥

ಮಯಾ ದುರ್ಮೇಧಯಾ ಪೂರ್ವಮಜ್ಞಾನಾದವಲಿಪ್ತಯಾ ।
ದ್ವಿವಾರಮಿಹ ದೃಷ್ಟೋಽಪಿ ನ ಭವಾನಭಿವಂದಿತಃ ॥ ೮೪ ॥

---

೮೦. ಅಲ್ಲಿ ದೇವತೆಗಳ ಈಶ್ವರನಾದ ವಿಷ್ಣುವನ್ನು ನೋಡಿ ಸಂತೋಷದಿಂದ ಅರಳಿದ ಮುಖಕಮಲವುಳ್ಳವಳಾಗಿ ಹರಿಯ ಪಾದಭಾಗದಲ್ಲಿ ಅಂಜಲಿಯನ್ನು ಕಟ್ಟಿ ಕೊಂಡು ವಿನಯದಿಂದ ನಿಂತುಕೊಂಡಳು.

೮೧. ಮತ್ತು ನಾಚಿಕೆಯಿಂದ ಸ್ವಲ್ಪ ತಲೆ ಬಗ್ಗಿಸಿದವಳಾಗಿ ದೇವತೆಗಳ ಈಶ್ವರನಾದ ವಿಷ್ಣುವನ್ನು ಸ್ತುತಿಮಾಡಿದಳು. ಸರಸ್ವತಿಯು ಹೇಳಿದ ಸ್ತುತಿ ವಚನ ಗಳು ಈ ರೀತಿಯಾಗಿದ್ದವು :—ದೇವಾಧಿದೇವತೆಗಳಿಗೆ ಈಶ್ವರನೆ! ಕರುಣೆಗೆ ನಿಧಿ ರೂಪನೆ! ನಿನಗೆ ನಮಸ್ಕಾರವು.

೮೨. ಜಗತ್ತುಗಳಿಗೆ ಪ್ರಭುವೂ, ಭಕ್ತರಲ್ಲಿ ಅಕೃತ್ರಿಮಪ್ರೇಮಿಯೂ ಆದ ಪರಮಾತ್ಮನೆ! ನೀನು ನಮಸ್ಕರಿಸುತ್ತಿದ್ದ ನನ್ನನ್ನು ಕಾಪಾಡು. ನೀನು ಆದಿ ಅಥವಾ ಅಂತವಿಲ್ಲದವನೂ ಶಬ್ದಪ್ರಯೋಗದಿಂದ ವ್ಯವಹರಿಸಲು ಅಶಕ್ಯನೂ ಆಗಿರುತ್ತೀ.

೮೩. ಸಕಲ ಪ್ರಾಣಿಗಳಿಗೆ ಅದೃಶ್ಯನು, ಮತ್ತು ವಾಕ್-ಮನಸ್ಸುಗಳಿಗೆ ಅಗೋಚರನು, ಆದರೂ ನನ್ನಲ್ಲಿ ಕರುಣೆಯಿಂದ ನನಗೆ ಈರೂಪವನ್ನು ತೋರಿಸಿರುತ್ತೀ.

೮೪. ದುಷ್ಟವಾದ ಪ್ರಜ್ಞೆಯಿಂದ ಅಹಂಕಾರದ ಭಾವವುಳ್ಳ ನಾನು ಮೊದಲು ಎರಡು ಸಲ ನಿನ್ನನ್ನು ಸಾಕ್ಷಾತ್ಕರಿಸಿದರೂ ಆ ದುಷ್ಟಭಾವದಿಂದ ವಂಚಿತಳಾಗಿ ವಂದನೆ ಯನ್ನು ಮಾಡಲಿಲ್ಲ.

ಕೃತಾಪರಾಧಾಂ ಭಗವನ್ ಮಾಮದ್ಯ ಶರಣಾಗತಾಂ ।
ಕರುಣಾರಸಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ॥ ೮೫ ॥

ಇತಿ ಸ್ತುತಃ ಸರಸ್ವತ್ಯಾ ಭಗವಾನ್ ಭಕ್ತವತ್ಸಲಃ ।
ಉವಾಚ ಕೃಪಯೋದ್ವೀಕ್ಷ್ಯ ವಾಣೀಂ ಮಂದಸ್ಮಿತೋ ಹರಿಃ ॥ ೮೬ ॥

ವತ್ಸೇ ವಾಣಿ ನ ಭೇತವ್ಯಂ ತ್ವಯಾ ಮದ್ಭಕ್ತಯಾಽಧುನಾ ।
ತವಾಹಂ ಸುಪ್ರಸನ್ನೋಽಸ್ಮಿ ನಾಪಿ ಮೇಽಪಕೃತಂ ತ್ವಯಾ ॥ ೮೭ ॥

ಅಹಂ ತೇ ಸಂಪ್ರಯಚ್ಛಾಮಿ ಕಾಂಕ್ಷಿತಂ ವರಮುತ್ತಮಂ ।
ಮತ್ಪಾದಜಾಯಾ ಗಂಗಾಯಾ ಅಪಿ ತೇ ಶ್ರೈಷ್ಠ್ಯಮುತ್ತಮಂ ॥ ೮೮ ॥

ದತ್ತಂ ಮಯಾಧುನಾ ಕ್ಷೇತ್ರೇ ಮದೀಯೇ ಪುಣ್ಯವರ್ಧನೇ ।
ಯಸ್ಮಾದ್ವೇಗಾದನುಪ್ರಾಪ್ತಾ ಕ್ಷೇತ್ರಂ ಸತ್ಯವ್ರತಂ ಪ್ರತಿ ॥ ೮೯ ॥

---

೮೫. ಭಗವಂತನೆ! ನಾನು ಅಪರಾಧಮಾಡಿದ್ದರೂ ಕೂಡ ಈಗ ಶರಣಾಗತಳಾಗಿರುವುದರಿಂದ ನನ್ನ ಅಪರಾಧವನ್ನು ಮರೆತು ಕರುಣಾಮೃತದಿಂದ ತುಂಬಿದ ಕಣ್ಣುಗಳಿಂದ ನನ್ನನ್ನು ನೋಡಿ ಅನುಗ್ರಹಿಸು.

೮೬. ಸರಸ್ವತೀದೇವಿಯಿಂದ ಈ ರೀತಿಯಾಗಿ ಸ್ತುತಿಸಲ್ಪಟ್ಟ ಭಗವಂತನೂ ಭಕ್ತಜನರಲ್ಲಿ ಪ್ರೇಮಿಯೂ ಆದ ಹರಿಯು ವಾಣಿಯನ್ನು ಕೃಪೆಯಿಂದ ನೋಡಿ ಮಂದಹಾಸಮಾಡುತ್ತ ಈ ರೀತಿಯಾಗಿ ಮಾತನಾಡಿದನು.

೮೭. ವತ್ಸಳಾದ ಸರಸ್ವತೀದೇವಿಯೆ! ನನ್ನಲ್ಲಿ ಭಕ್ತಳಾದ ನೀನು ಈಗ ಭಯಪಡಬೇಕಾಗಿಲ್ಲ. ನಾನು ನಿನಗೆ ಪ್ರಸನ್ನನಾಗಿರುವೆನು. ನೀನು ನನ್ನ ವಿಷಯದಲ್ಲಿ ಅಪರಾಧವನ್ನು ಮಾಡಿರುವುದಿಲ್ಲ.

೮೮. ನಾನು ನಿನ್ನಲ್ಲಿ ಪ್ರಸನ್ನನಾಗಿ ನನ್ನ ಪಾದಗಳಿಂದ ಹುಟ್ಟಿದ ಗಂಗಾನದಿಗಿಂತಲೂ ಅತಿಶಯವಾದ ಶ್ರೇಷ್ಠತ್ವವೆಂಬ ನಿನ್ನ ಇಷ್ಟವಾದ ಉತ್ತಮ ವರವನ್ನು ಕೊಡುತ್ತೇನೆ.

೮೯. ಪುಣ್ಯಗಳನ್ನು ವೃದ್ಧಿಮಾಡುವ, ನನಗೆ ಪ್ರಿಯವಾದ ಈ ಕ್ಷೇತ್ರದಲ್ಲಿ ನಿನಗೆ ಶ್ರೇಷ್ಠತ್ವವೆಂಬ ವರವನ್ನು ಈಗ ಕೊಟ್ಟಿರುವೆನು. ಈ ಸತ್ಯವ್ರತಕ್ಷೇತ್ರಕ್ಕೆ ನೀನು ಬಹಳ ವೇಗದಿಂದ ಜಲರೂಪವನ್ನು ಪರಿಗ್ರಹಿಸಿ ಬಂದಿರುತ್ತೀ.

ತಸ್ಮಾದ್ವೇಗವತೀತ್ಯಾಖ್ಯಾಂ ಲಬ್ಧ್ವಾ ವಸ ಮುದಾಜ್ಞಯಾ ।
ಅಹಂ ಚಾಪ್ಯುತ್ತರೇ ತೀರೇ ತವ ವತ್ಸ್ಯಾಮಿ ಶೋಭನೇ ॥ ೯೦ ॥

ತ್ವಯಾ ವಿಚಿಂತಯಂತ್ಯಾ ಮಾಮುಕ್ತಃ ಪೂರ್ವಮಹಂ ಯಥಾ ।
ಯಾಸ್ಯಾಮಿ ಶಾಲಾಂ ದೇವೇಶ ತತ್ರ ದೇಹೀತಿ ದರ್ಶನಂ ॥ ೯೧ ॥

ತಥಾ ತ್ವಯೋಕ್ತವಾಕ್ಯೇನ ಕೃತಂ ಕಾರ್ಯಂ ಮಯಾ ಯತಃ ।
ತಥಾ ಯಥೋಕ್ತಕಾರೀತಿ ನಾಮ್ನಾಹಂ ಪ್ರಥಿತೋ ಭುವಿ ॥ ೯೨ ॥

ವತ್ಸ್ಯಾಮ್ಯತ್ರ ಚಿರಂ ಕಾಲಂ ತವ ಪ್ರಿಯಚಿಕೀರ್ಷಯಾ ।
ತ್ವಂ ಚಾಸಿ ನಿರ್ಗತಾ ಯಸ್ಮಾತ್ ಕುಂಡಾನ್ಮಾಂ ದ್ರಷ್ಟುಮುತ್ಸುಕಾ ॥

ತತ್ ಪುಣ್ಯಂ ಕುಂಡತೀರ್ಥಾಖ್ಯಂ ಭೂಯಾನ್ಮುಕ್ತಿಪ್ರದಂ ನೃಣಾಂ ।
ಮಯಾ ಹ್ಯುತ್ತಮತಾ ದತ್ತಾ ಜಾಹ್ನವ್ಯಾ ಅಪಿ ತೇ ಶುಭೇ ॥ ೯೪ ॥

---

೯೦. ಕಲ್ಯಾಣಶೀಲವುಳ್ಳವಳೆ! ಆದುದರಿಂದ ನನ್ನ ಆಜ್ಞೆಯಿಂದ ಇನ್ನು ಮುಂದೆ ವೇಗವತೀ ಎಂಬ ಹೆಸರನ್ನು ಹೊಂದಿ ಇಲ್ಲಿ ವಾಸಮಾಡು. ನಾನು ನಿನ್ನ ಉತ್ತರದಿಕ್ಕಿನ ತೀರದಲ್ಲಿ ವಾಸಮಾಡುವೆನು.

೯೧. ಪೂರ್ವದಲ್ಲಿ ನೀನು ನನ್ನನ್ನು ಧ್ಯಾನಿಸುವಾಗ ದೇವೇಶನೇ! ನಾನು ಯಜ್ಞಶಾಲೆಗೆ ಹೋಗುವೆನು, ಅಲ್ಲಿ ನನಗೆ ದರ್ಶನವನ್ನು ಕೊಡಬೇಕು ಎಂದು ಪ್ರಾರ್ಥಿಸಿದೆಯಲ್ಲವೆ.

೯೨. ನಾನು ಆ ಪ್ರಾರ್ಥನೆಯಂತೆ ಸಕಲ ಕರ್ತವ್ಯವನ್ನು ಮಾಡಿರುವೆನು. ಆದುದರಿಂದ ಭೂಮಿಯಲ್ಲಿ ನಾನು ಪ್ರತಿಜ್ಞೆಮಾಡಿದ್ದನ್ನು ನಡೆಸುವವನು ಎಂಬ ಅರ್ಥವನ್ನು ಕೊಡುವ "ಯಥೋಕ್ತಕಾರಿ" ಎಂಬ ಹೆಸರಿನಿಂದ ಖ್ಯಾತಿಯನ್ನುಹೊಂದುವೆನು.

೯೩. ನಿನ್ನ ಪ್ರೀತಿಯಿಂದ ನಾನು ಈ ಸ್ಥಳದಲ್ಲಿ ಚಿರಕಾಲದವರೆಗೆ ವಾಸಮಾಡುತ್ತೇನೆ. ನೀನು ನನ್ನನ್ನು ಸಾಕ್ಷಾತ್ಕರಿಸಲು ಉತ್ಸಾಹವುಳ್ಳವಳಾಗಿ ಈ ಅಗ್ನಿಕುಂಡದಿಂದ ಹೊರಟುಬಂದೆಯಲ್ಲವೆ.

೯೪. ಆದುದರಿಂದ ಆ ಕುಂಡವು ಜನರಿಗೆ ಮುಕ್ತಿಯನ್ನುಂಟುಮಾಡುವ ಪವಿತ್ರವಾದ, ಕುಂಡತೀರ್ಥವೆಂದು ಪ್ರಸಿದ್ಧವಾದ ತೀರ್ಥವಾಗಲಿ, ಮಂಗಲಶೀಲಳೆ! ನಿನಗೆ ಗಂಗಾನದಿಗಿಂತಲೂ ಶ್ರೇಷ್ಠತ್ವವು ಕೊಡಲ್ಪಟ್ಟಿದೆ.

ತದ್ಗಚ್ಛ ಬ್ರಹ್ಮಣಾ ಸಾರ್ಧಂ ಮಾಮಿಹಾರ್ಚಿತುಮರ್ಹಸಿ ।
ಇತಿ ಲಬ್ಧವರಾ ದೇವೀ ವಾಣೀ ಸಂಪೂರ್ಣಮಾನಸಾ ॥ ೯೫ ॥

ಹೃಷ್ಟಾ ಪ್ರಮುದಿತಾ ಚೈವ ತಥಾ ಸಂಶಾನ್ತಮಾನಸಾ ।
ತಂ ಪ್ರಣಮ್ಯ ಹೃಷೀಕೇಶಂ ಬ್ರಹ್ಮಾಣಂ ದ್ರಷ್ಟುಮಭ್ಯಗಾತ್ ॥ ೯೬ ॥

ದತ್ವಾ ವರಂ ಪದ್ಮಭುವೋ ಮಹಿಷ್ಯೈ
ದೇವೋಽಪಿ ತತ್ರೈವ ಯಥೋಕ್ತಕಾರೀ ।
ಆಸೀಚ್ಛಯಾನೋ ಭುಜಗೇಂದ್ರತಲ್ಪೇ ।
ಸಂಪೂಜ್ಯಮಾನಃ ಸುರಸಿದ್ಧಸಂಘೈಃ ॥ ೯೭ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಪಂಚದಶೋಽಧ್ಯಾಯಃ.

---

೯೫. ಆದುದರಿಂದ ಬ್ರಹ್ಮದೇವನ ಸಂಗಡ ಹೋಗಿ ಅಲ್ಲಿ ನಡೆಯುವ ಯಾಗದಲ್ಲಿ ನೀನು ನನ್ನನ್ನು ಪೂಜಿಸಲು ಯೋಗ್ಯಳಾಗಿದ್ದೀ, ಹೀಗೆಂದು ಹೇಳಲ್ಪಟ್ಟ ಸರಸ್ವತೀದೇವಿಯು ವಿಷ್ಣುವಿನಿಂದ ಇಷ್ಟವಾದ ವರವನ್ನು ಹೊಂದಿ ಪೂರ್ಣಮನೋರಥವುಳ್ಳವಳಾದಳು.

೯೬. ಮತ್ತು ಹರ್ಷ ಪ್ರಮೋದ ಸೌಖ್ಯವನ್ನು ಅನುಭವಿಸಿ ಶಾಂತವಾದ ಮಾನಸವುಳ್ಳವಳಾಗಿ ವಿಷ್ಣುವನ್ನು ನಮಸ್ಕರಿಸಿ ಬ್ರಹ್ಮನನ್ನು ನೋಡಲು ಹೊರಟು ಹೋದಳು.

೯೭. ವಿಷ್ಣುಪರಮಾತ್ಮನು ಬ್ರಹ್ಮನ ರಾಣಿಯಾದ ಸರಸ್ವತಿಗೆ ವರವನ್ನು ಕೊಟ್ಟು ಯಥೋಕ್ತಕಾರಿಯೆಂಬ ಪ್ರಖ್ಯಾತಿಯುಳ್ಳವನಾಗಿ ಆದಿಶೇಷನೆಂಬ ಶಯನದಲ್ಲಿ ಮಲಗಿ ದೇವತೆಗಳು ಸಿದ್ಧರು ಮುಂತಾದ ಭಕ್ತಗಣದಿಂದ ಪೂಜಿಸಲ್ಪಡುತ್ತ ಅಲ್ಲಿ ವಾಸಮಾಡಿದನು.

ಕಾಂಚೀಮಾಹಾತ್ಮ್ಯದಲ್ಲಿ ಪಂಚದಶಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಷೋಡಶೋಽಧ್ಯಾಯಃ

ತತೋ ಲಬ್ಧವರಾಂ ದೃಷ್ಟ್ವಾ ಮುಕುಂದೇನ ಸರಸ್ವತೀಂ ।
ಸಂಪ್ರಣಮ್ಯ ತದಾ ದೇವಾಃ ಪ್ರಹ್ವಾಃ ಪ್ರಾಂಜಲಯೋಽಬ್ರುವನ್ ॥ ೧ ॥

ಸ್ವಾಗತಂ ತೇ ಮಹಾದೇವಿ ದಿಷ್ಟ್ಯಾ ಪ್ರಾಪ್ತಾಸಿ ಸುವ್ರತೇ ।
ದಿಷ್ಟ್ಯಾ ಭವತ್ಯಾ ದೇವೋಽಪಿ ವೀಕ್ಷಿತಃ ಕಮಲಾಪತಿಃ ॥ ೨ ॥

---

೧. ಅನಂತರದಲ್ಲಿ ವಿಷ್ಣುವಿನಿಂದ ವರಗಳನ್ನು ಹೊಂದಿರುವ ಸರಸ್ವತಿಯನ್ನು ಸಮಸ್ತ ದೇವತೆಗಳು ನೋಡಿ ನಮಸ್ಕಾರಮಾಡಿ ಅಂಜಲಿಯನ್ನು ಕಟ್ಟಿಕೊಂಡು ವಿನೀತರಾಗಿ ನಿಂತು ಈ ರೀತಿಯಾಗಿ ಹೇಳಿದರು.

೨. ಉತ್ತಮವಾದ ವ್ರತವುಳ್ಳ ಸರಸ್ವತೀದೇವಿಯೇ. ನಿನಗೆ ಸ್ವಾಗತವಿರಲಿ. ನೀನು ಇಲ್ಲಿಗೆ ಬಂದು ನಮ್ಮೆಲ್ಲರಿಗೆ ಆನಂದವನ್ನುಂಟುಮಾಡಿರುತ್ತೀ, ನೀನು ಪರಮಾತ್ಮನಲ್ಲಿ ಭಕ್ತಿಯನ್ನು ತೋರಿಸಿ ಆ ಲಕ್ಷ್ಮೀಪತಿಯಾದ ನಾರಾಯಣನನ್ನು ಸಾಕ್ಷಾತ್ಕರಿಸಿದೆ. ಇದು ಅತಿ ಸಂತೋಷಕರವು.

ದಿಷ್ಟ್ಯಾ ದತ್ತವರಾ ಚಾಸಿ ದೇವೇನ ಪರಮಾತ್ಮನಾ ।
ದಿಷ್ಟ್ಯಾ ವಯಂ ಕೃತಾರ್ಥಾಃ ಸ್ಮಃ ಸರ್ವೇ ಸಂದರ್ಶನಾತ್ತವ ॥ ೩ ॥

ಅಂಬ ತ್ವಮಾಗತಾ ಹರ್ಷಾದ್ಭಾಗಧೇಯೇನ ನಸ್ತ್ವಿಹ ।
ತ್ವಯಾ ಹೀನೋ ವಿಧಿರಭೂತ್ ಜ್ಯೋತ್ಸ್ನಾಹೀನ ಇವೋಡುರಾಟ್ ॥

ತಸ್ಮಾದಿತಸ್ತ್ವಮಭ್ಯೇತ್ಯ ದ್ರಷ್ಟುಮರ್ಹಸಿ ವೇಧಸಂ ।
ಧ್ಯಾಯಂತಂ ಪರಮಾತ್ಮಾನಂ ತ್ವದ್ದರ್ಶನಸಮುತ್ಸುಕಂ ॥ ೫ ॥

ಇತಿ ಸ್ತುತ್ವಾ ದೇವಗಣೈಸ್ತೈಶ್ಚ ಸರ್ವೈರ್ಮಹರ್ಷಿಭಿಃ ।
ಸಂವೀಜ್ಯಮಾನಾ ಗಂಧರ್ವೈಶ್ಚಾಮರೈರ್ವ್ಯಜನೈರಪಿ ॥ ೬ ॥

ಗಚ್ಛಂತೀ ಬ್ರಹ್ಮಸವಿಧಂ ವಿರರಾಜ ಸರಸ್ವತೀ ।
ನಖದೀಧಿತಿಸಂದೋಹರಾಜತ್ಪಾದಾಂಗುಲೀಯಕಾ ॥ ೭ ॥

---

೩. ಪರಮಾತ್ಮನಾದ ವಿಷ್ಣುವಿನಿಂದ ವರವನ್ನು ಸಂಪಾದಿಸಿದವಳೂ ಆಗಿದ್ದೀ, ಮತ್ತು ನಿನ್ನ ಪುನರ್ದರ್ಶನದಿಂದ ನಾವೆಲ್ಲರೂ ಕೃತಾರ್ಥರಾಗಿದ್ದೇವೆ. ಇದು ಪರಮಾನಂದವು.

೪. ತಾಯಿಯೆ ! ನಮ್ಮ ಭಾಗ್ಯದಿಂದ ನೀನು ಇಲ್ಲಿಗೆ ಸಂತೋಷಪೂರ್ವಕವಾಗಿ ಬಂದಿರುತ್ತೀ, ಇದುವರೆಗೆ ಬೆಳದಿಂಗಳು ಇಲ್ಲದ ಚಂದ್ರನಂತೆ ಬ್ರಹ್ಮನು ನಿನ್ನಿಂದ ಶೂನ್ಯನಾಗಿ ಪ್ರಕಾಶಿಸುತ್ತಿರಲಿಲ್ಲ.

೫. ಆದುದರಿಂದ ನೀನು ಈ ಕಡೆಗೆ ಬಂದು ನಿನ್ನನ್ನು ನೋಡಬೇಕೆಂಬ ಲಾಲಸೆಯಿಂದ ಕೂಡಿರುವ ಮತ್ತು ಪರಮಾತ್ಮನನ್ನು ಧ್ಯಾನಿಸುತ್ತಿರುವ ಬ್ರಹ್ಮನನ್ನು ನೋಡಲು ಅರ್ಹಳು.

೬. ಹೀಗೆಂದು ದೇವತೆಗಳ ವೃಂದದಿಂದಲೂ ಸಮಸ್ತ ಮಹರ್ಷಿಗಳಿಂದಲೂ ಸ್ತುತಿಸಲ್ಪಟ್ಟ ಸರಸ್ವತಿಯು ಗಂಧರ್ವರು ಮಾಡಿದ ಚಾಮರ-ವ್ಯಜನಗಳ ಸೇವೆಯನ್ನು ಸ್ವೀಕರಿಸುತ್ತ ಬ್ರಹ್ಮನ ಸಮೀಪಕ್ಕೆ ಹೋದಳು.

೭. ಬ್ರಹ್ಮನ ಸಮೀಪಕ್ಕೆ ಹೋಗುತ್ತಲಿದ್ದ ಸರಸ್ವತಿಯು ವಿಶೇಷವಾಗಿ ಪ್ರಕಾಶಿಸಿದಳು. ತನ್ನ ಪಾದಗಳ ನಖಕಾಂತಿಯಿಂದ ಪ್ರಕಾಶಿಸುತ್ತಿದ್ದ ಕಾಲುಂಗುರವುಳ್ಳವಳಾಗಿದ್ದಳು.

ಕ್ವಣತ್ಕನಕಮಂಜೀರರಂಜಿತಾಂಘ್ರಿಸರೋರುಹಾ ।
ಸೂಕ್ಷ್ಮಶುಕ್ಲಾಂಬರಧರಾ ವಿಲಸದ್ರತ್ನಮೇಖಲಾ ॥ ೮ ॥

ರತ್ನಗ್ರೈವೇಯಕೇಯೂರಕಂಕಣಾಂಗದಭೂಷಿತಾ ।
ರತ್ನತಾಟಂಕವಿಲಸತ್ಕಪೋಲದ್ವಯಶೋಭಿತಾ ॥ ೯ ॥

ನಭಸ್ಯುದಿತಶುಕ್ರಾಭನಾಸಾಮೌಕ್ತಿಕಭೂಷಿತಾ ।
ಅಷ್ಟಮೀಚಂದ್ರವಿಭ್ರಾಜದಲಿಕಸ್ಥಲಶೋಭಿತಾ ॥ ೧೦ ॥

ಬಂಧೂಕಕುಸುಮಸಂಕಾಶಸಿಂದೂರತಿಲಕಾಂಕಿತಾ ।
ಬಾಲಾರ್ಕಬಿಂಬವದ್ಭ್ರಾಜಚ್ಛಿರೋಮಣಿವಿಭೂಷಿತಾ ॥ ೧೧ ॥

---

೮. ಶಬ್ದಮಾಡುವ ಗೆಜ್ಜೆಗಳಿಂದ ಕೂಡಿದ ಚಿನ್ನದ ಕಾಲುಕಡಗದಿಂದ ಅಲಂಕರಿಸಲ್ಪಟ್ಟ ಪಾದಕಮಲವುಳ್ಳವಳೂ ಮತ್ತು ಅತಿ ಸೂಕ್ಷ್ಮವಾದ ಶುಕ್ಲವರ್ಣದ ವಸ್ತ್ರವನ್ನು ಧರಿಸಿದವಳೂ ಪ್ರಕಾಶಿಸುತ್ತಿದ್ದ ರತ್ನಮಯವಾದ ಡಾಬನ್ನು ಧರಿಸಿದವಳೂ ಆಗಿದ್ದಳು.

೯. ರತ್ನಮಯವಾದ ಕಂಠಾಭರಣ, ಕೇಯೂರ, ಕಂಕಣ, ಅಂಗದ ಮುಂತಾದ ಆಭರಣಗಳಿಂದ ಶೋಭಿತಳೂ ರತ್ನಮಯವಾದ ಕುಂಡಲಗಳಿಂದ ರಾಜಿಸುವ ಕಪೋಲಶೋಭೆಯುಳ್ಳವಳೂ ಆಗಿದ್ದಳು.

೧೦. ಆಕಾಶದಲ್ಲಿ ಉದಯಿಸಿದ ಶುಕ್ರ ನಕ್ಷತ್ರದಂತೆ ಥಳಥಳಿಸುವ ನಾಸಾಮುಕ್ತಾಮಣಿಯಿಂದ ಪ್ರಕಾಶಿಸುವವಳೂ, ಅಷ್ಟಮೀತಿಥಿಯ ಚಂದ್ರನಂತೆ ಹೊಳೆಯುವ ಹಣೆಯುಳ್ಳವಳೂ ಆಗಿದ್ದಳು.

೧೧. ಬಂಧೂಕಪುಷ್ಪದಂತೆ ಕೆಂಪು ಮತ್ತು ಗುಂಡಾಗಿರುವ ತಿಲಕದಿಂದ ಶೋಭಿಸಲ್ಪಟ್ಟವಳೂ, ಬಾಲಸೂರ್ಯನ ಬಿಂಬದಂತೆ ಪ್ರಕಾಶಿಸುವ ಶಿರೋಮಣಿಯಿಂದ ರಾಜಿಸುವವಳೂ ಆಗಿದ್ದಳು.

'ಸಾ ನೀಲಕೇಶೀ ಬಿಂಬೋಷ್ಠೀ ಪದ್ಮಪತ್ರನಿಭೇಕ್ಷಣಾ ।
ಮರಾಲೀಮಂದಗಮನಾ ಮಂದಾಕ್ಷಾವನತಾನನಾ ॥ ೧೨ ॥

ಏವಂ ಸರಸ್ವತೀ ಗತ್ವಾ ಸಮೀಪಂ ಪದ್ಮಜನ್ಮನಃ ।
ವವಂದೇ ಚರಣೌ ತಸ್ಯ ಭಕ್ತ್ಯಾ ಪರಮಯಾ ಯುತಾ ॥ ೧೩ ॥

ತದಾ ಬ್ರಹ್ಮರ್ಷಯಃ ಸರ್ವೇ ಪ್ರಣತಾಂ ಪದ್ಮಯೋನಯೇ ।
ನಿವೇದಯಂತಿ ತಾಂ ದೇವೀಮಾಗತಾಂ ಯಜ್ಞಸಂಸದೀ ॥ ೧೪ ॥

ತೇಷಾಂ ತದ್ವಚನಂ ಶ್ರುತ್ವಾ ದೃಷ್ಟ್ವಾ ಚ ಪ್ರಣತಾಂ ಪ್ರಿಯಾಂ ।
ಸ್ವಯಮೇವಾಗತಾಂ ಹರ್ಷಾತ್ತುತೋಷಾತ್ಯಂತಮಬ್ಜಭೂಃ ॥ ೧೫ ॥

ಉವಾಚ ವಚನಂ ಚಾಪಿ ಹರ್ಷಪರ್ಯಾಕುಲೇಕ್ಷಣಃ ।
ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಸ್ವಾಗತಂ ವರವರ್ಣಿನಿ ॥ ೧೬ ॥

---

೧೨. ಮತ್ತು ಆ ಸರಸ್ವತಿಯು ನೀಲವಾದ ಕೇಶಗಳು, ಬಿಂಬಫಲದಂತೆ ಇರುವ ತುಟಿಗಳು, ಪದ್ಮದಳದಂತೆ ವಿಶಾಲವಾದ ನೇತ್ರಗಳು, ಹಂಸದಂತೆ ಮಂದವಾದ ಗಮನ ಮತ್ತು ಲಜ್ಜಾ ಗುಣದಿಂದ ಬಗ್ಗಿದ ಮುಖ ಇವುಗಳಿಂದ ರಮ್ಯಳಾಗಿದ್ದಳು.

೧೩. ಈ ಸೌಂದರ್ಯವಿಲಾಸಗಳಿಂದ ಕೂಡಿದ ಸರಸ್ವತಿಯು ಬ್ರಹ್ಮನ ಸಮೀಪಕ್ಕೆ ಹೋಗಿ ಪರಮಭಕ್ತಿಯಿಂದ ಕೂಡಿ ಆ ಬ್ರಹ್ಮನ ಚರಣಕ್ಕೆ ನಮಸ್ಕರಿಸಿದಳು.

೧೪. ಆಗ ಅಲ್ಲಿದ್ದ ಬ್ರಹ್ಮಋಷಿಗಳು ಸರಸ್ವತೀದೇವಿಯು ಯಜ್ಞಶಾಲೆಗೆ ಬಂದು ಬ್ರಹ್ಮನಿಗೆ ನಮಸ್ಕರಿಸಿ ನಿಂತಿದ್ದನ್ನು ಬ್ರಹ್ಮನಿಗೆ ವಿಜ್ಞಾಪಿಸಿದರು.

೧೫. ಬ್ರಹ್ಮನು ಬ್ರಹ್ಮಋಷಿಗಳ ಮಾತನ್ನು ಕೇಳಿ ಹರ್ಷದಿಂದ ತಾನೇ ಬಂದು ನಮಸ್ಕರಿಸಿರುವ ಪ್ರಿಯೆಯಾದ ಸರಸ್ವತಿಯನ್ನು ನೋಡಿ ಅತಿಯಾಗಿ ಸಂತೋಷಪಟ್ಟನು.

೧೬. ಮತ್ತು ಸಂತೋಷವಿಕಾರದಿಂದ ತುಂಬಿ ಕಣ್ಣುಳ್ಳವನಾಗಿ ಬ್ರಹ್ಮನು ಈ ಮಾತನ್ನು ಆಡಿದನು. ಉತ್ತಮಳಾದ ಪ್ರಿಯೆಯೇ! ಮೇಲಕ್ಕೇಳು ನಿನಗೆ ಮಂಗಳವನ್ನು ಸುಖಾಗಮನವನ್ನು ನಾನು ಬಯಸುವೆನು.

ದಿಷ್ಟ್ಯಾ ಚಿರಾದಪಶ್ಯಂ ತ್ವಾಮಿಹ ಭದ್ರೇ ಸಮಾಗತಾಂ ।
ದಿಷ್ಟ್ಯಾ ದೇವಸ್ತ್ವಯಾ ದೃಷ್ಟಃ ಶಂಖಚಕ್ರಗದಾಧರಃ ॥ ೧೭ ॥

ದಿಷ್ಟ್ಯಾ ದತ್ತವರಾ ಚಾಸಿ ದೇವೇಶ ಪರಮಾತ್ಮನಾ ।
ದಿಷ್ಟ್ಯಾ ಮೇ ಸಫಲೋ ಯಜ್ಞೋ ಬಭೂವಾಗಮನಾತ್ತವ ॥ ೧೮ ॥

ಇತಿ ಪ್ರಶಸ್ಯ ತಾಂ ದೇವೀಂ ಪರಿಗೃಹ್ಯ ಚ ಪಾಣಿನಾ ।
ಉಪೋಪಾವೇಶಯದ್ಬ್ರಹ್ಮಾ ಸಭಾಯಾಂ ಪರಮಾಸನೇ ॥ ೧೯ ॥

ಕದಾ ದೃಷ್ಟ್ವಾ ಸರಸ್ವತ್ಯಾ ಸಹಿತೋ ಪದ್ಮಸಂಭವಂ ।
ದೇವಾಃ ಸಋಷಿಗಂಧರ್ವಾ ಬಭೂವುರ್ಹೃಷ್ಟಮಾನಸಾಃ ॥ ೨೦ ॥

---

೧೭. ಮಂಗಳಶೀಲವುಳ್ಳವಳೆ! ಬಹು ಕಾಲದಿಂದ ಆಕಾಂಕ್ಷಿಸಿ ಈಗ ನೀನು ಇಲ್ಲಿಗೆ ಬಂದಿರುವುದೂ ಮತ್ತು ಶಂಖ-ಚಕ್ರ-ಗದೆಗಳನ್ನು ಧರಿಸಿಕೊಂಡಿರುವ ವಿಷ್ಣುವನ್ನು ನೀನು ಸಾಕ್ಷಾತ್ಕರಿಸಿರುವುದೂ ನನಗೆ ಪರಮಾನಂದವನ್ನುಂಟುಮಾಡುತ್ತಿವೆ.

೧೮. ಮತ್ತು ಪರಮಾತ್ಮನಿಂದ ನೀನು ನಿನ್ನ ಇಷ್ಟಾರ್ಥವರವನ್ನು ಹೊಂದಿ ಕೊಂಡಿರುತ್ತೀ. ಇಂತಹ ನೀನು ಈಗ ಇಲ್ಲಿಗೆ ಬಂದಿರುವುದರಿಂದ ನನ್ನ ಯಾಗವು ಸಫಲವಾಗಿರುವುದು, ಇದಕ್ಕಾಗಿಯೂ ನಾನು ಆನಂದಿಸುತ್ತೇನೆ.

೧೯. ಈ ರೀತಿಯಾಗಿ ಮೃದು ವಚನಗಳಿಂದ ಆ ಸರಸ್ವತಿಯನ್ನು ಪ್ರಶಂಸೆ ಮಾಡಿ ತನ್ನ ಹಸ್ತದಿಂದ ಕರೆತಂದು ಬ್ರಹ್ಮನು ಸಭೆಯಲ್ಲಿ ಒಂದು ಶ್ರೇಷ್ಠವಾದ|ಆಸನ ದಲ್ಲಿ ಅವಳನ್ನು ಕುಳ್ಳಿರಿಸಿದನು.

೨೦. ಆಗ ಸರಸ್ವತೀದೇವಿಯಿಂದ ಕೂಡಿ ಸರ್ವಾಂಶ ಪರಿಪೂರ್ಣನಾದ ಬ್ರಹ್ಮನನ್ನು ದೇವತೆಗಳು, ಋಷಿಗಳು, ಮತ್ತು ಗಂಧರ್ವರು ನೋಡಿ ಸಂತುಷ್ಟ ಚಿತ್ತರಾದರು.

ಯಾಶ್ಚಾನ್ಯಾ ಬ್ರಹ್ಮಣಃ ಪತ್ನ್ಯಸ್ಸಾವಿತ್ರ್ಯಾದ್ಯಾಃ ಸರಸ್ವತೀಂ ।
ದೃಷ್ಟ್ವಾ ಪ್ರಣಮ್ಯ ಹರ್ಷೇಣ ಪರಿಷ್ವಕ್ತಾಸ್ತಯಾ ಪುನಃ ॥ ೨೧ ॥

ಮುಮುಹುರ್ಯಜ್ಞಶಾಲಾಯಾಮತ್ಯಂತಂ ನೃಪಸತ್ತಮ ।
ತತೋ ನಿರೀತಿಕಾ ದೃಷ್ಟ್ವಾ ದಿಶಃ ಸರ್ವಾಃ ಸಮಂತತಃ ॥ ೨೨ ॥

ವಿದ್ರುತಾನಸುರಾಂಶ್ಚಾಪಿ ವೀಕ್ಷ್ಯ ಭಗ್ನಮನೋರಥಾನ್ ।
ಸಂಹೃಷ್ಟಾ ಋತ್ವಿಜಃ ಸರ್ವೇ ಸಹಿತಾಃ ಪದ್ಮಯೋನಿನಾ ॥ ೨೩ ॥

ಪಂಚಮೇ ದಿವಸೇ ರಾಜನ್ ಪುನರ್ಯಷ್ಟುಮುಪಾರಭತ್ ।
ಸ ಚ ಸಾರ್ಧಂ ಸರಸ್ವತ್ಯಾ ಹಯಮೇಧಂ ಪಿತಾಮಹಃ ॥ ೨೪ ॥

ಚಕಾರ ವಿಧಿವತ್ತತ್ರ ಕ್ಷೇತ್ರೇ ಸತ್ಯವ್ರತೇ ಪುನಃ ।
ತದಾ ತೇ ಋತ್ವಿಜಃ ಸರ್ವೇ ಪರಿಕ್ರಾಮಂತಿ ಶಾಸ್ತ್ರತಃ ॥ ೨೫ ॥

---

೨೧. ಆ ಸಮಯದಲ್ಲಿ ಬ್ರಹ್ಮನ ಸಾವಿತ್ರೀ ಮುಂತಾದ ಇತರ ಪತ್ನಿಯರು ಸರಸ್ವತಿಯನ್ನು ಕಂಡು ನಮಸ್ಕರಿಸಿದರು. ಆಗ ಸರಸ್ವತಿಯು ಸಂತೋಷದಿಂದ ಅವರನ್ನು ಆಲಿಂಗಿಸಿದಳು.

೨೨. ರಾಜಶ್ರೇಷ್ಠನೆ! ಆಗ ಸಾವಿತ್ರೀ ಮುಂತಾದವರು ಸರಸ್ವತಿಯ ಪ್ರೇಮಾಲಿಂಗನ ಸೌಖ್ಯದಿಂದ ಆ ಯಜ್ಞಶಾಲೆಯಲ್ಲಿ ಅತ್ಯಂತವಾಗಿ ಮೋಹಗೊಂಡರು. ಆಗ ಸಕಲ ದಿಕ್ಕುಗಳು ಸುತ್ತಲೂ ಈತಿಬಾಧೆಗಳಾವುವೂ ಇಲ್ಲದಂತೆ ರಮ್ಯವಾದುವು.

೨೩. ಯಾಗಶಾಲೆಯಲ್ಲಿದ್ದ ಋತ್ವಿಜರು ಯಾಗಕ್ಕೆ ಭಗವನ್ನು ಉಂಟು ಮಾಡುತ್ತಲಿದ್ದ ಅಸುರರು ಆಶಾಭಂಗವನ್ನು ಹೊಂದಿ ಓಡಿಹೋದುದನ್ನು ಕಂಡು ಬ್ರಹ್ಮನಿಂದ ಕೂಡಿ ಸಂತೋಷಪಟ್ಟರು.

೨೪. ರಾಜನೆ! ಹೀಗೆ ಐದನೆಯ ದಿನವು ಪ್ರಾಪ್ತವಾಗಲು ಬ್ರಹ್ಮನು ಆ ಸರಸ್ವತೀದೇವಿಯೊಡನೆ ಅಶ್ವಮೇಧಯಾಗವನ್ನು ಮತ್ತೆ ಮಾಡಲಾರಂಭಿಸಿದನು.

೨೫. ಆ ಸತ್ಯವ್ರತಕ್ಷೇತ್ರದಲ್ಲಿ ಬ್ರಹ್ಮನು ಮತ್ತೆ ಯಾಗವನ್ನು ವಿಧಿವತ್ತಾಗಿ ಮಾಡಿದನು. ಋತ್ವಿಜರು ಯಾಗಶಾಲೆಯಲ್ಲಿ ಶಾಸ್ತ್ರಾನುಸಾರವಾಗಿ ತಮ್ಮ ಕರ್ತವ್ಯವನ್ನು ಮಾಡುತ್ತ ಸಂಚರಿಸುತ್ತಲಿದ್ದರು.

ಹುತ್ವಾ ವ್ಯಾಹೃತಿಭಿಃ ಸಮ್ಯಗ್ಯಥಾಶಾಸ್ತ್ರಂ ಯಥಾವಿಧಿ ।
ಪ್ರಾತಃಸವನಪೂರ್ವಾಣಿ ಚಕ್ರುಃ ಸರ್ವೇ ದ್ವಿಜಾತಯಃ ॥ ೨೬ ॥

ನಿಯುಕ್ತಾ ಬ್ರಹ್ಮಣಾ ತತ್ರ ಸೇಂದ್ರಾಃ ಸರ್ವೇ ದಿವೌಕಸಃ ।
ಬ್ರಾಹ್ಮಣಾನ್ ಪೂಜಯಾಮಾಸುಃ ಸರ್ವತಃ ಸಮಲಂಕೃತಾಃ ॥ ೨೭ ॥

ವಿವಿಧೈರ್ಭಕ್ಷ್ಯಭೋಜ್ಯೈಶ್ಚ ಮಿಷ್ಟೈರನ್ನೈಶ್ಚ ಪುಷ್ಕಲೈಃ ।
ಪುಷ್ಪಚಂದನತಾಂಬೂಲೈರ್ವಸ್ತ್ರಾಭರಣಕಾಂಚನೈಃ ॥ ೨೮ ॥

ಗೋಭಿರಶ್ವೈರ್ಗಜೈಶ್ಚಾಪಿ ಧನೈರ್ಧಾನ್ಯೈರಜಾವಿಕೈಃ ।
ಮುಕ್ತಾನಾಂ ಚ ಮಣೀನಾಂ ಚ ರೌಪ್ಯಕಾಣಾಂ ಚ ವಾಸಸಾಂ ॥ ೨೯ ॥

ದೃಶ್ಯಂತೇ ರಾಶಯಸ್ತತ್ರ ದೀಪ್ಯಮಾನಾಃ ಸಮಂತತಃ ।
ದತ್ತಾನಾಂ ದಾಸ್ಯಮಾನಾನಾಂ ಬ್ರಾಹ್ಮಣೇಭ್ಯಃ ಸಹಸ್ರಶಃ ॥ ೩೦ ॥

---

೨೬. ಬ್ರಾಹ್ಮಣರು ಶಾಸ್ತ್ರದಲ್ಲಿ ಹೇಳಿರುವ ಪ್ರಯೋಗಕ್ರಮದಂತೆ ವ್ಯಾಹೃತಿ ಮಂತ್ರಗಳನ್ನು ಹೇಳಿ ಚನ್ನಾಗಿ ಹೋಮವನ್ನು ಮಾಡಿ ಪ್ರಾತಃಸವನ ಕರ್ಮವನ್ನು ಆರಂಭಿಸಿ ಸಮಗ್ರ ಕರ್ಮಗಳನ್ನು ಅನುಷ್ಠಾನಮಾಡಿದರು.

೨೭! ಆ ಸಂದರ್ಭದಲ್ಲಿ ಬ್ರಹ್ಮನು ಅಪ್ಪಣೆ ಮಾಡಿರುವಂತೆ ಇಂದ್ರಾದಿ ಸಕಲ ದೇವತೆಗಳು ಅಲಂಕೃತರಾಗಿ ಸರ್ವ ಪ್ರಕಾರಗಳಿಂದ ಬ್ರಾಹ್ಮಣರನ್ನು ಪೂಜಿಸಿದರು,

೨೮. ನಾನಾಬಗೆಯಾದ ಭಕ್ಷ್ಯಭೋಜ್ಯಗಳಿಂದಲೂ ಸಂಸ್ಕೃತವಾದ ಮತ್ತು ಪುಷ್ಕಲವಾದ ಅನ್ನಗಳಿಂದಲೂ ಗಂಧ-ಪುಷ್ಪ-ತಾಂಬೂಲಗಳಿಂದಲೂ ಮತ್ತು ವಸ್ತ್ರ-ಆಭರಣ-ಸುವರ್ಣಗಳಿಂದಲೂ ಬ್ರಾಹ್ಮಣರನ್ನು ಸನ್ಮಾನಿಸಿದರು.

೨೯. ಹಸು, ಅಶ್ವ, ಗಜ, ಧನ, ಧಾನ್ಯ, ಆಡು, ಕುರಿ, ಮುಂತಾದ ವಿವಿಧ ಪಶುಜಾತಿಯನ್ನು ದಾನಮಾಡಿ ಬ್ರಾಹ್ಮಣರನ್ನು ಪೂಜಿಸಿದರು.

೩೦. ಬ್ರಾಹ್ಮಣರಿಗೆ ದಾನಮಾಡಿರುವ ದಾನಮಾಡಲ್ಪಡುತ್ತಿರುವ ಮತ್ತು ದಾನಮಾಡಲು ಸಿದ್ಧಮಾಡಿರುವ ಮುತ್ತು, ರತ್ನ, ರಜತ ಮತ್ತು ಅಮೂಲ್ಯವಾದ ವಸ್ತ್ರಗಳ ಸಾವಿರಾರು ರಾಶಿಗಳು ಉಜ್ಜಲವಾಗಿ ಕಾಣಿಸುತ್ತಿದ್ದುವು.

ಅನ್ನಕೂಟಾಶ್ಚ ಬಹವೋ ದೃಶ್ಯಂತೇ ಪರ್ವತೋಪಮಾಃ ।
ತಥೈವ ಪಯಸಾಂ ದಧ್ನಾಂ ಮಧುಪಾಯಸಸರ್ಪಿಷಾಂ ॥ ೩೧ ॥

ಪ್ರದಾಸ್ತತ್ರ ಪ್ರದೃಶ್ಯಂತೇ ದಿವಸೇ ದಿವಸೇ ನವಾಃ ।
ಬ್ರಾಹ್ಮಣಾ ಭುಂಜತೇ ನಿತ್ಯಂ ಸರ್ವೇ ಚೈವೇತರೇ ಜನಾಃ ॥ ೩೨ ॥

ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಪಶವಃ ಪಕ್ಷಿಣೋಽಪಿ ಚ ।
ಅನಿಶಂ ಭುಂಜಮಾನಾನಾಂ ನ ತೃಪ್ತಿ ರುಪಪದ್ಯತೇ ॥ ೩೩ ॥

ದೀಯತಾಂ ದೀಯತಾಮನ್ನಂ ವಾಸಾಂಸ್ಯಾಭರಣಾನಿ ಚ ।
ಇತಿ ವಿಕ್ರೋಶತಾಂ ಶಬ್ದಃ ಶ್ರೂಯತೇ ಹಿ ದಿವೌಕಸಾಂ ॥ ೩೪ ॥

ಸರ್ವೇ ಸಂಪೂಜಿತಾಃ ಸಮ್ಯಗ್ಬಭೂವುರ್ಹೃಷ್ಟಮಾನಸಾಃ ।
ವಿಶೇಷತೋ ಹಿ ವಿಪ್ರೇಂದ್ರಾಃ ಪೂಜಿತಾಸ್ತುಷ್ಟುವುರ್ವಿಧಿಂ ॥ ೩೫ ॥

---

೩೧. ಯಜ್ಞಾಂಗವಾದ ಭೋಜನ ಗೃಹದಲ್ಲಿ ಸಿದ್ಧಮಾಡಿದ ಅನ್ನದ ರಾಶಿಗಳು ಪರ್ವತಾಕಾರವಾಗಿ ಕಾಣುತ್ತಲಿದ್ದುವು. ಹಾಗೆಯೇ ಹಾಲು, ಮೊಸರು, ಜೇನುತುಪ್ಪ ಮತ್ತು ಪಾಯಸಗಳ ಮಡುಗಳು ಕಾಣಿಸುತ್ತಲಿದ್ದುವು.

೩೨. ಹಾಲು ಮುಂತಾದ ಪಾನೀಯಗಳ ಮಡುಗಳು ದಿನ ದಿನಕ್ಕೂ ಹೊಸ ಹೊಸದಾಗಿ ನಿರ್ಮಾಣವಾದಂತೆ ತೋರುತ್ತಲಿದ್ದವು. ಆ ಯಜ್ಞಸಮಾರಂಭದಲ್ಲಿ ಅನೇಕ ಬ್ರಾಹ್ಮಣರೂ ಇತರ ಜನರೂ ನಿತ್ಯವೂ ಭೋಜನಮಾಡುತ್ತಲಿದ್ದರು,

೩೩. ಮತ್ತು ಅನೇಕ ಸ್ತ್ರೀಯರು, ಬಾಲಕರು, ವೃದ್ಧರು, ಪಶುಪಕ್ಷಿಗಳು ಭೋಜನಮಾಡುತ್ತಿದ್ದವರ ಗುಂಪಿನಲ್ಲಿ ಸೇರಿದ್ದರು. ಇವರೆಲ್ಲರೂ ನಿರಂತರವಾಗಿ ಭೋಜನಮಾಡಿದರೂ ಮನಸ್ಸನ್ನು ಆಕರ್ಷಿಸುವ ಆ ಭೋಜನದ ವಿಜೃಂಭಣೆಯಿಂದ ತೃಪ್ತಿಯನ್ನು ಹೊಂದಲಿಲ್ಲ.

೩೪. ಯಥೇಷ್ಟವಾಗಿ ಅನ್ನವನ್ನು ಕೊಡಿ, ವಸ್ತ್ರಾಭರಣಗಳನ್ನು ಕೊಡಿ ಎಂದು ಉದಾರಭಾವದಿಂದ ಕೂಗುತ್ತಿದ್ದ ದೇವತೆಗಳ ವಿತರಣೆಯ ಶಬ್ದವು ಅಖಂಡವಾಗಿ ಕೇಳುತ್ತಲಿತ್ತು.

೩೫. ಅಲ್ಲಿ ಸೇರಿದವರೆಲ್ಲರೂ ಚನ್ನಾಗಿ ಸನ್ಮಾನಿಸಲ್ಪಟ್ಟವರಾಗಿ ಸಂತೋಷ ಹೊಂದಿದ ಚಿತ್ತವುಳ್ಳವರಾದರು, ದ್ವಿಜರು ವಿಶೇಷವಾಗಿ ಉಪಚಾರಕ್ಕೆ ಪಾತ್ರರಾಗಿ ತೃಪ್ತಿಯಿಂದ ಬ್ರಹ್ಮನನ್ನು ಸ್ತುತಿಸಿದರು.

ದಿವಸೇ ದಿವಸೇ ತತ್ರ ಋತ್ವಿಗ್ಭಿಶ್ಚೇಷ್ಟಕಾಶ್ಚಿತಾಃ ।
ಯೂಪಾಃ ಸ್ವಲಂಕೃತಾಃ ಸರ್ವೇ ವಸ್ತ್ರೈಃ ಪುಷ್ಪೈಶ್ಚ ಚಂದನೈಃ ॥

ಬದ್ಧಾಶ್ಚ ಪಶವಃ ಸಮ್ಯಕ್ ಸಂಸ್ಕೃತಾಶ್ಚ ಸ್ವಲಂಕೃತಾಃ ।
ಪಶೂನ್ ಸಂಜ್ಞಪಯಂತಿ ಸ್ಮ ಸ್ನಪಯಿತ್ವಾ ವಿಶೇಷತಃ ॥ ೩೭ ॥

ಜುಹ್ವಂತಿ ತೇ ವಷಟ್ಕಾರೈರೃತ್ವಿಜೋಽಥ ಹವೀಂಷಿ ಚ ।
ತತಃ ಸರ್ವೇಷು ಪಶುಷು ಹೂಯಮಾನೇಷು ಪದ್ಮಭೂಃ ॥ ೩೮ ॥

ತತ್ಸರ್ವಂ ವಿಷ್ಣವ ಇದಮಿತಿ ತಸ್ಮೈ ನ್ಯವೇದಯತ್ ।
ಸ ಏವ ಕಿಲ ಜಗ್ರಾಹ ವೇದ್ಯಾಮಗ್ನೌ ಸ್ಥಿತೋ ಹರಿಃ ॥ ೩೯ ॥

---

೩೬. ಯಜ್ಞವು ಪ್ರಾರಂಭವಾಗಿ ನಡೆಯುತ್ತಿರಲು ಪ್ರತಿ ದಿನದಲ್ಲಿಯೂ ಋತ್ವಿಜರು ಇಷ್ಟಕೆಗಳನ್ನು ಚಯನಮಾಡುತ್ತಲಿದ್ದರು. ಅಗ್ನಿಯನ್ನು ಸ್ಥಾಪಿಸಲು ಗರುಡ ಮುಂತಾದ ಆಕಾರ ಬರುವಂತೆ ಇಟ್ಟಿಗೆಗಳಿಂದ ಶಾಸ್ತ್ರವಿಧಿಯಂತೆ ಮಾಡುವ ವೇದಿಕಾ ರಚನವು ಇಷ್ಟಕಾಚಯನವು, ಮತ್ತು ಚಂದನ, ಪುಷ್ಪ, ವಸ್ತ್ರಗಳಿಂದ ಯೂಪಸ್ತಂಭಗಳು ಅಲಂಕರಿಸಲ್ಪಟ್ಟುವು.

೩೭. ಆ ಯೂಪಸ್ತಂಭಗಳಲ್ಲಿ ಉಪಾಕರಣ ಮುಂತಾದ ಸಂಸ್ಕಾರವನ್ನು ಮಾಡಿದ ಅನೇಕಾಲಂಕಾರಗಳಿಂದ ಭೂಷಿಸಿರುವ ಪಶುಗಳನ್ನು ಕಟ್ಟುತ್ತಲಿದ್ದರು. ಮತ್ತು ಅವುಗಳನ್ನು ಸ್ನಾನಮಾಡಿಸಿ ಯಥಾವಿಧಿಯಾಗಿ ಪ್ರಾಣವಿಯೋಜನ ಮಾಡುತ್ತಲಿದ್ದರು.

೩೮. ಋತ್ವಿಜರು ವಷಟ್ಕಾರ ಶಬ್ದವನ್ನುಚ್ಚರಿಸಿ ಹವಿಸ್ಸನ್ನು ಹೋಮಮಾಡುತ್ತಿದ್ದರು. ಆಗ ಬ್ರಹ್ಮನು ಯಜ್ಞಾಂಗವಾದ ಪ್ರತಿಯೊಂದು ಪಶುವನ್ನು ಹೋಮ ಮಾಡುತ್ತಿರಲು ಅತ್ಯಂತ ಶ್ರದ್ಧಾ-ಆದರವುಳ್ಳವನಾದನು.

೩೯. ಮತ್ತು ಬ್ರಹ್ಮನು ಯಜಮಾನನ ಕರ್ತವ್ಯವನ್ನು ನೆರವೇರಿಸುತ್ತ ಹೋಮಮಾಡಿದ ಹವಿಸ್ಸನ್ನು ಇದು ವಿಷ್ಣುಪರಮಾತ್ಮನನ್ನು ಸೇರಲಿ ಎಂದು ನಿವೇದನ ಮಾಡುತ್ತಿದ್ದನು. ಆಗ ಹರಿಯು ತಾನೇ ವೇದಿಕೆಯಲ್ಲಿ ಅಗ್ನಿಮಧ್ಯದಲ್ಲಿ ಇದ್ದು ಹವಿಸ್ಸನ್ನು ಪ್ರತಿಗ್ರಹಿಸಿದನು.

ಹವೀಂಷಿ ಮಂತ್ರಪೂತಾನಿ ಧಾತುಃ ಪ್ರಿಯಚಿಕೀರ್ಷಯಾ ।
ಏವಂ ಕೃತ್ವಾ ವಿಧಾನೇನ ಸರ್ವೇ ತೇ ಷೋಡಶರ್ತ್ವಿಜಃ ॥ ೪೦ ॥

ದ್ವಾದಶೇಽಹನಿ ಸಂಪ್ರಾಪ್ತೇ ಪ್ರಯಾತಾಃ ಪ್ರಾತರುತ್ಥಿತಾಃ ।
ಪ್ರಧಾನೇ ವೈಷ್ಣವೇ ಯೂಪೇ ಬಬಂಧುಸ್ತುರಗೋತ್ತಮಂ ॥ ೪೧ ॥

ಪವಿತ್ರಪಾಶೈರಾಸಕ್ತಮಶ್ವರತ್ನಂ ವಿದಾರ್ಯ ತಂ ।
ವಪಾಂ ಸಂಗೃಹ್ಯ ಚಾಶ್ವಸ್ಯ ಹೋಮಾರ್ಥಂ ಪರಮಾತ್ಮನಃ ॥ ೪೨ ॥

ಕೃತ್ವಾ ಸುಪೂತಾಂ ಸಘೃತಾಂ ಸ್ರುವೇ ನಿಕ್ಷಿಪ್ಯ ತಾಂ ವಪಾಂ ।
ಆಶ್ರಾವಯೇತಿ ಚೋದ್ಯಸ್ಯ ವಸಿಷ್ಠೋ ಹೋತುಮುದ್ಯತೇ ॥ ೪೩ ॥

---

೪೦. ಬ್ರಹ್ಮನಿಗೆ ಪ್ರಿಯವನ್ನು ಮಾಡಬೇಕೆಂಬ ಅಭಿಲಾಷೆಯಿಂದ ತಾನೇ ಪ್ರತ್ಯಕ್ಷವಾಗಿ ಬಂದು ಮಂತ್ರಪೂತವಾದ ಹವಿಸ್ಸನ್ನು ಪ್ರತಿಗ್ರಹಿಸಿದನು. ಹೀಗೆ ಅಲ್ಲಿ ಇದ್ದ ಹದಿನಾರು ಜನ ಋತ್ವಿಜರು ವಿಧಿಪೂರ್ವಕವಾಗಿ ಕರ್ಮವನ್ನು ಪೂರ್ತಿ ಮಾಡಿದರು.

೪೧. ಕ್ರಮವಾಗಿ ಯಾಗವು ನಡೆದು ಪ್ರಧಾನವಾದ ಹನ್ನೆರಡನೆಯ ದಿನವು ಪ್ರಾಪ್ತವಾಗಲು ಪ್ರಾತಃಕಾಲ ಎದ್ದು ಋತ್ವಿಜರು ಯಾಗಕರ್ಮಾನುಷ್ಠಾನಕ್ಕೆ ತೆರಳಿದರು. ವಿಷ್ಣು ದೇವತೆಗೆ ಸಂಬಂಧಪಟ್ಟ ಪ್ರಧಾನವಾದ ಯೂಪಸ್ತಂಭದಲ್ಲಿ ಅಶ್ವರತ್ನವನ್ನು ಕಟ್ಟಿದರು.

೪೨. ಮತ್ತು ಪವಿತ್ರವಾದ ಪಾಶಗಳಿಂದ ಬಂಧಿಸಿದ್ದ ಅಶ್ವರತ್ನವನ್ನು ಪಶು ಸಂಸ್ಕಾರಾನಂತರದಲ್ಲಿ ಸೀಳಿ ಪರಮಾತ್ಮನ ಉದ್ದೇಶದಿಂದ ಹೋಮಮಾಡಲು ಅದರ ವಪೆಯನ್ನು ಸಂಗ್ರಹಿಸಿದರು.

೪೩. ವಸಿಷ್ಠಮುನಿಯು ಪವಿತ್ರವಾದ ಆ ವಪೆಯನ್ನು ಘೃತಾಭಿಘಾರಣದಿಂದ ಸಂಸ್ಕರಿಸಿ ಅದನ್ನು ಸ್ರುವದಲ್ಲಿಟ್ಟುಕೊಂಡು ಆಶ್ರಾವಯ ಮುಂತಾದ ಮಂತ್ರಪಾಠ ಪೂರ್ವಕವಾಗಿ ಹೋಮಮಾಡಲಾರಂಭಿಸಿದನು.

ಋಗ್ಯಜುಃಸಾಮಘೋಷೈಶ್ಚ ಸಮುತ್ತಸ್ಥೌ ಮಹಾನ್ ಸ್ವನಃ ।
ಅಭೂದುದ್ಘೋಷಿತಂ ತೇನ ಸರ್ವಂ ಬ್ರಹ್ಮಾಂಡಮಂಡಲಂ ॥ ೪೪ ॥

ತದಾಧ್ವರ್ಯುಃ ಪ್ರಸನ್ನಾತ್ಮಾ ಸಂಸ್ಮರನ್ ಮನಸಾಚ್ಯುತಂ ।
ಜುಹಾವ ಚಾಗ್ನೌ ವಿಧಿವತ್ ಪಾವನೀಂ ವೈಷ್ಣವೀಂ ವಪಾಂ ॥ ೪೫ ॥

ಯಜಮಾನಸ್ತದಾ ಬ್ರಹ್ಮಾ ಧ್ಯಾಯನ್ ವಿಷ್ಣುಂ ಮುಖಾನಲೇ ।
ತಸ್ಮೈ ನಿವೇದಯಾಮಾಸ ತಾಂ ವಪಾಂ ಪರಮಾತ್ಮನೇ ॥ ೪೬ ॥

ವಾಸುದೇವೋ ಜಗದ್ಯೋನಿರ್ವಿಷ್ಣುರ್ನಾರಾಯಣೋ ಹರಿಃ ।
ಅನಯಾ ವಪಯಾ ಸದ್ಯಃ ಪ್ರೀಯತಾಂ ಭಗವಾನಿತಿ ॥ ೪೭ ॥

---

೪೪. ಆ ಪ್ರಧಾನಕರ್ಮವು ನಡೆಯುವಾಗ ಋಗ್ವೇದ, ಯಜುರ್ವೇದ, ಸಾಮವೇದಗಳ ಘೋಷಗಳಿಂದ ಮಹತ್ತಾದ ಧ್ವನಿಯು ಉಂಟಾಯಿತು. ಆ ಧ್ವನಿಯಿಂದ ಸಕಲ ಬ್ರಹ್ಮಾಂಡವು ಪ್ರತಿಧ್ವನಿಯನ್ನುಂಟುಮಾಡಿತು.

೪೫. ಆಗ ಅಧ್ವರ್ಯು ಎಂಬ ಋತ್ವಿಜನು ನಿರ್ಮಲವಾದ ಅಂತಃಕರಣವುಳ್ಳವನಾಗಿ ಮನಸ್ಸಿನಲ್ಲಿ ಅಚ್ಯುತನನ್ನು ಧ್ಯಾನಿಸುತ್ತ ಪವಿತ್ರವೂ ವಿಷ್ಣುದೇವತಾ ಭಾಗವೂ ಆದ ವಪೆಯನ್ನು ವಿಧಿವತ್ತಾಗಿ ಅಗ್ನಿಯಲ್ಲಿ ಹೋಮಮಾಡಿದನು.

೪೬. ಆಗ ಯಜಮಾನನಾದ ಬ್ರಹ್ಮನು ಆ ಯಜ್ಞದ ಆಹವನೀಯಾಗ್ನಿಯಲ್ಲಿ ವಿಷ್ಣುಪರಮಾತ್ಮನ ಸಾನ್ನಿಧ್ಯವನ್ನು ಧ್ಯಾನಿಸಿ ಆ ವಪೆಯನ್ನು ಪರಮಾತ್ಮನಿಗೆ ಅರ್ಪಿಸಿದನು.

೪೭. ವಪೆಯನ್ನು ನಿವೇದನಮಾಡುವಾಗ ವಸುದೇವನ ಪುತ್ರತ್ವವನ್ನು ಅಭಿನಯಿಸಿದವನೂ, ಜಗತ್ತಿಗೆ ಕಾರಣನೂ, ವ್ಯಾಪಕನೂ, ಪ್ರಲಯದಲ್ಲಿ ಜಲಮಧ್ಯದಲ್ಲಿ ವಾಸಮಾಡುವವನೂ ಮತ್ತು ಸಕಲ ಭಕ್ತ ಜನ ಪಾಪಗಳನ್ನು ಅಪಹರಿಸುವವನೂ ಆದ ಭಗವಂತನು ಈ ವಪಾಹವಿಸ್ಸಿನ ಹೋಮದಿಂದ ಈ ಕ್ಷಣದಲ್ಲಿಯೇ ಪ್ರಸನ್ನನಾಗಲಿ ಎಂದು ಧ್ಯಾನಿಸಿದನು.

ತಸ್ಮಿನ್ ಕಾಲೇ ವವೌ ವಾಯುಃ ಪುಣ್ಯಗಂಧವಹಃ ಶುಚಿಃ ।
ಸರಾಂಸಿ ವಿಮಲಾಂಭಾಂಸಿ ನದ್ಯಶ್ಚ ವಿಮಲೋದಕಾಃ ॥ ೪೮ ॥

ಆಸನ್ ಮನಾಂಸಿ ಹೃಷ್ಟಾನಿ ತದಾ ಸರ್ವದಿವೌಕಸಾಂ ।
ತತೋ ವಿತಾನವೇದ್ಯಂತರ್ವಹ್ನಿಮಧ್ಯಾತ್ ಸುಭಾಸ್ವರಂ ॥ ೪೯ ॥

ಸಮುತ್ಥಿತಮಭೂದ್ರಾಜನ್ ವಿಮಾನಮತುಲಪ್ರಭಂ ।
ಅಯುತಾದಿತ್ಯಸಂಕಾಶೈ ರತ್ನಶೃಂಗೈರಲಂಕೃತಂ ॥ ೫೦ ॥

ಯೇನ ಪ್ರದ್ಯೋತಿತಮಭೂಜ್ಜಗದ್ಧಿ ಸಚರಾಚರಂ ।
ಅಬಿಭ್ರಂಶ್ಚೈವ ರೂಪಾಣಿ ರುಚಿರಾಣಿ ದಿವೌಕಸಃ ॥ ೫೧ ॥

ತತ ಉತ್ತಸ್ಥುರವ್ಯಗ್ರಾಃ ಸರ್ವೇ ಪ್ರಾಂಜಲಯಃ ಸುರಾಃ ।
ಋತ್ವಿಜಶ್ಚ ಸ್ವಕರ್ಮಾಣಿ ಸಮುತ್ಸೃಜ್ಯ ಸಸಂಭ್ರಮಾಃ ॥ ೫೨ ॥

---

೪೮. ಆ ಪುಣ್ಯಕರ್ಮವು ನಡೆದ ಕ್ಷಣದಲ್ಲಿ ಅನೇಕ ಪುಣ್ಯನಿಮಿತ್ತಗಳು ಪ್ರಾದುರ್ಭವಿಸಿದುವು. ವಾಯುವು ಪವಿತ್ರವಾದ ಗಂಧದಿಂದ ಕೂಡಿ ಶುಚಿಯಾಗಿ ಬೀಸಿತು. ಸರೋವರಗಳೂ ನದಿಗಳ ನಿರ್ಮಲವಾದ ಜಲದಿಂದ ಪೂರ್ಣವಾದುವು.

೪೯. ಸಕಲ ದೇವತೆಗಳ ಮನಸ್ಸು ಆಗ ಬಹು ಸಂತೋಷಮಯವಾಯಿತು. ಆಗ ಆ ಯಜ್ಞವೇದಿಕೆಯ ಒಳಗೆ ಅಗ್ನಿಕುಂಡದ ಮಧ್ಯದಿಂದ ಒಂದು ಭಾಸ್ವರವಾದ ವಿಮಾನವು ಮೇಲಕ್ಕೆ ಎದ್ದಿತು.

೫೦. ರಾಜನೆ! ಆ ವಿಮಾನವು ನಿರುಪಮ ತೇಜಃಪುಂಜದಿಂದ ಕೂಡಿ ಕೊಂಡಿರುವುದೂ ಲಕ್ಷಸಂಖ್ಯೆಯ ಸೂರ್ಯರಂತೆ ಕಂಗೊಳಿಸುತ್ತಿದ್ದ ರತ್ನಮಯವಾದ ಶಿಖರಗಳಿಂದ ರಮಣೀಯವೂ ಆಗಿತ್ತು.

೫೧. ಆ ವಿಮಾನದ ಕಾಂತಿಯಿಂದ ಚರಾಚರ ಸಹಿತವಾದ ಸಕಲ ಪ್ರಪಂಚವು ಪ್ರಕಾಶಮಾನವಾಯಿತು ಮತ್ತು ದೇವತೆಗಳು ರಮ್ಯವಾದ ರೂಪಗಳನ್ನು ಧರಿಸಿದರು.

೫೨. ಆಗ ದೇವತೆಗಳೆಲ್ಲರೂ ಮನೋವ್ಯಗ್ರತೆಯಿಲ್ಲದೆ ಅಂಜಲಿಬದ್ಧರಾಗಿ ವಿನಯದಿಂದ ಎದ್ದು ನಿಂತರು. ಋತ್ವಿಜರು ತಾವು ಮಾಡುತ್ತಿದ್ದ ಆಯಾಯ ಕರ್ಮಗಳನ್ನು ಗಾಬರಿಯಿಂದ ಬಿಟ್ಟು ಅಂಜಲಿಬಂಧವನ್ನು ಮಾಡಿಕೊಂಡರು.

ತತ್ರ ಮಧ್ಯೇ ವಿಮಾನಸ್ಯ ಹಸ್ತಿಶೈಲಸ್ಯ ಮೂರ್ಧನಿ ।
ಪ್ರಾದುರ್ಬಭೂವ ದೇವೇಶಃ ಪಶ್ಯತಾಂ ತ್ರಿದಿವೌಕಸಾಂ ॥ ೫೩ ॥

ವರದಃ ಸರ್ವಭೂತಾನಾಂ ಬ್ರಹ್ಮಣೋ ಹಿತಕಾಮ್ಯಯಾ ।
ಪೂರ್ವಾದ್ರಿಶಿಖರೇ ಸಾಯಮಿಂದುಃ ಪೂರ್ಣಕಲೋ ಯಥಾ ॥ ೫೪ ॥

ನೀಲಜೀಮೂತಸಂಕಾಶಃ ಪದ್ಮಪತ್ರನಿಭೇಕ್ಷಣಃ ।
ಪಿತಾಂಬರಧರಃ ಸ್ರಗ್ವೀ ವನಮಾಲಾವಿಭೂಷಿತಃ ॥ ೫೫ ॥

ಕಟಿಕಾಂಗದಕೇಯೂರಕಿರೀಟಕಟಿಬಂಧನೈಃ ।
ಸ್ವಲಂಕೃತಃ ಶುಭೈರ್ದಿವ್ಯೈರನ್ಯೈರಾಭರಣೈರಪಿ ॥ ೫೬ ॥

ಶ್ರೀಭೂಭ್ಯಾಂ ಸಹಿತೋ ದೇವೋ ದೇವೀಭ್ಯಾಂ ಪಾರ್ಶ್ವಯೋರ್ದ್ವಯೋಃ
ಶಂಖಚಕ್ರಗದಾಪಾಣಿಃ ಸ್ಮಯಮಾನಮುಖಾಂಬುಜಃ ॥ ೫೭ ॥

---

೫೩. ಹಸ್ತಿಶೈಲದ ಶಿಖರದಲ್ಲಿ ಆ ವಿಮಾನದ ಮಧ್ಯದಲ್ಲಿ ದೇವೇಶ್ವರನಾದ ಹರಿಯು ಎಲ್ಲ ದೇವತೆಗಳೂ ನೋಡುತ್ತಿರುವ ಹಾಗೆಯೇ ಪ್ರಾದುರ್ಭವಿಸಿದನು.

೫೪. ಸರ್ವ ಭೂತಗಳಿಗೆ ವರವನ್ನು ಕೊಡುವ ಪರಮಾತ್ಮನು ಬ್ರಹ್ಮನಿಗೆ ಹಿತವನ್ನುಂಟುಮಾಡುವ ದೃಷ್ಟಿಯಿಂದ ಸಂಧ್ಯಾಕಾಲದಲ್ಲಿ ಪೂರ್ವ ಪರ್ವತದಲ್ಲಿ ಸಂಪೂರ್ಣ ಕಲೆಗಳಿಂದ ಕೂಡಿ ಚಂದ್ರನು ಉದಯಿಸುವಂತೆ ಪ್ರಾದುರ್ಭವಿಸಿದನು.

೫೫. ವಿಷ್ಣುವು ತನ್ನ ಸಾಕ್ಷಾತ್ಕಾರವನ್ನು ಬ್ರಹ್ಮಾದಿದೇವತೆಗಳಿಗೆ ಕೊಟ್ಟ ಸಮಯದಲ್ಲಿ ನೀಲವರ್ಣದ ಮೇಘಕ್ಕೆ ಸಮಾನನೂ, ಕಮಲದಳದಂತೆ ವಿಶಾಲ ನೇತ್ರವುಳ್ಳವನೂ, ಪೀತಾಂಬರವನ್ನು ಉಟ್ಟುಕೊಂಡವನೂ ಪುಷ್ಪಮಾಲೆ ಮತ್ತು ವನ ಮಾಲೆಗಳಿಂದ ಅಲಂಕರಿಸಲ್ಪಟ್ಟವನೂ ಆಗಿದ್ದನು.

೫೬. ಕಂಕಣ, ಭುಜಕೀರ್ತಿ, ಕೇಯೂರ, ಕಿರೀಟ, ಮೇಖಲಾ ಮುಂತಾದ ಇನ್ನೂ ಅನೇಕ ಶುಭಕರವೂ ದಿವ್ಯವೂ ಆದ ಆಭರಣಗಳಿಂದ ಅಲಂಕರಿಸಲ್ಪಟ್ಟಿದ್ದನು.

೫೭. ಮತ್ತು ತನ್ನ ಎರಡು ಪಾರ್ಶ್ವಗಳಲ್ಲಿ ಶ್ರೀ ದೇವಿ, ಮತ್ತು ಭೂದೇವಿಯೆಂಬ ಇಬ್ಬರು ಪತ್ನಿಯರಿಂದ ಸಹಿತನಾಗಿ ಶಂಖ-ಚಕ್ರ-ಗದೆಗಳಿಂದ ಶೋಭಿತವಾದ ಹಸ್ತಗಳು ಮತ್ತು ಮಂದಹಾಸದಿಂದ ಕೂಡಿದ ಮುಖವುಳ್ಳವನಾಗಿ ಪ್ರಾದುರ್ಭವಿಸಿದನು.

ಕರುಣಾರಸಪೂರ್ಣಾಭ್ಯಾಂ ಲೋಚನಾಭ್ಯಾಂ ಜಗತ್ರಯಂ ।
ಹ್ಲಾದಯನ್ ದದೃಶೇ ತತ್ರ ಕಂದರ್ಪಾಯುತಸುಂದರಃ ॥ ೫೮ ॥

ವಪಾಂ ಸಂಗೃಹ್ಯ ಹಸ್ತೇನ ಬ್ರಹ್ಮದತ್ತಾಂ ಪ್ರಭಕ್ಷಯನ್ ।
ಸಂವೀಕ್ಷಮಾಣಃ ಕೃಪಯಾ ಪದ್ಮಯೋನಿಂ ಮುಹುರ್ಮುಹುಃ ॥ ೫೯ ॥

ಸ್ತೂಯಮಾನೋಽನಿಶಂ ಭಕ್ತ್ಯಾ ಯೋಗಿಭಿಃ ಸನಕಾದಿಭಿಃ ।
ಸನಂದನಂದಪ್ರಮುಖೈಃ ಪಾರ್ಷದೈಃ ಪರಿವಾರಿತಃ । ॥ ೬೦ ॥

ತದಾ ಸುಮನಸಾಂ ವೃಷ್ಟಿರ್ಬಭೂವಾದ್ಭುತಸನ್ನಿಭಾ ।
ದಿವ್ಯದುಂದುಭಯೋ ನೇದುರ್ವವುರ್ಗಂಧವಹಾಃ ಶುಭಾಃ ॥ ೬೧ ॥

ತತ ಉತ್ತರವೇದ್ಯಂತರ್ವಹ್ನಿರ್ಮಧ್ಯಾದ್ವಿನಿರ್ಗತೇ ।
ವಿಮಾನೇ ಭಾಸ್ಕರೇ ದಿವ್ಯೇ ತಿಷ್ಠಂತಂ ಪದ್ಮಲೋಚನಂ ॥ ೬೨ ॥

---

೫೮. ಅಲ್ಲಿ ಅಯುತ ಸಂಖ್ಯೆಯ ಮನ್ಮಥರಂತೆ ದಿವ್ಯಸುಂದರನಾದ ಹರಿಯು ದಯಾರಸದಿಂದ ಪೂರ್ಣವಾದ ನೇತ್ರಗಳಿಂದ ಮೂರು ಲೋಕವನ್ನು ನೋಡಿ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತಲಿದ್ದನು.

೫೯. ಹರಿಯು ಬ್ರಹ್ಮದತ್ತವಾದ ವಪೆಯನ್ನು ಕೈಯಲ್ಲಿ ತೆಗೆದುಕೊಂಡು ಅದನ್ನು ಭಕ್ಷಿಸುತ್ತ ಕೃಪಾದೃಷ್ಟಿಯಿಂದ ಮತ್ತೆ ಮತ್ತೆ ಬ್ರಹ್ಮನನ್ನು ನೋಡುತ್ತಲಿದ್ದನು.

೬೦. ಮತ್ತು ಸನಕ ಮುಂತಾದ ಮಹಾಯೋಗಿಗಳಿಂದ ಭಕ್ತಿಯಿಂದ ಸರ್ವಕಾಲದಲ್ಲಿಯೂ ಸ್ತುತಿಸಲ್ಪಟ್ಟವನೂ ಸನಂದ, ನಂದ ಮುಂತಾದ ಪಾರ್ಷದ ಗಣದಿಂದ ಸುತ್ತುವರಿಯಲ್ಪಟ್ಟವನೂ ಆಗಿದ್ದನು.

೬೧. ಆಗ ಆಕಾಶದಿಂದ ಅದ್ಭುತವಾಗಿ ಪುಷ್ಪವೃಷ್ಟಿಯುಂಟಾಯಿತು. ದೇವತೆಗಳ ದುಂದುಭಿಗಳು ಶಬ್ದಮಾಡಲ್ಪಟ್ಟವು. ಮತ್ತು ಗಾಳಿಯು ಸುವಾಸನೆಯಾಗಿ ಬೀಸಿತು.

೬೨. ಅನಂತರದಲ್ಲಿ ಉತ್ತರವೇದಿಕೆಯಲ್ಲಿ ಜ್ವಲಿಸುತ್ತಲಿದ್ದ ಅಗ್ನಿಯ ಮಧ್ಯದಿಂದ ಬಂದಿರುವ ದಿವ್ಯವೂ ಮತ್ತು ತೇಜೋಮಯವೂ ಆದ ವಿಮಾನದಲ್ಲಿ ಪುಂಡರೀಕಾಕ್ಷನಾದ ವಿಷ್ಣುವು ಕುಳಿತುಕೊಂಡಿದ್ದನು.

ಶ್ರೀಭೂಭ್ಯಾಂ ಸಹಿತಂ ದೇವಂ ವರದಂ ವಾಂಛಿತಪ್ರದಂ ।
ಕಂದರ್ಪಕೋಟಿಲಾವಣ್ಯಂ ಕರುಣಾಮೃತಸಾಗರಂ ॥ ೬೩ ॥

ಪಶ್ಚಿಮಾಭಿಮುಖಂ ವಿಷ್ಣುಂ ಶಂಖಚಕ್ರಗದಾಧರಂ ।
ದದೃಶುರ್ದೇವಗಂಧರ್ವಾಃ ಸರ್ವೇ ಚ ಪರಮರ್ಷಯಃ ॥ ೬೪ ॥

ನಿಗೂಢಗುಲ್ಫೌ ನವಪಲ್ಲವಾರುಣಾ-
ವನರ್ಘ್ಯರತ್ನಾಭನಖಾನ್ವಿತಾಂಗುಳೀ ।
ಧ್ವಜಾಬ್ಜವಜ್ರಾಂಕುಶಲಾಂಛನಾಂಕಿತೌ
ಸುತಪ್ತಕಾರ್ತಸ್ವರನೂಪುರಾನ್ವಿತೌ ॥ ೬೫ ॥

ಭಕ್ತೇಷ್ಟದೌ ಮೌನಿಹೃದಬ್ಜಮಂದಿರೌ
ವಿರಿಂಚಿಮುಖ್ಯಾಮರವೃಂದವಂದಿತೌ ।

---

೬೩. ಆ ವಿಷ್ಣುಪರಮಾತ್ಮನು ತನ್ನ ಎರಡು ಪಾರ್ಶ್ವಗಳಲ್ಲಿ ಶ್ರೀ ದೇವಿ-ಭೂದೇವಿಯರಿಂದ ಸಹಿತನೂ, ಭಕ್ತರಿಗೆ ವರದಾನಮಾಡಿ ಇಷ್ಟಾರ್ಥವನ್ನು ಅನುಗ್ರಹಿಸುವವನೂ, ಒಂದು ಕೋಟಿ ಮನ್ಮಥರು ಸೇರಿರುವಂತೆ ಅತ್ಯಂತ ಸೌಂದರ್ಯವುಳ್ಳವನೂ, ಮತ್ತು ಕರುಣೆಯೆಂಬ ಅಮೃತಕ್ಕೆ ಸಾಗರದಂತೆಯೂ ಇದ್ದನು.

೬೪. ಮತ್ತು ಪಶ್ಚಿಮದಿಕ್ಕಿಗೆ ಅಭಿಮುಖನೂ, ಶಂಖ-ಚಕ್ರ-ಗದೆಗಳನ್ನು ಧರಿಸಿಕೊಂಡವನೂ ಆಗಿದ್ದನು. ಇಂತಹ ವರದ ಎಂಬ ವಿಷ್ಣುಮೂರ್ತಿಯನ್ನು ಸಕಲ ದೇವತೆಗಳೂ, ಗಂಧರ್ವರೂ, ಮತ್ತು ಮಹರ್ಷಿಗಳೂ ನೋಡಿದರು.

೬೫. ಆ ಮೂರ್ತಿಯು ತನ್ನ ಪಾದಗಳನ್ನು ಸುವರ್ಣಮಯವಾದ ಪದ್ಮವೆಂಬ ಪೀಠದಲ್ಲಿ ಇಟ್ಟುಕೊಂಡಿದ್ದನು. ಅಂತಹ ಪಾದಗಳು, ಕಾಣಿಸದಂತೆ ಸೂಕ್ಷ್ಮವಾದ ಪಾದಗಳ ಸಂಧಿಯುಳ್ಳವುಗಳಾಗಿಯೂ ಹೊಸ ಪಲ್ಲವಗಳಂತೆ ಕೆಂಪಾಗಿಯೂ, ಅಮೂಲ್ಯ ರತ್ನಗಳಂತೆ ಪ್ರಕಾಶಿಸುವ ನಖಗಳಿಂದ ಕೂಡಿದ ಅಂಗುಲಿಯುಳ್ಳವುಗಳೂ, ಧ್ವಜ-ಪದ್ಮ-ವಜ್ರ-ಅಂಕುಶ ಇವುಗಳ ರೇಖೆಗಳಿಂದ ಅಂಕಿತವಾದುವುಗಳೂ ಮತ್ತು ತಪ್ತವಾದ ಸುವರ್ಣದ ನೂಪುರಗಳಿಂದ ಶೋಭಿತವೂ ಆಗಿದ್ದವು.

೬೬. ಮತ್ತು ಭಕ್ತರ ಇಷ್ಟವನ್ನು ಕೊಡುವುವು, ಮೌನ ಮುಂತಾದ ನಿಯಮವುಳ್ಳ ಮುನಿಗಳ ಮಾನಸವೆಂಬ ಮಂದಿರದಲ್ಲಿ ವಾಸಮಾಡುವುವು, ಮತ್ತು ಬ್ರಹ್ಮ ಮುಂತಾದ ದೇವತೆಗಳ ವೃಂದದಿಂದ ವಂದಿಸಲ್ಪಟ್ಟವುಗಳೂ ಆಗಿದ್ದವು. ಇಂತಹ

ನಿಕ್ಷಿಪ್ಯ ಪಾದೌ ಕನಕಾಬ್ಜ ಪೀಠೇ
ತಿಷ್ಠಂತಮಾದಿತ್ಯಸಹಸ್ರರೋಚಿತಂ ॥ ೬೬ ॥

ಮನೋಭವೋಪಗ್ರನಿಷಂಗಶೋಭಾ-
ಸಂಭಿನ್ನಜಂಘಾಯುಗಳೋಪಪನ್ನಂ ।
ಸುವೃತ್ತರಂಭಾತರುಕಾಂಡಮಾಂಸಲ-
ದ್ವಿಪೇಂದ್ರಹಸ್ತಪ್ರತಿಮೋರುಯುಗ್ಮಂ ॥ ೬೭ ॥

ವಿಲಂಬಿವಿದ್ಯುನ್ನಿಭಪೀತಚೇಲ-
ಪ್ರಚ್ಛನ್ನಕೂರ್ಮಾಭನಿತಂಬಯುಗ್ಮಂ ।
ಸ್ವಾವೃತ್ತಪಾರ್ಶ್ವಂ ಮೃಗರಾಜಮಧ್ಯಂ
ಸುನಿಮ್ನನಾಭೀಸರಸೀರುಹಾನ್ವಿತಂ ॥ ೬೮ ॥

ಕಟ್ಯುಲ್ಲಸತ್ಕಾಂಚನಸೂತ್ರಮಂಡಿತಂ
ವಲಿತ್ರಯಾಲಂಕೃತಕಂದರಾಧರಂ ।
ಲಸದ್ವಿಶಾಲೋನ್ನತವಕ್ಷಸಾ ಧೃತ-
ಶ್ರೀವತ್ಸಸತ್ಕೌಸ್ತುಭರತ್ನಮಂಡಿತಂ ॥ ೬೯ ॥

ಪಾದಗಳನ್ನು ತಪ್ತಸುವರ್ಣಮಯ ಪದ್ಮಪೀಠದಲ್ಲಿ ಇಟ್ಟುಕೊಂಡು ಸಹಸ್ರ ಸೂರ್ಯರಂತೆ ಪ್ರಭೆಯಿಂದ ಪ್ರಕಾಶಿಸುತ್ತಿದ್ದನು.

೬೭. ಮನ್ಮಥನ ಬಾಣ ಪೂರ್ಣವಾದ ಬತ್ತಳಿಕೆಗಳಂತೆ ಶೋಭಿಸುವ ಎರಡು ಮೊಣಕಾಲುಗಳಿಂದಲೂ ವರ್ತುಲವಾದ ಬಾಳೆಯಗಿಡದಂತೆಯೂ ಗಜಶ್ರೇಷ್ಠದ ಸೊಂಡಲಿನಂತೆಯೂ ಇರುವ ಎರಡು ತೊಡೆಗಳಿಂದಲೂ ಕೂಡಿಕೊಂಡಿದ್ದನು.

೬೮. ಮಿಂಚಿನಂತೆ ಹೊಳೆಯುತ್ತ ಲಂಬಿಸುತ್ತಿದ್ದ ಪೀತಾಂಬರದಿಂದ ಮುಚ್ಚಿದ ಆಮೆಯ ಆಕಾರದ ಎರಡು ನಿತಂಬ ಭಾಗವುಳ್ಳವನೂ, ರಮ್ಯವಾಗಿ ಸುತ್ತಿರುವ ಪಾರ್ಶ್ವಭಾಗವುಳ್ಳವನೂ, ಮೃಗರಾಜನಾದ ಸಿಸ್ಮದಂತೆ ನಡುವುಳ್ಳವನೂ ಮತ್ತು ಗಂಭೀರವಾದ ನಾಭಿಯಲ್ಲಿ ಜನಿಸಿದ ಪದ್ಮದಿಂದ ಕೂಡಿದವನೂ ಆಗಿದ್ದನು.

೬೯. ಕಟಿಯಲ್ಲಿ ಪ್ರಕಾಶಿಸುವ ಸುವರ್ಣದ ಕಟಿಸೂತ್ರದಿಂದ ಶೋಭಿಸುವವನೂ, ತ್ರಿವಳಿಗಳಿಂದ ರಮ್ಯವಾಗಿರುವ ಉದರವನ್ನು ಧರಿಸಿದವನೂ, ಶ್ರೀವತ್ಸವೆಂಬ ಚಿಹ್ನ ಮತ್ತು ಉತ್ತಮವಾದ ಕೌಸ್ತುಭರತ್ನಗಳನ್ನು ವಿಶಾಲವಾದ ಹೃದಯದಲ್ಲಿ ಧರಿಸಿದವನೂ ಆಗಿದ್ದನು.

ಪೀನೈಃ ಸುದೀರ್ಘೈಃ ಸಹಿತಂ ಸುವೃತ್ತೈ-
ರ್ಭುಜೈಶ್ಚ ಕೇಯೂರವರಾಂಗದಾಢ್ಯೈಃ ।
ಸುಲಕ್ಷಣೈಃ ಸೂಕ್ಷ್ಮನಖೈಃ ಸುಕೋಮಲೈಃ
ಶುಭೈಶ್ಚತುರ್ಭಿಃ ಕಮಲೋದರಪ್ರಭೈಃ ॥ ೭೦ ॥

ಬಿಭ್ರಾಣಮಾದಿತ್ಯಶಶಿಪ್ರಕಾಶೌ
ರಥಾಂಗಶಂಖಾವಭಯಂ ಗದಾಂ ಚ ।
ಅನರ್ಘ್ಯರತ್ನೋಜ್ಜ್ವಲ ಕರ್ಣಕುಂಡಲ-
ತ್ವಿಷಾ ಸಮುದ್ಯೋತಿತಗಂಡಮಂಡಲಂ ॥ ೭೧ ॥

ಸುಮುಗ್ಧಮಂದಸ್ಮಿತಚಂದ್ರರೋಚಿಷಾ
ಸಫುಲ್ಲರಕ್ತೋತ್ಪಲ ಸನ್ನಿಭಾಧರಂ ।
ವಿನಿದ್ರರಕ್ತಾಬ್ಜದಳಾಭಲೋಚನಂ
ವಿಲೋಲಬಾಲಾಲಕ ಸಂವೃತಾನನಂ ॥ ೭೨ ॥

---

೭೦. ಮತ್ತು ಸ್ವಾಮಿಯ ಚತುರ್ಭುಜಗಳು ಸ್ಥೂಲವಾಗಿಯೂ, ಅತಿ ದೀರ್ಘವಾಗಿಯೂ, ವರ್ತುಲವಾದ ಆಕಾರವುಳ್ಳವುಗಳಾಗಿಯೂ ಕೇಯೂರ-ಅಂಗದ ಮುಂತಾದ ಅಮೂಲ್ಯ ಆಭರಣಗಳಿಂದ ಅಲಂಕೃತವಾಗಿಯೂ, ಅಗ್ರದಲ್ಲಿ ಉತ್ತಮ ಲಕ್ಷಣದಿಂದ ಕೂಡಿದ ಕೋಮಲವಾದ ನಖಗಳಿಂದ ಕೂಡಿದವುಗಳೂ, ಮಂಗಳ ಪ್ರದವೂ ಮತ್ತು ಕಮಲಪುಷ್ಪದ ಗರ್ಭದಂತೆ ಕಾಂತಿಯುಳ್ಳವುಗಳೂ ಆಗಿದ್ದವು.

೭೧. ಸ್ವಾಮಿಯು ಆ ಭುಜಗಳಿಂದ ಚಂದ್ರ ಸೂರ್ಯರಂತೆ ಪ್ರಕಾಶಮಯ ವಾದ ಶಂಖ ಮತ್ತು ಚಕ್ರಗಳನ್ನೂ ಅಭಯಮುದ್ರೆ ಮತ್ತು ಗದೆಗಳನ್ನೂ ಧರಿಸಿ ಕೊಂಡಿದ್ದನು. ಮತ್ತು ಅಮೂಲ್ಯವಾದ ರತ್ನಗಳಿಂದ ಉಜ್ವಲವಾದ ಕರ್ಣಕುಂಡಲಗಳ ಪ್ರಭೆಯಿಂದ ಥಳಥಳಿಸುವ ವರ್ತುಲವಾದ ಕಪೋಲಗಳನ್ನು ಧರಿಸಿದವನೂ ಆಗಿದ್ದನು.

೭೨. ಸುಂದರವಾದ ಮಂದಹಾಸವೆಂಬ ಚಂದ್ರನ ಕಾಂತಿಯಿಂದ ರಮಣೀಯ ವಾದ ಅರಳಿದ ಕೆಂದಾವರೆಯಂತೆ ಸಹಜವಾದ ರಕ್ತವರ್ಣದಿಂದ ಕೂಡಿದ ಕೆಳ ತುಟಿಯುಳ್ಳವನೂ, ವಿಕಾಸಹೊಂದಿದ ಕೆಂದಾವರೆಯ ದಳದಂತೆ ವಿಶಾಲವಾದ ನಯನ ವುಳ್ಳವನೂ, ಮತ್ತು ಚಂಚಲವಾದ ಎಳೆಯ ಮುಂಗೂದಲುಗಳಿಂದ ಮುಚ್ಚಿದ ಮುಖವುಳ್ಳವನೂ ಆಗಿದ್ದನು.

ಕಾರುಣ್ಯಪೂರ್ಣಂ ಕರುಣಾಮೃತಾಬ್ಧೇಃ
ಕಲ್ಲೋಲಮಾಲಾಭಕಟಾಕ್ಷವೀಕ್ಷಣಂ ।
ಕಸ್ತೂರಿಕಾಲಂಕೃತಫಾಲದೇಶಂ
ಕಿರೀಟರತ್ನೋಜ್ಜ್ವಲಿತಾಖಿಲಾಶಂ ॥ ೭೩ ॥

ನವಾಂಬುದಶ್ಯಾಮಮನಂಗಸುಂದರಂ
ಧರೇಂದಿರಾಲಂಕೃತಸವ್ಯದಕ್ಷಿಣಂ ।
ವಿರಾಜಮಾನಂ ವರದಂ ವರೇಣ್ಯಂ
ವಿಮಾನಮಧ್ಯೇ ದದೃಶುಃ ಸ್ಮ ದೇವಾಃ ॥ ೭೪ ॥

ಪ್ರಣಮ್ಯ ಬದ್ಧಾಂಜಲಯೋಽತಿವೇಲ
ಪ್ರಹರ್ಷಪೀಯೂಷಪಯೋಧಿಮಗ್ನಾಃ ।
ವಿಷ್ಟಭ್ಯಚಿತ್ತಾನ್ಯವಶಾವಿಹರ್ಷಾಃ
ಪ್ರತುಷ್ಟುವುಸ್ತೇ ವರದಂ ಪುರಃ ಸ್ಥಿತಂ ॥ ೭೫ ॥

---

೭೩. ಕರುಣೆಯಿಂದ ಪೂರ್ಣನೂ, ಕರುಣಾಸಮುದ್ರದ ತರಂಗಮಾಲೆಯಂತೆ ಇರುವ ಕಟಾಕ್ಷ ದರ್ಶನವುಳ್ಳವನೂ, ಕಸ್ತೂರಿಯಿಂದ ಅಲಂಕರಿಸಲ್ಪಟ್ಟ ಲಲಾಟವುಳ್ಳವನೂ, ಮತ್ತು ಕಿರೀಟದಲ್ಲಿದ್ದ ರತ್ನಕಿರಣಗಳಿಂದ ಅಖಿಲ ದಿಗಂತಗಳನ್ನು ಬೆಳಗುವವನೂ ಆಗಿದ್ದನು.

೭೪. ನೀರುಂಡ ಮೋಡದಂತೆ ಶ್ಯಾಮವರ್ಣವುಳ್ಳವನೂ, ಮನ್ಮಥನಂತೆ ಸುಂದರನೂ, ಭೂದೇವಿ-ಲಕ್ಷ್ಮೀದೇವಿಯರಿಂದ ಅಲಂಕರಿಸಲ್ಪಟ್ಟ ವಾಮ-ದಕ್ಷಿಣ ಪಾರ್ಶ್ವಗಳುಳ್ಳವನೂ, ವರೇಣ್ಯನೂ ಮತ್ತು ವಿಮಾನ ಮಧ್ಯದಲ್ಲಿ ಪ್ರಕಾಶಿಸುವನೂ ಆದ ವರದಸ್ವಾಮಿಯನ್ನು ದೇವತೆಗಳು ಸಾಕ್ಷಾತ್ಕರಿಸಿದರು.

೭೫. ಆಗ ದೇವತೆಗಳು ಅತ್ಯಂತ ಸಂತೋಷಾಮೃತ ಸಮುದ್ರದಲ್ಲಿ ಮುಳುಗಿ ಅಂಜಲಿಬದ್ಧರಾಗಿ ನಮಸ್ಕರಿಸಿ ಹರ್ಷೋದ್ರೇಕದಿಂದ ಪರವಶವಾದ ಹೃದಯವುಳ್ಳವರಾಗಿ ಮುಂದುಗಡೆಯಿರುವ ವರದ ಸ್ವಾಮಿಯನ್ನು ಸ್ತುತಿಸಿದರು.

ದೇವಾ ಊಚುಃ :—

ನಮಸ್ತೇ ದೇವದೇವೇಶ ನಮಸ್ತೇ ಪುರುಷೋತ್ತಮ ।
ನಮಸ್ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ ॥ ೭೬ ॥

ನಮಸ್ತುಭ್ಯಂ ಭಗವತೇ ವೈಕುಂಠಾಯಾತ್ಮಯೋನಯೇ ।
ವಿಶ್ವೇಶ್ವರಾಯ ವಿಶ್ವಾಯ ವಿಶ್ವಗರ್ಭಾಯ ವಿಷ್ಣವೇ ॥ ೭೭ ॥

ವಿಶ್ವಾತೀತಾಯ ವೇದ್ಯಾಯ ವಿಧಾತ್ರೇ ವಿಶ್ವಕರ್ಮಣೇ ।
ನಮಃ ಸಹಸ್ರಶಿರಸೇ ಸಹಸ್ರಾಕ್ಷಾಯ ಶಾರ್ಙ್ಗಿಣೇ ॥ ೭೮ ॥

ಸಹಸ್ರಬಾಹುಪಾದಾಯ ಸೃಷ್ಟಿಸ್ಥಿತ್ಯಂತಕಾರಿಣೇ ।
ನಮಃ ಪರಾಯ ಪುಣ್ಯಾಯ ಪುರುಷಾಯ ನಮೋ ನಮಃ ॥ ೭೯ ॥

---

೭೬. ದೇವತೆಗಳು ಈ ರೀತಿಯಾಗಿ ಸ್ತುತಿಸಿದರು. ದೇವೋತ್ತಮನೆ! ಪುರಾಣನಾದ ಪುರುಷೋತ್ತಮನೆ! ಕಮಲದಂತೆ ಕಣ್ಣುಗಳುಳ್ಳವನೆ! ಪ್ರಪಂಚವನ್ನು ಸೃಷ್ಟಿಸುವವನೆ! ನಿನಗೆ ನಮಸ್ಕಾರವು.

೭೭. ಪರಮಪೂಜ್ಯನೂ, ಶತ್ರುಗಳನ್ನು ಭಂಗಮಾಡುವವನೂ, ತನ್ನಿಂದಲೆ ಪ್ರಕಾಶಿಸಿದವನೂ, ವಿಶ್ವಕ್ಕೆ ಈಶ್ವರನೂ, ವಿಶ್ವಸ್ವರೂಪನೂ, ವಿಶ್ವವನ್ನು ಗರ್ಭದಲ್ಲಿ ಧರಿಸಿದವನೂ ಮತ್ತು ಸಕಲ ವ್ಯಾಪಕನೂ ಆದ ನಿನಗೆ ನಮಸ್ಕಾರವು.

೭೮. ವಿಶ್ವವನ್ನು ಮೀರಿದವನೂ, ವೇದ್ಯಸ್ವರೂಪನೂ, ಸೃಷ್ಟಿಕರ್ತನೂ, ಪ್ರಪಂಚವ್ಯಾಪಾರಪೂರ್ಣನೂ ವಿಶ್ವರೂಪನಾದ್ದರಿಂದ ಸಹಸ್ರ ಸಂಖ್ಯೆಯ ಶಿರಸ್ಸು-ನೇತ್ರಗಳಿಂದ ಶೋಭಿತನೂ, ಮತ್ತು ಶಾರ್ಙ್ಗಚಾಪವನ್ನು ಧರಿಸಿದವನೂ ಆದ ಸ್ವಾಮಿಗೆ ನಮಸ್ಕಾರವು.

೭೯. ಸಹಸ್ರ ಸಂಖ್ಯೆಯ ಬಾಹು ಮತ್ತು ಪಾದಗಳುಳ್ಳವನೂ, ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳನ್ನು ನಿರ್ವಹಿಸುವವನೂ ಸರ್ವೋತ್ಕೃಷ್ಟನೂ, ಪುಣ್ಯಪ್ರದಾಯಕನೂ ಆದ ಪರಮಪುರುಷನಿಗೆ ನಮಸ್ಕಾರವು.

ಪರಾತ್ಪರಮನಿರ್ಾಶಾನಂ ಪಾವನಂ ಪುಣ್ಯರೂಪಿಣಂ ।
ತ್ವಾಂ ಪ್ರಪನ್ನಾಃ ಸ್ಮ ದೇವೇಶಂ ವರದಂ ಭಕ್ತವತ್ಸಲಂ ॥ ೮೦ ॥

ನಿರ್ಮಲಂ ನಿರ್ಗುಣಂ ಶಾಂತಂ ನಿರಪೇಕ್ಷಂ ನಿರಂಜನಂ ।
ತ್ವಾಂ ಪ್ರಪನ್ನಾಃ ಸ್ಮ ದೇವೇಶಂ ವರದಂ ಭಕ್ತವತ್ಸಲಂ ॥ ೮೧ ॥

ಮಹತ್ತರಂ ಚ ಮಹತೋಽಣೀಯಾಂಸಮಣೋರಪಿ ।
ತ್ವಾಂ ಪ್ರಪನ್ನಾಃ ಸ್ಮ ದೇವೇಶಂ ವರದಂ ಭಕ್ತವತ್ಸಲಂ ೮೨ ॥

ಸತ್ಯಂ ಜ್ಞಾನಂ ಪರಂ ಸೂಕ್ಷ್ಮಮನಂತಮಮೃತಂ ಪರಂ ।
ತ್ವಾಂ ಪ್ರಪನ್ನಾಃ ಸ್ಮ ದೇವೇಶಂ ವರದಂ ಭಕ್ತವತ್ಸಲಂ ॥ ೮೩ ॥

ಯಜ್ಞಮೂರ್ತಿಂ ಯಜ್ಞಭುಜಂ ಯಜ್ಞಾಂಗಂ ಯಜ್ಞವಾಹನಂ ।
ತ್ವಾಂ ಪ್ರಪನ್ನಾಃ ಸ್ಮ ದೇವೇಶಂ ವರದಂ ಭಕ್ತವತ್ಸಲಂ ॥ ೮೪ ॥

---

೮೦. ಶ್ರೇಷ್ಠವಸ್ತುಗಳಿಗಿಂತ ಅತಿಶ್ರೇಷ್ಠನೂ, ನಿಯಾಮಕನೂ, ಪಾವನನೂ ಪುಣ್ಯಪ್ರದಸ್ವರೂಪವುಳ್ಳವನೂ ದೇವತೆಗಳಿಗೆ ಪ್ರಭುವೂ ಭಕ್ತಪ್ರೇಮಿಯೂ ಮತ್ತು ವರದ ಸ್ವಾಮಿಯೂ ಆದ ನಿನ್ನನ್ನು ಶರಣಾಗತರಾಗಿರುವೆವು.

೮೧. ಸಮಸ್ತ ದೋಷ-ಗುಣಗಳಿಂದ ರಹಿತನೂ, ನಿರ್ವಿಕಾರಸ್ವರೂಪನೂ ಆಪ್ತಕಾಮನಾಗಿ ಇತರ ವಸ್ತುಗಳಲ್ಲಿ ಅಪೇಕ್ಷಾಶೂನ್ಯನೂ, ನಿರ್ಲಿಪ್ತನೂ ಆದ ವರದ ಸ್ವಾಮಿಯನ್ನು ನಾವು ಶರಣಾಗತರಾಗಿರುವೆವು.

೮೨. ಸಕಲ ಧರ್ಮರಹಿತನಾದ ಪರಮಾತ್ಮನು ಉಪಾಧಿಧರ್ಮಗಳಿಂದ ಆಯಾಯ ಧರ್ಮವುಳ್ಳವನಾಗಿ ತೋರುವುದರಿಂದ ಮಹತ್ತಾದ ಎಲ್ಲ ವಸ್ತುಗಳಿಗಿಂತ ಮಹಾಪರಿಮಾಣನಾಗಿಯೂ ಅಣುವಸ್ತುಗಳಿಗಿಂತ ಅಣುವಾದ ಪರಿಮಾಣವುಳ್ಳವನಾಗಿಯೂ ಇರುವನು. ಇಂತಹ ವರದನನ್ನು ನಾವು ಶರಣುಹೊಂದಿರುತ್ತೇವೆ.

೮೩. ಸತ್ಯ, ಜ್ಞಾನ, ಎಂಬ ಸ್ವಸ್ವರೂಪದಿಂದ ಕೂಡಿದವನೂ, ಪರಮ ಸೂಕ್ಷ್ಮನೂ, ಪರಿಚ್ಛೇದ ವರ್ಜಿತನೂ, ಅಮೃತನೂ ಮತ್ತು ಶ್ರೇಷ್ಠನೂ ಆದ ವರದ ಸ್ವಾಮಿಯನ್ನು ನಾವು ಪ್ರಪನ್ನರಾಗಿರುವೆವು.

೮೪. ಯಜ್ಞದ ಸ್ವರೂಪನಾಗಿ ಪೂಜಿಸಲ್ಪಡುವವನೂ, ಯಜ್ಞದ ಹವಿರ್ಭಾಗವನ್ನು ಭುಂಜಿಸುವವನೂ, ಯಜ್ಞದ ಅಂಗಸ್ವರೂಪನೂ ಮತ್ತು ಯಜ್ಞವನ್ನು ನೆರವೇರಿಸುವವನೂ ಆದ ವರದಸ್ವಾಮಿಯನ್ನು ನಾವು ಶರಣಹೊಂದುವೆವು.

ಸರ್ವಗಂ ಸರ್ವಕರ್ತಾರಂ ಸರ್ವೇಶ್ವರಮನೀಶ್ವರಂ ।
ತ್ವಾಮೇವ ಶರಣಂ ಪ್ರಾಪ್ತಾ ರಕ್ಷಾಸ್ಮಾನ್ಮಧುಸೂದನ ॥ ೮೫ ॥

ತ್ವತ್ತೋ ಜಾತಮಿದಂ ವಿಶ್ವಂ ರಕ್ಷಿತಂ ಚ ತ್ವಯಾ ಸದಾ ।
ತ್ವಯ್ಯೇವ ವಿಲಯಂ ಯಾತಿ ಸದೇವಾಸುರಮಾನುಷಂ ॥ ೮೬ ॥

ತ್ವಮವ್ಯಯಃ ಪರಃ ಸ್ಥಾಣುರನಾದಿರಕುತೋ ಭಯಃ ।
ಈಶಾನಃ ಸರ್ವಭೂತಾನಾಮಾದಿಕರ್ತಾ ಸ್ವಯಂ ಪ್ರಭುಃ ॥ ೮೭ ॥

ತ್ವನ್ಮಾಯಾಮೋಹಿತಧಿಯೋ ಮುಹ್ಯಂತ್ಯಜ್ಞಾನಿನೋ ಭುವಿ ।
ತ್ವದ್ಭಕ್ತಾ ನ ಪ್ರಮುಹ್ಯಂತಿ ಸದಾ ತ್ವದ್ಧ್ಯಾನ ತತ್ಪರಾಃ ॥ ೮೮ ॥

---

೮೫. ವಿಷ್ಣುವು ಸರ್ವವ್ಯಾಪಿಯೂ, ಸರ್ವ ವಸ್ತುಗಳನ್ನು ನಿರ್ಮಿಸುವವನೂ ಸರ್ವೇಶ್ವರನೂ, ಮತ್ತೊಬ್ಬ ಈಶ್ವರನಿಗೆ ನಿಯಮ್ಯನಾಗದವನೂ ಆಗಿರುವನು. ಮಧು ದೈತ್ಯನನ್ನು ಸಂಹರಿಸಿದವನೆ! ಇಂತಹ ನಿನ್ನನ್ನು ಶರಣಹೊಂದಿರುತ್ತೇವೆ. ನಮ್ಮನ್ನು ಕಾಪಾಡು.

೮೬. ದೇವತೆ, ಅಸುರ, ರಾಕ್ಷಸ ಮುಂತಾದ ವಿವಿಧ ಪ್ರಾಣಿವರ್ಗದಿಂದ ಕೂಡಿದ ಈ ಸಕಲ ಪ್ರಪಂಚವೂ ನಿನ್ನಿಂದ ಸೃಷ್ಟಿಯನ್ನು ಹೊಂದಿರುವುದು. ನಿನ್ನಿಂದ ಸದಾಕಾಲದಲ್ಲಿಯೂ ರಕ್ಷಿಸಲ್ಪಟ್ಟಿರುವುದು. ಮತ್ತು ನಿನ್ನಲ್ಲಿಯೇ ಲಯವನ್ನು ಹೊಂದುವುದು.

೮೭. ನೀನು ನಾಶವಿಲ್ಲದವನು, ಶ್ರೇಷ್ಠನು, ಶಾಶ್ವತನು, ಅನಾದಿಯು, ದ್ವಿತೀಯವಸ್ತುವಿನಿಂದ ಭೀತಿಯಿಲ್ಲದವನು, ಸರ್ವಭೂತಗಳಿಗೆ ನಿಯಾಮಕನು, ಆದಿಯಲ್ಲಿ ಸೃಷ್ಟಿಕರ್ತನು, ಮತ್ತು ಸ್ವತಂತ್ರವಾದ ಪ್ರಭುತ್ವಶಕ್ತಿಯುಳ್ಳವನು.

೮೮. ಭೂಮಿಯಲ್ಲಿ ಅಜ್ಞಾನಿಗಳು ನಿನ್ನ ಮಾಯೆಗೆ ಅಧೀನರಾಗಿ ಮೋಹಾಂಧವಾದ ವಿವೇಕಬುದ್ಧಿಯುಳ್ಳವರಾಗಿ ಪ್ರಪಂಚಮೋಹವುಳ್ಳವರಾಗುವರು. ನಿನ್ನ ಭಕ್ತರು ಸರ್ವಕಾಲದಲ್ಲಿಯೂ ನಿನ್ನ ಧ್ಯಾನದಲ್ಲಿ ಆಸಕ್ತರಾಗಿ ಮೋಹಕ್ಕೆ ವಶರಾಗುವುದಿಲ್ಲ.

ತ್ವಮಾದಿರಂತೋ ಮಧ್ಯಶ್ಚ ಜಗತಃ ಪ್ರಭುರೇವ ಚ ।
ದೇವಾ ವೇದಾಸ್ತಥಾ ಯಜ್ಞಾಃ ಶಾಸ್ತ್ರಾಣಿ ವಿವಿಧಾನಿ ಚ ॥ ೮೯ ॥

ಇತಿಹಾಸಪುರಾಣಾನಿ ನಿರುಕ್ತಂ ಲಕ್ಷಣಾನಿ ಚ ।
ಚರಾಚರಾಣಿ ಭೂತಾನಿ ಸರಿತಃ ಸಾಗರಾ ಹ್ರದಾಃ ॥ ೯೦ ॥

ಆಬ್ರಹ್ಮಸ್ತಂಬಪರ್ಯಂತಂ ತ್ವಮೇವ ಸಕಲಂ ಜಗತ್ ।
ತ್ವಯಿ ಪ್ರೋತಮಿದಂ ಸರ್ವಂ ಸೂತ್ರೇ ಮಣಿಗಣಾ ಇವ ॥ ೯೧ ॥

ಅಂತರ್ಬಹಿಶ್ಚ ಸಕಲಂ ವ್ಯಾಪ್ಯ ತಿಷ್ಠನ್ನಿರಂಜನಃ ।
ಭವಾಂ ಶ್ಚೇಷ್ಟಯತೇ ವಿಶ್ವಂ ಕರ್ಮಪಾಶನಿಯಂತ್ರಿತಂ ॥ ೯೨ ॥

---

೮೯. ಜಗತ್ತು ಹುಟ್ಟಿಬಂದ ಅವಧಿಭೂಮಿಯು ನೀನು. ಪ್ರಪಂಚವು ಸುರಕ್ಷಿತ ವಾಗುವಂತೆ ಆಶ್ರಯದಾತನು ನೀನು ಅಂತದಲ್ಲಿ ಲಯಹೊಂದುವ ಅಧಿಷ್ಠಾನ ತತ್ತ್ವವು ನೀನು. ಮತ್ತು ಜಗದೀಶ್ವರನು ನೀನು· ಮತ್ತು ವೇದ, ಯಜ್ಞ, ವಿವಿಧ ಶಾಸ್ತ್ರಗಳು ನಿನ್ನ ರೂಪವಿಶೇಷಗಳಾಗಿವೆ.

೯೦. ಇತಿಹಾಸ, ಪುರಾಣ, ನಿರುಕ್ತ, ಲಕ್ಷಣಗ್ರಂಥ ಮುಂತಾದ ವಾಙ್ಮಯ ಗಳು, ಸ್ಥಾವರ-ಜಂಗಮಪ್ರಾಣಿಗಳು, ನದಿ, ಸಮುದ್ರ ಮತ್ತು ಹ್ರದಗಳು ಇವೆಲ್ಲವೂ ನಿನ್ನ ಅಂಶಗಳಾಗಿವೆ.

೯೧. ಬ್ರಹ್ಮ ಮೊದಲುಗೊಂಡು ಸ್ತಂಬವೆಂಬ ಸೂಕ್ಷ್ಮಕ್ರಿಮಿಯವರೆಗಿರುವ ಸಕಲ ಜಗತ್ತು ನಿನ್ನ ರೂಪವು. ಹಾರದಲ್ಲಿ ಪೋಣಿಸಲ್ಪಟ್ಟ ರತ್ನಗಳು ಸೂತ್ರಾ ಧಾರದಿಂದ ನಿಂತಿರುವಂತೆ ಜಗತ್ತು ನಿನ್ನ ಅಧೀನವಾಗಿ ಸ್ಥಿತಿಯನ್ನು ಹೊಂದಿರುವುದು.

೯೨. ಸಮಸ್ತ ವಸ್ತುಗಳ ಅಂತರಬಾಹ್ಯಭಾಗಗಳಲ್ಲಿ ನಿರ್ದುಷ್ಟನಾದ ನೀನು ವ್ಯಾಪಿಸಿ ಇದ್ದು ಪ್ರಾಚೀನಕರ್ಮವೆಂಬ ಪಾಶದಿಂದ ಬದ್ಧನಾಗಿರುವ ಜಗತ್ತನ್ನು ಸ್ವವ್ಯಾಪಾರದಲ್ಲಿ ನಿಯಮನಮಾಡುತ್ತೀ.

ಸೂತ್ರೈರಿವ ಸರೋ ಲೋಕೇ ಯೋಷಿತಂ ದಾರುಕಲ್ಪಿತಾಂ ।
ತಾರಿತಾಃ ಸ್ಮ ವಯಂ ಸರ್ವೇ ತವ ಸಂದರ್ಶನಾದಿಹ ॥ ೯೩ ॥

ಅದೃಶ್ಯಃ ಸರ್ವಭೂತಾನಾಂ ಯಸ್ತ್ವಮಸ್ಮಾಭಿರೀಕ್ಷಿತಃ ।
ಯಜ್ಞೈರ್ದಾನೈಸ್ತಪೋಭಿಶ್ಚ ಯಾತ್ರಾಭಿ ರ್ನಿಯಮೈರಪಿ ॥ ೯೪ ॥

ಅದೃಶ್ಯಮದ್ಯ ಪರಮಂ ಪಶ್ಯಾಮಃ ಪುರತಃ ಸ್ಥಿತಂ ।
ಇತಿ ಸ್ತುತ್ವಾ ಸುರಾಃ ಸರ್ವೇ ನತ್ವಾ ಚ ಹರಿಮಚ್ಯುತಂ ॥ ೯೫ ॥

ತತ್ರೈವಾಸನ್ ಮುದಾ ಯುಕ್ತಾಃ ಪಶ್ಯಂತಸ್ತನ್ಮುಖಾಂಬುಜಂ ।
ಇತ್ಥಂ ವೈವಸ್ವತಮನೋಃ ಕಲ್ಪೇ ಪೂರ್ವೇ ಕೃತೇ ಯುಗೇ ॥ ೯೬ ॥

ಕ್ಷೇತ್ರೇ ಸತ್ಯವ್ರತೇ ಪುಣ್ಯೇ ಹಸ್ತಿಶೈಲಸ್ಯ ಮೂರ್ಧನಿ ।
ಆದ್ಯರ್ತೌ ಪ್ರಥಮೇ ಮಾಸಿ ಪಕ್ಷೇ ಚಾದ್ಯೇ ಸುಶೋಭನೇ ॥ ೯೭ ॥

---

೯೩. ಲೋಕದಲ್ಲಿ ಬೊಂಬೆಯ ಆಟದಲ್ಲಿ ಆಟಗಾರನು ಮರದ ಹೆಣ್ಣು ಬೊಂಬೆಯನ್ನು ದಾರದಿಂದ ಕಟ್ಟಿ ನಡೆಸಿ ಕಡೆಯಲ್ಲಿ ಇಳಿಸಿದಂತೆ ನಿನ್ನ ಪವಿತ್ರದರ್ಶನದಿಂದ ನಾವೆಲ್ಲರೂ ಭವಭಯದಿಂದ ಉತ್ತೀರ್ಣರಾಗಿರುತ್ತೇವೆ.

೯೪. ಸರ್ವ ಪ್ರಾಣಿಗಳಿಗೆ ಅದೃಶ್ಯನಾಗಿರುವ ನಿನ್ನನ್ನು ನಾವು ನೋಡಿರುವೆವು. ನೀನು ಯಜ್ಞ, ದಾನ, ತಪಸ್ಸು, ತೀರ್ಥಯಾತ್ರೆ ಮತ್ತು ವ್ರತೋಪವಾಸ ನಿಯಮ ಇವುಗಳಿಂದ ಕೂಡ ದುರ್ಲಭನಾದ ಸೂಕ್ಷ್ಮತತ್ತ್ವಸ್ವರೂಪನು.

೯೫. ಹೀಗೆ ಅನೇಕ ಸುಕೃತಗಳಿಂದಲೂ ದೃಶ್ಯನಾಗದಿರುವ ಪರಮಪುರುಷನಾದ ನಿನ್ನನ್ನು ಮುಂಭಾಗದಲ್ಲಿ ನಾವು ನೋಡುತ್ತಲಿದ್ದೇವೆ, ಎಂಬುದಾಗಿ ದೇವತೆಗಳೆಲ್ಲರೂ ಚ್ಯುತಿಯಿಲ್ಲದ ಹರಿಯನ್ನು ಸ್ತುತಿಸಿ ನಮಸ್ಕರಿಸಿದರು.

೯೬. ಮತ್ತು ತೃಪ್ತಿಯಿಲ್ಲದಂತೆ ವರದಸ್ವಾಮಿಯ ಮುಖಕಮಲ ದರ್ಶನದ ಸೌಖ್ಯವನ್ನು ಅನುಭವಿಸುತ್ತ ಅಲ್ಲಿಯೇ ನಿಂತರು. ಹೀಗೆ ದೇವತೆಗಳಿಗೆ ವಿಷ್ಣುಸಾಕ್ಷಾತ್ಕಾರವು ವೈವಸ್ವತಮನ್ವಂತರದಲ್ಲಿ ಆದಿಯಾದ ಕೃತಯುಗದಲ್ಲಿ ಸಂಭವಿಸಿತು.

೯೭. ಸತ್ಯವ್ರತವೆಂಬ ಪವಿತ್ರಕ್ಷೇತ್ರದ ಹಸ್ತಿಪರ್ವತದ ಶಿಖರದಲ್ಲಿ ಮೊದಲನೆಯ ವಸಂತಋತುವಿನ ಆದಿಯಾದ ಚೈತ್ರಮಾಸದಲ್ಲಿ ಶುಕ್ಲಪಕ್ಷದಲ್ಲಿ ದೇವತೆಗಳು ಪರಮಾತ್ಮದರ್ಶನವನ್ನು ಹೊಂದಿದರು.

ಶುಭೇ ಹಸ್ತಾಭಿಧೇ ಋಕ್ಷೇ ಚತುರ್ದಶ್ಯಾಂ ರವೇರ್ದಿನೇ ।
ಪ್ರಾತರ್ವಿಷ್ಣುಂ ಸಮುದ್ದಿಶ್ಯ ವಪಾಂ ಜುಹ್ವತಿ ಧಾತರಿ । ॥ ೯೮ ॥

ಪ್ರದಕ್ಷಿಣಾವರ್ತಶಿಖೇ ಸಮ್ಯಗ್ಜ್ವಲತಿ ಪಾವಕೇ ।
ಹವಿರ್ಗಂಧೇ ಚ ಮಹತಿ ಮನೋಜ್ಞೇ ಪ್ರಸೃತೇ ಶುಭೇ ॥ ೯೯ ॥

ತತ್ರಾವಿರಾಸೀದ್ಭಗವಾನ್ ಮುಕುಂದೋ
ವಿಧೇರ್ವಿತಾನೋತ್ತರವೇದಿಮಧ್ಯಾತ್ ।
ಸಂಸ್ತೂಯಮಾನಃ ಸನಕಾದಿಭಿರ್ಮುದಾ
ಶ್ರಿಯಾ ಧರಿತ್ರ್ಯಾ ಸಹಿತೋಽಬ್ಜಹಸ್ತಯಾ ॥ ೧೦೦ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಷೋಡಶೋಽಧ್ಯಾಯಃ.

---

೯೮. ಹಸ್ತನಕ್ಷತ್ರದಿಂದಲೂ ಚತುರ್ದಶೀ ತಿಥಿಯಿಂದಲೂ ಕೂಡಿದ ಭಾನುವಾರದಲ್ಲಿ ಪ್ರಾತಃಕಾಲದಲ್ಲಿ ಬ್ರಹ್ಮನು ವಿಷ್ಣುಪರಮಾತ್ಮದೇವತೆಯನ್ನು ಉದ್ದೇಶಮಾಡಿ ಅಶ್ವದ ವಪೆಯನ್ನು ಹೋಮಾಡಿದನು. ಅಂತಹ ಪವಿತ್ರ ಸಮಯದಲ್ಲಿ ಪರಮಾತ್ಮನ ಸಾಕ್ಷಾತ್ಕಾರವುಂಟಾಯಿತು.

೯೯. ಮತ್ತು ಆ ಪವಿತ್ರ ಸಮಯದಲ್ಲಿ ಅಗ್ನಿಯು ಪ್ರದಕ್ಷಿಣಾಕಾರವಾಗಿ ಜ್ವಲಿಸುತ್ತಿದ್ದ ಜ್ವಾಲೆಗಳಿಂದ ಚನ್ನಾಗಿ ಜ್ವಲಿಸುತ್ತ, ಮಹತ್ತಾದ ಮತ್ತು ಮಧುರವಾದ ಹವಿಸ್ಸಿನ ಗಂಧವು ಗಾಳಿಯಿಂದ ಹರಡುತ್ತ, ಶುಭನಿಮಿತ್ತಗಳನ್ನು ಸೂಚಿಸುವ ಮಹಿಮೆಯಿಂದ ಆ ಕರ್ಮವು ಶ್ಲಾಘ್ಯವಾಗಿತ್ತು.

೧೦೦. ಹೀಗೆ ಆ ಸಮಯ ವಿಶೇಷದಲ್ಲಿ ಐಶ್ವರ್ಯಸಂಪನ್ನನಾದ ಮುಕುಂದನು ಸನಕಾದಿಮಹರ್ಷಿಗಳಿಂದ ಸ್ತುತಿಸಲ್ಪಡುತ್ತ ಮತ್ತು ಕಮಲಪುಷ್ಪವನ್ನು ಕೈಯಲ್ಲಿ ಧರಿಸಿದ ಲಕ್ಷ್ಮೀ-ಭೂದೇವಿಯರಿಂದ ಸಹಿತನಾದವನಾಗಿ ಆ ಯಜ್ಞದ ಉತ್ತರ ವೇದಿಕೆಯ ಮಧ್ಯದಿಂದ ಆವಿರ್ಭವಿಸಿ ದೇವತೆಗಳಿಗೆ ದರ್ಶನಾನುಗ್ರಹವನ್ನು ಕೊಟ್ಟನು.

ಕಾಂಚೀಮಾಹಾತ್ಮ್ಯದಲ್ಲಿ ಹದಿನಾರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀ ಮಾಹಾತ್ಮ್ಯಮ್

ಸಪ್ತದಶೋಽಧ್ಯಾಯಃ

ತತೋ ವಿತಾನವೇದ್ಯಂತರ್ವಹ್ನಿಮಧ್ಯಾತ್ಸಮುತ್ಥಿತೇ ।
ವಿಮಾನೇ ಭಾಸ್ವರೇ ದಿವ್ಯೇ ದಿವ್ಯರತ್ನವಿಭೂಷಿತೇ ॥ ೧ ॥

ತಿಷ್ಠಂತಮಿಂದಿರಾಭೂಭ್ಯಾಂ ದೇವೀಭ್ಯಾಂ ಸಹಿತಂ ಹರಿಂ ।
ಅತಸೀಪುಷ್ಪಸಂಕಾಶಂ ಶಂಖಚಕ್ರಗದಾಧರಂ ॥ ೨ ॥

ದಿವ್ಯಪೀತಾಂಬರಧರಂ ದಿವ್ಯಮಾಲ್ಯೋಪಶೋಭಿತಂ ।
ಸ್ಫುರತ್ಕಟಕಕೇಯೂರಕಿರೀಟಾಂಗದಕುಂಡಲಂ ॥ ೩ ॥

೧. ನಾರದಮುನಿಯು ಈ ರೀತಿಯಾಗಿ ಹೇಳಿದನು :—ತರುವಾಯ ಯಜ್ಞದ ವೇದಿಕೆಯ ಮಧ್ಯದಲ್ಲಿದ್ದ ಅಗ್ನಿಯಿಂದ ಎದ್ದು ಬಂದ, ದಿವ್ಯರತ್ನಗಳಿಂದ ಭೂಷಿಸಲ್ಪಟ್ಟಿರುವ ಪ್ರಕಾಶಮಯವಾದ ಮತ್ತು ದಿವ್ಯವಾದ ವಿಮಾನದಲ್ಲಿ ವರದಸ್ವಾಮಿಯು ಆವಿರ್ಭವಿಸಿದನು.

೨. ವಿಮಾನದಲ್ಲಿದ್ದ ವರದಸ್ವಾಮಿಯು ಅಗಸೆಯ ಹೂವಿನಂತೆ ಶ್ಯಾಮವರ್ಣವುಳ್ಳವನೂ ಶಂಖ-ಚಕ್ರ-ಗದೆಗಳನ್ನು ಧರಿಸಿಕೊಂಡು ಪಾರ್ಶ್ವಗಳಲ್ಲಿ ಲಕ್ಷ್ಮೀ-ಭೂದೇವಿಯರಿಂದ ಸಹಿತನೂ ಆಗಿದ್ದನು,

೩. ಮತ್ತು ದಿವ್ಯವಾದ ಪೀತಾಂಬರವನ್ನು ಉಟ್ಟುಕೊಂಡಿರುವನೂ, ದಿವ್ಯವಾದ ಪುಷ್ಪಮಾಲ್ಯಗಳಿಂದ ಶೋಭಿತನೂ ಮತ್ತು ಥಳಥಳಿಸುವ ಕಟಕ, ಕೇಯೂರ, ಕಿರೀಟ, ಅಂಗದ ಮತ್ತು ಕುಂಡಲ ಮೊದಲಾದ ವಿವಿಧ ಭೂಷಣಗಳನ್ನು ಧರಿಸಿದವನೂ ಆಗಿದ್ದನು.

ಜ್ವಲದ್ರತ್ನಕಟೀಬಂಧಹಾರನೂಪುರಶೋಭಿತಂ ।
ಮುಗ್ಧಮಂದಸ್ಮಿತಮುಖಮಪಶ್ಯದ್ವರದಂ ವಿಧಿಃ ॥ ೪ ॥

ತತಸ್ತದಾಸ್ಯಸ್ಯ ವಿಲೋಕನಾದತಿ–
ಪ್ರವೃದ್ಧಮೋದಾಬ್ಧಿತರಂಗಿತಾಶಯಃ ।
ಚಕಾರ ಚೇಷ್ಟಾ ವಿವಿಧಾಸ್ತದಗ್ರತೋ
ನನರ್ತ ಚೋನ್ಮತ್ತವದಬ್ಜಸಂಭವಃ ॥ ೫ ॥

ಕ್ಷ್ವೇಳೀರ್ಜಹಸಂಶ್ಚೈವ ಸಸವ್ಯದಕ್ಷಿಣಂ
ಪರಿಭ್ರಮನ್ಮಂಡಲಮುಚ್ಚಕೈರ್ನರ್ದ ।
ಉದ್ಧೃತ್ಯ ಬಾಹೂ ಮುಹುರೂರ್ಧ್ವತೋ ಭೃಶಂ
ಚಕಾರ ಚಾಶಾಃ ಕರತಾಳಶಬ್ದಿತಾಃ ॥ ೬ ॥

---

೪. ದೀಪ್ತವಾದ ರತ್ನಮಯ ಕಟಿಸೂತ್ರ, ಹಾರ ಮತ್ತು ನೂಪುರಗಳಿಂದ ಅಲಂಕರಿಸಲ್ಪಟ್ಟವನೂ, ಸುಂದರವಾದ ಮಂದಹಾಸದಿಂದ ಕೂಡಿದ ಮುಖ್ಯವುಳ್ಳವನೂ ಆದ ವರದಸ್ವಾಮಿಯನ್ನು ಬ್ರಹ್ಮನು ಸಾಕ್ಷಾತ್ಕರಿಸಿದನು.

೫. ಆಗ ಬ್ರಹ್ಮನು ವರದೇಶ್ವರನ ಮುಖ್ಯ ಸಂದರ್ಶನದಿಂದ ಅತಿಯಾಗಿ ವೃದ್ಧಿಹೊಂದಿದ ಆನಂದಾಂಬುಧಿಯ ತರಂಗಗಳಿಂದ ಕೂಡಿದ ಮಾನಸವುಳ್ಳವನಾಗಿ ಸ್ವಾಮಿಯ ಮುಂದುಗಡೆಯಲ್ಲಿ ಅನೇಕ ಹರ್ಷಚೇಷ್ಟೆಗಳನ್ನು ಮಾಡಿದನು. ಮತ್ತು ಉನ್ಮತ್ತನಂತೆ ಕುಣಿದನು.

೬. ಗರ್ಜಿಸುತ್ತ, ನಗುತ್ತ, ಎಡಬಲ ಭಾಗಗಳಲ್ಲಿ ಮಂಡಲಾಕಾರವಾಗಿ ಭ್ರಮಿಸುತ್ತ, ಗಟ್ಟಿಯಾಗಿ ಶಬ್ದಮಾಡುತ್ತ, ಮತ್ತೆ ಮತ್ತೆ ತನ್ನ ಬಾಹುಗಳನ್ನು ಹೆಚ್ಚಾಗಿ ಮೇಲಕ್ಕೆತ್ತಿಕೊಂಡು ಚಪ್ಪಾಳೆಯನ್ನು ಹೊಡೆದು ಆ ಶಬ್ದದಿಂದ ದಿಗಂತಗಳಲ್ಲಿ ಪ್ರತಿಧ್ವನಿಯುಂಟಾಗುವಂತೆ ಮಾಡಿದನು.

ಇತ್ಥಂ ಮುಕುಂದೇಕ್ಷಣಜಾತ್ಪ್ರಹರ್ಷಾತ್
ವಿಧಿರ್ಮುಹೂರ್ತಂ ವಿವಶಾಂತರಾತ್ಮಾ ।
ವಿಷ್ಟಭ್ಯ ಧೈರ್ಯೇಣ ಪುನಃ ಸ್ವಚಿತ್ತಂ
ನನಾಮ ಭಕ್ತ್ಯಾ ವರದಸ್ಯ ಪಾದಯೋಃ ॥ ೭ ॥

ತತಃ ಸಮುತ್ಥಾಯ ಹರೇರನುಜ್ಞಯಾ
ಪ್ರವೃದ್ಧಮೋದಾಂಬುನಿರುದ್ಧಕಂಧರಃ ।
ಸ್ವರೇಣ ಹಂಸಸ್ವರಗದ್ಗದೇನ
ತುಷ್ಟಾವ ಬದ್ಧಾಂಜಲಿರಾದಿದೇವಂ ॥ ೮ ॥

ಬ್ರಹ್ಮೋವಾಚ :—

ನಮೋಽಸ್ತು ತೇ ಪಂಕಜಪತ್ರಲೋಚನ
ಪ್ರಸೀದ ಮಹ್ಯಂ ಪ್ರಣತಾರ್ತಿಭಂಜನ ।
ದೃಷ್ಟ್ವಾ ಭವಂತಂ ವರದಂ ವರೇಣ್ಯ-
ಮದ್ಯ ಪ್ರಸನ್ನೋಽಸ್ಮಿ ತವಾಂಘ್ರಿಯುಗ್ಮಂ ॥ ೯ ॥

---

೭. ಬ್ರಹ್ಮನು ಈ ರೀತಿಯಾಗಿ ಮುಕುಂದನ ದರ್ಶನದಿಂದ ಉಂಟಾದ ಹರ್ಷೋದ್ರೇಕದಿಂದ ಸ್ವಲ್ಪ ಹೊತ್ತು ಪರವಶವಾದ ಅಂತಃಕರಣವುಳ್ಳವನಾಗಿ ಮತ್ತೆ ಧೀರತನದಿಂದ ತನ್ನ ಚಿತ್ತವನ್ನು ಸ್ಥಿರಪಡಿಸಿಕೊಂಡು ವರದಸ್ವಾಮಿಯ ಚರಣಗಳಲ್ಲಿ ಭಕ್ತಿಯಿಂದ ನಮಸ್ಕರಿಸಿದನು.

೮. ಹರಿಯ ಆಜ್ಞೆಯಂತೆ ಹರಿಚರಣದಿಂದ ಮೇಲಕ್ಕೆ ಎದ್ದು ವೃದ್ಧಿ ಹೊಂದಿದ ಆನಂದಬಾಷ್ಪದಿಂದ ತಡೆಗಟ್ಟಿದ ಕಂಠಧ್ವನಿಯುಳ್ಳವನಾಗಿ ಅಂಜಲಿಯನ್ನು ಕಟ್ಟಿಕೊಂಡು ಹಂಸಪಕ್ಷಿಯ ಸ್ವರಕ್ಕೆ ಸಮಾನವಾದ ತನ್ನ ಗದ್ಗದ ಧ್ವನಿಯಿಂದ ಆದಿ ದೇವನನ್ನು ಸ್ತುತಿಸಲು ಆರಂಭಿಸಿದನು.

೯. ಬ್ರಹ್ಮನು ಈ ರೀತಿಯಾಗಿ ಸ್ತುತಿಸಿದನು. ಕಮಲಪತ್ರದಂತೆ ನಯನ ವುಳ್ಳ ಸ್ವಾಮಿಯೆ! ನಿನ್ನನ್ನು ವಂದಿಸುವೆನು. ಭಕ್ತರ ಸಂಕಟಗಳನ್ನು ಭಂಗ ಮಾಡುವವನೆ! ನನ್ನನ್ನು ಅನುಗ್ರಹಿಸು, ಶ್ರೇಷ್ಠನೂ, ವರದನೂ ಆದ ನಿನ್ನನ್ನು ನಾನು ದರ್ಶನಮಾಡಿ ಈಗ ನಿನ್ನ ಚರಣದ್ವಂದ್ವವನ್ನು ಶರಣಾಗತನಾಗಿರುವೆನು.

ಅನಂತಮಾದ್ಯಂ ಪುರುಷಂ ಪುರಾಣ-
ಮಗೋಚರಂ ಸರ್ವಮನೋಗಿರಾಮಪಿ
ಅದೃಶ್ಯಮಗ್ರಾಹ್ಯಮಮೋಘವಿಕ್ರಮಂ
ತ್ರಿವಿಕ್ರಮಂ ತ್ವಾಂ ಶರಣಂ ಪ್ರಪದ್ಯೇ ॥ ೧೦ ॥

ಅಣೋರಣೀಯಾಂಸಮಚಿಂತ್ಯಮವ್ಯಯಂ
ಮಹಾಂತಮವ್ಯಕ್ತಮನೀಶಮೀಶ್ವರಂ ।
ಪರಾತ್ಪರಂ ಕಾರಣಕಾರಣಂ ವಿಭುಂ
ನಿರಾಶ್ರಯಂ ತ್ವಾಂ ಶರಣಂ ಪ್ರಪದ್ಯೇ ॥ ೧೧ ॥

ಸಹಸ್ರಬಾಹೂದರಪಾದಕಂಧರಂ
ಸಹಸ್ರಶೀರ್ಷೋರುವಿಲೋಚನಾಢ್ಯಂ ।
ವ್ಯಾಪ್ಯ ಸ್ಥಿತಂ ವಿಶ್ವಮಿದಂ ಸಮಂತಾತ್
ಭವಂತಮವ್ಯಕ್ತಮಹಂ ಪ್ರಪದ್ಯೇ ॥ ೧೨ ॥

---

೧೦. ಅಂತವಿಲ್ಲದವನೂ, ಸರ್ವವಸ್ತುಗಳಿಗೆ ಆದಿಯಾದವನೂ, ಪುರಾಣ ಪುರುಷನೂ, ಸರ್ವ ವಾಙ್ಮನಸಗಳಿಗೆ ಅಗೋಚರನೂ, ಜ್ಞಾನ-ಕರ್ಮೇಂದ್ರಿಯಗಳಿಗೆ ಅವಿಷಯನೂ, ಅಮೋಘವಾದ ಪರಾಕ್ರಮವುಳ್ಳವನೂ ಆದ ತ್ರಿವಿಕ್ರಮಾವತಾರ ಮಾಡಿದ ಮೂರ್ತಿಯನ್ನು ಶರಣಹೊಂದಿರುವೆನು.

೧೧. ಸೂಕ್ಷ್ಮವಾದ ವಸ್ತುಗಳಿಗಿಂತ ಪರಮಸೂಕ್ಷ್ಮನೂ, ಮನಸ್ಸಿನಿಂದ ಚಿಂತಿಸಲು ಅಶಕ್ಯನೂ, ವ್ಯಯವಿಲ್ಲದವನೂ, ಮಹಾಪರಿಮಾಣವುಳ್ಳವನೂ, ಅತೀಂದ್ರಿಯನೂ ಮತ್ತೊಬ್ಬ ಪ್ರಭುನಿಯಮ್ಯನಲ್ಲದವನೂ, ಈಶ್ವರಸ್ವರೂಪನೂ, ಶ್ರೇಷ್ಠವಸ್ತುಗಳೆಲ್ಲಕ್ಕಿಂತಲೂ ಶ್ರೇಷ್ಠನೂ ಕಾರಣಗಳಿಗೆ ಕಾರಣನೂ, ವ್ಯಾಪಕನೂ ಮತ್ತು ಆಧಾರ ರಹಿತನೂ ಆದ ಸ್ವಾಮಿಯನ್ನು ಶರಣುಹೊಂದಿರುವೆನು.

೧೨. ವಿಶ್ವರೂಪನಾದುದರಿಂದ ಸಹಸ್ರ ಸಂಖ್ಯೆಯ ಬಾಹು, ಉದರ, ಪಾದ, ಕಂಠ, ಶಿರಸ್ಸು, ತೊಡೆ, ನೇತ್ರಗಳಿಂದ ಕೂಡಿದವನೂ, ಈ ಸಕಲ ಪ್ರಪಂಚವನ್ನು ಸುತ್ತಲು ವ್ಯಾಪಿಸಿಕೊಂಡಿರುವವನೂ, ಮತ್ತು ಅತೀಂದ್ರಿಯನೂ ಆದ ನಿನ್ನಲ್ಲಿ ನಾನು ಶರಣಾಗತನು.

ಸ ವೈ ಕಿಲ ತ್ವಂ ಪುರುಷಃ ಪುರಾಣೋ
ಯ ಏಕ ಏವ ಪ್ರಲಯಾಬ್ಧಿಮಧ್ಯೇ ।
ಆಸೀಚ್ಛಯಾನೋ ಭುವನಾನಿ ಯೋಗಾ- ।
ನ್ನಿಗೂಹ್ಯ ಕುಕ್ಷೌ ಸಚರಾಚರಾಣಿ ॥ ೧೩ ॥

ಸ ವೈ ಭವಾನ್ ಯೋಽಸೃಜದಂಬುಜಾನ್ಮಾಂ
ಸ್ವನಾಭಿಜಾತಾಜ್ಜಗತಃ ಸಿಸೃಕ್ಷಯಾ ।
ದಿದೇಶ ವೇದಾನಪಿ ಮುಹ್ಯಮರ್ಥಿನೇ
ವಿಮುಹ್ಯಮಾನಾಯ ವಿಹಂಗರೂಪಧೃಕ್ ॥ ೧೪ ॥

ಯಸ್ಮಾದಿದಂ ವಿಶ್ವಮಭೂತ್ ಪುರಸ್ತಾತ್
ಯಸ್ಮಿನ್ ಪುನಶ್ಚೈವ ಲಯಂ ಪ್ರಯಾತಿ ।
ಯಃ ಪಾತಿ ಲೋಕಾನ್ ಸಚರಾಚರಾನಿಮಾನ್
ಸ ವೈ ಕಿಲ ತ್ವಂ ಪುರುಷಃ ಪುರಾಣಃ ॥ ೧೫ ॥

---

೧೩. ಯಾವ ಪರಮಾತ್ಮನು ಪ್ರಲಯಕಾಲದಲ್ಲಿ ಅದ್ವಿತೀಯನಾಗಿ ತನ್ನ ಯೋಗಮಾಯೆಯಿಂದ ಚರಾಚರಸಹಿತವಾದ ಭುವನಗಳನ್ನು ತನ್ನ ಉದರದಲ್ಲಿ ಬಚ್ಚಿಟ್ಟುಕೊಂಡು ಸಮುದ್ರ ಮಧ್ಯದಲ್ಲಿ ಶಯನಮಾಡಿದ್ದನೋ, ಅಂತಹ ಪುರಾಣ ಪುರುಷನು ನೀನೇ ಅಲ್ಲವೆ!

೧೪. ಮತ್ತು ಈ ಪ್ರಪಂಚವನ್ನು ಸೃಷ್ಟಿಮಾಡಿಸಲು ತನ್ನ ನಾಭಿಕಮಲ ದಿಂದ ನನ್ನನ್ನು ಸೃಷ್ಟಿಮಾಡಿ ಮೋಹದಿಂದ ಪರವಶನಾಗಿ ಅರ್ಥಿಯಾದ ನನಗೆ ಹಂಸಪಕ್ಷಿಯರೂಪದಿಂದ ವೇದಗಳನ್ನು ಉಪದೇಶಿಸಿರುವ ಪರಮಾತ್ಮ ನೀನಾಗಿರುತ್ತಿ.

೧೫. ಈ ಚರಾಚರಸಹಿತವಾದ ಜಗತ್ತು ಪೂರ್ವದಲ್ಲಿ ಹುಟ್ಟಿ ಆವಿರ್ಭಾವ ಹೊಂದಿರುವುದು ನಿನ್ನಿಂದ, ಅಂತದಲ್ಲಿ ಲಯವನ್ನು ಹೊಂದುವ ಅಧಿಷ್ಠಾನವು ನೀನು, ಸ್ಥಿತಿಕಾಲದಲ್ಲಿ ಲೋಕಗಳನ್ನು ರಕ್ಷಿಸುವವನು ನೀನು. ಈ ರೀತಿಯಾಗಿ ಸೃಷ್ಟಿ-ಸ್ಥಿತಿ-ಲಯಗಳನ್ನು ನಿರ್ವಹಿಸುವ ಪುರಾಣಪುರುಷನು ನೀನಾಗಿರುತ್ತಿ.

ಜನಿಷ್ಯಮಾಣೋ ಜನಿತೋಽಥವಾ ಜನೋ
ನ ತೇ ಮಹಿಮ್ನಃ ಪರಮಂತಮಾಪ ।
ವೀರ್ಯಾಣಿ ತೇ ವೇದ ನ ಕೋಽಪಿ ವಿಷ್ಣೋ
ಯಥೈವ ಭೌಮಾನಿ ರಜಾಂಸಿ ಮಾತುಂ ॥ ೧೬ ॥

ಯಥಾಂಬು ಸಂಗೃಹ್ಯ ಪಯೋಧರೋಽಬ್ಧೇಃ
ಸ್ವಯಂ ಪ್ರವರ್ಷತ್ಯನಿಲೇರಿತೋ ಭುವಿ ।
ತಥೈವ ಚಾಹಂ ಭವತಾ ಪ್ರದತ್ತಂ
ಪ್ರಗೃಹ್ಯ ವಿಶ್ವಂ ಹ್ಯಸೃಜಂಸ್ತ್ವದಾಜ್ಞಯಾ ॥ ೧೭ ॥

ಆದ್ಯಂ ಪವಿತ್ರಂ ಪರಮಂ ಚ ಸತ್ಯಂ
ವಿಜ್ಞಾನಮಾನಂದಮಯಂ ಪರಂ ಚ ।
ಯದ್ಯೋಗಿಗಮ್ಯಂ ನಿಗಮಾದಿಬೀಜಂ
ತ್ವಮೇವ ತದ್ಬ್ರಹ್ಮ ಜಗನ್ನಿದಾನಂ ॥ ೧೮ ॥

---

೧೬. ಪ್ರಾಣಿವರ್ಗದಲ್ಲಿ ಮುಂದೆ ಹುಟ್ಟುವ ಅಥವ ಹಿಂದೆ ಹುಟ್ಟಿರುವ ಯಾರೊಬ್ಬ ವ್ಯಕ್ತಿಯೂ ನಿನ್ನ ಮಹಿಮೆಯ ಅಂತವನ್ನು ತಿಳಿಯಲಾರನು, ವಿಷ್ಣುವೆ! ನೆಲದ ಮೇಲೆ ಇರುವ ಧೂಳಿನ ಕಣಗಳನ್ನು ಲೆಕ್ಕಮಾಡಲು ಹೇಗೆ ಅಶಕ್ಯವೋ, ಅದರಂತೆ ನಿನ್ನ ವೀರ್ಯವನ್ನು ಗಣನೆಮಾಡಲು ಶಕ್ಯವಲ್ಲ.

೧೭. ಮೋಡವು ಸಮುದ್ರದಿಂದ ನೀರನ್ನು ಸಂಗ್ರಹಿಸಿ ಆಕಾಶದಲ್ಲಿ ಗಾಳಿಯಿಂದ ಪ್ರೇರೇಪಿಸಲ್ಪಟ್ಟು ಭೂಮಿಯಲ್ಲಿ ಜಲವನ್ನು ತಾನು ಸುರಿಸುವಂತೆ ನಿನ್ನಿಂದ ನನಗೆ ಕೊಡಲ್ಪಟ್ಟ ವಿಶ್ವವನ್ನು ಸಂಗ್ರಹಿಸಿ ನಿನ್ನ ಆಜ್ಞಾನುಸಾರವಾಗಿ ಸೃಜಿಸುವೆನು.

೧೮. ನಿಖಿಲ ಜಗದಾದಿರೂಪವೂ, ಪವಿತ್ರವೂ, ಉತ್ಕೃಷ್ಟವೂ, ಸತ್ಯಸ್ವರೂಪವೂ, ಜ್ಞಾನ ಮತ್ತು ಪರಮಾನಂದಸ್ವರೂಪವೂ, ಯೋಗಿಗಳಿಗೆ ಯೋಗಸಿದ್ಧಿಯಿಂದ ಗಮ್ಯವೂ, ವೇದಗಳಿಗೆಲ್ಲ ಕಾರಣವೂ ಮತ್ತು ಜಗತ್ತಿಗೆ ಆದಿಕಾರಣರೂಪವೂ ಆದ ವೇದಾಂತಪ್ರತಿಪಾದ್ಯ ಬ್ರಹ್ಮವಸ್ತುವು ನೀನಾಗಿರುತ್ತೀ.

ತ್ವನ್ಮಾಯಯಾ ಮೋಹಿತಬುದ್ಧಯೋ ಜನಾ
ನ ತ್ವಾಂ ವಿಜಾನಂತಿ ವಿಪಶ್ಚಿತೋಽಪಿ ।
ಅಂತಃಸ್ಥಿತಂ ತೇ ಹೃದಯೇಷು ನಿತ್ಯಂ
ವಿಭ್ರಾಜಮಾನಂ ನಿಹಿತಂ ಗುಹಾಯಾಂ ॥ ೧೯ ॥

ಅಪ್ರಾಕೃತಾನಂತಗುಣಾರ್ಣವ ತ್ವಾಂ
ಸ್ತೋತುಂ ನ ಶಕ್ನೋಮ್ಯಹಮಲ್ಪಮೇಧಾಃ ।
ತಥಾಪಿ ಮಹ್ಯಂ ಕೃಪಯಾದ್ಯ ಕೇವಲಂ
ಪ್ರಸೀದ ದೇವೇಶ ಕೃಪಾಂಬುರಾಶೇ ॥ ೨೦ ॥

ಕ್ಷೇತ್ರೇ ತ್ವದೀಯೇಽತ್ರ ತ್ವದಾಜ್ಞಯೈವ
ತ್ವಾಂ ಸಂಯುಜಂತಂ ತವ ದರ್ಶನೋತ್ಸುಕಂ ।
ತ್ವನ್ನಾಭಿಪದ್ಮಾಜ್ಜನಿತಂ ತ್ವಯೈವ
ತ್ವಮೇವ ವೀಕ್ಷ್ಯೋದ್ಧರ ಮಾಂ ಮುಕುಂದ ॥ ೨೧ ॥

---

೧೯. ಲೋಕದಲ್ಲಿ ಪಂಡಿತರಾದ ಜನರೂ ಕೂಡ ನಿನ್ನ ಮಾಯೆಯಿಂದ ಮೋಹಗೊಂಡಿರುವ ಬುದ್ಧಿಯುಳ್ಳವರಾಗಿ ತಮ್ಮ ಹೃದಯದ ಒಳಗೆ ಆಕಾಶದಲ್ಲಿ ಇಡಲ್ಪಟ್ಟಂತೆ ಸರ್ವ ಕಾಲದಲ್ಲಿಯೂ ಪ್ರಕಾಶಿಸುವ ಜ್ಯೋತಿರೂಪನಾದ ನಿನ್ನನ್ನು ತಿಳಿಯುವುದಿಲ್ಲ.

೨೦. ಅಲ್ಪವಾದ ಪ್ರಜ್ಞೆಯುಳ್ಳ ನಾನು ಅಪ್ರಾಕೃತವಾದ ಅನಂತಗುಣಗಳಿಗೆ ಸಮುದ್ರನಂತಿರುವ ನಿನ್ನನ್ನು ಸ್ತೋತ್ರಮಾಡಲು ಸಮರ್ಥನಲ್ಲ. ಕರುಣಾಸಮುದ್ರನೆ! ಮತ್ತು ದೇವತೆಗಳಿಗೆ ಈಶ್ವರನೆ! ಆದರೂ ಕೃಪಾಮಾತ್ರದಿಂದ ಈಗ ನನ್ನನ್ನು ಅನುಗ್ರಹಿಸು.

೨೧. ಮುಕುಂದಸ್ವಾಮಿಯೇ! ನಿನ್ನ ಸಾಕ್ಷಾತ್ಕಾರಕ್ಕೋಸ್ಕರ ನಿನಗೆ ಪ್ರಿಯವಾದ ಈ ಕ್ಷೇತ್ರದಲ್ಲಿ ನಿನ್ನ ಆಜ್ಞೆಯಂತೆ ಅಶ್ವಮೇಧಯಾಗವನ್ನು ಮಾಡುತ್ತಲಿರುವ ಮತ್ತು ನಿನ್ನ ನಾಭಿಕಮಲದಿಂದ ನಿನ್ನಿಂದಲೇ ಸೃಷ್ಟಿಸಲ್ಪಟ್ಟ ನನ್ನನ್ನು ಕರುಣೆಯಿಂದ ನೋಡಿ ಉದ್ಧಾರಮಾಡು.

ಅದೃಷ್ಟಪೂರ್ವಂ ತ್ರಿದಿವೌಕಸಾಂ ಗಣೈಃ
ಸುನಿರ್ಮಲೈರ್ಯೋಗಿಭಿರಪ್ಯಲಭ್ಯಂ ।
ದೃಷ್ಟ್ವಾದ್ಭುತಂ ರೂಪಮಿದಂ ತವಾಗ್ರ್ಯ-
ಮಹಂ ಕೃತಾರ್ಥೋಽಭವಮಬ್ಜನಾಭ ॥ ೨೨ ॥

ತ್ವಮೇವ ಮಾತಾ ಚ ಪಿತಾ ತ್ವಮೇವ
ತ್ವಮೇವ ವಿದ್ಯಾ ಚ ಗುರುಸ್ತ್ವಮೇವ ।
ತ್ವಮೇವ ಬಂಧುಶ್ಚ ಸಖಾ ತ್ವಮೇವ
ತ್ವಮೇವ ಸರ್ವಂ ಮಮ ಜೀವಿತಂ ಚ ॥ ೨೩ ॥

ಇತಿ ಪ್ರಶಸ್ತೈಃ ಸ್ತುತಿಭಿರ್ಮುಕುಂದಂ
ಸ್ತುತ್ವಾಬ್ಜಯೋನಿರ್ವರದಂ ಪುರಃ ಸ್ಥಿತಂ ।
ಬಭೂವ ತನ್ಮುಗ್ಧಮುಖಾವಲೋಕನ-
ಪ್ರವೃದ್ಧಹರ್ಷಾದವಶೋ ಹಿ ತೂಷ್ಣೀಂ ॥ ೨೪ ॥

---

೨೨. ಕಮಲದಿಂದ ಪ್ರಕಾಶಿಸುವ ನಾಭಿಯುಳ್ಳವನೆ! ದೇವತಾಗಣದಿಂದ ಇದುವರೆಗೆ ನೋಡಲ್ಪಡದಿರುವ, ಯೋಗಮಹಿಮೆಯಿಂದ ನಿರ್ಮಲರಾದ ಯೋಗಿಗಳಿಗೆ ಅಲಭ್ಯವಾದ ಮತ್ತು ಅದ್ಭುತವೂ, ಶ್ರೇಷ್ಠವೂ ಆದ ನಿನ್ನ ದಿವ್ಯರೂಪವನ್ನು ನೋಡಿ ನಾನು ಧನ್ಯನಾದೆನು.

೨೩. ಲೋಕದಲ್ಲಿ ನನಗೆ ತಾಯಿ, ತಂದೆ, ವಿದ್ಯಾ, ಗುರು, ಬಂಧು, ಮುಂತಾದ ನನ್ನ ಹಿತಚಿಂತಕರು ನೀನೇ ಆಗಿರುತ್ತೀ, ನನ್ನ ಸರ್ವಸ್ವವೂ ನನ್ನ ಜೀವಿತವೂ ನೀನೇ ಆಗಿರುತ್ತೀ.

೨೪. ಕಮಲಸಂಭೂತನಾದ ಬ್ರಹ್ಮನು ಈ ಪ್ರಶಸ್ತವಾದ ವಾಕ್ಯಗಳಿಂದ ತನ್ನ ಮುಂದುಗಡೆಯಿರುವ ಮುಕುಂದನನ್ನು ಸ್ತುತಿಮಾಡಿ ಆ ಸ್ವಾಮಿಯ ಸುಂದರವಾದ ಮುಖಕಮಲದ ದರ್ಶನದಿಂದ ಉಂಟಾದ ಹರ್ಷೋದ್ರೇಕದಿಂದ ಪರವಶನಾಗಿ ಸುಮ್ಮನಾದನು.

ತಂ ವೀಕ್ಷ್ಯ ದೇವೋ ವರದಃ ಕೃತಾಂಜಲಿಂ
ಸ್ತುವಂತಮಬ್ಜೋದ್ಭವಮಬ್ಜನಾಭಃ ।
ಉವಾಚ ವಾಕ್ಯಂ ಜಲದಸ್ವನೋಪಮಂ
ಪ್ರಹರ್ಷಯನ್ನಂಬುಜಸಂಭವಂ ತದಾ ॥ ೨೫ ॥

ತುಷ್ಟೋಽಸ್ಮ್ಯಹಂ ಪ್ರಸನ್ನೋಽಸ್ಮಿ ಸ್ತೋತ್ರೇಣ ತವ ಸುವ್ರತ ।
ದೃಷ್ಟವಾನಸ್ಮಿ ತೇ ಭಕ್ತಿಮನನ್ಯಾಂ ಸುದೃಢಾಮಪಿ ॥ ೨೬ ॥

ಮಾಮುದ್ದಿಶ್ಯ ಚಿರಂ ಕಾಲಂ ತ್ವಯಾ ತಪ್ತಂ ಮಹತ್ತಪಃ ।
ಭಕ್ತ್ಯಾ ಚೈವಾಶ್ವಮೇಧೋಽಪಿ ಕೃತೋ ಹ್ಯತ್ರ ಮದಾಜ್ಞಯಾ ॥ ೨೭ ॥

ಕ್ಷೇತ್ರೇಽಸ್ಮಿನ್ ಪಾವನೇ ಪುಣ್ಯೇ ಮಮ ಪ್ರೀತಿವಿವರ್ಧನೇ ।
ದ್ರಷ್ಟುಕಾಮೇನ ಭವತಾ ಯದ್ಯಜ್ಞೇನಾಸ್ಮಿ ತೋಷಿತಃ ॥ ೨೮ ॥

---

೨೫. ನಾಭಿಯಲ್ಲಿ ಕಮಲವುಳ್ಳ ವರದಸ್ವಾಮಿಯು ಕಮಲದಲ್ಲಿ ಹುಟ್ಟಿದ, ಕೃತಾಂಜಲಿಯಾಗಿ ಸ್ತೋತ್ರಮಾಡುತ್ತಲಿದ್ದ ಬ್ರಹ್ಮನನ್ನು ನೋಡಿದನು. ಮತ್ತು ಕಮಲಾಸನನನ್ನು ಸಂತೋಷಪಡಿಸುತ್ತ ಮೇಘಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಮಾತನಾಡಿದನು.

೨೬. ಸಾಧುವಾದ ನಿಯಮಾನುಷ್ಠಾನವುಳ್ಳವನೆ! ನೀನು ಮಾಡಿರುವ ಈ ಸ್ತೋತ್ರದಿಂದ ನಾನು ಸಂತೋಷಪಟ್ಟಿರುವೆನು. ಮತ್ತು ಪ್ರಸನ್ನನಾಗಿರುವೆನು. ನಿನಗೆ ನನ್ನಲ್ಲಿ ಅಸಾಧಾರಣವಾಗಿರುವ ದೃಢವಾದ ಭಕ್ತಿಯನ್ನು ತಿಳಿದಿರುವೆನು.

೨೭. ನನ್ನನ್ನು ಉದ್ದೇಶಿಸಿ ಬಹು ದೀರ್ಘಕಾಲದವರೆಗೆ ನೀನು ಮಹಾ ತಪವನ್ನು ಆಚರಿಸಿದೆ. ಮತ್ತು ಈ ಕ್ಷೇತ್ರದಲ್ಲಿ ಭಕ್ತಿಯಿಂದ ನನ್ನ ಆಜ್ಞೆಯಂತೆ ಯಂತೆ ಅಶ್ವಮೇಧಯಾಗವನ್ನು ಮಾಡಿರುತ್ತೀ.

೨೮. ನನಗೆ ಪ್ರೀತಿಯನ್ನೇ ವಿಶೇಷವಾಗಿ ಉಂಟುಮಾಡುವ, ಪಾವನವಾದ ಮತ್ತು ಪುಣ್ಯಕರವಾದ ಈ ಕ್ಷೇತ್ರದಲ್ಲಿ ನನ್ನ ದರ್ಶನವಾಗಬೇಕೆಂಬ ಕಾಮನೆಯಿಂದ ಯಜ್ಞವನ್ನು ಮಾಡಿ ನನ್ನನ್ನು ಸಂತೋಷಪಡಿಸಿರುತ್ತಿ.

ತಸ್ಮಾದದದರ್ಶಯಮಹಂ ರೂಪಂ ದಿವ್ಯಮಿದಂ ತವ ।
ಭಕ್ತ್ಯಾ ತ್ವನನ್ಯಯಾ ಬ್ರಹ್ಮನ್ ಹಯಮೇಧಸ್ತ್ವಯಾ ಕೃತಃ ॥ ೨೯ ॥

ಅತಃ ಪ್ರಸನ್ನೇನ ಮಯಾ ದರ್ಶಿತಂ ರೂಪಮುತ್ತಮಂ ।
ದೇವಾ ಅಪಿ ಚ ಗಂಧರ್ವಾ ಋಷಯೋ ವಾ ಜಗತ್ತ್ರಯೇ ॥ ೩೦ ॥

ಸರ್ವೇಽಪಿ ನ ವಿಜಾನಂತಿ ಮಮೈತದ್ರೂಪಮದ್ಭುತಂ ।
ಪಶ್ಯಂತಿ ಕೇವಲಂ ಭಕ್ತ್ಯಾ ಮದ್ರೂಪಂ ಸನಕಾದಯಃ ॥ ೩೧ ॥

ಭಕ್ತ್ಯಾ ಮಮ ಪ್ರಿಯತಮೋ ಭವಾನಪಿ ಚತುರ್ಮುಖ ।
ತತಸ್ತ್ವದ್ದತ್ತಮಶ್ನಾಮಿ ಹವಿರೇತತ್ ಸುಪಾವನಂ ॥ ೩೨ ॥

ಅತ್ರಾಹಂ ಚಾಪ್ಯಭಿವ್ಯಕ್ತಸ್ತವ ಪ್ರಿಯಚಿಕೀರ್ಷಯಾ ।
ವಿಮಾನೇನ ಸಹಾನೇನ ಪ್ರಾದುರಾಸಂ ಮಖಾನಲಾತ್ ॥ ೩೩ ॥

---

೨೯. ಆದುದರಿಂದ ಪ್ರಸನ್ನನಾಗಿ ಈ ನನ್ನ ದಿವ್ಯರೂಪವನ್ನು ನಿನಗೆ ತೋರಿಸಿರುವೆನು. ಬ್ರಹ್ಮನೆ! ಅನನ್ಯಭಕ್ತಿಯಿಂದ ನನ್ನ ತೃಪ್ತಿಗಾಗಿ ನೀನು ಅಶ್ವಮೇಧ ಯಾಗವನ್ನು ಆಚರಿಸಿರುತ್ತೀ.

೩೦. ಅದರಿಂದ ನಾನು ಪ್ರಸನ್ನನಾಗಿ ಉತ್ತಮವಾದ ಈ ರೂಪವನ್ನು ನಿನಗೆ ತೋರಿಸಿರುವೆನು. ಜಗತ್ತಿನಲ್ಲಿರುವ ದೇವತೆ, ಗಂಧರ್ವ ಮತ್ತು ಋಷಿ ಮುಂತಾದ ಗಣ್ಯರಾದವರು ಕೂಡ ನನ್ನ ಈ ಅದ್ಭುತ ರೂಪವನ್ನು ಇದುವರೆಗೆ ನೋಡಿಲ್ಲ.

೩೧. ನನ್ನ ಅದ್ಭುತರೂಪವನ್ನು ಸರ್ವಜನರು ಸಾಮಾನ್ಯವಾಗಿ ನೋಡಲಾಗುವುದಿಲ್ಲ. ಸನಕಾದಿಯೋಗಿಗಳು ಮಾತ್ರ ಭಕ್ತಿಯಿಂದ ನನ್ನನ್ನು ಸಾಕ್ಷಾತ್ಕರಿಸಿರುವರು.

೩೨. ಚತುರ್ಮುಖನೆ! ಭಕ್ತಿಯಿಂದ ನೀನು ಕೂಡ ನನಗೆ ಪ್ರಿಯತಮನಾಗಿದ್ದೀ. ಆದುದರಿಂದ ಭಕ್ತಿಪೂತವಾದ, ನೀನು ಕೊಟ್ಟಿರುವ ಈ ಯಜ್ಞದ ಹವಿಸ್ಸನ್ನು ಭುಂಜಿಸುವೆನು.

೩೩. ನಿನ್ನ ಇಷ್ಟವನ್ನು ನೆರವೇರಿಸಲೋಸ್ಕರ ನಿನ್ನಲ್ಲಿ ಪ್ರೀತಿಯಿಂದ ಇಲ್ಲಿ ವ್ಯಕ್ತಿಯನ್ನು ಹೊಂದಿರುವೆನು. ಈ ಯಜ್ಞದ ಅಗ್ನಿಮಧ್ಯದಿಂದ ಈ ವಿಮಾನ ಸಹಿತನಾಗಿ ಆವಿರ್ಭವಿಸಿದೆನು.

ಏತದ್ವಿಮಾನಮತುಲಂ ದರ್ಶನಾತ್ಪುಣ್ಯವರ್ಧನಂ ।
ಪುಣ್ಯಕೋಟೀತಿ ವಿಖ್ಯಾತಂ ಸ್ಮರಣಾನ್ಮುಕ್ತಿದಂ ನೃಣಾಂ ॥ ೩೪ ॥

ಹಿತಾಯ ಸರ್ವಜಂತೂನಾಂ ವೈಕುಂಠಾದ್ಭುವಮಾಗತಂ ।
ಅಸ್ಮಿನ್ವಿಮಾನೇ ತಿಷ್ಠಂತಂ ಯೇ ಮಾಂ ಪಶ್ಯಂತಿ ಮಾನವಾಃ ॥ ೩೫ ॥

ವಿಮುಕ್ತಾಃ ಸರ್ವಪಾಪೇಭ್ಯಃ ಸದ್ಯಃ ಪೂತಾ ಭವಂತಿ ತೇ ।
ತ್ವಮತ್ರ ಹಯಮೇಧೇನ ಯಸ್ಮಾದ್ಯಷ್ಟಾಸಿ ಭಕ್ತಿತಃ ॥ ೩೬ ॥

ತಸ್ಮಾದಹಂ ಪ್ರಯಚ್ಛಾಮಿ ವೃಣೀಷ್ವ ವರಮುತ್ತಮಂ ।
ತಸ್ಯ ತದ್ವಚನಂ ಶ್ರುತ್ವಾ ವರದಸ್ಯಾಬ್ಜಸಂಭವಃ ॥ ೩೭ ॥

ಪ್ರಣಿಪತ್ಯಾಂಜಲಿಂ ಕೃತ್ವಾ ಪ್ರೋವಾಚ ಮಧುಸೂದನಂ ।
ತ್ವತ್ಪ್ರಸಾದಾನ್ಮಯಾ ಲಬ್ಧಂ ಬ್ರಾಹ್ಮಂ ಪದಮನುತ್ತಮಂ ॥ ೩೮ ॥

---

೩೪. ಈ ವಿಮಾನವು ನಿರುಪಮವಾದುದು. ದರ್ಶನದಿಂದ ಭಕ್ತರಿಗೆ ಪುಣ್ಯವನ್ನು ವೃದ್ಧಿಮಾಡುವುದು. ಮತ್ತು ಪುಣ್ಯಕೋಟಿ ವಿಮಾನವೆಂಬ ಪ್ರಸಿದ್ಧಿಯುಳ್ಳದ್ದಾಗಿ ಸ್ಮರಣಮಾತ್ರದಿಂದ ಮುಕ್ತಿಫಲವನ್ನು ಕೊಡುವುದು.

೩೫. ಇದು ಸಕಲ ಪ್ರಾಣಿಗಳಿಗೆ ಹಿತವನ್ನು ಅನುಗ್ರಹಿಸಲು ವೈಕುಂಠಲೋಕದಿಂದ ಭೂಮಂಡಲಕ್ಕೆ ಬಂದಿರುವುದು. ಮಾನವರು ಈ ವಿಮಾನಾರೂಢನಾಗಿರುವ ನನ್ನನ್ನು ಸಂದರ್ಶನಮಾಡಬೇಕು.

೩೬. ಹಾಗೆ ದರ್ಶನ ತೆಗೆದುಕೊಂಡಿರುವ ಭಕ್ತಮಾನವರು ಸಕಲ ಪಾಪನಿರ್ಮುಕ್ತರಾಗಿ ತತ್ಕ್ಷಣದಲ್ಲಿ ಪವಿತ್ರರಾಗುವರು. ನೀನು ಈ ಕ್ಷೇತ್ರದಲ್ಲಿ ಭಕ್ತಿಯಿಂದ ಅಶ್ವಮೇಧವನ್ನು ಆಚರಿಸಿದೆಯಲ್ಲವೆ.

೩೭. ಆದ್ದರಿಂದ ಪ್ರಸನ್ನನಾದ ನಾನು ನಿನಗೆ ಇಷ್ಟವಾದ ವರವನ್ನು ಪ್ರದಾನ ಮಾಡುವೆನು. ಉತ್ತಮವಾದ ಇಷ್ಟವರವನ್ನು ಕೇಳು. ಕಮಲಾಸನನು ವರದಸ್ವಾಮಿಯ ಆ ವಚನವನ್ನು ಕೇಳಿದನು.

೩೮. ಮತ್ತು ಅಂಜಲಿಯನ್ನು ಕಟ್ಟಿಕೊಂಡು ನಮಸ್ಕಾರಮಾಡಿ ಮಧುವೈರಿ ಸಂಹಾರಿಯಾದ ವರದಸ್ವಾಮಿಯನ್ನು ಕುರಿತು ಹೇಳಿದನು. ಸ್ವಾಮಿಯೆ! ನಿನ್ನ ಅನುಗ್ರಹದಿಂದ ನಾನು ಉತ್ತಮವಾದ ಬ್ರಹ್ಮಪದವಿಯನ್ನು ಹೊಂದಿರುತ್ತೇನೆ.

ನೈವಾನ್ಯತ್ ಪ್ರಾರ್ಥನೀಯಂ ಮೇ ತವ ಸಂದರ್ಶನಾದ್ವಿನಾ ।
ಇದಂ ಹಿ ಪರಮಂ ರೂಪಂ ತವ ದಿವ್ಯಂ ಸುರೇಶ್ವರ ॥ ೩೯ ॥

ಚಿರಾತ್ ಸಂಪ್ರಾರ್ಥಿತಂ ದ್ರಷ್ಟುಂ ಲಬ್ಧಮೇತನ್ಮಯಾಧುನಾ ।
ತವ ದಿವ್ಯಮಿದಂ ರೂಪಂ ದುರ್ಲಭಂ ಭುವಿ ದೇಹಿನಾಂ ॥ ೪೦ ॥

ಇದಂ ತು ಪ್ರಾರ್ಥನೀಯಂ ಮೇ ತತ್ಕುರುಷ್ವ ಜಗತ್ಪತೇ ।
ಸರ್ವಲೋಕಹಿತಾರ್ಥಾಯ ಯದಿಮಯ್ಯಸ್ತ್ಯನುಗ್ರಹಃ ॥ ೪೧ ॥

ರೂಪಂ ತೇ ಯನ್ಮಯಾ ದೃಷ್ಟಂ ಮುಕ್ತಿದಂ ಪರಮದ್ಭುತಂ ।
ಶ್ರೀವತ್ಸಕೌಸ್ತುಭಧರಂ ಶಂಖಚಕ್ರಗದಾನ್ವಿತಂ ॥ ೪೨ ॥

ಪೀತಾಂಬರಧರಂ ದಿವ್ಯಂ ಸರ್ವಭೂತಾಭಯಪ್ರದಂ ।
ಅನೇನೈವ ಹಿ ರೂಪೇಣ ಸಹಿತಃ ಸರ್ವದೇಹಿನಾಂ ॥ ೪೩ ॥

---

೩೯. ದೇವತೆಗಳಿಗೆಲ್ಲ ಈಶ್ವರನೆ! ಉತ್ತಮವಾದ ಈ ನಿನ್ನ ದಿವ್ಯರೂಪದ ಸಾಕ್ಷಾತ್ಕಾರವನ್ನು ಹೊರತು ಬೇರೆ ಯಾವುದೊಂದು ಪ್ರಾರ್ಥನೆಮಾಡಬೇಕಾದ ವಸ್ತುವು ನನಗೆ ಇರುವುದಿಲ್ಲ. ಉತ್ತಮ ಬ್ರಹ್ಮಪದವಿಯನ್ನು ಹೊಂದಿದ್ದರಿಂದ ಮಿಕ್ಕ ಪ್ರಾಪಂಚಿಕ ವಸ್ತುಗಳಲ್ಲಿ ನಾನು ಆಪ್ತಕಾಮನಾಗಿರುವೆನು.

೪೦. ಬಹುಕಾಲದಿಂದ ಪ್ರಾಣಿಗಳಿಗೆ ನೋಡಲು ದುರ್ಲಭವಾದ ನಿನ್ನ ಈ ದಿವ್ಯರೂಪವನ್ನು ನೋಡಬೇಕೆಂಬ ಕುತೂಹಲವುಳ್ಳವನಾಗಿ ಇದ್ದು ಈಗ ಅದರ ದರ್ಶನ ವನ್ನು ಹೊಂದಿ ಕೃತಾರ್ಥನಾಗಿರುವೆನು.

೪೧. ಪ್ರಪಂಚ ರಕ್ಷಕನಾದ ಸ್ವಾಮಿಯೇ! ನನ್ನಲ್ಲಿ ನೀನು ಅನುಗ್ರಹವನ್ನು ತೋರಿಸುವುದಾದರೆ ಸರ್ವ ಲೋಕಗಳ ಹಿತಕ್ಕೋಸ್ಕರವಾಗಿ ಒಂದು ಪ್ರಾರ್ಥನೆಯನ್ನು ಮಾಡುವೆನು. ಆ ನನ್ನ ಇಷ್ಟವನ್ನು ನೆರವೇರಿಸು.

೪೨. ಶ್ರೀವತ್ಸ ಅಂಕ, ಕೌಸ್ತುಭರತ್ನಗಳನ್ನು ಧರಿಸಿರುವ, ಶಂಖ-ಚಕ್ರ-ಗದೆಗಳಿಂದ ಕೂಡಿರುವ, ಮುಕ್ತಿಯನ್ನು ಅನುಗ್ರಹಿಸುವ ಮತ್ತು ಪರಮಾದ್ಭುತವಾದ ನಿನ್ನ ಈ ರೂಪವನ್ನು ನಾನು ನೋಡಿರುವೆನು.

೪೩. ಹಾಗು ಪೀತಾಂಬರವನ್ನು ಉಟ್ಟುಕೊಂಡಿರುವ ಸರ್ವಭೂತಗಳಿಗೆ ಅಭಯದಾನಮಾಡುವ ನಿನ್ನ ದಿವ್ಯರೂಪವನ್ನು ನಾನು ಸಂದರ್ಶಿಸಿರುವೆನು. ಈ ರೂಪದಿಂದ ಸಹಿತನಾಗಿ ಸರ್ವಭಕ್ತ ಪ್ರಾಣಿಗಳಲ್ಲಿಯೂ ಕರುಣೆ ತೋರಿಸು.

ಪ್ರಷ್ಟೄಣಾಂ ವರದೋ ಭೂತ್ವಾ ವಸ ಮತ್ಪ್ರೀತಿಕಾರಣಾತ್ ।
ಅತ್ರೈವ ಪುಣ್ಯಕೋಟ್ಯಾಖ್ಯೇ ವಿಮಾನೇ ಪುಣ್ಯವರ್ಧನೇ ॥ ೪೪ ॥

ಹಸ್ತಿಶೈಲಸ್ಯ ಶಿಖರೇ ವಸ ತ್ವಂ ಶಾಶ್ವತೀಃ ಸಮಾಃ ।
ದೇವಾಸುರಮನುಷ್ಯಾಣಾಂ ಸದ ಪ್ರತ್ಯಕ್ಷತಾಂ ಗತಃ ॥ ೪೫ ॥

ಅತ್ರ ತಿಷ್ಠತು ದೇವೇಶಃ ಕ್ಷೇತ್ರೇ ಸತ್ಯವ್ರತೇಽನಿಶಂ ।
ಯಥಾ ವೈಕುಂಠಭುವನೇ ಯಥಾ ವಾ ಕ್ಷೀರಸಾಗರೇ ॥ ೪೬ ॥

ತಥೈವಾತ್ರಾಪಿ ವಾಸಸ್ತೇ ಭವತ್ವಿತಿ ಮನೋ ಮಮ ।
ಏಷ ಮೇ ಪರಮಃ ಕಾಮಸ್ತದನುಜ್ಞಾತು ಮರ್ಹಸಿ ॥ ೪೭ ॥

ಇತಿ ಸಂಪ್ರಾರ್ಥಿತೋ ಧಾತ್ರಾ ಭಗವಾನ್ ಭೂತಭಾವನಃ ।
ಬ್ರಹ್ಮಾಣಂ ಕೃಪಯೋದ್ವೀಕ್ಷ್ಯ ಸ್ಮಯಮಾನೋಽಬ್ರವೀದಿದಂ ॥ ೪೮ ॥

---

೪೪. ಪುಣ್ಯವನ್ನು ವೃದ್ಧಿಮಾಡುತ್ತಿರುವ ಈ ಪುಣ್ಯಕೋಟಿಯೆಂಬ ವಿಮಾನದಲ್ಲಿ ನಿನ್ನ ಸಂದರ್ಶನ ಪಡೆದ ಭಾಗ್ಯವಂತರಾದ ಭಕ್ತರಿಗೆ ವರಗಳನ್ನು ಅನುಗ್ರಹಿಸುತ್ತ ನನ್ನ ಮೇಲಿನ ಪ್ರೀತಿಯಿಂದ ಇಲ್ಲಿ ವಾಸಮಾಡು.

೪೫. ಹಸ್ತಿಶೈಲದ ಶಿಖರದಲ್ಲಿ ದೇವ-ಅಸುರ-ಮನುಷ್ಯರಿಗೆ ಯಾವಾಗಲೂ ಪ್ರತ್ಯಕ್ಷದರ್ಶನವನ್ನು ಕೊಟ್ಟು ಅನೇಕ ವರ್ಷಗಳ ಕಾಲ ಇಲ್ಲಿ ವಾಸಮಾಡು.

೪೬. ಈ ಸತ್ಯವ್ರತಕ್ಷೇತ್ರದಲ್ಲಿ ದೇವತೆಗಳ ಸ್ವಾಮಿಯಾದ ನೀನು ಯಾವಾಗಲೂ ಸಾನ್ನಿಧ್ಯವನ್ನು ಇಟ್ಟು ಇಲ್ಲಿ ವಾಸಮಾಡು. ವೈಕುಂಠಲೋಕವೂ, ಕ್ಷೀರಸಾಗರವೂ ಕೂಡ ನಿನಗೆ ಇಷ್ಟವಾದ ವಾಸಭೂಮಿಯಾಗಿಲ್ಲವೆ.

೪೭, ಅದರಂತೆಯೇ ಈ ಸ್ಥಳದಲ್ಲಿ ಕೂಡ ನೀನು ವಾಸಮಾಡಬೇಕೆಂಬುದು ನಿನ್ನ ಭಕ್ತನಾದ ನನ್ನ ಇಷ್ಟವು. ಇದು ನನ್ನ ಇಷ್ಟಗಳಲ್ಲಿ ಉತ್ತಮವಾದುದು. ಆ ಮನೋರಥವನ್ನು ನಡೆಯಿಸಿ ನನ್ನನ್ನು ಅನುಗ್ರಹಿಸು.

೪೮. ಈ ರೀತಿಯಾಗಿ ಬ್ರಹ್ಮನಿಂದ ಪ್ರಾರ್ಥಿಸಲ್ಪಟ್ಟಿರುವ, ಪ್ರಪಂಚದ ಸೃಷ್ಟಿ ಮುಂತಾದ ವ್ಯಾಪಾರಗಳಿಗೆ ಕಾರಣನಾದ ಮತ್ತು ಷಡ್ಗುಣಸಂಪನ್ನನಾದ ವಿಷ್ಣುವು ಬ್ರಹ್ಮನನ್ನು ಕರುಣೆಯಿಂದ ನೋಡಿ ಮಂದಹಾಸದಿಂದ ಈ ಮಾತನ್ನು ಆಡಿದನು.

ಪ್ರಾದುರಾಸಮಹಂ ಬ್ರಹ್ಮಂಸ್ತ್ವದ್ಯಜ್ಞೇನಾತ್ರ ತೋಷಿತಃ ।
ಕೇವಲಂ ತೇ ಹಿತಾರ್ಥಾಯ ಕಿಂ ನ ಕುರ್ಯಾಂ ಪ್ರಿಯಂ ತವ ॥ ೪೯ ॥

ಅಹಮತ್ರೈವ ವತ್ಸ್ಯಾಮಿ ಪ್ರೀತ್ಯರ್ಥಂ ತೇ ಪಿತಾಮಹ ।
ವಾಂಛಿತಂ ಸರ್ವಭೂತಾನಾಂ ಪ್ರಯಚ್ಛನ್ ಶಾಶ್ವತೀಃ ಸಮಾಃ ॥ ೫೦ ॥

ಭಕ್ತಾನಾಂ ವರದೋ ಭೂತ್ವಾ ವಸಾಮ್ಯತ್ರೈವ ಪದ್ಮಜ ।
ಅತ್ರ ಮಾಂ ಸಂಪ್ರಪಶ್ಯಂತಿ ಯಜಂತಿ ಪ್ರಣಮಂತಿ ಯೇ ॥ ೫೧ ॥

ತೇಷಾಮಹಂ ಪ್ರದಾಸ್ಯಾಮಿ ಪುರುಷಾರ್ಥಚತುಷ್ಟಯಂ ।
ಯೋಽನಂತಸರಸಿ ಸ್ನಾತ್ವಾ ಮಾಮರ್ಚಯತಿ ಮಾನವಃ ॥ ೫೨ ॥

ಮುಚ್ಯತೇ ಬ್ರಹ್ಮಹತ್ಯಾಯಾ ನಾತ್ರ ಕಾರ್ಯಾ ವಿಚಾರಣಾ ।
ತುಷ್ಟೋಽಸ್ಮಿ ತೇ ಪ್ರಸನ್ನೋಽಸ್ಮಿ ಹಯಮೇಧೇನ ಸುವ್ರತ ॥ ೫೩ ॥

---

೪೯. ಬ್ರಹ್ಮನೆ! ನಾನು ಮಾಡಿದ ಯಜ್ಞದಿಂದ ಸಂತುಷ್ಟನಾಗಿ ನಿನ್ನ ಹಿತಕ್ಕೋಸ್ಕರಲೇ ಇಲ್ಲಿ ಪ್ರಾದುರ್ಭವಿಸಿರುವೆನು. ಹೀಗಿರಲು ನಿನ್ನ ಇಷ್ಟವನ್ನು ನಿನಗೆ ಕೊಡದಿರುವುದು ಹೇಗೆ?

೫೦. ಪಿತಾಮಹನಾದ ಬ್ರಹ್ಮನೆ! ನಿನ್ನ ಮೇಲಿನ ಪ್ರೀತಿಯಿಂದ ನಿನ್ನ ಇಷ್ಟದಂತೆ ಸರ್ವ ಪ್ರಾಣಿಗಳಿಗೆ ಅವರವರ ಕಾಮಗಳನ್ನು ಕೊಟ್ಟು ತೃಪ್ತಿಪಡಿಸುತ್ತ ಅನೇಕ ವರ್ಷಗಳವರೆಗೆ ಇಲ್ಲಿ ವಾಸಮಾಡುತ್ತೇನೆ.

೫೧. ಪದ್ಮಪುಷ್ಪದಲ್ಲಿ ಹುಟ್ಟಿದ ಬ್ರಹ್ಮನೆ! ಭಕ್ತರಿಗೆ ವರಪ್ರದಾನಮಾಡುತ್ತ ನಾನು ಇಲ್ಲಿಯೇ ವಾಸಮಾಡುವೆನು. ಭಕ್ತರು ಇಲ್ಲಿ ನನ್ನನ್ನು ಸಂದರ್ಶನ, ನಮಸ್ಕಾರ ಮತ್ತು ಪೂಜೆಗಳನ್ನು ನನ್ನ ತೃಪ್ತಿಗೋಸ್ಕರ ಆಚರಿಸುವರು.

೫೨. ಹಾಗೆ ದರ್ಶನಾದಿ ಸೇವಾಪರರಾದ ಭಕ್ತರಿಗೆ ನಾನು ಧರ್ಮ ಮುಂತಾದ ನಾಲ್ಕು ಪುರುಷಾರ್ಥಗಳನ್ನು ಕೊಡುತ್ತೇನೆ. ಈ ಸ್ಥಳದಲ್ಲಿ ನನ್ನ ಧ್ಯಾನಾಸಕ್ತನಾಗಿ ಮಾಡಿದ ಪ್ರತಿಯೊಂದು ಸೇವೆಯೂ ಅನಂತ ಫಲವನ್ನು ಕೊಡುವುದು, ಅನಂತ ಸರಸ್ಸಿನಲ್ಲಿ ಸ್ನಾನಮಾಡಿ ಮಾನವನು ನನ್ನನ್ನು ಪೂಜೆಮಾಡಬೇಕು.

೫೩. ಅವನು ಬ್ರಹ್ಮಹತ್ಯೆಯೆಂಬ ಮಹಾಪಾತಕದಿಂದಲೂ ಬಿಡುಗಡೆ ಹೊಂದುವನು. ವ್ರತ ನಿಯಮಗಳಿಂದ ಭೂಷಿತನೆ! ನೀನು ಮಾಡಿದ ಅಶ್ವಮೇಧ ಯಾಗದಿಂದ ನಾನು ಸಂತೋಷಪಟ್ಟಿರುವೆನು, ಹಾಗು ಪ್ರಸನ್ನನಾಗಿರುವೆನು.

ಯದಾ ಯದಾ ಮಾಂ ಸ್ಮರಸಿ ಪದ್ಮಯೋನೇ ತದಾ ತದಾ ।
ಸ್ಮೃತಮಾತ್ರಸ್ತವ ಪುರೋ ಭವಿಷ್ಯಾಮ್ಯಕ್ಷಿಗೋಚರಃ ॥ ೫೪ ॥

ಮಮ ರೂಪಮಿದಂ ದಿವ್ಯಂ ಚಿದಾನಂದಮಯಂ ಪರಂ ।
ತ್ವಯೈಕೇನೈವ ಸಂದ್ರಷ್ಟುಂ ಶಕ್ಯಂ ನಾನ್ಯೇನ ಕೇನ ಚಿತ್ ॥ ೫೫ ॥

ನ ಶಕ್ಯಂ ಮನುಜೈರ್ದ್ರಷ್ಟುಂ ಮಮ ರೂಪಮಿದಂ ಭುವಿ ।
ತಸ್ಮಾದಂತರ್ಹಿತೋ ಭೂತ್ವಾ ಪ್ರತಿಮಾಯಾಂ ವಸಾಮ್ಯಹಂ ॥ ೫೬ ॥

ಅತ್ರೈವ ಸರ್ವಭೂತಾನಾಂ ಭುಕ್ತಿಮುಕ್ತಿಪ್ರದಾಯಕಃ ।
ಸ್ವೇನೈವೈತತ್ಸ್ವರೂಪೇಣ ದಿವ್ಯೇನ ಚತುರಾನನಃ ॥ ೫೭ ॥

ಮಮ ಸಂದರ್ಶನಂ ಭೂಯಾತ್ತವೈಕಸ್ಯೈವ ಕೇವಲಂ ।
ನಾನ್ಯೇಷಾಮಪಿ ಯತ್ತಸ್ಮಾತ್ಪ್ರತಿಮಾಯಾಂ ವಸಾಮ್ಯಹಂ ॥ ೫೮ ॥

---

೫೪. ಪದ್ಮಗರ್ಭದಿಂದ ಹುಟ್ಟಿದ ಬ್ರಹ್ಮನೆ! ಯಾವಾಗ ಯಾವಾಗ ನನ್ನನ್ನು ನೀನು ಸ್ಮರಿಸುತ್ತೀಯೋ ಆಗ ಎಲ್ಲ ನಿನ್ನ ಸ್ಮರಣಮಾತ್ರದಿಂದ ನಿನ್ನ ಎದುರಿಗೆ ಬಂದು ನಿನ್ನ ನೇತ್ರಗಳಿಗೆ ಗೋಚರನಾಗುವೆನು.

೫೫. ಚೈತನ್ಯ-ಆನಂದಪೂರ್ಣವೂ ಉತ್ಕೃಷ್ಟವೂ ಆದ ನನ್ನ ಈ ದಿವ್ಯರೂಪವನ್ನು ನೀನು ಒಬ್ಬನು ಮಾತ್ರ ನೋಡಲು ಅರ್ಹನು. ಮತ್ತೊಬ್ಬನು ಈ ರೂಪವನ್ನು ನೋಡಲು ಶಕ್ತನಲ್ಲ.

೫೬. ಭೂಲೋಕದಲ್ಲಿ ನನ್ನ ಈ ದಿವ್ಯರೂಪವನ್ನು ಮನುಷ್ಯರು ನೋಡಲು ಶಕ್ತರಲ್ಲ. ಆದುದರಿಂದ ಪ್ರತಿಮೆಯಲ್ಲಿ ನಾನು ಅದೃಶ್ಯನಾಗಿ ಇಲ್ಲಿ ವಾಸಮಾಡುತ್ತೇನೆ.

೫೭. ಚತುರ್ಮುಖನಾದ ಬ್ರಹ್ಮನೆ! ಈ ಸ್ಥಳದಲ್ಲಿಯೇ ಸಕಲ ಪ್ರಾಣಿಗಳಿಗೆ ಭೋಗ-ಮೋಕ್ಷ ಪುರುಷಾರ್ಥಗಳನ್ನು ಕೊಡುತ್ತ ದಿವ್ಯವಾದ ಈ ರೂಪದಿಂದಲೇ ವಾಸಮಾಡುತ್ತೇನೆ.

೫೮. ಪರಮಭಕ್ತನಾದ ನಿನಗೆ ಮಾತ್ರ ನನ್ನ ಸಂದರ್ಶನವು ದೊರೆಯುವುದು. ಮಿಕ್ಕಾದವರಿಗೆ ಈ ದಿವ್ಯರೂಪದ ದರ್ಶನವು ಲಭಿಸಲಾರದು. ಆದ್ದರಿಂದ ನಾನು ಇಲ್ಲಿ ಪ್ರತಿಮೆಯಲ್ಲಿ ವಾಸಮಾಡುವೆನು.

ತಸ್ಮಾದ್ಯಜ್ಞಂ ಸಮಾಪ್ಯ ತ್ವಂ ಕೃತ್ವಾವಭೃಥಮಜ್ಜನಂ ।
ಕೃತ್ವಾ ಸಲ್ಲಕ್ಷಣೈರ್ಯುಕ್ತಾಃ ಪ್ರತಿಮಾಃ ಪದ್ಮಸಂಭವ ॥ ೫೯ ॥

ತತ್ರ ಮಾಂ ಪೂಜಯಸ್ವ ತ್ವಂ ಪ್ರತಿಮಾಯಾಂ ಸಮಾಸ್ಥಿತಂ ।
ದೇವಾಶ್ಚ ಋಷಯಶ್ಚೈವ ಗಂಧರ್ವಾ ಮನುಜಾ ಅಪಿ ॥ ೬೦ ॥

ಸರ್ವೇ ಪೂಜಿತಮಿಚ್ಛಂತಿ ಮಾಮತ್ರ ತ್ವನ್ಮಖೋದ್ಭವಂ ।
ತೇ ವೈ ದ್ರಷ್ಟುಮಶಕ್ತಾ ಹಿ ಮಮೈತದ್ರೂಪಮದ್ಭುತಂ ॥ ೬೧ ॥

ತಸ್ಮಾದಹಂ ಪ್ರತಿಕೃತೌ ಪೂಜಾಂ ಗೃಹ್ಣಾಮಿ ತೈರಹಂ ।
ತ್ರೇತಾಯುಗೇ ತು ಸಂಪ್ರಾಪ್ತೇ ಗಜೇಂದ್ರೋ ನಾಮ ನಾಮತಃ ॥ ೬೨ ॥

ಮದ್ಭಕ್ತಃ ಸ ಮಹಾಭಾಗೋ ಮಾಮಿಹಾರ್ಚಿತುಮೇಷ್ಯತಿ ।
ದ್ವಾಪರೇ ವಾಕ್ಪತಿರ್ವಿಪ್ರೋ ಮಾಮಿಹೈತ್ಯಾರ್ಚಯಿಷ್ಯತಿ ॥ ೬೩ ॥

---

೫೯. ಪದ್ಮದಲ್ಲಿ ಜನ್ಮವೆತ್ತಿದವನೆ! ಆದ್ದರಿಂದ ನೀನು ಈ ಯಜ್ಞವನ್ನು ಸಮಾಪ್ತಿಗೊಳಿಸಿ ಅವಭೃಥಸ್ನಾನವನ್ನು ಮಾಡಿ ಸಾಧುಲಕ್ಷಣಗಳಿಂದ ಕೂಡಿದ ನನ್ನ ಪ್ರತಿಮೆಗಳನ್ನು ಕಲ್ಪಿಸು.

೬೦. ಮತ್ತು ಆ ಪ್ರತಿಮೆಗಳಲ್ಲಿ ವಾಸಮಾಡುವ ನನ್ನನ್ನು ನೀನು ಪೂಜೆ ಮಾಡು. ಅದರಂತೆ ಮುಂದೆ ಅನೇಕ ದೇವ-ಋಷಿ-ಗಂಧರ್ವರು ಮತ್ತು ಮನುಷ್ಯರು ಪೂಜೆಮಾಡುತ್ತಾರೆ.

೬೧. ಇಲ್ಲಿ ನಿನ್ನ ಯಜ್ಞಾನುಷ್ಠಾನದಿಂದ ಸನ್ನಿಹಿತನಾದ ನನ್ನನ್ನು ದೇವಾದಿಗಳೆಲ್ಲರೂ ಪೂಜಿಸಲು ಇಷ್ಟಪಡುತ್ತಾರೆ. ಆದರೆ ನನ್ನ ಈ ಅದ್ಭುತವಾದ ರೂಪವನ್ನು ನೋಡಲು ಶಕ್ತರಾಗಿರುವುದಿಲ್ಲ.

೬೨. ಆದುದರಿಂದ ಪ್ರತಿಮೆಯಲ್ಲಿ ಅದೃಶ್ಯನಾಗಿ ನಾನು ವಾಸಮಾಡುತ್ತ ಅವರು ಮಾಡುವ ಪೂಜಾದಿ ಸೇವೆಗಳನ್ನು ಸ್ವೀಕರಿಸುತ್ತೇನೆ. ತ್ರೇತಾಯುಗವು ಪ್ರಾಪ್ತವಾಗಲು ಗಜೇಂದ್ರನೆಂಬುವನು ನನ್ನನ್ನು ಪೂಜಿಸುವನು.

೬೩. ಗಜೇಂದ್ರನೆಂಬುವನು ಮಹಾಭಾಗ್ಯದಿಂದ ಕೂಡಿದ ನನ್ನ ಪರಮ ಭಕ್ತನು. ಅವನು ನನ್ನನ್ನು ಪೂಜಿಸಲು ಇಲ್ಲಿಗೆ ಬರುವನು, ದ್ವಾಪರಯುಗದಲ್ಲಿ ವಾಕ್ಪತಿಯೆಂಬ ವಿಪ್ರನು ಇಲ್ಲಿಗೆ ಬಂದು ನನ್ನನ್ನು ಪೂಜಿಸುವನು.

ಕಲೌ ಯುಗೇ ತು ಮಾಂ ಶೇಷಃ ಪೂಜಯಿಷ್ಯತಿ ನಾಗರಾಟ್ ।
ಏತನ್ಮಮಾದ್ಭುತಂ ರೂಪಂ ಯಥಾ ತ್ವಂ ದೃಷ್ಟವಾನಸಿ ॥ ೬೪ ॥

ತಥಾ ತ್ವಮಿವ ತೇ ಸರ್ವೇ ದ್ರಷ್ಟುಂ ನಾರ್ಹಂತಿ ಕರ್ಹಿಚಿತ್ ।
ತಸ್ಮಾದದ್ಯೈವ ಧಾತಸ್ತ್ವಂ ಕೃತ್ವಾ ಮಾಂ ಬಿಂಬರೂಪಿಣಂ ॥ ೬೫ ॥

ಯಾವತ್ತ್ರೇತಾಯುಗಪ್ರಾಪ್ತಿಸ್ತಾವದರ್ಚಯ ಮಾಮಿಹ ।
ತ್ರೇತಾಯುಗೇ ತು ಸಂಪ್ರಾಪ್ತೇ ಶ್ರೇಷ್ಠಂ ಸ್ವಾಯಂಭುವಂ ಪದಂ ॥ ೬೬ ॥

ಮದ್ದತ್ತ ಮನುಭೋಕ್ತುಂ ತ್ವಮಿತೋ ಗಚ್ಛ ಪುನರ್ದಿವಂ ।
ಸತ್ಯಾಖ್ಯಮುತ್ತಮಂ ಲೋಕಮಿತಿ ಮಚ್ಛಾಸನಂ ಕುರು ॥ ೬೭ ॥

ಸಮ್ಯಕ್ ಸಂಪೂಜಯಿತ್ವಾ ಮಾಂ ಪ್ರತ್ಯಹಂ ತು ಕೃತೇ ಯುಗೇ ।
ತತಸ್ತ್ರಿಷ್ವಪಿ ಭೂಯಸ್ತ್ವಂ ತ್ರೇತಾದಿಷು ಯುಗೇಷ್ವಿಹ ॥ ೬೮ ॥

---

೬೪. ಕಲಿಯುಗವು ಪ್ರಾಪ್ತವಾಗಲು ಸರ್ಪರಾಜನಾದ ಆದಿಶೇಷನು ಇಲ್ಲಿ ನನ್ನನ್ನು ಪೂಜಿಸುವನು, ಆದರೆ ನನ್ನ ಈ ಅದ್ಭುತರೂಪವನ್ನು ನೀನು ಮಾತ್ರ ಸಾಕ್ಷಾತ್ಕಾರಮಾಡಿರುತ್ತೀ.

೬೫. ಹಾಗೆಯೇ ಗಜೇಂದ್ರ-ವಾಕ್ಪತಿ-ಆದಿಶೇಷ ಮುಂತಾದವರೆಲ್ಲರೂ ಯಾವಾಗಲೂ ರೂಪವನ್ನು ನೋಡಲು ಶಕ್ತರಲ್ಲ. ಬ್ರಹ್ಮನೆ! ಆದ್ದರಿಂದ ಈಗಲೇ ನೀನು ನನ್ನ ಪ್ರತಿಮೆಯನ್ನು ಸಿದ್ಧಗೊಳಿಸು.

೬೬. ಮತ್ತು ಇಂದಿನಿಂದ ತ್ರೇತಾಯುಗವು ಪ್ರಾಪ್ತವಾಗುವವರೆಗೂ ಇಲ್ಲಿ ನೀನು ನನ್ನನ್ನು ಪೂಜೆಮಾಡು, ಅನಂತರ ತ್ರೇತಾಯುಗವು ಬಂದಕೂಡಲೆ ಶ್ರೇಷ್ಠವಾದ ಬ್ರಹ್ಮಲೋಕಸ್ಥಾನವನ್ನು ಹೊಂದು.

೬೭. ನನ್ನಿಂದ ಕೊಡಲ್ಪಟ್ಟ ಭೋಗವನ್ನು ಅನುಭವಿಸಲು ಆಗ ನೀನು ಮತ್ತೆ ಇಲ್ಲಿಂದ ದ್ಯುಲೋಕಕ್ಕೆ ತೆರಳು. ಅಲ್ಲಿ ಸತ್ಯಲೋಕವೆಂಬ ಪರಮಸ್ಥಾನದಲ್ಲಿ ಭೋಗವನ್ನು ಅನುಭವಿಸು, ಈ ನನ್ನ ಶಾಸನವನ್ನು ನೀನು ಆಚರಿಸು.

೬೮-೬೯. ಈ ಕೃತಯುಗದಲ್ಲಿ ಇಲ್ಲಿ ನೀನು ಇದ್ದು ಪ್ರತಿದಿನವೂ ನಿಯಮದಿಂದ ಚೆನ್ನಾಗಿ ನನ್ನನ್ನು ಆರಾಧಿಸು. ಅನಂತರದಲ್ಲಿ ತ್ರೇತಾ-ದ್ವಾಪರ-ಕಲಿ ಎಂಬ ಮೂರು ಯುಗಗಳಲ್ಲಿ ಪ್ರತಿಯೊಂದು ವರ್ಷದಲ್ಲಿಯೂ ಚೈತ್ರಮಾಸದ ಪೂರ್ಣಿಮೆ

ಅಭ್ಯೇತ್ಯ ಚೈತ್ರಪೂರ್ಣಾಯಾಮನುವತ್ಸರಮರ್ಚಯ ।
ಇತ್ಯುಕ್ತೋ ದೇವದೇವೇನ ಧಾತಾ ಸಂಹೃಷ್ಟಮಾನಸಃ ॥ ೧೯ ॥

ಪ್ರಣಮ್ಯ ವರದಂ ಭಕ್ತ್ಯಾ ಕೃತ್ವಾ ಚಾಪಿ ಪ್ರದಕ್ಷಿಣಂ ।
ತದಾಜ್ಞಾಂ ಶಿರಸಾ ಧೃತ್ವಾ ಯಜ್ಞಶೇಷಂ ಚಕಾರ ಹ ॥ ೨೦ ॥

ಋತ್ವಿಗ್ಭಿಃ ಸಹಿತಃ ಸರ್ವೈರ್ಹೃಷ್ಟೈರ್ದೇವಗಣೈಃ ಸಹ
ಸಮಾಪ್ಯ ವಿಧಿವದ್ಯಜ್ಞಮೃತ್ವಿಗ್ಭ್ಯೋ ದತ್ತದಕ್ಷಿಣಃ ॥ ೨೧ ॥

ಬ್ರಾಹ್ಮಣೇಭ್ಯಶ್ಚ ಸರ್ವೇಭ್ಯೋ ದತ್ವಾ ದಾನಾನ್ಯನೇಕಶಃ ।
ಕೃತ್ವಾ ಚಾವಭೃಥಂ ಸ್ನಾನಮನಂತಸರಸೀಜಲೇ ॥ ೨೨ ॥

ವಿಸರ್ಜಯಿತ್ವಾ ತಾನ್ ಸರ್ವಾನೃತ್ವಿಜೋ ಬ್ರಹ್ಮವಾದಿನಃ ।
ದೇವಾಯಾತ್ಮಕೃತಂ ಯಜ್ಞಂ ವರದಾಯ ಸಮರ್ಪಯತ್ ॥ ೨೩ ॥

ಯಲ್ಲಿ ಭಕ್ತಿಯಿಂದ ಪೂಜಿಸು, ಎಂಬುದಾಗಿ ದೇವತೆಗಳಿಗೂ ಪ್ರಭುವಾದ ವರದ ಸ್ವಾಮಿಯಿಂದ ಹೇಳಲ್ಪಟ್ಟ ಬ್ರಹ್ಮನು ಬಹು ಸಂತೋಷಗೊಂಡ ಮಾನಸ ಉಳ್ಳವನಾದನು.

೨೦. ಆಗ ಬ್ರಹ್ಮನು ವರದಸ್ವಾಮಿಯನ್ನು ಭಕ್ತಿಯಿಂದ ನಮಸ್ಕರಿಸಿ ಮತ್ತು ಪ್ರದಕ್ಷಿಣೆಗಳನ್ನು ಮಾಡಿ ಸ್ವಾಮಿಯ ಆಜ್ಞೆಯನ್ನು ಶಿರಸಾವಹಿಸಿ ಯಜ್ಞದ ಶೇಷವಾದ ಅಂಗಕರ್ಮಗಳನ್ನು ಪೂರ್ತಿಮಾಡಿದನು.

೨೧. ಸಂತುಷ್ಟರಾದ ಸಕಲ ಋತ್ವಿಜರಿಂದ ಮತ್ತು ನಿಖಿಲ ದೇವಗಣದಿಂದಲೂ ಸಹಿತನಾಗಿ ಬ್ರಹ್ಮನು ವಿಧಿವತ್ತಾಗಿ ಯಜ್ಞವನ್ನು ಸಮಾಪ್ತಿಗೊಳಿಸಿ ಋತ್ವಿಜರಿಗೆ ಯಜ್ಞಾಂಗವಾದ ದಕ್ಷಿಣೆಯನ್ನು ದಾನಮಾಡಿದನು.

೨೨. ಮತ್ತು ಎಲ್ಲಾ ಬ್ರಾಹ್ಮಣರಿಗೆ ಅನೇಕ ವಿಧವಾದ ದಾನಗಳನ್ನು ಕೊಟ್ಟು ಅನಂತ ಸರೋವರದ ತೀರ್ಥದಲ್ಲಿ ಅವಭೃಥಸ್ನಾನವನ್ನು ಆಚರಿಸಿದನು.

೨೩. ಆ ಯಜ್ಞ ಸಮಾರಂಭಕ್ಕೆ ಸೇರಿದ ಬ್ರಹ್ಮವಾದಿಗಳಾದ ಎಲ್ಲ ಋತ್ವಿಜರನ್ನು ಕಳಿಸಿಕೊಟ್ಟು ತಾನು ಮಾಡಿದ ಅಶ್ವಮೇಧಯಾಗವನ್ನು ವರದಸ್ವಾಮಿಗೆ ಸಮರ್ಪಣಮಾಡಿದನು.

ತತೋ ದೇವರ್ಷಿಗಂಧರ್ವಾಃ ಸಿದ್ಧಾಶ್ಚ ಪತಗೈಃ ಸಹ ।
ತತ್ರ ಸರ್ವೇ ಹರಿಂ ದೃಷ್ಟ್ವಾ ಪ್ರಣಮ್ಯ ಪ್ರೀತಮಾನಸಾಃ ॥ ೭೪ ॥

ಬ್ರಹ್ಮಣಾ ಸಮನುಜ್ಞಾತಾಃ ಪುನರ್ಜಗ್ಮುರ್ಯಥಾಗತಂ ।
ಚತುರ್ಮುಖೋಽಪಿ ರಾಜೇಂದ್ರ ಹರೇರಾಜ್ಞಾಮನುಸ್ಮರ್ರ ॥ ೭೫ ॥

ಕಾರಯಿತ್ವಾ ವಿಧಾನೇನ ಪ್ರತಿಮಾ ವಿಶ್ವಕರ್ಮಣಾ ।
ಶ್ರೀವತ್ಸಕೌಸ್ತುಭಧರಾಃ ಸರ್ವಲಕ್ಷಣಸಂಯುತಾಃ ॥ ೭೬ ॥

ತಾಸ್ವಾವಾಹ್ಯ ರಮಾನಾಥಂ ಸಂಕಲ್ಪ್ಯ ವಿಧಿವದ್ವಿಧಿಃ ।
ಪೂಜಯಾಮಾಸ ವರದಂ ಸರಸ್ವತ್ಯಾ ಸಮನ್ವಿತಃ ॥ ೭೭ ॥

ಕುರ್ವಂಸ್ತ್ರಿಷವಣಂ ನಿತ್ಯಂ ಭಕ್ತ್ಯಾ ಪರಮಯಾ ಯುತಃ ।
ಸದ್ಮೋಕ್ತತಂತ್ರವಿಧಿನಾ ವಿಷ್ಣುಪ್ರೀತಿಕರೇಣ ಚ ॥ ೭೮ ॥

---

೭೪. ಆಗ ಸಮಸ್ತ ದೇವತೆಗಳು, ಋಷಿಗಳು, ಗಂಧರ್ವರು, ಸಿದ್ಧರು ಮತ್ತು ಪಕ್ಷಿಗಳು ಹರಿಯನ್ನು ಸಾಕ್ಷಾತ್ಕರಿಸಿ ನಮಸ್ಕಾರಮಾಡಿ ಸಂತುಷ್ಟವಾದ ಚಿತ್ತ ಉಳ್ಳವರಾದರು.

೭೫. ರಾಜೇಂದ್ರನೆ! ಮತ್ತು ಅವರೆಲ್ಲರೂ ಬ್ರಹ್ಮನಿಂದ ಅನುಜ್ಞೆಯನ್ನು ಪಡೆದು ಹೊರಟು ತಮ್ಮ ಸ್ಥಾನಕ್ಕೆ ಹೋದರು. ಇತ್ತಲಾಗಿ ಚತುರ್ಮುಖನು ಹರಿಯ ಆಜ್ಞೆಯಂತೆ ಮುಂದಿನ ತನ್ನ ಕರ್ತವ್ಯವನ್ನು ಸ್ಮರಿಸಿಕೊಂಡನು.

೭೬. ಶ್ರೀವತ್ಸಾಂಕ ಮತ್ತು ಕೌಸ್ತುಭ ರತ್ನಗಳನ್ನು ಧರಿಸಿರುವ ಸಕಲ ಲಕ್ಷಣಗಳಿಂದ ಕೂಡಿರುವ ವಿಷ್ಣುವಿನ ಪ್ರತಿಮೆಗಳನ್ನು ವಿಶ್ವಕರ್ಮದೇವನಿಂದ ಶಾಸ್ತ್ರ ವಿಧಾನವನ್ನು ಅನುಸರಿಸಿ ಮಾಡಿಸಿದನು.

೭೭. ಬ್ರಹ್ಮನು ಆ ಪ್ರತಿಮೆಗಳಲ್ಲಿ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣ ನನ್ನು ಆವಾಹಿಸಿ ವಿಧಿವತ್ತಾಗಿ ಸಂಕಲ್ಪಮಾಡಿ ಸರಸ್ವತಿಯೊಡನೆ ವರದಸ್ವಾಮಿಯನ್ನು ಪೂಜಿಸಿದನು.

೭೮. ಪ್ರತಿನಿತ್ಯವೂ ತ್ರಿಷವಣಸ್ನಾನವನ್ನು ಮಾಡಿ ಅತ್ಯುತ್ತಮವಾದ ಭಕ್ತಿ ಯಿಂದ ಕೂಡಿದವನಾಗಿ ವಿಷ್ಣುಪ್ರೀತಿಯನ್ನು ಉಂಟುಮಾಡುವ ಸದ್ಮ ಗ್ರಂಥೋಕ್ತ ವಾದ ತಂತ್ರವಿಧಾನವನ್ನು ಅನುಸರಿಸಿ ಆರಾಧಿಸಿದನು.

ಅರ್ಘ್ಯೈಃ ಪಾದ್ಯೈರಾಸನೈಶ್ಚ ತಥೈವಾಚಮನೀಯಕೈಃ ।
ಕಾಮಧೇನೂದ್ಭವೈಃ ಕ್ಷೀರೈರ್ದಿವ್ಯೈಃ ಪಂಚಾಮೃತೈರಪಿ ॥ ೭೯ ॥

ಶುದ್ಧೋದೈರ್ಗಂಧತೋಯೈಶ್ಚ ದೇವಂ ಸಮಭಿಷೇಚಯನ್ ।
ವಸ್ತ್ರೈರ್ದೀಪೈಶ್ಚ ಧೂಪೈಶ್ಚ ನೈವೇದ್ಯೈರ್ವಿವಿಧೈರಪಿ ॥ ೮೦ ॥

ವಿವಿಧೈರ್ಭಕ್ಷ್ಯಭೋಜ್ಯೈಶ್ಚ ಮೃಷ್ಟೈರನ್ನೈಶ್ಚ ಪಾಯಸೈಃ ।
ಪುಷ್ಪಚಂದನತಾಂಬೂಲೈರ್ವರದಂ ಪ್ರೀಣಯನ್ ಹರಿಂ ॥ ೮೧ ॥

ಕಿರೀಟಕೇಯೂರಮುಖೈರ್ದಿವ್ಯಾಭರಣಸಂಚಯೈಃ ।
ಅಲಂಕುರ್ವನ್ ರಮಾನಾಥಂ ದೇವೀಭ್ಯಾಂ ಸಹಿತಂ ಹರಿಂ ॥ ೮೨ ॥

ನೃತ್ಯೈರ್ಗೀತೈಶ್ಚ ವಾದ್ಯೈಶ್ಚ ಛತ್ರವ್ಯಜನಚಾಮರೈಃ ।
ವಿವಿಧೈರುತ್ಸವೈಶ್ಚಾಪಿ ಪ್ರೀಣಯನ್ ಪುರುಷೋತ್ತಮಂ ॥ ೮೩ ॥

---

೭೯. ಪೂಜೆಯಲ್ಲಿ ಅರ್ಘ್ಯ, ಪಾದ್ಯ, ಆಸನ, ಆಚಮನ, ಕಾಮಧೇನುವಿನಿಂದ ಹೊಂದಿದ ಪವಿತ್ರವಾದ ಕ್ಷೀರ, ಶುದ್ಧವಾದ ಪಂಚಾಮೃತ ಇವುಗಳಿಂದ ವಿಧಿವತ್ತಾಗಿ ಪೂಜಾಂಗ ಉಪಚಾರಗಳನ್ನು ಅರ್ಪಿಸಿದನು.

೮೦. ಶುದ್ಧವಾದ ಉದಕದಿಂದಲೂ, ಗಂಧೋದಕದಿಂದಲೂ ತನ್ನ ಪೂಜ್ಯವಾದ ದೇವತೆಯನ್ನು ಅಭಿಷೇಕಮಾಡುತ್ತ ವಸ್ತ್ರ, ದೀಪ, ಧೂಪ ಮತ್ತು ವಿವಿಧವಾದ ನೈವೇದ್ಯಗಳ ಉಪಚಾರ ಪೂಜೆಯನ್ನು ಅರ್ಪಿಸಿದನು.

೮೧. ಮತ್ತು ವಿವಿಧವಾದ ಭಕ್ಷ್ಯಭೋಜ್ಯಗಳನ್ನು ಸಂಸ್ಕೃತವಾದ ಮಿಷ್ಟಾನ್ನಗಳನ್ನು ಪಾಯಸಗಳನ್ನು ಮತ್ತು ಪುಷ್ಪ-ಚಂದನ-ತಾಂಬೂಲ ಮುಂತಾದುವುಗಳನ್ನು ಅರ್ಪಿಸಿ ವರದನಾದ ಹರಿಗೆ ಪ್ರೀತಿಯನ್ನುಂಟುಮಾಡಿದನು.

೮೨. ಕಿರೀಟ-ಕೇಯೂರ ಮುಂತಾದ ದಿವ್ಯವಾದ ಆಭರಣಗಳ ರಾಶಿಯಿಂದ ಶ್ರೀದೇವೀ ಮತ್ತು ಭೂದೇವಿಯರಿಂದ ಸಹಿತನಾದ ನಾರಾಯಣನನ್ನು ಅಲಂಕರಿಸಿದನು.

೮೩. ಗಾಯನ, ವಾದ್ಯ, ಛತ್ರ, ಚಾಮರ, ಬೀಸಣಿಗೆ ಮುಂತಾದುವುಗಳಿಂದ ಉಪಚಾರಪೂಜೆಯನ್ನು ಅರ್ಪಿಸಿ ಅನೇಕವಾದ ಉತ್ಸವಗಳಿಂದ ಪುರುಷೋತ್ತಮನನ್ನು ತೃಪ್ತಿಗೊಳಿಸಿದನು.

ಭೂತ್ವಾ ತದರ್ಚನಾನಂದಮಗ್ನೇಂದ್ರಿಯಗಣೋ ವಿಧಿಃ ।
ತತ್ರೋವಾಸ ಚಿರಂ ಕಾಲಂ ಹರೇರಾಜ್ಞಾನುಶಾಸನಾತ್ ॥ ೮೪ ॥

ದೇವೋಽಪಿ ಹಸ್ತಿಶೈಲಾಗ್ರೇ ಬ್ರಹ್ಮಣಾ ಪೂಜಿತೋಽನಿಶಂ ।
ತತ್ರೈವೋವಾಸ ವರದೋ ಲೋಕಾನುಗ್ರಹಕಾಮ್ಯಯಾ ॥ ೮೫ ॥

ಏವಂ ಪುರೀ ತತ್ರ ನೃಪೇಂದ್ರ ಕಾಂಚೀ
ವಿನಿರ್ಮಿತಾಽಭೂತ್ಕಿಲ ವಿಶ್ವಕರ್ಮಣಾ ।
ವಿಧಾತೃಯಜ್ಞೋತ್ತರವೇದಿಮಧ್ಯಾ-
ದ್ದೇವೋಽಪಿ ತತ್ರಾವಿರಭೂತ್ ಕಿಲೈವಂ ॥ ೮೬ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಸಪ್ತದಶೋಽಧ್ಯಾಯಃ.

---

೮೪. ಬ್ರಹ್ಮನು ಅರ್ಚಿಸುವಾಗ ಆ ಅರ್ಚನೆಯ ಆನಂದದಲ್ಲಿ ಮುಳುಗಿದ ಇಂದ್ರಿಯಗಣವುಳ್ಳವನಾಗಿ ಹರಿಯ ಆಜ್ಞಾನುಸಾರವಾಗಿ ಅಲ್ಲಿ ಚಿರಕಾಲದವರೆಗೆ ವಾಸ ಮಾಡಿದನು.

೮೫. ದೇವನಾದ ವರದಸ್ವಾಮಿಯು ಹಸ್ತಿಶೈಲದ ಶಿಖರದಲ್ಲಿ ಬ್ರಹ್ಮನಿಂದ ಯಾವಾಗಲೂ ಪೂಜಿಸಲ್ಪಡುತ್ತಿರುವವನಾಗಿ ಲೋಕಗಳನ್ನು ಅನುಗ್ರಹಿಸಬೇಕೆಂಬ ಇಷ್ಟದಿಂದ ಅಲ್ಲಿಯೇ ವಾಸಮಾಡಿದನು.

೮೬. ರಾಜೇಂದ್ರನೆ! ಈ ರೀತಿಯಾಗಿ ಆ ಸತ್ಯವ್ರತಕ್ಷೇತ್ರದಲ್ಲಿ "ಕಾಂಚಿ" ಎಂಬ ನಗರಿಯು ವಿಶ್ವಕರ್ಮನಿಂದ ರಚಿಸಲ್ಪಟ್ಟಿತು. ಅಲ್ಲಿ ಬ್ರಹ್ಮನು ಮಾಡಿದ ಅಶ್ವಮೇಧಯಾಗದ ಉತ್ತರವೇದಿಕೆಯ ಮಧ್ಯದಿಂದ ಹರಿಯು ಬ್ರಹ್ಮನನ್ನು ಅನುಗ್ರಹಿಸುವ ನಿಮಿತ್ತದಿಂದ ಆವಿರ್ಭವಿಸಿದನು.

ಕಾಂಚೀಮಾಹಾತ್ಮ್ಯದಲ್ಲಿ ಸಪ್ತದಶಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಅಷ್ಟಾದಶೋಽಧ್ಯಾಯಃ

ನಾರದ ಉವಾಚ :—

ಅಂಬರೀಷ ಮಹಾಪ್ರಾಜ್ಞ ಶೃಣು ವಕ್ಷ್ಯಾಮ್ಯಹಂ ತವ ।
ಪುಣ್ಯಾನಿ ಕಾಂಚ್ಯಾಂ ಸ್ಥಾನಾನಿ ಪುನರನ್ಯಾನಿ ಚಕ್ರಿಣಃ ॥ ೧ ॥

ಯಾನಿ ಶ್ರುತ್ವಾ ನರಃ ಪಾಪಾನ್ಮುಕ್ತೋ ಮೋಕ್ಷಮವಾಪ್ನುಯಾತ್ ।
ತಾನಿ ತೇ ಕೀರ್ತಯಿಷ್ಯಾಮಿ ವಿಷ್ಣೋರಾಯತನಾನ್ಯಹಂ ॥ ೨ ॥

ಪುರಾ ಕೃತಯುಗೇ ರಾಜನ್ ಭೃಗುರ್ಬ್ರಹ್ಮರ್ಷಿಸತ್ತಮಃ ।
ವಿಜ್ಞಾತುಮಿಚ್ಛನ್ ಲೋಕೇಷು ದೇವಾನ್ ಸತ್ತ್ವಗುಣಾಧಿಕಾನ್ ॥ ೩ ॥

---

೧. ನಾರದಮುನಿಯು ಈ ರೀತಿಯಾಗಿ ಮುಂದುವರಿಸಿ ಉಪದೇಶಿಸಿದನು. ಮಹಾಪ್ರಾಜ್ಞನಾದ ಅಂಬರೀಷರಾಜನೆ! ಕಾಂಚೀನಗರದಲ್ಲಿ ಇನ್ನು ಅನೇಕವಾದ ವಿಷ್ಣುಸನ್ನಿಧಾನದಿಂದ ಕೂಡಿದ ಪವಿತ್ರಸ್ಥಾನಗಳನ್ನು ನಿನಗೆ ಹೇಳುವೆನು.

೨. ಮಾನವನು ಯಾವ ಪವಿತ್ರಸ್ಥಾನಗಳನ್ನು ಶ್ರವಣಮಾಡಿದ್ದರಿಂದ ಪಾಪನಿರ್ಮುಕ್ತನಾಗಿ ಮೋಕ್ಷವನ್ನು ಹೊಂದುವನೋ ಆ ವಿಷ್ಣುಸ್ಥಾನಗಳನ್ನು ನಿನಗೆ ಕೀರ್ತನಮಾಡುವೆನು.

೩. ರಾಜನೆ! ಪೂರ್ವದಲ್ಲಿ ಒಂದಾನೊಂದು ಕೃತಯುಗದಲ್ಲಿ ಬ್ರಹ್ಮರ್ಷಿಗಳಲ್ಲಿ ಶ್ರೇಷ್ಠನಾದ ಭೃಗುಮಹರ್ಷಿಯು ಲೋಕದಲ್ಲಿ ಸತ್ತ್ವಗುಣದ ಆಧಿಕ್ಯದಿಂದ ಕೂಡಿದ ದೇವರನ್ನು ತಿಳಿಯಲು ಇಷ್ಟವುಳ್ಳವನಾದನು.

ಯೋ ವೈ ಸತ್ತ್ವಗುಣಶ್ರೇಷ್ಠಸ್ತಮೋರಾಜಸವರ್ಜಿತಃ ।
ತಸ್ಮಾನ್ಮಯಾ ಪರಂ ತತ್ತ್ವಂ ವಿಜ್ಞೇಯಂ ವೀತಕಲ್ಮಷಾತ್ ॥ ೪ ॥

ಇತಿ ನಿಶ್ಚಿತ್ಯ ಮನಸಾ ತತ್ತ್ವವಿಜ್ಞಾನಕಾರಣಾತ್ ।
ಪರಿಭ್ರಮಂಸ್ತ್ರಿಲೋಕೇಷು ಸೇಂದ್ರಾನ್ ಸರ್ವಾನ್ ದಿವೌಕಸಃ ॥ ೫ ॥

ರಜಸ್ತಮೋಗುಣಾಕ್ರಾಂತಾನ್ ಮನ್ಯಮಾನಶ್ಚ ಸರ್ವಶಃ ।
ಸ ತು ಮತ್ವಾ ತ್ರಿಲೋಕೇಶಂ ರುದ್ರಂ ಸತ್ತ್ವಗುಣಾಧಿಕಂ ॥ ೬ ॥

ತಸ್ಮಾದ್ವೇತ್ತುಂ ಚ ವಿಜ್ಞಾನಮಾಯಯೌ ಶಂಕರಾಲಯಂ ।
ತತ್ರ ರಮ್ಯೇ ವನೋದ್ದೇಶೇ ಕ್ರೀಡಂತಮುಮಯಾ ಸಹ ॥ ೭ ॥

ಶಂಕರಂ ಮದರಕ್ತಾಕ್ಷಂ ಶಷ್ಮಿಣಂ ಚ ದಿಗಂಬರಂ ।
ದದರ್ಶ ಮೈಥುನೇ ಸಕ್ತಂ ಭೃಗುರ್ಬ್ರಹ್ಮರ್ಷಿಸತ್ತಮಃ ॥ ೮ ॥

---

೪. ದೇವತೆಗಳ ವರ್ಗದಲ್ಲಿ ತಮೋಗುಣ ರಜೋಗುಣಗಳಿಂದ ವರ್ಜಿತನಾಗಿ ಸತ್ತ್ವಗುಣದ ಅತಿಶಯದಿಂದ ಯಾರುಶ್ರೇಷ್ಠನಾಗಿರುವನೋ, ಅಲ್ಪವಾದರೂ ಮಾಲಿನ್ಯದೋಷವಿಲ್ಲದ ಆ ದೇವತೆಯಿಂದ ನಾನು ಪರತತ್ತ್ವವನ್ನು ತಿಳಿಯಬೇಕು.

೫. ಹೀಗೆಂದು ಮನಸ್ಸಿನಲ್ಲಿ ನಿಶ್ಚಯಿಸಿ ತತ್ತ್ವಜ್ಞಾನವನ್ನು ಹೊಂದಬೇಕೆಂಬ ಅಭಿಲಾಷೆಯಿಂದ ಮೂರು ಲೋಕಗಳಲ್ಲಿಯೂ ಭ್ರಮಿಸಿ ಇಂದ್ರಾದಿದೇವತೆಗಳನ್ನು ಪರೀಕ್ಷಿಸಿದನು.

೬. ಆಗ ಇಂದ್ರಾದಿದೇವತೆಗಳನ್ನು ರಜೋಗುಣ ತಮೋಗುಣಗಳಿಂದ ಸರ್ವ ವಿಧದಿಂದಲೂ ಆವೇಶಹೊಂದಿದವರೆಂದು ತಿಳಿದು ಲೋಕತ್ರಯಕ್ಕೆ ಈಶ್ವರನಾದ ರುದ್ರನನ್ನು ಸತ್ತ್ವಗುಣದಿಂದ ಪರಿಪೂರ್ಣನಾದವನೆಂದು ತಿಳಿದನು.

೭. ಆ ಶಂಕರನಿಂದ ಪರತತ್ತ್ವವನ್ನು ತಿಳಿಯಲು ಶಂಕರನ ಆಲಯಕ್ಕೆ ಬಂದನು. ಆಗ ಶಂಕರನು ರಮಣೀಯ ಉದ್ಯಾನವನದಲ್ಲಿ ಪಾರ್ವತಿಯೊಡನೆ ಕ್ರೀಡಾ ವಿನೋದದಲ್ಲಿ ಆಸಕ್ತನಾಗಿದ್ದನು.

೮. ಬ್ರಹ್ಮರ್ಷಿಗಳಲ್ಲಿ ಅಗ್ರಗಣ್ಯನಾದ ಭೃಗುಮುನಿಯು ಶಂಕರನನ್ನು ಸಂಭೋಗಕಾಲದ ಮದದಿಂದ ಕೆಂಪಾದ ನೇತ್ರಗಳುಳ್ಳವನೂ ಉದ್ರಿಕ್ತ ವೀರ್ಯಪರಿ ಪೂರ್ಣನೂ ಮತ್ತು ದಿಗಂಬರನೂ ಆಗಿ ಮೈಥುನದಲ್ಲಿ ಆಸಕ್ತನಾಗಿರುವುದನ್ನು ಕಂಡನು.

ತದಾ ಕ್ರೀಡಾನ್ವಿತಾ ದೇವೀ ತಂ ವೀಕ್ಷ್ಯ ದ್ವಿಜಮಂಜಸಾ ।
ಲಜ್ಜಯಾ ಹರಮುತ್ಸೃಜ್ಯ ಕ್ಷಣಾದಂತರ್ಹಿತಾಽಭವತ್ ॥ ೯ ॥

ತಮಾಗತಮಭಿಪ್ರೇಕ್ಷ್ಯ ಮೌರ್ಖ್ಯಾದಸಮಯೇ ಭೃಗುಂ ।
ಕ್ರುದ್ಧಸ್ತು ಭಗವಾನ್ ರುದ್ರಸ್ತಂ ಪ್ರಹರ್ತುಮುಪಾಯಯೌ ॥ ೧೦ ॥

ವೇಗಾದ್ದಿಗಂಬರಸ್ತಸ್ಮೈ ದರ್ಶಯಂಲ್ಲಿಂಗಮಾತ್ಮನಃ ।
ತಂ ದೃಷ್ಟ್ವಾ ಕ್ರುದ್ಧಮಾಯಾಂತಂ ಶಂಕರಂ ಚ ದಿಗಂಬರಂ ॥ ೧೧ ॥

ತಾಮಸೋಽಯಮಿತಿ ಜ್ಞಾತ್ವಾ ಶಶಾಪೈನಂ ದ್ವಿಜೋತ್ತಮಃ ।
ಯಸ್ಮಾದ್ವೃಷಾಕಪೇ ಮಹ್ಯಂ ಭವಾಂಲ್ಲಿಂಗಮದರ್ಶಯತ್ ॥ ೧೨ ॥

ತಸ್ಮಾತ್ತ್ವೈದೃಶಂ ರೂಪಂ ಭವೇಲ್ಲಿಂಗಾತ್ಮಕಂ ಭುವಿ ।
ಸ್ವಲಿಂಗಂ ಪರಲಿಂಗಂ ವಾ ಶ್ರೇಯೋಽರ್ಥೀ ನಾವಲೋಕಯೇತ್ ॥

---

೯. ಆಗ ಪತಿಸಂಗ ವಿಹಾರಸೌಖ್ಯದಲ್ಲಿ ಆಸಕ್ತಳಾದ ಪಾರ್ವತಿಯು ಆ ವಿಪ್ರಮುನಿಯನ್ನು ಶೀಘ್ರವಾಗಿ ನೋಡಿ ನಾಚಿಕೆಯಿಂದ ಪತಿಯನ್ನು ಅಲ್ಲಿಯೇ ಬಿಟ್ಟು ಒಂದು ಕ್ಷಣದಲ್ಲಿ ಅಂತರ್ಧಾನ ಹೊಂದಿ ಅದೃಶ್ಯಳಾದಳು.

೧೦. ಆ ಭೃಗುಮುನಿಯು ಮೂರ್ಖತನದಿಂದ ಅನುಚಿತಕಾಲದಲ್ಲಿ ಬಂದಿರುವುದನ್ನು ಕಂಡು ಭಗವಂತನಾದ ರುದ್ರನು ಕೋಪಗೊಂಡವನಾಗಿ ಮುನಿಯನ್ನು ಪ್ರಹರಿಸಲು ವಿಪ್ರನ ಸಮೀಪಕ್ಕೆ ಬಂದನು.

೧೧. ಕೋಪಾವೇಶದ ಭರದಿಂದ ರುದ್ರನು ದಿಗಂಬರನಾಗಿ ತನ್ನ ಲಿಂಗವನ್ನು ವಿಪ್ರನಿಗೆ ತೋರಿಸುತ್ತ ಬಂದನು. ಆಗ ಆ ಶಂಕರನು ಕ್ರುದ್ಧನಾಗಿ ಮತ್ತು ದಿಗಂಬರನಾಗಿ ಬರುತ್ತಿರುವುದನ್ನು ಮುನಿಯು ನೋಡಿದನು.

೧೨. ದ್ವಿಜಶ್ರೇಷ್ಠನಾದ ಮುನಿಯು ಈ ನಿಮಿತ್ತದಿಂದ ಶಿವನು ತಮೋಗುಣದಿಂದ ಕೂಡಿರುವನೆಂದು ತಿಳಿದು ಶಾಪಕೊಟ್ಟನು. ರುದ್ರನೆ! ದಿಗಂಬರನಾಗಿ ನೀನು ಇಲ್ಲಿಗೆ ಬಂದು ನಿನ್ನ ಲಿಂಗವನ್ನು ನನಗೆ ತೋರಿಸಿರುವೆ.

೧೩. ಆದುದರಿಂದ ಭೂಮಿಯಲ್ಲಿ ನಿನಗೆ ಈ ವಿಧವಾದ ಲಿಂಗದ ಆಕಾರವು ಪ್ರಾಪ್ತವಾಗಲಿ, ಶ್ರೇಯಸ್ಸನ್ನು ಅಪೇಕ್ಷಿಸುವವನು ತನ್ನ ಅಥವಾ ಪರನ ಲಿಂಗವನ್ನು ನೋಡಬಾರದು.

ಬ್ರಾಹ್ಮಣೇಭ್ಯೋಽಪಿ ದೇವೇಭ್ಯಃ ಸ್ತ್ರೀಭ್ಯೋ ವಾ ನ ಪ್ರದರ್ಶಯೇತ್ ।
ನ ನಗ್ನಾಂ ಸ್ತ್ರಿಯಮೀಕ್ಷೇತ ವಿನಾ ಜಾಯಾಂ ತು ಸಂಗಮೇ ॥ ೧೪ ॥

ಪಶ್ಯೇತ್ ಪ್ರದರ್ಶಯೇಲ್ಲಿಂಗಂ ಯದಿ ಮೋಹಾನ್ನರಾಧಮಃ ।
ಸ ತು ಸ್ನಾಯುರುಜಂ ಭುಕ್ತ್ವಾ ಪೈಶಾಚೀಂ ಯೋನಿಮಾಪ್ನುಯಾತ್ ॥

ತಸ್ಮಾತ್ ಸ್ವಂ ರೂಪಮುತ್ಸೃಜ್ಯ ಭವಲಿಂಗಾಕೃತಿರ್ಭವ ।
ಪಾಷಂಡಾಃ ಸಂವಹಂತು ತ್ವಾಂ ತಾಮಸಾ ಬ್ರಾಹ್ಮಣದ್ವಿಷಃ ॥ ೧೬ ॥

ಇತಿ ಶಪ್ತ್ವಾ ಭವಂ ವಿಪ್ರೋ ನಿರ್ಜಗಾಮ ತದಾ ನೃಪ ।
ಲಬ್ಧ್ವಾ ಶಾಪಂ ತು ವಿಪ್ರೇಂದ್ರೋ ವಿಧಿಂ ಸತ್ತ್ವಗುಣಾನ್ವಿತಂ ॥ ೧೭ ॥

ತೇನೈವ ತತ್ತ್ವಂ ಪರಮಂ ವೇತ್ತವ್ಯಮಖಿಲಂ ತ್ವಿತಿ ।
ನಿಶ್ಚಿತ್ಯ ಮೇರುಶಿಖರೇ ಸಭಾಯಾಂ ಪದ್ಮಸಂಭವಂ ॥ ೧೮ ॥

---

೧೪. ಮತ್ತು ಸ್ವಲಿಂಗವನ್ನು ದೇವ-ಬ್ರಾಹ್ಮಣರಿಗೂ ಸ್ತ್ರೀಯರಿಗೂ ತೋರಿಸಬಾರದು. ಭಾರ್ಯೆಯೊಡನೆ ಸಂಗವನ್ನು ಮಾಡುವ ಸಮಯ ಹೊರತು ನಗ್ನರಾದ ಸ್ತ್ರೀಯರನ್ನು ನೋಡಕೂಡದು.

೧೫. ಅಧಮನಾದ ಮಾನವನು ಲಿಂಗವನ್ನು ನೋಡಿದರಾಗಲಿ ಅಥವಾ ತೋರಿಸಿದರಾಗಲಿ ಸ್ನಾಯುವ್ಯಾಧಿಯನ್ನು ಅನುಭವಿಸಿ ಪಿಶಾಚಜನ್ಮವನ್ನು ಹೊಂದುವನು.

೧೬. ಇದನ್ನು ನೀನು ಅತಿಕ್ರಮಿಸಿದ್ದರಿಂದ ನಿನ್ನ ಈ ರೂಪವನ್ನು ಬಿಟ್ಟು ಲಿಂಗದ ಆಕಾರವನ್ನು ಹೊಂದು. ತಮೋಗುಣೋದ್ರೇಕವುಳ್ಳ ಬ್ರಾಹ್ಮಣ ದ್ವೇಷಿಗಳಾದ ಪಾಷಂಡಿಗಳು ನಿನ್ನ ಲಿಂಗಮೂರ್ತಿಯನ್ನು ಹೊತ್ತುಕೊಂಡು ಸಂಚರಿಸುವರು.

೧೭. ರಾಜನೆ! ಆಗ ವಿಪ್ರೇಂದ್ರನಾದ ಭೃಗುಮುನಿಯು ಈ ರೀತಿಯಾಗಿ ರುದ್ರನನ್ನು ಶಪಿಸಿ ಮುಂದೆ ಬ್ರಹ್ಮನನ್ನು ಸತ್ತ್ವಗುಣದ ಆಧಿಕ್ಯದಿಂದ ಇರುವನೆಂದು ತಿಳಿದು ಅಲ್ಲಿಗೆ ಹೋಗಲು ಸಿದ್ಧನಾದನು.

೧೮. ಆ ಬ್ರಹ್ಮನಿಂದಲೇ ಶ್ರೇಷ್ಠವಾದ ತತ್ತ್ವವನ್ನು ಸಂಪೂರ್ಣವಾಗಿ ತಿಳಿಯಬೇಕೆಂದು ನಿಶ್ಚಯಿಸಿ ಪದ್ಮಗರ್ಭದಲ್ಲಿ ಉತ್ಪನ್ನನಾದ ಬ್ರಹ್ಮನು ಇದ್ದ ಮೇರು ಪರ್ವತದ ಶಿಖರದ ದೇವಸಭೆಯನ್ನು ಕುರಿತು ಹೋದನು.

ಆಸೀನಮೃಷಿಭಿಃ ಸಾರ್ಧಂ ಸೃಜಂತಂ ಭುವನತ್ರಯಂ ।
ಜೀವಾಂಶ್ಚತುರ್ವಿಧಾನುದ್ಭಿದಂಡಸ್ವೇದಜರಾಯುಜಾನ್ ॥ ೧೯ ॥

ತತ್ರ ಗತ್ವಾ ವಿಧಿಂ ದೃಷ್ಟ್ವಾ ಪ್ರಣಿಪತ್ಯ ಕೃತಾಂಜಲಿಃ ।
ತುಷ್ಟಾವ ತಿಷ್ಠನ್ಪುರತಃ ಸಂವತ್ಸರಶತಂ ನೃಪ ॥ ೨೦ ॥

ನೈವಾಸೀದ್ಬ್ರಹ್ಮಣಃ ಸೃಷ್ಟೇರ್ವಿರಾಮೋಽಬ್ಧೇಸ್ತರಂಗವತ್ ।
ಪ್ರಾಂಜಲಿಂ ತತ್ರ ತಿಷ್ಠಂತಂ ಭೃಗುಂ ಬ್ರಹ್ಮರ್ಷಿಸತ್ತಮಂ ॥ ೨೧ ॥

ನೈವಾವಲೋಕಯತ್ ಸ್ರಷ್ಟಾ ನ ಚೈನಂ ವಾಕ್ಯಮಬ್ರವೀತ್ ।
ತತಃ ಪ್ರಕುಪಿತೋ ವಿಪ್ರಸ್ತಿಷ್ಠನ್ ಸೋಽಥ ಸಭಾತಲೇ ॥ ೨೨ ॥

---

೧೯. ಅಲ್ಲಿ ಬ್ರಹ್ಮನು ಮುನಿಗಳ ಜೊತೆಯಲ್ಲಿ ಕುಳಿತುಕೊಂಡಿರುವನಾಗಿ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜವೆಂಬ ನಾಲ್ಕು ವಿಧದ ಜೀವರಾಶಿಯಿಂದ ಕೂಡಿದ ಮೂರು ಲೋಕಗಳನ್ನು ಸೃಷ್ಟಿಸುತ್ತಿದ್ದನು. ಗರ್ಭ ಆವರಣವಾದ ಜರಾಯುವಿನಿಂದ ಹುಟ್ಟಿರುವ ಮಾನವ-ಪಶು ಮುಂತಾದ ಪ್ರಾಣಿಯನ್ನು ಜರಾಯುಜವೆಂದೂ, ಪಕ್ಷಿ-ಸರ್ಪ ಮುಂತಾದ ಮೊಟ್ಟೆಯಿಂದ ಹುಟ್ಟುವ ಪ್ರಾಣಿಯನ್ನು ಅಂಡಜವೆಂದೂ, ಭೂಮಿಯನ್ನು ಭೇದಿಸಿ ಹುಟ್ಟಿದ ಮರ-ಬಳ್ಳಿ ಮುಂತಾದುವುಗಳನ್ನು ಉದ್ಭಿಜ್ಜವೆಂದೂ ಮಿಕ್ಕ ಕ್ರಿಮಿ ಕೀಟಾದಿಗಳನ್ನು ಸ್ವೇದಜವೆಂದೂ ಕರೆಯುವರು.

೨೦. ರಾಜನೆ! ಅಲ್ಲಿಗೆ ಹೋಗಿ ಬ್ರಹ್ಮನನ್ನು ನೋಡಿ ಅಂಜಲಿಬದ್ಧನಾಗಿ ನಮಸ್ಕರಿಸಿ ಒಂದು ನೂರು ವರ್ಷಕಾಲ ಬ್ರಹ್ಮನ ಮುಂದೆ ನಿಂತುಕೊಂಡನು.

೨೧. ಬ್ರಹ್ಮರ್ಷಿಗಳಲ್ಲಿ ಉತ್ತಮನಾದ ಭೃಗುಮಹರ್ಷಿಯು ಅಷ್ಟು ದೀರ್ಘಕಾಲ ಅಂಜಲಿಬದ್ಧನಾಗಿ ವಿನೀತನಾಗಿ ನಿಂತಿದ್ದರೂ ಕೂಡ ಸಮುದ್ರದ ಅಲೆಗಳಂತೆ ಮಿತಿಯಿಲ್ಲದ ಸೃಷ್ಟಿವ್ಯಾಪಾರದಿಂದ ಬ್ರಹ್ಮನಿಗೆ ವಿರಾಮ ಲಭಿಸಲಿಲ್ಲ.

೨೨. ಆದುದರಿಂದ ಬ್ರಹ್ಮನು ಮುನಿಯನ್ನು ನೋಡಲಿಲ್ಲ. ಮತ್ತು ಒಂದು ಮಾತನ್ನು ಆಡಲೂ ಇಲ್ಲ. ಅದರಿಂದ ಮುನಿಯು ಕೋಪಗೊಂಡು ಸಭಾತಲದಲ್ಲಿ ನಿಂತನು.

ತಥಾಽಬ್ಜಸಂಭವಂ ಮತ್ವಾ ತಂ ರಾಜಸಗುಣಾನ್ವಿತಂ ।
ಶಶಾಪ ರೋಷಾತ್ತ್ವಮಪಿ ನ ತೇಽಸ್ತ್ವಾಯತನಂ ಭುವಿ ॥ ೨೩ ॥

ಯಸ್ಮಾದುಪಸ್ಥಿತಂ ವಿಪ್ರಂ ಭವಾನ್ನೈವಾಲೋಕಯತ್ ।
ಕುಶಲಂ ಚ ನ ಪೃಷ್ಟೋಽಸ್ಮಿ ತ್ವಯಾ ಸ್ವಾಗತಮಿತ್ಯಪಿ ॥ ೨೪ ॥

ಅತಸ್ತ್ವಾಂ ನೈವ ಮನುಜಾ ಪೂಜಯಂತು ಧರಾತಲೇ ।
ಇತ್ಯುಕ್ತ್ವಾ ಪ್ರಯಯೌ ವಿಪ್ರಸ್ತಮತಿಕ್ರಮ್ಯ ವೇಧಸಂ ॥ ೨೫ ॥

ಭೃಗುರ್ಯೋಗಬಲಾದ್ರಾಜನ್ ಶ್ವೇತದ್ವೀಪಂ ಹರೇಃ ಪದಂ ।
ವಿಜ್ಞಾತುಂ ಪರಮಂ ತತ್ತ್ವಂ ತತ್ರ ವಿಷ್ಣೋರ್ಮುಖಾಂಬುಜಾತ್ ॥

ತಮಾಯಾಂತಂ ಭೃಗುಂ ಜ್ಞಾತ್ವಾ ಶಿಶ್ಯೇ ಸುಪ್ತವದಚ್ಯುತಃ ।
ತತ್ರ ಗತ್ವಾ ಭೃಗುರ್ದೇವಂ ಶಯಾನಂ ಯೋಗಮಾಯಯಾ ॥ ೨೭ ॥

೨೩. ಮತ್ತು ನಾಭಿ ಕಮಲಪುಷ್ಪ ಸಂಭೂತನಾದ ಬ್ರಹ್ಮನನ್ನು ರಜೋಗುಣ ದಿಂದ ಕೂಡಿರುವವನನ್ನಾಗಿ ತಿಳಿದು ಅತಿ ಕೋಪದಿಂದ ಲೋಕದಲ್ಲಿ ನಿನಗೆ ಪೂಜಾರ್ಹ ವಾದ ದೇವಾಲಯವು ಇಲ್ಲದೆ ಹೋಗಲೆಂದು ಬ್ರಹ್ಮನಿಗೆ ಶಾಪವನ್ನು ಕೊಟ್ಟನು.

೨೪. ನೀನು ಸಮೀಪಕ್ಕೆ ಬಂದಿರುವ ವಿಪ್ರನಾದ ನನ್ನನ್ನು ನೋಡಲಿಲ್ಲ. ಮತ್ತು ಕುಶಲ ಪ್ರಶ್ನೆ, ಅಥವಾ ಸ್ವಾಗತ ವಚನ, ವಿಷಯವಾಗಿ ಸಂಭಾಷಿಸಲೂ ಇಲ್ಲ.

೨೫. ಆದುದರಿಂದ ಭೂಮಂಡಲದಲ್ಲಿ ಮಾನವರು ನಿನ್ನನ್ನು ಪೂಜಿಸುವುದು ಬೇಡ, ನೀನು ಅವರಿಗೆ ಪೂಜ್ಯನಲ್ಲ, ಹೀಗೆಂದು ವಿಪ್ರನು ಬ್ರಹ್ಮನನ್ನು ಶಪಿಸಿ ಅವನನ್ನು ಬಿಟ್ಟು ಮುಂದಕ್ಕೆ ಹೋದನು.

೨೬. ರಾಜನೆ! ಭೃಗುಮುನಿಯು ಹರಿಯ ವಾಸಸ್ಥಳವಾದ ಶ್ವೇತದ್ವೀಪಕ್ಕೆ ಯೋಗಶಕ್ತಿಯಿಂದ ಬೇಗ ಹೋಗಿ ವಿಷ್ಣುವಿನ ಮುಖಕಮಲದಿಂದ ಪರಮತತ್ತ್ವ ವನ್ನು ತಿಳಿಯಲು ಯತ್ನಿಸಿದನು.

೨೭. ಚ್ಯುತಿರಹಿತನಾದ ವಿಷ್ಣುವು ಭೃಗುಮುನಿಯು ಬರುವುದನ್ನು ಕಂಡು ನಿದ್ದೆಹೋದ ಮಾನವನಂತೆ ಶಯನಮಾಡಿದನು. ಆಗ ಮುನಿಯು ಅಲ್ಲಿಗೆ ಹೋಗಿ ಯೋಗಮಾಯೆಯಿಂದ ಶಯನಮಾಡಿರುವ ವಿಷ್ಣುಪರಮಾತ್ಮನನ್ನು ನೋಡಿದನು.

ದೃಷ್ಟ್ವಾ ತಸ್ಯಾಂತಿಕೇ ತಿಷ್ಠನ್ ಕಾಂಕ್ಷನ್ನಿದ್ರಾಪ್ರಬೋಧನಂ ।
ತಿಷ್ಠತಸ್ತತ್ರ ತಸ್ಯೈವಮಭೂದಬ್ದಶತಂ ನೃಪ ॥ ೨೮ ॥

ತತಃ ಸಂಕುಪಿತೋ ವಿಪ್ರಸ್ತನ್ಮಾಯಾಮೋಹಿತಾಶಯಃ ।
ಶ್ರೀವತ್ಸಲಾಂಛನೇ ದೇವಂ ಪಾದೇನೋರಸ್ಯತಾಡಯತ್ ॥ ೨೯ ॥

ತಸ್ಮಾತ್ಸಮುತ್ಥಿತಾ ಲಕ್ಷ್ಮೀಸ್ತ್ಯಕ್ತ್ವಾಶ್ರಯಾದ್ವಕ್ಷಸೋ ಹರೇಃ ।
ತಾಡಿತಾ ಭೃಗುಣಾ ಸಮ್ಯಕ್ಪಾದೇನೈನಂ ಶಶಾಪ ಚ ॥ ೩೦ ॥

ಮೂಢ ಮಾಮತ್ರ ಪಾದೇನ ಯದ್ಭವಾನಭ್ಯತಾಡಯತ್ ।
ತಸ್ಮಾತ್ತ್ವಂ ತಪಸಾ ಭ್ರಷ್ಟೋ ಭವ ದಾರಿದ್ರ್ಯಪೀಡಿತಃ ॥ ೩೧ ॥

ದೇವ್ಯಾಮೇವಂ ಶಪಂತ್ಯಾಂ ತು ಸಂಪ್ರಬುದ್ಧಸ್ತದಾ ಹರಿಃ ।
ದೃಷ್ಟ್ವಾ ಪಾರ್ಶ್ವಗತಂ ವಿಪ್ರಂ ದೇವೀಂ ಚೋವಾಚ ವಿಸ್ಮಿತಃ ॥ ೩೨ ॥

---

೨೮. ವಿಷ್ಣುವನ್ನು ನೋಡಿ ನಿದ್ರೆಯಿಂದ ವಿಷ್ಣುವು ಎಚ್ಚರಹೊಂದುವುದನ್ನು ನಿರೀಕ್ಷಿಸಿ ವಿಷ್ಣುವಿನ ಸಮೀಪದಲ್ಲಿ ನಿಂತನು. ರಾಜನೆ! ಹೀಗೆ ನಿಂತಿರುವಾಗ ಮುನಿಗೆ ಒಂದು ನೂರು ವರ್ಷಗಳು ಮತ್ತೆ ಕಳೆದವು.

೨೯. ಅಲ್ಲಿ ವಿಷ್ಣುವಿನ ಮಾಯೆಯಿಂದ ಮೂಢವಾದ ಅಂತಃಕರಣವುಳ್ಳ ಮುನಿಯು ಆದರಿಂದ ಕುಪಿತನಾಗಿ ಶ್ರೀವತ್ಸಲಾಂಛನದಿಂದ ಕೂಡಿದ ವಿಷ್ಣುವಿನ ವಕ್ಷಸ್ಥಳದಲ್ಲಿ ಕಾಲಿನಿಂದ ಒದ್ದನು.

೩೦. ಆಗ ಭೃಗುಮುನಿಯಿಂದ ಒದೆಯಲ್ಪಟ್ಟ ಲಕ್ಷ್ಮಿಯು ವಿಷ್ಣುವಕ್ಷಸ್ಥಳವೆಂಬ ತನ್ನ ವಾಸಮಾಡುವ ಆಶ್ರಯವನ್ನು ಬಿಟ್ಟು ಮೇಲಕ್ಕೆ ಎದ್ದು ಮುನಿಯನ್ನು ಈ ರೀತಿಯಾಗಿ ಶಪಿಸಿದಳು.

೩೧. ಮೂರ್ಖನೆ! ನೀನು ಪತಿಯ ವಕ್ಷಸ್ಥಳದಲ್ಲಿ ವಾಸಮಾಡಿದ ನನ್ನನ್ನು ಪಾದದಿಂದ ಪ್ರಹರಿಸಿದೆಯಾದ್ದರಿಂದ ನೀನು ತಪೋಭ್ರಷ್ಟನಾಗು. ಮತ್ತು ದಾರಿದ್ರ್ಯ ದುಃಖದಿಂದ ಪೀಡಿತನಾಗು.

೩೨. ಲಕ್ಷ್ಮೀದೇವಿಯು ವಿಪ್ರನಿಗೆ ಈ ರೀತಿಯಾಗಿ ಶಾಪಕೊಡುತ್ತಿರಲು ಹರಿಯು ಎಚ್ಚೆತ್ತುಕೊಂಡವನಾಗಿ ಪಾರ್ಶ್ವದಲ್ಲಿ ನಿಂತಿದ್ದ ವಿಪ್ರನನ್ನೂ ಲಕ್ಷ್ಮೀದೇವಿಯನ್ನೂ ನೋಡಿ ಆಶ್ಚರ್ಯದಿಂದ ಕೂಡಿ ಈ ರೀತಿಯಾಗಿ ಹೇಳಿದನು.

ಕಿಮರ್ಥಮಾಗತೋ ವಿಪ್ರಸ್ತ್ವಯಾ ಶಪ್ತಃ ಕುತೋ ಹ್ಯಯಂ ।
ದೇವೈರಪಿ ಸಗಂಧರ್ವೈರ್ಮನುಷ್ಯೈರ್ವಾ ಜಗತ್ತ್ರಯೇ ॥ ೩೩ ॥

ಬ್ರಾಹ್ಮಣೋ ನಾವಮಂತವ್ಯ ಇತಿ ಮಚ್ಛಾಸನಂ ಕಿಲ ।
ತದ್ವಿಸ್ಮೃತ್ಯ ತ್ವಯಾ ವಿಪ್ರಃ ಕಿಮರ್ಥಮವಮಾನಿತಃ ॥ ೩೪ ॥

ತಸ್ಯ ತದ್ವಚನಂ ಶ್ರುತ್ವಾ ದೇವೀ ವಚನಮಬ್ರವೀತ್ ।
ದೇವಾಯಂ ಸ್ವೇನ ಪಾದೇನ ತವೋರಸಿ ಮದಾಶ್ರಯೇ ॥ ೩೫ ॥

ಅತಾಡಯದ್ರುಷಾಭ್ಯೇತ್ಯ ತಸ್ಮಾದಶಪಮಂಜಸಾ ।
ಇತ್ಯುಕ್ತಸ್ತತ್ಕ್ಷಣಾದ್ದೇವಃ ಸಮುತ್ಥಾಯ ಸಸಂಭ್ರಮಂ ॥ ೩೬ ॥

ಪ್ರಾರ್ಥಯಾಮಾಸ ವಿಪ್ರೇಂದ್ರಂ ದೃಷ್ಟ್ವಾ ತಿಷ್ಠಂತಮಂತಿಕೇ ।
ಬ್ರಹ್ಮನ್ ವಜ್ರಸಮೇ ವ್ಯೂಢೇ ಕಿಣಬದ್ಧೇ ಮಮೋರಸಿ · ॥ ೩೭ ॥

---

೩೩. ಈ ವಿಪ್ರನು ಇಲ್ಲಿಗೆ ಏತಕ್ಕೆ ಬಂದಿರುವನು? ಮತ್ತು ಇವನು ನಿನ್ನಿಂದ ಶಪಿಸಲ್ಪಡಲು ಕಾರಣವೇನು? ಮೂರು ಲೋಕಗಳಲ್ಲಿಯೂ ದೇವ-ಗಂಧರ್ವ-ಮನುಷ್ಯರಿಂದ ಬ್ರಾಹ್ಮಣನು ತಿರಸ್ಕರಿಸಲ್ಪಡಲಾಗದು.

೩೪. ಯಾರೇ ಆಗಲಿ ಬ್ರಾಹ್ಮಣನನ್ನು ಅವಮಾನಮಾಡಲಾಗದೆಂಬುದು ನನ್ನ ಶಾಸನವಲ್ಲವೆ, ಅದನ್ನು ಮರೆತು ನೀನು ವಿಪ್ರನನ್ನು ಏತಕ್ಕೆ ಶಪಿಸಿ ಅವಮಾನ ಮಾಡಿದೆ?

೩೫. ಪತಿಯ ಈ ಮಾತನ್ನು ಕೇಳಿ ದೇವಿಯು ಈ ವಚನವನ್ನು ಆಡಿದಳು. ಸ್ವಾಮಿಯೆ! ಇವನು ತನ್ನ ಕಾಲಿನಿಂದ ನನ್ನ ಆಶ್ರಯವಾದ ನಿನ್ನ ವಕ್ಷಃಸ್ಥಳದಲ್ಲಿ ಒದ್ದನು.

೩೬. ಬಹು ಕೋಪದ ವೇಗ ಭರದಿಂದ ಬಂದು ಅವನು ಒದ್ದಿದ್ದರಿಂದ ನಾನು ಸಾಹಸದಿಂದ ಇವನನ್ನು ಶಪಿಸಿದೆನು. ಎಂದು ಹೇಳಲಾಗಿ ತತ್ಕ್ಷಣದಲ್ಲಿ ವಿಷ್ಣುವು ಗಾಬರಿಯಿಂದ ಮೇಲಕ್ಕೆ ಎದ್ದನು.

೩೭. ಮತ್ತು ಹತ್ತಿರದಲ್ಲಿ ನಿಂತಿದ್ದ ವಿಪ್ರಶ್ರೇಷ್ಠನನ್ನು ನೋಡಿ ಪ್ರಾರ್ಥಿಸಿಕೊಂಡನು. ಬ್ರಾಹ್ಮಣನೆ! ನನ್ನ ವಕ್ಷಃಸ್ಥಳವು ವಜ್ರದಂತೆ ಗಟ್ಟಿಯಾದದ್ದೂ ಒತ್ತಾದ ಸನ್ನಿವೇಶವುಳ್ಳದ್ದೂ ಮತ್ತು ವ್ರಣಚಿಹ್ನಗಳಿಂದ ವಿಷಮವಾದುದೂ ಆಗಿದೆ.

ಸಂಲಗ್ನಸ್ಯಾಂಬುಜಾಭಸ್ಯ ಮೃದುಪಲ್ಲವರೋಚಿಷಃ ।
ಬಭೂವ ತವಪಾದಸ್ಯ ಕೀದೃಶೀ ಹಂತ ವೇದನಾ ॥ ೩೮ ॥

ಇತ್ಯುಕ್ತ್ವಾ ವಿಪ್ರವರ್ಯಸ್ಯ ಸಂಗೃಹ್ಯಾಂಘ್ರಿದ್ವಯಂ ಹರಿಃ ।
ಸಮಾಲಭ್ಯ ಸ್ವಪಾಣಿಭ್ಯಾಂ ಮುಮರ್ದಾಂಬುಜಲೋಚನಃ ॥ ೩೯ ॥

ತತಃ ಪ್ರಕ್ಷಾಳ್ಯ ಪಾದೌ ದ್ವೌ ಶ್ರಿಯಾ ಸಹ ಜಗತ್ಪತಿಃ ।
ಪೃಷ್ಟ್ವಾ ತಂ ಕುಶಲಂ ವಿಪ್ರಂ ಪಪ್ರಚ್ಛಾಗಮಕಾರಣಂ ॥ ೪೦ ॥

ತತಃ ಖಿನ್ನಮನಾ ವಿಪ್ರಃ ಪಶ್ಚಾತ್ತಾಪೇನ ಯಂತ್ರಿತಃ ।
ಲಜ್ಜಯಾವನತೋ ಭೂತ್ವಾ ಪ್ರಣಿಪತ್ಯೇದಮಬ್ರವೀತ್ ॥ ೪೧ ॥

ಪಾಹಿ ಮಾಂ ದೇವದೇವೇಶ ಪಾಹಿ ಮಾಂ ಪಂಕಜೇಕ್ಷಣ ।
ಕೃತಾಪರಾಧಂ ವಿಶ್ವೇಶ ಪಾಹಿ ಮಾಂ ಕರುಣಾನಿಧೇ ॥ ೪೨ ॥

---

೩೮. ಇಂತಹ ಎದೆಯ ಸ್ಪರ್ಶವು ನಿನ್ನ ಕಮಲದಂತೆ ಮತ್ತು ಪಲ್ಲವದಂತೆ ಸುಂದರವೂ ಮೃದುವೂ ಆದ ನಿನ್ನ ಪಾದಕ್ಕೆ ಉಂಟಾಗಿ ಎಷ್ಟು ವೇದನೆಯಾಗಿದೆಯೋ? ತುಂಬಾ ಖೇದವಾಗುವುದು.

೩೯. ಪುಂಡರೀಕಾಕ್ಷನಾದ ಹರಿಯು ಈರೀತಿಯಾಗಿ ಹೇಳಿ ವಿಪ್ರಶ್ರೇಷ್ಠನ ಚರಣಯುಗ್ಮವನ್ನು ಹಿಡಿದು ತನ್ನ ಪಾಣಿಗಳಿಂದ ಒತ್ತಿ ಸುಖಕರವಾಗಿ ಮರ್ದಿಸಿದನು.

೪೦. ಅನಂತರದಲ್ಲಿ ಜಗದ್ರಕ್ಷಕನಾದ ಸ್ವಾಮಿಯು ಲಕ್ಷ್ಮೀದೇವಿಯೊಡನೆ ವಿಪ್ರನ ಚರಣಗಳನ್ನು ತೊಳೆದು ಕುಶಲಪ್ರಶ್ನೆಯನ್ನು ಮಾಡಿ ವಿಪ್ರನು ಬಂದಿರುವ ಕಾರಣವನ್ನು ಪ್ರಶ್ನಿಸಿದನು.

೪೧. ಭಗವಂತನು ಪ್ರಶ್ನಮಾಡಿದ ತರುವಾಯ ಖೇದಪಡುತ್ತಲಿದ್ದ ಮಾನಸವುಳ್ಳ ವಿಪ್ರನು ತಾನು ಮಾಡಿರುವ ಅಪರಾಧದಲ್ಲಿ ಪಶ್ಚಾತ್ತಾಪದಿಂದ ಕೂಡಿ ನಾಚಿಕೆಯಿಂದ ತಲೆಯನ್ನು ಬಾಗಿಸಿ ನಮಸ್ಕರಿಸಿ ಈ ರೀತಿಯಾಗಿ ಹೇಳಿದನು.

೪೨. ದೇವತೆಗಳಿಗೆ ದೇವನಾದ ಈಶ್ವರನೆ! ಕಮಲದಂತೆ ನಯನವುಳ್ಳವನೆ! ವಿಶ್ವಕ್ಕೆ ಈಶನೆ! ಕರುಣಾಮೃತದ ನಿಧಿಯೆ! ನನ್ನನ್ನು ರಕ್ಷಿಸು, ನನ್ನನ್ನು ರಕ್ಷಿಸು, ಅಪರಾಧಿಯಾದ ನನ್ನನ್ನು ರಕ್ಷಿಸು.

ವಿಶುದ್ಧಸತ್ತ್ವಂ ತ್ರಿಗುಣಾತಿಗಂ ತಂ
ತ್ರಯೀಮಯಂ ವಿಶ್ವನಿಧಾನಮಾದ್ಯಂ ।
ವಿಶ್ವೋದರಂ ಕಾರಣಕಾರಣಂ ವಿಭುಂ
ಪರಾತ್ಪರಂ ತ್ವಾಂ ಶರಣಂ ಪ್ರಪದ್ಯೇ ॥ ೪೩ ॥

ತ್ವತ್ತಃ ಪರಂ ತತ್ತ್ವಮಿಹ ಪ್ರವೇತ್ತು-
ಮಭ್ಯೇತ್ಯ ಮೋಹಾದಹಮುದ್ರುಹಂ ತ್ವಾಂ ।
ಅತಃ ಪ್ರಪನ್ನೋಽಸ್ಮಿ ತವಾಂಘ್ರಿಯುಗ್ಮೇ
ಕೃತಾಗಸಂ ಮಾಂ ಪರಿಪಾಹಿ ವಿಷ್ಣೋ ॥ ೪೪ ॥

ಇತಿ ಪ್ರಪನ್ನಂ ಶರಣೈಷಿಣಂ ಭೃಗುಂ
ಪಶ್ಚಾತ್ತಪಂತಂ ಸ್ವಕೃತಾಪರಾಧಾತ್ ।
ಭಕ್ತಾನುಕಂಪೀ ಭಗವಾನ್ ಮುಕುಂದಃ
ಪ್ರೋವಾಚ ವಿಪ್ರಂ ಪರಿಸಾಂತ್ವಯನ್ ಗಿರಾ ॥ ೪೫ ॥

---

೪೩. ಸ್ವಾಮಿಯೆ! ಶುದ್ಧವಾದ ಸತ್ತ್ವವುಳ್ಳವನೂ, ಗುಣತ್ರಯವನ್ನು ಮೀರಿದವನೂ, ವೇದತ್ರಯಸ್ವರೂಪನೂ, ವಿಶ್ವಕ್ಕೆ ನಿಧಿಯಂತೆ ಶಾಶ್ವತ ಆಧಾರನೂ, ಸಕಲ ಪ್ರಪಂಚಕ್ಕೆ ಆದಿಭೂತನೂ, ವಿಶ್ವವನ್ನು ಉದರದಲ್ಲಿ ಧರಿಸಿದವನೂ, ಕಾರಣಕ್ಕೆ ಕಾರಣನೂ ಮತ್ತು ವ್ಯಾಪಕನೂ ಆದ ನಿನ್ನನ್ನು ನಾನು ಶರಣಾಗತನಾಗಿರುವೆನು.

೪೪. ಸ್ವಾಮಿಯೇ! ನಿನಗಿಂತಲೂ ಉತ್ಕೃಷ್ಟವಾದ ಪರತತ್ತ್ವವನ್ನು ನಿನ್ನಿಂದ ತಿಳಿಯಲು ನಿನ್ನ ಸಮೀಪಕ್ಕೆ ಬಂದು ನಿನ್ನನ್ನು ಮೋಹದಿಂದ ಒಂದು ದೊಡ್ಡ ದ್ರೋಹವನ್ನು ಆಚರಿಸಿರುವೆನು. ವಿಷ್ಣುವೇ! ಆದುದರಿಂದ ನಿನ್ನ ಚರಣ ಯುಗ್ಮಕ್ಕೆ ನಾನು ಶರಣಾಗತನಾಗಿರುವೆನು. ಅಪರಾಧವನ್ನು ಮಾಡಿರುವ ನನ್ನನ್ನು ಪರಿಪಾಲಿಸು.

೪೫. ಭೃಗುಮುನಿಯು ತಾನು ಮಾಡಿದ ಅಪರಾಧದಲ್ಲಿ ಪಶ್ಚಾತ್ತಾಪದಿಂದ ನೊಂದು ಶರಣಾರ್ಥಿಯಾಗಿ ಭಗವಂತನನ್ನು ಆಶ್ರಯಿಸಲು ಭಕ್ತರಲ್ಲಿ ದಯಾಮಯನಾದ, ಭಗವಂತನಾದ ಮುಕುಂದನು ವಿಪ್ರನನ್ನು ಮೃದುವಚನದಿಂದ ಸಮಾಧಾನ ಮಾಡುತ್ತ ಮಾತನಾಡಿದನು.

ಮಾ ಭೈಷೀರ್ಮುನಿಶಾರ್ದೂಲ ಮಾ ತೇಽಸ್ತು ಮನಸೋ ವ್ಯಥಾ ।
ಮದ್ಭಕ್ತೇನ ತ್ವಯಾ ವಿದ್ವನ್ ರೋಷಾದಾಗತ್ಯ ವಕ್ಷಸಿ ॥ ೪೬ ॥

ಪದಾಹತೋಽಪಿ ತುಷ್ಟೋಽಹಂ ಪುಷ್ಪೈಃ ಸಂಪೂಜಿತೋ ಯಥಾ ।
ಇಯಂ ಪ್ರಕುಪಿತಾ ಲಕ್ಷ್ಮೀರ್ಭವಂತಮಶಪದ್ಯತಃ ॥ ೪೭ ॥

ತಸ್ಮಾತ್ತ್ವಮಭವೋ ವಿಪ್ರ ತಪಃಪುಣ್ಯವಿವರ್ಜಿತಃ ।
ಜ್ಞೇಯಂ ಕಿಲ ಪರಂ ತತ್ತ್ವಂ ತಪಸಾ ಸುಕೃತೇನ ಚ ॥ ೪೮ ॥

ಮಮ ರೂಪಾಣಿ ವಾ ದ್ರಷ್ಟುಮಶಕ್ಯಂ ತಪಸಾ ವಿನಾ ।
ತದ್ಗಚ್ಛ ತ್ವಮಿತೋ ವಿಪ್ರ ಮೇರೋರ್ದಕ್ಷಿಣತೋ ಭುವಿ ॥ ೪೯ ॥

ಪಾವನೇ ಭಾರತೇ ಖಂಡೇ ತಪಶ್ಚರ ಸಮಾಹಿತಃ ।
ದ್ರಕ್ಷ್ಯಸಿ ತ್ವಂ ಯದಾ ತತ್ರ ಮಾಂ ಚ ವಾಮನರೂಪಿಣಂ ॥ ೫೦ ॥

---

೪೬. ಮುನಿಶ್ರೇಷ್ಠನೆ! ನೀನು ಹೆದರಬೇಡ, ನಿನ್ನ ಮನಸ್ಸಿಗೆ ಅಲ್ಪವಾದರೂ ವ್ಯಥೆ ಆಗುವುದು ಬೇಡ. ಜ್ಞಾನಿಯೇ ನೀನು ನನ್ನ ಭಕ್ತನು, ನನ್ನಲ್ಲಿ ಕೋಪದಿಂದ ಬಂದಿರುವಿ.

೪೭. ನೀನು ಕೋಪದಿಂದ ನನ್ನ ಎದೆಯಲ್ಲಿ ಕಾಲಿನಿಂದ ಒದ್ದರೂ ಕೂಡ ನಿನ್ನ ಭಕ್ತಿಗೆ ಮೆಚ್ಚಿ ಹೂಗಳಿಂದ ಅರ್ಚಿಸಿದಂತೆ ಭಾವಿಸಿ ನಿನ್ನಲ್ಲಿ ಸಂತುಷ್ಟ ನಾಗಿರುವೆನು. ಈ ಲಕ್ಷ್ಮಿಯು ನಿನ್ನಲ್ಲಿ ಕೋಪಿಸಿಕೊಂಡು ಶಪಿಸಿರುವಳು.

೪೮. ವಿಪ್ರನೆ! ಆ ಶಾಪದ ಪ್ರಭಾವದಿಂದ ತಪಸ್ಸಿನ ಪುಣ್ಯದಿಂದ ನೀನು ವರ್ಜಿತನಾಗಿರುತ್ತೀ. ಆದರೆ ಪರತತ್ತ್ವವನ್ನು ತಿಳಿಯಲು ತಪಸ್ಸು ಮತ್ತು ಪೂರ್ವ ಸುಕೃತಗಳು ಉತ್ತಮವಾದ ಸಾಧನಗಳು.

೪೯. ತಪಸ್ಸು ಇಲ್ಲದೆ ನನ್ನ ವಿಭೂತಿರೂಪಗಳನ್ನು ನೋಡಲು ಶಕ್ಯವಿಲ್ಲ. ವಿಪ್ರನೆ! ಆದುದರಿಂದ ನೀನು ಇಲ್ಲಿಂದ ಮೇರುಪರ್ವತದ ದಕ್ಷಿಣದಿಕ್ಕಿನ ಪ್ರದೇಶದ ಭೂಮಿಗೆ ಹೋಗು.

೫೦. ಅಲ್ಲಿ ಪಾವನವಾದ ಭರತಖಂಡದಲ್ಲಿ ಸಮಾಧಾನವುಳ್ಳ ಚಿತ್ತವುಳ್ಳವ ನಾಗಿ ತಪವನ್ನು ಆಚರಿಸು. ತಪಸ್ಸನ್ನು ಮಾಡುತ್ತಿರಲು ನೀನು ವಾಮನ ರೂಪದಿಂದ ಆವಿರ್ಭವಿಸುವ ನನ್ನನ್ನು ಸಾಕ್ಷಾತ್ಕರಿಸುತ್ತೀ.

ತದಾ ಪರಮತತ್ತ್ವಜ್ಞೋ ಭವಿತಾ ನಾತ್ರ ಸಂಶಯಃ ।
ತದಾ ತೇ ದರ್ಶಯಿಷ್ಯಾಮಿ ರೂಪಾಣ್ಯತ್ಯದ್ಭುತಾನಿ ಚ ॥ ೫೧ ॥

ದೃಷ್ಟ್ವಾ ತ್ವಂ ಮಮ ರೂಪಾಣಿ ತತ್ತ್ವಂ ಶ್ರುತ್ವಾ ಚ ವಾಮನಾತ್ ।
ಲಬ್ಧಕಾಮಃ ಪ್ರಹೃಷ್ಟಾತ್ಮಾ ತದಾ ತ್ವಂ ಭವಿತಾ ಧ್ರುವಂ ॥ ೫೨ ॥

ಮದಾಜ್ಞಯಾ ವಿನಾ ಚೇಯಂ ಲಕ್ಷ್ಮೀಸ್ತ್ವಾಮಶಪದ್ಯತಃ ।
ತಸ್ಮಾತ್ತವ ಸುತಾ ಭೂತ್ವಾ ತತ್ರ ತ್ವಾಂ ನಂದಯಿಷ್ಯತಿ ॥ ೫೩ ॥

ಇತ್ಯುಕ್ತ್ವಾ ಭಗವಾನ್ ದೇವಸ್ತತ್ರೈವಾಂತರ್ಹಿತೋಽಭವತ್ ।
ಅಂತರ್ಹಿತೇ ಭಗವತಿ ಭೃಗುಃ ಪರಮದುರ್ಮನಾಃ ॥ ೫೪ ॥

ದೇವ್ಯಾಃ ಶಾಪಾಭಿಭೂತಸ್ತು ನಷ್ಟಜ್ಞಾನೋಽಲ್ಪಸತ್ತ್ವವಾನ್ ।
ಭ್ರಷ್ಟಯೋಗಗತಿರ್ಮೂಢಸ್ತಪೋಬಲವಿವರ್ಜಿತಃ ॥ ೫೫ ॥

---

೫೧. ಆಗ ಪರತತ್ತ್ವವನ್ನು ತಿಳಿದ ಜ್ಞಾನಿಯಾಗುತ್ತೀ, ಅದರಲ್ಲಿ ಸಂಶಯ ವಿಲ್ಲ. ಮತ್ತು ಆ ಸಮಯದಲ್ಲಿ ನಿನಗೆ ಅತ್ಯದ್ಭುತವಾದ ರೂಪಗಳನ್ನು ತೋರಿಸುತ್ತೇನೆ.

೫೨. ಆಗ ನೀನು ನನ್ನ ಅದ್ಭುತ ಮತ್ತು ಪಾವನವಾದ ರೂಪಗಳನ್ನು ನೋಡಿ ವಾಮನಮೂರ್ತಿಯಿಂದ ತತ್ತ್ವವನ್ನು ಶ್ರವಣಮಾಡಿ ಆಗ ನಿನ್ನ ಇಷ್ಟಾರ್ಥ ವನ್ನು ಹೊಂದಿ ಸಂತುಷ್ಟವಾದ ಅಂತರಂಗವುಳ್ಳವನು ಆಗುತ್ತೀ, ಇದು ನಿಜವು.

೫೩. ಈ ಲಕ್ಷ್ಮಿಯು ನನ್ನ ಆಜ್ಞೆಯನ್ನು ಹೊಂದದೆ ಸ್ವತಂತ್ರಳಾಗಿ ನಿನ್ನನ್ನು ಶಪಿಸಿರುವುದರಿಂದ ಅವಳು ನಿನಗೆ ಮಗಳಾಗಿ ಹುಟ್ಟಿ ಆ ಜನ್ಮದಲ್ಲಿ ನಿನ್ನನ್ನು ಆನಂದ ಪಡಿಸುವಳು.

೫೪. ಭಗವಂತನು ಭೃಗುಮುನಿಗೆ ಈ ರೀತಿಯಾಗಿ ಭವಿಷ್ಯವೃತ್ತವನ್ನು ಬೋಧಿಸಿ ಅಲ್ಲಿಯೇ ಅಂತರ್ಧಾನ ಹೊಂದಿದನು. ಭಗವಂತನು ಅದೃಶ್ಯನಾದ ಕೂಡಲೆ ಭೃಗುಮುನಿಯು ಖಿನ್ನನಾದ ಮನಸ್ಸುಳ್ಳವನಾದನು.

೫೫. ಲಕ್ಷ್ಮೀದೇವಿಯ ಶಾಪದಿಂದ ತಿರಸ್ಕರಿಸಲ್ಪಟ್ಟ ವಿಪ್ರನು ನಷ್ಟವಾದ ಜ್ಞಾನವುಳ್ಳವನೂ, ಅಲ್ಪ ಸತ್ತ್ವವುಳ್ಳವನೂ, ನಾಶವಾದ ಯೋಗಸಿದ್ಧಿಯುಳ್ಳವನೂ, ತಪಃಶಕ್ತಿಯಿಂದ ವರ್ಜಿತನೂ ಮತ್ತು ಮೂಢನೂ ಆದನು.

ಪದ್ಭ್ಯಾಮೇವಾಜಗಾಮಾಥ ಮಂದಂ ಮಂದಂ ಸುದುಃಖಿತಃ ।
ಯದಾತ್ಮನಾ ಕೃತಂ ಪಾಪಂ ಚಿಂತಯಂಸ್ತದನುಕ್ಷಣಂ ॥ ೫೬ ॥

ಕಥಮಿಂದೀವರಶ್ಯಾಮಂ ಯೋಗಿಧ್ಯೇಯಂ ರಮಾಪತಿಂ ।
ಅತಾಡಯಮಹಂ ಮೂಢಃ ಪಾದೇನಾಂಬುಜಲೋಚನಂ ॥ ೫೭ ॥

ಇತಿ ಸಂಸ್ಮೃತ್ಯ ಮನಸಾ ನಿಶ್ವಸಂಶ್ಚ ಮುಹುರ್ಮುಹುಃ ।
ಕ್ಷುತ್ತೃಡ್ಭ್ಯಾಂ ಪೀಡಿತೋ ನಿತ್ಯಂ ತಥೈವಾಧ್ವಶ್ರಮೇಣ ಚ ॥ ೫೮ ॥

ಕಾಲೇನ ಮಹತಾ ರಾಜನ್ ಭಾರತಂ ಖಂಡಮಾಯಯೌ ।
ತತ್ರ ಪಶ್ಯನ್ ವನೋದ್ದೇಶಾನ್ ಸರಿತಶ್ಚ ಗಿರೀನಪಿ ॥ ೫೯ ॥

ಕ್ರಮಮಾಣಃ ಕ್ರಮೇಣೈವ ಪುಷ್ಕರಂ ಕ್ಷೇತ್ರಮಾಯಯೌ ।
ತತ್ರ ದಿವ್ಯೇ ವನೋದ್ದೇಶೇ ಮಂದಾಕಿನ್ಯಾಸ್ತಟೇ ಶುಭೇ ॥ ೬೦ ॥

---

೫೬. ತಾನು ಮಾಡಿರುವ ಪಾಪವನ್ನು ಪ್ರತಿ ಕ್ಷಣದಲ್ಲಿಯೂ ಪಶ್ಚಾತ್ತಾಪದಿಂದ ಚಿಂತಿಸುತ್ತ ಮಂದ ಮಂದವಾಗಿ ಬಹು ದುಃಖದಿಂದ ಕಾಲಿನ ನಡಿಗೆಯಿಂದಲಿ ಭೂಮಿಗೆ ಬಂದನು.

೫೭. ಮೂಢನಾದ ನಾನು ಕನ್ನೈದಿಲೆಹೂವಿನಂತೆ ಶ್ಯಾಮವರ್ಣವುಳ್ಳವನೂ, ಯೋಗಿಗಳಿಂದ ಧ್ಯಾನಿಸಲ್ಪಡುವವನೂ, ಮತ್ತು ಕಮಲದಂತೆ ನಯನವುಳ್ಳವನೂ ಆದ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನನ್ನು ಕಾಲಿನಿಂದ ಒದ್ದೆನಲ್ಲ.

೫೮, ಹೀಗೆ ಮನಸ್ಸಿನಲ್ಲಿ ಮತ್ತೆ ಮತ್ತೆ ನೆನೆಸಿಕೊಂಡು ಪುನಃ ಪುನಃ ದುಃಖದಿಂದ ಉಸಿರು ಬಿಡುತ್ತ ಪ್ರತಿ ನಿತ್ಯವೂ ಹಸಿವು ಬಾಯಾರಿಕೆಗಳಿಂದಲೂ, ಮಾರ್ಗಾಯಾಸದಿಂದಲೂ ಪೀಡೆಯನ್ನು ಅನುಭವಿಸಿದನು.

೫೯. ರಾಜನೆ! ಹೀಗೆಯೇ ಬಹು ಕಾಲ ಕಳೆದ ತರುವಾಯ ವನೋದ್ದೇಶಗಳನ್ನು ಮತ್ತು ಗಿರಿ-ನದಿಗಳನ್ನು ನೋಡುತ್ತ ಭರತಖಂಡಕ್ಕೆ ಬಂದನು.

೬೦. ಹಾಗೆಯೇ ಕ್ರಮವಾಗಿ ಮುಂದೆ ನಡೆಯುತ್ತ ಪುಷ್ಕರಕ್ಷೇತ್ರಕ್ಕೆ ಬಂದು ಅಲ್ಲಿಂದ ದಿವ್ಯವಾದ ವನಪ್ರದೇಶವುಳ್ಳ ಗಂಗಾನದಿಯ ಮಂಗಲಕರವಾದ ತೀರಕ್ಕೆ ಬಂದನು.

ತಿಷ್ಠನ್ ಸ್ಥಾಣುವದವ್ಯಗ್ರಶ್ಚಚಾರ ತಪ ಉತ್ತಮಂ ।
ತಸ್ಯ ಸಂತಪ್ಯಮಾನಸ್ಯ ದ್ರಷ್ಟುಕಾಮಸ್ಯ ವಾಮನಂ ॥ ೬೧ ॥

ಅತೀತಂ ತತ್ರ ರಾಜೇಂದ್ರ ವರ್ಷಾಣಾಮಯುತಂ ತದಾ ।
ತತೋ ಯದೃಚ್ಛಯಾಭ್ಯೇತ್ಯ ತತ್ರಾಪಶ್ಯಮಹಂ ಭೃಗುಂ ॥ ೬೨ ॥

ಪುಷ್ಕರೇ ಪಾವನೇ ಕ್ಷೇತ್ರೇ ತಪ್ಯಂತಂ ಪರಮಂ ತಪಃ ।
ಮಾಂ ದೃಷ್ಟ್ವಾ ಸೋಽಪಿ ವಿಪ್ರೇಂದ್ರೋ ಭೃಗುಃ ಪರಮಹೃಷ್ಟಧೀಃ ॥

ಪೂಜಯಾಮಾಸ ವಿಧಿವತ್ ಪಾದ್ಯಾರ್ಘ್ಯಾಸನಭೋಜನೈಃ ।
ಸಂಪೂಜಿತಶ್ಚ ತೇನಾಹಂ ತಂ ಚಾಪೃಚ್ಛಮನಾಮಯಂ ॥ ೬೪ ॥

ತಪಶ್ಚರಸಿ ವಿಪ್ರೇಂದ್ರ ಕಿಮರ್ಥಂ ತ್ವಮಿಹಾಶ್ರಮೇ ।
ಕೋ ವಾಪ್ಯರ್ಥಶ್ಚ ತೇ ಭಾವ್ಯಃ ಸಿದ್ಧಸ್ಯ ಬ್ರಹ್ಮವಾದಿನಃ ॥ ೬೫ ॥

---

೬೧. ಅಲ್ಲಿ ಮೋಟುಮರದಂತೆ ಚಾಂಚಲ್ಯವಿಲ್ಲದೆ ಉತ್ತಮವಾದ ತಪಸ್ಸನ್ನು ಆಚರಿಸಿದನು. ಹೀಗೆ ವಾಮನಮೂರ್ತಿಯ ದರ್ಶನಕ್ಕೋಸ್ಕರವಾಗಿ ತಪಸ್ಸನ್ನು ಮಾಡಿ ಶರೀರ ಕ್ಲೇಶವನ್ನು ಅನುಭವಿಸಿದನು.

೬೨. ರಾಜೇಂದ್ರನೆ! ಹೀಗೆ ತಪಸ್ಸನ್ನು ಮಾಡುತ್ತಿರಲು ಅಯುತ ವರ್ಷ ಕಾಲವು ಕಳೆಯಿತು. ಆಗ ನಾನು ಆಕಸ್ಮಿಕವಾಗಿ ಅಲ್ಲಿಗೆ ಹೋಗಿ ಭೃಗುಮುನಿಯನ್ನು ನೋಡಿದೆನು.

೬೩. ಪವಿತ್ರವಾದ ಪುಷ್ಕರಕ್ಷೇತ್ರದಲ್ಲಿ ಉತ್ತಮವಾದ ತಪಸ್ಸನ್ನು ಆಚರಿಸುತ್ತಲಿದ್ದ ಭೃಗುಮುನಿಯನ್ನು ನಾನು ನೋಡಿದ ಸಮಯದಲ್ಲಿ ಆ ವಿಪ್ರೇಂದ್ರನಾದ ಭೃಗುಮುನಿಯು ನನ್ನನ್ನು ನೋಡಿ ಅತಿಶಯವಾಗಿ ಸಂತುಷ್ಟವಾದ ಮನಸ್ಸುಳ್ಳವನಾದನು.

೬೪. ಆಗ ಭೃಗುಮುನಿಯು ಪಾದ್ಯ-ಅರ್ಘ್ಯ-ಆಚಮನೀಯ-ಆಸನ-ಭೋಜನ ಮುಂತಾದ ಸಕಲೋಪಚಾರಗಳಿಂದ ನನಗೆ ಅತಿಥಿಸತ್ಕಾರವನ್ನು ಮಾಡಿದನು. ನಾನು ಪೂಜಿಸಲ್ಪಟ್ಟ ತರುವಾಯ ಮುನಿಯನ್ನು ಕುರಿತು ಆರೋಗ್ಯಪ್ರಶ್ನವನ್ನು ಮಾಡಿದೆನು.

೬೫. ವಿಪ್ರೇಂದ್ರನೆ! ಈ ಆಶ್ರಮದಲ್ಲಿ ವಾಸಮಾಡಿ ನೀನು ಏತಕ್ಕೆ ತಪವನ್ನು ಆಚರಿಸುತ್ತೀ? ಸಿದ್ಧನೂ ಬ್ರಹ್ಮವಾದಿಯೂ ಆದ ನಿನಗೆ ತಪಸ್ಸಿನಿಂದ ಸಾಧಿಸಬೇಕಾದ ಫಲವೇನಿದೆ?

ಇತಿ ಪೃಷ್ಟೋ ಮಯಾ ವಿಪ್ರೋ ದುಃಖಿತಃ ಖಿನ್ನಮಾನಸಃ ।
ಪಾಪಂ ಶಶಂಸ ಮೇ ಸರ್ವಮಾತ್ಮನೈವ ಕೃತಂ ಹರೌ ॥ ೬೬ ॥

ಶಾಪಂ ಚೈವಾತ್ಮನೇ ದತ್ತಂ ತಪಃಕ್ಷಯಕರಂ ಶ್ರಿಯಾ ।
ಕಥಯಿತ್ವಾ ಸುದುಃಖಾರ್ತಃ ಪುನರ್ಮಾಂ ಭೃಗುರಬ್ರವೀತ್ ॥ ೬೭ ॥

ಶೃಣು ನಾರದ ವಕ್ಷ್ಯಾಮಿ ಯತಸ್ತಪ್ಸ್ಯಾಮ್ಯಹಂ ತಪಃ ।
ವಾಮನಂ ದ್ರಷ್ಟುಕಾಮೇನ ಮಯೇದಂ ತಪ್ಯತೇ ತಪಃ ॥ ೬೮ ॥

ಪಶ್ಯೇಯಂ ವಾಮನಂ ದೇವಂ ಕದಾ ವಾ ಕ್ವ ಚ ವಾ ಮುನೇ ।
ವಕ್ತುಮರ್ಹಸಿ ಸರ್ವಜ್ಞ ಕೃಪಯಾ ಮಮ ನಾರದ ॥ ೬೯ ॥

ಇತಿ ಬ್ರುವಂತಂ ವಿಪ್ರೇಂದ್ರಂ ದೃಷ್ಟ್ವಾ ತಮಹಮಬ್ರುವಂ ।
ಹಂತ ತೇ ಕಥಯಿಷ್ಯಾಮಿ ಯಥಾ ದ್ರಕ್ಷ್ಯಸಿ ವಾಮನಂ ॥ ೭೦ ॥

---

೬೬. ಈ ರೀತಿಯಾಗಿ ನಾನು ಪ್ರಶ್ನಿಸಲು ಆ ವಿಪ್ರನು ದುಃಖಪಟ್ಟು ಬಹಳ ಬಹಳ ಖಿನ್ನವಾದ ಮಾನಸವುಳ್ಳವನಾಗಿ ಹರಿಯಲ್ಲಿ ತಾನು ಮಾಡಿರುವ ಪಾಪಕರ್ಮ ವನ್ನೆಲ್ಲ ಹೇಳಿದನು.

೬೭. ಮತ್ತು ಲಕ್ಷ್ಮೀದೇವಿಯು ತಪಃಶಕ್ತಿಯನ್ನು ನಾಶಮಾಡುವ ಮಹತ್ತಾದ ಶಾಪವನ್ನು ತನಗೆ ಕೊಟ್ಟಿರುವುದನ್ನು ನನಗೆ ಹೇಳಿ ದುಃಖೋದ್ರೇಕವುಳ್ಳವನಾಗಿ ಮತ್ತೆ ನನ್ನನ್ನು ಕುರಿತು ಈ ರೀತಿಯಾಗಿ ಹೇಳಿದನು.

೬೮. ನಾರದಮುನಿಯೆ! ನಾನು ಏತಕ್ಕೋಸ್ಕರ ಈ ರೀತಿಯಾಗಿ ತಪಸ್ಸನ್ನು ಮಾಡುತ್ತೇನೆಂಬುದನ್ನು ಕೇಳು, ವಾಮನಮೂರ್ತಿಯನ್ನು ಸಾಕ್ಷಾತ್ಕರಿಸಬೇಕೆಂಬ ಕಾಮನೆಯಿಂದ ಈ ತಪಸ್ಸನ್ನು ನಾನು ಮಾಡುತ್ತಲಿರುವೆನು.

೬೯. ಸರ್ವಜ್ಞನಾದ ನಾರದಮುನಿಯೆ! ವಾಮನಮೂರ್ತಿಯ ದೇವನನ್ನು ನಾನು ಇಲ್ಲಿ ಯಾವಾಗ ನೋಡಬಹುದು? ಎಂಬುದನ್ನು ಕರುಣೆಯಿಂದ ಹೇಳು. ಅದನ್ನು ಹೇಳಲು ಸರ್ವಜ್ಞನಾದ್ದರಿಂದ ನೀನು ಸಮರ್ಥನಾಗಿರುತ್ತಿ.

೭೦. ಈ ರೀತಿಯಾಗಿ ಕೇಳಿಕೊಳ್ಳುತ್ತಲಿದ್ದ ವಿಪ್ರೇಂದ್ರನನ್ನು ಕುರಿತು ನಾನು ಉತ್ತರವನ್ನು ಹೇಳಿದೆನು. ವಿಪ್ರನೆ! ನೀನು ವಾಮನಮೂರ್ತಿಯನ್ನು ದರ್ಶನ ಮಾಡುವ ಸಂದರ್ಭವನ್ನು ಹೇಳುತ್ತೇನೆ, ಕೇಳು.

ಬಲಿರ್ವೈರೋಚನಿರ್ಬ್ರಹ್ಮನ್ನಯಜದ್ಯಜ್ಞಮುತ್ತಮಂ ।
ಕ್ಷೇತ್ರೇ ಸತ್ಯವ್ರತೇ ಪುಣ್ಯೇ ದ್ರಷ್ಟುಕಾಮಸ್ತ್ರಿವಿಕ್ರಮಂ ॥ ೭೧ ॥

ಕಾಂಚ್ಯಾಂ ಬ್ರಹ್ಮರ್ಷಿಭಿಃ ಸಾರ್ಧಂ ವಾಮನಸ್ತಮಯಾಜಯತ್ ।
ಅಸುರೇಂದ್ರೋಽಪಿ ಕೃಪಯಾ ವಾಮನಸ್ಯ ಮಹಾತ್ಮನಃ ॥ ೭೨ ॥

ದದರ್ಶ ಕಿಲ ದೇವೇಶಂ ಕಾಂಚ್ಯಾಂ ತ್ರೈವಿಕ್ರಮಾಕೃತಿಂ ।
ಶೇಷಾಕಾರಂ ರಮಾನಾಥಂ ತಥಾ ಮೇಘಾಕೃತಿಂ ಹರಿಂ ॥ ೭೩ ॥

ಏವಂ ದಿವ್ಯಾನಿ ರೂಪಾಣಿ ದರ್ಶಯನ್ ಬಲಯೇ ಹರಿಃ ।
ಸರ್ವಲೋಕಹಿತಾರ್ಥಾಯ ತತ್ರೈವಾಸ್ತೇ ಕಿಲಾಧುನಾ ॥ ೭೪ ॥

ತಸ್ಮಾತ್ತ್ವಮಪಿ ವಿಪ್ರೇಂದ್ರ ಗಚ್ಛ ಕಾಂಚೀಮಿತೋಽಂಜಸಾ ।
ತತ್ರ ಸತ್ಯವ್ರತಕ್ಷೇತ್ರೇ ವಾಮನಂ ದ್ರಷ್ಟುಮರ್ಹಸಿ ॥ ೭೫ ॥

---

೭೧. ತಪಸ್ವಿಯಾದ ವಿಪ್ರನೇ! ಪೂರ್ವದಲ್ಲಿ ವಿರೋಚನಾಸುರನ ಪುತ್ರನಾದ ಬಲೀಂದ್ರನು ಪವಿತ್ರವಾದ ಸತ್ಯವ್ರತಕ್ಷೇತ್ರದಲ್ಲಿ ತ್ರಿವಿಕ್ರಮನಾದ ವಿಷ್ಣುವನ್ನು ಪ್ರತ್ಯಕ್ಷವಾಗಿ ನೋಡಲು ಉತ್ತಮವಾದ ಯಜ್ಞವನ್ನು ಮಾಡಿದನು.

೭೨. ಕಾಂಚೀನಗರದಲ್ಲಿ ಬ್ರಹ್ಮರ್ಷಿಗಳಿಂದ ಕೂಡಿ ಬಲಿಚಕ್ರವರ್ತಿಯು ಮಾಡಿರುವ ಯಜ್ಞವನ್ನು ವಾಮನನು ಆಚಾರ್ಯನಾಗಿದ್ದು ಮಾಡಿಸಿದನು. ಅಸುರರಾಜನಾದ ಬಲಿಯು ಮಹಾತ್ಮನಾದ ಆ ವಾಮನನ ಕೃಪೆಯಿಂದ ಕರ್ಮವನ್ನು ಪೂರ್ತಿಗೊಳಿಸಿದನು.

೭೩. ಕರ್ಮಾಂತದಲ್ಲಿ ಅದರ ಸುಕೃತದಿಂದ ಅಸುರರಾಜನು ಕಾಂಚೀನಗರದಲ್ಲಿ ತ್ರಿವಿಕ್ರಮಮೂರ್ತಿಯಾದ ವಿಷ್ಣುವನ್ನು ಹಾಗು ಶೇಷನ ಆಕಾರದಿಂದ ಇರುವ ಲಕ್ಷ್ಮೀಪತಿಯಾದ ವಿಷ್ಣುವನ್ನು ಮತ್ತು ಮೇಘದಂತೆ ಆಕಾರವುಳ್ಳ ಹರಿಯನ್ನು ಸಾಕ್ಷಾತ್ಕರಿಸಿದನು.

೭೪. ಈ ರೀತಿಯಾಗಿ ತನ್ನ ಅನೇಕ ದಿವ್ಯರೂಪಗಳನ್ನು ಬಲೀಂದ್ರನಿಗೆ ತೋರಿಸುತ್ತ ಹರಿಯು ಸರ್ವ ಲೋಕಗಳಿಗೆ ಹಿತವನ್ನುಂಟುಮಾಡುವ ಸಂಕಲ್ಪದಿಂದ ಈಗಲೂ ಅಲ್ಲಿಯೇ ಇರುವನು.

೭೫. ವಿಪ್ರೇಂದ್ರನೇ! ಆದುದರಿಂದ ನೀನು ಕೂಡ ಇಲ್ಲಿಂದ ಬೇಗ ಕಾಂಚೀನಗರಕ್ಕೆ ಹೋಗು, ಆ ಪವಿತ್ರವಾದ ಸತ್ಯವ್ರತಕ್ಷೇತ್ರದಲ್ಲಿ ವಾಮನನನ್ನು ನೋಡಲು ಅರ್ಹನಾಗಿರುತ್ತೀ.

ಪಾತಾಲಸ್ಯ ಬಿಲದ್ವಾರೇ ತಿಷ್ಠಂತಂ ಸರ್ವಕಾಮದಂ ।
ಯತ್ರ ವಾಮನಮಾರಾಧ್ಯ ರುದ್ರಶಾಪಸಮನ್ವಿತಾ ॥ ೭೬ ॥

ಗಿರಿಜಾ ಲಬ್ಧಕಾಮಾಭೂದ್ವಾಮನಾತ್ತು ಮಹಾತ್ಮನಃ ।
ಕಾಮಾಕ್ಷೀತಿ ಚ ವಿಖ್ಯಾತಾ ಪತಿಂ ಲೇಭೇ ಸ್ವಕಂ ಪುನಃ ॥ ೭೭ ॥

ಯತ್ರ ಹಸ್ತಿಗಿರೌ ಪುಣ್ಯೇ ಪುಣ್ಯಕೋಟ್ಯಾಂ ಹರಿಃ ಸ್ವಯಂ ।
ಅಧ್ಯಾಸ್ತೇ ವರದೋ ನೄಣಾಂ ಬ್ರಹ್ಮಣಾ ಪೂಜಿತೋಽನಿಶಂ ॥ ೭೮ ॥

ತಸ್ಮಾತ್ತ್ವಂ ತತ್ರ ಗತ್ವಾಶು ವಾಮನಂ ಸರ್ವಕಾಮದಂ ।
ಸಂಪೂಜಯಸ್ವ ವಿಪ್ರೇಂದ್ರ ಸರ್ವಾನ್ ಕಾಮಾನವಾಪ್ಸ್ಯಸಿ ॥ ೭೯ ॥

ಇತ್ಯವೋಚಮಹಂ ರಾಜನ್ ಪೃಚ್ಛತೇ ಭೃಗವೇ ಪುರಾ ।
ತಸ್ಮೈ ನಿವೇದ್ಯ ತತ್ಸರ್ವಂ ನಿರ್ಗತೋಽಹಂ ತದಂತಿಕಾತ್ ॥ ೮೦ ॥

---

೭೬. ಹಿಂದೆ ರುದ್ರನ ಶಾಪದಿಂದ ಪೀಡಿತಳಾದ ಪಾರ್ವತಿಯು ಪಾತಾಳ ಲೋಕದ ಬಿಲದ ದ್ವಾರದಲ್ಲಿ ಭಕ್ತರಿಗೆ ಸಕಲ ಇಷ್ಟಾರ್ಥಗಳನ್ನು ಕೊಡುತ್ತ ವಾಸ ಮಾಡುತ್ತಲಿದ್ದ ವಾಮನಮೂರ್ತಿಯನ್ನು ಅಲ್ಲಿ ಆರಾಧಿಸಿದಳು.

೭೭. ಅಲ್ಲಿ ಕಾಮಾಕ್ಷಿಯೆಂಬ ಪ್ರಸಿದ್ಧಿಯನ್ನು ಹೊಂದಿ ಗಿರಿಜೆಯು ಅಲ್ಲಿ ವಾಮನನನ್ನು ಆರಾಧನೆಮಾಡಿ ಮಹಾತ್ಮನಾದ ವಾಮನನ ಅನುಗ್ರಹದಿಂದ ತನ್ನ ಪತಿಯನ್ನು ಮತ್ತೆ ಹೊಂದಿದಳು.

೭೮. ಆ ಕ್ಷೇತ್ರದಲ್ಲಿ ಪವಿತ್ರವಾದ ಹಸ್ತಿಗಿರಿಯಲ್ಲಿ ಪುಣ್ಯಕೋಟಿಯೆಂಬ ವಿಮಾನದಲ್ಲಿ ಹರಿಯು ತಾನಾಗಿ ನಿರಂತರವೂ ಬ್ರಹ್ಮನಿಂದ ಪೂಜಿಸಲ್ಪಡುತ್ತ ಭಕ್ತ ಮಾನವರಿಗೆ ಇಷ್ಟಾರ್ಥವರಗಳನ್ನು ಕೊಡುತ್ತ ವಾಸಮಾಡಿದನು.

೭೯. ವಿಪ್ರಶ್ರೇಷ್ಠನೆ! ಆದ್ದರಿಂದ ನೀನು ಅಲ್ಲಿಗೆ ಹೋಗಿ ಸರ್ವ ಕಾಮ ಗಳನ್ನು ಅನುಗ್ರಹಿಸುವ ವಾಮನನನ್ನು ಆರಾಧಿಸಿ ನಿನ್ನ ಸಕಲ ಇಷ್ಟಾರ್ಥಗಳನ್ನು ಹೊಂದುತ್ತೀ.

೮೦. ರಾಜನೆ! ಪೂರ್ವಕಾಲದಲ್ಲಿ ನನ್ನಲ್ಲಿ ಪ್ರಶ್ನಮಾಡಿದ ಭೃಗುಮುನಿಗೆ ನಾನು ಈ ರೀತಿಯಾಗಿ ವಾಮನ ದರ್ಶನೋಪಾಯವನ್ನು ಹೇಳಿದೆನು. ಅದೆಲ್ಲವನ್ನು ಮುನಿಗೆ ತಿಳಿಸಿ ಕಡೆಯಲ್ಲಿ ನಾನು ಅವನ ಸಮೀಪದಿಂದ ಮುಂದಕ್ಕೆ ಹೊರಟೆನು.

ನಿಶಮ್ಯ ಮದ್ವಾಕ್ಯಮತಿಪ್ರಹರ್ಷಾತ್
ತಪಃ ಸಮುತ್ಸೃಜ್ಯ ಭೃಗುಸ್ತದಾನೀಂ ।
ಜಗಾಮ ಕಾಂಚೀಂ ನೃಪವರ್ಯ ತತ್ರ
ದದರ್ಶ ದೇವಂ ಖಲು ವಾಮನಂ ಚ ॥ ೮೧ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇಽಷ್ಟಾದಶೋಽಧ್ಯಾಯಃ

---

೮೧. ರಾಜಶ್ರೇಷ್ಠನೆ! ಭೃಗುಮುನಿಯು ಆಗ ನನ್ನ ವಚನವನ್ನು ಕೇಳಿ ಅತ್ಯಾನಂದದಿಂದ ಆಚರಿಸುತ್ತಲಿದ್ದ ತಪಸ್ಸನ್ನು ಮುಗಿಸಿ ಕಾಂಚೀನಗರಕ್ಕೆ ಹೋಗಿ ಅಲ್ಲಿ ವಾಮನಮೂರ್ತಿಯನ್ನು ಧರಿಸಿದ ದೇವನನ್ನು ಸಾಕ್ಷಾತ್ಕರಿಸಿದನು.

ಕಾಂಚೀಮಾಹಾತ್ಮ್ಯದಲ್ಲಿ ಅಷ್ಟಾದಶಾಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀ ಮಾಹಾತ್ಮ್ಯಮ್

ಏಕೋನವಿಂಶೋಽಧ್ಯಾಯಃ

ಅಂಬರೀಷ ಉವಾಚ :—

ಕಥಂ ವೈರೋಚನಿರ್ಬ್ರಹ್ಮನ್ ಬಲಿರ್ಯಜ್ಞಮುಪಾಹರತ್
ಯಾಜಯಾಮಾಸ ತಂ ದೇವೋ ವಾಮನಃ ಕಥಮಾಸುರಂ ॥ ೧ ॥

ಕಥಂ ಸಂದರ್ಶಯಾಮಾಸ ತಸ್ಮೈ ತ್ರೈವಿಕ್ರಮಂ ವಪುಃ ।
ಕಿಮರ್ಥಂ ಶೇಷರೂಪೋಽಭೂನ್ಮೇಘಾಕಾರಶ್ಚ ವಾಮನಃ ॥ ೨ ॥

ಸರ್ವಂ ತಚ್ಚರಿತಂ ವಿಷ್ಣೋರ್ವಿಸ್ತರಾದ್ವಕ್ತುಮರ್ಹಸಿ ।

ನಾರದ ಉವಾಚ :—

ಶೃಣು ರಾಜನ್ ಪ್ರವಕ್ಷ್ಯಾಮಿ ವಾಮನಸ್ಯ ಮಹಾತ್ಮನಃ ॥ ೩ ॥

---

೧. ಅಂಬರೀಷ ಮಹಾರಾಜನು ಮತ್ತೆ ಪ್ರಶ್ನಿಸಿದನು :—ತಪಸ್ವಿಯಾದ ವಿಪ್ರನೆ! ವಿರೋಚನಾಸುರನ ಮಗನಾದ ಬಲೀಂದ್ರನು ಹೇಗೆ ಯಜ್ಞವನ್ನು ಅನುಷ್ಠಾನಮಾಡಿದನು? ವಾಮನಮೂರ್ತಿಯಾದ ಪರಮಾತ್ಮನು ಅಸುರನಿಗೆ ಹೇಗೆ ಯಾಗವನ್ನು ಮಾಡಿಸಿದನು ?

೨. ಮತ್ತು ತಾನು ತ್ರಿವಿಕ್ರಮರೂಪವನ್ನು ಧರಿಸಿ ಹೇಗೆ ಬಲೀಂದ್ರನಿಗೆ ಪ್ರತ್ಯಕ್ಷನಾದನು ? ಮತ್ತು ವಾಮನನು ಶೇಷರೂಪಿಯೂ ಮೇಘಾಕಾರವುಳ್ಳವನೂ ಏತಕ್ಕೆ ಆದನು ?

೩. ಈ ಎಲ್ಲ ವಿಷ್ಣುವಿನ ಚರಿತ್ರೆಯಿಂದ ಗರ್ಭಿತವಾದ ಕಥೆಯನ್ನು ವಿಸ್ತಾರವಾಗಿ ಹೇಳಲು ನೀನು ಅರ್ಹನಾಗಿರುತ್ತಿ. ಎಂದು ರಾಜನು ಮಾಡಿದ ಪ್ರಶ್ನವನ್ನು ಕೇಳಿ ನಾರದಮುನಿಯು ಈ ರೀತಿಯಾಗಿ ಪ್ರತಿ ವಚನವನ್ನು ಆಡಿದನು. ರಾಜನೆ! ಮಹಾತ್ಮನಾದ ವಾಮನನ ಚರಿತ್ರೆಯನ್ನು ಹೇಳುತ್ತೇನೆ, ಕೇಳು.

ಚರಿತಂ ಸರ್ವಪಾಪಘ್ನಂ ಯಚ್ಛ್ರುತ್ವಾ ಮೋಕ್ಷ್ಯಸೇಽಶುಭಾತ್ ।
ಪ್ರಹ್ಲಾದೋ ನಾಮ ರಾಜೇಂದ್ರ ಭಕ್ತೋ ಭಗವತೋ ಹರೇಃ ॥ ೪ ॥

ಅಸ್ತಿ ಹಿ ಶ್ರುತಪೂರ್ವಶ್ಚ ತ್ವಯಾ ಚಾಪಿ ಮಹಾಸುರಃ ।
ಬ್ರಹ್ಮಣ್ಯೋ ವಿಷ್ಣುಭಕ್ತಾನಾಮಗ್ರಗಣ್ಯೋ ಹರಿಪ್ರಿಯಃ ॥ ೫ ॥

ತಸ್ಯ ಪುತ್ರೋ ಮಹಾನಾಸೀದ್ವಿರೋಚನ ಇತೀರಿತಃ ।
ವಿರೋಚನಸ್ಯ ಪುತ್ರೋಽಭೂದ್ಬಲಿರ್ನಾಮ ಮಹಾಸುರಃ ॥ ೬ ॥

ಸ ಶಶಾಸ ಬಲಿರ್ಜಿತ್ವಾ ಲೋಕಾನ್ ಸಾಮರದಾನವಾನ್ ।
ಪೂಜಯನ್ ಸತತಂ ವಿಷ್ಣುಂ ಧ್ಯಾಯಂಶ್ಚೈವಾನಿಶಂ ಹರಿಂ ॥ ೭ ॥

ಸ ಕದಾಚಿದ್ಧರಿಂ ಯಷ್ಟುಮಾರಭತ್ಕ್ರತುಭಿಃ ಶತೈಃ ।
ಗತ್ವಾ ತು ಹಿಮವತ್ಪಾರ್ಶ್ವೇ ಪುಣ್ಯೇ ಹೈಮವತೀತಟೇ ॥ ೮ ॥

---

೪. ವಾಮನಮೂರ್ತಿಯ ಆ ಚರಿತ್ರೆಯು ಶ್ರವಣಮಾತ್ರದಿಂದ ಸಮಸ್ತ ಪಾಪಗಳನ್ನು ಕಳೆಯುವುದು. ಅದನ್ನು ನೀನು ಕೇಳಿ ಸಮಸ್ತ ಅಶುಭಗಳಿಂದಲೂ ಬಿಡುಗಡೆ ಹೊಂದುತ್ತೀ. ರಾಜೇಂದ್ರನೆ! ಭಗವಂತನಾದ ವಿಷ್ಣುಪರಮಾತ್ಮನಿಗೆ ಪ್ರಹ್ಲಾದನೆಂಬ ಭಕ್ತನಿರುವನು.

೫. ಪ್ರಹ್ಲಾದನು ವಿಷ್ಣುಭಕ್ತನಾಗಿರುವುದನ್ನು ನೀನು ಕೂಡ ಕೇಳಿರುತ್ತೀ. ಆ ಮಹಾ ಅಸುರನು ಬ್ರಹ್ಮವಾದಿಯೂ ವಿಷ್ಣುಭಕ್ತರಲ್ಲಿ ಅಗ್ರಗಣ್ಯನೂ ಮತ್ತು ಹರಿಯಲ್ಲಿ ಪರಮಪ್ರೇಮವನ್ನಿಟ್ಟವನೂ ಆಗಿರುವನು.

೬. ಆ ಪ್ರಹ್ಲಾದನಿಗೆ ವಿರೋಚನವೆಂಬ ನಾಮಧೇಯವನ್ನು ಹೊಂದಿದ ಮಹಾಸುರನು ಪುತ್ರನಾಗಿದ್ದನು. ಆ ವಿರೋಚನನಿಗೆ ಬಲಿಯೆಂಬ ಮಹಾಸುರನು ಪುತ್ರನಾಗಿದ್ದನು.

೭. ಆ ಬಲಿಮಹಾಸುರನು ದೇವ-ದಾನವರಿಂದ ಕೂಡಿದ ಸಕಲ ಲೋಕಗಳನ್ನು ಜಯಿಸಿ ತನ್ನ ಪೂಜ್ಯದೇವತೆಯಾದ ವಿಷ್ಣುವನ್ನು ಯಾವಾಗಲೂ ಪೂಜಿಸುತ್ತ ಮತ್ತು ನಿರಂತರವಾಗಿ ಧ್ಯಾನಿಸುತ್ತ ತ್ರೈಲೋಕ್ಯವನ್ನು ಆಳಿದನು.

೮. ಅವನು ಒಂದು ಸಮಯದಲ್ಲಿ ಹಿಮವತ್ಪರ್ವತದ ಹೈಮವತೀನದಿಯ ತೀರಕ್ಕೆ ಹೋಗಿ ಅಲ್ಲಿ ಒಂದು ನೂರು ಯಾಗಗಳನ್ನು ಹರಿಯ ಪ್ರೀತಿಗೋಸ್ಕರ ಆಚರಿಸಿ ಹರಿಯನ್ನು ಪೂಜಿಸಲು ಆರಂಭಮಾಡಿದನು.

ಯಾಜಯಾಮಾಸ ತಂ ಶುಕ್ರೋ ಭಾರ್ಗವೋ ಬ್ರಹ್ಮವಿತ್ತಮಃ ।
ತಸ್ಮಿನ್ ಯಜ್ಞೇ ಮಹಾಪುಣ್ಯೇ ಬಹ್ವನ್ನೇ ಭೂರಿದಕ್ಷಿಣೇ ॥ ೯ ॥

ಯಂ ಯಂ ಕಾಮಯತೇ ಕಾಮಂ ತಂ ತಮಾಪ್ನೋತಿ ಭೂಸುರಃ ।
ಏವಂ ಶತೇಷು ಯಜ್ಞೇಷು ತತ್ರೈಕೋನೇಷು ಭಕ್ತಿತಃ ॥ ೧೦ ॥

ಕೃತೇಷು ದಾನವೇಂದ್ರೇಣ ದೇವಾನಾಂ ಭಯಮಾವಿಶತ್ ।
ತತಃ ಸೇಂದ್ರಾ ದಿವಿಷದೋ ಭಯಕಂಪಿತಮಾನಸಾಃ ॥ ೧೧ ॥

ಕ್ಷೀರಾಬ್ಧೌ ವಿಷ್ಣುಮಾಶಾನಂ ಶಯಾನಂ ಶರಣಂ ಯಯುಃ ।
ನತ್ವಾ ಸ್ತುತ್ವಾ ಚ ದೇವೇಶಂ ವಿಬುಧಾ ವಾಕ್ಯಮಬ್ರುವನ್ ॥ ೧೨ ॥

ಅಯಂ ತ್ವಾಂ ಯಜತೇ ದೇವ ಬಲಿರ್ವೈರೋಚನಿರ್ಹರೇ ।
ತಂ ಜೇತುಂ ನ ವಯಂ ಶಕ್ತಾ ಯತಸ್ತ್ವತ್ಪಾದಸಂಶ್ರಯಃ ॥ ೧೩ ॥

---

೯. ಬ್ರಹ್ಮಜ್ಞಾನಿಯೂ ಭೃಗುಮಹರ್ಷಿಯ ಪುತ್ರನೂ ಆದ ಶುಕ್ರಾಚಾರ್ಯನು ಆ ಯಜ್ಞವನ್ನು ಮಾಡಿಸಿದನು. ಮಹಾಪವಿತ್ರವಾದ ಆ ಯಜ್ಞವು ಅನ್ನದಾನ-ದಕ್ಷಿಣಾದಾನಗಳ ಅತಿಶಯದಿಂದ ಕೂಡಿ ವಿಜೃಂಭಣೆಯಿಂದ ನಡೆಯಿತು.

೧೦. ಆ ಯಜ್ಞದಲ್ಲಿ ಪ್ರತಿಯೊಬ್ಬ ಬ್ರಾಹ್ಮಣನು ತನಗೆ ಬೇಕಾದ ಕಾಮ್ಯವಸ್ತುವನ್ನು ಹೊಂದಿದನು. ಈ ರೀತಿಯಾಗಿ ನೂರು ಸಂಖ್ಯೆಯು ಪೂರ್ತಿಯಾಗಲು ಒಂದು ಮಾತ್ರ ನ್ಯೂನವಾಗಿ ತೊಂಭತ್ತೊಂಭತ್ತು ಯಜ್ಞಗಳನ್ನು ಭಕ್ತಿಯಿಂದ ಮುಗಿಸಿದನು.

೧೧. ಅಷ್ಟು ಯಜ್ಞಗಳನ್ನು ದಾನವನಾದ ಬಲೀಂದ್ರನು ಮಾಡುತ್ತಿರಲು ದೇವತೆಗಳ ಮನಸ್ಸಿನಲ್ಲಿ ಭೀತಿಯುಂಟಾಯಿತು. ಆಗ ಭೀತಿಯಿಂದ ನಡುಗುತ್ತಲಿದ್ದ ಮಾನಸವುಳ್ಳವರಾಗಿ ಇಂದ್ರಾದಿದೇವತೆಗಳೆಲ್ಲರೂ ಒಟ್ಟು ಸೇರಿದರು.

೧೨. ಹಾಗೆಯೇ ಕ್ಷೀರಸಮುದ್ರಕ್ಕೆ ಹೋಗಿ ಅಲ್ಲಿ ಮಲಗಿರುವ ಸರ್ವೇಶ್ವರನಾದ ವಿಷ್ಣುವನ್ನು ಶರಣಹೊಂದಿ ನಮಸ್ಕಾರಮಾಡಿ ಸ್ತೋತ್ರಗಳಿಂದ ಸ್ತುತಿಸಿ ದೇವತೆಗಳ ಸ್ವಾಮಿಯಾದ ವಿಷ್ಣುವನ್ನು ಕುರಿತು ಈ ವಚನವನ್ನು ಹೇಳಿದರು.

೧೩. ದೇವತಾರೂಪಿಯಾದ ವಿಷ್ಣುವೆ! ವಿರೋಚನಾಸುರನ ಪುತ್ರನಾದ ಬಲೀಂದ್ರನು ನಿನ್ನನ್ನು ಉದ್ದೇಶಿಸಿ ಯಜ್ಞವನ್ನು ಮಾಡುತ್ತಿದ್ದಾನೆ. ಅವನು ನಿನ್ನ ಚರಣವನ್ನು ಆಶ್ರಯಿಸಿರುವುದರಿಂದ ಅವನನ್ನು ನಾವಾರೂ ಗೆಲ್ಲಲು ಶಕ್ತರಾಗಿಲ್ಲ.

ತ್ವಮೇವ ಪಾಹಿ ನಃ ಸರ್ವಾನ್ ನಿಯಮ್ಯ ಬಲಿನೋಜಸಾ ।
ವಾಮನಂ ರೂಪಮಾಸಾದ್ಯ ವಂಚಯಿತ್ವಾ ಬಲಿಂ ಹರೇ ॥ ೧೪ ॥

ತಂ ಪ್ರವೇಶಯ ಪಾತಾಳಮುಪಾಯೇನೈವ ಚಾಸುರಂ ।
ತ್ವಂ ಚಾಪಿ ತದ್ಗೃಹದ್ವಾರೇ ತಿಷ್ಠ ತದ್ದ್ವಾರಪೋ ಯಥಾ ॥ ೧೫ ॥

ನ ಯಥಾ ಪುನರಾಗಚ್ಛೇದಸ್ಮಾನ್ ಹಂತುಂ ಮಹಾಸುರಃ ।
ಇತಿ ತೇಷಾಂ ವಚಃ ಶ್ರುತ್ವಾ ಸುರಾಣಾಂ ವಿಷ್ಣುರಾತ್ಮವಾನ್ ॥ ೧೬ ॥

ವಾಮನೋಽಭೂತ್ತದಾ ರಾಜನ್ ದೇವಾನಾಂ ಹಿತಕಾಮ್ಯಯಾ ।
ಅಭ್ಯೇತ್ಯ ಯಜ್ಞಶಾಲಾಯಾಮಯಾಚತ ಬಲಿಂ ಧರಾಂ ॥ ೧೭ ॥

ಬಲೇ ವದಾನ್ಯ ಸರ್ವಜ್ಞ ವಿಪ್ರಾಣಾಂ ಸರ್ವಕಾಮದ ।
ದಾತುಮರ್ಹಸಿ ಭೂಮಿಂ ಮೇ ಪಾದೈಃ ಪರಿಮಿತಾಂ ತ್ರಿಭಿಃ ॥ ೧೮ ॥

---

೧೪. ಹರಿಯೆ! ನೀನು ವಾಮನ ರೂಪವನ್ನು ಧರಿಸಿ ಆ ಬಲಿ ಅಸುರನನ್ನು ವಂಚಿಸಿ ಪರಾಕ್ರಮದಿಂದ ಅವನನ್ನು ನಿಗ್ರಹಿಸಿ ನಮ್ಮೆಲ್ಲರನ್ನೂ ರಕ್ಷಿಸು.

೧೫. ಉಪಾಯದಿಂದ ಆ ಅಸುರನನ್ನು ಪಾತಾಳಲೋಕಕ್ಕೆ ಕಳುಹಿಸು, ನೀನು ಕೂಡ ಆ ಬಲೀಂದ್ರನ ಮನೆಯಲ್ಲಿ ಅವನ ದ್ವಾರಪಾಲಕನಂತೆ ದ್ವಾರದ ಬಳಿಯಲ್ಲಿ ಇರು.

೧೬. ನೀನು ದ್ವಾರದಲ್ಲಿಯೇ ನಿಂತು ಮತ್ತೆ ನಮ್ಮನ್ನು ಸಂಹರಿಸಲು ಆ ಮಹಾಸುರನು ಬರದಂತೆ ಮಾಡು. ಪ್ರಮಾದವಿಲ್ಲದ ವಿಷ್ಣುಪರಮಾತ್ಮನು ಈ ರೀತಿಯಾಗಿ ದೇವತೆಗಳು ಹೇಳಿರುವ ವಚನವನ್ನು ಶ್ರವಣಮಾಡಿದನು.

೧೭. ರಾಜನೆ! ದೇವತೆಗಳಿಗೆ ಹಿತವನ್ನು ಮಾಡಲೋಸ್ಕರ ವಿಷ್ಣುವು ಆಗ ವಾಮನಾವತಾರಿಯಾಗಿ ಬಲೀಂದ್ರನ ಯಜ್ಞಶಾಲೆಗೆ ಬಂದು ಬಲಿಯನ್ನು ಕುರಿತು ಭೂಮಿ ದಾನವನ್ನು ಯಾಚಿಸಿದನು.

೧೮. ಉದಾರಶೀಲನೂ, ಸರ್ವಜ್ಞನೂ, ವಿಪ್ರರಿಗೆ ಸರ್ವ ಕಾಮಗಳನ್ನು ದಾನಮಾಡುವವನೂ ಆದ ಬಲಿಯೆ! ನನಗೆ ಮೂರು ಹೆಜ್ಜೆ ಅಳತೆಯ ಭೂಮಿಯನ್ನು ದಾನಮಾಡು.

ಇತಿ ವಿಪ್ರಂ ಪ್ರಯಾಚರಿತಂ ವಾಮನಂ ವೀಕ್ಷ್ಯ ಚಾಸುರಃ ।
ಜ್ಞಾತ್ವಾ ತಮಾಗತಂ ದೇವಂ ಯಜ್ಞರೂಪಿಣಮುಚ್ಯುತಂ ॥ ೧೯ ॥

ಕೃತಾರ್ಥೋಽಸ್ಮೀತಿ ಹೃಷ್ಟಾತ್ಮಾ ದದೌ ತಸ್ಮೈ ಧರಾಂ ಬಲಿಃ ।
ಧರಾಯಾಂ ಸಂಪ್ರದತ್ತಾಯಾಂ ಬಲಿನಾ ವಾಮನೋ ಹರಿಃ ॥ ೨೦ ॥

ವವೃಧೇ ಕಿಲ ತಾಂ ರಾಜನ್ ಪರಿಮಾತುಂ ತ್ರಿಭಿಃ ಕ್ರಮೈಃ ।
ಪದೈಕೇನಾಖಿಲಾ ಭೂಮಿರಾಕ್ರಾಂತಾ ಸವನಾಚಲಾ ॥ ೨೧ ॥

ದ್ಯೌರ್ದ್ವಿತೀಯೇನ ಚಾಕ್ರಾಂತಾ ಪದಾ ವಿಷ್ಣೋರ್ಮಹಾತ್ಮನಃ ।
ತೃತೀಯಸ್ಯಾವಕಾಶೋಽಭೂನ್ನೈವ ಕ್ವಾಪಿ ಪದೋ ಹರೇಃ ॥ ೨೨ ॥

ಸಮಾಕ್ರಮ್ಯ ದಿವಂ ಗಾಂ ಚ ಪಾದಾಭ್ಯಾಂ ದದೃಶೇ ಹರಿಃ ।
ಗ್ರಸನ್ನಿವ ಮಹಾರಾಜ ಬ್ರಹ್ಮಾಂಡಮಸುರೈಃ ಸಹ ॥ ೨೩ ॥

---

೧೯. ಅಸುರನು ತನ್ನ ಸನ್ನಿಧಿಯಲ್ಲಿ ವಾಮನರೂಪಿಯಾದ ವಿಪ್ರನು ಬಂದು ಭೂಮಿಯಾಚನೆ ಮಾಡುವುದನ್ನು ನೋಡಿ ಯಜ್ಞರೂಪಿಯಾದ ವಿಷ್ಣುಪರಮಾತ್ಮನು ಬಂದಿರುವನೆಂದು ತಿಳಿದನು.

೨೦. ಮತ್ತು ತಾನು ಈ ದಾನದಿಂದ ಕೃತಾರ್ಥನಾಗುವೆನೆಂದು ಬಹು ಸಂತೋಷಪಟ್ಟ ಮಾನಸವುಳ್ಳವನಾಗಿ ವಾಮನನಿಗೆ ಭೂಮಿಯನ್ನು ದಾನಮಾಡಿದನು. ಹೀಗೆ ಬಲಿಯು ವಾಮನನಿಗೆ ಭೂಮಿಯನ್ನು ದಾನಮಾಡಿದ ತತ್ಕ್ಷಣದಲ್ಲಿಯೇ ಹರಿಯು ಅದನ್ನು ಸ್ವೀಕರಿಸಲು ಯತ್ನಿಸಿದನು.

೨೧. ಮೂರು ಹೆಜ್ಜೆ ಭೂಮಿಯನ್ನು ಆಳೆಯಲು ಸ್ವಾಮಿಯು ವಾಮನ ರೂಪವನ್ನು ಬಿಟ್ಟು ಬೆಳೆದನು. ಆಗ ವಿಷ್ಣುವು ಅರಣ್ಯ ಪರ್ವತಗಳಿಂದ ತುಂಬಿದ ಭೂಮಿಯನ್ನೆಲ್ಲ ಒಂದು ಹೆಜ್ಜೆಯಿಂದ ಆಕ್ರಮಿಸಿದನು.

೨೨. ಮಹಾತ್ಮನಾದ ವಿಷ್ಣುವಿನ ಬೆಳೆದ ಆಕೃತಿಯು ಎರಡನೆಯ ಪಾದದಿಂದ ಆಕಾಶವೆಲ್ಲವೂ ಆಕ್ರಮಿಸಲ್ಪಟ್ಟಿತು, ಹಾಗು ಉಳಿದ ಹರಿಯ ಮೂರನೆಯ ಪಾದಕ್ಕೆ ಎಲ್ಲೆಲ್ಲಿಯೂ ಅವಕಾಶವೆ ಇಲ್ಲದಂತಾಯಿತು.

೨೩. ಮಹಾರಾಜನೆ! ಹರಿಯು ಎರಡು ಪಾದಗಳಿಂದ ಭೂಮ್ಯಾಕಾಶಗಳನ್ನೆಲ್ಲ ವ್ಯಾಪಿಸಿ ಅಸುರರನ್ನೂ ಬ್ರಹ್ಮಾಂಡವನ್ನೂ ನುಂಗುವನಂತೆಯೇ ತೋರಿದನು.

ತದ್ರೂಪಂ ದುಸ್ಸಹಂ ಘೋರಂ ಕಾಲಾಗ್ನಿಮಿವ ಭೀಷಣಂ ।
ಸರ್ವೇಽಪಿ ನೇಕ್ಷಿತುಂ ಶಕ್ತಾ ಮೂರ್ಛಿತಾಃ ಪತಿತಾಃ ಸುರಾಃ ॥ ೨೪ ॥

ಏಕ ಏವ ತದಾ ಬ್ರಹ್ಮಾ ದೇವಮದ್ಭುತರೂಪಿಣಂ ।
ದೃಷ್ಟ್ವಾ ತುಷ್ಟಾವ ವಿವಿಧೈಃ ಸ್ತೋತ್ರೈರಭ್ಯರ್ಚಯನ್ ಹರಿಂ ॥ ೨೫ ॥

ತದಾ ದೇವಸ್ಯ ಪಾದೇನ ಸಮ್ಯಗಾಚ್ಛಾದಿತಾ ಧರಾ ।
ಅಭೂತ್ ಸಗಿರಿಕಾಂತಾರಾ ಸಯಜ್ಞಾಯತನಾ ನೃಪ ॥ ೨೬ ॥

ಭೌಮಾಶ್ಚ ಜಂತವಸ್ತತ್ರ ಗರ್ತೇಷು ವಿವರೇಷು ಚ ।
ವಿಷ್ಣುಪಾದತಲಚ್ಛನ್ನಾಃ ಸರ್ವೇ ಸಮ್ಮುಮುಹುರ್ಭೃಶಂ ॥ ೨೭ ॥

ಯಜಮಾನೋ ಬಲಿಸ್ತಸ್ಮಿನ್ ವಿಷ್ಣೋಃ ಪಾದತಲಾಂತರೇ ।
ಸಂಲಗ್ನೋ ಮೂರ್ಛಿತೋ ಧೈರ್ಯಾತ್ಪ್ರವಿವೇಶ ರಸಾತಲಂ ॥ ೨೮ ॥

---

೨೪. ಆಗ ಸಕಲ ದೇವತೆಗಳು ಪ್ರಲಯಕಾಲದ ಅಗ್ನಿಯಂತೆ ಅತ್ಯಂತ ಭಯಂಕರವಾದ ಮತ್ತು ಸಹಿಸಲಾರದಷ್ಟು ಉಗ್ರವಾದ ಆ ರೂಪವನ್ನು ನೋಡಲು ಶಕ್ತರಾಗದೆ ಮೂರ್ಛಿತರಾಗಿ ಬಿದ್ದರು.

೨೫. ದೇವತೆಗಳಲ್ಲಿ ಬ್ರಹ್ಮದೇವನು ಮಾತ್ರ ಅದ್ಭುತವಾದ ರೂಪವನ್ನು ಪರಿಗ್ರಹಿಸಿರುವ ದೇವನನ್ನು ನೋಡಿ ನಾನಾ ವಿಧವಾದ ಸ್ತೋತ್ರಗಳಿಂದ ಹರಿಯನ್ನು ಅರ್ಚಿಸಿದನು.

೨೬. ರಾಜನೇ! ಆಗ ಅನೇಕ ಅರಣ್ಯ-ಗಿರಿಗಳಿಂದಲೂ ವಿಸ್ತೀರ್ಣವಾದ ಯಜ್ಞಶಾಲೆಯಿಂದಲೂ ಕೂಡಿದ ಭೂಮಿಯು ವಿಷ್ಣುವಿನ ಪಾದದಿಂದ ಸಂಪೂರ್ಣವಾಗಿ ಮುಚ್ಚಿಹೋಗಿತ್ತು.

೨೭. ಭೂಮಿಯಲ್ಲಿದ್ದ ಇತರ ಜಂತುಗಳು ಆಗ ಚಿಕ್ಕ ಗುಂಡಿಗಳಲ್ಲಿಯೂ ಹಳ್ಳವಾದ ಭೂಮಿಯಲ್ಲಿಯೂ ಬಿದ್ದು ವಿಷ್ಣುವಿನ ಪಾದತಲದಿಂದ ಮುಚ್ಚಿಹೋಗಿ ಎಲ್ಲವೂ ಅತಿಶಯವಾಗಿ ಮೋಹಗೊಂಡವು.

೨೮. ಯಜ್ಞದಲ್ಲಿ ಯಜಮಾನನಾದ ಬಲಿಯು ವಿಷ್ಣುವಿನ ಪಾದತಲದಲ್ಲಿ ಸಿಕ್ಕಿಕೊಂಡು ಮೂರ್ಛಿತನಾಗಿ ಅಧೈರ್ಯದಿಂದ ಭೂಮಿಯ ಅಧೋಭಾಗದಲ್ಲಿದ್ದ ಪಾತಾಳಲೋಕವನ್ನು ಪ್ರವೇಶಿಸಿದನು.

ಪ್ರವಿಷ್ಟಮಾತ್ರೇ ಪಾತಾಲಂ ಬಲೌ ಬಲವತಾಂ ವರೇ ।
ವಾಮನಸ್ತತ್ಕ್ಷಣಾದೇವ ಬಭೂವ ಸ ಪುನರ್ವಿರಾಟ್ ॥ ೨೯ ॥

ತತಃ ಸುರಾಶ್ಚ ಸಂಹೃಷ್ಟಾಃ ಪ್ರಾಪುಃ ಸ್ವಂ ಸ್ವಂ ಪದಂ ಪುನಃ ।
ವಾಮನೋಽಪಿ ಪುನರ್ಗತ್ವಾ ಪಾತಾಳಂ ದಾನವಾಲಯಂ ॥ ೩೦ ॥

ದೃಷ್ಟ್ವಾ ತತ್ರ ಬಲಿಂ ರಾಜನ್ ಪ್ರಹಸನ್ ವಾಕ್ಯಮಬ್ರವೀತ್ ।
ದಾನವೇಂದ್ರ ಮಹಾಪ್ರಾಜ್ಞ ವದಾನ್ಯಸ್ತ್ವಂ ನ ಸಂಶಯಃ ॥ ೩೧ ॥

ಯನ್ಮೇ ತ್ವಮದದಾ ಭೂಮಿಮತಸ್ತುಷ್ಟೋಽಸ್ಮಿ ತೇ ಭೃಶಂ ।
ಅಶ್ವಮೇಧೈಶ್ಚ ಬಹುಭಿರ್ಯಜತೋ ಮಾಮಯಜದ್ಭವಾನ್ ॥ ೩೨ ॥

ಅತಸ್ತೇ ಸಂಪ್ರಯಚ್ಛಾಮಿ ಸಂತುಷ್ಟಃ ಕಾಂಕ್ಷಿತಾನ್ ವರಾನ್ ।
ಕಲ್ಪಾಂತಮಾಯುಶ್ಚ ಪರಾಂ ಶ್ರಿಯಂ ಚೈವಾಚಲಾಮಹಂ ॥ ೩೩ ॥

---

೨೯. ಬಲಿಷ್ಠರಲ್ಲಿ ಉತ್ತಮನಾದ ಬಲಿಚಕ್ರವರ್ತಿಯು ಪಾತಾಳಲೋಕವನ್ನು ಸೇರಿದ ಕೂಡಲೆ ವಾಮನಮೂರ್ತಿಯು ಆ ನಿಮಿಷದಲ್ಲಿ ಮತ್ತೆ ವಿರಾಟ್‌ರೂಪವನ್ನು ಸ್ವೀಕರಿಸಿದನು.

೩೦. ತರುವಾಯ ದೇವತೆಗಳು ಬಲಿಯ ನಿಗ್ರಹದಿಂದ ಸಂತೋಷಪಟ್ಟು ಮೊದಲಿನಂತೆ ತಮ್ಮ ತಮ್ಮ ಸ್ಥಾನವನ್ನು ಹೊಂದಿದರು. ವಾಮನನು, ದಾನವನು ವಾಸಮಾಡುವ ಪಾತಾಳಲೋಕಕ್ಕೆ ಹೋದನು.

೩೧. ರಾಜನೆ! ಹರಿಯು ಪಾತಾಳಕ್ಕೆ ಹೋಗಿ ಅಲ್ಲಿ ಬಲಿಯನ್ನು ಕಂಡು ನಗುತ್ತ ಈ ವಚನವನ್ನು ಆಡಿದನು. ದಾನವೇಂದ್ರನೆ! ಮತ್ತು ಮಹಾಪ್ರಜ್ಞಾಶಾಲಿಯೇ! ನೀನು ಬಹಳ ದೊಡ್ಡ ದಾನಶೀಲನು. ಇದರಲ್ಲಿ ಅಲ್ಪವಾದರೂ ಸಂದೇಹವಿಲ್ಲ.

೩೨. ದಾನವೇಂದ್ರನೆ! ನೀನು ಅನೇಕ ಅಶ್ವಮೇಧಯಾಗಗಳನ್ನು ಮಾಡಿ ನನ್ನನ್ನು ಪೂಜಿಸಿರುತ್ತೀ. ಮತ್ತು ನನಗೆ ಭೂಮಿಯನ್ನು ದಾನಮಾಡಿರುತ್ತೀ. ಆದರಿಂದ ನಾನು ನಿನ್ನಲ್ಲಿ ಅತಿಶಯವಾಗಿ ತೃಪ್ತನಾಗಿರುವೆನು.

೩೩. ಆದುದರಿಂದ ನಿನ್ನ ಮೇಲಿನ ಸಂತೋಷದಿಂದ ನಿನಗೆ ಇಷ್ಟವಾದ ವರಗಳನ್ನು ಕೊಡುವೆನು. ಕಲ್ಪಾವಸಾನದವರೆಗೆ ಆಯುಷ್ಯವನ್ನೂ, ಅಚಂಚಲವಾದ ಮತ್ತು ನಿರತಿಶಯವಾದ ಐಶ್ವರ್ಯವನ್ನೂ ನಾನು ನಿನಗೆ ಕೊಡುವೆನು.

ಯಾವದಾವರ್ತತೇ ಕಾಲೋ ಯಾವತ್ ಸ್ಥಾಸ್ಯತಿ ಮೇದಿನೀ ।
ತಾವತ್ತ್ವಮಿಹ ಪಾತಾಳೇ ವರ್ಸ ರಾಜ್ಯಾಧಿಪೋ ಭವ ॥ ೩೪ ॥

ತ್ವಾಂ ರಕ್ಷಿತುಮಹಂ ಚಾಪಿ ಸತತಂ ತೇಽಕ್ಷಿಗೋಚರಃ ।
ವತ್ಸ್ಯಾಮಿ ತೇ ಗೃಹದ್ವಾರೇ ತವ ಪ್ರಿಯಚಿಕೀರ್ಷಯಾ ॥ ೩೫ ॥

ಇತ್ಯುಕ್ತ್ವಾ ವಾಮನೋ ದೇವಸ್ತಸ್ಯ ದತ್ವಾ ವರಾನ್ ಬಹೂನ್ ।
ತತ್ರೈವೋವಾಸ ರಾಜೇಂದ್ರ ಸದಾ ತದ್ದ್ವಾರಪೋ ಯಥಾ ॥

ಅಥ ವೈರೋಚನಿಶ್ಚಾಪಿ ವಾಮನಾಲ್ಲಬ್ಧವೈಭವಃ ।
ನ್ಯವಸತ್ತತ್ರ ಪಾತಾಳೇ ಭಕ್ತ್ಯಾ ವಾಮನಮರ್ಚಯನ್ ॥ ೩೭ ॥

ಸ ಕದಾಚಿದ್ಬಲಿರ್ದೇವಂ ಪ್ರಣಮ್ಯೋವಾಚ ವಾಮನಂ ।
ದೇವದೇವ ಜಗನ್ನಾಥ ಜಗದಾಧಾರ ವಾಮನ ॥ ೩೮ ॥

೩೪. ಎದುವರೆಗೆ ಈ ಕಲ್ಪವು ಮುಗಿದು ಮತ್ತೆ ಆವೃತ್ತಿಯಾಗುವುದೋ ಮತ್ತು ಎದುವರೆಗೆ ಭೂಮಿಯು ಇರುವುದೋ ಅದುವರೆಗೆ ಈ ಪಾತಾಳಲೋಕದಲ್ಲಿ ನೀನು ವಾಸಮಾಡುತ್ತಲಿದ್ದು ರಾಜ್ಯಕ್ಕೆ ಅಧಿಪತಿಯಾಗಿರು.

೩೫. ನಾನು ಕೂಡ ನಿನ್ನನ್ನು ರಕ್ಷಿಸಲು ಯಾವಾಗಲೂ ನಿನ್ನ ನೇತ್ರಗಳಿಗೆ ಗೋಚರವಾಗಿ ನಿನಗೆ ಪ್ರಿಯವನ್ನು ಆಚರಿಸಬೇಕೆಂಬ ಅಭಿಲಾಷದಿಂದ ನಿನ್ನ ಗೃಹ ದ್ವಾರದಲ್ಲಿ ವಾಸಮಾಡುವೆನು.

೩೬. ರಾಜೇಂದ್ರನೆ! ವಾಮನದೇವನು ಬಲೀಂದ್ರನಿಗೆ ಈ ರೀತಿಯಾಗಿ ಹೇಳಿ ಅವನಿಗೆ ಅನೇಕ ವರಗಳನ್ನು ಕೊಟ್ಟು ಅವನ ಗೃಹದ್ವಾರದಲ್ಲಿ ದ್ವಾರಪಾಲಕ ನಂತೆ ನಿರಂತರವೂ ಅಲ್ಲಿಯೇ ವಾಸಮಾಡಿದನು.

೩೭. ಅನಂತರದಲ್ಲಿ ವಿರೋಚನ ಪುತ್ರನಾದ ಬಲಿಯು ವಾಮನಮೂರ್ತಿಯ ಅನುಗ್ರಹದಿಂದ ಹೊಂದಿರುವ ಮಹಾಸಂಪತ್ತಿಯುಳ್ಳವನಾಗಿ ಭಕ್ತಿಯಿಂದ ವಾಮನ ನನ್ನು ಅರ್ಚಿಸುತ್ತ ಪಾತಾಳದಲ್ಲಿ ವಾಸಮಾಡಿದನು.

೩೮. ಹೀಗಿರಲು ಬಲಿಯು ಒಂದು ಸಮಯದಲ್ಲಿ ದೇವತೆಗಳ ಪ್ರಭುವೆ! ಜಗತ್ತಿಗೆಲ್ಲ ಈಶ್ವರನೆ! ಜಗತ್ತಿಗೆಲ್ಲ ಆಧಾರಸ್ವರೂಪನೆ! ವಾಮನಮೂರ್ತಿಯೆ! ಎಂದು ಸಂಬೋಧಿಸಿ ನಮಸ್ಕಾರಮಾಡಿ ಈ ವಾಕ್ಯವನ್ನು ಆಡಿದನು.

ತ್ವತ್ಪ್ರಸಾದಾನ್ಮಯಾ ಲಬ್ಧಂ ರಾಜ್ಯಮಾಯುಶ್ಚ ಶಾಶ್ವತಂ ।
ತ್ವಯಿ ಪ್ರಸನ್ನೇ ದೇವೇಶೇ ಸಂಸ್ಥಿತೇ ಸವಿಧೇ ಮಮ ॥ ೩೯ ॥

ಕರಸ್ಥಮೇವ ಮನ್ಯೇಽಹಂ ಪುರುಷಾರ್ಥಚತುಷ್ಟಯಂ ।
ತಥಾಪಿ ತ್ವಮಿಮಾಂ ವಾಂಛಾಂ ಕುರು ಮೇ ಯಾಂ ಬ್ರವೀಮ್ಯಹಂ ॥

ಪುರಾ ತ್ವಾಂ ದ್ರಷ್ಟುಕಾಮೋಽಹಮಯಜಂ ಕ್ರತುಭಿಃ ಶತೈಃ ।
ತತ್ರ ತ್ವಂ ವಾಮನೋಽಭ್ಯೇತ್ಯ ಸುರಾಣಾಂ ಹಿತಕಾಮ್ಯಯಾ ॥ ೪೧ ॥

ಮತ್ತಃ ಸಂಗೃಹ್ಯ ವಸುಧಾಂ ತತಸ್ತ್ರೈವಿಕ್ರಮೋಽಭವಃ ।
ಮಾತುಕಾಮಃ ಸ್ವಪಾದೇನ ವಸುಧಾಂ ಸಾಗರಾಂಬರಾಂ ॥ ೪೨ ॥

ಭವಾನ್ ಪ್ರಾಚ್ಛಾದಯತ್ ಸರ್ವಾಂ ತದಾ ಪಾದತಲೇನ ಗಾಂ ।
ತತ್ರಾಹಂ ಪೀಡಿತೋ ಭೂತ್ವಾ ಲಗ್ನಃ ಪಾದತಲಾಂತರೇ ॥ ೪೩ ॥

---

೩೯. ಸ್ವಾಮಿಯೇ ನಿನ್ನ ಅನುಗ್ರಹದಿಂದ ನನಗೆ ರಾಜ್ಯ, ದೀರ್ಘವಾದ ಆಯುಸ್ಸುಗಳು ಲಭಿಸಿದುವು. ದೇವತೆಗಳ ಈಶ್ವರನಾದ ನೀನು ನನ್ನಲ್ಲಿ ಪ್ರಸನ್ನನಾಗಿ ನನ್ನ ಸಮೀಪದಲ್ಲಿ ವಾಸಮಾಡುವುದು ನನ್ನ ಮಹಾಭಾಗ್ಯವು.

೪೦. ಆ ಭಾಗ್ಯದಿಂದ ನನಗೆ ನಾಲ್ಕು ಪುರುಷಾರ್ಥಗಳು ಹಸ್ತಗತವಾಗಿವೆ ಯೆಂದು ನಾನು ತಿಳಿಯುತ್ತೇನೆ. ಆದರೆ ನಾನು ಪ್ರಾರ್ಥಿಸಿಕೊಳ್ಳುವ ಒಂದು ನನ್ನ ಮನೋರಥವನ್ನು ಸಫಲಮಾಡಿಕೊಡಬೇಕು.

೪೧. ಪೂರ್ವದಲ್ಲಿ ನಾನು ನಿನ್ನ ದರ್ಶನವನ್ನು ಹೊಂದಬೇಕೆಂಬ ಅಭಿಲಾಷ ದಿಂದ ನೂರು ಯಾಗಗಳನ್ನು ಆಚರಿಸಿದೆನು. ಆಗ ದೇವತೆಗಳ ಹಿತವನ್ನು ಮಾಡಲು ಇಷ್ಟದಿಂದ ನೀನು ಅಲ್ಲಿಗೆ ವಾಮನರೂಪದಿಂದ ಬಂದೆ.

೪೨. ನನ್ನಿಂದ ಭೂಮಿದಾನವನ್ನು ಸ್ವೀಕರಿಸಿ ಸಾಗರ ಆಕಾಶಗಳಿಂದ ಪರಿ ಪೂರ್ಣವಾದ ಭೂಮಿಯನ್ನು ಅಳೆಯಲು ಒಂದೊಂದಾಗಿ ಮೂರು ಹೆಜ್ಜೆಗಳನ್ನಿಡುತ್ತ ತ್ರಿವಿಕ್ರಮಾವತಾರವನ್ನು ಮಾಡಿದೆ.

೪೩. ಆಗ ನಿನ್ನ ಪಾದತಲದಿಂದ ಎಲ್ಲ ಭೂಮಿಯನ್ನು ನೀನು ಮುಚ್ಚಿ ಹಾಕಿದೆ. ಅಲ್ಲಿ ನಿನ್ನ ಪಾದತಲದಲ್ಲಿ ನಾನು ಸಿಕ್ಕಿಕೊಂಡು ಬಹಳ ಪೀಡಿತನಾದೆನು.

ಸಂವಿಗ್ನಹೃದಯೋ ಮೂರ್ಛಾಮಗಮಂ ವ್ಯಾಕುಲೇಂದ್ರಿಯಃ ।
ಪಾತಾಳಂ ವಾ ಕಥಂ ಪ್ರಾಪ್ತೋ ನ ಜಾನೇಽಹಂ ವಿಮೂರ್ಛಿತಃ ॥

ತತಸ್ತವೈವ ಕೃಪಯಾ ಸಂಜ್ಞಾಂ ಪ್ರಾಪ್ಯ ಸಮುತ್ಥಿತಃ ।
ಅಚಿಂತಯಮಹಂ ಭೂಮ್ಯಾಃ ಪಾತಾಳಂ ಕಥಮಾಗತಃ ॥ ೪೫ ॥

ತ್ವನ್ಮಾಯಯೈವೇದಮಿತಿ ಪುನರ್ನಿಶ್ಚಿತ್ಯ ಚೇತಸಾ ।
ತ್ವಾಮೇವ ಸಂಸ್ಮರನ್ನಾಸಮಾಶ್ಚರ್ಯೇಣ ಚ ಸಂಭೃತಃ ॥ ೪೬ ॥

ಜಂಬೂದ್ವೀಪಮಿದಂ ಸರ್ವಂ ಸಶೈಲವನಕಾನನಂ ।
ಮಾತುಸ್ತವೈಕಪಾದಸ್ಯ ನಾಲಮಾಸೀದ್ಯತೋ ಹರೇ ॥ ೪೭ ॥

ಅತಸ್ತಾದೃಶಪಾದಾಢ್ಯಂ ರೂಪಂ ತೇ ಕೀದೃಶಂ ತ್ವಿತಿ ।
ತದ್ರೂಪಂ ತು ತದಾರಭ್ಯ ದ್ರಷ್ಟುಂ ವಾಂಛತಿ ಮೇ ಮನಃ ॥ ೪೮ ॥

---

೪೪. ಆಗ ನಾನು ಗಾಬರಿಯಿಂದ ಏನೂ ತೋಚದ ಹೃದಯವುಳ್ಳವನೂ ವ್ಯಾಕುಲವಾದ ಇಂದ್ರಿಯಗಳುಳ್ಳವನೂ ಆಗಿ ಮೂರ್ಛೆಯನ್ನು ಹೊಂದಿ ಪಾತಾಳಕ್ಕೆ ಹೇಗೆ ಬಂದೆನೋ ಎಂಬುದನ್ನು ತಿಳಿಯಲಿಲ್ಲ.

೪೫. ತರುವಾಯ ನಿನ್ನ ಕರುಣೆಯಿಂದ ಪ್ರಜ್ಞೆಯನ್ನು ಹೊಂದಿ ಮೇಲಕ್ಕೆದ್ದು ನಾನು ಭೂಮಿಯಿಂದ ಪಾತಾಳಕ್ಕೆ ಹೇಗೆ ಬಂದೆನು? ಎಂಬುದಾಗಿ ಚಿಂತಿಸಿದೆನು.

೪೬. ಈ ಘಟನೆಯು ನಿನ್ನ ಮಾಯೆಯಿಂದ ನಡೆದಿರುವುದೆಂದು ಕಡೆಯಲ್ಲಿ ಮನಸ್ಸಿನಲ್ಲಿ ನಿಶ್ಚಯಿಸಿ ಬಹಳ ಆಶ್ಚರ್ಯದಿಂದ ಕೂಡಿ ನಿನ್ನನ್ನು ಸ್ಮರಿಸುತ್ತಲಿದ್ದೆನು.

೪೭. ಹರಿಯೆ! ಅನೇಕ ಪರ್ವತಗಳಿಂದಲೂ ಅರಣ್ಯಗಳಿಂದಲೂ, ಮತ್ತು ದುರ್ಗ ಭೂಮಿಯಿಂದಲೂ ಪೂರ್ಣವಾದ ಈ ಜಂಬೂದ್ವೀಪವು ಅಳತೆಮಾಡುತ್ತಿದ್ದ ನಿನ್ನ ಒಂದು ಪಾದದ ಪರಿಮಾಣಕ್ಕೆ ಸಾಲದಾಯಿತು.

೪೮. ಅಷ್ಟು ಬೃಹತ್ತಾದ ಪರಿಮಾಣವುಳ್ಳ ಪಾದದಿಂದ ಕೂಡಿದ ನಿನ್ನ ಪೂರ್ಣ ರೂಪವು ಹೇಗಿರಬಹುದೋ ಎಂದು ಆ ಮೊದಲುಗೊಂಡು ಆ ರೂಪವನ್ನು ನೋಡಲು ನನ್ನ ಮನಸ್ಸು ಆಶಿಸುತ್ತಿದೆ.

ತಸ್ಮಾತ್ತ್ವಮದ್ಯ ಭೂಯೋಽಪಿ ರೂಪಂ ತ್ರೈವಿಕ್ರಮಂ ಮಹತ್ ।
ಪ್ರದರ್ಶಯ ತಥಾ ದೇವ ಯಥಾ ತುಷ್ಯೇನ್ಮನೋ ಮಮ ॥ ೪೯ ॥

ದೃಷ್ಟ್ವಾ ತೇ ಪರಮಂ ರೂಪಮದ್ಭುತಂ ರೋಮಹರ್ಷಣಂ ।
ಯಥಾ ಭೀತಿರ್ನ ಮೇ ಭೂಯಾತ್ತಥಾ ದರ್ಶಯ ವಾಮನ ॥ ೫೦ ॥

ಏವಮುಕ್ತಸ್ತು ಬಲಿನಾ ವಾಮನಃ ಪ್ರಹಸನ್ನಿವ ।
ಪ್ರತ್ಯುವಾಚ ಪುನರ್ವಾಕ್ಯಂ ಬಲಿಂ ವೈರೋಚನಿಂ ತದಾ ॥ ೫೧ ॥

ನ ಶಕ್ಯಂ ಹಿ ತ್ವಯಾ ರಾಜನ್ ದ್ರಷ್ಟುಂ ತದ್ರೂಪಮದ್ಭುತಂ ।
ಋಷಿಭಿಶ್ಚಾಪಿ ಗಂಧರ್ವೈರ್ದೇವೈರಪಿ ಸವಾಸವೈಃ ॥ ೫೨ ॥

ಅಶ್ವಮೇಧಸಹಸ್ರೇಣ ಯದಾ ಯಕ್ಷ್ಯಸಿ ಕೇಶವಂ ।
ತದ್ರೂಪದರ್ಶನೇ ಶಕ್ತಿಸ್ತವ ಭೂಯಾತ್ತದಾ ನೃಪ ॥ ೫೩ ॥

---

೪೯. ದೇವನೆ! ಆದುದರಿಂದ ತ್ರಿವಿಕ್ರಮಾವತಾರದ ಆ ಮಹಾರೂಪವನ್ನು ಈದಿನ ಮತ್ತೆ ನನಗೆ ತೋರಿಸಿ ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡು.

೫೦. ವಾಮನಮೂರ್ತಿಯೆ! ಅದ್ಭುತವೂ ರೋಮಾಂಚವನ್ನುಂಟುಮಾಡುವುದೂ ಆದ ನಿನ್ನ ಪರಮರೂಪವನ್ನು ನೋಡಿದ್ದರಿಂದ ನನಗೆ ಅಲ್ಪವೂ ಭೀತಿಯಾಗದಿರುವಂತೆ ಆ ರೂಪವನ್ನು ಪ್ರದರ್ಶಿಸು.

೫೧. ಬಲಿಯಿಂದ ಈ ರೀತಿಯಾಗಿ ಹೇಳಲ್ಪಟ್ಟ ವಾಮನದೇವನು ಆಗ ಪ್ರೀತಿಯಿಂದ ನಗುತ್ತಿರುವನಂತೆ ವಿರೋಚನಾಸುರನ ಮಗನಾದ ಬಲೀಂದ್ರನನ್ನು ನೋಡಿ ಮತ್ತೆ ಈ ರೀತಿಯಾಗಿ ಹೇಳಿದನು.

೫೨. ರಾಜನೆ! ಅದ್ಭುತವಾದ ಆ ರೂಪವನ್ನು ನಿನ್ನಿಂದ ನೋಡಲಾಗುವುದಿಲ್ಲ. ಮಹರ್ಷಿಗಳು, ಗಂಧರ್ವರು, ಇಂದ್ರಾದಿ ನಿಖಿಲ ದೇವತೆಗಳು ಕೂಡ ಆ ರೂಪವನ್ನು ನೋಡಲು ಶಕ್ತರಲ್ಲ.

೫೩. ರಾಜನೆ! ವಿಷ್ಣುಪರಮಾತ್ಮನನ್ನು ಉದ್ದೇಶಿಸಿ ಯಾವಾಗ ನೀನು ಸಹಸ್ರ ಅಶ್ವಮೇಧಯಾಗಗಳನ್ನು ಮಾಡುತ್ತಿಯೋ ಆಗ ನಿನಗೆ ಆ ರೂಪವನ್ನು ನೋಡುವುದರಲ್ಲಿ ಶಕ್ತಿಯು ಲಭಿಸುತ್ತದೆ.

ತಥಾಪಿ ಕೃಪಯಾ ತುಭ್ಯಂ ತತ್ರೋಪಾಯಂ ವದಾಮ್ಯಹಂ ।
ಶ್ರುತ್ವಾ ತು ತಮುಪಾಯಂ ಮೇ ಕುರುಷ್ವ ಯದಿ ರೋಚತೇ ॥ ೫೪ ॥

ಯಸ್ಯೈಕೇನೈವ ಯಜ್ಞೇನ ಸುಕೃತೇನ ವಿಧಾನತಃ ।
ಸಹಸ್ರಯಜ್ಞಫಲದಂ ನೃಣಾಂ ಭವತಿ ಭೂತಲೇ ॥ ೫೫ ॥

ತತ್ತಾದೃಶಂ ಕ್ಷೇತ್ರವರಂ ವಿಷ್ಣುಪ್ರೀತಿಕರಂ ಶುಭಂ ।
ಅಸ್ತಿ ಸತ್ಯವ್ರತಂ ನಾಮ ಸ್ಮರಣಾನ್ಮುಕ್ತಿದಂ ನೃಣಾಂ ॥ ೫೬ ॥

ಜಂಬೂದ್ವೀಪೇ ಮಹಾಪುಣ್ಯೇ ಮೇರೋರ್ದಕ್ಷಿಣತೋ ಗಿರೇಃ ।
ತತ್ರಾಸ್ತೇ ಭಾರತೇ ಖಂಡೇ ಕಾಂಚೀ ನಾಮ ಮಹಾಪುರೀ ॥ ೫೭ ॥

ತತ್ರ ಗತ್ವಾಶ್ವಮೇಧೇನ ತ್ವಮೇಕೇನ ಯಜಾಚ್ಯುತಂ ।
ತೇನ ತ್ರೈವಿಕ್ರಮಂ ರೂಪಂ ದ್ರಕ್ಷ್ಯಸಿ ತ್ವಂ ನ ಸಂಶಯಃ ॥ ೫೮ ॥

---

೫೪. ಆದರೆ ನಿನ್ನ ಮೇಲಿನ ಕರುಣೆಯಿಂದ ನಿನಗೊಂದು ಉಪಾಯವನ್ನು ಉಪದೇಶಿಸುವೆನು. ಆ ಉಪಾಯವನ್ನು ಕೇಳಿ ಅದು ನಿನಗೆ ಇಷ್ಟವಾದರೆ ಅದನ್ನು ನೀನು ಆಚರಿಸು.

೫೫. ಮಾನವನು ಭೂಮಿಯಲ್ಲಿ ವಿಧಿಪೂರ್ವಕವಾಗಿ ಚನ್ನಾಗಿ ಅನುಷ್ಠಾನ ಮಾಡಿದ ಒಂದು ಯಜ್ಞದಿಂದ ಸಹಸ್ರ ಯಜ್ಞಗಳ ಅನುಷ್ಠಾನದ ಫಲವನ್ನು ಹೊಂದಬಹುದಾಗಿರುವ ಉಪಾಯವನ್ನು ಕೇಳು.

೫೬. ವಿಷ್ಣುಪ್ರೀತಿಯನ್ನು ಉಂಟುಮಾಡುವುದೂ, ಮಂಗಳಕರವೂ ಆದ ಸಹಸ್ರ ಯಾಗಫಲವನ್ನು ಉಂಟುಮಾಡುವ ಸತ್ಯವ್ರತವೆಂಬ ಕ್ಷೇತ್ರವಿರುವುದು. ಅದು ಸ್ಮರಣ ಮಾತ್ರದಿಂದ ಮಾನವರಿಗೆ ಮುಕ್ತಿಯನ್ನು ಕೊಡುವುದು.

೫೭. ಮೇರುಪರ್ವತದ ದಕ್ಷಿಣಭಾಗದಲ್ಲಿ ಮಹಾಪುಣ್ಯಕರವಾದ ಜಂಬೂದ್ವೀಪದಲ್ಲಿರುವ ಭರತಖಂಡದಲ್ಲಿ "ಕಾಂಚೀ" ಎಂದು ಪ್ರಸಿದ್ಧವಾದ ಮಹಾನಗರವು ಇದೆ.

೫೮. ನೀನು ಅಲ್ಲಿಗೆ ಹೋಗಿ ಅಚ್ಯುತಸ್ವಾಮಿಯನ್ನು ಉದ್ದೇಶಿಸಿ ಒಂದು ಅಶ್ವಮೇಧಯಾಗವನ್ನು ಅನುಷ್ಠಾನಮಾಡು. ಆ ಅನುಷ್ಠಾನದ ಬಲದಿಂದ ನೀನು ತ್ರಿವಿಕ್ರಮರೂಪವನ್ನು ಸಾಕ್ಷಾತ್ಕಾರಮಾಡುತ್ತಿ. ಅದರಲ್ಲಿ ಸಂಶಯವಿಲ್ಲ.

ಇತಿ ತಸ್ಯ ವಚಃ ಶ್ರುತ್ವಾ ಬಲಿಃ ಪರಮಹೃಷ್ಟಧೀಃ ।
ತಮೇವ ಪ್ರಾರ್ಥಯಾಮಾಸ ತತ್ರ ಯಾಜಯಿತುಂ ಹರಿಂ ॥ ೫೯ ॥

ನ ಜಾನೇ ದೇವ ಕಾಂಚೀಂ ವಾ ಕ್ಷೇತ್ರಂ ವಾ ಭುಕ್ತಿಮುಕ್ತಿದಂ ।
ತ್ವಮೇವ ತತ್ರ ನೀತ್ವಾ ಮಾಂ ಕಾಂಚೀಂ ದರ್ಶಯ ಪುಣ್ಯದಾಂ ॥ ೬೦ ॥

ತ್ವಮೇವ ಯಾಜಕೋ ಭೂತ್ವಾ ಮಖಮುದ್ಧರ್ತುಮರ್ಹಸಿ ।
ಯಥಾಹಂ ಲಬ್ಧಕಾಮಃ ಸ್ಯಾಂ ತಥಾ ಕುರು ದಯಾಂ ಮಯಿ ॥ ೬೧ ॥

ಇತಿ ಸಂಪ್ರಾರ್ಥಿತಸ್ತೇನ ಬಲಿನಾ ವಾಮನೋ ಹರಿಃ ।
ತಮುವಾಚ ಪುನರ್ವಾಕ್ಯಮರ್ಥಸಿದ್ಧಿಕರಂ ಬಲೇಃ ॥ ೬೨ ॥

ಕಾರಯಿಷ್ಯಾಮಿ ತೇ ಯಜ್ಞಂ ಕ್ಷೇತ್ರೇ ಸತ್ಯವ್ರತೇಽಧುನಾ ।
ನಯಾಮಿ ತ್ವಾಮಿತೋ ರಾಜನ್ನಿಮೇಷೇಣೈವ ಭೂತಲಮ್

---

೫೯. ಬಲೀಂದ್ರನು ಹರಿಯ ಈ ಮಾತನ್ನು ಕೇಳಿ ಪರಮಸಂತುಷ್ಟವಾದ ಮಾನಸವುಳ್ಳವನಾಗಿ ಆ ಕ್ಷೇತ್ರದಲ್ಲಿ ಯಾಗಮಾಡಿಸುವ ಆಚಾರ್ಯಸ್ಥಾನದಲ್ಲಿರುವಂತೆ ಆ ಹರಿಯನ್ನೇ ಬೇಡಿಕೊಂಡನು.

೬೦. ಸ್ವಾಮಿಯೇ! ಕಾಂಚೀನಗರವನ್ನು ನಾನು ತಿಳಿದಿಲ್ಲ. ಭೋಗ-ಮೋಕ್ಷಗಳನ್ನು ಕೊಡುವ ಉತ್ತಮಕ್ಷೇತ್ರವನ್ನೂ ತಿಳಿದಿಲ್ಲ, ನೀನೇ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಪುಣ್ಯವನ್ನು ಕೊಡುವ ಕಾಂಚೀನಗರವನ್ನು ತೋರಿಸು.

೬೧. ಮತ್ತು ನೀನೇ ಯಾಗದಲ್ಲಿ ಆಚಾರ್ಯನಾಗಿ ಯಾಗವನ್ನು ಪೂರ್ತಿಗೊಳಿಸಲು ಅರ್ಹನಾಗಿದ್ದಿ. ಹೇಗಾದರೂ ನಾನು ನನ್ನ ಇಷ್ಟವನ್ನು ಹೊಂದುವಂತೆ ನನ್ನಲ್ಲಿ ಕರುಣೆಯನ್ನು ಇಡಬೇಕು.

೬೨. ಈ ರೀತಿಯಾಗಿ ಬಲೀಂದ್ರನಿಂದ ಪ್ರಾರ್ಥಿಸಲ್ಪಟ್ಟಿರುವ ವಾಮನಾವತಾರಿಯಾದ ಹರಿಯು ಬಲಿಯ ಇಷ್ಟಾರ್ಥಸಿದ್ಧಿಯನ್ನು ಉಂಟುಮಾಡುವ ಮಾತನ್ನು ಮತ್ತೆ ಆಡಿದನು.

೬೩. ರಾಜನೆ! ಸತ್ಯವ್ರತಕ್ಷೇತ್ರದಲ್ಲಿ ನಿನಗೆ ಈಗಲೆ ನಾನು ಯಾಗವನ್ನು ಮಾಡಿಸುತ್ತೇನೆ. ಮತ್ತು ಒಂದು ನಿಮಿಷಮಾತ್ರದಿಂದ ಇಲ್ಲಿಂದ ಭೂಲೋಕಕ್ಕೆ ಕರೆದುಕೊಂಡು ಹೋಗುತ್ತೇನೆ.

ಸರ್ವೈರೃಷಿಗಣೈಃ ಸಾರ್ಧಮೃತ್ವಿಗ್ಭಿಃ ಸಪುರೋಹಿತೈಃ ।
ಮಾಂ ಸ್ಪೃಶ ತ್ವಂ ಕರೇಣಾಶು ತಥಾಮೀಲಿತಲೋಚನಃ ॥ ೬೪ ॥

ಪ್ರಾಪಯಿಷ್ಯಾಮಿ ವಃ ಕಾಂಚೀಂ ತದ್ಯತಧ್ವಮತಂದ್ರಿತಾಃ ।
ಇತಿ ತದ್ವಚನಂ ಶ್ರುತ್ವಾ ಬಲಿಃ ಪರಮಹೃಷ್ಟಧೀಃ ॥ ೬೫ ॥

ಋತ್ವಿಗ್ಭಿರ್ಮಂತ್ರಿಭಿಃ ಸರ್ವೈಃ ಸಹಿತಸ್ತತ್ಪುರೋಹಿತೈಃ ।
ದೇವಂ ಪಸ್ಪರ್ಶ ಹಸ್ತೇನ ವಾಮನಂ ಮೀಲಿತೇಕ್ಷಣಃ ॥ ೬೬ ॥

ಕಾವ್ಯಃ ಪುರೋಹಿತಸ್ತೇಷಾಮಾಚಾರ್ಯೋ ಬ್ರಹ್ಮವಿತ್ತಮಃ ।
ಜರತ್ಕಾರುಶ್ಚ ಬ್ರಹ್ಮರ್ಷಿರಷ್ಟಾವಕ್ರಶ್ಚ ಭೂಸುರಃ ॥ ೬೭ ॥

ಶತಂ ಚ ಕಾಪಿಲೇಯಾನಾಂ ಬ್ರಾಹ್ಮಣಾನಾಂ ಮಹಾತ್ಮನಾಂ ॥
ಏತೇ ಚಾನ್ಯೇ ಚ ವಿಪ್ರೇಂದ್ರಾಃ ಪಸ್ಪೃಶುರ್ವಾಮನಂ ಕರೈಃ ॥ ೬೮ ॥

---

೬೪. ಈಗ ಇಲ್ಲಿರುವ ಸಮಸ್ತ ಋಷಿಗಳು, ಋತ್ವಿಜರು ಮತ್ತು ಪುರೋಹಿತರು ಇವರೊಂದಿಗೆ ನೀನು ಕಣ್ಣುಗಳನ್ನು ಮುಚ್ಚಿಕೊಂಡು ಕೈಯಿಂದ ನನ್ನನ್ನು ಬೇಗ ಸ್ಪರ್ಶಮಾಡು.

೬೫. ನಿಮ್ಮೆಲ್ಲರನ್ನೂ ಈಗಲೇ ಕಾಂಚೀಪಟ್ಟಣಕ್ಕೆ ಕರೆದುಕೊಂಡು ಹೋಗುವೆನು. ಆದುದರಿಂದ ಆಲಸ್ಯವಿಲ್ಲದಂತೆಯೇ ಬೇಗ ಯತ್ನಿಸಿರಿ. ಹೀಗೆಂದು ಹೇಳಿದ ಹರಿಯ ಮಾತನ್ನು ಕೇಳಿ ಬಲಿಯು ಬಹು ಸಂತೋಷಪಟ್ಟ ಹೃದಯವುಳ್ಳವನಾದನು.

೬೬. ಮತ್ತು ಅವರಂತೆ ತನ್ನ ಋತ್ವಿಜರು, ಮಂತ್ರಿಗಳು ಮತ್ತು ಪುರೋಹಿತರೊಡಗೂಡಿ ಕಣ್ಣುಗಳನ್ನು ಮುಚ್ಚಿಕೊಂಡವನಾಗಿ ವಾಮನದೇವನನ್ನು ಪಾಣಿಯಿಂದ ಸ್ಪರ್ಶಮಾಡಿದನು.

೬೭. ಬಲಿಚಕ್ರವರ್ತಿಯ ಜೊತೆಯಲ್ಲಿ ಅನೇಕ ಮಹರ್ಷಿಗಳು ವಾಮನನ ಸ್ಪರ್ಶದಿಂದ ಭೂಮಿಗೆ ಬಂದರು. ಅವರಲ್ಲಿ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನೂ ಪುರೋಹಿತನೂ ಶುಕ್ರಾಚಾರ್ಯನೂ ಜರತ್ಕಾರುವೆಂಬ ಬ್ರಹ್ಮರ್ಷಿಯೂ ಅಷ್ಟಾವಕ್ರನೆಂಬ ಭೂಸುರನೂ ಸೇರಿದ್ದರು.

೬೮. ಕಪಿಲಗೋತ್ರೋತ್ಪನ್ನರಾದ ಮಹಾತ್ಮ ಬ್ರಾಹ್ಮಣರು ನೂರಾರು ಸಂಖ್ಯೆಯಾಗಿಯೂ ಮತ್ತು ಇತರ ಅನೇಕ ವಿಪ್ರಶ್ರೇಷ್ಠರೂ ತಮ್ಮ ಪಾಣಿಯಿಂದ ಮುಟ್ಟಿದರು.

ಮೀಲಿತಾಕ್ಷೇಷು ಸರ್ವೇಷು ಭಗವಾನ್ ವಾಮನೋ ಹರಿಃ ।
ಸ್ವಯಂ ಶೇಷಾಕೃತಿರಭೂದ್ದೀರ್ಘಪೃಷ್ಠೋ ಭಯಂಕರಃ ॥ ೧೯ ॥

ಭಿಂದನ್ ನಿಶ್ವಾಸವಾತೇನ ಧರಾಂ ವೇಗಾದ್ರಸಾತಲಾತ್ ।
ಬಿಲಮತ್ಯದ್ಭುತಂ ಕೃತ್ವಾ ಪುಚ್ಛಾಗ್ರೇಣೋಪಗೃಹ್ಯ ತಾನ್ ॥ ೨೦ ॥

ಪ್ರಾಗಾದ್ಬಿಲೇನ ತೇನೈವ ಕ್ಷಣಾತ್ಸತ್ಯವ್ರತಂ ಕಿಲ ।
ತದ್ವೈ ಶೇಷಬಿಲಂ ಕಾಂಚ್ಯಾಂ ವಾಮನಾಖ್ಯಂ ಚ ಭೂತಲೇ ॥ ೨೧ ॥

ತತಃ ಸರ್ಪಾನ್ ಸಮುತ್ಸೃಜ್ಯ ಸ್ವಪುಚ್ಛಾಗ್ರೇಣ ವೇಷ್ಟಿತಾನ್ ।
ಶೇಷಾಕಾರೋ ಹರಿಸ್ತತ್ರ ವಾಮನಶ್ಚಾಭವತ್ಪುನಃ ॥ ೨೨ ॥

ಉವಾಚ ಚ ಬಲಿಂ ವೀಕ್ಷ್ಯ ಸರ್ಷಿಸಂಘಂ ಸಋತ್ವಿಜಂ ।
ದಾನವೇಂದ್ರ ಮಹಾಭಾಗ ಪಶ್ಯೋನ್ಮೀಲಯ ಲೋಚನೇ ॥ ೨೩ ॥

---

೧೯. ತನ್ನನ್ನು ಸ್ಪರ್ಶಮಾಡಿ ಎಲ್ಲರೂ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿರುವಾಗ ಭಗವಂತನಾದ ವಾಮನಮೂರ್ತಿಯು ಆದಿಶೇಷನ ಆಕಾರವುಳ್ಳ ಭಯಂಕರವಾದ ಸರ್ಪರೂಪವನ್ನು ತೆಗೆದುಕೊಂಡನು.

೨೦. ಪಾತಾಳದಿಂದ ನಿಶ್ವಾಸವಾಯುವಿನ ವೇಗದಿಂದ ಭೂಮಿಯನ್ನು ಭೇದಿಸಿ ಅತಿಯಾಗಿ ಅದ್ಭುತವಾಗಿರುವ ಒಂದು ಬಿಲವನ್ನು ಮಾಡಿ ಮೇಲಕ್ಕೆ ಬರಲು ತನ್ನ ಪುಚ್ಛಾಗ್ರಭಾಗದಿಂದ ಅವರನ್ನೆಲ್ಲ ಹಿಡಿದುಕೊಂಡನು.

೨೧. ಮತ್ತು ಆ ಬಿಲದ ಮೂಲಕವಾಗಿ ಒಂದು ನಿಮಿಷಕ್ಕೆ ಸತ್ಯವ್ರತ ಕ್ಷೇತ್ರಕ್ಕೆ ಬಂದನು. ಆ ಬಿಲವು ಭೂಮಿಯಲ್ಲೆಲ್ಲ ಶೇಷಬಿಲ ಅಥವಾ ವಾಮನಬಿಲವೆಂದು ಪ್ರಸಿದ್ಧವಾಗಿ ಕಾಂಚೀನಗರದಲ್ಲಿರುವುದು.

೨೨. ತರುವಾಯ ಅಲ್ಲಿ ತನ್ನ ಪುಚ್ಛಾಗ್ರದಿಂದ ವೇಷ್ಟಿತರಾದ ಸರ್ಪರನ್ನು ಬಿಟ್ಟು ಶೇಷಾಕಾರವನ್ನು ಧರಿಸಿದ ಹರಿಯು ಆ ಆಕಾರದ ಜೊತೆಗೆ ವಾಮನಮೂರ್ತಿಯೂ ಆದನು.

೨೩. ಮತ್ತು ಋಷಿಗಳು, ಋತ್ವಿಜರು, ಮುಂತಾದವರಿಂದ ಕೂಡಿದ ಬಲೀಂದ್ರನನ್ನು ನೋಡಿ ಹರಿಯು ಮಹಾಭಾಗನಾದ ದಾನವೇಂದ್ರನೆ! ಕಣ್ಣನ್ನು ತೆರೆದು ನೋಡು ಎಂದು ಹೇಳಿದನು.

ಇಯಮೇವ ಪುರೀ ಕಾಂಚೀ ಮುಕ್ತಿದಾ ಬ್ರಹ್ಮನಿರ್ಮಿತಾ ।
ಇತಿ ತಸ್ಯ ವಚಃ ಶ್ರುತ್ವಾ ವಾಮನಸ್ಯ ಮಹಾತ್ಮನಃ ॥ ೭೪ ॥

ನೇತ್ರಾಣ್ಯುನ್ಮೀಲ್ಯ ತೇ ಸರ್ವೇ ಕಾಂಚೀಂ ದದೃಶುರದ್ಭುತಾಂ ।
ವಯಂ ಕ್ಷಣಾದಿಹ ಪ್ರಾಪ್ತಾಃ ಪಾತಾಳಾದ್ಬಹುಯೋಜನಾತ್ ॥ ೭೫ ॥

ಕೃಪಯಾ ಕಿಲ ದೇವಸ್ಯ ವಾಮನಸ್ಯ ಮಹಾತ್ಮನಃ ।
ಇತಿ ಸಂಹೃಷ್ಟಮನಸಃ ಸರ್ವೇ ಪಶ್ಯಂತಿ ತಾಂ ಪುರೀಂ ॥ ೭೬ ॥

ವಾಮನಸ್ತು ಬಿಲದ್ವಾರೇ ಶೇಷೇಣ ಸಹಿತೋಽವಸತ್ ।
ಶೇಷೋ ಬಿಲಸ್ಯ ವಾಯವ್ಯೇ ಸಮೀಪೇ ಭೂತಲೇ ನೃಪ ॥ ೭೭ ॥

ಭೋಗೇನ ಕೋಷ್ಟಕೀಕೃತ್ಯ ಸ್ಯವಸತ್ ಕಾಮದೋ ನೃಣಾಂ ।
ಸ ತಂ ಸಮುದ್ವೀಕ್ಷ್ಯ ಬಲಿರ್ಮಹಾಂತಂ ಸರ್ಪಮುತ್ಫಣಂ ॥ ೭೮ ॥

---

೭೪. ಮತ್ತು ಇದೇ ಬ್ರಹ್ಮನಿಂದ ನಿರ್ಮಾಣಮಾಡಿಸಲ್ಪಟ್ಟ ಕಾಂಚೀನಗರವು. ಇದು ಭಕ್ತರಿಗೆ ಮುಕ್ತಿಸುಖವನ್ನು ಕೊಡುವುದು ಎಂದು ಹರಿಯು ಹೇಳಲಾಗಿ ಮಹಾತ್ಮನಾದ ವಾಮನನು ಹೇಳಿದ ಮಾತನ್ನು ಬಲಿಯು ಶ್ರವಣಮಾಡಿದನು.

೭೫. ಆಗ ಅವರೆಲ್ಲರೂ ತಮ್ಮ ಕಣ್ಣುಗಳನ್ನು ತೆರೆದು ಅದ್ಭುತ ರೂಪದಿಂದಿರುವ ಕಾಂಚೀನಗರವನ್ನು ನೋಡಿದರು. ಮತ್ತು ಬಹು ಯೋಜನ ದೂರದಲ್ಲಿರುವ ಪಾತಾಳದಿಂದ ಒಂದು ಕ್ಷಣಮಾತ್ರದಿಂದ ಇಲ್ಲಿಗೆ ಬಂದೆವೆಂದು ಆಶ್ಚರ್ಯಪಟ್ಟರು.

೭೬. ಮಹಾತ್ಮನಾದ ವಾಮನಮೂರ್ತಿಯಿಂದ ನಾವು ಈ ನಗರವನ್ನು ಸೇರಿದ್ದೆವೆಂದು ಎಲ್ಲರೂ ಸಂತೋಷಚಿತ್ತವುಳ್ಳವರಾಗಿ ಆ ನಗರವನ್ನು ನೋಡಿದರು.

೭೭. ಆಗ ವಾಮನಮೂರ್ತಿಯು ಆ ಬಿಲದ ದ್ವಾರದಲ್ಲಿಯೇ ಶೇಷಮೂರ್ತಿಯೊಡನೆ ವಾಸಮಾಡಿದನು. ರಾಜನೆ! ಶೇಷನು ಆ ಬಿಲದ ವಾಯವ್ಯದಿಕ್ಕಿನ ಸಮೀಪ ಭೂಮಿಯಲ್ಲಿ ವಾಸಮಾಡಿದನು.

೭೮. ಶೇಷನು ಆ ಸ್ಥಳದಲ್ಲಿ ತನ್ನ ಶರೀರವನ್ನು ವರ್ತುಲಾಕಾರವಾಗಿ ಕಣಜದಂತೆ ಸುತ್ತಿಕೊಂಡು ಮನುಜರಿಗೆ ಇಷ್ಟಾರ್ಥವನ್ನು ನೀಡುತ್ತ ವಾಸಮಾಡಿದನು. ಆಗ ಬಲಿಯು ಮಹಾಪರಿಮಾಣವೂ ಮತ್ತು ಭಯಂಕರವೂ ಆದ ಆ ಸರ್ಪವನ್ನು ನೋಡಿದನು.

ಕೋಽಷ್ಟಕೀಕೃತ್ಯ ವಸುಧಾಂ ತಿಷ್ಠಂತಂ ಬಿಲಪಾರ್ಶ್ವತಃ ।
ವಿಸ್ಮಯಾವಿಷ್ಟಹೃದಯಃ ಪರಿಪಪ್ರಚ್ಛ ವಾಮನಂ ॥ ೭೯ ॥

ಕೋಽಯಂ ಸರ್ಪೋ ಮಹಾಭಾಗ ದೃಶ್ಯತೇಽದ್ಭುತದರ್ಶನಃ ।
ತ್ವತ್ಸಮೀಪಗತೋಽಪ್ಯೇಷ ತಂ ಮಮಾಚಕ್ಷ್ವ ವಾಮನ ॥ ೮೦ ॥

ವಾಮನ ಉವಾಚ :—

ಶೃಣು ರಾಜರ್ಷೇ ಪ್ರವಕ್ಷ್ಯಾಮಿ ಯೋ ವಾ ಸರ್ಪೋಽಯಮದ್ಭುತಃ ।
ಅಯಂ ನಾರಾಯಣೋ ದೇವಃ ಪರಮಾತ್ಮಾ ಸನಾತನಃ ॥ ೮೧ ॥

ತ್ವಯಾ ಸಂಪೂಜಿತಃ ಪೂರ್ವಂ ಕ್ರತುಭಿರ್ಭೂರಿದಕ್ಷಿಣೈಃ ।
ಕೃಪಯಾ ತ್ವಯಿ ವಿಶ್ವೇಶೋ ರಕ್ಷಿತುಂ ತ್ವಾಮುಪಾಗತಃ ॥ ೮೨ ॥

ಅನೇನ ಕಿಲ ಪಾತಾಲಾತ್ತ್ವಮಿಹೋರ್ಧ್ವಮುಪಾಗತಃ ।
ಅಸ್ಮಾದ್ಬಿಲಾನ್ಮಯಾ ಸಾರ್ಧಂ ಸರ್ವೈರೃಷಿಗಣೈರಪಿ ॥ ೮೩ ॥

---

೭೯. ಮತ್ತು ಆ ರೀತಿಯಲ್ಲಿ ತನ್ನ ದೇಹದನ್ನು ಸುತ್ತಿಕೊಂಡು ಬಿಲದ ಪಕ್ಕದಲ್ಲಿರುವ ಆ ಸರ್ಪವನ್ನು ನೋಡಿ ಆತ್ಯಾಶ್ಚರ್ಯದಿಂದ ಚಕಿತವಾದ ಹೃದಯವುಳ್ಳವನಾಗಿ ವಾಮನಮೂರ್ತಿಯನ್ನು ಪ್ರಶ್ನೆಮಾಡಿದನು.

೮೦. ಮಹಾಮಹಿಮನೆ! ಅದ್ಭುತವಾದ ದರ್ಶನವುಳ್ಳ ಈ ಸರ್ಪವು ಯಾವುದು ? ಇದು ನಿನ್ನ ಸಮೀಪದಲ್ಲಿರುವುದಲ್ಲವೆ, ವಾಮನದೇವನೆ! ಇದನ್ನು ನನಗೆ ಹೇಳು.

೮೧. ವಾಮನನು ಈ ರೀತಿಯಾಗಿ ಪ್ರತ್ಯುತ್ತರ ಹೇಳಿದನು. ರಾಜನೆ! ವಿಸ್ಮಯವನ್ನುಂಟುಮಾಡುವ ಈ ಸರ್ಪವು ಯಾರೆಂಬುದನ್ನು ಹೇಳುವೆನು, ಕೇಳು. ಈ ಸರ್ಪವು ಅನಾದಿಯಾಗಿಯೂ ಮತ್ತು ದೇದೀಪ್ಯಮಾನನೂ ಆಗಿರುವ ಸಾಕ್ಷಾತ್ ವಿಷ್ಣುಪರಮಾತ್ಮನು.

೮೨. ನೀನು ಹಿಂದೆ ಅನೇಕ ದಕ್ಷಿಣಾದಾನಗಳಿಂದ ಕೂಡಿದ ಯಜ್ಞಗಳನ್ನು ಮಾಡಿ ಪರಮಾತ್ಮನನ್ನು ಪೂಜೆಮಾಡಿರುತ್ತಿ. ಅದರಿಂದ ನಿನ್ನಲ್ಲಿ ಕರುಣೆಯಿಂದ ನಿನ್ನನ್ನು ರಕ್ಷಿಸಲು ಜಗನ್ನಿಯಾಮಕನಾದ ಪರಮಾತ್ಮನು ಬಂದಿರುವನು.

೮೩. ನೀನು ಮತ್ತು ಈ ಎಲ್ಲ ಋಷಿಗಣವು ನನ್ನ ಸಂಗಡ ಈ ನಾಗರಾಜನ ಸಹಾಯದಿಂದ ಪಾತಾಳಲೋಕವನ್ನು ಬಿಟ್ಟು ಊರ್ಧ್ವಭಾಗದಲ್ಲಿರುವ ಈ ಭೂಭಾಗಕ್ಕೆ ಈ ಬಿಲದ ಮೂಲಕವಾಗಿ ಬಂದಿರುತ್ತೀರಿ.

ಸರ್ವಕಾಮಪ್ರದೋ ನೃಣಾಮಯಮೇವ ಸನಾತನಃ ।
ಸರ್ವಾನ್ ಮನೋಗತಾನ್ ಕಾಮಾನ್ ತವ ದಾತುಂ ಹಿ ಕೇವಲಂ ॥ ೮೪ ॥

ಹಂತುಂ ಚ ತವ ಯಜ್ಞಘ್ನಾನಿಂದ್ರಾದೀನಾತತಾಯಿನಃ ।
ತಸ್ಯ ಪ್ರಿಯತಮೇ ಕ್ಷೇತ್ರೇ ತ್ವಾಮಯಂ ಗೋಪ್ತುಮಾಗತಃ ॥ ೮೫ ॥

ತಸ್ಮಾತ್ತ್ವಮಶ್ವಮೇಧಸ್ಯ ದೀಕ್ಷಾಂ ಕೃತ್ವಾ ವಿಧಾನತಃ ।
ಅದ್ಯೈವ ತುರಗಂ ಚಾಪಿ ಕ್ಷಿಪ್ರಂ ಮೋಕ್ತುಮಿಹಾರ್ಹಸಿ ॥ ೮೬ ॥

ತ್ವಮನೇನ ಸಹಾಯೇನ ಶೇಷೇಣಾದ್ಭುತತೇಜಸಾ ।
ಅಶ್ವಾನುಯಾತ್ರಾಂ ತರಸಾ ಕರ್ತುಮರ್ಹಸಿ ಸಾಂಪ್ರತಂ ॥ ೮೭ ॥

ಅಹಮತ್ರೈವ ತಿಷ್ಠಾಮಿ ಯಾವದಾಗಮನಂ ತವ ।
ಇತ್ಯಾದಿಷ್ಟೋ ಭಗವತಾ ವಾಮನೇನ ಬಲಿಸ್ತದಾ ॥ ೮೮ ॥

---

೮೪. ಅನಾದಿಯಾದ ಈ ಶೇಷರೂಪಿಯಾದ ಭಗವಂತನು ಮನುಷ್ಯರ ಸಕಲ ಕಾಮಗಳನ್ನು ಪ್ರದಾನಮಾಡುವನು. ಹೀಗಿರಲು ನಿನ್ನ ಮನಸ್ಸಿನಲ್ಲಿ ಚಿಂತಿಸಿದ ಸಕಲ ಕಾಮಗಳನ್ನು ನಿನಗೆ ಕೊಡಲು ಇಲ್ಲಿಗೆ ಬಂದಿರುವನು.

೮೫. ನಿನ್ನ ಯಜ್ಞವನ್ನು ಭಂಗಪಡಿಸುವ ಮತ್ತು ನಿನ್ನನ್ನು ಸಂಹರಿಸಲು ಉದ್ಯುಕ್ತರಾಗಿ ಬರುವ ಇಂದ್ರಾದಿದೇವತೆಗಳನ್ನು ನಾಶಮಾಡಿ ನಿನ್ನನ್ನು ರಕ್ಷಿಸಲು ಪರಮಾತ್ಮನು ತನ್ನ ಪ್ರಿಯವಾದ ಈ ಕ್ಷೇತ್ರಕ್ಕೆ ಬಂದಿರುವನು.

೮೬. ಆದುದರಿಂದ ನೀನು ಈ ದಿನವೇ ವಿಧಾನಪೂರ್ವಕವಾಗಿ ಅಶ್ವಮೇಧ ಯಾಗವನ್ನು ಮಾಡಲು ದೀಕ್ಷಾವಿಧಿಯನ್ನು ಆರಂಭಿಸಿ ಅದಕ್ಕೆ ಅಂಗವಾಗಿ ಬೇಗ ಅಶ್ವವನ್ನು ಬಿಡಲು ಅರ್ಹನಾಗಿದ್ದೀ.

೮೭. ಮತ್ತು ಅದ್ಭುತವಾದ ತೇಜಸ್ಸಿನಿಂದ ಕೂಡಿದ ಈ ಶೇಷನೆಂಬ ಸಹಾಯದಿಂದ ಈಗ ಅಶ್ವವನ್ನು ವೇಗದಿಂದ ಹಿಂಬಾಲಿಸಿ ಹೋಗಲು ಅರ್ಹನಾಗಿರುತ್ತೀ.

೮೮. ನೀನು ಹಿಂತಿರುಗಿ ಬರುವವರೆಗೂ ನಾನು ಇಲ್ಲಿಯೇ ಇರುವೆನು. ಎಂಬುದಾಗಿ ಭಗವಂತನಾದ ವಾಮನನಿಂದ ಬಲಿಯು ಆಗ ಆಜ್ಞಾಪಿಸಲ್ಪಟ್ಟನು.

ಪ್ರವಿಶ್ಯ ದೀಕ್ಷಾಂ ವಿಧಿವತ್ಪ್ರಮುಮೋಚಾಶ್ವಮಂಜಸಾ ।
ತಸ್ಯಾಶ್ವಚರ್ಯಾ ಮಹತೀ ಬಭೂವಾದ್ಭುತದರ್ಶನಾ ॥ ೮೯ ॥

ಶೇಷೋಽನುಯಾತ್ರಾಮಶ್ವಸ್ಯ ಚಕಾರ ಬಲಿನಾ ಸಹ ।
ತತಃ ಪ್ರಾಚೀಂ ದಿಶಂ ಗತ್ವಾ ಕ್ಷೇತ್ರಾತ್ ಸತ್ಯವ್ರತಾದ್ಬಹಿಃ ॥ ೯೦ ॥

ತತ್ರ ತೀರೇ ಸಮುದ್ರಸ್ಯ ವೇದಿಂ ಕೃತ್ವಾ ವಿಧಾನತಃ ।
ನಾರಾಯಣಂ ಸಮುದ್ದಿಶ್ಯ ಮಹಾಂತಂ ಬಲಿಮಾಚರತ್ ॥ ೯೧ ॥

ಹುತ್ವಾ ಚೈವಾಜ್ಯಹೋಮೇನ ಋತ್ವಿಗ್ಭಿರ್ಬ್ರಾಹ್ಮಣೈಃ ಸಹ ।
ಪ್ರಯಯೌ ದಕ್ಷಿಣಾಮಾಶಾಮನುಸೃತ್ಯ ಹಯಂ ತತಃ ॥ ೯೨ ॥

ಏವಂ ಕ್ರಮೇಣ ರಾಜೇಂದ್ರ ದಿಶಃ ಸರ್ವಾಃ ಪರಿಭ್ರಮನ್ ।
ಆಯಯೌ ವತ್ಸರಸ್ಯಾಂತೇ ಕ್ಷೇತ್ರಂ ಸತ್ಯವ್ರತಂ ಬಲಿಃ ॥ ೯೩ ॥

---

೮೯. ಆಗ ವಿಧಿವತ್ತಾಗಿ ಯಜ್ಞದೀಕ್ಷೆಯನ್ನು ಕೈಗೊಂಡವನಾಗಿ ಬೇಗ ಅಶ್ವವನ್ನು ಬಿಟ್ಟನು. ಅಶ್ವವನ್ನು ಹಿಂಬಾಲಿಸಿ ಬಲಿಯು ಮಾಡಿರುವ ಮಹಾ ಯಾತ್ರೆಯು ಅದ್ಭುತವನ್ನುಂಟುಮಾಡುತ್ತಲಿತ್ತು.

೯೦. ಶೇಷನು ಬಲೀಂದ್ರನ ಸಂಗಡ ಅಶ್ವವನ್ನು ಹಿಂಬಾಲಿಸಿ ನಡೆದನು. ಆಗ ಮೊದಲು ಸತ್ಯವ್ರತಕ್ಷೇತ್ರದ ಹೊರಭಾಗದಲ್ಲಿ ಪೂರ್ವದಿಕ್ಕಿಗೆ ಹೋದನು.

೯೧. ಅಲ್ಲಿ ಸಮುದ್ರದ ತೀರದಲ್ಲಿ ವಿಧಾನಪೂರ್ವಕವಾಗಿ ವೇದಿಕೆಯನ್ನು ಮಾಡಿ ಅಲ್ಲಿ ನಾರಾಯಣನನ್ನು ಉದ್ದೇಶಿಸಿ ಮಹಾ ವಿಜೃಂಭಣೆಯಿಂದ ಪೂಜೆಯನ್ನು ಮಾಡಿದನು.

೯೨. ಮತ್ತು ಆಜ್ಯವನ್ನು ಅಗ್ನಿಯಲ್ಲಿ ಹೋಮಮಾಡಿ ಋತ್ವಿಜರು ಮತ್ತು ಬ್ರಾಹ್ಮಣರ ಸಂಗಡ ಅಶ್ವವನ್ನು ಹಿಂಬಾಲಿಸಿ ಅಲ್ಲಿಂದ ದಕ್ಷಿಣ ದಿಕ್ಕಿಗೆ ಬಂದನು.

೯೩. ಬಲೀಂದ್ರನು ಈ ಕ್ರಮದಿಂದ ಸಕಲ ದಿಕ್ಕುಗಳನ್ನೂ ಸಂಚರಿಸಿ ಅಶ್ವದ ಅನುಯಾತ್ರೆಯನ್ನು ಮುಗಿಸಿ ಒಂದು ವರ್ಷವು ಕಳೆದ ತರುವಾಯ ಸತ್ಯವ್ರತ ಕ್ಷೇತ್ರಕ್ಕೆ ಬಂದನು.

ಶೇಷೋಽಪಿ ಜಿತ್ವಾ ಪಥಿ ವೀರ್ಯದೃಪ್ತಾಂ-
ಸ್ತುರಂಗಮಂ ಹಂತುಮುಪಾಗತಾನ್ ಸುರಾನ್ ।
ವಿಜಿತ್ಯ ಶಕ್ರಂ ಚ ವಿದೀಪಯನ್ ಜಗತ್
ಫಣಾಸಹಸ್ರೋತ್ಥಿತರತ್ನಕಾಂತಿಭಿಃ ॥ ೯೪ ॥

ವಿಧೂಯ ವಿಘ್ನಾಂಸ್ತುರಗಾನುಯಾನೇ
ವಿನಿರ್ಮಿತಾನ್ ವಜ್ರಧರೇಣ ರೋಷಾತ್ ।
ಪುನಶ್ಚ ಸತ್ಯವ್ರತಮೇತ್ಯ ಕಾಂಚೀಂ
ಪ್ರಾವೇಶಯದ್ದೈತ್ಯಪತಿಂ ಪ್ರಹರ್ಷಾತ್ ॥ ೯೫ ॥

ಸ್ವಯಂ ಚ ಭೋಗೇನ ಬಲಾತ್ಸಮಂತಾ
ದಾಕ್ರೋಶಮಾವೇಷ್ಟ್ಯ ಮುರಾರಿರುತ್ಫಣಃ ।
ತತ್ರೈವ ಕಾಂಚ್ಯಾಮುವಸತ್ ಸಮೀಪೇ
ಬಿಲಸ್ಯ ಪಾರ್ಶ್ವೇ ಕಿಲ ಪೂರ್ವದಕ್ಷಿಣೇ ॥ ೯೬ ॥

ಏವಂ ಹಿ ರಾಜನ್ ಕಮಲಾಪತಿರ್ಹರಿಃ
ಶೇಷಾಕೃತಿಸ್ತತ್ರ ಬಭೂವ ಕಾಂಚ್ಯಾಂ ।

---

೯೪. ಶೇಷನೂ ಕೂಡ ಮಾರ್ಗದಲ್ಲಿ ಅಶ್ವವನ್ನು ಅಪಹರಿಸಲು ಬಂದಿರುವ ವೀರ್ಯದಿಂದ ಮತ್ತರಾದ ದೇವತೆಗಳನ್ನು ಜಯಿಸಿ ಹಾಗೆಯೇ ದೇವೇಂದ್ರನನ್ನು ಗೆದ್ದು ತನ್ನ ಸಾವಿರ ಹೆಡೆಗಳಲ್ಲಿರುವ ರತ್ನಗಳ ಕಿರಣಗಳಿಂದ ಲೋಕವನ್ನು ಬೆಳಗುತ್ತ ಬಂದನು.

೯೫. ಅಶ್ವವನ್ನು ಹಿಂಬಾಲಿಸಿ ಮಾಡಿದ ಪ್ರಯಾಣದಲ್ಲಿ ವಜ್ರಧಾರಿಯಾದ ಇಂದ್ರನು ರೋಷದಿಂದ ಮಾಡಿರುವ ವಿಘ್ನಗಳನ್ನು ನಿವಾರಿಸಿ ದಾನವೇಂದ್ರನಾದ ಬಲಿಯನ್ನು ಮತ್ತೆ ಹರ್ಷದಿಂದ ಸತ್ಯವ್ರತಕ್ಷೇತ್ರಕ್ಕೆ ಬಂದು ಕಾಂಚೀನಗರಕ್ಕೆ ತಂದು ಬಿಟ್ಟನು.

೯೬. ಮತ್ತು ತಾನು ಶೇಷರೂಪಿಯಾದ ಪರಮಾತ್ಮನು ಹೆಡೆಯನ್ನು ಎತ್ತಿಕೊಂಡು, ಮಹಾಬಲದಿಂದ ಸುತ್ತಲೂ ತನ್ನ ಶರೀರವನ್ನು ಬಂದು ಹರದಾರಿಯಷ್ಟು ಪ್ರದೇಶದಲ್ಲಿ ಸುತ್ತಿಕೊಂಡು ಆ ಕಾಂಚೀನಗರದಲ್ಲಿ ಬಿಲದ ಆಗ್ನೇಯದಿಕ್ಕಿನ ಭಾಗದ ಸಮೀಪಪ್ರದೇಶದಲ್ಲಿ ವಾಸಮಾಡಿದನು.

೯೭. ರಾಜನೆ! ಈ ರೀತಿಯಾಗಿ ಲಕ್ಷ್ಮೀಪತಿಯಾದ ಹರಿಯು ಆ ಕಾಂಚೀನಗರದಲ್ಲಿ ಆದಿಶೇಷನ ಆಕಾರವನ್ನು ಧರಿಸಿ ವಾಸಮಾಡಿರುವನು. ಆ ಶೇಷ

ತದ್ದರ್ಶನಂ ಸರ್ವಸಮೃದ್ಧಿದಂ ನೃಣಾಂ
ಪಾಪಾಪಹಂ ಪುಣ್ಯಫಲಪ್ರದಂ ಚ ॥ ೯೭ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಏಕೋನವಿಂಶೋಽಧ್ಯಾಯಃ.

ಭಗವಂತನ ದರ್ಶನವು ಮಾನವರಿಗೆ ಪಾಪವನ್ನು ದೂರಮಾಡಿ ಸಮಸ್ತ ಪುಣ್ಯ ಫಲವನ್ನೂ ಸಕಲ ಸಮೃದ್ಧಿಯನ್ನೂ ಉಂಟುಮಾಡುವುದು.

ಕಾಂಚೀಮಾಹಾತ್ಮ್ಯದಲ್ಲಿ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ವಿಂಶೋಽಧ್ಯಾಯಃ

ನಾರದ ಉವಾಚ :—

ತತೋ ವೈರೋಚನಿಶ್ಚಾಪಿ ನತ್ವಾ ಶೇಷಾಕೃತಿಂ ಹರಿಂ ।
ವಾಮನಂ ಚ ಬಿಲದ್ವಾರೇ ನತ್ವಾ ತಿಷ್ಠಂತಮಚ್ಯುತಂ ॥ ೧ ॥

ತತಸ್ತದಾಜ್ಞಯಾ ರಾಜಾ ಯಷ್ಟುಂ ಸಮುಪಚಕ್ರಮೇ ।
ತಸ್ಯಾಭೂದ್ಯಜ್ಞಶಾಲಾ ಹಿ ಕ್ರೋಶಮಾತ್ರಾಯತಾ ನೃಪ ॥ ೨ ॥

ಬಿಲಸ್ಯ ಪರಿತೋ ಯಾವಚ್ಛೇಷಭೋಗಾನುವೇಷ್ಟಿತಾ ।
ಏಕವಿಂಶತಿಯೂಪಾಶ್ಚ ಶಾಲಾಯಾಂ ಸ್ಥಾಪಿತಾಃ ಕ್ರಮಾತ್ ॥ ೩ ॥

---

೧. ತರುವಾಯ ವಿರೋಚನಾಸುರನ ಪುತ್ರನಾದ ಬಲೀಂದ್ರನು ಶೇಷನ ಆಕಾರವನ್ನು ಧರಿಸಿದ ಹರಿಯನ್ನು ನಮಸ್ಕರಿಸಿ ಬಿಲದ್ವಾರದಲ್ಲಿ ನಿಂತಿರುವ ವಾಮನ ರೂಪಿಯಾದ ಹರಿಯನ್ನು ನಮಸ್ಕರಿಸಿದನು.

೨. ಮತ್ತು ರಾಜನಾದ ಬಲಿಯು ವಾಮನಮೂರ್ತಿಯ ಆಜ್ಞೆಯನ್ನು ತೆಗೆದುಕೊಂಡು ಯಾಗಮಾಡಲಾರಂಭಿಸಿದನು. ರಾಜನೆ! ಅವನ ಯಜ್ಞಶಾಲೆಯು ಒಂದು ಹರದಾರಿಯಷ್ಟು ದೀರ್ಘವಾಗಿತ್ತು.

೩. ಬಿಲದ ಸುತ್ತಲೂ ಬರುವಂತೆ ಶೇಷನ ಶರೀರದಿಂದ ಸುತ್ತುವರಿಯಲ್ಪಟ್ಟಿತ್ತು. ಆ ಯಾಗಶಾಲೆಯಲ್ಲಿ ಕ್ರಮವಾಗಿ ಇಪ್ಪತ್ತೊಂದು ಯೂಪಸ್ತಂಭಗಳು ಪ್ರತಿಷ್ಠೆಮಾಡಲ್ಪಟ್ಟಿದ್ದವು.

ಶಾಲಾಮಧ್ಯೇ ಮಹಾನ್ ಯೂಪಃ ಪ್ರಧಾನಃ ಸ್ಥಾಪಿತೋ ದ್ವಿಜೈಃ ।
ಬಿಲಸ್ಯ ಪಾರ್ಶ್ವೇ ವಾಯವ್ಯೇ ವೇದಿಕಾಪಿ ವಿನಿರ್ಮಿತಾ ॥ ೪ ॥

ಯತ್ರಾಸೀತ್ಕೋಷ್ಟಕೀಕೃತ್ಯ ಶೇಷಃ ಪೂರ್ವಂ ಧರಾತಲೇ ।
ತತ್ರೈವ ರಚಿತಾ ವೇದಿಃ ಕುಶಲೈರ್ಯಜ್ಞಕೋವಿದೈಃ ॥ ೫ ॥

ದೇಶೇ ಬಿಲಸ್ಯ ಚಾಗ್ನೇಯೇ ನಿರ್ಮಾಯ ಸರ ಉತ್ತಮಂ ।
ತೋಯಂ ಸಂಪಾದಯಾಮಾಸ ಯಜ್ಞಾರ್ಥಂ ವಾಮನಸ್ತದಾ ॥ ೬ ॥

ಆಸೀತ್ ಕಾವ್ಯಸ್ತದಾಧ್ವರ್ಯುರ್ಬ್ರಹ್ಮಾ ತತ್ರ ಕಹೋಲಜಃ ।
ಆಸ್ತಾಮುದ್ಗಾತೃಹೋತಾರೌ ಚಂಡೋ ಮತ್ಕಶ್ಚ ಬ್ರಾಹ್ಮಣೌ ॥ ೭ ॥

ಆಸನ್ ಸರ್ವೇ ಕಾಪಿಲೇಯಾ ಬ್ರಾಹ್ಮಣಾ ಹಿ ಸಭಾಸದಃ ।
ವಾಮನೋಽಭೂದುಪದ್ರಷ್ಟಾ ತತ್ರ ಯಜ್ಞೇ ಮಹಾತ್ಮನಃ ॥ ೮ ॥

---

೪. ಶಾಲೆಯ ಮಧ್ಯದಲ್ಲಿ ಬ್ರಾಹ್ಮಣರಿಂದ ಒಂದು ಮಹತ್ತಾದ ಪ್ರಧಾನ ಯೂಪವು ಸ್ಥಾಪಿಸಲ್ಪಟ್ಟಿತ್ತು. ಬಿಲದ ವಾಯುವ್ಯದಿಕ್ಕಿನ ಪಾರ್ಶ್ವದಲ್ಲಿ ವೇದಿಕೆಯು ರಚಿಸಲ್ಪಟ್ಟಿತ್ತು.

೫. ಪೂರ್ವದಲ್ಲಿ ಯಾವ ಭೂಭಾಗದಲ್ಲಿ ಶೇಷನು ತನ್ನ ಶರೀರವನ್ನು ಕೋಷ್ಟಕವನ್ನಾಗಿಮಾಡಿಕೊಂಡಿದ್ದನೋ ಅಲ್ಲಿಯೇ ಕುಶಲರೂ ಯಜ್ಞಾನುಷ್ಠಾನದಲ್ಲಿ ಪ್ರಾಜ್ಞರೂ ಆದ ಋತ್ವಿಜರು ವೇದಿಕೆಯನ್ನು ಮಾಡಿದರು.

೬. ಆಗ ಬಿಲದ ಆಗ್ನೇಯಭಾಗದಲ್ಲಿ ಉತ್ತಮವಾದ ಒಂದು ಸರೋವರವನ್ನು ನಿರ್ಮಾಣಮಾಡಿ ವಾಮನನು ಯಜ್ಞಕ್ಕೋಸ್ಕರ ಜಲವನ್ನು ಸಂಪಾದಿಸಿದನು.

೭. ಆಗ ಶುಕ್ರಾಚಾರ್ಯನು ಆ ಯಜ್ಞದಲ್ಲಿ ಅಧ್ವರ್ಯುಋತ್ವಿಜನಾಗಿದ್ದನು. ಕಹೋಲವಂಶದಲ್ಲಿ ಹುಟ್ಟಿದ ವಿಪ್ರನು ಬ್ರಹ್ಮನಾಗಿಯೂ ಚಂಡನೆಂಬ ವಿಪ್ರನು ಉದ್ಗಾತೃ ಋತ್ವಿಜನೂ ಮತ್ಕನೆಂಬುವನು ಹೋತೃ ಋತ್ವಿಜನೂ ಆಗಿದ್ದರು.

೮. ಕಪಿಲಗೋತ್ರದಲ್ಲಿ ಹುಟ್ಟಿದ ಅನೇಕ ದ್ವಿಜರು ಸಭಾಸದರಾಗಿದ್ದರು. ಮಹಾತ್ಮನಾದ ಬಲಿಯ ಆ ಯಜ್ಞದಲ್ಲಿ ವಾಮನನು ಉಪದ್ರಷ್ಟೃಸ್ಥಾನದಲ್ಲಿದ್ದನು.

ಏವಂ ಪ್ರವರ್ತಿತೇ ಯಜ್ಞೇ ಬಲೇಸ್ತಸ್ಯ ಮಹಾದ್ಭುತೇ ।
ದೇವಾನಾಂ ವಾಸವಾದೀನಾಮಭೂತ್ಕಿಲ ಮಹದ್ಭಯಂ ॥ ೯ ॥

ತತಃ ಸರ್ವಾನ್ ಸುರಾನ್ ವೀಕ್ಷ್ಯ ವಾಸವೋ ವಾಕ್ಯಮಬ್ರವೀತ್ ।
ಅಯಂ ವೈರೋಚನಿರ್ದೇವಾಃ ಕ್ಷೇತ್ರೇ ಸತ್ಯವ್ರತೇಽಧುನಾ ॥ ೧೦ ॥

ಇಷ್ಟ್ವಾ ದೇವಂ ಹರಿಂ ಯಜ್ಞೈರಸ್ಮಾನ್ ಜೇತುಂ ಕಿಲೇಚ್ಛತಿ ।
ಉಪೇಕ್ಷಿತಶ್ಚೇದದ್ಯಾಯಮಸ್ಮಾಭಿಃ ಪೂರ್ವವತ್ಪುನಃ ॥ ೧೧ ॥

ಸ್ವರ್ಗಮಾಕ್ರಮ್ಯ ವೀರ್ಯೇಣ ಸರ್ವಾನ್ನೋ ಬಾಧತೇ ಧ್ರುವಂ ।
ಯಥಾಸ್ಯ ನ ಭವೇದ್ಯಜ್ಞಸ್ತಥಾ ನೀತಿರ್ವಿಧೀಯತಾಂ ॥ ೧೨ ॥

ಭೃಶಂ ತುರಗಯಾತ್ರಾಯಾಮಸ್ಮಾಭಿಃ ಪೀಡಿತೋಽಪ್ಯಯಂ ।
ವಿಧೂಯ ವಿಘ್ನಾನಖಿಲಾನ್ ಯಷ್ಟುಮೇವಾರಭತ್ಕಿಲ ॥ ೧೩ ॥

---

೯. ಆ ಬಲೀಂದ್ರನ ಅದ್ಭುತವನ್ನುಂಟುಮಾಡುವ ಆ ಯಜ್ಞವು ನಡೆಯುತ್ತಿರಲು ಇಂದ್ರ ಮುಂತಾದ ದೇವತೆಗಳಿಗೆ ಮಹಾಭೀತಿಯು ಉಂಟಾಯಿತು.

೧೦. ಆಗ ಇಂದ್ರನು ಸಕಲ ದೇವತೆಗಳನ್ನು ನೋಡಿ ಈ ರೀತಿಯಾಗಿ ಮಾತನಾಡಿದನು, ದೇವತೆಗಳಿರಾ! ಈ ಸತ್ಯವ್ರತಕ್ಷೇತ್ರದಲ್ಲಿ ಬಲಿಯು ನಮ್ಮನ್ನು ಗೆಲ್ಲಲು ಯತ್ನವನ್ನು ಕೈಕೊಂಡಿರುವನು.

೧೧. ಈ ಬಲಿಯು ಯಜ್ಞಾನುಷ್ಠಾನದಿಂದ ವಿಷ್ಣುಪರಮಾತ್ಮನನ್ನು ಪೂಜಿಸಿ ಅವನ ಅನುಗ್ರಹದಿಂದ ನಮ್ಮನ್ನು ಜಯಿಸಲು ಇಚ್ಛಿಸುತ್ತಿರುವನು. ನಾವು ಇದನ್ನು ತಿಳಿದು ಮೊದಲಿನಂತೆ ಈಗಲೂ ಉಪೇಕ್ಷೆ ಮಾಡಲಾಗದು.

೧೨. ಹಾಗೆ ಉಪೇಕ್ಷೆಮಾಡಿದರೆ ಯಜ್ಞಾದಿ ಸುಕೃತ ವೀರ್ಯದಿಂದ ಸ್ವರ್ಗವನ್ನು ಆಕ್ರಮಿಸಿ ನಮ್ಮನ್ನು ಖಂಡಿತವಾಗಿ ಬಾಧಿಸುತ್ತಾನೆ. ಆದುದರಿಂದ ಅವನ ಈ ಯಜ್ಞವು ಪೂರ್ತಿಗೊಳ್ಳದಂತೆ ಯಾವುದಾದರೊಂದು ನೀತಿಯನ್ನು ಅವಲಂಬಿಸಬೇಕು.

೧೩. ಬಲಿಯು ಯಾಗದ ಆರಂಭದಲ್ಲಿ ಅಶ್ವವನ್ನು ಹಿಂಬಾಲಿಸುವ ಪ್ರಸಂಗದಲ್ಲಿ ನಮ್ಮಿಂದ ಪ್ರಬಲವಾಗಿ ಪೀಡಿಸಲ್ಪಟ್ಟರೂ ಸಮಸ್ತ ವಿಘ್ನಗಳನ್ನೂ ನಿವಾರಿಸಿ ಯಾಗಕ್ಕೆ ಪ್ರಾರಂಭಮಾಡಿದನಲ್ಲವೆ.

ಇತಿ ತಸ್ಯ ವಚಃ ಶ್ರುತ್ವಾ ವಾಸವಸ್ಯ ದಿವೌಕಸಃ ।
ತಥೈವೇತಿ ವಿನಿಶ್ಚಿತ್ಯ ಸರ್ವೇ ಯಜ್ಞಜಿಘಾಂಸವಃ ॥ ೧೪ ॥

ಉಪೇತ್ಯ ಕಾಂಚೀಮಭಿತಃ ಪರಿವಾರ್ಯಾಂತರಿಕ್ಷಗಾಃ ।
ತೋಯಂ ಸಂಶೋಷಯಾಂಚಕ್ರುಃ ಶೋಷಣಾಸ್ತ್ರೇಣ ಸರ್ವತಃ ॥

ತದಾ ನಿಸ್ತೋಯಮಭವತ್ಸರ್ವಂ ತತ್ ಕ್ಷೇತ್ರಮಂಡಲಂ ।
ವಾಪೀಕೂಪತಟಾಕಾಶ್ಚ ಹ್ರದಾ ನದ್ಯಶ್ಚ ದೀರ್ಘಿಕಾಃ ॥ ೧೬ ॥

ಕುಲ್ಯಾಪಲ್ವಲಕಾಸಾರಾ ಬಭೂವುರ್ನಿರ್ಜಲಾಸ್ತದಾ ।
ಮೇಘಾನ್ ವಿದ್ರಾವಯಾಮಾಸುರಾಸಾರೋ ನ ಭವೇದ್ಯಥಾ ॥ ೧೭ ॥

ತದಾ ಮಹೇಂದ್ರಕೋಪೇನ ಕಾಂಚ್ಯಾಸೀತ್ತೋಯವರ್ಜಿತಾ ।
ತದಾ ಹಿ ಜಂತವಃ ಸರ್ವೇ ಸತ್ಯವ್ರತನಿವಾಸಿನಃ ॥ ೧೮ ॥

---

೧೪. ನಿಖಿಲದೇವತೆಗಳು ಈ ವಿಧವಾದ ಇಂದ್ರನ ಮಾತನ್ನು ಕೇಳಿ ಹಾಗೇ ಆಗಲೆಂದು ತೀರ್ಮಾನಿಸಿ ಎಲ್ಲರೂ ಯಜ್ಞವನ್ನು ಭಂಗಪಡಿಸುವ ಉದ್ದೇಶವನ್ನು ಹೊಂದಿದರು.

೧೫. ಆಗ ಕಾಂಚೀನಗರದ ಸುತ್ತಲೂ ಆಕಾಶವಲ್ಲಿ ಎಲ್ಲ ದೇವತೆಗಳೂ ಸುತ್ತುವರಿದು ನಿಂತು ಶೋಷಣಾಸ್ತ್ರವನ್ನು ಪ್ರಯೋಗಿಸಿ ಅಲ್ಲಿದ್ದ ಸಕಲ ಜಲಾಶಯಗಳನ್ನೂ ಒಣಗಿಸಿದರು.

೧೬. ಆಗ ಆ ಸತ್ಯವ್ರತಕ್ಷೇತ್ರದ ಸುತ್ತಲೂ ಇದ್ದ ಭೂಮಿಯೆಲ್ಲವೂ ಜಲವ ಹಿತವಾಯಿತು. ಅಲ್ಲಿದ್ದ ಬಾವಿ, ಕೊಳ, ಕೆರೆ, ಮಡು, ನದೀ, ಮುಂತಾದ ಸಕಲ ಜಲಾಶಯಗಳು ಶೋಷಣಾಸ್ತ್ರಮಹಿಮೆಯಿಂದ ಒಣಗಿದವು.

೧೭. ಕಾಲುವೆ, ಚಿಕ್ಕ ಮತ್ತು ದೊಡ್ಡ ಸರೋವರ ಮುಂತಾದುವುಗಳೆಲ್ಲವೂ ಒಣಗಿ ನಿರ್ಜಲವಾದ ಸಮಯದಲ್ಲಿ ದೇವತೆಗಳು ಆಕಸ್ಮಾತ್ತಾಗಿ ಬಂದ ಮೋಡಗಳನ್ನು ಮಳೆ ಬೀಳದಂತೆ ದೂರ ಓಡಿಸಿದರು.

೧೮. ಆಗ ದೇವೇಂದ್ರನ ಕೋಪಕ್ಕೆ ಭಾಗಿಯಾಗಿ ಕಾಂಚೀನಗರವೆಲ್ಲವೂ ಜಲದ ಹಿತವಾಯಿತು. ಆಗ ಆ ಸತ್ಯವ್ರತಕ್ಷೇತ್ರದಲ್ಲಿ ವಾಸಮಾಡಿರುವ ಪ್ರಾಣಿಗಳು ಬಹು ಪೀಡಿತಗಳಾದುವು.

ಭರ್ಜಿತಾ ಇವ ಸಂತಪ್ತಾ ಬಭೂವುಸ್ತೋಯವರ್ಜಿತಾಃ ।
ಯಜಮಾನಂ ಬಲಿಂ ದೃಷ್ಟ್ವಾ ವದಾನ್ಯಮಸುರೋತ್ತಮಂ ॥ ೧೯ ॥

ತದಾ ಸಮೇತ್ಯ ಮನುಜಾಃ ಸತ್ಯವ್ರತನಿವಾಸಿನಃ ।
ಅಭ್ಯಯಾಚಂತ ತೋಯಾನಿ ತೃಷಾರ್ತಾಃ ಸಲಿಲೈಷಿಣಃ ॥ ೨೦ ॥

ತತೋ ದೃಷ್ಟ್ವಾ ಬಲಿಃ ಕಾಂಚೀಂ ಸಂಶೋಷಿತಜಲಾಶಯಾಂ ।
ಕಿಮೇತದಿತಿ ಸಂಭ್ರಾಂತೋ ವಾಮನಂ ವಾಕ್ಯಮಬ್ರವೀತ್ ॥ ೨೧ ॥

ಅಭೂತ್ಕಿಮಿದಮಾಶ್ಚರ್ಯಮತೋಯಂ ಕ್ಷೇತ್ರಮಂಡಲಂ ।
ಕೇನೇದಂ ಭಯಮುತ್ಪನ್ನಂ ಮಮ ಯಜ್ಞಜಿಘಾಂಸುನಾ ॥ ೨೨ ॥

ಜೀವಂತಿ ವಾ ಕಥಂ ದೇವ ಜಂತವೋ ಜೀವನಂ ವಿನಾ ।
ಯಜ್ಞೋಽಯಂ ದೇವದೇವೇಶ ಕಥಂ ಭೂಯಾಜ್ಜಲಂ ವಿನಾ ॥ ೨೩ ॥

---

೧೯. ಮತ್ತು ಆಗ ಪ್ರಾಣಿಗಳು ಹುರಿದುಹಾಕಿದಂತೆ ಬಹು ತಾಪದಿಂದ ಕೂಡಿ ಎಲ್ಲೆಲ್ಲಿಯೂ ಜಲವಿಲ್ಲದೆ ಉದಾರಸ್ವಭಾವವುಳ್ಳವನೂ ದಾನವಶ್ರೇಷ್ಠನೂ ಆದ ಬಲಿಯು ಯಾಗದಲ್ಲಿ ಯಜಮಾನನಾಗಿರುವುದನ್ನು ಕಂಡರು.

೨೦. ಆಗ ಸತ್ಯವ್ರತಕ್ಷೇತ್ರದಲ್ಲಿ ವಾಸಮಾಡಿದ ಮಾನವರೆಲ್ಲರೂ ಒಟ್ಟು ಸೇರಿ ನೀರಡಿಕೆಯಿಂದ ಪೀಡಿತರಾಗಿ ನೀರನ್ನು ಅಪೇಕ್ಷಿಸಿ ಬಲಿಯನ್ನು ಕುರಿತು ಜಲವನ್ನು ಯಾಚಿಸಿದರು.

೨೧. ಅನಂತರದಲ್ಲಿ ಬಲೀಂದ್ರನು ಕಾಂಚೀನಗರದಲ್ಲಿ ಜಲಾಶಯಗಳೆಲ್ಲವೂ ಒಣಗಿರುವುದನ್ನು ಕಂಡು ಇದಕ್ಕೇನು ಕಾರಣವೆಂದು ಬಹು ಚಿಂತೆಯಿಂದ ಗಾಬರಿಗೊಂಡವನಾಗಿ ವಾಮನಮೂರ್ತಿಯನ್ನು ಕುರಿತು ಈ ರೀತಿಯಾಗಿ ನುಡಿದನು.

೨೨. ಈ ಕ್ಷೇತ್ರಭೂಮಿಯೆಲ್ಲವೂ ಜಲವೇ ಇಲ್ಲದಂತೆ ಆಗಿರುವುದು. ಇದೇನು ಆಶ್ಚರ್ಯವಾಯಿತು? ನನ್ನ ಯಜ್ಞವನ್ನು ಭಂಗಪಡಿಸುವ ಉದ್ದೇಶದಿಂದ ಯಾರು ಈ ಭಯವನ್ನು ಉಂಟುಮಾಡಿರುವನು?

೨೩. ಸ್ವಾಮಿಯೇ! ಈ ಪ್ರಾಣಿಗಳೆಲ್ಲವೂ ಜಲವಿಲ್ಲದೆ ಬದುಕುವುದು ಹೇಗೆ? ದೇವತೆಗಳಿಗೆಲ್ಲ ಈಶ್ವರನೆ! ಈ ನನ್ನ ಯಜ್ಞವೂ ಜಲವಿಲ್ಲದೆ ಹೇಗಾಗುವುದು?

ಪ್ರತಿಶ್ರುತ್ಯ ದದಾಮೀತಿ ಸರ್ವೇಷಾಂ ವಾಂಛಿತಾನ್ಯಹಂ ।
ಕಥಮದ್ಯ ಪ್ರದಾಸ್ಯಾಮಿ ತೋಯಂ ಮಾಮಭಿಯಾಚತಾಂ ॥ ೨೪ ॥

ಯದಿ ದಾತುಂ ನ ಶಕ್ನೋಮಿ ತ್ಯಕ್ಷ್ಯಾಮ್ಯೇವಾದ್ಯ ಜೀವಿತಂ ।
ತಸ್ಮಾದಾನಯ ದೇವೇಶ ತೋಯಂ ಮೇ ದಾನಕಾರಣಾತ್ ॥ ೨೫ ॥

ಇತಿ ಸಂಪ್ರಾರ್ಥಿತಸ್ತೇನ ಭಗವಾನ್ ವಾಮನೋ ಹರಿಃ ।
ಇತ್ಯುವಾಚ ಪ್ರಸನ್ನಾತ್ಮಾ ಪಶ್ಯ ತ್ವಂ ಪೂರ್ವತೋ ಬಲೇ ॥ ೨೬ ॥

ಅಯಮಾಯಾತಿ ವೈ ಮೇಘಃ ಸುನೀಲಸ್ತೋಯಪೂರಿತಃ ।
ತಂ ಪ್ರಾರ್ಥಯ ಮಹಾಬಾಹೋ ಸ ತೇ ದದ್ಯಾಜ್ಜಲಂ ಬಹು ॥ ೨೭ ॥

ಇತ್ಯುಕ್ತ್ವಾ ವಾಮನೋ ರಾಜನ್ ಬಲೇಃ ಪ್ರಿಯಚಿಕೀರ್ಷಯಾ ।
ತದಾ ಮೇಘಾಕೃತಿರ್ಭೂತ್ವಾ ಸಮುದ್ರಾಜ್ಜಲಮುದ್ವಹನ್ ॥ ೨೮ ॥

---

೨೪. ನಾನು ಈ ಯಜ್ಞದಲ್ಲಿ ಸಮಸ್ತರಿಗೂ ಇಷ್ಟವಾದ ಫಲಗಳನ್ನು ಎಲ್ಲ ದಾನಮಾಡುತ್ತೇನೆಂದು ಪ್ರತಿಜ್ಞೆಮಾಡಿರುವೆನು. ಈಗ ನೀರನ್ನು ಕೇಳುತ್ತಿರುವವರಿಗೆ ಅದನ್ನು ಎಲ್ಲಿಂದ ಕೊಡಲಿ.

೨೫. ಒಂದು ವೇಳೆ ಪ್ರತಿಜ್ಞೆಮಾಡಿದ್ದನ್ನು ಕೊಡಲಾರದೆ ಹೋದರೆ ಈಗಲೇ ಜೀವಿತವನ್ನು ಕಳೆದುಕೊಳ್ಳುತ್ತೇನೆ. ದೇವಾಧಿಪತಿಯೆ! ಆದುದರಿಂದ ನಾನು ದಾನ ಮಾಡುವುದಕೋಸ್ಕರ ಈಗ ನೀರನ್ನು ತರಿಸು.

೨೬. ಪೂಜ್ಯನಾದ ವಾಮನರೂಪಿಯಾದ ಹರಿಯನ್ನು ಕುರಿತು ಬಲೀಂದ್ರನು ಈ ರೀತಿಯಾಗಿ ಪ್ರಾರ್ಥನೆಮಾಡಲು ಹರಿಯು ಪ್ರಸನ್ನವಾದ ಚಿತ್ತವುಳ್ಳವನಾಗಿ ಬಲಿಯನ್ನು ಕುರಿತು ಬಲಿಯೇ ಪೂರ್ವದಿಕ್ಕಿನಲ್ಲಿ ನೋಡು, ಎಂದು ಹೇಳಿದನು.

೨೭. ಈ ಕಡೆಯಿಂದ ನೀರನ್ನು ಕುಡಿದು ಬಹಳ ಕಪ್ಪುಬಣ್ಣದಿಂದ ಕೂಡಿದ ಮೇಘವು ಬರುತ್ತಲಿದೆ. ಮಹಾಬಾಹು ಪರಾಕ್ರಮಶಾಲಿಯೇ! ಆ ಮೇಘದ ಹತ್ತಿರ ನೀನು ಜಲವನ್ನು ಪ್ರಾರ್ಥಿಸಿದರೆ ಆಗ ಬೇಕಾದಷ್ಟು ಜಲವನ್ನು ಆ ಮೋಡವು ನಿನಗೆ ಕೊಡುವುದು.

೨೮. ವಾಮನಮೂರ್ತಿಯು ಬಲೀಂದ್ರನಿಗೆ ಹಿತವನ್ನುಂಟುಮಾಡಲೋಸ್ಕರ ಈರೀತಿಯಾಗಿ ಹೇಳಿ ಆಗ ತಾನು ಮೇಘದ ಆಕಾರವನ್ನು ಧರಿಸಿ ಸಮೃದ್ಧಿಯಾದ ಜಲವನ್ನು ಸಮುದ್ರದಿಂದ ತಂದನು.

ಸ ವಿದ್ಯುದ್ರೂಪಯಾ ಲಕ್ಷ್ಮ್ಯಾ ಸಹಿತೋಽಂಬುದರೂಪಭೃತ್ ।
ಪೂರ್ವಾರ್ಣವಮುದ್ಭ್ರಾಂತ್ಯ ಸಹಸಾ ಗರ್ಜನ್ ಘೋರಮುಪಾಯಯೌ ॥

ಆಸಾರೈರಂಬುದೋತ್ಸೃಷ್ಟೈರ್ನದ್ಯಃ ಸದ್ಯಃ ಪ್ರಪೂರಿತಾಃ ।
ಜಲಪೂರಿತಕಾಸಾರವಾಪೀಕೂಪಶತಾನ್ವಿತಾ ॥ ೧೦ ॥

ಬಭೂವ ಕಾಂಚೀ ರಾಜೇಂದ್ರ ವಿಷ್ಣುನಾ ಮೇಘರೂಪಿಣಾ ।
ತತಃ ಪ್ರಮುದಿತಾಃ ಸರ್ವೇ ಬಭೂವುರ್ಭುವಿ ಜಂತವಃ ॥ ೧೧ ॥

ಬ್ರಾಹ್ಮಣಾಸ್ತು ವಿಶೇಷೇಣ ಪ್ರಹೃಷ್ಟಾಸ್ತುಷ್ಟುವುರ್ಬಲಿಂ ।
ದಾನವೇಂದ್ರ ಮಹಾಪ್ರಾಜ್ಞ ಧನ್ಯಸ್ತ್ವಂ ನಾತ್ರ ಸಂಶಯಃ ॥ ೧೨ ॥

ಯದಸ್ಮಭ್ಯಂ ತೃಷಾರ್ತೇಭ್ಯಃ ಸರ್ವೇಭ್ಯಸ್ತೋಯಮುದ್ಭುತಂ ।
ದತ್ತಂ ತ್ವಯಾದ್ಯ ಯಜ್ಞೇನ ವೃಷ್ಟಿಮಾನಯತಾದ್ಭುತಾಂ ॥ ೧೩ ॥

---

೯. ಮಿಂಚಿನ ರೂಪವನ್ನು ಧರಿಸಿದ ಲಕ್ಷ್ಮಿಯೊಡನೆ ವಾಮನನು ಮೇಘ ರೂಪವನ್ನು ಧರಿಸಿ ಪೂರ್ವ ಸಮುದ್ರದಿಂದ ಬಲು ಬೇಗ ಘೋರವಾಗಿ ಗರ್ಜನ ಮಾಡುತ್ತಬಂದನು.

೧೦. ಆಗ ಆ ಮೋಡದಿಂದ ಬಿದ್ದ ಜಲಸಂಪಾತಗಳಿಂದ ನದಿಗಳೆಲ್ಲವೂ ಕೂಡಲೆ ತುಂಬಿಹೋದವು. ಹಾಗೆಯೇ ಬಾವಿ-ಕೊಳ-ಕೆರೆ ಮುಂತಾದ ಅನೇಕ ಜಲಾಶಯಗಳು ನೀರಿನಿಂದ ತುಂಬಿದವು.

೧೧. ರಾಜೇಂದ್ರನೆ! ಮೇಘರೂಪಿಯಾದ ವಿಷ್ಣುವಿನಿಂದ ಕಾಂಚೀನಗರದಲ್ಲಿ ಈ ರೀತಿಯಾಗಿ ಜಲಸಮೃದ್ಧಿಯುಂಟಾಗಲು ಭೂಮಿಯಲ್ಲಿ ಸಕಲ ಜಂತುಗಳೂ ಬಹಳ ಸಂತೋಷಪಟ್ಟರು.

೧೨. ವಿಪ್ರರಾದರೋ ವಿಶೇಷವಾಗಿ ಸಂತೋಷಪಟ್ಟವರಾಗಿ ದಾನವೇಂದ್ರನೆ! ಮಹಾಪ್ರಜ್ಞಾಶಾಲಿಯೇ! ನೀನು ಪರಮಧನ್ಯನು. ಈ ವಿಷಯದಲ್ಲಿ ಸಂಶಯವಿಲ್ಲ ಎಂದು ಮೊದಲಾಗಿ ಸ್ತುತಿಸಿದರು.

೧೩. ನೀನು ನೀರಡಿಕೆಯಿಂದ ಬಳಲಿ ಹೋದ ನಮ್ಮೆಲ್ಲರಿಗೆ ಈ ಯಜ್ಞವನ್ನು ಆಚರಿಸಿ ಅದ್ಭುತವಾದ ಮಳೆಯನ್ನು ತಂದು ಅಭೂತಪೂರ್ವವಾದ ಜಲಸಮೃದ್ಧಿಯನ್ನು ದಾನಮಾಡಿರುವುದರಿಂದ ನೀನು ಧನ್ಯನು.

ಇತಿ ಸಂಶ್ಲಾಘಿತೋ ವಿಪ್ರೈರ್ಬಲಿಃ ಸಂಹೃಷ್ಟಮಾನಸಃ ।
ದದರ್ಶ ಮೇಘೇ ಪುರುಷಂ ಮೇಘಾಭಂ ಪೀತವಾಸಸಂ ॥ ೩೪ ॥

ಲಸತ್ಕಿರೀಟಕೇಯೂರಂ ಶಂಖಚಕ್ರಗದಾಧರಂ ।
ದೃಷ್ಟ್ವಾ ಸಂಹೃಷ್ಟಸರ್ವಾಂಗಃ ಪರಿಪಪ್ರಚ್ಛ ವಾಮನಂ ॥ ೩೫ ॥

ಕೋ ಹ್ಯಯಂ ಪುರುಷೋ ಮೇಘೇ ದೃಶ್ಯತೇಽದ್ಭುತದರ್ಶನಃ ।
ಹ್ಲಾದಯನ್ನಿವ ಮೇ ಚೇತಸ್ತಂ ಮಮಾಚಕ್ಷ್ವ ವಾಮನ ॥ ೩೬ ॥

ಬಲೇರ್ವಚನಮಾಕರ್ಣ್ಯ ವಾಮನೋ ವಾಕ್ಯಮಬ್ರವೀತ್ ।
ಯೋಽಸೌ ದೃಷ್ಟಸ್ತ್ವಯಾ ಮೇಘೇ ಪುರುಷಃ ಪುಷ್ಕರೇಕ್ಷಣಃ ॥ ೩೭ ॥

ಸ ಏವ ರಾಜನ್ ಭಗವಾನ್ ವಿಶ್ವಾತ್ಮಾ ವಿಶ್ವಭಾವನಃ ।
ವಿಶ್ವಗರ್ಭೋ ವಿಶ್ವಪರೋ ವಿಶ್ವಸೃಡ್ವಿಶ್ವಭುಗ್ವಿಭುಃ ॥ ೩೮ ॥

---

೩೪. ಈ ರೀತಿಯಾಗಿ ದ್ವಿಜರಿಂದ ಸ್ತುತಿಸಲ್ಪಟ್ಟ ಬಲೀಂದ್ರನು ಬಹಳ ಸಂತೋಷಪಟ್ಟ ಚಿತ್ತವುಳ್ಳವನಾಗಿ ಆ ಮೇಘ ಮಧ್ಯದಲ್ಲಿ ಮೇಘದಂತೆ ನೀಲಕಾಂತಿಯಿಂದ ಕೂಡಿ ಪೀತಾಂಬರವನ್ನು ಉಟ್ಟುಕೊಂಡಿರುವ ಪುರುಷನನ್ನು ನೋಡಿದನು.

೩೫. ಆ ಪುರುಷನು ಪ್ರಕಾಶಿಸುತ್ತಿದ್ದ ಕಿರೀಟ-ಕೇಯೂರಾದಿ ಆಭರಣಗಳನ್ನು ಧರಿಸಿದವನೂ, ಶಂಖ-ಚಕ್ರ-ಗದೆಗಳನ್ನು ಧರಿಸಿದವನೂ ಆಗಿದ್ದನು. ಅಂತಹ ಪುರುಷನನ್ನು ಬಲೀಂದ್ರನು ನೋಡಿ ಸಂತೋಷವುಂಟಾದ ಸಕಲಕರಣಗಳುಳ್ಳವನಾಗಿ ವಾಮನಮೂರ್ತಿಯನ್ನು ಕುರಿತು ಪ್ರಶ್ನೆಮಾಡಿದನು.

೩೬. ವಾಮನದೇವನೆ! ಈ ಮೇಘದಲ್ಲಿ ಅದ್ಭುತವಾದ ದರ್ಶನವುಳ್ಳ ಯಾವನೊ ಒಬ್ಬ ಪುರುಷನು ನನ್ನ ಮನಸ್ಸಿಗೆ ಅತ್ಯಾನಂದವನ್ನು ಉಂಟುಮಾಡುವವನಂತೆ ಕಾಣುತ್ತಲಿರುವನು. ಅವನು ಯಾರು ? ನನಗೆ ಹೇಳು.

೩೭. ಬಲೀಂದ್ರನ ವಚನವನ್ನು ಕೇಳಿ ವಾಮನಮೂರ್ತಿಯು ಈ ರೀತಿಯಾಗಿ ಉತ್ತರವನ್ನು ಹೇಳಿದನು. ರಾಜನೆ! ಮೇಘದ ಮಧ್ಯದಲ್ಲಿ ನೀನು ಪದ್ಮದಂತೆ ಕಣ್ಣುಗಳಿಂದ ರಾಜಿಸುವ ಪುರುಷನನ್ನು ಕಂಡೆಯಷ್ಟೆ.

೩೮. ಅವನೇ ವಿಶ್ವದ ಸ್ವರೂಪವುಳ್ಳವನೂ, ವಿಶ್ವವನ್ನು ಇರಿಸುವವನೂ ವಿಶ್ವವನ್ನು ಗರ್ಭದಲ್ಲಿ ಧರಿಸಿದವನೂ, ವಿಶ್ವಕ್ಕಿಂತ ಪರಮವಸ್ತುವೂ, ವಿಶ್ವವನ್ನು ಸೃಷ್ಟಿಸುವವನೂ, ವಿಶ್ವವನ್ನು ಪಾಲಿಸುವವನೂ, ಮತ್ತು ವ್ಯಾಪಕನೂ ಆದ ವಿಷ್ಣು ಭಗವಂತನು ಆಗಿರುವನು.

ಸರ್ವಯಜ್ಞಭುಗವ್ಯಕ್ತೋ ಯಜ್ಞಾಂಗೋ ಯಜ್ಞಭಾವನಃ ।
ಯಜ್ಞೇನ ಯಜಮಾನಂ ತ್ವಾಮಿಷ್ಟ ಗೋಪ್ತುಮುಪಾಗತಃ ॥ ೩೯ ॥

ದೇವಾನ್ ಮಖಘ್ನಾನುದ್ವೀಕ್ಷ್ಯ ಜಂತೂಂಶ್ಚಾರ್ತಾನ್ ಜಲೈಷಿಣಃ ।
ಸ್ವಯಮೇವಾಂಬುದೋ ಭೂತ್ವಾ ಪ್ರವವರ್ಷ ಕಿಲೋದಕಂ ॥ ೪೦ ॥

ಕೇವಲಂ ತ್ವದ್ಧಿತಾರ್ಥಾಯ ಪ್ರಾದುರಾಸೀದಿಹಾಚ್ಯುತಃ ।
ತಥಾಪಿ ಸರ್ವಜಂತೂನಾಂ ಸತತಂ ಸರ್ವಕಾಮದಃ ॥ ೪೧ ॥

ಸ್ಥಾಸ್ಯತ್ಯತ್ರೈವ ದೇವೇಶಸ್ತವ ಪ್ರಿಯಚಿಕೀರ್ಷಯಾ ।
ತಸ್ಮಾತ್ತ್ವಂ ಸಂಪ್ರಣಮ್ಯೈನಂ ಮಖಮಾರಬ್ಧುಮರ್ಹಸಿ ॥ ೪೨ ॥

ಇತಿ ತದ್ವಚನಂ ಶ್ರುತ್ವಾ ಬಲಿಃ ಪರಮಹೃಷ್ಟಧೀಃ ।
ಪ್ರಣಮ್ಯ ಪೂಜಯಾಮಾಸ ಮೇಘರೂಪಿಣಮಚ್ಯುತಂ ॥ ೪೩ ॥

---

೩೯. ಮತ್ತು ಸಕಲ ಯಜ್ಞದ ಹವಿರ್ಭಾಗವನ್ನು ಭುಂಜಿಸುವವನೂ, ಅತೀಂದ್ರಿಯನೂ, ಯಜ್ಞಾಂಗಗಳ ಸ್ವರೂಪವುಳ್ಳವನೂ, ಯಜ್ಞವನ್ನು ನೇರವೇರಿಸುವವನೂ ಆದ ಪರಮಾತ್ಮನು ನಿನ್ನ ಯಜ್ಞದಿಂದ ಪ್ರೀತನಾಗಿ ನಿನ್ನನ್ನು ರಕ್ಷಿಸಲು ಇಲ್ಲಿಗೆ ಬಂದಿರುವನು.

೪೦. ದೇವತೆಗಳು ನಿನ್ನ ಯಜ್ಞಕ್ಕೆ ಭಂಗವುಂಟುಮಾಡುತ್ತಲಿರುವುದನ್ನೂ ಮತ್ತು ಜಂತುಗಳು ನೀರಿಲ್ಲದೆ ಬಲು ಪೀಡಿತರಾಗಿರುವುದನ್ನೂ ನೋಡಿ ತಾನು ಮೇಘದ ರೂಪದಿಂದ ಬಂದು ಯಥೇಷ್ಟವಾಗಿ ಜಲ ವೃಷ್ಟಿಯನ್ನು ಸುರಿಸಿರುವನು.

೪೧. ಪರಮಾತ್ಮನು ಇಲ್ಲಿ ನಿನ್ನನ್ನು ತೃಪ್ತಿಪಡಿಸಲೋಸ್ಕರ ನಿನಗೆ ಮಾತ್ರ ಹಿತವನ್ನು ಉಂಟುಮಾಡಲು ಇಲ್ಲಿ ಆವಿರ್ಭವಿಸಿರುವನು. ಆದರೂ ಸಕಲ ಜಂತುಗಳಿಗೆ ಯಾವಾಗಲೂ ಸರ್ವ ಇಷ್ಟಾರ್ಥಗಳನ್ನು ಅನುಗ್ರಹಿಸಿರುವನು.

೪೨. ದೇವತೆಗಳ ಈಶ್ವರನಾದ ಸ್ವಾಮಿಯು ನಿನಗೆ ಪ್ರೀತಿಯನ್ನು ಕೊಡುವ ನಿಮಿತ್ತದಿಂದ ಇಲ್ಲಿಯೇ ಇರುವನು. ಆದುದರಿಂದ ಈಗ ನೀನು ಸ್ವಾಮಿಯನ್ನು ನಮಸ್ಕರಿಸಿ ಯಜ್ಞಕರ್ಮವನ್ನು ಮತ್ತೆ ಆರಂಭಿಸಲು ಅರ್ಹನಾಗಿದ್ದೀ.

೪೩. ಹೀಗೆಂಬುದಾಗಿ ಹೇಳಿದ ವಾಮನದೇವನ ಮಾತನ್ನು ಬಲೀಂದ್ರನು ಶ್ರವಣಮಾಡಿ ಪರಮಾನಂದ ಮಗ್ನವಾದ ಬುದ್ಧಿಯುಳ್ಳವನಾಗಿ ಮೇಘರೂಪಿಯಾದ ವಿಷ್ಣುವನ್ನು ನಮಸ್ಕರಿಸಿ ಪೂಜಿಸಿದನು.

ಮೇಘರೂಪೋ ಹರಿಶ್ಚಾಪಿ ದತ್ವಾ ತೋಯಂ ಬಲೇರ್ಮಖೇ ।
ತತ್ರೈವಾವಸದಾಗ್ನೇಯೇ ದೇಶೇ ಶೇಷಬಿಲಸ್ಯ ತು ॥ ೪೪ ॥

ತತೋ ಬಲಿಃ ಪ್ರಹೃಷ್ಟಾತ್ಮಾ ಸಹ ಸರ್ವೈರ್ದ್ವಿಜೋತ್ತಮೈಃ ।
ಯಷ್ಟುಮಾರಬ್ಧವಾನ್ ಯಜ್ಞಂ ವಾಮನೇನ ಸಮನ್ವಿತಃ ॥ ೪೫ ॥

ಏವಂ ಕಾಂಚ್ಯಾಮಭೂದ್ರಾಜನ್ ಮೇಘಾಕಾರೋ ಹರಿಃ ಪುರಾ ।
ತದ್ದರ್ಶನಂ ಭವೇನ್ನೄಣಾಂ ಭುಕ್ತಿಮುಕ್ತಿಪ್ರದಾಯಕಂ ॥ ೪೬ ॥

ತತಃ ಪ್ರವವೃಧೇ ಯಜ್ಞೋ ಬಲೇಸ್ತಸ್ಯ ಮಹಾತ್ಮನಃ ।
ಬಹ್ವಾಶ್ಚರ್ಯಕರೋ ಲೋಕೇ ಬಹ್ವನ್ನಧನಧಾನ್ಯವಾನ್ ॥ ೪೭ ॥

ಬಹುಧೇನುಪ್ರದಾನಾಢ್ಯೋ ಬಹುಪುಣ್ಯಪ್ರದೋ ನೃಣಾಂ ।
ಭುಂಜತೇ ರುಕ್ಮಪಾತ್ರೇಷು ಬ್ರಾಹ್ಮಣಾಃ ಸತತಂ ನೃಪ ॥ ೪೮ ॥

---

೪೪. ಮೇಘಾಕಾರವನ್ನು ಧರಿಸಿದ ಹರಿಯು ಬಲಿಯ ಯಜ್ಞ ಸಮಾರಂಭದಲ್ಲಿ ಜಲವನ್ನು ಸಮೃದ್ಧಿಯಾಗಿ ಕೊಟ್ಟು ಅಲ್ಲಿಯೇ ಶೇಷಬಿಲದ ಆಗ್ನೇಯ ದಿಕ್ಕಿನ ಭಾಗದಲ್ಲಿ ವಾಸಮಾಡಿದನು.

೪೫. ತರುವಾಯ ಬಲಿಚಕ್ರವರ್ತಿಯು ಸಂತುಷ್ಟವಾದ ಅಂತಃಕರಣವುಳ್ಳವನಾಗಿ ಸಕಲ ದ್ವಿಜೋತ್ತಮರಿಂದಲೂ ವಾಮನಮೂರ್ತಿಯಿಂದಲೂ ಕೂಡಿ ಯಾಗವನ್ನು ಮಾಡಲಾರಂಭಿಸಿದನು.

೪೬. ರಾಜನೆ! ಪೂರ್ವಕಾಲದಲ್ಲಿ ಇಂತಹ ನಿಮಿತ್ತದಿಂದ ಹರಿಯು ಕಾಂಚೀ ನಗರದಲ್ಲಿ ಮೇಘಾಕಾರವನ್ನು ಧರಿಸಿದನು. ಆ ಮೇಘಾಕಾರದ ಹರಿಯ ದರ್ಶನವು ಜನಗಳಿಗೆ ಅನೇಕ ಭೋಗಮೋಕ್ಷಗಳೆಂಬ ಪುರುಷಾರ್ಥಗಳನ್ನು ಉಂಟು ಮಾಡುವುದು

೪೭. ಅನಂತರದಲ್ಲಿ ಲೋಕದಲ್ಲಿ ಬಹು ಆಶ್ಚರ್ಯವನ್ನು ಉಂಟುಮಾಡುವುದೂ, ಬಹುಳವಾದ ಅನ್ನ-ಧನ-ಧಾನ್ಯ ವಿತರಣೆಯಿಂದ ಕೂಡಿದರುವುದೂ ಅದ ಆ ಮಹಾತ್ಮನಾದ ಬಲೀಂದ್ರನ ಯಜ್ಞವು ಬಹು ವೈಭವದಿಂದ ಬೆಳೆಯಿತು.

೪೮. ರಾಜನೆ! ಯಜ್ಞವು ಅನೇಕ ಗೋದಾನಗಳಿಂದ ಕೂಡಿರುವುದೂ, ಮತ್ತು ಮಾನವರಿಗೆ ಪುಣ್ಯಪುಂಜವನ್ನು ಕೊಡುವುದೂ ಆಗಿತ್ತು. ಈ ಯಜ್ಞ ಸಮಾರಂಭದಲ್ಲಿ ಬ್ರಾಹ್ಮಣರು ಯಾವಾಗಲೂ ಸುವರ್ಣಪಾತ್ರಗಳಲ್ಲಿ ಊಟ ಮಾಡುತ್ತಲಿದ್ದರು.

ಯಂ ಯಂ ಕಾಮಯತೇ ಕಾಮಂ ತಂ ತಮಾಪ್ನೋತಿ ಬ್ರಾಹ್ಮಣಃ ।
ತತ್ರ ಯಜ್ಞೇ ಮಹಾಪುಣ್ಯೇ ಬಹ್ವನ್ನೇ ಭೂರಿದಕ್ಷಿಣೇ ॥ ೪೯ ॥

ಸರ್ವೇ ಕರ್ಮಾಣಿ ಕುರ್ವಂತಿ ಯಾಜಕಾ ಯಜ್ಞಸಂಸದಿ ।
ಪ್ರವರ್ಗ್ಯಂ ಶಾಸ್ತ್ರತಶ್ಚಕ್ರುಸ್ತಥೈವೋಪಸದಂ ದ್ವಿಜಾಃ ॥ ೫೦ ॥

ಗಾರುಡಂ ಚಯನಂ ಚಾಪಿ ಚಕ್ರುಃ ಸರ್ವೇ ದ್ವಿಜರ್ಷಭಾಃ ।
ಯೂಪೇಷು ಪಶವೋ ಬದ್ಧಾಃ ಸಂಸ್ಕೃತಾಶ್ಚ ಸ್ವಲಂಕೃತಾಃ ॥ ೫೧ ॥

ಶ್ರಪಯಂತಿ ಸ್ಮ ತಾನ್ ಸರ್ವಾನ್ ಪ್ರಜುಹ್ವತ್ಯನಲೇ ಶುಚೌ ।
ಹೂಯಮಾನೇಷು ಪಶುಷು ತತ್ತದುದ್ದಿಶ್ಯ ದೈವತಂ ॥ ೫೨ ॥

ಯಜಮಾನಃ ಸಮುತ್ಸೃಜ್ಯ ಸರ್ವಾನ್ ದೇವಗಣಾನ್ಮಖೇ ।
ನ್ಯವೇದಯದ್ಧರೇರೇವ ಸರ್ವಾಶ್ಚೈವಾಹುತೀರ್ಬಲಿಃ ॥ ೫೩ ॥

---

೪೯. ಬಹು ಅನ್ನದಾನ-ದಕ್ಷಿಣಾದಾನಗಳಿಂದ ವಿಜೃಂಭಣೆಯಾಗಿ ನಡೆಯುತ್ತಲಿದ್ದ ಮತ್ತು ಮಹಾಪುಣ್ಯಸಾಧನವಾದ ಆ ಯಜ್ಞದಲ್ಲಿ ಪ್ರತಿಯೊಬ್ಬ ಬ್ರಾಹ್ಮಣನು ತನಗೆ ಬೇಕು, ಬೇಕೆಂದು ಭಾವಿಸಿದ ಕಾಮಗಳನ್ನು ಹೊಂದುತ್ತಲಿದ್ದನು.

೫೦. ಯಜ್ಞ ಸಭೆಯಲ್ಲಿ ಸೇರಿದ ಪ್ರತಿಯೊಬ್ಬ ಯಾಜಕರು ವಿಧಾನಪೂರ್ವಕವಾಗಿ ಸಕಲ ಯಜ್ಞಾಂಗ ಕರ್ಮಗಳನ್ನು ಆಚರಿಸುತ್ತಲಿದ್ದರು. ವಿಪ್ರರು ಪ್ರವರ್ಗ್ಯವೆಂಬ ಒಂದು ಅಂಗಕರ್ಮವನ್ನು ಆಚರಿಸಿದರು. ಹಾಗು ಉಪಸತ್ತು ಎಂಬುದನ್ನು ಆಚರಿಸಿದರು.

೫೧. ಯಜ್ಞಶಾಲೆಯಲ್ಲಿ ಋತ್ವಿಜರಾಗಿದ್ದ ವಿಪ್ರಶ್ರೇಷ್ಠರು ಗರುಡ ಚಯನವನ್ನು ಆಚರಿಸಿದರು. ಮತ್ತು ಯೂಪಸ್ತಂಭದಲ್ಲಿ ಉಪಾಕರಣ ಮುಂತಾದ ಪಶುಸಂಸ್ಕಾರಗಳಿಂದ ಸಂಸ್ಕಾರಮಾಡಲ್ಪಟ್ಟಿಶುವ ಹಾಗು ಅಲಂಕರಿಸಲ್ಪಟ್ಟಿರುವ ಪಶುಗಳು ಕಟ್ಟಲ್ಪಟ್ಟಿದ್ದವು.

೫೨. ಮತ್ತು ಆ ಪಶುಗಳ ಹವಿಸ್ಸನ್ನು ಪಚನಮಾಡುತ್ತಲಿದ್ದರು. ಮತ್ತು ವಿಧಿಯನ್ನನುಸರಿಸಿ ಆಯಾಯ ದೇವತೆಯನ್ನು ಉದ್ದೇಶಮಾಡಿ ಆ ಪಶುಗಳನ್ನು ಪವಿತ್ರವಾದ ಹೋಮಾಗ್ನಿಯಲ್ಲಿ ಹೋಮಮಾಡುತ್ತಲಿದ್ದರು.

೫೩. ಆಗ ಯಜಮಾನನಾದ ಬಲಿಯು ಯಜ್ಞದಲ್ಲಿ ಇತರ ಸರ್ವ ದೇವತಾಗಣವನ್ನು ಬಿಟ್ಟು ಎಲ್ಲ ಆಹುತಿಗಳನ್ನು ಹರಿಪ್ರೀತಿಗೋಸ್ಕರ ನಿವೇದನಮಾಡಿದನು.

ತದರ್ಪಿತಂ ಹವಿಸ್ಸರ್ವಂ ಭಕ್ತಿಪೂತಂ ತು ವಾಮನಃ ।
ಸ್ವಯಮೇವಾಗ್ನಿಮಧ್ಯಸ್ಥೋ ಜಗ್ರಾಹ ಚ ತದಾ ಮುದಾ ॥ ೫೪ ॥

ಶಾಮಿತ್ರೇ ತು ತತಃ ಸರ್ವೇ ವಿಶಸ್ಯ ತುರಗೋತ್ತಮಂ ।
ವಪಾಂ ಸಂಗೃಹ್ಯ ವಿಧಿವತ್ ಸಮ್ಯಕ್ ಸಂಸ್ಕೃತ್ಯ ಮಂತ್ರತಃ ॥ ೫೫ ॥

ಜುಹವಾಂಚಕ್ರಿರೇ ವಹ್ನೌ ವಪಾಂ ತಾಂ ಪರಮರ್ಷಯಃ ।
ತಾಂ ವಪಾಂ ವಿಷ್ಣವ ಇತಿ ಯಜಮಾನೋ ಬಲಿಸ್ತದಾ ॥ ೫೬ ॥

ತಸ್ಮೈ ನಿವೇದಯಾಮಾಸ ದೇವಾಯ ಪರಮಾತ್ಮನೇ ।
ತತೋ ಹಯಸ್ಯ ಚಾಂಗಾನಿ ಹುತ್ವಾ ಸರ್ವಾಣಿ ಶಾಸ್ತ್ರವತ್ ॥ ೫೭ ॥

ಋತ್ವಿಗ್ಭ್ಯೋ ದಕ್ಷಿಣಾಂ ಪ್ರಾದಾದ್ರತ್ನಾನಿ ಚ ವಸೂನಿ ಚ ।
ಬ್ರಾಹ್ಮಣೇಭ್ಯಶ್ಚ ಸರ್ವೇಭ್ಯೋ ದದೌ ಬಹುಧನಂ ನೃಪ ॥ ೫೮ ॥

---

೫೪. ಆಗ ವಾಮನಮೂರ್ತಿಯು ಅವನಿಂದ ಅರ್ಪಿಸಲ್ಪಟ್ಟ ಭಕ್ತಿಯಿಂದ ಪವಿತ್ರವಾದ ಎಲ್ಲ ಹವಿಸ್ಸುಗಳನ್ನು ಅಗ್ನಿಮಧ್ಯದಲ್ಲಿ ತಾನೇ ಇದ್ದು ಸಂತೋಷದಿಂದ ಪ್ರತಿಗ್ರಹಿಸಿದನು.

೫೫. ಶಮಿತೃ ಎಂಬ ಋತ್ವಿಜನ ಪಶುಮಾರಣವೆಂಬ ಕರ್ಮದಲ್ಲಿ ನಿಯುತರಾದವರೆಲ್ಲರೂ ಉತ್ತಮವಾದ ಅಶ್ವವನ್ನು ಸೀಳಿ ವಿಧಿವತ್ತಾಗಿ ಅದರ ವಪೆಯನ್ನು ಸಂಗ್ರಹಿಸಿ ಮಂತ್ರಪಾಠಪೂರ್ವಕವಾಗಿ ಅದನ್ನು ಚನ್ನಾಗಿ ಸಂಸ್ಕರಿಸಿದರು.

೫೬. ಮಹರ್ಷಿಗಳು ಸಂಸ್ಕೃತವಾದ ಆ ವಪೆಯನ್ನು ಅಗ್ನಿಯಲ್ಲಿ ಹೋಮಮಾಡಿದರು. ಆಗ ಯಜಮಾನನಾದ ಬಲಿಯು ಆ ವಪೆಯನ್ನು ವಿಷ್ಣು ಪ್ರೀತಿಯಾಗಲೆಂದು ವಿಷ್ಣುವನ್ನು ಉದ್ದೇಶಿಸಿ ತ್ಯಾಗಮಾಡಿದನು.

೫೭. ಹೀಗೆ ಬಲಿಯು ಪರಮಾತ್ಮನಾದ ವಿಷ್ಣುವಿಗೆ ಸರ್ವ ಹವಿಸ್ಸುಗಳನ್ನು ನಿವೇದನಮಾಡಿದನು. ಅನಂತರದಲ್ಲಿ ಅಶ್ವದ ಇತರಾಂಗಗಳನ್ನು ಶಾಸ್ತ್ರಾನುಸಾರವಾಗಿ ಅಗ್ನಿಯಲ್ಲಿ ಹೋಮಮಾಡಿದರು.

೫೮. ರಾಜನೆ! ಹೀಗೆ ಕರ್ಮವನ್ನು ಸಮಾಪ್ತಿಗೊಳಿಸಿ ಋತ್ವಿಜರಿಗೆ ಮತ್ತು ಸಮಸ್ತ ಬ್ರಾಹ್ಮಣರಿಗೆ ವಿವಿಧರತ್ನಗಳನ್ನೂ ಐಶ್ವರ್ಯವನ್ನೂ ದಕ್ಷಿಣೆಯನ್ನಾಗಿ ಕೊಟ್ಟನು. ಆಗ ಬಹು ಧನವನ್ನು ವಿತರಣೆಮಾಡಿದನು.

ತತಃ ಸಮಾಪ್ಯ ತಂ ಯಜ್ಞಂ ಕೃತ್ವಾವಭೃಥಮಜ್ಜನಂ ।
ಸಮಾಪ್ಯ ದೀಕ್ಷಾನಿಯಮಂ ವವಂದೇ ವಾಮನಂ ಬಲಿಃ ॥ ೫೯ ॥

ತಂ ವಂದಮಾನಮುದ್ವೀಕ್ಷ್ಯ ಪ್ರಾಪ್ತಯಜ್ಞಫಲಂ ಬಲಿಂ ।
ವಾಮನಃ ಪರಯಾ ಪ್ರೀತ್ಯಾ ಸ್ಮಯಮಾನೋಽಬ್ರವೀದಿದಂ ॥ ೬೦ ॥

ದಾನವೇಂದ್ರ ಮಹಾಭಾಗ ಧನ್ಯೋಽಸಿ ತ್ವಂ ನ ಸಂಶಯಃ ।
ಯಸ್ಮಾಮಿಹಾಶ್ವಮೇಧೇನ ಸಮ್ಯಗಿಷ್ಟ್ವಾಭ್ಯನಂದಯಃ ॥ ೬೧ ॥

ತಸ್ಮಾತ್ತೇಽಹಂ ಕರಿಷ್ಯಾಮಿ ಸರ್ವಾನ್ ಕಾಮಾನ್ ಮನೋಗತಾನ್ ।
ಮಮ ತ್ರೈವಿಕ್ರಮಂ ರೂಪಂ ಯತ್ತ್ವಯಾ ದ್ರಷ್ಟುಮಿಪ್ಸಿತಂ ॥ ೬೨ ॥

ತತ್ಪಶ್ಯತು ಭವಾನದ್ಯ ಸಮ್ಯಕ್ ಸಂಹೃಷ್ಟಚೇತಸಾ ।
ಇತ್ಯುಕ್ತವತಿ ದೇವೇಶೇ ವಾಮನೇ ತತ್ಕ್ಷಣಾನ್ನೃಪ ॥ ೬೩ ॥

೫೯. ಅನಂತರದಲ್ಲಿ ಬಲೀಂದ್ರನು ಆ ಯಜ್ಞವನ್ನು ಪೂರ್ತಿಗೊಳಿಸಿ ಅವಭೃಥಸ್ನಾನವನ್ನು ಮಾಡಿ ಕೈಗೊಂಡಿರುವ ದೀಕ್ಷಾನಿಯಮವನ್ನು ಸಮಾಪ್ತಿಗೊಳಿಸಿ ವಾಮನಮೂರ್ತಿಯನ್ನು ನಮಸ್ಕಾರಮಾಡಿದನು.

೬೦. ಹೀಗೆ ನಮಸ್ಕರಿಸುತ್ತಲಿರುವ ಮತ್ತು ವಿಧಿವತ್ತಾಗಿ ಮಾಡಿರುವ ಯಜ್ಞದ ಫಲಕ್ಕೆ ಭಾಗಿಯಾದ ಬಲೀಂದ್ರನನ್ನು ನೋಡಿ ವಾಮನನು ಅತಿಶಯವಾದ ಪ್ರೀತಿಯಿಂದ ನಗುನಗುತ್ತ ಈ ರೀತಿಯಾಗಿ ಹೇಳಿದನು.

೬೧. ಮಹಾಭಾಗ್ಯಶಾಲಿಯಾದ ದಾನವೇಂದ್ರನೆ! ನೀನು ಈ ಕ್ಷೇತ್ರದಲ್ಲಿ ಅಶ್ವಮೇಧಯಾಗವನ್ನು ಚನ್ನಾಗಿ ಆಚರಿಸಿ ನನ್ನನ್ನು ತೃಪ್ತಿಪಡಿಸಿರುವುದರಿಂದ ನೀನೇ ಧನ್ಯನಾಗಿರುವೆ, ಇದರಲ್ಲಿ ಸಂಶಯವಿಲ್ಲ.

೬೨. ಆದುದರಿಂದ ನಿನ್ನ ಹೃದಯದಲ್ಲಿರುವ ಸಕಲ ಕಾಮನೆಗಳನ್ನೂ ಪೂರ್ತಿಗೊಳಿಸುತ್ತೇನೆ. ನೀನು ನನ್ನ ತ್ರಿವಿಕ್ರಮರೂಪವನ್ನು ನೋಡಲು ಬಹಳವಾಗಿ ಕುತೂಹಲಿಯಾಗಿರುವೆಯಲ್ಲವೆ.

೬೩. ರಾಜನೆ! ನೀನು ಈಗ ಬಹು ಸಂತುಷ್ಟಚಿತ್ತನಾಗಿ ನಿನ್ನ ಇಷ್ಟವಾದ ಆ ತ್ರಿವಿಕ್ರಮರೂಪವನ್ನು ನೋಡು, ಹೀಗೆಂದು ದೇವತೆಗಳ ಅಧಿಪತಿಯಾದ ವಾಮನನು ನುಡಿದನು.

ಸಹಸ್ರಾದಿತ್ಯಸಂಕಾಶಂ ದದೃಶೇ ಜ್ಯೋತಿರಂಬರೇ ।
ತಸ್ಮಿನ್ ಜ್ಯೋತಿಷಿ ರಾಜೇಂದ್ರ ಪ್ರಾದುರಾಸೀನ್ಮಹೋನ್ನತಂ ॥ ೬೪ ॥

ವಿಮಾನಂ ಪುಷ್ಪಕಂ ನಾಮ ದಿವ್ಯಪುಷ್ಪ ಸುಗಂಧವತ್ ।
ತಸ್ಮಿನ್ನಾವಿರಭೂದ್ದೇವೋ ಹರಿಸ್ತ್ರೈವಿಕ್ರಮಾಕೃತಿಃ ॥ ೬೫ ॥

ತಿಷ್ಠನ್ನೇಕೇನ ಪಾದೇನ ವಸುಧಾಮಾಕ್ರಮನ್ನಿವ ।
ದ್ವಿತೀಯೇನೋದ್ಧೃತೇನೋರ್ಧ್ವಂ ಪದಾ ದ್ಯಾಮಾಕ್ರಮನ್ನಿವ ॥ ೬೬ ॥

ಪ್ರಸಾರ್ಯ ಬಾಹೂ ವಿಪುಲೌ ಸವ್ಯಗುತ್ತರದಕ್ಷಿಣೌ ।
ಪೀತಾಂಬರಧರಃ ಸ್ರಗ್ವೀ ವನಮಾಲಾವಿಭೂಷಿತಃ ॥ ೬೭ ॥

ಕಿರೀಟಕೇಯೂರಧರಃ ಸ್ಫುರನ್ಮಕರಕುಂಡಲಃ ।
ಶ್ರೀವತ್ಸಕೌಸ್ತುಭಧರೋ ನೀಲನೀರದಸನ್ನಿಭಃ ॥ ೬೮ ॥

---

೬೪. ರಾಜನೆ! ಆ ನಿಮಿಷದಲ್ಲಿ ಆಕಾಶದಲ್ಲಿ ಸಹಸ್ರ ಆದಿತ್ಯಬಿಂಬಗಳಂತೆ ಜಾಜ್ವಲ್ಯಮಾನವಾದ ಒಂದು ತೇಜಃಪುಂಜವು ಕಾಣಿಸಿತು. ರಾಜೇಂದ್ರನೆ! ಆ ಜ್ಯೋತಿರ್ಮಂಡಲದಲ್ಲಿ ಒಂದು ಬಹಳವಾಗಿ ಉನ್ನತವಾದ ವಿಮಾನವು ಪ್ರಾದುರ್ಭವಿಸಿತು.

೬೫. ದಿವ್ಯವಾದ ಪುಷ್ಪಗಂಧಾದಿಗಳಿಂದ ಸಂಸ್ಕರಿಸಲ್ಪಟ್ಟಿರುವ ಪುಷ್ಪಕವೆಂಬ ಆ ವಿಮಾನದಲ್ಲಿ ತ್ರಿವಿಕ್ರಮಾವತಾರಿಯಾದ ಹರಿ ಪರಮಾತ್ಮನು ಆವಿರ್ಭವಿಸಿದನು.

೬೬. ಆ ತ್ರಿವಿಕ್ರಮಮೂರ್ತಿಯು ಒಂದು ಪಾದದಿಂದ ಸಮಸ್ತ ಭೂಮಂಡಲ ವನ್ನು ಆಕ್ರಮಿಸುತ್ತಿರುವವನಂತೆಯೂ, ಮೇಲಕ್ಕೆ ಎತ್ತಿರುವ ದ್ವಿತೀಯಪಾದದಿಂದ ಸಂಪೂರ್ಣ ಗಗನಮಂಡಲವನ್ನು ಆಕ್ರಮಿಸುತ್ತಿರುವಂತೆಯೂ ನಿಂತುಕೊಂಡಿದ್ದನು.

೬೭. ಮತ್ತು ತನ್ನ ಎಡಬಲಗಳ ಬಾಹುಗಳನ್ನು ದಿಗಂತವನ್ನು ವ್ಯಾಪಿಸು ವಂತೆ ಚಾಚಿಕೊಂಡಿದ್ದನು. ಪಿತಾಂಬರ, ಪುಷ್ಪಮಾಲಿಕೆ, ಮತ್ತು ವನಮಾಲಾ ಮುಂತಾದ ಭೂಷಣಗಳಿಂದ ಅಲಂಕರಿಸಲ್ಪಟ್ಟಿದ್ದನು.

೬೮. ಕಿರೀಟ-ಭುಜಕೀರ್ತಿ-ಮತ್ತು ಪ್ರಕಾಶಿಸುತ್ತಿರುವ ಮಕರದ ಆಕಾರದಿಂದ ಅಂಕಿತವಾದ ಕುಂಡಲಗಳು, ಶ್ರೀವತ್ಸ, ಕೌಸ್ತುಭ ಮುಂತಾದ ಆಭರಣಗಳನ್ನು ಧರಿಸಿ ದವನೂ, ಕಪ್ಪಾದ ಮೇಘದಂತೆ ಕಾಂತಿಯುಳ್ಳವನೂ ಆಗಿದ್ದನು.

ವಿಮಾನೇ ದದೃಶೇ ತಿಷ್ಠನ್ ದ್ಯಾಂ ಗಾಂ ಚೈವಾಕ್ರಮನ್ನಿವ ।
ತದಾ ದೇವರ್ಷಿಗಂಧರ್ವಾಃ ಸಿದ್ಧವಿದ್ಯಾಧರೋರಗಾಃ ॥ ೬೯ ॥

ತದದ್ಭುತಂ ಹರೇರ್ದೃಷ್ಟ್ವಾ ರೂಪಂ ತ್ರೈವಿಕ್ರಮಂ ಮಹತ್ ।
ಅದೃಷ್ಟಪೂರ್ವಮಸ್ಮಾಭಿರಿತಿ ಸಂಪ್ರಹೃಷ್ಟಮಾನಸಾಃ ೭೦ ॥

ಸೃಜಂತಃ ಪುಷ್ಪವರ್ಷಾಣಿ ತುಷ್ಟುವುರ್ವಿವಿಧೈಃ ಸ್ತವೈಃ ।
ಬಲಿರ್ವೈರೋಚನಿಶ್ಚಾಪಿ ದೃಷ್ಟ್ವಾ ದೇವಂ ತ್ರಿವಿಕ್ರಮಂ ॥ ೭೧ ॥

ತೀರೇ ವಾಮನತೀರ್ಥಸ್ಯ ಪಶ್ಚಿಮೇ ಪರಮಾದ್ಭುತೇ ।
ವಿಮಾನೇ ಪುಷ್ಕರೇ ದಿವ್ಯೇ ತಿಷ್ಠಂತಮಚಲೋಪಮಂ ॥ ೭೨ ॥

ಪಶ್ಚಿಮಾಭಿಮುಖಂ ಶಾಂತಂ ಪ್ರಣಮ್ಯ ಪುರತಃಸ್ಥಿತಂ ।
ಬದ್ಧಾಂಜಲಿಪುಟೋ ರಾಜಾ ತುಷ್ಟಾವ ಪರಯಾ ಮುದಾ ॥ ೭೩ ॥

---

೬೯. ತ್ರಿವಿಕ್ರಮಮೂರ್ತಿಯು ಆಗ ದೇವ, ಋಷಿ, ಗಂಧರ್ವ, ಸಿದ್ಧ, ಚಾರಣ, ವಿದ್ಯಾಧರ, ಮತ್ತು ಸರ್ಪ ಮುಂತಾದವರಿಗೆ ಅದ್ಭುತವಾದ ರೂಪದಿಂದ ದ್ಯಾವಾ ಭೂಮಿಗಳನ್ನು ಆಕ್ರಮಿಸುವಂತೆ ಕಂಡನು.

೭೦. ಅವರೆಲ್ಲರೂ ಆ ಅದ್ಭುತವಾದ ಮತ್ತು ಮಹತ್ತಾದ ತ್ರಿವಿಕ್ರಮರೂಪ ವನ್ನು ನೋಡಿ ಇಂತಹ ರೂಪವನ್ನು ನಾವು ಹಿಂದೆ ನೋಡಲಿಲ್ಲವೆಂದು ಆದರ್ಶನ ದಿಂದ ಬಹು ಸಂತೋಷಪಟ್ಟ ಮಾನಸವುಳ್ಳವರಾದರು.

೭೧. ಮತ್ತು ಪುಷ್ಪವೃಷ್ಟಿಯನ್ನು ಕರೆದರು. ಹಾಗು ನಾನಾವಿಧವಾದ ಸ್ತೋತ್ರ ಗಳಿಂದ ಸ್ತುತಿಮಾಡಿದರು. ವಿರೋಚನ ಪುತ್ರನಾದ ಬಲೀಂದ್ರನು ಆ ತ್ರಿವಿಕ್ರಮದೇವ ನನ್ನು ಸಾಕ್ಷಾತ್ಕರಿಸಿದನು.

೭೨. ವಾಮನತೀರ್ಥದ ತೀರದ ಪಶ್ಚಿಮ ದಿಗ್ಭಾಗದಲ್ಲಿ ಅದ್ಭುತವನ್ನುಂಟು ಮಾಡುವ ದಿವ್ಯವಾದ ಪುಷ್ಪಕವಿಮಾನದಲ್ಲಿ ಸ್ವಾಮಿಯು ಪರ್ವತದ ಆಕಾರದಂತೆ ಆರೂಢನಾಗಿದ್ದನು.

೭೩. ಪಶ್ಚಿಮದಿಕ್ಕಿಗೆ ಅಭಿಮುಖನಾಗಿ ಶಾಂತವಾದ ಆಕಾರದಿಂದ ಮುಂಭಾಗ ದಲ್ಲಿರುವ ತ್ರಿವಿಕ್ರಮಮೂರ್ತಿಯನ್ನು ನಮಸ್ಕರಿಸಿ ರಾಜನಾದ ಬಲಿಯು ಅಂಜಲಿ ಗಳನ್ನು ಕಟ್ಟಿಕೊಂಡು ಅತ್ಯಾನಂದದಿಂದ ಸ್ತೋತ್ರಮಾಡಿದನು.

ಪ್ರಸೀದ ದೇವದೇವೇಶ ಪ್ರಸೀದ ಪುರುಷೋತ್ತಮ ।
ವಾಮನಾನನ್ತವಿಶ್ವೇಶ ಪ್ರಸೀದ ಕರುಣಾಕರ । ॥ ೭೪ ॥

ತ್ರಿವಿಕ್ರಮ ತ್ರಿಲೋಕೇಶ ತ್ರಿಗುಣಾತೀತ ಶಾಶ್ವತ ।
ತ್ವಾಂ ಪ್ರಪನ್ನೋಽಸ್ಮ್ಯಹಂ ವಿಷ್ಣೋ ಪಾಹಿ ಮಾಂ ಭವಸಾಗರಾತ್ ॥

ತವ ರೂಪಮಿದಂ ದ್ರಷ್ಟುಂ ಚಿರಾತ್ಸಂಪ್ರಾರ್ಥಿತಂ ಮಯಾ ।
ಅದ್ಯ ದೃಷ್ಟ್ವಾ ಕೃತಾರ್ಥೋಽಸ್ಮಿ ರೂಪಂ ತವ ಮಹಾದ್ಭುತಂ ॥ ೭೬ ॥

ಇತಿ ಸ್ತುವಂತಮುದ್ವೀಕ್ಷ್ಯ ಬಲಿಂ ಪಾರ್ಶ್ವಗತೋ ಹರಿಃ ।
ವಾಮನಃ ಪ್ರಹಸನ್ ವಾಕ್ಯಮುವಾಚಾಸುರಪುಂಗವಃ ॥ ೭೭ ॥

ಪಾದತ್ರಯಮಿತಾ ಭೂಮಿರ್ನೃಪ್ಯಂ ದತ್ತಾ ಪುರಾ ತ್ವಯಾ ।
ರಾಜಂಸ್ತ್ರೈವಿಕ್ರಮಸ್ಯಾಸ್ಯ ಮಮ ರೂಪಸ್ಯ ಪಾದಯೋಃ ॥ ೭೮ ॥

---

೭೪. ದೇವತೆಗಳಿಗೆ ಈಶ್ವರನೆ! ಪ್ರಸನ್ನನಾಗು, ಉತ್ತಮಪುರುಷಸ್ವರೂಪನೆ! ನೀನು ಪ್ರಸನ್ನನಾಗು. ಅಂತವಿಲ್ಲದವನೂ ವಿಶ್ವಕ್ಕೆ ಈಶ್ವರನೂ ಕರುಣೆಗೆ ನಿಧಿಯೂ ಆದ ವಾಮನಮೂರ್ತಿಯೆ! ನನ್ನಲ್ಲಿ ಪ್ರಸನ್ನನಾಗು.

೭೫. ಮೂರು ಹೆಜ್ಜೆಗಳನ್ನಿಟ್ಟು ತ್ರಿವಿಕ್ರಮ ಅವತಾರಮಾಡಿದ, ತ್ರಿಲೋಕಗಳಿಗೆ ಅಧಿಪತಿಯಾದ, ಗುಣತ್ರಯವನ್ನು ಮೀರಿರುವ, ಮತ್ತು ಶಾಶ್ವತವಾದ ವಿಷ್ಣುವೆ! ನಾನು ನಿನ್ನನ್ನು ಶರಣಹೊಂದಿರುವೆನು. ಈ ಸಂಸಾರ ಸಮುದ್ರದಿಂದ ನನ್ನನ್ನು ಪಾಲಿಸು.

೭೬. ನಿನ್ನ ಈ ರೂಪವನ್ನು ನೋಡಲು ಬಹುಕಾಲದಿಂದ ನಾನು ಕುತೂಹಲಿಯಾಗಿದ್ದೆನು. ಈ ಅದ್ಭುತವಾದ ನಿನ್ನ ರೂಪವನ್ನು ಈ ದಿನ ನಾನು ನೋಡಿ ಕೃತಾರ್ಥನಾಗಿರುವೆನು.

೭೭. ಈ ರೀತಿಯಾಗಿ ಸ್ತೋತ್ರಮಾಡುತ್ತಲಿದ್ದ ಬಲೀಂದ್ರನನ್ನು ಪಾರ್ಶ್ವದಲ್ಲಿ ನಿಂತಿದ್ದ ಹರಿಯು ನೋಡಿ ದಾನವೇಂದ್ರನಾದ ಬಲಿಯನ್ನು ಕುರಿತು ನಗುತ್ತ ಈ ವಚನವನ್ನು ಆಡಿದನು.

೭೮. ರಾಜನೇ! ನೀನು ನನಗೆ ಪೂರ್ವದಲ್ಲಿ ಮೂರು ಹೆಜ್ಜೆಗಳ ಅಳತೆಯಷ್ಟು ಭೂಮಿಯನ್ನು ದಾನಮಾಡಿರುತ್ತಿ. ಆದರೆ ಈ ನನ್ನ ತ್ರಿವಿಕ್ರಮರೂಪದ ಎರಡು ಪಾದಗಳಿಂದ ಮೊದಲು ಅಳೆಯಲಾರಂಭಮಾಡಿದೆನು.

ದ್ವಯೋರೇವ ನ ಪರ್ಯಾಪ್ತೇ ದ್ಯಾವಾಭೂಮೀ ಬಭೂವತುಃ ।
ಏಕಪಾದಮಿತಾ ಮಹ್ಯಂ ದಾತವ್ಯಾ ಕಿಲ ಭೂಸ್ತ್ವಯಾ ॥ ೭೯ ॥

ತ್ವಾಮದ್ಯ ದೇಹಿ ರಾಜೇಂದ್ರ ಪೂರ್ವದತ್ತಾಂ ಧರಾಂ ಮಮ ।
ಏವಮುಕ್ತಸ್ತು ದೇವೇನ ಬಲಿರ್ವಾಕ್ಯಮುವಾಚ ಹ ॥ ೮೦ ॥

ಸರ್ವಂ ತ್ವಯೈವ ಚಾಕ್ರಾಂತಂ ಜಗದ್ಧಿ ಸಚರಾಚರಂ ।
ಕುತ್ರಾಪಿ ನಾವಕಾಶೋಸ್ತಿ ದಾತುಂ ತೇ ಮಚ್ಛಿರೋ ವಿನಾ ॥ ೮೧ ॥

ತಸ್ಮಾನ್ನಿಕ್ಷಿಪ ದೇವೇಶ ತ್ವತ್ಪಾದಂ ಮಸ್ತಕೇ ಮಮ ।
ಇತ್ಯುಕ್ತ್ವಾ ತಸ್ಯ ಪಾದಾಬ್ಜಸ್ಪರ್ಶಸಂತೋಷಲಾಲಸಃ ॥ ೮೨ ॥

ಪಾದಮೂಲೇ ಹರೇಸ್ತಸ್ಯ ಬಭೂವಾನಮ್ರಮಸ್ತಕಃ ।
ತತಸ್ತ್ರಿವಿಕ್ರಮೋ ವೀಕ್ಷ್ಯ ಸ್ವಪಾದಾನತಮಸ್ತಕಂ ॥ ೮೩ ॥

---

೭೯. ಈ ದ್ಯಾವಾಭೂಮಿಗಳು ಎರಡು ಪಾದಗಳಿಗೆ ಸಾಲದ ಹಾಗೆ ಆಗಿರುತ್ತವೆ. ಈಗ ಇನ್ನೊಂದು ಹೆಜ್ಜೆಯ ಪರಿಮಾಣದ ಭೂಮಿಯನ್ನು ನೀನು ಅರ್ಪಿಸುವುದು ಅವಶಿಷ್ಟವಾಗಿದೆ.

೮೦. ರಾಜೇಂದ್ರನೆ! ಹಿಂದೆ ವಾಗ್ದಾನಮಾಡಿರುವ ಆ ಭೂಮಿಯನ್ನು ನನಗೆ ಈ ದಿನ ಕೊಡು. ಹೀಗೆಂದು ಪರಮಾತ್ಮನಿಂದ ಹೇಳಲ್ಪಟ್ಟಿರುವ ಬಲಿರಾಜನು ಈ ರೀತಿಯಾಗಿ ಹೇಳಲು ಆರಂಭಿಸಿದನು.

೮೧. ಸ್ವಾಮಿಯೇ! ಸ್ಥಾವರ-ಜಂಗಮರೂಪವಾದ ನಿಖಿಲ ಜಗತ್ತನ್ನೂ ನೀನು ಈಗಲೇ ಆಕ್ರಮಿಸಿಕೊಂಡಿರುತ್ತೀ. ಹೀಗಿರುವಾಗ ಈಗ ನಿನಗೆ ನನ್ನ ಶಿರವನ್ನು ಹೊರತಾಗಿ ಮತ್ತೇನನ್ನೂ ಅರ್ಪಿಸಲು ಅವಕಾಶವಿಲ್ಲ.

೮೨. ದೇವಾಧಿದೇವನೇ! ಆದುದರಿಂದ ನನ್ನ ಶಿರದಲ್ಲಿ ನಿನ್ನ ಮತ್ತೊಂದು ಪಾದವನ್ನು ಇಡು, ಎಂಬುದಾಗಿ ಹರಿಯ ಪಾದಕಮಲದ ಸ್ಪರ್ಶದ ಲಾಭದಲ್ಲಿ ಬಹಳ ಸಂತೋಷಲಾಲಸೆಯಿಂದ ಆಡಿದನು.

೮೩. ಮತ್ತು ಹರಿಯು ಪಾದತಲದಲ್ಲಿ ತನ್ನ ತಲೆಯನ್ನು ಬಾಗಿಸಿ ಅರ್ಪಿಸಿದನು. ಆಗ ತ್ರಿವಿಕ್ರಮಮೂರ್ತಿಯಾದ ಹರಿಯು ತನ್ನ ಪಾದಮೂಲದಲ್ಲಿ ತಲೆಯನ್ನು ಒಡ್ಡಿರುವ ಬಲಿಯನ್ನು ನೋಡಿದನು.

ಬಲಿಂ ಸಂಹರ್ಷಯನ್ ರಾಜನ್ನಿದಮಾಹ ವಚಸ್ತದಾ ।
ಸುಪ್ರಸನ್ನೋಽಸ್ಮ್ಯಹಂ ರಾಜನ್ ಬಲೇ ತ್ವದ್ದಾನವೈಭವಾತ್ ॥ ೮೪ ॥

ತುಷ್ಟಶ್ಚಾನೇನ ಯಜ್ಞೇನ ಕಿಂ ತೇ ಭೂಯಃ ಕರೋಮ್ಯಹಂ ।
ಇತಿ ದೇವಸ್ಯ ತದ್ವಾಕ್ಯಂ ಶ್ರುತ್ವಾ ಬಲಿರುವಾಚ ಹ ॥ ೮೫ ॥

ಏತತ್ತ್ರೈವಿಕ್ರಮಂ ರೂಪಂ ಭವತಾ ದರ್ಶಿತಂ ಮಮ ।
ಅನೇನೈವ ಹಿ ರೂಪೇಣ ಕಾಂಚ್ಯಾಂ ಯಜ್ಞಾಲಯೇ ಮಮ ॥ ೮೬ ॥

ಸರ್ವಲೋಕಹಿತಾರ್ಥಾಯ ಮಮ ಚ ಪ್ರಿಯಕಾಮ್ಯಯಾ ।
ಆಬ್ರಹ್ಮಸಂಪ್ಲವಂ ದೇವ ಭವಾನತ್ರೈವ ತಿಷ್ಠತು ॥ ೮೭ ॥

ಏಷ ಮೇ ಪರಮಃ ಕಾಮಸ್ತ್ವಮನುಜ್ಞಾತುಮರ್ಹಸಿ ।
ಮಾಂ ಚ ಪ್ರೇಷಯ ಪಾತಾಲಂ ಕೃತ್ವಾ ತ್ವತ್ಪಾದಪೀಡಿತಂ ॥ ೮೮ ॥

---

೮೪. ರಾಜನೆ! ಮತ್ತು ಆ ಬಲೀಂದ್ರನನ್ನು ಸಂತೋಷಪಡಿಸುತ್ತ ಆಗ ಈ ಮಾತನ್ನು ಆಡಿದನು. ಬಲಿಯೆ! ನಿನ್ನ ದಾನವ ಈ ವೈಭವದಿಂದ ನಾನು ನಿನ್ನಲ್ಲಿ ಸುಪ್ರಸನ್ನನಾಗಿರುವೆನು.

೮೫. ಮತ್ತು ನಿನ್ನ ಈ ಯಜ್ಞಾನುಷ್ಠಾನದಿಂದ ಪ್ರೀತನಾಗಿರುವೆನು. ಈಗ ನಿನಗೆ ನಾನು ಮತ್ತೆ ಯಾವ ಉಪಕಾರವನ್ನು ಮಾಡಲಿ. ಬಲಿಚಕ್ರವರ್ತಿಯು ಈ ವಿಧವಾದ ಹರಿಯ ವಚನವನ್ನು ಕೇಳಿ ಪ್ರತ್ಯುತ್ತರವನ್ನು ಹೇಳಿದನು.

೮೬. ಈ ತ್ರಿವಿಕ್ರಮ ರೂಪವನ್ನು ನೀನು ನನಗೆ ತೋರಿಸಿ ಅನುಗ್ರಹಿಸಿರುತ್ತೀ. ಕಾಂಚೀನಗರದಲ್ಲಿರುವ ಈ ನನ್ನ ಯಜ್ಞಶಾಲೆಯಲ್ಲಿ ಈ ರೂಪದಿಂದ ನೀನು ಸನ್ನಿಧಾನವನ್ನು ಅನುಗ್ರಹಿಸಬೇಕು.

೮೭. ಸಕಲ ಲೋಕಗಳಿಗೆ ಹಿತವನ್ನುಂಟುಮಾಡುವುದಕ್ಕೋಸ್ಕರ ಮತ್ತು ನನ್ನ ಪ್ರಿಯವನ್ನು ನೆರವೇರಿಸಲೋಸ್ಕರ ಬ್ರಹ್ಮಾದಿಸ್ತಂಬ ಪರ್ಯಂತಪ್ರಲಯವಾಗುವವರೆಗೆ ನೀನು ಇಲ್ಲಿಯೇ ವಾಸಮಾಡು.

೮೮. ಇದೇ ನನ್ನ ಅತಿಶಯವಾದ ಕೋರಿಕೆಯು. ಇದನ್ನು ನೀನು ನೆರವೇರಿಸಲು ಅರ್ಹನಾಗಿರುತ್ತೀ. ನಿನ್ನ ಪಾದವನ್ನು ನನ್ನ ಶಿರದಲ್ಲಿಟ್ಟು ಪೀಡಿಸಿ ನನ್ನನ್ನು ಪಾತಾಳಕ್ಕೆ ಕಳುಹಿಸು.

ಇತಿ ತಸ್ಯ ವಚಃ ಶ್ರುತ್ವಾ ತಮುವಾಚ ತ್ರಿವಿಕ್ರಮಃ ।
ಅಹಮತ್ರೈವ ವತ್ಸ್ಯಾಮಿ ಬಲೇ ತ್ವದ್ಧಿತಕಾಮ್ಯಯಾ ॥ ೮೯ ॥

ತತ್ರ ಯಜ್ಞಾಲಯೇ ಕಾಂಚ್ಯಾಂ ಸರ್ವೇಷಾಮಿಷ್ಟದೋ ನೃಣಾಂ ।
ಯೇ ಮಾಂ ತ್ರಿವಿಕ್ರಮಂ ಕಾಂಚ್ಯಾಂ ಪಶ್ಯಂತಿ ಮನುಜಾ ಭುವಿ ॥ ೯೦ ॥

ತೇ ಲಭಂತೇ ಪರಾಂ ಭೂತಿಮಾಯುರಾರೋಗ್ಯಮೇವ ಚ ।
ಇತ್ಯುಕ್ತ್ವಾ ದೇವದೇವೇಶಃ ಸ್ವಪಾದಂ ತಸ್ಯ ಮೂರ್ಧನಿ ॥ ೯೧ ॥

ನಿಕ್ಷಿಪ್ಯ ಪ್ರೇಷಯಾಮಾಸ ಪಾತಾಲಂ ಬಲಿಮಂಜಸಾ ।
ವಿಷ್ಣುಪಾದತಲಾಕ್ರಾಂತಮಸ್ತಕೋಽಸುರಪುಂಗವಃ ॥ ೯೨ ॥

ಕ್ಷಣಾತ್ಪ್ರವಿಶ್ಯ ಪಾತಾಲಂ ಪ್ರಮುಮೋದ ಸಬಾಂಧವಃ ।
ತ್ರಿವಿಕ್ರಮೋಽಪಿ ರಾಜೇಂದ್ರ ಬಲೇರ್ಯಜ್ಞಸಭಾತಲೇ ॥ ೯೩ ॥

---

೮೯. ತ್ರಿವಿಕ್ರಮಮೂರ್ತಿಯು ಈ ರೀತಿಯಾದ ಬಲೀಂದ್ರನ ವಚನವನ್ನು ಕೇಳಿ ಈ ರೀತಿಯಾಗಿ ಉತ್ತರವಿತ್ತನು. ಬಲಿರಾಜನೆ! ನಿನಗೆ ಹಿತವನ್ನು ಆಚರಿಸಬೇಕೆಂಬ ಅಭಿಲಾಷೆಯಿಂದ ನಾನು ಇಲ್ಲಿಯೇ ವಾಸಮಾಡುತ್ತೇನೆ.

೯೦. ನಿನ್ನ ಈ ಯಜ್ಞಶಾಲೆಯಲ್ಲಿ ಸಕಲ ಮಾನವರಿಗೆ ಅವರವರ ಇಷ್ಟಕಾಮಗಳನ್ನು ಕೊಡುತ್ತ ಕಾಂಚೀನಗರದಲ್ಲಿ ವಾಸಮಾಡುವೆನು. ಭೂಲೋಕದಲ್ಲಿ ಈ ಕಾಂಚೀನಗರದಲ್ಲಿ ಅನೇಕ ಮಾನವರು ತ್ರಿವಿಕ್ರಮರೂಪಿಯಾದ ನನ್ನನ್ನು ನಮಸ್ಕರಿಸುತ್ತಾರೆ.

೯೧. ಕಾಂಚೀನಗರದಲ್ಲಿ ತ್ರಿವಿಕ್ರಮಸ್ವಾಮಿಯನ್ನು ದರ್ಶನಮಾಡಿದವರು ಆ ಪುಣ್ಯಮಹಿಮೆಯಿಂದ ನಿರುಪಮವಾದ ಸಂಪತ್ತಿಯನ್ನೂ ಆಯುಷ್ಯವನ್ನೂ ಆರೋಗ್ಯವನ್ನೂ ಹೊಂದುತ್ತಾರೆ. ಎಂಬುದಾಗಿ ಹೇಳಿ ದೇವಾಧಿದೇವನಾದ ಹರಿಯು ಆ ಬಲಿಯ ಶಿರಸ್ಸಿನಲ್ಲಿ ತನ್ನ ಪಾದವನ್ನು ಇಟ್ಟನು.

೯೨. ಪಾದವನ್ನು ಇಟ್ಟು ಬಹಳ ಬೇಗ ಬಲೀಂದ್ರನನ್ನು ಪಾತಾಳಕ್ಕೆ ಕಳಿಸಿದನು. ಬಲೀಂದ್ರನು ತಾನು ಬಹು ಕಾಲದಿಂದ ಅಪೇಕ್ಷಿಸಿದಂತೆ ವಿಷ್ಣುಪಾದದ ಸಂಗದಿಂದ ಪವಿತ್ರವಾದ ಶಿರಸ್ಸುಳ್ಳವನಾದನು.

೯೩. ಮತ್ತು ಒಂದು ನಿಮಿಷಮಾತ್ರಕ್ಕೆ ಪಾತಾಳವನ್ನು ಸೇರಿ ಅಲ್ಲಿ ತನ್ನ ಬಂಧು ಜನಗಳೊಂದಿಗೆ ಆನಂದಭರಿತನಾದನು. ರಾಜೇಂದ್ರನೆ! ತ್ರಿವಿಕ್ರಮಸ್ವಾಮಿಯು

ಸಹಿತಃ ಶೇಷರೂಪೇಣ ಮೋಘರೂಪೇಣ ವಿಷ್ಣುನಾ ।
ತತ್ರೈವ ಕಾಂಚ್ಯಾಮುವಸತ್ ಸರ್ವಸಿದ್ಧಿಪ್ರದೋ ನೃಣಾಂ ॥ ೯೪ ॥

ವಾಮನೋಽಪಿ ನೃಣಾಂ ದಾತುಂ ಸರ್ವಾರ್ಥ ಕಾಮಾನಭೀಪ್ಸಿತಾನ್ ॥
ಯಜ್ಞಕುಂಡಸ್ಯ ಚಾಗ್ನೇಯೇ ಬಿಲದ್ವಾರಸ್ಯ ದಕ್ಷಿಣೇ ॥ ೯೫ ॥

ಪ್ರಾಙ್ಮುಖೋ ಯಜ್ಞಶಾಲಾಯಾಮಾಸೀತ್ ಸರ್ವೇಷ್ಟದೋ ನೃಣಾಂ ।
ಪಾತಾಲಸ್ಯ ಬಿಲದ್ವಾರಂ ವಾಮನಾಧಿಷ್ಠಿತಂ ನೃಪ ॥ ೯೬ ॥

ಸರ್ವಕಾಮಪ್ರದಂ ನೃಣಾಂ ಸ್ಮರಣಾತ್ಪುಣ್ಯದಂ ಯತಃ ।
ಕಾಮಕೋಷ್ಠಮಿತಿ ಖ್ಯಾತಮತಸ್ತದ್ವಾಮನಪ್ರಿಯಂ ॥ ೯೭ ॥

ಸರ್ವಪಾಪಹರಂ ಸ್ಥಾನಂ ದರ್ಶನಾತ್ ಸರ್ವಸಿದ್ಧಿದಂ ।
ಕಾಮಕೋಷ್ಠೇ ಸಕೃತಾ ಕಾಂಚ್ಯಾಂ ಯಃ ಪಶ್ಯೇದ್ವಾಮನಂ ನರಃ ॥೯೮॥

ಬಲೀಂದ್ರನ ಯಜ್ಞಸಭಾಂಗಣದಲ್ಲಿ ಬಲಿಯ ಪ್ರಿಯವನ್ನು ನೆರವೇರಿಸುವುದರಲ್ಲಿ ಕುತೂಹಲವುಳ್ಳವನಾದನು.

೯೪. ಆದುದರಿಂದ ಶೇಷಾಕಾರ-ಮೋಘಾಕೃತಿಗಳಿಂದ ಕೂಡಿದ ವಿಷ್ಣುವಿನ ಜೊತೆಯಲ್ಲಿ ತ್ರಿವಿಕ್ರಮಸ್ವಾಮಿಯು ಮಾನವರಿಗೆ ಸಕಲ ಸಿದ್ಧಿಗಳನ್ನು ಅನುಗ್ರಹಿಸುತ್ತ ಅಲ್ಲಿಯೇ ಕಾಂಚೀನಗರದಲ್ಲಿ ವಾಸಮಾಡಿದನು.

೯೫. ವಾಮನಮೂರ್ತಿಯೂ ಕೂಡ ಮಾನವರ ಸಕಲ ಇಷ್ಟಾರ್ಥಗಳನ್ನು ಕೊಡುವುದಕ್ಕೋಸ್ಕರ ಯಜ್ಞಕುಂಡದ ಆಗ್ನೇಯ ದಿಕ್ಕಿಗೂ ಮತ್ತು ಬಿಲದ್ವಾರದ ದಕ್ಷಿಣ ದಿಕ್ಕಿಗೂ ಸಂಬಂಧಿಸಿರುವ ಪ್ರದೇಶದಲ್ಲಿ ವಾಸಮಾಡಲು ಇಚ್ಛಿಸಿದನು.

೯೬. ಆದುದರಿಂದ ಯಜ್ಞಶಾಲೆಯಲ್ಲಿ ಪೂರ್ವಾಭಿಮುಖನಾಗಿ ಮನುಷ್ಯರ ಸಕಲ ಇಷ್ಟಗಳನ್ನು ಕೊಡುತ್ತ ವಾಸಿಸುವನು. ರಾಜನೆ! ಪಾತಾಳದಿಂದ ಬರುವ ಬಿಲದ ದ್ವಾರವು ವಾಮನಮೂರ್ತಿಯಿಂದ ರಕ್ಷಿಸಲ್ಪಟ್ಟಿದೆ.

೯೭. ಆ ದ್ವಾರವು ಸರ್ವ ಕಾಮನೆಗಳನ್ನು ಪೂರೈಸುವುದೂ ಮತ್ತು ಸ್ಮರಣ ಮಾತ್ರದಿಂದ ಪುಣ್ಯಪುಂಜವನ್ನುಂಟುಮಾಡುವುದೂ ಆದ್ದರಿಂದ ಕಾಮಕೋಷ್ಠವೆಂಬ ಹೆಸರಿನಿಂದ ಪ್ರಸಿದ್ಧವಾಗಿ ಅದು ವಾಮನಮೂರ್ತಿಗೆ ಬಹಳ ಪ್ರಿಯವಾಗಿರುವುದು.

೯೮. ಆ ಸ್ಥಾನವು ಸಕಲ ಪಾಪಗಳನ್ನು ಅಪಹರಿಸುವುದಾಗಿಯೂ ದರ್ಶನ ಮಾತ್ರದಿಂದ ಸರ್ವಸಿದ್ಧಿಗಳನ್ನು ಕೊಡುವುದಾಗಿಯೂ ಇರುವುದು. ಕಾಂಚೀನಗರ

ಸರ್ವಾರ್ ಸ ಕಾಮಾರ್ ಸಂಪ್ರಾಪ್ಯ ಮೋಕ್ಷಮಂತೇ ವ್ರಜೇದ್ಧ್ರುವಂ ।
ಕಾಂಚ್ಯಾಂ ಶೇಷಾಕೃತಿಂ ವಿಷ್ಣುಂ ತಥಾ ಮೇಘಾಕೃತಿಂ ಹರಿಂ ।

ತ್ರಿವಿಕ್ರಮಂ ಚ ಯಃ ಪಶ್ಯೇತ್ ಸ ಭೂಯಾನ್ಮೋಕ್ಷಭಾಙ್ನರಃ ॥ ೯೯ ॥

ಏವಂ ಸ ಕಾಂಚ್ಯಾಂ ಬಲಿರಶ್ವಮೇಧಂ
ಚಕಾರ ಭಕ್ತ್ಯಾ ನೃಪ ವಾಮನಾಜ್ಞಯಾ ।
ತ್ರೈವಿಕ್ರಮಂ ಚಾಪಿ ದದರ್ಶ ರೂಪಂ
ಮೇಘಾಕೃತಿಂ ಶೇಷತನುಂ ಚ ವಿಷ್ಣುಂ ॥ ೧೦೦ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ವಿಂಶೋಽಧ್ಯಾಯಃ

ದಲ್ಲಿ ಕಾಮಕೋಷ್ಠದಲ್ಲಿರುವ ವಾಮನಮೂರ್ತಿಯನ್ನು ಒಂದು ಸಲವಾದರೂ ಸಂದರ್ಶಿಸಬೇಕು.

೯೯. ಹಾಗೆ ದರ್ಶನವನ್ನು ಮಾಡಿದ ನರನು ಸಕಲ ಕಾಮ್ಯಫಲಗಳನ್ನು ಅನುಭವಿಸಿ ಅಂತದಲ್ಲಿ ಮೋಕ್ಷವೆಂಬ ಮಹಾ ಪುರುಷಾರ್ಥವನ್ನು ತಪ್ಪದೆಹೊಂದುವನು. ಕಾಂಚಿಯಲ್ಲಿ ಶೇಷಾಕಾರವುಳ್ಳ ವಿಷ್ಣುವನ್ನೂ ಮೇಘದ ಆಕೃತಿಯುಳ್ಳ ಹರಿಯನ್ನೂ ಮತ್ತು ತ್ರಿವಿಕ್ರಮಮೂರ್ತಿಯನ್ನೂ ಸಂದರ್ಶಿಸಿದ ನರನು ಮೋಕ್ಷ ಸಾಮ್ರಾಜ್ಯವನ್ನು ಹೊಂದುವನು.

೧೦೦. ರಾಜನೆ! ಹೀಗೆ ಬಲಿಚಕ್ರವರ್ತಿಯು ಕಾಂಚೀನಗರದಲ್ಲಿ ವಾಮನ ಮೂರ್ತಿಯ ಆಜ್ಞೆಯಂತೆ ಅಶ್ವಮೇಧಯಾಗವನ್ನು ಭಕ್ತಿಯಿಂದ ಆಚರಿಸಿದನು. ಮತ್ತು ತ್ರಿವಿಕ್ರಮ, ಶೇಷ, ಮೇಘಗಳ ಆಕಾರವನ್ನು ಹೊಂದಿರುವ ವಿಷ್ಣುಪರಮಾತ್ಮನ ವಿವಿಧರೂಪಗಳನ್ನು ನೋಡಿದನು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಏಕವಿಂಶೋಽಧ್ಯಾಯಃ

ಅಂಬರೀಷ ಉವಾಚ:—

ವಾಮನಾಂತಿಕಮಾಸಾದ್ಯ ಭೃಗುರ್ಬ್ರಹ್ಮರ್ಷಿಸತ್ತಮಃ ।
ತತಃ ಕಿಮಕರೋತ್ತತ್ರ ತನ್ಮಮಾಚಕ್ಷ್ವ ನಾರದ ॥ ೧ ॥

ಅಥ ಕಾಂಚೀಮನುಪ್ರಾಪ್ಯ ಭೃಗುರ್ಬ್ರಹ್ಮರ್ಷಿಸತ್ತಮಃ ।
ಕಾಮಕೋಷ್ಠೇ ಬಿಲದ್ವಾರೇ ವಾಮನಂ ಸಂದದರ್ಶ ಹ ॥ ೨ ॥

ತತಃ ಪರಮಸಂಹೃಷ್ಟಃ ಪರಿಕ್ರಮ್ಯ ಪ್ರಣಮ್ಯ ತಂ ।
ಪೂಜಯಾಮಾಸ ವಾಮನಂ ದೇವಂ ತತ್ರ ಯಜ್ಞಾಲಯೇ ಬಲೇಃ ॥ ೩ ॥

---

೧. ಅಂಬರೀಷರಾಜನು ಮತ್ತೆ ಪ್ರಶ್ನಿಸುತ್ತಾನೆ:—ನಾರದಮುನಿಯೆ! ನಿನ್ನಿಂದ ಉಪದೇಶಿಸಲ್ಪಟ್ಟ ಮತ್ತು ಬ್ರಹ್ಮರ್ಷಿಗಳಲ್ಲಿ ಶ್ರೇಷ್ಠನಾದ ಭೃಗುಮುನಿಯು ವಾಮನಮೂರ್ತಿಯ ಸಮೀಪಕ್ಕೆ ಬಂದು ನಂತರದಲ್ಲಿ ಅಲ್ಲಿ ಏನು ಮಾಡಿದನು ಎಂಬುದನ್ನು ನನಗೆ ಹೇಳಬೇಕು.

೨. ಬ್ರಹ್ಮರ್ಷಿಮುನಿಗಳಲ್ಲಿ ಗಣ್ಯನಾದ ಭೃಗುಮುನಿಯು ಅನಂತರದಲ್ಲಿ ಕಾಂಚೀನಗರಕ್ಕೆ ಬಂದು ಕಾಮಕೋಷ್ಠವೆಂದು ಪ್ರಸಿದ್ಧವಾದ ಪಾತಾಳದ ಬಿಲದ್ವಾರದಲ್ಲಿರುವ ವಾಮನನನ್ನು ದರ್ಶನಮಾಡಿದನಲ್ಲವೆ.

೩. ತರುವಾಯ ಪರಮಸಂತೋಷವುಳ್ಳವನಾಗಿ ವಾಮನಮೂರ್ತಿಗೆ ಪ್ರದಕ್ಷಿಣೆ ಬಂದು ನಮಸ್ಕಾರಮಾಡಿ ಆ ಬಲೀಂದ್ರನ ಯಜ್ಞಶಾಲೆಯಲ್ಲಿ ವಾಮನದೇವನನ್ನು ಪೂಜಿಸಿದನು.

ತಿಷ್ಠಂಸ್ತದಂತಿಕೇ ವಿಪ್ರಶ್ಚಕಾರ ತಪ ಉತ್ತಮಮ್ ।
ತತಃ ಸಂವತ್ಸರೇ ಪೂರ್ಣೇ ತಪ್ಯಂತಂ ಪರಮಂ ತಪಃ ॥ ೪ ॥

ಆತ್ಮಾನಮನಿಶಂ ಸಮ್ಯಗರ್ಚಯಂತಂ ಭೃಗುಂ ಹರಿಃ ।
ದೃಷ್ಟ್ವಾ ಪ್ರಸನ್ನೋ ಭಗವಾನ್ ವಾಮನೋ ವಾಕ್ಯಮಬ್ರವೀತ್ ॥ ೫ ॥

ಕಿಮರ್ಥಂ ತ್ವಮಿಹೋದ್ದಿಶ್ಯ ತಪಸಾ ಪೂಜಯಾ ಚ ಮಾಂ ।
ಸಂಪ್ರೀಣಯಸಿ ವಿಪ್ರೇಂದ್ರ ವದ ಕಿಂ ತೇ ಕರೋಮ್ಯಹಂ ॥ ೬ ॥

ಇತ್ಯುಕ್ತೋ ದೇವದೇವೇನ ಪ್ರಸನ್ನೇನ ಭೃಗುಸ್ತದಾ ।
ಪ್ರೋವಾಚ ವಾಕ್ಯಂ ಪ್ರಣತಃ ಪ್ರಾಂಜಲಿಃ ಪರಯಾ ಮುದಾ ॥ ೭ ॥

ನಮಸ್ತೇ ದೇವದೇವೇಶ ನಮಸ್ತೇ ವಾಮನಾಚ್ಯುತ ।
ತ್ವಾಂ ಪ್ರಪನ್ನೋಽಸ್ಮಿ ಕೃಪಯಾ ಪಾಹಿ ಮಾಂ ಭವಸಾಗರಾತ್ ॥ ೮ ॥

---

೪. ಮತ್ತು ಆ ಮೂರ್ತಿಯ ಹತ್ತಿರ ನಿಂತು ಉತ್ತಮವಾದ ತಪಸ್ಸನ್ನು ಆಚರಿಸಿದನು. ಹೀಗೆ ಶರೀರ ಕ್ಲೇಶವನ್ನು ಎಣಿಸದೆ ಉತ್ತಮವಾದ ತಪಸ್ಸನ್ನು ಆಚರಿಸುತ್ತಿರುವಾಗ ಒಂದು ವರ್ಷಕಾಲವು ಹಾಗೆಯೇ ಕಳೆಯಿತು.

೫. ಆಗ ವಾಮನಮೂರ್ತಿಯಾದ ಮತ್ತು ಭಗವಂತನಾದ ಹರಿಯು ತನ್ನನ್ನು ಭಕ್ತಿಯಿಂದ ನಿರಂತರವೂ ಅರ್ಚಿಸುತ್ತಿದ್ದ ಭೃಗುಮುನಿಯನ್ನು ಕಂಡು ಅವನಲ್ಲಿ ಪ್ರಸನ್ನನಾಗಿ ಈ ಮಾತನ್ನು ಆಡಿದನು.

೬. ವಿಪ್ರೇಂದ್ರನೆ! ಯಾವ ಇಷ್ಟವನ್ನು ಹೊಂದಲು ಮನಸ್ಸಿನಲ್ಲಿ ಉದ್ದೇಶಿಸಿ ಇಲ್ಲಿ ತಪಸ್ಸಿನಿಂದಲೂ ಮತ್ತು ಪೂಜೆಯಿಂದಲೂ ನನ್ನನ್ನು ತೃಪ್ತಿಪಡಿಸುತ್ತಲಿದ್ದೀ, ಅದನ್ನು ಹೇಳು, ನಾನು ನಿನಗೆ ಅನುಗ್ರಹಿಸಬೇಕಾದುದು ಏನು?

೭. ದೇವತೆಗಳಿಗೆ ಅಧೀಶ್ವರನಾದ ವಾಮನನಿಂದ ಈ ರೀತಿಯಾಗಿ ಪ್ರಸನ್ನತೆ ಯಿಂದ ಹೇಳಲ್ಪಡಲಾಗಿ ಆಗ ಭೃಗುಮುನಿಯು ಪರಮ ಸಂತೋಷದಿಂದ ಅಂಜಲಿ ಯನ್ನು ಕಟ್ಟಿಕೊಂಡು ನಮಸ್ಕರಿಸಿ ಮುಂದೆ ಹೇಳುವಂತೆ ಮಾತನಾಡಿದನು.

೮. ದೇವಾಧಿದೇವತೆಯೆ! ನಿನಗೆ ನಮಸ್ಕಾರವು, ಚ್ಯುತಿಯಿಲ್ಲದ ಶಾಶ್ವತ ರೂಪಿಯಾದ ವಾಮನನೆ! ನಿನ್ನನ್ನು ನಮಸ್ಕರಿಸುವೆನು. ನಾನು ಅನಾಥನಾಗಿ ನಿನ್ನನ್ನು ಶರಣಾಗತಿ ಹೊಂದಿರುವೆನು. ಕರುಣೆಯಿಂದ ನನ್ನನ್ನು ಈ ದುಃಖಮಯ ವಾದ ಸಂಸಾರಸಮುದ್ರದಿಂದ ಕಾಪಾಡು.

ಅಹಂ ತಪೋಬಲಾತ್ಪೂರ್ವಂ ಶ್ವೇತದ್ವೀಪಂ ಹರೇಃ ಪದಂ ।
ಗತೋ ವಿವಿತ್ಸುಃ ಪರಮಂ ತತ್ತ್ವಂ ತತ್ರ ಹರೇರ್ಮುಖಾತ್ ॥ ೯ ॥

ತತ್ರ ತತ್ಪ್ರೇರಿತಕ್ರೋಧಕಲುಷೀಕೃತಮಾನಸಃ ।
ತಮೇವಾದ್ರುಹಮಬ್ಜಾಕ್ಷಮಹಿತಲ್ಪೇಶಯಂ ಯತಃ ॥ ೧೦ ॥

ಅತೋ ಮಾಮಶಪಲ್ಲಕ್ಷ್ಮೀರ್ದೇವ ಸಂಕುಪಿತಾ ತದಾ ।
ಅಭವ್ಯಸ್ತಪಸಾ ಭ್ರಷ್ಟೋ ನಿಶ್ಶ್ರೀಕಸ್ತ್ವಂ ಭವೇತಿ ಚ ॥ ೧೧ ॥

ತಸ್ಮಾತ್ ಸುದುಃಖಸಂತಪ್ತಸ್ತಪೋಬಲವಿವರ್ಜಿತಃ ।
ಅಟಮಾನಶ್ಚ ವಸುಧಾಂ ಚಿರಾದಹಮಿಹಾಗತಃ । ॥ ೧೨ ॥

ತ್ವಾಮೇವ ಶರಣಂ ಪ್ರಾಪ್ತೋ ನಾನ್ಯಃ ಶರಣಮಸ್ತಿ ಮೇ ।
ತಸ್ಮಾನ್ಮಾಮುದ್ಧರ ಹರೇ ಪ್ರಣತಂ ಶರಣಾಗತಂ ॥ ೧೩ ॥

---

೯. ನಾನು ಹಿಂದೆ ಹರಿಯ ಮುಖದಿಂದ ತತ್ತ್ವವನ್ನು ಅರಿಯಲು ಹರಿಯ ವಾಸಭೂಮಿಯಾದ ಶ್ವೇತದ್ವೀಪಕ್ಕೆ ನನ್ನ ತಪಃಶಕ್ತಿಯಿಂದ ಹೋಗಿದ್ದೆನು.

೧೦. ಅಲ್ಲಿ ನಾನು ಪರಮಾತ್ಮನಿಂದ ಪ್ರೇರೇಪಿಸಲ್ಪಟ್ಟ ಕ್ರೋಧಕ್ಕೆ ವಶನಾಗಿ ಆದರಿಂದ ರೇಗಿದ ಮಾನಸವುಳ್ಳವನಾಗಿ ಸರ್ಪಶಯನದಲ್ಲಿ ಮಲಗಿರುವ ಪುಂಡರೀಕಾಕ್ಷನಾದ ಹರಿಯಲ್ಲಿ ದ್ರೋಹಮಾಡಿದೆನು.

೧೧. ಆಗ ವಿಷ್ಣುವಿನ ಹೃದಯದಲ್ಲಿ ವಾಸಮಾಡಿದ ಲಕ್ಷ್ಮಿಯು ಕೋಪಗೊಂಡು "ನೀನು ತಪಃಶಕ್ತಿಯಿಂದ ಭ್ರಷ್ಟನೂ ಸಕಲ ಸಂಪತ್ತಿಶೂನ್ಯನೂ ಅಮಂಗಳಶೀಲನೂ ಆಗು" ಎಂದು ನನಗೆ ಶಾಪಕೊಟ್ಟಳು.

೧೨. ಆ ಶಾಪದೋಷದಿಂದ ಈಗ ಬಹಳ ದುಃಖಗಳಿಂದ ಸಂತಪ್ತನಾಗಿಯೂ ತಪಃಶಕ್ತಿಯಿಂದ ವರ್ಜಿತನಾಗಿಯೂ ಇರುವ ನಾನು ಭೂಮಿಯಲ್ಲಿ ಎಲ್ಲೆಲ್ಲಿಯೋ ಭ್ರಮಿಸುತ್ತ ಬಹುಕಾಲ ಕಳೆದ ತರುವಾಯ ಇಲ್ಲಿಗೆ ಬಂದು ಸೇರಿದೆನು.

೧೩. ಈ ದುರ್ದಶೆಯಲ್ಲಿ ನಾನು ನಿನ್ನನ್ನು ಶರಣ ಹೊಂದಿರುವೆನು. ಇನ್ನು ನನಗೆ ಗತಿಯಿಲ್ಲದ್ದರಿಂದ ಅನಾಥನಾಗಿರುವೆನು. ಹರಿಯೇ ಆದ್ದರಿಂದ ಶರಣಾಗತನಾದ ನನ್ನನ್ನು ಕಷ್ಟಗಳಿಂದ ಪಾರುಮಾಡಿ ಉದ್ಧರಿಸು.

ಇತಿ ಪ್ರಣತಮಾಲೋಕ್ಯ ವಾಮನಃ ಕರುಣಾನಿಧಿಃ ।
ಭೃಗುಮುದ್ವೀಕ್ಷ್ಯ ಕೃಪಯಾ ಪ್ರಹೃಷ್ಟೋ ವಾಕ್ಯಮಬ್ರವೀತ್ ॥ ೧೪ ॥

ಮಾಭೈಷೀಸ್ತ್ವಂ ದ್ವಿಜಶ್ರೇಷ್ಠ ಶರಣಂ ತೇ ಭವಾಮ್ಯಹಂ ।
ತತ್ತ್ವಂ ತೇ ಕಥಯಿಷ್ಯಾಮಿ ಶಾಪಾನ್ಮುಕ್ತಂ ಕರೋಮಿ ಚ ॥ ೧೫ ॥

ಆಗತಸ್ತ್ವಮಿದಂ ಕ್ಷೇತ್ರಂ ಯತೋ ಮತ್ಪ್ರೀತಿವರ್ಧನಂ ।
ಅತಸ್ತುಭ್ಯಂ ಪ್ರದಾಸ್ಯಾಮಿ ವರಾನ್ ಬಹುಗುಣಾನಹಂ ॥ ೧೬ ॥

ಇತ್ಯುಕ್ತ್ವಾ ತಂ ಸಮಾಶ್ವಾಸ್ಯ ಸಮೀಪಮುಪವೇಶ್ಯ ಚ ।
ಪ್ರೋವಾಚ ಚಾತ್ಮನಸ್ತತ್ತ್ವಂ ಪರಮಂ ಭೃಗವೇ ತದಾ ॥ ೧೭ ॥

ಶೃಣು ತತ್ತ್ವಂ ದ್ವಿಜಶ್ರೇಷ್ಠ ಪರಮಂ ಗುಹ್ಯಮುತ್ತಮಂ ।
ತತ್ತೇಽಹಂ ಸಂಪ್ರವಕ್ಷ್ಯಾಮಿ ಯಜ್ಞಾತ್ವಾ ಮೋಕ್ಷ್ಯಸೇಽಶುಭಾತ್ ॥೧೮॥

---

೧೪. ದಯಾಮಯನಾದ ವಾಮನನು ಈ ರೀತಿಯಾಗಿ ಹೇಳಿ ನಮಸ್ಕರಿಸಿರುವ ಭೃಗುಮುನಿಯನ್ನು ನೋಡಿ ಕರುಣೆಯಿಂದ ಬಹಳ ಸಂತೋಷಪೂರ್ವಕವಾಗಿ ಈ ವಚನವನ್ನು ಆಡಿದನು.

೧೫. ದ್ವಿಜಶ್ರೇಷ್ಠನೆ! ನೀನು ಭಯಪಡಬೇಡ. ನಾನು ನಿನಗೆ ಶರಣನಾಗಿರುವೆನು. ನಿನಗೆ ಅಪೇಕ್ಷಿತವಾದ ತತ್ತ್ವವನ್ನು ನಾನು ಉಪದೇಶಿಸುವೆನು. ಹಾಗು ನಿನ್ನನ್ನು ಶಾಪಮುಕ್ತನನ್ನಾಗಿಯೂ ಮಾಡುವೆನು.

೧೬. ನೀನು ನನಗೆ ಪ್ರಿಯವಾದ ಈ ಪವಿತ್ರಕ್ಷೇತ್ರಕ್ಕೇ ಬಂದಿರುತ್ತೀ. ಆದುದರಿಂದ ಈ ಪುಣ್ಯದೇಶದ ವಾಸದ ಮಹಿಮೆಯು ನಿನ್ನಲ್ಲಿ ಪ್ರಾಪ್ತವಾಗಿರುವುದರಿಂದ ನಿನಗೆ ಅನೇಕ ವರಗಳನ್ನು ಕೊಡುತ್ತೇನೆ.

೧೭. ಹೀಗೆಂದು ಹೇಳಿ ಆ ಮುನಿಯನ್ನು ಸಮಾಧಾನಮಾಡಿ ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಆಗ ಭೃಗುಮುನಿಗೆ ತನ್ನ ಪರತತ್ತ್ವವನ್ನು ಉಪದೇಶಮಾಡಿದನು.

೧೮. ದ್ವಿಜೋತ್ತಮನೆ! ಯಾವ ತತ್ತ್ವವನ್ನು ತಿಳಿದು ಅಶುಭವನ್ನು ಕಳೆದುಕೊಂಡು ನಿಶ್ಶ್ರೇಯಸವನ್ನು ಹೊಂದಬಹುದೋ, ಅಂತಹ ತತ್ತ್ವವನ್ನು ನಿನಗೆ ಹೇಳುತ್ತೇನೆ. ಪರಮರಹಸ್ಯವೂ ಉತ್ತಮವೂ ಆದ ಆ ತತ್ತ್ವವನ್ನು ಕೇಳು.

ಅಹಮೇವ ಪರಂ ತತ್ತ್ವಂ ವಿಜ್ಞಾನಂ ಜ್ಞಾನಮೇವ ಚ ।
ಸತ್ಯಂ ಜ್ಞಾನಮನಂತಾಖ್ಯಂ ನಿರವದ್ಯಮತೀಂದ್ರಿಯಂ ॥ ೧೯ ॥

ತತ್ಪರಂ ಬ್ರಹ್ಮ ಮಾಮೇವ ಪ್ರವದಂತಿ ಮನೀಷಿಣಃ ।
ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಮಿದಂ ತತಂ ॥ ೨೦ ॥

ಅಹಮಾದಿಶ್ಚ ಮಧ್ಯಶ್ಚ ಭೂತಾನಾಮಂತ ಏವ ಚ ।
ಅಧ್ವರೋಽಹಮಹಂ ವೇದಾಃ ಸ್ವಧಾಹಂ ಹವಿರೇವ ಚ ॥ ೨೧ ॥

ಸ್ವಾಹಾ ವಷಟ್ ಸ್ವರೋ ವರ್ಣಶ್ಛಂದಾಂಸ್ಯಗ್ನಿರ್ಮಹೀ ಚ ಖಂ ।
ಅಹಂ ತ್ರಿಮೂರ್ತಿಸ್ತ್ರಿಯುಗಸ್ತ್ರಿಪಾತ್ತ್ರಿಗುಣಕಾರಣಂ ॥ ೨೨ ॥

---

೧೯. ಮುನಿಯೆ ! ನನ್ನ ಸ್ವರೂಪವೇ ಪರತತ್ತ್ವವು. ವೇದಾಂತವಾಕ್ಯಗಳಿಂದ ಹುಟ್ಟುವ ಜ್ಞಾನ ಸ್ವರೂಪವೂ ಆದರ ಸಂತತಾಭ್ಯಾಸದಿಂದ ಹುಟ್ಟುವ ಅನುಭವರೂಪವೂ ಅಬಾಧ್ಯವೂ ಚೈತನ್ಯರೂಪವೂ ಅಂತವಿಲ್ಲದುದೂ ಸಕಲ ದೋಷಸಂಪರ್ಕರಹಿತವೂ ಮತ್ತು ಅತೀಂದ್ರಿಯವೂ ಆದ ನನ್ನ ಸ್ವರೂಪವೇ ಪರತತ್ತ್ವವು.

೨೦. ನನ್ನ ಸ್ವರೂಪವನ್ನು ಜ್ಞಾನಿಗಳು ಪರಬ್ರಹ್ಮವೆಂದು ಕರೆಯುತ್ತಾರೆ. ಈಗ ಕಾಣುವ ಸಮಸ್ತ ಪ್ರಪಂಚವೂ ನನ್ನಿಂದ ಹುಟ್ಟುವುದರಿಂದ ನಾನೇ ಎಲ್ಲದಕ್ಕೂ ಕಾರಣನಾಗಿರುವೆನು.

೨೧. ಪ್ರತಿಯೊಂದು ವಸ್ತುವಿನ ಆದಿ, ಮಧ್ಯ, ಅಂತವೆಂಬ ಅವಸ್ಥೆಗಳು ನನ್ನ ಸ್ವರೂಪವೇ ಆಗಿವೆ. ಉತ್ಪತ್ತಿ, ಸ್ಥಿತಿ, ಲಯಗಳು ನನ್ನಿಂದ ಆಗುವುದರಿಂದ ನಾನು ಕಾರಣನಾದುದರಿಂದ ಆದಿರೂಪನೂ, ಅಸ್ತಿತ್ವವನ್ನು ಕೊಟ್ಟಿರುವುದರಿಂದ ಮಧ್ಯರೂಪನೂ ನನ್ನಲ್ಲಿ ಲಯವಾಗುವುದರಿಂದ ಅಂತರೂಪನೂ ಆಗುವೆನು. ಮತ್ತು ಯಾಗ, ವೇದ, ಸ್ವಧಾಕಾರ, ಮತ್ತು ಹವಿಸ್ಸು ಇವೆಲ್ಲವೂ ನನ್ನ ಅಂಶವೇ ಆಗಿರುವುವು.

೨೨. ಮತ್ತು ಸ್ವಾಹಾಕಾರ, ವಷಟ್ಕಾರ, ಸ್ವರ, ವರ್ಣ, ಛಂದಸ್ಸು, ಅಗ್ನಿ, ಭೂಮಿ, ಆಕಾಶ ಮುಂತಾದ ಸಕಲ ವಸ್ತುಗಳೂ ನನ್ನ ಅಂಶಗಳು, ನಾನು ಮೂರ್ತಿತ್ರಯರೂಪನೂ, ಯುಗತ್ರಯರೂಪನೂ, ಪಾದತ್ರಯವುಳ್ಳವನೂ ಮತ್ತು ಗುಣತ್ರಯಕಾರಣನೂ ಆಗಿರುವೆನು.

ತ್ರಿಧಾಮಾ ತ್ರಿಗುಣಾತೀತಸ್ತ್ರಿವರ್ಣಸ್ತ್ರಿಯುಗೋದ್ಭವಃ ।
ತ್ರಿವಿಕ್ರಮಸ್ತ್ರಿಕಾಲಜ್ಞಸ್ತ್ರಿಲೋಕೇಶಸ್ತ್ರಯೀಮಯಃ ॥ ೨೩ ॥

ಅಹಮೇವ ಜಗತ್ಸರ್ವಂ ವ್ಯಾಪ್ಯ ವಿಷ್ಣುರಿತಿ ಸ್ಮೃತಃ ।
ವಾಸನಾತ್ಸರ್ವಜೀವೇಷು ವಾಸುದೇವ ಇತೀರಿತಃ । ॥ ೨೪ ॥

ಯತಶ್ಚಾಪ್ಸು ಶಯಾನೋಽಹಮಪ್ಸು ನಾರಾಯಣಃ ಸ್ಮೃತಃ ।
ಅಣೋರಣೀಯಾನ್ ಸತತಂ ಜೀವೇಷು ಕರಣೇಷ್ವಪಿ ॥ ೨೫ ॥

ನಿವಸಾಮಿ ಯತಶ್ಚಾಹಮತೋ ಮಾಂ ವಾಮನಂ ವಿದುಃ ।
ಕೃತತ್ರೇತಾದ್ವಾಪರೇಷು ಯುಗೇಷು ತ್ರಿಷು ಕೇವಲಂ ॥ ೨೬ ॥

---

೨೩. ಮತ್ತು ಮೂರು ವಾಸಸ್ಥಳಗಳಿಂದ ಕೂಡಿದವನೂ, ಗುಣತ್ರಯವನ್ನು ಮೀರಿದವನೂ, ಮೂರು ವರ್ಣಗಳುಳ್ಳವನೂ, ಮೂರು ಯುಗಗಳಿಗೆ ಕಾರಣ ರೂಪನೂ, ಮೂರು ಹೆಜ್ಜೆಗಳಿಂದ ಸಕಲವನ್ನು ವ್ಯಾಪಿಸಿದವನೂ, ಕಾಲತ್ರಯವನ್ನು ತಿಳಿದವನೂ, ಲೋಕತ್ರಯಕ್ಕೆ ಅಧಿಪತಿಯೂ ಮತ್ತು ವೇದತ್ರಯ ಸ್ವರೂಪನೂ ಆಗಿರುವೆನು.

೨೪. ನಾನು ಸಕಲ ಲೋಕಗಳನ್ನು ವ್ಯಾಪಿಸಿಕೊಂಡಿರುವುದರಿಂದ ವ್ಯಾಪ್ತಿ ಎಂಬ ಅರ್ಥವನ್ನು ಸೂಚಿಸುವ "ವಿಷ್ಣು" ಎಂಬ ಸಂಕೇತವನ್ನು ಹೊಂದಿರುವೆನು. ಹಾಗೆಯೇ ಸರ್ವಜೀವಗಳಲ್ಲಿ ನಾನು ವಾಸಮಾಡುವುದರಿಂದ ಈ ಅರ್ಥವನ್ನು ಸೂಚಿಸುವ "ವಾಸುದೇವ'' ಎಂಬ ಸಂಕೇತವನ್ನು ಹೊಂದಿರುವೆನು.

೨೫. ನಾನು ನೀರಿನಲ್ಲಿ ಶಯನಮಾಡಿಕೊಂಡಿದ್ದ ನಿಮಿತ್ತದಿಂದ ಆ ಅರ್ಥ ಗರ್ಭಿತವಾದ "ನಾರಾಯಣ" ಎಂಬ ಹೆಸರನ್ನು ಹೊಂದಿರುತ್ತೇನೆ. ಮತ್ತು ಸಕಲ ಜೀವಗಳಲ್ಲಿಯೂ ಕರಣಗಳಲ್ಲಿಯೂ ಚಿಕ್ಕದಕ್ಕಿಂತ ಚಿಕ್ಕದಾಗಿ ಇರುವೆನು.

೨೬. ಅಣುರೂಪದಿಂದ ನಾನು ವಾಸಮಾಡುವುದರಿಂದ ನನ್ನನ್ನು ವಾಮನ ನೆಂದು ತಿಳಿದಿರುವರು. ನಾನು ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ಮಾತ್ರ ದಿವ್ಯ ರೂಪದಿಂದ ಆವಿರ್ಭವಿಸಿರುವೆನು.

ಪಶ್ಯಂತಿ ಸತತಂ ಸರ್ವೇ ತಸ್ಮಾನ್ನಾಂ ತ್ರಿಯುಗಂ ವಿದುಃ ।
ಶುಕ್ಲರೂಪಂ ಕೃತಯುಗೇ ತ್ರೇತಾಯಾಂ ರಕ್ತರೂಪಿಣಂ ॥ ೨೭ ॥

ದ್ವಾಪರೇ ಪೀತವರ್ಣಂ ಚ ಮಾಂ ಪಶ್ಯಂತಿ ಹಿ ಸೂರಯಃ ।
ತಸ್ಮಾತ್ತ್ರಿವರ್ಣ ಇತಿ ಮಾಮವೇಹಿ ದ್ವಿಜಸತ್ತಮ ॥ ೨೮ ॥

ಪದ್ಮಾಸನೇನೋಪವಿಷ್ಟಂ ಶ್ವೇತದ್ವೀಪೇ ಶ್ರಿಯಾ ಸಹ ।
ಕ್ಷೀರಾಬ್ಧೌ ಶೇಷಪರ್ಯಂಕೇ ಶಯಾನಂ ರಮಯಾ ಸಹ ॥ ೨೯ ॥

ತಿಷ್ಠಂತಂ ಚೈವ ವೈಕುಂಠೇ ವಾಸುದೇವಂ ರಮಾಸಖಂ ।
ಪಶ್ಯಂತಿ ಸತತಂ ಧೀರಾಸ್ತ್ರಿಷು ಸ್ಥಾನೇಷು ಕೇವಲಂ ॥ ೩೦ ॥

ಏತಸ್ಮಾನ್ನಾಂ ತ್ರಿಧಾಮಾನಮವೇಹಿ ದ್ವಿಜಸತ್ತಮ ।
ಯ ಇದಂ ಪರಮಂ ತತ್ತ್ವಂ ಮಮ ವೇತ್ತಿ ದ್ವಿಜೋತ್ತಮ । ॥ ೩೧ ॥

---

೨೭. ಆ ಮೂರು ಯುಗಗಳಲ್ಲಿ ಮಾತ್ರ ನನ್ನನ್ನು ಯಾವಾಗಲೂ ಮಹಾತ್ಮರು ಸಾಕ್ಷಾತ್ಕರಿಸುವರಾದುದರಿಂದ ನನ್ನನ್ನು ತ್ರಿಯುಗಮೂರ್ತಿಯೆಂದು ಕರೆಯುವರು. ಯುಗಗಳಿಗೆ ತಕ್ಕಂತೆ ನಾನು ವರ್ಣಭೇದವನ್ನು ಪರಿಗ್ರಹಿಸುವೆನು. ಕೃತಯುಗದಲ್ಲಿ ಶುಕ್ಲರೂಪದಿಂದಲೂ, ತ್ರೇತಾಯುಗದಲ್ಲಿ ರಕ್ತರೂಪದಿಂದಲೂ ಕಾಣಿಸುವೆನು.

೨೮. ದ್ವಿಜೋತ್ತಮನೆ! ದ್ವಾಪರಯುಗದಲ್ಲಿ ಹೊಂಬಣ್ಣದಿಂದ ನನ್ನನ್ನು ಜ್ಞಾನಿಗಳು ನೋಡುವರು. ಹೀಗೆ ಮೂರು ಯುಗಗಳಲ್ಲಿ ಪ್ರತ್ಯೇಕವಾಗಿ ಮೂರು ವರ್ಣಗಳಿಂದ ಕಾಣುವೆನಾದುದರಿಂದ ನನ್ನನ್ನು ತ್ರಿವರ್ಣನೆಂದು ತಿಳಿ.

೨೯. ಶ್ವೇತದ್ವೀಪದಲ್ಲಿ ಲಕ್ಷ್ಮೀದೇವಿಯೊಡನೆ ಪದ್ಮದ ಆಸನದಲ್ಲಿ ಕುಳಿತಿರುವೆನು. ಮತ್ತು ಕ್ಷೀರಸಮುದ್ರದಲ್ಲಿ ಆದಿಶೇಷನೆಂಬ ಮಂಚದಲ್ಲಿರುವ ಶಯನದಲ್ಲಿ ಲಕ್ಷ್ಮೀದೇವಿಯೊಡನೆ ಶಯನಮಾಡಿಕೊಂಡಿರುವೆನು.

೩೦. ವೈಕುಂಠಲೋಕದಲ್ಲಿ ರಮಾದೇವಿಯೊಡನೆ ವಾಸಮಾಡುವೆನು. ಹೀಗೆ ಧೀರರಾದ ಜ್ಞಾನಿಗಳು ನನ್ನನ್ನು ಮೂರು ಸ್ಥಾನಗಳಲ್ಲಿ ನೋಡುತ್ತಲಿರುವರು.

೩೧. ದ್ವಿಜಶ್ರೇಷ್ಠನೇ! ಈ ಕಾರಣದಿಂದ ನನ್ನನ್ನು ಮೂರು ಸ್ಥಾನಗಳಲ್ಲಿ ವಾಸಮಾಡುವೆನೆಂಬ ಅರ್ಥಗರ್ಭಿತವಾದ ತ್ರಿಧಾಮ ಎಂಬ ಸಂಕೇತವುಳ್ಳವನನ್ನಾಗಿ ತಿಳಿ. ವಿಪ್ರೋತ್ತಮನೆ! ಈ ರೀತಿಯಾದ ನನ್ನ ಪರಮತತ್ತ್ವವನ್ನು ತಿಳಿಯಬೇಕು.

ಸ ಏವ ತತ್ತ್ವವಿತ್ ಪ್ರಾಜ್ಞೋ ಮದ್ಭಕ್ತಶ್ಚೈವ ಕೇವಲಂ ।
ತತ್ತ್ವಾನಾಂ ಪರಮಂ ತತ್ತ್ವಂ ಮಮೈವ ಜ್ಞಾನಮುತ್ತಮಂ ॥ ೩೨ ॥

ಏತತ್ತೇ ಪರಮಂ ತತ್ತ್ವಂ ಕಥಿತಂ ದ್ವಿಜಸತ್ತಮ ।
ತವ ಭಕ್ತ್ಯಾ ಪ್ರಸನ್ನೇನ ಮಯಾ ತವ ಹಿತೈಷಿಣಾ ॥ ೩೩ ॥

ಮುಕ್ತಶಾಪಃ ಪ್ರಶಾಂತಾತ್ಮಾ ತಪೋಯೋಗಬಲಾನ್ವಿತಃ ।
ಸರ್ವಜ್ಞಃ ಸತತಂ ಹೃಷ್ಟೋ ಭವ ಮತ್ಪಾದಸಂಶ್ರಯಃ ॥ ೩೪ ॥

ಇತ್ಯುಕ್ತ್ವಾ ವಾಮನೋ ರಾಜರ್ಷ ಭೃಗುಂ ಪುನರುವಾಚ ಹ ।
ಯತಸ್ತ್ವಾಮಶಪಲ್ಲಕ್ಷ್ಮೀಃ ಪುರಾ ಕ್ರೋಧಾತ್ಕೃತಾಗಸಂ ॥ ೩೫ ॥

ಅತಸ್ತ್ವಂ ಕುರು ಕಾಮೇಷ್ಟಿಮತ್ರ ಲಕ್ಷ್ಮೀಪ್ರಿಯಾಂ ದ್ವಿಜ ।
ಅಸ್ಮಿನ್ನೇವಾಗ್ನಿಕುಂಡೇ ತು ಬಲಿನಾ ನಿರ್ಮಿತೇ ಪುರಾ ॥ ೩೬ ॥

---

೩೨. ಹಾಗೆ ನನ್ನನ್ನು ತಿಳಿದ ನರನು ಪರಮತತ್ತ್ವಜ್ಞನೂ ಮತ್ತು ನನ್ನ ಭಕ್ತನೂ ಆಗಿರುವನು. ತತ್ತ್ವಗಳಲ್ಲೆಲ್ಲ ನನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿಯುವುದೆ ಉತ್ತಮ ತತ್ತ್ವವು.

೩೩. ದ್ವಿಜಶ್ರೇಷ್ಠನೆ! ನಿನ್ನ ಭಕ್ತಿಯಿಂದ ಪ್ರಸನ್ನನಾದ ನಾನು ನಿನ್ನ ಹಿತವನ್ನು ಅಪೇಕ್ಷಿಸಿ ನಿನಗೆ ನನ್ನ ಪರಮತತ್ತ್ವವನ್ನು ಈ ರೀತಿಯಾಗಿ ಉಪದೇಶ ಮಾಡಿರುವೆನು.

೩೪. ಈಗ ನೀನು ನನ್ನ ಚರಣವನ್ನು ಸೇವಿಸಿ ಕೃತಕೃತ್ಯನಾಗಿರುವುದರಿಂದ ಶಾಪದಿಂದ ಮುಕ್ತನಾದವನೂ, ಶಾಂತವಾದ ಅಂತಃಕರಣವುಳ್ಳವನೂ, ತಪಃಶಕ್ತಿಯಿಂದ ಕೂಡಿದವನೂ, ಸರ್ವಜ್ಞನೂ ಮತ್ತು ಸರ್ವ ಕಾಲದಲ್ಲಿಯೂ ಹರ್ಷದಿಂದಿರುವವನೂ ಆಗು.

೩೫. ಈ ರೀತಿಯಾಗಿ ವಾಮನದೇವನು ಭೃಗುಮುನಿಯನ್ನು ಕುರಿತು ಹೇಳಿ ಮತ್ತೆ ಮುಂದೆ ಹೇಳುವ ವಚನವನ್ನು ಆಡಿದನು. ಪೂರ್ವದಲ್ಲಿ ಲಕ್ಷ್ಮೀದೇವಿಯು ಅಪರಾಧಮಾಡಿರುವ ನಿನ್ನಲ್ಲಿ ಕ್ರೋಧವುಳ್ಳವಳಾಗಿ ನಿನ್ನನ್ನು ಶಪಿಸಿದಳಲ್ಲವೆ.

೩೬. ದ್ವಿಜನೇ! ಆದುದರಿಂದ ಪೂರ್ವದಲ್ಲಿ ಬಲೀಂದ್ರನಿಂದ ಮಾಡಲ್ಪಟ್ಟಿರುವ ಈ ಅಗ್ನಿಕುಂಡದಲ್ಲಿ ಲಕ್ಷ್ಮೀದೇವಿಗೆ ಪ್ರಿಯವಾಗಿರುವ ಒಂದು ಕಾಮೇಷ್ಟಿಯನ್ನು ಅನುಷ್ಠಾನ ಮಾಡು.

ಪರಮಾನ್ನೇನ ಕಲ್ಹಾರೈಃ ಕಮಲೈಃ ಕಮಲಾಂ ದ್ವಿಜ ।
ಸಂಪ್ರೀಣಯಸಿ ಚೇತ್ತುಷ್ಟಾ ತ್ವಯಿ ದೇವೀ ಭವಿಷ್ಯತಿ ॥ ೩೭ ॥

ಪ್ರಸನ್ನಾ ತ್ವಯಿ ಸಂಹೃಷ್ಟಾ ಕುಂಡಾದಸ್ಮಾದ್ವಿನಿರ್ಗತಾ ।
ಪುತ್ರೀವ ತವ ವಿಪ್ರೇಂದ್ರ ವಶ್ಯಾ ಭೂಯಾನ್ನ ಸಂಶಯಃ ॥ ೩೮ ॥

ತಸ್ಮಾತ್ಕುರು ತ್ವಂ ಕಾಮೇಷ್ಟಿಂ ಸರ್ವಸಿದ್ಧಿಪ್ರದಾಂ ಶುಭಾಂ
ಇತ್ಯುಕ್ತೋ ದೇವದೇವೇನ ವಾಮನೇನ ಮಹಾತ್ಮನಾ । ॥ ೩೯ ॥

ಭೃಗುರ್ವಿಜ್ಞಾತತತ್ತ್ವಾರ್ಥಃ ಸಂಪ್ರಹೃಷ್ಟೋಽಬ್ರವೀತ್ಪುನಃ
ಶ್ರಿಯಾ ಸಹೋಪವಿಷ್ಟಸ್ತ್ವಂ ಶ್ವೇತದ್ವೀಪೇ ಕಥಂ ಹರಿಃ । ॥ ೪೦ ॥

ಕ್ಷೀರಾಬ್ಧೌ ಶಯನಂ ಪ್ರಾಪ್ತಃ ಕಥಂ ವಾ ತ್ವಂ ಶ್ರಿಯಾ ಸಹ
ತಿಷ್ಠಸಿ ತ್ವಂ ಕಥಂ ದೇವ ವೈಕುಂಠೇ ರಮಯಾ ಸಹ । ॥ ೪೧ ॥

---

೩೭. ವಿಪ್ರನೆ! ಪರಮಾನ್ನ ಮತ್ತು ಸೌಗಂಧಿಕವೆಂಬ ತಾವರೆಹೂವುಗಳನ್ನು ಅರ್ಪಿಸಿ ಲಕ್ಷ್ಮೀದೇವಿಯನ್ನು ನೀನು ತೃಪ್ತಿಪಡಿಸುವುದಾದರೆ ದೇವಿಯು ನಿನ್ನಲ್ಲಿ ಸಂತುಷ್ಟಳಾಗುವಳು.

೩೮. ವಿಪ್ರೋತ್ತಮನೇ! ಹಾಗೆ ನಿನ್ನಲ್ಲಿ ಪ್ರಸನ್ನಳೂ ವಿಶೇಷವಾಗಿ ಸಂತುಷ್ಟಳೂ ಆದ ದೇವಿಯು ಈ ಅಗ್ನಿಕುಂಡದಿಂದ ಹೊರಟುಬಂದು ನಿನಗೆ ಮಗಳಂತೆ ವಶ್ಯಳಾಗಿರುವಳು. ಈವಿಷಯದಲ್ಲಿ ಸಂಶಯಗೊಳ್ಳಬೇಡ.

೩೯. ಆದುದರಿಂದ ನೀನು ಸಕಲಸಿದ್ಧಿಗಳನ್ನು ಉಂಟುಮಾಡುವ ಮಂಗಳಕರವಾದ ಕಾಮೇಷ್ಟಿಯನ್ನು ಆಚರಿಸು. ಎಂಬುದಾಗಿ ದೇವಾಧಿದೇವನೂ ಮಹಾತ್ಮನೂ ಆದ ವಾಮನಮೂರ್ತಿಯಿಂದ ಭೃಗುಮುನಿಯು ಹೇಳಲ್ಪಟ್ಟನು.

೪೦. ಭೃಗುಮುನಿಯು ತತ್ತ್ವಾರ್ಥವನ್ನು ತಿಳಿದು ಸಂತೋಷಪಟ್ಟವನಾಗಿ ಮತ್ತೆ ವಾಮನದೇವನನ್ನು ಕುರಿತು ಪ್ರಶ್ನಿಸಿದನು. ಹರಿಯೆ! ನೀನು ಶ್ವೇತದ್ವೀಪದಲ್ಲಿ ಲಕ್ಷ್ಮೀದೇವಿಯೊಡನೆ ಕುಳಿತುಕೊಂಡಿರುವುದು ಹೇಗೆ?

೪೧. ಹಾಗೆಯೇ ಲಕ್ಷ್ಮೀದೇವಿಯೊಡನೆ ಕ್ಷೀರಸಮುದ್ರದಲ್ಲಿ ಶೇಷಶಯನದಲ್ಲಿ ಶಯನಮಾಡಿರುವುದು ಹೇಗೆ? ಪರಮಾತ್ಮನೇ! ಮತ್ತು ವೈಕುಂಠಲೋಕದಲ್ಲಿ ಲಕ್ಷ್ಮಿಯೊಡನೆ ವಾಸಮಾಡುತ್ತಿರುವುದು ಹೇಗೆ? ನೀನು ಹೀಗೆ ಒಂದೇ ಸಮಯದಲ್ಲಿ ಅನೇಕಕಡೆಗಳಲ್ಲಿ ಇರುವುದು, ಅಚಿಂತ್ಯವಾದ ವೈಭವವನ್ನು ತೋರಿಸುತ್ತದೆ.

ತ್ರಿಧಾಮ್ನಸ್ತವ ರೂಪಾಣಿ ದಿವ್ಯಾನ್ಯತ್ಯದ್ಭುತಾನ್ಯಹಂ ।
ದ್ರಷ್ಟುಕಾಮೋಽಸ್ಮಿ ದೇವೇಶ ತನ್ಮೇ ದರ್ಶಯ ವಾಮನ ॥ ೪೨ ॥

ಇತಿ ತಸ್ಯ ವಚಃ ಶ್ರುತ್ವಾ ತಸ್ಯೈವ ಪ್ರಿಯಕಾಮ್ಯಯಾ ।
ವಾಮನೋ ದರ್ಶಯಾಮಾಸ ತ್ರಿಧಾಮಾನಿ ದ್ವಿಜಾತಯೇ ॥ ೪೩ ॥

ಕಾಮಕೋಷ್ಠಬಿಲದ್ವಾರಾನ್ನಿರ್ಗತಾನ್ಯದ್ಭುತಾನಿ ಹಿ ।
ಶ್ವೇತದ್ವೀಪೇ ನಿಷಣ್ಣಂ ಚ ಶಯಾನಂ ಕ್ಷೀರಸಾಗರೇ ॥ ೪೪ ॥

ತಿಷ್ಠಂತಂ ಚೈವ ವೈಕುಂಠೇ ದದರ್ಶ ದ್ವಿಜಸತ್ತಮಃ ।
ತಾನ್ಯದ್ಭುತಾನಿ ರೂಪಾಣಿ ದೃಷ್ಟ್ವಾ ಭಗವತೋ ಹರೇಃ ॥ ೪೫ ॥

ನಿಮೀಲ್ಯ ನಯನೇ ಭೀತೋ ಭೃಗುಃ ಕಂಪಿತವಿಗ್ರಹಃ ।
ಪ್ರಾಕ್ರೋಶದ್ವಾಮನಂ ದೇವಂ ಭೀತಿಗದ್ಗದಯಾ ಗಿರಾ ॥ ೪೬ ॥

---

೪೨. ದೇವಾಧೀಶ್ವರನಾದ ವಾಮನಮೂರ್ತಿಯೇ! ಈರೀತಿಯಾಗಿ ಮೂರು ಸ್ಥಾನಗಳಲ್ಲಿ ವಾಸಮಾಡುವ ನಿನ್ನ ಆಯಾಯ ವಾಸಭೂಮಿಯಲ್ಲಿರುವ ಅತ್ಯದ್ಭುತವಾದ ಆಯಾಯ ರೂಪಗಳನ್ನು ನೋಡಲು ನಾನು ಕುತೂಹಲಿಯಾಗಿರುವೆನು, ಆ ರೂಪಗಳನ್ನು ನನಗೆ ತೋರಿಸಿ ಅನುಗ್ರಹಿಸು.

೪೩. ಹೀಗೆಂಬ ವಿಪ್ರನ ಮಾತನ್ನು ಕೇಳಿ ತನ್ನ ಭಕ್ತನಾದ ಆ ಮುನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಆಶೆಯಿಂದ ವಾಮನಮೂರ್ತಿಯು ಆ ವಿಪ್ರನಿಗೆ ತನ್ನ ಮೂರು ವಾಸಭೂಮಿಗಳನ್ನು ತೋರಿಸಿದನು.

೪೪. ಭೃಗುಮುನಿಯು ನೋಡಬೇಕೆಂದಿರುವ ಆ ರೂಪಗಳು ಕಾಮಕೋಷ್ಠವೆಂಬ ಬಿಲದ ದ್ವಾರದಿಂದ ಹೊರಟು ಅದ್ಭುತವಾಗಿ ಮುನಿಯ ಎದುರಿಗೆ ನಿಂತವು. ಅವುಗಳಲ್ಲಿ ಶ್ವೇತದ್ವೀಪದಲ್ಲಿ ಇರುವ ಮತ್ತು ಕ್ಷೀರಸಮುದ್ರದಲ್ಲಿ ಶಯನಮಾಡಿರುವ ರೂಪಗಳು ಇದ್ದುವು.

೪೫. ಮತ್ತು ವೈಕುಂಠದಲ್ಲಿ ಲಕ್ಷ್ಮೀದೇವಿಯೊಡನೆ ಇರುವ ರೂಪವು ಮೂರನೆಯದಾಗಿತ್ತು. ದ್ವಿಜಶ್ರೇಷ್ಠನು ಭಗವಂತನಾದ ಹರಿಪರಮಾತ್ಮನ ಅದ್ಭುತರೂಪಗಳನ್ನು ನೋಡಿದನು.

೪೬. ಆದರೆ ಅವುಗಳನ್ನು ನೋಡಿ ಭಯಗೊಂಡು ನಡುಗುತ್ತಿರುವ ವಿಗ್ರಹವುಳ್ಳವನಾಗಿ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಭಯದ ವಿಕಾರದಿಂದ ಗದ್ಗದದಿಂದ ಕೂಡಿರುವ ವಚನದಿಂದ ವಾಮನಮೂರ್ತಿಯನ್ನು ಕೂಗಿಕೊಂಡನು.

ಪಾಹಿ ಪಾಹಿ ಜಗನ್ನಾಥ ಭೀತಂ ಮಾಮದ್ಯ ವಾಮನ ।
ತವೇದೃಶಾನಿ ರೂಪಾಣಿ ನೈವ ಶಕ್ತೋಽಹಮೀಕ್ಷಿತುಂ ॥ ೪೭ ॥

ಇತಿ ಬ್ರುವಂತಮುದ್ವೀಕ್ಷ್ಯ ಭೀತಂ ದ್ವಿಜವರಂ ತದಾ ।
ತತ್ರೈವಾಂತರ್ಹಿತಾನ್ಯಾಸಂಸ್ತ್ರಿನಿಧಾನಿ ಪುನರ್ಬಿಲೇ ॥ ೪೮ ॥

ಅಂತರ್ಹಿತೇಷು ರೂಪೇಷು ತ್ರಿಧಾಮ್ನಃ ಕಮಲಾಪತೇ ।
ಭೃಗುಃ ಸಂಸ್ತಭ್ಯ ಚಾತ್ಮಾನಂ ವಾಮನಃ ಪುನರಬ್ರವೀತ್ ॥ ೪೯ ॥

ಅಶಕ್ಯಾನಿ ಮಯೈತಾನಿ ದ್ರಷ್ಟುಂ ರೂಪಾಣಿ ಯತ್ತವ ।
ತಸ್ಮಾತ್ಸೌಮ್ಯಾನ್ಯರೂಪಾಣಿ ಮಹ್ಯಂ ಸಂದರ್ಶಯಾಧುನಾ ॥ ೫೦ ॥

ತಥಾ ದರ್ಶಯ ರೂಪಾಣಿ ಯಥಾ ಚ ನ ಬಿಭೇಮ್ಯಹಂ ।
ಕೃತಾದಿಷು ಚ ದೇವೇಶ ಯುಗೇಷು ತ್ರಿಷು ಕೇವಲಂ ॥ ೫೧ ॥

---

೪೭. ಜಗತ್ತಿನ ಪ್ರಭುವೆ! ವಾಮನಮೂರ್ತಿಯೆ! ಬಹಳ ಭೀತನಾದ ನನ್ನನ್ನು ಪಾಲಿಸು. ನನ್ನನ್ನು ಪಾಲಿಸು. ನಿನ್ನ ಈ ರೀತಿ ಅದ್ಭುತ ರೂಪಗಳನ್ನು ನಾನು ನೋಡಲು ಶಕ್ತನಲ್ಲ.

೪೮. ಆಗ ಹೀಗೆಂದು ಹೇಳುತ್ತ ಬಹು ಭೀತನಾಗಿರುವ ದ್ವಿಜೋತ್ತಮನನ್ನು ನೋಡಿ ಪ್ರತ್ಯಕ್ಷವಾದ ಆ ಮೂರು ರೂಪಗಳು ಮತ್ತೆ ಆ ಬಿಲದಲ್ಲಿ ಅಡಗಿ ಅದೃಶ್ಯವಾದುವು.

೪೯. ಮೂರು ಧಾಮಗಳಿಂದ ಕೂಡಿದ ಲಕ್ಷ್ಮೀಪತಿಯಾದ ನಾರಾಯಣನ ಅದ್ಭುತರೂಪಗಳು ಅದೃಶ್ಯಗಳಾದ ತರುವಾಯ ಭೃಗುಮುನಿಯು ಸ್ವಲ್ಪ ಧೈರ್ಯದಿಂದ ಅಂತಃಕರಣವನ್ನು ಸ್ಥಿರಪಡಿಸಿಕೊಂಡು ವಾಮನದೇವನನ್ನು ಕುರಿತು ಮತ್ತೆ ಮಾತನಾಡಿದನು.

೫೦. ನಿನ್ನ ಈ ರೂಪಗಳನ್ನು ನೋಡಲು ನಾನು ಶಕ್ತನಲ್ಲದವನಾದ್ದರಿಂದ ಆ ಅದ್ಭುತರೂಪಗಳಿಗೆ ಪ್ರತಿಯಾಗಿ ನಿನ್ನ ಸೌಮ್ಯರೂಪಗಳನ್ನು ಈಗ ನನಗೆ ತೋರಿಸು.

೫೧. ಯಾವ ರೂಪಗಳನ್ನು ನೋಡಿ ನಾನು ಭೀತಿಗೊಳ್ಳಲಾರೆನೋ ಅಂತಹ ಸೌಮ್ಯರೂಪಗಳನ್ನು ಮಾತ್ರ ನನಗೆ ತೋರಿಸು. ಮತ್ತು ದೇವಾಧಿಪತಿಯಾದ ನೀನು ಕೃತಯುಗ ಮುಂತಾದ ಮೂರು ಯುಗಗಳಲ್ಲಿ ಪ್ರತ್ಯೇಕ ರೂಪದಿಂದ ಇರುವೆಯಲ್ಲವೆ.

ಶುಕ್ಲೋ ರಕ್ತಃ ಪೀತ ಇತಿ ತ್ರಿವರ್ಣಃ ಕಥಿತೋ ಭವಾನ್ ।
ತಾನಿ ದರ್ಶಯ ರೂಪಾಣಿ ತ್ರಿವರ್ಣಾನಿ ಜನಾರ್ದನ ॥ ೫೨ ॥

ಇತ್ಯುಕ್ತಸ್ತೇನ ರಾಜೇಂದ್ರ ತ್ರಿವರ್ಣಸ್ತ್ರಿಯುಗೋ ಹರಿಃ
ತಸ್ಮೈ ತ್ರಿಯುಗವರ್ಣಾನಿ ತದಾ ರೂಪಾಣ್ಯದರ್ಶಯತ್ । ॥ ೫೩ ॥

ಶುಕ್ಲಂ ರೂಪಂ ಸುಧಾಕಾರಂ ಯೋಗಿಧ್ಯೇಯಂ ಕೃತೇ ಯುಗೇ ।
ರಕ್ತರೂಪಂ ಪ್ರವಾಲಾಭಂ ಧ್ಯೇಯಂ ತ್ರೇತಾಯುಗೇ ಬುಧೈಃ ॥ ೫೪ ॥

ಪೀತಂ ತು ರೂಪಂ ಹೇಮಾಭಂ ಧ್ಯೇಯಂ ತದ್ವಾಪರೇ ಸುರೈಃ ।
ಪ್ರಾದುರ್ಬಭೂವುರೇವಂ ತೇ ಪೀತರಕ್ತಸಿತಾಸ್ತ್ರಯಃ ॥ ೫೫ ॥

---

೫೨. ಜನಾರ್ದನ ಸ್ವಾಮಿಯೆ! ಶುಕ್ಲವರ್ಣ, ರಕ್ತವರ್ಣ, ಮತ್ತು ಪೀತ ವರ್ಣ ಎಂಬುದಾಗಿ ಮೂರು ವರ್ಣಗಳಿಂದ ಕೂಡಿ ಆಯಾಯ ಯುಗಗಳಲ್ಲಿ ಇರುವೆಯೆಂದು ಪ್ರಾಜ್ಞರಿಂದ ಸ್ಮರಿಸಲ್ಪಟ್ಟಿರುತ್ತೀ. ಆ ಮೂರು ವರ್ಣಗಳಿಂದ ರಂಜಿತವಾದ ರೂಪಗಳನ್ನು ನನಗೆ ತೋರಿಸು.

೫೩. ರಾಜೇಂದ್ರನೆ! ಭೃಗುಮುನಿಯಿಂದ ಈ ರೀತಿಯಾಗಿ ವಿಜ್ಞಾಪಿಸಲ್ಪಟ್ಟ ಯುಗತ್ರಯಾನುರೂಪವಾಗಿ ವರ್ಣತ್ರಯದಿಂದ ರಂಜಿತನಾಗಿರುವ ಹರಿಯು ಮೂರು ಯುಗಗಳಲ್ಲಿ ಇದ್ದ ಕ್ರಮವಾದ ಮೂರು ವರ್ಣಗಳಿಂದ ಕೂಡಿದ ರೂಪಗಳನ್ನು ತೋರಿಸಿದನು.

೫೪. ಆದಿಯಾದ ಕೃತಯುಗದಲ್ಲಿ ಯೋಗಿಶ್ರೇಷ್ಠರಿಂದ ಧ್ಯಾನಮಾಡಲ್ಪಡುವ ರೂಪಕ್ಕೆ ಸುಣ್ಣದಂತೆ ಶುಭ್ರವಾದ ವರ್ಣವಿರುವುದು, ತ್ರೇತಾಯುಗದಲ್ಲಿ ಜ್ಞಾನಿಗಳು ಧ್ಯಾನಮಾಡುವ ರೂಪವು ಕೆಂಪು ಬಣ್ಣದಿಂದ ಕೂಡಿಕೊಂಡಿರುವುದು.

೫೫. ದ್ವಾಪರಯುಗದಲ್ಲಿ ಹರಿಯಮೂರ್ತಿಯು ಸುವರ್ಣದಂತೆ ಪೀತವರ್ಣದಿಂದ ಕೂಡಿರುವುದು. ಅದನ್ನು ದೇವತೆಗಳು ಸರ್ವ ಕಾಲದಲ್ಲಿ ಧ್ಯಾನಿಸುವರು. ಹೀಗೆ ಪೀತ-ರಕ್ತ- ಶುಕ್ಲ ವರ್ಣಗಳಿಂದ ಕೂಡಿದ ಮೂರು ರೂಪಗಳು ಭೃಗುಮುನಿಯ ಪ್ರತ್ಯಕ್ಷದಲ್ಲಿ ಪ್ರಾದುರ್ಭವಿಸಿದುವು.

ತಾಂ ದದರ್ಶ ಭೃಗುರ್ದೇವಾಂ ಶಂಖಚಕ್ರಗದಾಧರಾಂ ।
ಪೀತಾಂಬರಧರಾಂ ದಿವ್ಯಕಿರೀಟಕಟಕೋಜ್ಜ್ವಲಾಂ ॥ ೫೬ ॥

ತಿಷ್ಠತಶ್ಚ ಶ್ರಿಯಾ ಸಾರ್ಧಂ ವಿಮಾನೇಷು ಪೃಥಕ್ ಪೃಥಕ್ ।
ಸ್ತೂಯಮಾನಾಂಶ್ಚ ಗಂಧರ್ವೈರ್ದೇವೈಶ್ಚ ಪರಮರ್ಷಿಭಿಃ ॥ ೫೭ ॥

ದೃಷ್ಟ್ವಾ ಭೃಗುಃ ಪ್ರಹೃಷ್ಟಾತ್ಮಾ ದೇವಾಂಸ್ತ್ರಿಗುಣರೂಪಿಣಃ ।
ಪ್ರಣಮ್ಯ ವಿವಿಧೈಃ ಸ್ತೋತ್ರೈಃ ಸ್ತುತ್ವಾ ವಾಕ್ಯಮುವಾಚ ಹ ॥ ೫೮ ॥

ಭವದ್ಭಿಸ್ತ್ರಿಭಿರತ್ರೈವ ದೇವೈಸ್ತ್ರಿಯುಗರೂಪಿಭಿಃ ।
ವಸ್ತವ್ಯಮನಿಶಂ ಕಾಂಚ್ಯಾಂ ಮಮ ಪ್ರಿಯಚಿಕೀರ್ಷಯಾ ॥ ೫೯ ॥

ಇತಿ ಸಂಪ್ರಾರ್ಥಯಂತಂ ತಂ ವಾಮನೋ ವಾಕ್ಯಮಬ್ರವೀತ್ ।
ಶ್ವೇತಪ್ರವಾಳಹೇಮಾಭಾಸ್ತ್ರಯ ಏತೇ ತಪೋಧನಂ ॥ ೬೦ ॥

---

೫೬. ಭೃಗುಮುನಿಯು ಶಂಖ-ಚಕ್ರ-ಗದೆಗಳನ್ನು ಧರಿಸಿರುವ, ಪೀತಾಂಬರವನ್ನು ಉಟ್ಟುಕೊಂಡಿರುವ ಮತ್ತು ಕಿರೀಟ, ಕಟಕ ಮುಂತಾದ ಭೂಷಣಗಳಿಂದ ಅಲಂಕರಿಸಲ್ಪಟ್ಟ ಆ ದೇವರೂಪಗಳನ್ನು ನೋಡಿದನು.

೫೭. ಆ ಅವತಾರಗಳು ಗಂಧರ್ವರಿಂದಲೂ, ದೇವತೆಗಳಿಂದಲೂ ಮತ್ತು ಮಹರ್ಷಿಗಳಿಂದಲೂ ಸ್ತುತಿಸಲ್ಪಡುತ್ತಿರುವುವುಗಳಾಗಿ ಲಕ್ಷ್ಮೀದೇವಿಯೊಡನೆ ವಿಮಾನಗಳಲ್ಲಿ ಬೇರೆಬೇರೆಯಾಗಿ ಇದ್ದಂತೆ ತೋರಿದವು.

೫೮. ಭೃಗುಮಹರ್ಷಿಯು ಯುಗತ್ರಯಕ್ಕೆ ತಕ್ಕ ರೂಪಗಳಿಂದ ಕೂಡಿದ ಮೂರ್ತಿತ್ರಯವೆಂಬ ದೇವರೂಪಗಳನ್ನು ನೋಡಿ ನಮಸ್ಕಾರಮಾಡಿ ನಾನಾವಿಧವಾದ ಸ್ತೋತ್ರಪಾಠಗಳಿಂದ ಸ್ತುತಿಸಿ ಮುಂದೆ ಹೇಳುವ ಮಾತನ್ನು ವಿಜ್ಞಾಪಿಸಿಕೊಂಡನು.

೫೯. ಮೂರು ಯುಗಗಳ ಪ್ರತ್ಯೇಕ ವರ್ಣಗಳಿಂದ ಕೂಡಿದ ಈ ಮೂರು ಮೂರ್ತಿ ಸ್ವರೂಪರಾದ ನೀವು ಈ ಕಾಂಚೀನಗರದಲ್ಲಿಯೇ ನನ್ನ ಪ್ರಿಯವನ್ನು ಉಂಟುಮಾಡಬೇಕೆಂಬ ಉದ್ದೇಶದಿಂದ ಯಾವಾಗಲೂ ವಾಸಮಾಡಬೇಕು.

೬೦. ಈ ರೀತಿಯಾಗಿ ಪ್ರಾರ್ಥಿಸುತ್ತಲಿದ್ದ ಆ ಭೃಗುಮುನಿಯನ್ನು ನೋಡಿ ವಾಮನದೇವನು ಈ ರೀತಿಯಾಗಿ ಉತ್ತರವಿತ್ತನು :—ತಪಸ್ವಿಯೆ! ಈ ಮೂರು ರೂಪಗಳು ಶುಭ್ರವರ್ಣ, ಚಿಗುರಿನ ಕೆಂಪುಬಣ್ಣ, ಹೊಂಬಣ್ಣಗಳಿಂದ ಕೂಡಿದವುಗಳಾಗಿವೆಯಲ್ಲವೆ.

ಸರ್ವಲೋಕಹಿತಾರ್ಥಾಯ ತವ ಚ ಪ್ರಿಯಕಾಮ್ಯಯಾ ।
ನಿವಸಂತ್ವಿಹ ವೈ ಕಾಂಚ್ಯಾಂ ಸಮ್ಯಗಾಚಂದ್ರತಾರಕಂ ॥ ೬೧ ॥

ಯ ಏತಾನ್ಮನುಜಃ ಪಶ್ಯೇತ್ ಕಾಂಚ್ಯಾಂ ಕಮಲಲೋಚನಾನ್ ।
ಸೋಽನುಭೂಯಾಖಿಲಾನ್ ಕಾಮಾನಂತೇ ಸಾಯುಜ್ಯಮಾಪ್ನುಯಾತ್

ಇತಿ ತಸ್ಯ ವಚಃ ಶ್ರುತ್ವಾ ವಾಮನಸ್ಯ ಭೃಗುಸ್ತದಾ ।
ಸಂಹೃಷ್ಟಮಾನಸೋ ಭೂತ್ವಾ ಕಾಮಿಕಾಮಿಷ್ಟಿಮಾರಭತ್ ॥ ೬೩ ॥

ಸುಧಾಪ್ರವಾಲಹೇಮಾಭಾಸ್ತ್ರಯ ಏತೇ ಹಿ ವಿಷ್ಣವಃ ।
ತತ್ರೈವ ಕಾಂಚ್ಯಾಮವಸನ್ ಕಾಮಕೋಷ್ಠೇ ಶುಭಪ್ರದೇ ॥ ೬೪ ॥

ಬಿಲಸ್ಯ ಕಾಮಕೋಷ್ಠಸ್ಯ ಸಮೀಪೇ ದಕ್ಷಿಣೇ ನೃಪ ।
ಪ್ರದೇಶೇ ನ್ಯವಸದ್ದೇವಸ್ಸುಧಾಕಾರಃ ಶುಭಪ್ರದಃ ॥ ೬೫ ॥

---

೬೧. ಈ ರೂಪಗಳು ನಿನ್ನ ಹಿತವನ್ನುಂಟುಮಾಡುವ ದೃಷ್ಟಿಯಿಂದಲೂ ಸಕಲ ಲೋಕಗಳ ಹಿತದೃಷ್ಟಿಯಿಂದಲೂ ಈ ಕಾಂಚೀನಗರದಲ್ಲಿ ವ್ಯಕ್ತವಾದ ರೂಪದಿಂದ ಚಂದ್ರ ಮತ್ತು ನಕ್ಷತ್ರಗಳು ಇರುವವರೆಗೂ ವಾಸಮಾಡಲಿ.

೬೨. ಯಾವ ಮಾನವನು ಈಕಮಲದಂತೆ ಸುಂದರವಾದ ನಯನಗಳುಳ್ಳಮೂರ್ತಿಗಳನ್ನು ಕಾಂಚೀನಗರದಲ್ಲಿ ಸಂದರ್ಶಿಸುವನೋ, ಅವನು ಸಮಗ್ರ ಭೋಗಗಳನ್ನು ಅನುಭವಿಸಿ ಅಂತಕಾಲದಲ್ಲಿ ವಿಷ್ಣುಪರಮಾತ್ಮನ ಸಾಯುಜ್ಯಮುಕ್ತಿಯನ್ನು ಹೊಂದುತ್ತಾನೆ.

೬೩. ಆಗ ಭೃಗುಮುನಿಯು ದಯಾಳುವಾದ ಆ ವಾಮನಮೂರ್ತಿಯ ವಚನವನ್ನು ಕೇಳಿ, ಸಂತುಷ್ಟವಾದ ಮಾನಸವುಳ್ಳವನಾಗಿ "ಕಾಮಿಕಾ" ಎಂಬ ಇಷ್ಟಿಯನ್ನು ಅನುಷ್ಠಾನಮಾಡಲು ಆರಂಭಿಸಿದನು

೬೪. ಸುಣ್ಣ, ಚಿಗುರು, ಚಿನ್ನಗಳಂತೆ ಶುಭ್ರ, ರಕ್ತ, ಪೀತವರ್ಣಗಳ ಕಾಂತಿಯಿಂದ ಕೂಡಿದ ಮೂರು ವಿಷ್ಣುಮೂರ್ತಿಗಳು ಆ ಕಾಂಚೀನಗರದಲ್ಲಿ ಮಂಗಲವನ್ನುಂಟುಮಾಡುವ ಕಾಮಕೋಷ್ಠಬಿಲದಲ್ಲಿ ವಾಸಮಾಡಿದರು.

೬೫. ರಾಜನೆ ! ಕಾಮಕೋಷ್ಠಬಿಲದ ದಕ್ಷಿಣದಿಕ್ಕಿನ ಸಮೀಪ ಪ್ರದೇಶದಲ್ಲಿ ಸುಧೆಯಂತೆ ಶುಭ್ರವರ್ಣದಿಂದ ಕೂಡಿದ, ಮಂಗಳವನ್ನು ಕೊಡುವ ಹರಿಯು ವಾಸಮಾಡಿದನು.

ಬಿಲಸ್ಯ ಪೂರ್ವದಿಗ್ಭಾಗೇ ಪ್ರವಾಲಾಭೋಽವಸದ್ಧರಿಃ ।
ಬಿಲಸ್ಯೋತ್ತರದಿಗ್ಭಾಗೇ ಹೇಮಾಭೋಽಪ್ಯಭವದ್ಧರಿಃ ॥ ೬೬ ॥

ಬಿಲದ್ವಾರೇ ವಾಮನೋಽಭೂತ್ಸರ್ವಕಾಮಪ್ರದೋ ನೃಣಾಂ ॥

ಪ್ರವಾಲವರ್ಣಸ್ಯ ಸುಧಾಕೃತೇಶ್ಚ
ತಥೈವ ಹೇಮಾಭತನೋರ್ಮುರಾರೇಃ ।
ಶೃಣ್ವಂತಿ ಯೇ ವೈ ಚರಿತಾನ್ಯಜಸ್ರಂ
ತೇ ಯಾಂತಿ ಮುಕ್ತಿಂ ಭುವಿ ಭುಕ್ತಭೋಗಾಃ ॥ ೬೭ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಏಕವಿಂಶೋಽಧ್ಯಾಯಃ

---

೬೬. ಆ ಬಿಲದ ಪೂರ್ವ ದಿಕ್ಕಿನ ಪ್ರದೇಶದಲ್ಲಿ ಚಿಗುರಿನ ಕೆಂಪು ಬಣ್ಣದಿಂದ ಕೂಡಿದ ಹರಿಯು ವಾಸಮಾಡಿದನು. ಹಾಗೆಯೇ ಬಿಲದ ಉತ್ತರ ದಿಕ್ಕಿನ ಪ್ರದೇಶದಲ್ಲಿ ಚಿನ್ನದಂತೆ ಪೀತಕಾಂತಿಯಿಂದ ಕೂಡಿದ ಹರಿಯು ವಾಸಮಾಡಿದನು. ಆ ಬಿಲದ ದ್ವಾರದಲ್ಲಿ ಮಾನವರ ಸಕಲ ಮನೋರಥಗಳನ್ನು ಪೂರ್ತಿಮಾಡುತ್ತ ವಾಮನದೇವನು ವಾಸಮಾಡಿದನು.

೬೭. ಈ ರೀತಿಯಾಗಿ ಚಿಗುರಿನಂತೆ ಕೆಂಪುಬಣ್ಣ, ಸುಣ್ಣದಂತೆ ಶುಭ್ರವರ್ಣ, ಚಿನ್ನದಂತೆ ಪೀತವರ್ಣದ ಕಾಂತಿಯಿಂದ ಕೂಡಿರುವ ಮುರಾಸುರ ಶತ್ರುವಾದ ವಿಷ್ಣುವಿನ ಚರಿತ್ರೆಗಳನ್ನು ಯಾರು ಯಾವಾಗಲೂ ಶ್ರವಣಮಾಡುವರೋ ಅವರು ಭೂಮಿಯಲ್ಲಿ ಸಕಲ ಸೌಖ್ಯವನ್ನು ಅನುಭವಿಸಿ ಅಂತದಲ್ಲಿ ಸುಖವನ್ನು ಹೊಂದುತ್ತಾರೆ.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ದ್ವಾವಿಂಶೋಽಧ್ಯಾಯಃ

ನಾರದ ಉವಾಚ:—

ವಾಮನಾನುಜ್ಞಯಾ ರಾಜನ್ ಕಾಮಕೋಷ್ಠೇ ಭೃಗುಸ್ತತಃ ।
ಚಕಾರ ಕಾಮಿಕಾಮಿಷ್ಟಿಮಿಂದಿರಾಪ್ರೀತಿಕಾರಣಾತ್ ॥ ೧ ॥

ಅಥರ್ವಶಿರಸಿ ಪ್ರೋಕ್ತೈರ್ಮಂತ್ರೈಃ ಸದ್ಯಃ ಫಲಪ್ರದೈಃ ।
ದಧ್ಯಕ್ಷತಕುಶೈರ್ಲಾಜೈಃ ಪುಷ್ಪಹಾರಿದ್ರಚಂದನೈಃ ॥ ೨ ॥

ಸಮ್ಯಗ್ವೇದಿಮಲಂಕೃತ್ಯ ತಾಮೇವ ಬಲಿನಿರ್ಮಿತಾಂ ।
ತಸ್ಯಾಮಗ್ನಿಂ ಸಮಾಧಾಯ ಸಂಕಲ್ಪ್ಯ ವಿಧಿವದ್ಭೃಗುಃ ॥ ೩ ॥

---

೧. ನಾರದಮುನಿಯು ಮುಂದುವರಿಸಿ ಉಪದೇಶಿಸಿದನು :—ರಾಜನೆ! ಆ ತರುವಾಯ ಭೃಗುಮುನಿಯು ವಾಮನದೇವನ ಆಜ್ಞೆಯಂತೆ ಕಾಮಕೋಷ್ಠದಲ್ಲಿ ಲಕ್ಷ್ಮೀದೇವಿಯ ಪ್ರೀತಿಯನ್ನು ಸಂಪಾದಿಸಲೋಸ್ಕರ ಕಾಮಿಕೇಷ್ಟಿಯನ್ನು ಆರಂಭಿಸಿದನು.

೨. ಆ ಇಷ್ಟಿಯಲ್ಲಿ ಅಥರ್ವವೇದದಲ್ಲಿ ಹೇಳಲ್ಪಟ್ಟಿರುವ ಸದ್ಯಃ ಫಲವನ್ನು ಉಂಟುಮಾಡುವ ವೀರ್ಯವತ್ತಾದ ಮಂತ್ರಗಳನ್ನು ಪ್ರಯೋಗಮಾಡಿದನು. ಮತ್ತು ದಧಿ, ಅಕ್ಷತ, ದರ್ಭೆ, ಅರಳು, ಹೂ, ಅರಿಸಿನ, ಚಂದನ ಮುಂತಾದ ಸಮಸ್ತೋಪಕರಣಗಳನ್ನು ಸಿದ್ಧಪಡಿಸಿಕೊಂಡಿದ್ದನು.

೩. ಭೃಗುಮುನಿಯು ಹಿಂದೆ ಬಲೀಂದ್ರನಿಂದ ಮಾಡಲ್ಪಟ್ಟಿರುವ ಆ ವೇದಿಯನ್ನು ಚನ್ನಾಗಿ ಅಲಂಕರಿಸಿ ಅಲ್ಲಿ ಅಗ್ನಿಯನ್ನು ಪ್ರತಿಷ್ಠೆಮಾಡಿ ವಿಧಿವತ್ತಾಗಿ ಸಂಕಲ್ಪ ಮಾಡಿದನು.

ಹವಿಷಾ ಪರಮಾನ್ನೇನ ಕಲ್ಹಾರೈಃ ಕಮಲೈರಪಿ ।
ಜುಹಾವ ಪ್ರಯತೋ ರಾಜನ್ ಸರ್ಪಿಷಾ ಚ ಫಲೈರಪಿ ॥ ೪ ॥

ಹವಿರ್ಭಿರೇತೈಃ ಸುಪ್ರೀತಾ ಲಕ್ಷ್ಮೀರ್ಭವತು ಮೇ ಸುತಾ ।
ಇತಿ ಲಕ್ಷ್ಮೀಂ ಸಮುದ್ದಿಶ್ಯ ಪ್ರಜುಹ್ವತಿ ಭೃಗೌ ತದಾ ॥ ೫ ॥

ಸಂತುಷ್ಟಾ ತತ್ರ ಕುಂಡಾಗ್ನೇರ್ಲಕ್ಷ್ಮೀಃ ಪ್ರಾದುರಭೂತ್ಕಿಲ ।
ದಿವ್ಯರೂಪಧರಾ ದೇವೀ ಸಾ ಕನ್ಯೇವಾಷ್ಟಹಾಯನೀ ॥ ೬ ॥

ದಿವ್ಯರೂಪಧರಾ ದಿವ್ಯಪುಷ್ಪಚಂದನಮಂಡಿತಾ ।
ತಸ್ಯಾಂ ತು ಜಾತಮಾತ್ರಾಯಾಮಗ್ನಿಕುಂಡಾದ್ಭೃಗೋರ್ಮಖೇ ॥ ೭ ॥

ಪುಷ್ಪವೃಷ್ಟಿರ್ಮಹತ್ಯಾಸೀದಂತರಿಕ್ಷಾತ್ ಸುಭಾಸ್ವರಾ ।
ತತೋ ದೇವರ್ಷಿಗಂಧರ್ವಾಃ ಸಮೇತ್ಯ ಭೃಗುಮಬ್ರುವನ್ ॥ ೮ ॥

---

೪. ರಾಜನೆ ! ಅನಂತರದಲ್ಲಿ ಭೃಗುಮುನಿಯು ಪಾಯಸವೆಂಬ ಹವಿಸ್ಸು, ಕಲ್ಹಾರವೆಂಬ ತಾವರೆ, ಆಜ್ಯ, ಮತ್ತು ನಾನಾವಿಧದ ಫಲಗಳಿಂದ ಪವಿತ್ರನಾಗಿದ್ದು ಕೊಂಡು ಹೋಮಮಾಡಿದನು.

೫. ಈ ಹವಿಸ್ಸುಗಳಿಂದ ಲಕ್ಷ್ಮೀದೇವಿಯು ಸುಪ್ರೀತಳಾಗಿ ನನಗೆ ಪುತ್ರಿಯಾಗಿ ಜನಿಸಲಿ ಎಂದು ಪ್ರಾರ್ಥಿಸಿ ಲಕ್ಷ್ಮೀದೇವಿಯನ್ನು ಕುರಿತು ಭೃಗುಮುನಿಯು ಹೋಮ ಮಾಡಿದನು.

೬. ಆಗ ಲಕ್ಷ್ಮೀದೇವಿಯು ಹವಿಸ್ಸುಗಳಿಂದ ಸಂತುಷ್ಟಳಾಗಿ ದಿವ್ಯರೂಪವನ್ನು ಧರಿಸಿದ ಎಂಟು ವರ್ಷದ ಕನ್ಯೆಯಂತೆ ಭೃಗುಮುನಿಯು ಯಜ್ಞಶಾಲೆಯಲ್ಲಿ ಅಗ್ನಿ ಕುಂಡದಿಂದ ಆವಿರ್ಭವಿಸಿದಳು.

೭. ಆಕನ್ಯೆಯು ದಿವ್ಯರೂಪಸಂಪನ್ನಳೂ, ದಿವ್ಯವಾದ ಪುಷ್ಪಮಾಲ್ಯ ಚಂದನಾದಿ ಅನುಲೇಪನಗಳಿಂದ ಶೋಭಿತಳೂ ಆಗಿ ಮುನಿಯ ಯಜ್ಞಶಾಲೆಯಲ್ಲಿ ಜನಿಸಿದಳು.

೮. ಈ ರೀತಿಯಲ್ಲಿ ಕನ್ಯೆಯು ಜನಿಸಿದ ಕೂಡಲೆ ಅತಿಯಾಗಿ ಪ್ರಕಾಶಿಸುವ ಭಾರಿಯಾದ ಪುಷ್ಪವೃಷ್ಟಿಯು ಉಂಟಾಯಿತು. ಆಗ ದೇವ-ಋಷಿ-ಗಂಧರ್ವರು ಎಲ್ಲರೂ ಮುನಿಯ ಸಮೀಪಕ್ಕೆ ಬಂದು ಈ ರೀತಿಯಾಗಿ ಹೇಳಿದರು.

ಸುತಾ ತವೈಷಾ ವಿಪ್ರೇಂದ್ರ ಬಭೂವೇಯಮಯೋನಿಜಾ ।
ಅನಯಾ ಲೋಕಧಾತ್ರ್ಯಾ ತ್ವಂ ಸರ್ವಾನ್ ಕಾಮಾನವಾಪ್ಸ್ಯಸಿ ॥ ೯ ॥

ಇತ್ಯುಕ್ತ್ವಾ ಸಂಪ್ರಹೃಷ್ಟಾಸ್ತೇ ಪುನರ್ಜಗ್ಮುರ್ಯಥಾಗತಂ ।
ವಾಮನೋಽಪಿ ಸಮುದ್ವೀಕ್ಷ್ಯ ತಾಂ ಕನ್ಯಾಂ ಕಮಲೇಕ್ಷಣಾಂ ॥ ೧೦ ॥

ಪ್ರಹರ್ಷಮತುಲಂ ಲೇಭೇ ಭೃಗುಂ ಚೈವಮುವಾಚ ಹ ।
ಸುತಾ ಭೂತ್ವಾ ತವೋತ್ಪನ್ನಾ ಸೈವ ದೇವೀ ಕಿಲಾಧುನಾ ॥ ೧೧ ॥

ಯಾ ರೋಷಾತ್ ಪೂರ್ವಮಶಪದ್ಭವಂತಂ ಕೃತಕಿಲ್ಬಿಷಂ ।
ಕ್ಷೇತ್ರಸ್ಯಾಸ್ಯ ಪ್ರಭಾವೇನ ಭಕ್ತ್ಯಾ ಚ ತವ ಸುವ್ರತ ॥ ೧೨ ॥

ಬಭೂವ ತ್ವಯಿ ಸಂತುಷ್ಟಾ ಭೃಶಮಿಷ್ಟ್ಯಾ ಚ ಕಾಮ್ಯಯಾ ।
ಅಭೂದಿಯಂ ಮಹಾಲಕ್ಷ್ಮೀರ್ಯತಸ್ತವ ಸುತಾ ಭೃಗೋ ॥ ೧೩ ॥

---

೯. ವಿಪ್ರೇಂದ್ರನೆ! ಈ ಕನ್ಯೆಯು ಅಯೋನಿಜೆಯಾದ ನಿನ್ನ ಪುತ್ರಿಯಾಗಿರುವಳು. ಲೋಕಮಾತೆಯಾದ ಈ ಪುತ್ರಿಯಿಂದ ನೀನು ಸರ್ವ ಕಾಮಗಳನ್ನು ಹೊಂದುತ್ತೀ.

೧೦. ಈರೀತಿಯಾಗಿ ದೇವಗಂಧರ್ವ ಮುಂತಾದವರು ಹೇಳಿ ಸಂತೋಷಪಟ್ಟು ತಮ್ಮ ಸ್ಥಾನಕ್ಕೆ ಹಿಂತಿರುಗಿ ಹೋದರು. ವಾಮನಮೂರ್ತಿಯು ಕಮಲದಂತೆ ಸುಂದರನಯನವುಳ್ಳ ಆ ಕನ್ಯೆಯನ್ನು ನೋಡಿದನು.

೧೧. ಮತ್ತು ಅತಿಯಾಗಿ ಸಂತೋಷಪಟ್ಟವನಾಗಿ ಭೃಗುಮುನಿಯನ್ನು ಕುರಿತು ಈ ರೀತಿಯಾಗಿ ಹೇಳಿದನು. ಆ ದೇವಿಯೇ ಈಗ ನಿನಗೆ ಪುತ್ರಿಯಾಗಿ ಈ ಯಜ್ಞಕುಂಡದಿಂದ ಜನಿಸಿದಳು.

೧೨. ವ್ರತತತ್ಪರನೆ! ಯಾವ ಲಕ್ಷ್ಮೀದೇವಿಯು ಕೋಪದಿಂದ ಪೂರ್ವದಲ್ಲಿ ಅಪರಾಧಿಯಾದ ನಿನ್ನನ್ನು ಶಪಿಸಿದಳೋ ಆ ದೇವಿಯು ಈ ಪವಿತ್ರಕ್ಷೇತ್ರದ ಪ್ರಭಾವದಿಂದಲೂ ಮತ್ತು ನಿನ್ನ ಭಕ್ತಿಯ ಅತಿಶಯದಿಂದಲೂ ಈ ರೀತಿಯಾಗಿ ಸುಪ್ರೀತಳಾಗಿರುವಳು.

೧೩. ಭೃಗುಮುನಿಯೇ! ಈ ದೇವಿಯು ನಿನಗೆ ಪುತ್ರಿಯಾಗಿ ಜನಿಸಿದುದರಿಂದ ಮಹಾಲಕ್ಷ್ಮಿಯು ನೀನು ಮಾಡಿರುವ ಕಾಮ್ಯವಾದ ಇಷ್ಟಿಯಿಂದ ನಿನ್ನಲ್ಲಿ ಅತಿಶಯವಾಗಿ ಸಂತುಷ್ಟಳಾಗಿರುವಳೆಂದು ತಿಳಿಯಬೇಕು.

ಅಥೋ ನಾಮ್ನಾ ಭಾರ್ಗವೀತಿ ಲೋಕೇ ಖ್ಯಾತಿಂ ಗಮಿಷ್ಯತಿ ।
ದಿಷ್ಟ್ಯಾ ತ್ವಂ ಕೃತಕೃತ್ಯೋಽಸಿ ಮುಕ್ತಶಾಪಶ್ಚ ನಿರ್ವೃತಃ ॥ ೧೪ ॥

ನ ಕೇವಲಂ ತವಾರ್ಥಾಯ ಸಮುತ್ಪನ್ನಾ ತು ಭೂತಲೇ ।
ನರಾಣಾಮಪಿ ಸರ್ವೇಷಾಮಿಯಂ ದಾತುಂ ಕಿಲೇಪ್ಸಿತಂ ॥ ೧೫ ॥

ಅಸ್ಮಾದಿಯಂ ಯಜ್ಞಕುಂಡಾತ್ಪ್ರಾದುರಾಸೀದ್ಯತೋ ರಮಾ ।
ಅತಃ ಕುಂಡಂ ಭವತ್ವೇತತ್ತೀರ್ಥಂ ಪರಮಪಾವನಂ ॥ ೧೬ ॥

ಲಕ್ಷ್ಮೀತೀರ್ಥಮಿತಿ ಖ್ಯಾತಂ ಸರ್ವಸಂಪತ್ಕರಂ ನೃಣಾಂ ।
ಇತ್ಯುಕ್ತ್ವಾ ವಾಮನೋ ರಾಜಂಸ್ತತ್ಕುಂಡಂ ತೀರ್ಥಮುತ್ತಮಂ॥ ೧೭ ॥

ಕರ್ತುಕಾಮಸ್ತದಾ ತೋಯಂ ವ್ಯಸೃಜತ್ ಸ್ವಕಮಂಡಲೋಃ ।
ವಾಮನೇನೋದಕಂ ಸೃಷ್ಟಂ ಕುಂಡೇ ವೈತಾನಿಕೇ ಯತಃ ॥ ೧೮ ॥

---

೧೪. ನಿನಗೆ ಪುತ್ರಿಯಾಗಿ ಜನಿಸಿದುದರಿಂದ ಇವಳು ಭೃಗುಮುನಿಯ ಮಗಳೆಂಬ ಅರ್ಥವನ್ನು ಬೋಧಿಸುವ ಭಾರ್ಗವಿ ಎಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧಳಾಗುವಳು. ನೀನು ಕೃತಕೃತ್ಯನೂ ಶಾಪದಿಂದ ಮುಕ್ತನೂ ಆಗಿರುವುದರಿಂದ ನೀನು ಸುಖಿಯಾಗಿರುತ್ತಿ.

೧೫. ಈ ದೇವಿಯು ನಿನ್ನ ಒಬ್ಬನ ಹಿತಸಾಧನೆಗಾಗಿ ಭೂಮಿಯಲ್ಲಿ ಹುಟ್ಟಿರುವುದಿಲ್ಲ. ಲೋಕದಲ್ಲಿ ಸಕಲ ಭಕ್ತಮಾನವರಿಗೆ ಇಷ್ಟವನ್ನು ಅನುಗ್ರಹಿಸಲು ಹುಟ್ಟಿರುವಳೆಂದು ತಿಳಿ.

೧೬. ಲಕ್ಷ್ಮೀದೇವಿಯು ಈ ಯಜ್ಞಕುಂಡದಿಂದ ಪ್ರಾದುರ್ಭಾವವನ್ನು ಹೊಂದಿರುವುದರಿಂದ ಈ ಕುಂಡವು ಇನ್ನು ಮುಂದೆ ಪರಮಪಾವನವಾದ ತೀರ್ಥರೂಪವಾಗಿ ಪರಿಣಮಿಸಲಿ.

೧೭. ಇದು ಭಕ್ತರಿಗೆ ಸಕಲ ಸಂಪತ್ತುಗಳನ್ನುಂಟುಮಾಡುವ ಲಕ್ಷ್ಮೀತೀರ್ಥವೆಂದು ಪ್ರಸಿದ್ಧಹೊಂದಲಿ. ರಾಜನೆ! ಈ ರೀತಿಯಾಗಿ ವಾಮನದೇವನು ಹೇಳಿ ಆ ಕುಂಡವನ್ನು ಉತ್ತಮತೀರ್ಥವಾಗುವಂತೆ ಯತ್ನಿಸಿದನು.

೧೮. ಅದಕ್ಕೋಸ್ಕರ ಆ ಯಜ್ಞಸಂಬಂಧಿಯಾದ ಕುಂಡದಲ್ಲಿ ನೀರನ್ನು ಸಂಪಾದಿಸಲು ವಾಮನಮೂರ್ತಿಯು ತನ್ನ ಕಮಂಡಲುವಿನಿಂದ ನೀರನ್ನು ಅಲ್ಲಿ ಸೃಷ್ಟಿಸಿದನು.

ಅತಸ್ತತ್ತೀರ್ಥಮತುಲಂ ಬಭೂವ ಭುವಿ ಪಾವನಂ ।
ತೀರ್ಥಸ್ಯ ಪಂಚ ನಾಮಾನಿ ಸಂತಿ ತಸ್ಯ ಪುನರ್ನೃಪ ॥ ೧೯ ॥

ಶೇಷತೀರ್ಥಂ ಬಲೇಸ್ತೀರ್ಥಂ ಭಾರ್ಗವಾಖ್ಯಂ ಚ ವಾಮನಂ ।
ಶ್ರೀತೀರ್ಥಮಿತಿ ಯತ್ತಸ್ಮಾತ್ ಪಂಚತೀರ್ಥಮುದಾಹೃತಂ ॥ ೨೦ ॥

ಕಾಮಕೋಷ್ಠೇ ಪಂಚತೀರ್ಥೇ ಕಾಂಚ್ಯಾಂ ಸ್ನಾತಿ ನರೋ ಯದಿ ।
ಪಶ್ಯೇದ್ವಾಮನಮೀಶಾನಂ ಸರ್ವಾನ್ ಕಾಮಾನವಾಪ್ನುಯಾತ್ ॥ ೨೧ ॥

ತತೋ ಭೃಗುಃ ಸುತಾಂ ಲಬ್ಧ್ವಾ ತಾಂ ದೇವೀಮನಲೋದ್ಭವಾಂ ।
ಪ್ರಹೃಷ್ಟಃ ಸ್ವಾಂಕಮಾರೋಪ್ಯ ಪರಿಷ್ವಜ್ಯ ಮುಹುರ್ಮುಹುಃ ॥ ೨೨ ॥

ಪುತ್ರೀಂ ಶಿರಸ್ಯುಪಾಘ್ರಾಯ ಕೃತಾರ್ಥಃ ಪ್ರಮುಮೋದ ಹ ।
ಲಬ್ಧಜ್ಞಾನೋ ಲಬ್ಧಧನೋ ಬಭೂವ ಶ್ರೀಕಟಾಕ್ಷತಃ ॥ ೨೩ ॥

---

೧೯. ಹೀಗೆ ವಾಮನದೇವನಿಂದ ಸೃಷ್ಟಿಯಾಗಿರುವುದರಿಂದ ಆ ತೀರ್ಥವು ಭೂಮಿಯಲ್ಲೆಲ್ಲ ಪಾವನವಾದ ತೀರ್ಥವಾಯಿತು.

೨೦. ರಾಜನೆ! ಆ ತೀರ್ಥಕ್ಕೆ ಪವಿತ್ರವಾದ ಐದು ನಾಮಧೇಯಗಳಿವೆ. ಶೇಷತೀರ್ಥ, ಬಲಿತೀರ್ಥ, ಭಾರ್ಗವತೀರ್ಥ, ವಾಮನತೀರ್ಥ ಮತ್ತು ಲಕ್ಷ್ಮೀತೀರ್ಥ ವೆಂಬುವು ಆ ತೀರ್ಥದ ಪಂಚನಾಮಗಳು, ಈ ಪಂಚನಾಮಾಂಕಿತವಾದುದರಿಂದ ಪಂಚ ತೀರ್ಥವೆಂದು ಪ್ರಸಿದ್ಧವಾಯಿತು.

೨೧. ಮಾನವನು ಕಾಂಚೀನಗರದಲ್ಲಿರುವ ಕಾಮಕೋಷ್ಠದ ಈ ಪಂಚ ತೀರ್ಥದಲ್ಲಿ ಸ್ನಾನಮಾಡಿದರೆ ವಾಮನಮೂರ್ತಿಯಾದ ಸರ್ವೇಶ್ವರನನ್ನು ಸಾಕ್ಷಾತ್ಕರಿಸಿ ಸಕಲ ಕಾಮ್ಯಫಲಗಳನ್ನು ಹೊಂದುತ್ತಾನೆ.

೨೨. ಅನಂತರದಲ್ಲಿ ಅಗ್ನಿಕುಂಡದಲ್ಲಿ ಪ್ರಾದುರ್ಭವಿಸಿದ ದೇವಿಯನ್ನು ಭೃಗುಮುನಿಯು ಪುತ್ರಿಯನ್ನಾಗಿ ಹೊಂದಿ ಅತ್ಯಾನಂದಪಟ್ಟವನಾಗಿ ತನ್ನ ತೊಡೆಯ ಮೇಲೆ ಮಗಳನ್ನು ಎತ್ತಿಕೊಂಡು ಮತ್ತೆ ಮತ್ತೆ ಅಪ್ಪಿಕೊಂಡು ಮುದ್ದಾಡಿಸಿದನು.

೨೩. ಮತ್ತು ಆ ಪುತ್ರಿಯನ್ನು ಶಿರಸ್ಸಿನಲ್ಲಿ ಆಘ್ರಾಣಮಾಡಿ ಕೃತಕೃತ್ಯನಾಗಿ ಆನಂದಪಟ್ಟನು ಮತ್ತು ಶ್ರೀದೇವಿಯ ಕಟಾಕ್ಷಬಲದಿಂದ ಜ್ಞಾನ ಮತ್ತು ಧನಗಳನ್ನು ಹೊಂದಿದವನಾದನು.

ತತಃ ಸಮಾಪ್ಯ ವಿಧಿವದಿಷ್ಟಿಂ ತಾಂ ಕಮಲಾಪ್ರಿಯಾಂ ।
ಲಾಲಯನ್ ಸತತಂ ಪುತ್ರೀಂ ತತ್ರೈವಾಸೀದ್ದ್ವಿಜೋತ್ತಮಃ ॥ ೨೪ ॥

ಸಾಪಿ ತಂ ಪಿತರಂ ದೇವೀ ಮನ್ಯಮಾನಾ ಭೃಗುಂ ತದಾ ।
ಶುಶ್ರೂಷಂತೀ ಚ ಪಿತರಂ ಫಲೈರ್ಮೂಲೈರ್ಜಲೈರಪಿ ॥ ೨೫ ॥

ಬ್ರುವಂತೀ ತಾತ ತಾತೇತಿ ನಂದಯಂತೀ ಭೃಗುಂ ಗುಣೈಃ ।
ಏವಂ ಸಾ ನ್ಯವಸದ್ರಾಜನ್ ಪಿತೃಶುಶ್ರೂಷಣೇ ರತಾ ॥ ೨೬ ॥

ಕಾಮುಕೋಷ್ಠೇ ಬಿಲದ್ವಾರೇ ಪಶ್ಯಂತೀ ವಾಮನಂ ಸದಾ ।
ತತಃ ಕದಾಚಿತ್ಕಾಲೇನ ಸುತಾಂ ಸಂಪ್ರಾಪ್ತಯೌವನಾಂ ॥ ೨೭ ॥

ದೃಷ್ಟ್ವಾ ಪ್ರೋವಾಚ ವಚನಂ ಭೃಗುಸ್ತತ್ಪ್ರಿಯಕಾಮ್ಯಯಾ ।
ಮದ್ವಾಕ್ಯಂ ಶೃಣು ವತ್ಸೇ ತ್ವಂ ಯದ್ಬ್ರವೀಮಿ ಹಿತಂ ತವ ॥ ೨೮ ॥

---

೨೪. ಅನಂತರ ಲಕ್ಷ್ಮೀದೇವಿಗೆ ಪ್ರಿಯವಾದ ಆ ಕಾಮ್ಯೇಷ್ಟಿಯನ್ನು ಸಮಾಪ್ತಿಗೊಳಿಸಿ ಆ ವಿಪ್ರೋತ್ತಮನು ಪುತ್ರಿಯನ್ನು ಲಾಲನಮಾಡುತ್ತ ಅಲ್ಲಿಯೇ ವಾಸ ಮಾಡಿದನು.

೨೫. ಆಗ ಲಕ್ಷ್ಮೀದೇವಿಯೂ ಕೂಡ ಭೃಗುಮುನಿಯನ್ನು ಜನಕನನ್ನಾಗಿ ತಿಳಿದುಕೊಂಡು ಮುನಿಗೆ ಅವಶ್ಯವಾಗಿ ಬೇಕಾದ ಫಲ-ಮೂಲ-ಜಲಗಳನ್ನು ತಂದುಕೊಟ್ಟು ಪಿತೃ ಶುಶ್ರೂಷೆಯನ್ನು ಮಾಡಿದಳು.

೨೬. ರಾಜನೆ! ಮತ್ತು ಭಕ್ತಿಯಿಂದಲೂ, ಪ್ರೇಮದಿಂದಲೂ ತಂದೆಯನ್ನು ತಾತ, ತಾತ ಎಂದು ಅನೇಕ ಬಾರಿ ಕರೆದು ತನ್ನ ಸದ್ಗುಣಗಳಿಂದ ಮುನಿಯನ್ನು ಸಂತೋಷಪಡಿಸುತ್ತ ಪಿತೃಶುಶ್ರೂಷಾತತ್ಪರಳಾಗಿ ಅಲ್ಲಿಯೇ ಕಾಲವನ್ನು ಕಳೆದಳು.

೨೭. ಭಾರ್ಗವಿಯು ಯಾವಾಗಲೂ ಕಾಮಕೋಷ್ಠವೆಂಬ ಬಿಲದ್ವಾರದಲ್ಲಿ ವಾಮನಮೂರ್ತಿಯನ್ನು ನೋಡುತ್ತ ಪಿತೃಶುಶ್ರೂಷೆಯನ್ನು ಮಾಡುತ್ತ ಕೆಲವು ಕಾಲ ಕಳೆದ ತರುವಾಯ ಒಂದಾನೊಂದು ಕಾಲದಲ್ಲಿ ಮಗಳು ಯೌವನಾವಸ್ಥೆಗೆ ಬಂದಿರುವುದನ್ನು ತಂದೆಯು ಕಂಡನು.

೨೮. ಮತ್ತು ಮುನಿಯು ಮಗಳ ಹಿತಾಚರಣೆಯ ದೃಷ್ಟಿಯಿಂದ ಮಗಳನ್ನು ಕುರಿತು ಹೀಗೆ ಹೇಳಿದನು, ಮಗಳೇ! ನಿನ್ನ ಹಿತಕ್ಕೋಸ್ಕರವಾಗಿ ಹೇಳುವ ನನ್ನ ಒಂದು ಮಾತನ್ನು ಕೇಳು.

ವಸತ್ಯತ್ರ ಬಿಲದ್ವಾರೇ ವಾಮನಃ ಪುರುಷೋತ್ತಮಃ ।
ತಮೇವ ತ್ವಂ ಸಮಾರಾಧ್ಯ ಪತಿಂ ವರಯ ಸುವ್ರತೇ ॥ ೨೯ ॥

ವೃತೇ ತಸ್ಮಿಂಸ್ತ್ವಯಾ ದೇವೇ ಸೋಽಪಿ ತ್ವಾಮುದ್ವಹಿಷ್ಯತಿ ।
ವಾಮನೇನ ಕೃತೋದ್ವಾಹಾಂ ದೃಷ್ಟ್ವಾ ತ್ವಾಂ ವರವರ್ಣಿನೀಂ ॥ ೩೦ ॥

ಕೃತಾರ್ಥೋಽಹಂ ಪ್ರಹೃಷ್ಟಶ್ಚ ಭವೇಯಂ ನಾತ್ರ ಸಂಶಯಃ ।
ಇತಿ ಬ್ರುವಾಣಸ್ಯ ಪಿತುರ್ವಚನಂ ತಚ್ಛುಭಾನನಾ ॥ ೩೧ ॥

ಶ್ರುತ್ವಾ ಸಂಹೃಷ್ಟವದನಾ ಪ್ರಣಮ್ಯ ಪಿತರಂ ಮುದಾ ।
ಸಿಷೇವೇ ವಾಮನಂ ಗತ್ವಾ ಪರಯಾ ಗುಣಸಂಪದಾ ॥ ೩೨ ॥

ಆತ್ಮಾನಮುಪಸೇವಂತೀಂ ಪತಿಕಾಮಾಂ ಚ ಭಾರ್ಗವೀಂ ।
ಉದ್ವೀಕ್ಷ್ಯ ವಾಮನೋ ಲಕ್ಷ್ಮೀಮುವಾಚ ವಚನಂ ತದಾ ॥ ೩೩ ॥

---

೨೯. ಈ ಸ್ಥಳದಲ್ಲಿ ಬಿಲದ ದ್ವಾರದಲ್ಲಿ ಪುರುಷೋತ್ತಮನೆಂದು ಕರೆಯಲ್ಪಡುವ ವಾಮನನು ವಾಸಮಾಡಿಕೊಂಡಿರುವನು. ವ್ರತನಿಯಮಗಳಲ್ಲಿ ಪ್ರೀತಿಯುಳ್ಳವಳೆ! ಅವನನ್ನು ನೀನು ಆರಾಧಿಸಿ ಪತಿಯನ್ನಾಗಿ ವರಿಸು.

೩೦. ಹಾಗೆ ನೀನು ವಾಮನನನ್ನು ಪತಿಯನ್ನಾಗಿ ವರಿಸಲಾಗಿ ವಾಮನದೇವನು ನಿನ್ನನ್ನು ಮದುವೆಯಾಗುವನು. ಆಗ ವಾಮನಮೂರ್ತಿಯೊಡನೆ ವಿವಾಹಿತಳಾಗಿ ಸೌಭಾಗ್ಯದಿಂದ ಇರುವ ನಿನ್ನನ್ನು ನಾನು ನೋಡುತ್ತೇನೆ.

೩೧. ಆಗ ನಾನು ಧನ್ಯನಾಗುವೆನು. ಈ ವಿಷಯದಲ್ಲಿ ಸಂಶಯವಿಲ್ಲ. ಶುಭ ಲಕ್ಷಣಗಳಿಂದ ಕೂಡಿದ ಮುಖವುಳ್ಳ ಸುಂದರಿಯಾದ ಭಾರ್ಗವಿಯು ತಂದೆಯು ಹೇಳಿರುವ ಈ ಮಾತನ್ನು ಕೇಳಿದಳು.

೩೨. ಅನಂತರ ಸಂತೋಷಪೂರ್ಣವಾದ ಮುಖವುಳ್ಳವಳಾಗಿ ತಂದೆಯನ್ನು ಪ್ರೀತಿಯಿಂದ ವಂದಿಸಿ ತನ್ನ ಉಜ್ಜ್ವಲವಾದ ಸದ್ಗುಣಸಂಪತ್ತಿನಿಂದ ವಾಮನನ ಬಳಿಗೆ ಹೋಗಿ ಅವನನ್ನು ಸೇವಿಸಿದಳು.

೩೩. ವಾಮನಮೂರ್ತಿಯು ಈ ರೀತಿಯಾಗಿ ಭಾರ್ಗವೀದೇವಿಯು ಪತಿವರಣ ಸಂಕಲ್ಪವುಳ್ಳವಳಾಗಿ ತನ್ನನ್ನು ಸೇವಿಸುತ್ತಿದ್ದದನ್ನು ನೋಡಿ ಆ ಲಕ್ಷ್ಮೀದೇವಿಯನ್ನು ಕುರಿತು ಈ ಮಾತನ್ನು ಆಡಿದನು.

ತ್ವಯಾ ವಿಚಿಂತಿತಂ ಕಾಮಮಹಂ ಜಾನಾಮಿ ಭಾರ್ಗವಿ ।
ಯಮರ್ಥಂ ತ್ವಮಿಹೋದ್ದಿಶ್ಯ ಮಾಮರ್ಚಯಸಿ ಸುವ್ರತೇ ॥ ೩೪ ॥

ತಸ್ಯೈವಾರ್ಥಸ್ಯ ಲಾಭಾಯ ಶೃಣು ವಕ್ಷ್ಯಾಮಿ ತೇ ಹಿತಂ ।
ಶ್ವೇತದ್ವೀಪೇ ಪುರಾ ವಿಪ್ರಂ ಮದ್ಭಕ್ತಂ ಸಮುಪಾಗತಂ ॥ ೩೫ ॥

ಮದಾಜ್ಞಯಾ ವಿನಾ ರೋಷಾದಶಪಸ್ತ್ವಂ ಯತೋ ಭೃಗುಂ ।
ಅತೋऽಹಮೇವ ರೋಷಾತ್ತ್ವಾಂ ತಸ್ಯೈವಾಕರವಂ ಸುತಾಂ ॥ ೩೬ ॥

ತದದ್ಯ ಹಸ್ತಿಶೈಲಾಗ್ರೇ ವರದಂ ಮಾಮುಪಸ್ಥಿತಂ ।
ಸಂಪೂಜಯಸ್ವ ಕಮಲೈರ್ವರ್ಷಮೇಕಂ ನಿರಂತರಂ ॥ ೩೭ ॥

ತೇನಾಹಂ ಸುಪ್ರಸನ್ನಸ್ತೇ ಪಾಣಿಂ ಗೃಹ್ಣಾಮಿ ಶೋಭನೇ ।
ಇತ್ಯುಕ್ತ್ವಾ ಸಾ ತದಾ ತೇನ ವಾಮನೇನ ಮಹಾತ್ಮನಾ ॥ ೩೮ ॥

---

೩೪. ಭಾರ್ಗವಿದೇವಿಯೇ! ನೀನು ಮನಸ್ಸಿನಲ್ಲಿ ಚಿಂತಿಸಿರುವ ಕಾಮವನ್ನು ನಾನು ತಿಳಿದಿರುವೆನು. ವ್ರತಾನುಷ್ಠಾನಪರಳೆ! ನೀನು ಯಾವ ಅರ್ಥವನ್ನು ಹೊಂದಲು ಆಶೆಯುಳ್ಳವಳಾಗಿ ಇಲ್ಲಿ ನನ್ನನ್ನು ಅರ್ಚಿಸುತ್ತಿರುವೆಯೋ ಅವನ್ನು ನಾನು ತಿಳಿದಿರುವೆನು.

೩೫. ಆದರೆ ಆ ಅರ್ಥವು ನೆರವೇರುವುದಕ್ಕೋಸ್ಕರವೆ ನಿನಗೊಂದು ಹಿತ ಮಾರ್ಗವನ್ನು ಉಪದೇಶಿಸುತ್ತೇನೆ ಕೇಳು. ಹಿಂದೆ ನೀನು ಶ್ವೇತದ್ವೀಪದಲ್ಲಿ ಶ್ರೀಮನ್ನಾರಾಯಣನ ಸಮೀಪದಲ್ಲಿ ಮಹಾಲಕ್ಷ್ಮಿಯಾಗಿ ನೀನು ಇರುವಾಗ ನನ್ನ ಭಕ್ತನೊಬ್ಬನು ಬಂದನು.

೩೬. ಆ ಭಕ್ತನಾದ ಭೃಗುಮುನಿಯನ್ನು ನನ್ನ ಆಜ್ಞೆಯಿಲ್ಲದೆ ಕೋಪದಿಂದ ನೀನು ಶಪಿಸಿದೆ. ಆಗ ನಾನು ನಿನ್ನಲ್ಲಿ ಕುಪಿತನಾಗಿ ಆ ಭಕ್ತನಿಗೆ ಪುತ್ರಿಯಾಗಿ ಹುಟ್ಟು ವಂತೆ ನಿನ್ನನ್ನು ಶಪಿಸಿದೆನು.

೩೭. ಆದುದರಿಂದ ಈಗ ನೀನು ಹಸ್ತಿಪರ್ವತದ ಅಗ್ರಭಾಗದಲ್ಲಿ ವರದರೂಪ ದಿಂದ ಸನ್ನಿಧಿಗೆ ಬಂದ ನನ್ನನ್ನು ಬಿಡದೆ ಕಮಲಪುಷ್ಪಗಳಿಂದ ಒಂದು ವರ್ಷಕಾಲ ದವರೆಗೆ ಪೂಜೆಮಾಡು.

೩೮. ಮಂಗಳಕರಳೇ, ಆ ನಿನ್ನ ಸೇವೆಯಿಂದ ನಾನು ನಿನ್ನಲ್ಲಿ ಪ್ರಸನ್ನನಾಗಿ ನಿನ್ನ ಪಾಣಿಯನ್ನು ಗ್ರಹಿಸುವೆನು. ಹೀಗೆಂದು ಮಹಾತ್ಮನಾದ ವಾಮನಮೂರ್ತಿ ಯಿಂದ ಆ ಭಾರ್ಗವೀದೇವಿಯು ಹೇಳಲ್ಪಟ್ಟಳು.

ಪ್ರಣಮ್ಯ ವಾಮನಂ ದೇವಂ ಯಯೌ ಹಸ್ತಿಗಿರಿಂ ಪ್ರತಿ ।
ಪುತ್ರ್ಯಾ ಸಹ ಭೃಗುಶ್ಚಾಪಿ ಪ್ರಯಯೌ ವಾಮನಾಜ್ಞಯಾ ॥ ೩೯ ॥

ತತ್ರ ನಿರ್ಮಾಯ ವಿಪುಲಂ ಸರಃ ಪರಮಭಾಸ್ವರಂ ।
ತದುತ್ಥಿತೈಶ್ಚ ಹೇಮಾಬ್ಜೈರರ್ಚಯಾಮಾಸ ಕೇಶವಂ ॥ ೪೦ ॥

ವರದಂ ಹಸ್ತಿಶೈಲಾಗ್ರೇ ತಿಷ್ಠಂತಂ ಸರ್ವಕಾಮದಂ ।
ತತಃ ಸಂವತ್ಸರಸ್ಯಾಂತೇ ವರದೋ ಭಕ್ತವತ್ಸಲಃ ॥ ೪೧ ॥

ಜಗ್ರಾಹ ಪಾಣಿಂ ಭಾರ್ಗವ್ಯಾಃ ಪ್ರಸನ್ನೇನಾಂತರಾತ್ಮನಾ ।
ಭೃಗುಶ್ಚಾಪಿ ಪ್ರಹೃಷ್ಟಾತ್ಮಾ ಪ್ರಣಮ್ಯ ವರದಂ ಹರಿಂ ॥ ೪೨ ॥

ಪುತ್ರೀಂ ದೃಷ್ಟ್ವಾ ಕೃತೋದ್ವಾಹಾಂ ಕೃತಾರ್ಥಃ ಪ್ರಮುಮೋದ ಹ ।
ತದ್ಧಿ ಹೇಮಾಬ್ಜಕಂ ನಾಮ ತೀರ್ಥಂ ಪಾಪಪ್ರಣಾಶನಂ ॥ ೪೩ ॥

---

೩೯. ಮತ್ತು ವಾಮನದೇವನನ್ನು ನಮಸ್ಕರಿಸಿ ಹಸ್ತಿಶೈಲವನ್ನು ಕುರಿತು ಹೋದಳು. ಹಾಗೆಯೇ ವಾಮನನ ಆಜ್ಞೆಯಿಂದ ಭೃಗುಮುನಿಯು ಪುತ್ರಿಯ ಜೊತೆಗೆ ಶೈಲಾಗ್ರಕ್ಕೆ ಹೋದನು.

೪೦. ಅಲ್ಲಿ ಭಾರ್ಗವಿಯು ಉತ್ತಮವಾಗಿ ಪ್ರಕಾಶಿಸುವ ಒಂದು ವಿಸ್ತಾರವಾದ ಸರೋವರವನ್ನು ನಿರ್ಮಿಸಿ ಅಲ್ಲಿ ಹುಟ್ಟಿ ಬೆಳೆದ ಚಿನ್ನದ ಕಮಲಪುಷ್ಪಗಳಿಂದ ವಿಷ್ಣು ಪರಮಾತ್ಮನನ್ನು ಪೂಜಿಸಿದಳು.

೪೧. ಹಸ್ತಿಶೈಲದ ಅಗ್ರದಲ್ಲಿ ವಾಸಮಾಡುವ ಮತ್ತು ಸಕಲ ಕಾಮಗಳನ್ನು ಪೂರ್ತಿಮಾಡಿಕೊಡುವ ವರದಸ್ವಾಮಿಯನ್ನು ಈ ರೀತಿಯಾಗಿ ಪೂಜಿಸುತ್ತ ಒಂದು ಸಂವತ್ಸರ ಕಳೆದ ಅನಂತರ ಭಕ್ತವತ್ಸಲನಾದ ವರದಸ್ವಾಮಿಯು ಪ್ರತ್ಯಕ್ಷವಾಗಿ ಬಂದನು.

೪೨. ಮತ್ತು ಪ್ರಸನ್ನವಾದ ಅಂತಃಕರಣದಿಂದ ಭಾರ್ಗವೀದೇವಿಯನ್ನು ಪಾಣಿಗ್ರಹಣಮಾಡಿಕೊಂಡನು. ಭೃಗುಮುನಿಯು ಆಗ ಸಂತುಷ್ಟವಾದ ಅಂತಃಕರಣ ದಿಂದ ವರದಸ್ವಾಮಿಯ ಆಕಾರದಿಂದಿರುವ ಹರಿಯನ್ನು ನಮಸ್ಕರಿಸಿದನು.

೪೩. ಮತ್ತು ಮಹಾತ್ಮನಾದ ಪತಿಯೊಡನೆ ಮದುವೆಯಾಗಿರುವ ಪುತ್ರಿ ಯನ್ನು ನೋಡಿ ಕೃತಾರ್ಥನಾಗಿ ಸಂತೋಷಪಟ್ಟನು. ಅಲ್ಲಿ ಪೂಜೆಗೋಸ್ಕರ ನಿರ್ಮಿಸ

ಯಃ ಸ್ನಾತಿ ಮನುಜಸ್ತಸ್ಮಿನ್ ಸರ್ವಾನ್ ಕಾಮಾನವಾಪ್ನುಯಾತ್ ।
ಭೃಗುಃ ಸ್ವಪುತ್ರೀಂ ದೇವಾಯ ವರದಾಯ ನಿವೇದ್ಯ ಚ ॥ ೪೪ ॥

ಕೃತಕೃತ್ಯಃ ಪ್ರಶಾಂತಾತ್ಮಾ ಜಗಾಮ ತಪಸೇ ವನಂ ।
ಏತತ್ತೇ ಸರ್ವಮಾಖ್ಯಾತಂ ಹರೇಶ್ಚರಿತಮದ್ಭುತಂ ॥ ೪೫ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ದ್ವಾವಿಂಶೋಽಧ್ಯಾಯಃ

ಲ್ಪಟ್ಟ ತೀರ್ಥವು ಸಕಲ ಪಾಪಗಳನ್ನು ಕಳೆಯುವ ಹೇಮಾಬ್ಜತೀರ್ಥವೆಂದು ಪ್ರಸಿದ್ಧವಾಯಿತು. ಹೇಮಾಬ್ಜವೆಂಬ ನಾಮಧೇಯವು ಚಿನ್ನದ ಕಮಲವನ್ನು ಕೊಡುವ ಸರಸ್ಸು ಎಂಬ ಅರ್ಥವನ್ನು ಬೋಧಿಸುತ್ತದೆ.

೪೪. ಯಾವ ಮಾನವನು ಆ ತೀರ್ಥದಲ್ಲಿ ಸ್ನಾನಮಾಡುವನೋ ಅವನು ಕಾಂಕ್ಷಿತವಾದ ಸಕಲಾರ್ಥಗಳನ್ನು ಹೊಂದುತ್ತಾನೆ. ಭೃಗುಮುನಿಯು ವರದಸ್ವಾಮಿಗೆ ಈ ರೀತಿಯಾಗಿ ತನ್ನ ಮಗಳನ್ನು ಅರ್ಪಿಸಿದನು.

೪೫. ಅನಂತರ ಕೃತಕೃತ್ಯತೆಯಿಂದ ಶಾಂತವಾದ ಅಂತಃಕರಣವುಳ್ಳವನಾಗಿ ತಪಸ್ಸನ್ನು ಆಚರಿಸಲು ಅಲ್ಲಿಂದ ಅರಣ್ಯಕ್ಕೆ ಹೋದನು. ಈ ರೀತಿಯಾಗಿ ಹರಿಯ ಅದ್ಭುತ ಚರಿತ್ರ ಗರ್ಭಿತವಾದ ಕಥೆಯನ್ನು ನಿನಗೆ ಹೇಳಿದೆನು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ತ್ರಯೋವಿಂಶೋಽಧ್ಯಾಯಃ

ಅಂಬರೀಷ ಉವಾಚ:—

ಕಥಂ ತತ್ರಾಗತಂ ದೇವೀ ಶಪ್ತಾ ರುದ್ರೇಣ ಪಾರ್ವತೀ ।
ಕೇನ ತಾಮಶಪತ್ಕ್ರೋಧಾತ್ ಕಾರಣೇನ ವೃಷಾಕಪಿಃ ॥ ೧ ॥

ಕಥಂ ವಾಮನಮಾರಾಧ್ಯ ಕಾಮಕೋಷ್ಠೇ ಗಿರೀಂದ್ರಜಾ ।
ಪೂತಾ ಚ ಪೂರ್ಣಕಾಮಾ ಚ ಪತಿಂ ಲೇಭೇ ಸ್ವಕಂ ಪುನಃ ॥ ೨ ॥

ಏತನ್ಮೇ ಸರ್ವಮಾಚಕ್ಷ್ವ ಶ್ರೋತುಕಾಮಾಯ ನಾರದ ।

ನಾರದ ಉವಾಚ:—

ಪುರಾ ಕದಾಚಿತ್ಕೈಲಾಸೇ ನಾನಾಧಾತುವಿರಾಜಿತೇ ॥ ೩ ॥

---

೧. ಅಂಬರೀಷರಾಜನು ಮತ್ತೆ ಪ್ರಶ್ನಿಸುತ್ತಾನೆ. ಮುನಿಯೆ! ರುದ್ರನಿಂದ ಶಪಿಸಲ್ಪಟ್ಟ ಪಾರ್ವತಿಯು ಅಲ್ಲಿಗೆ ಬಂದಿರುವುದು ಹೇಗೆ? ಜಗದೀಶ್ವರನಾದ ರುದ್ರನು ಆವಳನ್ನು ಯಾವ ಕಾರಣದಿಂದ ಶಪಿಸಿದನು. ?

೨. ಶಪಿಸಲ್ಪಟ್ಟ ಪಾರ್ವತಿಯು ಕಾಮಕೋಷ್ಠಕ್ಷೇತ್ರಕ್ಕೆ ಬಂದು ವಾಮನಮೂರ್ತಿಯನ್ನು ಆರಾಧಿಸಿ ಪವಿತ್ರಳೂ ಪೂರ್ಣಕಾಮಳೂ ಆಗಿ ತನ್ನ ಪತಿಯನ್ನು ಮತ್ತೆ ಹೊಂದಿರುವುದು ಹೇಗೆ?

೩. ನಾರದಮುನಿಯೇ! ಇದನ್ನೆಲ್ಲ ಕೇಳಬೇಕೆಂಬ ಕುತೂಹಲದಿಂದ ಕೂಡಿದ ನನಗೆ ಎಲ್ಲವನ್ನೂ ವಿಸ್ತರಿಸಿ ಹೇಳು, ಎಂದು ರಾಜನಿಂದ ಕೇಳಲ್ಪಟ್ಟ ನಾರದಮುನಿಯು ಹೀಗೆ ಹೇಳಿದನು :—ಪೂರ್ವಕಾಲದಲ್ಲಿ ಒಂದಾನೊಂದು ಸಮಯದಲ್ಲಿ ಕೈಲಾಸಪರ್ವತವು ನಾನಾವಿಧವಾದ ಗೈರಿಕಧಾತುಗಳಿಂದ ವಿಚಿತ್ರವಾಗಿತ್ತು.

ಸೇವ್ಯಮಾನಃ ಸಭಾಮಧ್ಯೇ ಪಾರ್ಷತೈಶ್ಚ ಗಣಾಧಿಪೈಃ ।
ಆಸ್ಥಿತೋ ರತ್ನಪರ್ಯಂಕಮುಮಯಾ ಸಹ ಶಂಕರಃ ॥ ೪ ॥

ದೇವೀಂ ವಿನೋದಯನ್ ಗೌರೀಮಕ್ಷೈಃ ಕ್ರೀಡನ್ನುವಾಸ ಹ ।
ತದಾ ಗೌರ್ಯಾ ಶಿವೇ ಸಾರ್ಧಮಕ್ಷಕ್ರೀಡಾಂ ವಿತನ್ವತಿ ॥ ೫ ॥

ತತ್ರ ದೇವೇನ ಗಿರಿಜಾ ನಿರ್ಜಿತಾಽಭೂದ್ದುರೋದರೇ ।
ಪುನಃ ಪುನಸ್ತಥೈವಾಕ್ಷಾನ್ ವಿಕ್ಷಿಪ್ಯ ಪ್ರಹಸನ್ ಮೃಡಃ ॥ ೬ ॥

ಜಿಗಾಯ ದೇವೀಮಕ್ಷೇಷು ಕೌಶಲಂ ಸ್ವಂ ಪ್ರದರ್ಶಯನ್ ।
ಜಿತ್ವಾ ತಾಂ ಪ್ರಜಹಾಸೋಚ್ಚೈಃ ಸಹ ಸರ್ವೈಶ್ಚ ಪಾರ್ಷದೈಃ ॥ ೭ ॥

ತತಃ ಪರಾಜಿತಾ ದೇವೀ ಸಂಕ್ರುದ್ಧಾ ಪತಿಮಬ್ರವೀತ್ ।
ಬಲಿಂ ಜಿತ್ವಾ ತ್ರಿಲೋಕೇಶಂ ಪುರಾ ದೇವವರೋ ಹರಿಃ ॥ ೮ ॥

---

೪. ಆಗ ಆಸ್ಥಾನಸಭಾಮಧ್ಯದಲ್ಲಿ ಶಂಕರನು ಪ್ರಮಥಗಣಕ್ಕೆ ಅಧಿಪತಿಗಳಾದ ಪಾರ್ಷದರಿಂದ ಸೇವಿಸಲ್ಪಡುತ್ತ ಪಾರ್ವತಿಯೊಡನೆ ರತ್ನಮಯವಾದ ಮಂಚದಲ್ಲಿ ಕುಳಿತಿದ್ದನು.

೫. ಮತ್ತು ಗೌರೀದೇವಿಯೊಡನೆ ಪಗಡೆಯಾಟವನ್ನು ಆಡುತ್ತ ಗೌರಿಯನ್ನು ವಿನೋದಪಡಿಸುತ್ತಲಿದ್ದನು. ಹೀಗೆ ಶಿವನು ಗೌರೀದೇವಿಯೊಡನೆ ಲಾಲಸೆಯಿಂದ ಪಗಡೆಯಾಟವನ್ನು ವಿನೋದದಿಂದ ಬೆಳೆಸುತ್ತಿದ್ದನು.

೬. ಆ ಸಂದರ್ಭದಲ್ಲಿ ಆ ಪಗಡೆಯ ಆಟದಲ್ಲಿ ಈಶ್ವರನು ಗಿರಿಜೆಯನ್ನು ಸೋಲಿಸಿದನು. ಶಿವನು ಹಾಗೆಯೇ ಮತ್ತೆ ಮತ್ತೆ ನಗುನಗುತ್ತ ದಾಳಗಳನ್ನು ಬಿಡುತ್ತ ಆಟವಾಡಿದನು.

೭. ಹೀಗೆ ತನ್ನ ನಿಪುಣತೆಯನ್ನು ತೋರ್ಪಡಿಸುತ್ತ ಪಾರ್ವತೀದೇವಿಯನ್ನು ಅಕ್ಷಕ್ರೀಡೆಯಲ್ಲಿ ಗೆದ್ದನು. ಮತ್ತು ಪಾರ್ವತಿಯನ್ನು ಅಪಜಯಕ್ಕೋಸ್ಕರ ಪ್ರಮಥಗಣಗಳೊಂದಿಗೆ ಗಟ್ಟಿಯಾಗಿ ನಕ್ಕು ಹಾಸ್ಯಮಾಡಿದನು.

೮. ಆಗ ಸೋತಿರುವ ಪಾರ್ವತಿಯು ಹಾಸ್ಯದಿಂದ ಕುಪಿತಳಾಗಿ ಪತಿಯನ್ನು ಕುರಿತು ಈ ರೀತಿಯಾಗಿ ಹೇಳಿದಳು. ಪತಿಯೆ! ಹಿಂದೆ ದೇವತೆಗಳಲ್ಲಿ ಶ್ರೇಷ್ಠನಾದ ಹರಿಯು ತ್ರಿಲೋಕಗಳಿಗೆ ರಾಜನಾಗಿದ್ದ ಬಲೀಂದ್ರನನ್ನು ಜಯಿಸಲಿಲ್ಲವೆ?

ಸೋऽಪಿ ನೈವಂ ಜಹಾಸೋಚ್ಚೈರ್ಯಥಾ ಹಸತಿ ಮಾಂ ಭವಾನ್ ।
ಅಕ್ಷದ್ಯೂತೇ ಸ್ತ್ರಿಯಂ ಜಿತ್ವಾ ಕಿಮಾಧಿಕ್ಯಂ ತವಾಧುನಾ ॥ ೯ ॥

ನ್ಯೂನಂ ವಾ ನಿರ್ಜಿತಾಯಾ ಮೇ ಕಸ್ಮಾದ್ಧಸಸಿ ಶಂಕರ ।
ಪರಾಜಿತಾಸ್ಮಿ ಭವತಾ ಕುಶಲೇನ ದುರೋದರೇ ॥ ೧೦ ॥

ಅಕ್ಷೈರೇತೈಶ್ಚ ವಿಷಮೈಸ್ತವಾಕ್ಷೈರ್ವಿಷಮೈರಿವ ॥ ೧೧ ॥

ಇತ್ಯುಕ್ತಃ ಸ ತಯಾ ಶಂಭುಸ್ತಾಮುವಾಚ ಹಸನ್ನಿವ ।
ವಿಷಮಾಣೀವ ದೃಶ್ಯಂತೇ ಕಿಂ ಮಮಾಕ್ಷಾಣಿ ತೇ ಶುಭೇ ॥ ೧೨ ॥

ಇತ್ಯುಕ್ತಾ ಶಂಕರೇಣಾರ್ಯಾ ಹಸಂತೀ ಪುನರಬ್ರವೀತ್ ।
ನ ಕೇವಲಂ ತವಾಕ್ಷಾಣಿ ವಿಷಮಾಣಿ ತ್ರಿಲೋಚನ ॥ ೧೩ ॥

---

೯. ಆದರೆ ಈಗ ನೀನು ನನ್ನನ್ನು ಹಾಸ್ಯಮಾಡುವಂತೆ ಹರಿಯು ಹೆಚ್ಚಾಗಿ ಹಾಸ್ಯಅಕ್ಷಮಾಡಿಲ್ಲ. ಕ್ರೀಡೆಯಲ್ಲಿ ನಾರಿಯನ್ನು ಗೆದ್ದಿದ್ದರಿಂದ ಈಗ ನಿನಗೆ ಬಂದಿರುವ ಹೆಚ್ಚಿಕೆ ಏನು?

೧೦. ಶಂಕರನೆ! ಸೋತುಹೋದುದರಿಂದ ನನಗೆ ಉಂಟಾಗಿರುವ ನ್ಯೂನತೆಯು ತಾನೆ ಏನು? ಏತಕ್ಕೆ ಹಾಸ್ಯಮಾಡುತ್ತಿ? ಪಗಡೆಯಾಟದಲ್ಲಿ ನಿಪುಣನಾದ ನಿನ್ನಿಂದ ನಾನು ಸೋತಿರುವುದು ನಿಜವು.

೧೧. ಈ ಆಟದಲ್ಲಿ ಉಪಯೋಗಿಸುವ ದಾಳಗಳಾದರೋ ನಿನ್ನ ವಿರೂಪವಾದ ಕಣ್ಣುಗಳಂತೆ ವಿಷಮಗಳಾಗಿವೆ ಎಂಬುದನ್ನು ತಿಳಿ.

೧೨. ಪಾರ್ವತಿಯಿಂದ ಈ ರೀತಿಯಾಗಿ ಹೇಳಲ್ಪಟ್ಟಿರುವ ಈಶ್ವರನು ನಗು ನಗುತ್ತ ಅವಳನ್ನು ಕುರಿತು ಈ ರೀತಿಯಾಗಿ ಹೇಳಿದನು. ಮಂಗಳಕರಳೆ! ನನ್ನ ಕಣ್ಣುಗಳು ನಿನಗೇಕೋ ವಿಷಮವಾಗಿ ತೋರುತ್ತಿವೆಯಲ್ಲವೆ?

೧೩. ಹೀಗೆ ಈಶ್ವರನು ಹೇಳಲಾಗಿ ಪಾರ್ವತಿಯು ನಗುತ್ತ ಮತ್ತೆ ಈ ರೀತಿಯಾಗಿ ಹೇಳಿದಳು. ಮುಕ್ಕಣ್ಣನೆ! ನಿನಗೆ ಕಣ್ಣುಗಳು ಮಾತ್ರವೇ ವಿಷಮ ಮತ್ತು ವಿರೂಪಗಳಾಗಿವೆಯೆಂಬುದು ಸುಳ್ಳು.

ನಾಮಾನಿ ತವ ಸರ್ವಾಣಿ ರೂಪಾಣಿ ಚರಿತಾನಿ ಚ ।
ಉಗ್ರೋ ರುದ್ರಃ ಕಪರ್ದೀತಿ ಕಪಾಲೀ ಮುಸಲೀತಿ ಚ ॥ ೧೪ ॥

ವ್ಯೋಮಕೇಶೋ ವಿರೂಪಾಕ್ಷೋ ವಾಮದೇವಸ್ತ್ರಿಯಂಬಕಃ ।
ಏತಾನ್ಯನ್ಯಾನಿ ನಾಮಾನಿ ಸುರಮ್ಯಾಣಿ ನ ಕಿಂ ತವ ॥ ೧೫ ॥

ಭಸ್ಮಾನ್ಯಾಲೇಪಿತಾನ್ಯಂಗೇ ವಾಸಸ್ತೇ ಪಿತೃಕಾನನೇ ।
ಕರೇ ಕಪಾಲೋ ವಿಧೃತಃ ಕಪರ್ದಸ್ತವ ಮಸ್ತಕೇ ॥ ೧೬ ॥

ಅಕ್ಷಿಣೀ ಚ ವಿರೂಪಾಣಿ ವೈಯಾಘ್ರಂ ಚರ್ಮ ತೇಽಂಬರಂ ।
ಕಿಂ ವರ್ಣಯಾಮಿ ತೇ ಚಿತ್ರಂ ಚರಿತಂ ಪರಮಾದ್ಭುತಂ ॥ ೧೭ ॥

---

೧೪. ನಿನ್ನ ಸಮಸ್ತ ನಾಮಗಳೂ ನಿನ್ನ ರೂಪಗಳೂ ಮತ್ತು ಚರಿತ್ರೆಗಳೂ ಬಹು ವಿಷಮಗಳಾಗಿವೆ. ನಿನಗೆ ಉಗ್ರ, ರುದ್ರ, ಕಪರ್ದೀ, ಕಪಾಲೀ, ಮುಸಲೀ, ಎಂಬ ನಾಮಗಳು ಒಂದಕ್ಕಿಂತ ಒಂದು ರಮಣೀಯಗಳಾಗಿವೆ. ಅವುಗಳು ಉಗ್ರನು, ಭಯಂಕರನು, ಜಡೆ ಧರಿಸಿದವನು, ಕಪಾಲವನ್ನು ಹಿಡಿದುಕೊಂಡವನು, ಒನಿಕೆಯುಳ್ಳವನು ಎಂಬೀ ಶ್ಲಾಘ್ಯವಾದ ಅರ್ಥವನ್ನು ಬೋಧಿಸುತ್ತವೆ.

೧೫. ಮತ್ತು ಆಕಾಶದಲ್ಲಿ ಚೆದುರಿದ ಕೂದಲುವುಳ್ಳವನು, ವಿಕಾರವಾದ ಕಣ್ಣುಗಳ್ಳವನು, ಎಲ್ಲಕ್ಕೂ ವಿರುದ್ಧನಾದ ದೇವನು, ಮೂರು ಬಗೆಯ ನೇತ್ರಗಳುಳ್ಳವನು ಎಂಬ ಅರ್ಥವನ್ನು ಕೊಡುವ ವ್ಯೋಮಕೇಶ, ವಿರೂಪಾಕ್ಷ, ವಾಮದೇವ, ತ್ರಿಯಂಬಕ, ಎಂಬ ಹೆಸರುಗಳು ಬಹು ರಮಣೀಯವಾಗಿವೆ. ಹೀಗೆ ಇನ್ನೂ ಎಷ್ಟೋ ನಾಮಗಳು ನಿನಗೆ ರಮ್ಯಗಳಾಗಿಲ್ಲವೆ?

೧೬. ನಿನ್ನ ರೂಪಗಳನ್ನು ವರ್ಣಿಸುವೆನು ಕೇಳು, ಶರೀರದಲ್ಲಿ ಬೂದಿಯು ಬಳಿಯಲ್ಪಟ್ಟಿದೆ. ನಿನ್ನ ವಾಸಭೂಮಿಯು ಮಹಾಶ್ಮಶಾನವು, ಕೈಯ್ಯಲ್ಲಿ ಭಿಕ್ಷಾಕಪಾಲವು ಧರಿಸಲ್ಪಟ್ಟಿರುತ್ತದೆ, ಮತ್ತು ತಲೆಯ ಮೇಲೆ ಹೊರಲಾರದ ಜಟಾಜೂಟವಿರುವುದು.

೧೭. ಕಣ್ಣು ಮೊದಲೇ ವಿಕಾರವಾಗಿರುವುದು. ಹುಲಿಯ ಚರ್ಮವು ನೀನು ಉಡುವ ಬಟ್ಟೆಯು, ಇನ್ನು ವಿಚಿತ್ರವೂ ಪರಮಾದ್ಭುತವೂ ಆದ ನಿನ್ನ ಚರಿತ್ರೆಯನ್ನೇನು ವರ್ಣಿಸಲಿ.

ಇತ್ಯುಕ್ತ್ವಾ ಸಾ ವರಾರೋಹಾ ಶರ್ವಾಣೀ ಸರ್ವಮಂಗಲಾ ।
ಜಹಾಸ ದೃಷ್ಟ್ವಾ ದೇವೇಶಂ ರುದ್ರಂ ತತ್ರ ಸ್ಮಯಾನ್ವಿತಾ ॥ ೧೮ ॥

ಪ್ರಹಸಂತೀಂ ತದಾ ದೃಷ್ಟ್ವಾ ಸ್ಮಯಂತೀಮತಿಗರ್ವಿತಾಂ ।
ಶಶಾಪ ಗಿರಿಜಾಂ ದೇವಃ ಸ್ವಪತ್ನೀಂ ಶಂಕರೋ ರುಷಾ ॥ ೧೯ ॥

ಯದ್ವಿನಿಂದಸಿ ಮಾಂ ಮೂಢೇ ಪತಿಂ ತ್ರಿಭುವನೇಶ್ವರಂ ।
ತಸ್ಮಾದ್ವಿರೂಪನಯನಾ ಭವ ತ್ವಂ ಘೋರದರ್ಶನಾ ॥ ೨೦ ॥

ಕಾಳೀ ಚ ವಿಕೃತಾಕಾರಾ ಸರ್ವಲೋಕವಿನಿಂದಿತಾ ।
ಇತಿ ಶಪ್ತ್ವಾ ಹರೋ ಗೌರೀಂ ತೂಷ್ಣೀಮಾಸೀತ್ತದಾ ನೃಪ ॥ ೨೧ ॥

ತತಸ್ತು ಗಿರಿಜಾ ದೇವೀ ಭಯಕಂಪಿತವಿಗ್ರಹಾ ।
ಪ್ರಣಮ್ಯ ದಂಡವದ್ಭೂಮೌ ಪ್ರಾರ್ಥಯಾಮಾಸ ಶಂಕರಂ ॥ ೨೨ ॥

---

೧೮. ಹೀಗೆಂದು ಸುಂದರೀಮಣಿಯೂ, ಸರ್ವಮಂಗಳರೂಪಳೂ ಆದ ಶಿವ ಪತ್ನಿಯು ಗರ್ವದಿಂದ ಕೂಡಿದವಳಾಗಿ ದೇವಾಧಿಪತಿಯಾದ ರುದ್ರನನ್ನು ನೋಡಿ ಹಾಸ್ಯಮಾಡಿದಳು.

೧೯. ಆಗ ಶಂಕರನು ಅತಿ ಅಹಂಕಾರದಿಂದ ಮದಿಸಿದವಳಾಗಿ ನಗುತ್ತಲಿದ್ದ ತನ್ನ ಪತ್ನಿಯಾದ ಗಿರಿಜೆಯನ್ನು ತಾನು ಬಹು ಕೋಪಗೊಂಡವನಾಗಿ ಶಪಿಸಿದನು.

೨೦. ಮೂಢಳೇ ! ಮೂರು ಲೋಕಗಳಿಗೆ ಪ್ರಭುವೂ, ಸಾಕ್ಷಾತ್ತಾಗಿ ನಿನಗೆ ಪತಿಯೂ ಆದ ನನ್ನನ್ನು ನೀನು ನಿಂದಿಸುತ್ತಿರುವುದರಿಂದ ನೀನು ವಿರೂಪನೇತ್ರವುಳ್ಳ ವಳೂ ಘೋರವಾದ ದರ್ಶನವುಳ್ಳವಳೂ ಆಗು.

೨೧. ವಿಕಾರವಾದ ಸಕಲಾವಯವಗಳಿಂದ ಕೂಡಿದವಳೂ ಮತ್ತು ಸಕಲ ಲೋಕಗಳಿಗೆ ನಿಂದ್ಯಳೂ ಆದ ಕಾಳೀರೂಪಳಾಗು, ರಾಜನೇ, ಶಿವನು ಈ ರೀತಿಯಾಗಿ ಗೌರಿಯನ್ನು ಶಪಿಸಿ ಸುಮ್ಮನಾದನು.

೨೨. ತರುವಾಯ ಪಾರ್ವತಿಯು ಶಾಪವನ್ನು ಕೇಳಿ ಭೀತಿಯಿಂದ ನಡುಗಿದ ದೇಹವುಳ್ಳವಳಾಗಿ ದಂಡದಂತೆ ಬಿದ್ದು ನಮಸ್ಕರಿಸಿ ಶಂಕರನನ್ನು ಈ ರೀತಿಯಾಗಿ ಪ್ರಾರ್ಥಿಸಿಕೊಂಡಳು.

ದೇವದೇವ ಮಹಾದೇವ ಕರುಣಾಕರ ಶಂಕರ ।
ಪ್ರಪನ್ನಾಂ ತವ ಪಾದಾಬ್ಜೇ ನ ಮಾಂ ತ್ವಂ ಶಪ್ತುಮರ್ಹಸಿ ॥ ೨೩ ॥

ಯನ್ಮೂಢಯಾ ಮಯಾಽಜ್ಞಾನಾದಪರಾಧಃ ಕೃತಸ್ತವ ।
ಕ್ಷಂತವ್ಯಃ ಸೋಽಪರಾಧೋ ಮೇ ತ್ವಯಾ ಕಾರುಣ್ಯವೇದಿನಾ ॥ ೨೪ ॥

ಅಭವ್ಯಾಽಹಂ ತ್ವಯಾ ಶಪ್ತಾ ಕಾಂ ಗತಿಂ ಯಾಮಿ ದುಃಖಿತಾ ।
ಅತಸ್ತ್ವಮೇವ ಮಾಂ ಪಾಹಿ ಶಾಪಾದಸ್ಮಾಜ್ಜಗತ್ಪತೇ ॥ ೨೫ ॥

ಇತಿ ಸಂಪ್ರಾರ್ಥಿತೋ ದೇವಸ್ತಾಮುವಾಚ ವೃಷಧ್ವಜಃ ।
ಶಾಪೋಽಯಂ ದೇವಿ ಮದ್ದತ್ತೋ ನಾನ್ಯಥಾ ಭವಿತಾ ಧ್ರುವಂ ॥ ೨೬ ॥

ತಥಾಪಿ ಕೃಪಯಾ ತುಭ್ಯಂ ಯತ್ಪ್ರವಕ್ಷ್ಯಾಮಿ ತಚ್ಛೃಣು ।
ಧರಾಯಾಂ ದಕ್ಷಿಣೇ ಭಾಗೇ ಖಂಡೇ ಭಾರತಸಂಜ್ಞಕೇ ॥ ೨೭ ॥

---

೨೩. ದೇವತೆಗಳಿಗೆ ಪೂಜ್ಯನಾದ ದೇವನೆ! ಸಾಕ್ಷಾತ್ತಾಗಿ ಮಹಾದೇವನೆ! ಕರುಣಾರಸ ಪೂರ್ಣನೆ! ಶಂಕರನೆ! ನಿನ್ನ ಚರಣಗಳಿಗೆ ಶರಣಾಗತಳಾದ ನನ್ನನ್ನು ನೀನು ಶಪಿಸಬಾರದು, ಅದು ಸರಿಯಲ್ಲ.

೨೪. ಮೂಢೆಯಾದ ನಾನು ನನ್ನ ಅಜ್ಞಾನದಿಂದ ನಿನಗೊಂದು ಅಪರಾಧ ವನ್ನು ಒಂದು ವೇಳೆ ಮಾಡಿದರೂ ಕರುಣಾಪೂರ್ಣನಾದ ನೀನು ಆ ಅಪರಾಧವನ್ನು ಮನ್ನಿಸಬೇಕಾದ್ದು ಯುಕ್ತವು.

೨೫. ನೀನು ನನಗೆ ಅಮಂಗಳಾಕೃತಿಯುಳ್ಳವಳಾಗೆಂದು ಶಾಪಕೊಟ್ಟಿರುತ್ತೀ. ಈಗ ಈ ವಿಪತ್ತಿಗೆ ಭಾಗಿಯಾದ ನಾನು ದುಃಖಿತಳಾಗಿ ಯಾವ ಗತಿಯನ್ನು ಹೊಂದಲಿ. ಜಗನ್ನಾಥನೆ! ಆದುದರಿಂದ ನೀನು ಹೇಗಾದರೂ ಈ ಶಾಪದಿಂದ ನನ್ನನ್ನು ರಕ್ಷಿಸು.

೨೬. ಈ ರೀತಿಯಾಗಿ ಪಾರ್ವತಿಯಿಂದ ಪ್ರಾರ್ಥಿಸಲ್ಪಟ್ಟ ನಂದಿಯಧ್ವಜ ಚಿಹ್ನೆಯಿಂದ ಕೂಡಿದ ಶಂಕರನು, ದೇವಿಯೆ! ನಾನು ಕೊಟ್ಟ ಶಾಪವು ಎಂದಿಗೂ ಅನ್ಯಥಾ ಆಗಲಾರದು, ಇದು ನಿಜ.

೨೭. ಆದರೂ ನಿನ್ನ ಮೇಲಿನ ಕರುಣೆಯಿಂದ ಈ ವಿಪತ್ತಿನಿಂದ ಪಾರಾಗಲು ನಾನು ಹೇಳುವ ಒಂದು ಉಪಾಯವನ್ನು ಕೇಳು, ಈ ಭೂಮಂಡಲದಲ್ಲಿ ದಕ್ಷಿಣ ದಿಕ್ಕಿನ ವಲಯದಲ್ಲಿ ಭಾರತವೆಂಬ ಒಂದು ಖಂಡವಿರುವುದು.

ಅಸ್ತಿ ಸತ್ಯವ್ರತಂ ನಾಮ ಕ್ಷೇತ್ರಂ ಪಾಪಪ್ರಣಾಶನಂ ।
ತತ್ರ ಕಾಂಚೀತಿ ವಿಖ್ಯಾತಾ ಪುರೀ ಪುಣ್ಯವಿವರ್ಧಿನೀ ॥ ೨೮ ॥

ತನ್ಮಧ್ಯೇ ಕಾಮಕೋಷ್ಠಾಖ್ಯಂ ಸ್ಥಾನಮಸ್ತಿ ಮಹೋತ್ತರಂ ।
ದೇವೇನ ನಿರ್ಮಿತಂ ಪೂರ್ವಂ ವಾಮನೇನ ಮಹಾತ್ಮನಾ ॥ ೨೯ ॥

ಸರ್ವಲೋಕಹಿತಾರ್ಥಾಯ ವಾಮನಸ್ತತ್ರ ತಿಷ್ಠತಿ ।
ತತ್ರೈವ ವಾಮನಂ ದೇವಂ ಸಮ್ಯಕ್ ಸಂಪೂಜ್ಯ ಭಕ್ತಿತಃ ॥ ೩೦ ॥

ಪ್ರಾಪ್ನುವಂತಿ ಹಿ ಸರ್ವೇಽಪಿ ಸರ್ವಾನ್ ಕಾಮಾನ್ ಸುರಾದಯಃ ।
ತಸ್ಮಾತ್ತ್ವಮಪಿ ತತ್ರೈವ ಗತ್ವಾ ಕಾಂಚೀಮಿತಃ ಶುಭೇ ॥ ೩೧ ॥

ಕಾಮಕೋಷ್ಠೇ ಬಿಲದ್ವಾರೇ ತಿಷ್ಠಂತಂ ದಿವ್ಯರೂಪಿಣಂ ।
ಯದಿ ಪಶ್ಯಸಿ ದೇವೇಶಂ ವಾಮನಂ ಸರ್ವಕಾಮದಂ ॥ ೩೨ ॥

---

೨೮. ಅಲ್ಲಿ ಸಕಲ ಪಾಪಗಳನ್ನು ಭಂಜನಮಾಡುವ ಸತ್ಯವ್ರತವೆಂಬ ಒಂದು ಕ್ಷೇತ್ರವಿರುವುದು. ಅಲ್ಲಿ ಭಕ್ತರಿಗೆ ಪುಣ್ಯಪುಂಜವನ್ನು ಹೆಚ್ಚಿಸುವ ಕಾಂಚೀ ಎಂಬ ಒಂದು ನಗರಿಯು ಪ್ರಖ್ಯಾತವಾಗಿದೆ.

೨೯. ಅದರ ಮಧ್ಯದಲ್ಲಿ ಕಾಮಕೋಷ್ಠವೆಂಬ ಒಂದು ಅತ್ಯುತ್ತಮವಾದ ಸ್ಥಾನವಿರುವುದು. ಅದನ್ನು ಪೂರ್ವದಲ್ಲಿ ಮಹಾತ್ಮನಾದ ವಾಮನದೇವನು ನಿರ್ಮಾಣ ಮಾಡಿರುವನು.

೩೦. ಸಮಸ್ತ ಲೋಕಗಳಿಗೆ ಹಿತವನ್ನುಂಟುಮಾಡಬೇಕೆಂಬ ಸದುದ್ದೇಶದಿಂದ ಅಲ್ಲಿ ವಾಮನಮೂರ್ತಿಯು ವಾಸಮಾಡಿರುವನು. ನೀನು ಅಲ್ಲಿಗೆ ಹೋಗಿ ಅಲ್ಲಿಯೇ ಇದ್ದು ವಾಮನಮೂರ್ತಿಯನ್ನು ಭಕ್ತಿಯಿಂದ ಅರ್ಚಿಸು.

೩೧. ಅಲ್ಲಿ ಸಕಲ ದೇವತೆ ಮುಂತಾದವರು ವಾಮನನನ್ನು ಅರ್ಚಿಸಿ ತಮ್ಮ ಕಾಮಗಳನ್ನು ಹೊಂದುತ್ತಾರೆ. ಮಂಗಳಕರಳೆ! ಆದುದರಿಂದ ನೀನು ಆ ಕಾಂಚೀ ನಗರಕ್ಕೆ ಹೋಗಿ ಅಲ್ಲಿಯೇ ಇದ್ದು ಇಷ್ಟವನ್ನು ಸಾಧಿಸು.

೩೨. ಕಾಮಕೋಷ್ಠವೆಂಬ ಬಿಲದ ದ್ವಾರದಲ್ಲಿ ದಿವ್ಯರೂಪವನ್ನು ಧರಿಸಿ ನಿಂತುಕೊಂಡಿರುವ, ಸಕಲ ಕಾಮಗಳನ್ನು ಪ್ರದಾನಮಾಡುವ ದೇವತಾಧಿಪತಿಯಾದ ವಾಮನನನ್ನು ನೀನು ಸಾಕ್ಷಾತ್ಕಾರಮಾಡು.

ತತಃ ಪ್ರಮುಕ್ತಮುಚ್ಛಾಪಾ ಭವಿಷ್ಯಸಿ ನ ಸಂಶಯಃ ।
ಇತ್ಯುಕ್ತಾ ಶಂಭುನಾ ಗೌರೀ ತದಾ ತಚ್ಛಾಪದೂಷಿತಾ ॥ ೩೩ ॥

ಬಭೂವ ವಿಕೃತಾಕಾರಾ ವಿರೂಪನಯನಾ ಚ ಸಾ ।
ದುಃಖಿತಾ ಚ ವಿವರ್ಣಾಂಗೀ ಪರಿತ್ಯಕ್ತಾ ಚ ಶಂಭುನಾ ॥ ೩೪ ॥

ಆಜಗಾಮ ತತಃ ಕಾಂಚೀಂ ಪತ್ಯುರಾಜ್ಞಾಯ ಶಾಸನಂ ।
ಚಾಮುಂಡಾ ಚಂಡಬಾಲಾದ್ಯೈಃ ಸಹಿತಾ ಮಾತೃಕಾಗಣೈಃ ॥ ೩೫ ॥

ಇತ್ಥಂ ಹಿ ರಾಜನ್ ಗಿರಿಜಾ ಸುತಾಭ್ಯಾಂ
ಸಮನ್ವಿತಾ ಸ್ಕಂದಗಜಾನನಾಭ್ಯಾಂ ।
ಕಾಂಚೀಂ ಯಯೌ ತತ್ರ ಚ ಕಾಮಕೋಷ್ಠೇ
ಸಮರ್ಚಿತುಂ ವಾಮನಮಾದಿದೇವಂ ॥ ೩೬ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ತ್ರಯೋವಿಂಶೋಽಧ್ಯಾಯಃ

---

೩೩. ಹಾಗೆ ನೀನು ವಾಮನಮೂರ್ತಿಯನ್ನು ಸೇವಿಸುವುದರಿಂದ ನನ್ನ ಶಾಪದಿಂದ ಮುಕ್ತಳಾಗುತ್ತಿ, ಈ ವಿಷಯದಲ್ಲಿ ಸಂಶಯಪಡಬೇಡ. ಶಿವನ ಶಾಪಬಲದಿಂದ ದೂಷಿಸಲ್ಪಟ್ಟ ಪಾರ್ವತಿಯು ಈ ರೀತಿಯಾಗಿ ಈಶ್ವರನಿಂದ ಹೇಳಲ್ಪಟ್ಟಳು.

೩೪. ಆಗ ಶಾಪದ ಮಹಿಮೆಯಿಂದ ವಿಕಾರವಾದ ಅವಯವಗಳುಳ್ಳವಳೂ, ವಿರೂಪವಾದ ನೇತ್ರಗಳುಳ್ಳವಳೂ ಅತ್ಯಂತ ದುಃಖಿತಳೂ ಮೊದಲಿನ ರಮ್ಯವರ್ಣವು ಹೋಗಿ ಅಸಹ್ಯವಾದ ವರ್ಣದಿಂದ ಕೂಡಿದವಳೂ ಆದ ಪಾರ್ವತಿಯು ಶಿವನಿಂದ ತ್ಯಜಿಸಲ್ಪಟ್ಟಳು.

೩೫. ಆಗ ಆ ಗೌರಿಯು ಪತಿಯ ಆಜ್ಞೆಯನ್ನು ಪಡೆದು, ಚಾಮುಂಡೀ, ಚಂಡಬಾಲಾ ಮುಂತಾದ ಮಾತೃದೇವತೆಗಳಿಂದ ಕೂಡಿ ಕಾಂಚೀನಗರಕ್ಕೆ ಬಂದು ಸೇರಿದಳು.

೩೬. ರಾಜನೇ! ಈ ರೀತಿಯಾಗಿ ಗೌರಿಯು ತನ್ನ ಕುಮಾರಸ್ವಾಮಿ ಮತ್ತು ಗಣೇಶರೆಂಬ ಇಬ್ಬರು ಪುತ್ರರಿಂದ ಸಹಿತಳಾಗಿ ಆದಿದೇವತೆಯಾದ ವಾಮನದೇವನನ್ನು ಆರಾಧಿಸುವುದಕ್ಕೋಸ್ಕರ ಕಾಂಚೀನಗರದಲ್ಲಿ ಕಾಮಕೋಷ್ಠವೆಂಬ ಬಿಲದ ದ್ವಾರಕ್ಕೆ ಬಂದಳು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಚತುರ್ವಿಂಶೋಽಧ್ಯಾಯಃ

ತತಃ ಕಾಂಚೀಮನುಪ್ರಾಪ್ಯ ಗಿರಿಜಾ ಶಂಕರಾಜ್ಞಯಾ ।
ಪಂಚತೀರ್ಥಜಲೇ ಸ್ನಾತ್ವಾ ದದರ್ಶ ಕಿಲ ವಾಮನಂ ॥ ೧ ॥

ಕಾಮಕೋಷ್ಠೇ ಬಿಲದ್ವಾರೇ ತಿಷ್ಠಂತಂ ಸರ್ವಕಾಮದಂ ।
ದೃಷ್ಟ್ವಾ ಸಂತುಷ್ಟಹೃದಯಾ ಪರಿಕ್ರಮ್ಯ ಪ್ರಣಮ್ಯ ಚ ॥ ೨ ॥

ಪೂಜಯಾಮಾಸ ವಿಧಿವತ್ ಸಮ್ಯಕ್ ಸಂಕಲ್ಪ್ಯ ವಾಗ್ಯತಾ ।
ಪೂಜಯಿತ್ವಾ ತತಸ್ತತ್ರ ಬಿಲದ್ವಾರೇ ತದಂತಿಕೇ ॥ ೩ ॥

---

೧. ನಾರದಮುನಿಯು ಇಂತೆಂದನು:—ಪಾರ್ವತಿಯು ಅನಂತರದಲ್ಲಿ ಶಂಕರನ ಆಜ್ಞೆಯನ್ನು ತೆಗೆದುಕೊಂಡು ಕಾಂಚೀನಗರಕ್ಕೆ ಬಂದು ಪಂಚತೀರ್ಥದಲ್ಲಿ ಸ್ನಾನ ಮಾಡಿ ಪವಿತ್ರಳಾಗಿ ವಾಮನದೇವನನ್ನು ಸಾಕ್ಷಾತ್ಕಾರಮಾಡಿದಳು.

೨. ಕಾಮಕೋಷ್ಠವೆಂಬ ಬಿಲದ ದ್ವಾರದಲ್ಲಿ ಭಕ್ತರಿಗೆ ಸಕಲ ಕಾಮನೆಗಳನ್ನು ಪೂರೈಸುತ್ತ ವಾಸಮಾಡಿಕೊಂಡಿರುವ ವಾಮನಮೂರ್ತಿಯನ್ನು ನೋಡಿ ಸಂತೋಷ ಪಟ್ಟ ಹೃದಯವುಳ್ಳವಳಾಗಿ ಪ್ರದಕ್ಷಿಣಾ ನಮಸ್ಕಾರಗಳನ್ನು ಆಚರಿಸಿದಳು.

೩. ತರುವಾಯ ಅಲ್ಲಿ ಮೌನನಿಯಮವುಳ್ಳವಳಾಗಿ ಸಂಕಲ್ಪಪೂರ್ವಕವಾಗಿ ಶಾಸ್ತ್ರವಿಧಿಯನ್ನು ಅನುಸರಿಸಿ ಚನ್ನಾಗಿ ಪೂಜಿಸಿದಳು. ಅನಂತರದಲ್ಲಿ ಆ ಬಿಲದ್ವಾರ ಸಮೀಪದಲ್ಲಿಯೇ ತಪವನ್ನು ಆಚರಿಸಿದಳು.

ತಿಷ್ಠಂತ್ಯೇಕೇನ ಪಾದೇನ ವಾಮನಪ್ರೀತಿಕಾಮ್ಯಯಾ ।
ನಿಧಾಯ ಮಸ್ತಕೇ ಹಸ್ತಂ ಚಕಾರ ತಪ ಉತ್ತಮಂ ॥ ೪ ॥

ತಸ್ಯಾಂ ತಪಃ ಪ್ರಕುರ್ವಂತ್ಯಾಂ ಸರ್ವಾಸ್ತಾ ಅಪಿ ಮಾತೃಕಾಃ ।
ರರಕ್ಷುಃ ಪರಿತೋ ದೇವೀಂ ಪರಿಚರ್ಯಾಂ ಚ ಚಕ್ರಿರೇ ॥ ೫ ॥

ಪುತ್ರೌ ಚ ಸ್ಕಂದಗಣಪಾವುಭೌ ತತ್ರೈವ ಮಾತರಂ ।
ಪಶ್ಯಂತೌ ವಾಮನಂ ಚೈವ ಕಾಮಕೋಷ್ಠೇ ಕಿಲೋಷತುಃ ॥ ೬ ॥

ತತಃ ಸಂವತ್ಸರೇ ಪೂರ್ಣೇ ವಾಮನಃ ಕರುಣಾನಿಧಿಃ ।
ಪ್ರಸನ್ನಃ ಪಾರ್ವತೀಂ ದೃಷ್ಟ್ವಾ ತಪಸ್ಯಂತೀಮುವಾಚ ಹ ॥ ೭ ॥

ಅಲಂ ತೇ ತಪಸಾ ವತ್ಸೇ ಗೌರಿ ಮಾ ಸಾಹಸಂ ಕೃಥಾಃ ।
ಭೃಶಂ ತುಷ್ಟೋಽಹಮಭವಂ ತಪಸಾ ತವ ಸುವ್ರತೇ ॥ ೮ ॥

---

೪. ವಾಮನದೇವನಿಗೆ ಪ್ರೀತಿಯನ್ನು ಉಂಟುಮಾಡಬೇಕೆಂಬ ಇಷ್ಟದಿಂದ ಒಂದು ಪಾದದಲ್ಲಿ ಭೂಮಿಯಲ್ಲಿ ನಿಂತುಕೊಂಡು ಶಿರಸ್ಸಿನಲ್ಲಿ ಹಸ್ತಗಳನ್ನು ಇಟ್ಟುಕೊಂಡು ಉತ್ತಮವಾದ ತಪಸ್ಸನ್ನು ಆಚರಿಸಿದಳು.

೫. ಹೀಗೆ ಪಾರ್ವತಿಯು ತಪಸ್ಸನ್ನು ಆಚರಿಸುತ್ತಿರಲು ಜೊತೆಯಲ್ಲಿದ್ದ ಸಮಸ್ತ ಮಾತೃದೇವತೆಗಳೂ ಸುತ್ತಲೂ ದೇವಿಯನ್ನು ರಕ್ಷಿಸಿಕೊಂಡು ಉಚಿತವಾದ ಶುಶ್ರೂಷೆಯನ್ನು ಮಾಡುತ್ತಲಿದ್ದರು.

೬. ಗೌರಿಯ ಪುತ್ರರಾದ ಕುಮಾರ, ಗಣೇಶರು ಇಬ್ಬರು ಅಲ್ಲಿ ತಾಯಿಯನ್ನು ಸೇವೆಮಾಡುತ್ತಲೂ ವಾಮನಮೂರ್ತಿಯ ದರ್ಶನವನ್ನು ತೆಗೆದುಕೊಳ್ಳುತ್ತಲೂ ಕಾಮಕೋಷ್ಠ ಬಿಲದ್ವಾರದಲ್ಲಿ ವಾಸಮಾಡಿದರು.

೭. ಅನಂತರದಲ್ಲಿ ಹೀಗೆಯೇ ಒಂದು ವರ್ಷವು ಪೂರ್ತಿಯಾಗಿ ಕಳೆಯಲು ಪಾರ್ವತಿಯ ತಪಸ್ಸಿಗೆ ಮೆಚ್ಚಿ ವಾಮನಮೂರ್ತಿಯು ಪಾರ್ವತಿಯನ್ನು ಕುರಿತು ಸಂಭಾಷಿಸಿದನು.

೮. ಮಗಳೆ! ನೀನು ತಪಸ್ಸನ್ನು ಮಾಡಿರುವುದು ಸಾಕು. ಇನ್ನೂ ಸಾಹಸವನ್ನು ಆಚರಿಸಬೇಡ. ವ್ರತೋಪವಾಸಾದಿ ತತ್ಪರಳೆ! ನಿನ್ನ ತಪಸ್ಸಿಗೆ ನಾನು ಅತಿಶಯವಾಗಿ ಸಂತುಷ್ಟನಾಗಿರುವೆನು.

ತತಸ್ತೇ ಸಂಪ್ರಯಚ್ಛಾಮಿ ಸರ್ವಾನ್ ಕಾಮಾನ್ ಮನೋಗತಾನ್ ।
ರುದ್ರಶಾಪಾದನುಪ್ರಾಪ್ತಂ ಯದ್ರೂಪಂ ವಿಕೃತಂ ತವ ॥ ೯ ॥

ತದ್ರೂಪಂ ವಿಸೃಜಾಶು ತ್ವಂ ನಿರ್ಮೋಕಮಿವ ಪನ್ನಗೀ ।
ಸುನೇತ್ರಾ ಸುಭಗಾ ಚೈವ ಭವ ತ್ವಂ ದಿವ್ಯರೂಪಿಣೀ ॥ ೧೦ ॥

ಅತ್ರೈವ ಸರ್ವಜಂತೂನಾಮಿಷ್ಟಕಾಮ್ಯಾರ್ಥದಾಯಿನೀ ।
ಭೂತ್ವಾ ಮನ್ನಿಕಟೇ ಗೌರಿ ವಸ ತ್ವಂ ಶಾಶ್ವತೀಃ ಸಮಾಃ ॥ ೧೧ ॥

ಅತ್ರೈವ ರುದ್ರೋಽಪ್ಯಾಗತ್ಯ ತ್ವಾಮುದ್ವಹತು ಶಂಕರಃ ।
ತವ ನೇತ್ರದ್ವಯಂ ಪೂರ್ವಂ ರುದ್ರಶಾಪಾದ್ವಿರೂಪಿತಂ ॥ ೧೨ ॥

ಯತ್ತದಕ್ಷಿದ್ವಯಂ ಭದ್ರೇ ಸುಮನೋಹರಮಸ್ತು ತೇ ।
ಕಾಮಾಕ್ಷೀತಿ ಚ ವಿಖ್ಯಾತಾ ನಾಮ್ನಾ ತ್ವಂ ಭವ ಭೂತಲೇ ॥ ೧೩ ॥

---

೯. ಆದುದರಿಂದ ನಿನ್ನ ಮನಸ್ಸಿಗೆ ಇಷ್ಟವಾಗಿರುವ ಸಕಲ ಕಾಮಗಳನ್ನು ನಾನು ಕೊಡುತ್ತೇನೆ. ಮತ್ತು ಈಗ ನಿನಗೆ ರುದ್ರನ ಶಾಪದಿಂದ ಬಂದಿರುವ ಈ ವಿಕಾರವಾದ ರೂಪವನ್ನು ಪರಿಹರಿಸುತ್ತೇನೆ.

೧೦. ನನ್ನ ಪ್ರಸಾದದಿಂದ ಹಾವು ಪೊರೆಯನ್ನು ಬಿಟ್ಟಂತೆ ರುದ್ರನ ಶಾಪದಿಂದ ಪ್ರಾಪ್ತವಾದ ಈ ವಿಕಾರರೂಪವನ್ನು ಬಿಡು. ಮತ್ತು ದಿವ್ಯರೂಪವನ್ನು ಧರಿಸಿದವಳೂ ಲಕ್ಷಣವಾದ ನೇತ್ರ ಮುಂತಾದ ಸರ್ವೇಂದ್ರಿಯಗಳುಳ್ಳವಳೂ ಆಗು.

೧೧. ಗೌರಿಯೆ! ಇಲ್ಲಿಯೇ ಸಕಲ ಪ್ರಾಣಿಗಳಿಗೆ ಇಷ್ಟವಾದ ಆಯಾಯ ಮನೋರಥಗಳನ್ನು ಅನುಗ್ರಹಿಸುತ್ತ ನನ್ನ ಸಮೀಪದಲ್ಲಿಯೇ ಅನೇಕ ವರ್ಷಗಳು ವಾಸಮಾಡು.

೧೨. ನಿನ್ನ ಪತಿಯಾದ ರುದ್ರನೂ ಇಲ್ಲಿಗೆ ಬಂದು ನಿನ್ನನ್ನು ಮದುವೆಯಾಗಿ ನಿನಗೆ ಸುಖಕರನಾಗಲಿ, ನಿನ್ನ ರಮಣೀಯವಾದ ಎರಡು ನೇತ್ರಗಳು ಈಶ್ವರನ ಶಾಪದಿಂದ ವಿರೂಪವಾಗಿವೆಯಲ್ಲವೆ.

೧೩. ಮಗಳೆ! ಆ ವಿಕಾರವಾದ ಕಣ್ಣುಗಳು ಬಹಳ ರಮಣೀಯಗಳಾಗಲಿ, ಮತ್ತು ಈ ಭೂಮಿಯಲ್ಲಿ ನೀನು ನೇತ್ರಸೌಂದರ್ಯದಿಂದ ಕಾಮಾಕ್ಷಿ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದುವಳಾಗು.

ಇತಿ ಲಬ್ಧವರಾ ದೇವೀ ವಾಮನೇನ ಮಹಾತ್ಮನಾ ।
ಬಭೂವ ಮುದಿತಾ ಗೌರೀ ಮುಕ್ತಶಾಪಾ ಸುರೂಪಿಣೀ ॥ ೧೪ ॥

ತತಸ್ತತ್ರೈವ ಸರ್ವೇಷಾಂ ನರಾಣಾಂ ವಾಮನಾಜ್ಞಯಾ ।
ಸರ್ವಕಾಮಪ್ರದಾ ಭೂತ್ವಾ ನ್ಯವಸದ್ಗಿರಿಜಾ ನೃಪ ॥ ೧೫ ॥

ತತಃ ಕದಾಚಿದ್ಗಿರಿಜಾ ತಿಷ್ಠಂತೀ ವಾಮನಾಂತಿಕೇ ।
ಉವಾಚ ವಚನಂ ಮಂದಂ ಲಜ್ಜಯಾವನತಾನನಾ ॥ ೧೬ ॥

ಅತ್ರೈವ ಮೇ ಪತಿಃ ಶಂಭುರೇಷ್ಯತೀತಿ ತ್ವಯೋದಿತಂ ।
ಪೃಚ್ಛಾಮಿ ತ್ವಾಮಹಂ ತಸ್ಮಾತ್ಕದಾ ವಾಭ್ಯೇತಿ ಶಂಕರಃ ॥ ೧೭ ॥

ಕದಾ ದ್ರಕ್ಷ್ಯಾಮ್ಯಹಂ ದೇವ ಪತಿಂ ತದ್ವದ ವಾಮನ ।
ವಾಮನ ಉವಾಚ:—
ಯದಾ ತ್ವಮಿಹ ತಂ ಶಂಭುಂ ಭಕ್ತ್ಯಾ ಸಂಪೂಜಯಿಷ್ಯಸಿ ॥ ೧೮ ॥

---

೧೪. ಹೀಗೆಂದು ಮಹಾತ್ಮನಾದ ವಾಮನದೇವನಿಂದ ವರಗಳನ್ನು ಹೊಂದಿರುವ ಗೌರಿಯು ಬಹು ಸಂತೋಷಪಟ್ಟವಳಾದಳು. ಮತ್ತು ಶಾಪದಿಂದ ಮುಕ್ತಳಾಗಿ ಸುಂದರವಾದ ರೂಪವುಳ್ಳವಳಾದಳು.

೧೫. ರಾಜನೆ! ಅನಂತರದಲ್ಲಿ ಗೌರಿಯು ವಾಮನಮೂರ್ತಿಯ ಆಜ್ಞೆಯನ್ನು ಅನುಸರಿಸಿ ಸಮಸ್ತ ಮಾನವರಿಗೆ ಅವರವರ ಇಷ್ಟಗಳನ್ನು ನೆರವೇರಿಸುತ್ತ ಅಲ್ಲಿಯೇ ವಾಸಮಾಡಿದಳು.

೧೬. ತರುವಾಯ ಒಂದು ಸಮಯದಲ್ಲಿ ವಾಮನಮೂರ್ತಿಯ ಸಮೀಪದಲ್ಲಿ ಇರುವ ಗಿರಿಜೆಯು ನಾಚಿಕೆಯಿಂದ ಬಾಗಿಸಿದ ಮುಖವುಳ್ಳವಳಾಗಿ ಈ ರೀತಿಯಾದ ವಚನವನ್ನು ಮೆಲ್ಲಗೆ ಹೇಳಿದಳು.

೧೭. ದೇವನೆ! ನನ್ನ ಪತಿಯಾದ ಶಂಕರನು ಇಲ್ಲಿಗೆ ಬರುವನೆಂದು ನಿನ್ನಿಂದ ಹೇಳಲ್ಪಟ್ಟಿತು. ಆದುದರಿಂದ ನಿನ್ನನ್ನು ಕುರಿತು ನಾನು ಪ್ರಶ್ನಿಸುತ್ತೇನೆ, ಶಂಕರನು ಇಲ್ಲಿಗೆ ಯಾವಾಗ ಬರುವನು.

೧೮. ವಾಮನಮೂರ್ತಿಯೇ! ನಾನು ನನ್ನ ಪತಿಯನ್ನು ಯಾವಾಗ ನೋಡುವೆನು? ಅದನ್ನು ಹೇಳು. ಹೀಗೆಂದು ಗೌರಿಯು ಪ್ರಶ್ನೆಮಾಡಲಾಗಿ ವಾಮನನು ಇಂತೆಂದನು. ಗೌರಿಯೆ! ನೀನು ಪುನಃ ಪತಿಯ ಪ್ರಾಪ್ತಿಗೋಸ್ಕರ ಇಲ್ಲಿ ಆ ಶಂಕರನನ್ನು ಭಕ್ತಿಯಿಂದ ಪೂಜಿಸು.

ತದಾ ಸಮೇತ್ಯ ಸಂತುಷ್ಟ ಸ್ತ್ವಾಂ ನಂದಯತಿ ತೇಪತಿಃ ।
ಯದಿ ತ್ವಮದ್ಯ ಗಿರಿಜೇ ಪತಿಸಂಗಮಲಾಲಸಾ ॥ ೧೯ ॥

ಸಮರ್ಚಯ ಹರಂ ಕ್ಷಿಪ್ರಮದ್ಯೈವೇಹ ಮದಂತಿಕೇ ।
ಸಂಸ್ಥಾಪ್ಯ ಸೈಕತಂ ಲಿಂಗಂ ಪ್ರದೇಶೇ ಪಶ್ಚಿಮೋತ್ತರೇ ॥ ೨೦ ॥

ತಸ್ಮಿಂಲ್ಲಿಂಗೇ ಹರಂ ಧ್ಯಾತ್ವಾ ಸಮ್ಯಗಾವಾಹ್ಯ ತೇ ಪತಿಂ ।
ಉಪಚಾರೈಶ್ಚ ಸಕಲೈರರ್ಘ್ಯಪಾದ್ಯಾದಿಭಿರ್ಭೃಶಂ ॥ ೨೧ ॥

ಪೂಜಯಸ್ವ ತತಸ್ತುಷ್ಟಸ್ತ್ವಾಮುಪೈಷ್ಯತಿ ಶಂಕರಃ ।
ನಾರದ ಉವಾಚ :—
ವಾಮನೇನ ತಥೋಕ್ತಾ ಸಾ ಗೌರೀ ಸಂಹೃಷ್ಟಮಾನಸಾ ॥ ೨೨ ॥

ಪ್ರಣಮ್ಯ ವಾಮನಂ ದೇವಂ ತದಾಜ್ಞಾಂ ಗೃಹ್ಯ ಸತ್ವರಂ ।
ತಸ್ಯ ವಾಯವ್ಯದಿಗ್ಭಾಗೇ ಪ್ರದೇಶೇ ಪುಣ್ಯವರ್ಧನೇ ॥ ೨೩ ॥

---

೧೯. ಆಗ ನಿನ್ನ ಪತಿಯು ಸಂತುಷ್ಟನಾಗಿ ಇಲ್ಲಿಗೆ ಬಂದು ನಿನ್ನನ್ನು ಸಂತೋಷ ಪಡಿಸುವನು. ಗಿರಿಜೆಯೇ! ನೀನು ಈಗ ಪತಿಯ ಸಂಗಸೌಖ್ಯದಲ್ಲಿ ಅಭಿಲಾಷೆ ಯನ್ನು ಹೊಂದಿರುವೆ.

೨೦. ಆದ್ದರಿಂದ ನೀನು ನನ್ನ ಸಮೀಪದಲ್ಲಿದ್ದು ಹರನನ್ನು ಈಗಲೇ ಬೇಗ ಪೂಜೆಮಾಡು. ಇಲ್ಲಿಂದ ಪಶ್ಚಿಮ-ಉತ್ತರಗಳ ನಡುವೆ ವಾಯವ್ಯದಿಕ್ಕಿನಲ್ಲಿ ಮರಳಿ ನಿಂದ ರಚಿತವಾದ ಲಿಂಗವನ್ನು ಪ್ರತಿಷ್ಠೆಮಾಡು.

೨೧. ಆ ಲಿಂಗದಲ್ಲಿ ಶಿವನನ್ನು ಧ್ಯಾನಮಾಡಿ ಅಲ್ಲಿಯೇ ನಿನ್ನ ಪತಿಯನು ವಿಧಿಯನ್ನು ಅನುಸರಿಸಿ ಆವಾಹನೆಮಾಡಿ ಅರ್ಘ್ಯ-ಪಾದ್ಯ ಮುಂತಾದ ಸಕಲೋಪಚಾರ ಗಳಿಂದ ಪುನಃ ಪುನಃ ಪೂಜಿಸು.

೨೨. ಹಾಗೆ ನೀನು ಪೂಜಿಸುವುದರಿಂದ ಶಂಕರನು ಸಂತುಷ್ಟನಾಗಿ ನಿನ್ನ ಸಮೀಪಕ್ಕೆ ಬರುವನು. ನಾರದಮುನಿಯು ಮುಂದುವರಿಸಿ ಹೇಳಿದನು:— ವಾಮನದೇವನಿಂದ ಈ ರೀತಿಯಾಗಿ ಹೇಳಲ್ಪಟ್ಟ ಗೌರೀದೇವಿಯು ಬಹು ಸಂತೋಷ ಪಟ್ಟ ಮಾನಸವುಳ್ಳವಳಾದಳು.

೨೩. ಮತ್ತು ವಾಮನಮೂರ್ತಿಯನ್ನು ನಮಸ್ಕರಿಸಿ ವಾಮನದೇವನ ಆಜ್ಞೆ ಯನ್ನು ತೆಗೆದುಕೊಂಡು ಬೇಗ ಆ ಪ್ರದೇಶದ ವಾಯುವ್ಯದಿಕ್ಕಿನಲ್ಲಿರುವ, ಪುಣ್ಯವನ್ನು ವೃದ್ಧಿಪಡಿಸುವ ಪ್ರದೇಶಕ್ಕೆ ಬಂದಳು.

ಸಂಸ್ಥಾಪ್ಯ ಪಾರ್ಥಿವಂ ಲಿಂಗಂ ಪೂಜಯಾಮಾಸ ಪಾರ್ವತೀ ।
ತಸ್ಮಿಂಲ್ಲಿಂಗೇ ಸಮಾವಾಹ್ಯ ಧ್ಯಾತ್ವಾ ಸ್ವಪತಿಮಂಗನಾ ॥ ೨೪ ॥

ಅರ್ಘ್ಯಪಾದ್ಯಾದಿಕಂ ದತ್ವಾ ಸ್ನಾಪ್ಯ ಪಂಚಾಮೃತೈಃ ಶುಭೈಃ ।
ವಸ್ತ್ರಚಂದನಪುಷ್ಪೈಶ್ಚ ಧೂಪದೀಪೈಃ ಸುಗಂಧಿಭಿಃ ॥ ೨೫ ॥

ನೈವೇದ್ಯೈರ್ವಿವಿಧೈಃ ಸ್ತೋತ್ರೈಃ ಪರಿಕ್ರಮಣವಂದನೈಃ ।
ಏವಂ ತತ್ರಾನಿಶಂ ಗೌರೀ ಪೂಜಯಾಮಾಸ ಶಂಕರಂ ॥ ೨೬ ॥

ತಸ್ಯಾಮೇವಂ ಪೂಜಯಂತ್ಯಾಂ ತದಾ ವಿಜ್ಞಾಯ ಶಂಕರಃ ।
ದ್ರಷ್ಟುಕಾಮಶ್ಚ ತದ್ಭಕ್ತಿಮಾಯಯೌ ಕಾಲಸೂರ್ಯವತ್ ॥ ೨೭ ॥

ಅಂತರಿಕ್ಷೇ ಸ್ಥಿತೋ ರುದ್ರಸ್ತಾಪಯಾಮಾಸ ಪಾರ್ವತೀಂ ।
ಸಂತಪ್ತಾ ಗಿರಿಜಾ ಸಮ್ಯಕ್ ಕಾಲಸೂರ್ಯಾತಪಾಗ್ನಿನಾ ॥ ೨೮ ॥

---

೨೪. ಅಲ್ಲಿ ಪಾರ್ವತಿಯು ಪಾರ್ಥಿವಲಿಂಗವನ್ನು ಸ್ಥಾಪಿಸಿ ಪೂಜೆಮಾಡಿದಳು. ಹಾಗು ಪತ್ನಿಯಾದ ಪಾರ್ವತಿಯು ತನ್ನ ಪತಿಯನ್ನು ಆ ಲಿಂಗದಲ್ಲಿ ಧ್ಯಾನಿಸಿ ಆವಾಹನ ಮಾಡಿದಳು.

೨೫. ಅವಳು ಮಾಡಿದ ಪೂಜೆಯಲ್ಲಿ ಅರ್ಘ್ಯ-ಪಾದ್ಯ ಮುಂತಾದ ಉಪಚಾರ ಗಳನ್ನು ಅರ್ಪಿಸಿ, ಶುಭಕರವಾದ ಪಂಚಾಮೃತಗಳಿಂದ ಅಭಿಷೇಕಮಾಡಿ ವಸ್ತ್ರ, ಚಂದನ ಪುಷ್ಪ, ಸುಗಂಧಿಯಾದ ಧೂಪ, ಮತ್ತು ದೀಪ ಮುಂತಾದ ಉಪಚಾರಗಳನ್ನು ಅರ್ಪಿಸಿದಳು-

೨೬. ಮತ್ತು ವಿವಿಧವಾದ ನೈವೇದ್ಯ, ನಾನಾವಿಧದ ಸ್ತೋತ್ರಪಾಠಗಳು ಪ್ರದಕ್ಷಿಣಾ-ನಮಸ್ಕಾರ ಮುಂತಾದ ಪೂರ್ಣೋಪಚಾರಗಳಿಂದ ಗೌರಿಯು ಆ ಲಿಂಗದಲ್ಲಿ ಹಗಲು ಮತ್ತು ರಾತ್ರಿಕಾಲಗಳಲ್ಲಿ ಶಂಕರನನ್ನು ಪೂಜಿಸಿದಳು.

೨೭. ಆಗ ಪಾರ್ವತಿಯು ಈ ವಿಧವಾಗಿ ಪೂಜಿಸುತ್ತಿರುವುದನ್ನು ತಿಳಿದು ಅವಳ ಭಕ್ತಿಯನ್ನು ಪರೀಕ್ಷಿಸಲೋಸ್ಕರ ಶಿವನು ಪ್ರಲಯಕಾಲದ ಸೂರ್ಯನ ಆಕಾರ ವನ್ನು ಧರಿಸಿ ತಪಿಸುತ್ತ ಉದಯಿಸಿದನು.

೨೮. ರುದ್ರನು ಸೂರ್ಯನ ರೂಪದಿಂದ ಆಕಾಶದಲ್ಲಿ ಇದ್ದು ಪಾರ್ವತಿಯನ್ನು ಪೂಜೆಗೆ ಭಂಗ ಬರುವಂತೆ ಹೆಚ್ಚಾಗಿ ತಪಿಸಿದನು. ಪಾರ್ವತಿಯು ಪ್ರಲಯಸೂರ್ಯನ ಬಿಸಿಲಿನ ಅಗ್ನಿಯಿಂದ ಬಹಳ ಸಂತಪ್ತಳಾದಳು.

ಇಚ್ಛಂತೀ ಚಾತಪತ್ರಾಣಂ ತದಾ ಸಸ್ಮಾರ ವಾಮನಂ ।
ತಸ್ಯಾ ವಿಚಿಂತಿತಂ ಜ್ಞಾತ್ವಾ ವಾಮನೋ ಭಕ್ತವತ್ಸಲಃ ॥ ೨೯ ॥

•ತತ್ರ ತಸ್ಯೈ ದದೌ ಛಾಯಾಂ ಸೃಷ್ಟ್ವಾ ಚೈಕಾಮ್ರಮುತ್ತಮಂ ।
ದಿವ್ಯಪುಣ್ಯಫಲೈರ್ಯುಕ್ತಂ ಪತ್ರಸಂಚಯಸಂಕುಲಂ ॥ ೩೦ ॥

ದೃಷ್ಟ್ವಾ ತತೋತ್ಥಿತಂ ಚೈಕಮಾಮ್ರಮದ್ಭುತದರ್ಶನಂ ।
ತಚ್ಛಾಯಾಮಾಶ್ರಿತಾ ದೇವೀ ನನಂದ ಗಿರಿಜಾ ನೃಪ ॥ ೩೧ ॥

ಶಂಕರೋಽಪಿ ಸಮುದ್ವೀಕ್ಷ್ಯ ತತ್ರಾಮ್ರತರುಮುತ್ಥಿತಂ ।
ತಚ್ಛಾಯಾಮಾಶ್ರಿತಾಂ ಗೌರೀಂ ಪುನಶ್ಚೈವಂ ಚಕಾರ ಹ ॥ ೩೨ ॥

ಸ್ವನೇತ್ರಾದನಲಂ ಸೃಷ್ಟ್ವಾ ದದಾಹ ತರುಮಂಜಸಾ ।
ತಾಂ ಚ ಸಂತಾಪಯಾಮಾಸ ಸ್ವನೇತ್ರಾಗ್ನಿಕಣೈಃ ಪುನಃ ॥ ೩೩ ॥

---

೨೯. ಆಗ ಬಿಸಿಲಿನ ತಾಪವನ್ನು ಸಹಿಸಲಾರದೆ ತಾಪದ ಶಾಂತಿಗೋಸ್ಕರ ಒಂದು ಛಾಯೆಯನ್ನು ಇಚ್ಛಿಸುವವಳಾಗಿ ವಾಮನಮೂರ್ತಿಯನ್ನು ಸ್ಮರಿಸಿಕೊಂಡಳು. ಭಕ್ತರಲ್ಲಿ ವಾತ್ಸಲ್ಯವನ್ನು ಇಟ್ಟಿರುವ ವಾಮನನು ಪಾರ್ವತಿಯು ಚಿಂತಿಸಿದ ತನ್ನ ಇಷ್ಟವನ್ನು ತಿಳಿದುಕೊಂಡನು.

೩೦. ಆಗ ದಿವ್ಯವಾದ ಮತ್ತು ಪವಿತ್ರವಾದ ಫಲಗಳಿಂದ ತುಂಬಿದ, ದಟ್ಟವಾಗಿ ಬೆಳೆದ ಎಲೆಗಳಿಂದ ಪರಿಪೂರ್ಣವಾದ ಒಂದು ಉತ್ತಮವಾದ ಮಾವಿನ ಮರವನ್ನು ಸೃಷ್ಟಿಮಾಡಿ ಪಾರ್ವತಿಗೆ ಅಲ್ಲಿ ಛಾಯೆಯನ್ನು ಸೃಷ್ಟಿಸಿಕೊಟ್ಟನು.

೩೧. ರಾಜನೆ! ಆಕಸ್ಮಾತ್ತಾಗಿ ಹುಟ್ಟಿದ ಮತ್ತು ಪ್ರೇಕ್ಷಕರಿಗೆ ಅದ್ಭುತವನ್ನು ಉಂಟುಮಾಡುವ ಮಾವಿನಮರವನ್ನು ನೋಡಿ ಗಿರಿಜಾದೇವಿಯು ಅದರ ಛಾಯೆಯನ್ನು ಆಶ್ರಯಿಸಿ ಸಂತಾಪವನ್ನು ಕಳೆದುಕೊಂಡು ಸಂತೋಷಪಟ್ಟಳು.

೩೨. ಈಕೆಯ ಭಕ್ತಿ ಪರೀಕ್ಷೆಗೆ ಬಂದಿದ್ದ ಈಶ್ವರನು ಅಲ್ಲಿ ಮಾವಿನಮರವು ಹುಟ್ಟಿರುವುದನ್ನೂ ಅದರ ಛಾಯೆಯನ್ನು ಆಶ್ರಯಿಸಿ ಪಾರ್ವತಿಯು ಪೂಜಾನಿಯಮವನ್ನು ಆಚರಿಸುತ್ತಿರುವುದನ್ನೂ ನೋಡಿ ಮತ್ತೆ ಹೀಗೆ ಮಾಡಿದನು.

೩೩. ತನ್ನ ನೇತ್ರದಿಂದ ಅಗ್ನಿಯನ್ನು ಸೃಷ್ಟಿಸಿ ಅದರ ಜ್ವಾಲೆಯಿಂದ ವೃಕ್ಷವನ್ನು ಬೇಗ ಸುಟ್ಟುಹಾಕಿದನು. ಮತ್ತು ತನ್ನ ನೇತ್ರಾಗ್ನಿಯ ಕಿಡಿಗಳಿಂದ ಮತ್ತೆ ಪಾರ್ವತಿಯನ್ನು ತಪಿಸಲಾರಂಭಿಸಿದನು.

ಪರಿತಪ್ತಾ ಪುನರ್ದೇವೀ ನಿರ್ದಗ್ಧೇ ಸ್ವಾಶ್ರಯೇ ತರೌ ।
ಬಭೂವ ರೌದ್ರಾಗ್ನಿಕಣೈಃ ಪರಿಪ್ಲುಷ್ಟಾಂಗಪಲ್ಲವಾ ॥ ೩೪ ॥

ಮೃಣಾಳೀವಾತಪಕ್ಲಾಂತಾ ಛಿನ್ನಾ ಮೃದುಲತೇವ ಚ ।
ಮೂರ್ಛಿತಾ ಪತಿತಾ ಪತಿತಾ ಭೂಮೌ ಪ್ರದಧ್ಯೌ ಮನಸಾ ಹರಿಂ ॥

ಪಾಹಿ ಮಾಂ ದೇವದೇವಾಗ್ನೇರಕಸ್ಮಾದುತ್ಥಿತಾದಿಪ ।
ಪರಿತಪ್ತಾಂ ಚ ಭೀತಾಂ ಚ ಪಾಹಿ ಮಾಮೇತ್ಯ ವಾಮನ ॥ ೩೬ ॥

ಇತಿ ಬ್ರುವಂತೀಂ ಗಿರಿಜಾಂ ಪ್ರಪನ್ನಾಂ ಶರಣೈಷಿಣೀಂ ।
ದ್ರುತಮಭ್ಯಾಯಯೌ ಗೋಪ್ತುಂ ವಾಮನಃ ಕರುಣಾನಿಧಿಃ ॥ ೩೭ ॥

ಸುಧಾಂ ಪ್ರವರ್ಷನ್ ಸ್ವಕರೈಃ ಪೂರ್ಣಚಂದ್ರಾಕೃತಿರ್ಹರಿಃ ।
ತಾಪಂ ಖಂಡಯಿತುಂ ಗೌರ್ಯಾಃ ಪ್ರಾದುರಾಸೀತ್ತದಂತಿಕೇ ॥ ೩೮ ॥

---

೩೪. ಆಗ ಪಾರ್ವತಿಗೆ ಛಾಯೆಯನ್ನು ಕೊಟ್ಟ ಮರವು ಸುಟ್ಟುಹೋದುದರಿಂದ ಮತ್ತೆ ರುದ್ರನ ನೇತ್ರಾಗ್ನಿಕಣಗಳಿಂದ ಚಿಗುರುಗಳಂತೆ ಕೋಮಲವಾದ ಆಕೆಯ ಅವಯವಗಳೆಲ್ಲವೂ ಸುಟ್ಟುಹೋದಂತೆ ಆದವು.

೩೫. ಮತ್ತು ಬಿಸಿಲಿನಿಂದ ಬಾಡಿಹೋದ ತಾವರೆಯ ನಾರಿನಂತೆಯೂ, ಕಿತ್ತುಹಾಕಿರುವ ಕೋಮಲವಾದ ಲತೆಯಂತೆಯೂ ಬಳಲಿ ಮೂರ್ಛೆ ಹೋದಂತಾಗಿ ಭೂಮಿಯಲ್ಲಿ ಬಿದ್ದು ಹರಿಯನ್ನು ಮನಸ್ಸಿನಲ್ಲಿ ಧ್ಯಾನಿಸಿದಳು.

೩೬. ಸ್ವಾಮಿಯೇ! ದೇವಾಧಿದೇವನೆ! ಅಕಸ್ಮಾತ್ತಾಗಿ ಇಲ್ಲಿ ಹುಟ್ಟಿರುವ ಈ ಅಗ್ನಿಯ ಬಾಧೆಯಿಂದ ನನ್ನನ್ನು ರಕ್ಷಿಸು, ವಾಮನಮೂರ್ತಿಯೇ! ಈ ಅಗ್ನಿಯಿಂದ ತಪ್ತಳೂ ಬಹಳ ಭಯಗ್ರಸ್ತಳೂ ಆದ ನನ್ನನ್ನು ಪಾಲಿಸು.

೩೭. ಈ ರೀತಿಯಾಗಿ ಪ್ರಾರ್ಥಿಸುತ್ತ ಶರಣವನ್ನು ಅಪೇಕ್ಷಿಸಿ ಭಕ್ತಿಯಿಂದ ತನ್ನಲ್ಲಿ ಶರಣಾಗತಳಾಗಿರುವ ಪಾರ್ವತಿಯನ್ನು ರಕ್ಷಿಸಲು ಕರುಣಾನಿಧಿಯಾದ ವಾಮನನನು ಬೇಗ ಸಮೀಪಕ್ಕೆ ಬಂದನು.

೩೮. ಆಗ ಗೌರಿಯ ತಾಪವನ್ನು ಖಂಡಿಸಲು ಹರಿಯು ಪೂರ್ಣಚಂದ್ರನ ಆಕಾರವನ್ನು ಧರಿಸಿ ತನ್ನ ಕಿರಣಜಾಲದಿಂದ ಅಮೃತವನ್ನು ಸುರಿಸುತ್ತ ಆ ಪಾರ್ವತೀ ದೇವಿಯ ಸಮೀಪದಲ್ಲಿ ಪ್ರಾದುರ್ಭವಿಸಿದನು.

ಶಶಾಂಕಬಿಂಬಮಧ್ಯಸ್ಥಃ ಶಂಖಚಕ್ರಗದಾಧರಃ ।
ಸೃಜನ್ ಸುಧಾಮಯೀಂ ವೃಷ್ಟಿಂ ದದೃಶೇಽದ್ಭುತದರ್ಶನಃ । ॥ ೩೯ ॥

ತತಸ್ತಮಾಗತಂ ದೇವಂ ಶಂಖಚಕ್ರಗದಾಧರಃ ।
ಚಂದ್ರಮಂಡಲಮಧ್ಯಸ್ಥಂ ಪೀತಾಂಬರಧರಂ ಹರಿಂ ॥ ೪೦ ॥

ಶ್ರೀವತ್ಸಕೌಸ್ತುಭಧರಂ ವನಮಾಲಾವಿಭೂಷಿತಂ ।
ದದರ್ಶ ವಾಮನಂ ತತ್ರ ಗೌರೀ ಸಂಹೃಷ್ಟಮಾನಸಾ ॥ ೪೧ ॥

ದೃಷ್ಟ್ವಾ ಪ್ರಣಮ್ಯ ದೇವೇಶಮುವಾಚ ವಚನಂ ಮುದಾ ।
ಅತ್ರೈವ ತಿಷ್ಠ ದೇವ ತ್ವಮಿಹಾದ್ಯ ನಿಕಟೇ ಮಮ ॥ ೪೨ ॥

ನ ಮೇ ಭೀತಿರ್ಭವೇತ್ತಸ್ಮಾತ್ತ್ವಯಿ ಸನ್ನಿಹಿತೇ ಸ್ಥಿತೇ ।
ಇತಿ ತಸ್ಯಾ ವಚಃ ಶ್ರುತ್ವಾ ತದಾ ಚಂದ್ರಾಕೃತಿರ್ಹರಿಃ ॥ ೪೩ ॥

---

೩೯. ಆಗ ವಾಮನದೇವನು ಚಂದ್ರನ ಸಂಪೂರ್ಣಮಂಡಲದ ಮಧ್ಯದಲ್ಲಿ ಶಂಖ-ಚಕ್ರ-ಗದೆಗಳನ್ನು ಧರಿಸಿ ಅದ್ಭುತವಾದ ದರ್ಶನವುಳ್ಳವನಾಗಿ ಅಮೃತಮಯವಾದ ವೃಷ್ಟಿಯನ್ನು ಸುರಿಸುತ್ತಿರುವನಂತೆ ಕಂಡನು.

೪೦. ಆಗ ಪಾರ್ವತಿಯು ಶಂಖ, ಚಕ್ರ, ಗದೆಗಳನ್ನು ಧರಿಸಿದವನೂ, ಪೀತಾಂಬರವನ್ನು ಉಟ್ಟುಕೊಂಡವನೂ ಆಗಿ ಚಂದ್ರಬಿಂಬದ ಮಧ್ಯದಲ್ಲಿ ಇದ್ದವನಾಗಿ ಉದಯಿಸಿ ಬಂದ ಹರಿಯನ್ನು ನೋಡಿದಳು.

೪೧. ಮತ್ತು ಶೀವತ್ಸವೆಂಬ ಅಂಕ, ಕೌಸುಭ ರತ್ನಗಳನ್ನು ಧರಿಸಿ, ವನಮಾಲೆಯಿಂದ ಶೋಭಿಸಲ್ಪಟ್ಟ ವಾಮನಮೂರ್ತಿಯನ್ನು ಅಲ್ಲಿ ನೋಡಿ ಗೌರಿಯು ಸಂತೋಷಪಟ್ಟ ಮಾನಸವುಳ್ಳವಳಾದಳು.

೪೨. ದೇವತೆಗಳಿಗೆ ಅಧಿಪತಿಯಾದ ವಾಮನನನ್ನು ನಮಸ್ಕರಿಸಿ ಆನಂದಪೂರ್ವಕವಾಗಿ ಈ ಮಾತನ್ನು ಆಡಿದಳು. ಸ್ವಾಮಿಯೆ ! ನೀನು ಇಲ್ಲಿ ನನ್ನ ಸಮೀಪದಲ್ಲಿಯೇ ಈಗ ವಾಸಮಾಡು.

೪೩. ನೀನು ನನ್ನ ಸಮೀಪದಲ್ಲಿ ಇರುವವನಾದರೆ ಈ ತಾಪದ ಉಪದ್ರವದಿಂದ ನನಗೆ ಭೀತಿಯುಂಟಾಗುವುದಿಲ್ಲ. ಎಂದು ಆಗ ಹೇಳಿದ ಗೌರಿಯ ವಚನವನ್ನು ಚಂದ್ರನ ಆಕಾರವನ್ನು ಧರಿಸಿದ ಹರಿಯು ಶ್ರವಣಮಾಡಿದನು.

ಸಾಂತ್ವಯನ್ ವಚಸಾ ಗೌರೀಮಾಚಚಕ್ಷೇ ವಚಃ ಶುಭಂ ।
ಮಾ ಭೈಷೀರ್ಗೌರಿ ವತ್ಸೇ ತ್ವಂ ಮಾ ತೇಽಸ್ತು ಮನಸೋ ವ್ಯಥಾ॥ ೪೪ ॥

ಅಹಮತ್ರೈವ ವತ್ಸ್ಯಾಮಿ ಸಮೀಪೇ ತವ ಸುವ್ರತೇ ।
ಇತ್ಯುಕ್ತ್ವಾ ತತ್ರ ದೇವೇಶಃ ಸರೋ ನಿರ್ಮಾಯ ಚಾದ್ಭುತಂ ॥ ೪೫ ॥

ತಸ್ಮಿಂತ್ಸ್ವಕಿರಣೈಃ ಸದ್ಯಃ ಪೂರಯಾಮಾಸ ವೈ ಸುಧಾಂ ।
ಗೌರೀಂ ಚೋವಾಚ ಸಂತುಷ್ಟಃ ಪೂರ್ಣಚಂದ್ರಾಕೃತಿರ್ಹರಿಃ ॥ ೪೬ ।

ಮಯಾ ತ್ವತ್ತಾಪಶಾಂತ್ಯರ್ಥಮತ್ರೇದಂ ನಿರ್ಮಿತಂ ಸರಃ ।
ಸ್ನಾತ್ವಾತ್ರ ಗತಸಂತಾಪಾ ಭವ ತ್ವಂ ವರವರ್ಣಿನಿ ॥ ೪೭ ॥

ಇತ್ಯುಕ್ತಾ ದೇವದೇವೇನ ಸ್ನಾತ್ವಾ ತತ್ರ ಗಿರೀಂದ್ರಜಾ ।
ಭೂತ್ವಾ ವಿಗತಸಂತಾಪಾ ತತ್ರೈವ ಪುರತೋ ಹರೇಃ ॥ ೪೮ ॥

---

೪೪. ಮತ್ತು ಮೃದುವಾದ ವಚನದಿಂದ ಗೌರಿಯನ್ನು ಸಮಾಧಾನಪಡಿಸುವವನಾಗಿ ಶುಭಕರವಾದ ವಚನವನ್ನು ಆಡಿದನು. ಗೌರಿಯೇ! ಪುತ್ರಿಯೇ! ನೀನು ಹೆದರಬೇಡ, ನಿನ್ನ ಮನಸ್ಸಿಗೆ ಅಲ್ಪವೂ ವ್ಯಥೆಯು ಆಗುವುದು ಬೇಡ.

೪೫. ವ್ರತನಿಯಮಾನುಷ್ಠಾನಪರಳೆ! ನಾನು ನಿನ್ನ ಇಷ್ಟದಂತೆ ಇಲ್ಲಿಯೇ ನಿನ್ನ ಸಮೀಪದಲ್ಲಿ ವಾಸಮಾಡುವೆನು, ಎಂದು ಹೇಳಿ ವಾಮನನು ಅಲ್ಲಿ ಅದ್ಭುತವಾದ ಒಂದು ಸರೋವರವನ್ನು ನಿರ್ಮಿಸಿದನು.

೪೬. ಆ ಸರೋವರದಲ್ಲಿ ತನ್ನ ಕಿರಣಗಳಿಂದ ಕೂಡಲೇ ಅಮೃತವನ್ನು ತುಂಬಿಸಿದನು. ಸಂತೋಷಪೂರ್ಣನೂ ಪೂರ್ಣಚಂದ್ರಾಕಾರವನ್ನು ಧರಿಸಿದವನೂ ಆದ ಹರಿಯು ಗೌರಿಯನ್ನು ಕುರಿತು ಈ ರೀತಿಯಾಗಿ ಹೇಳಿದನು.

೪೭. ನಾನು ನಿನ್ನ ತಾಪವು ಶಾಂತಿಯಾಗುವುದಕ್ಕೋಸ್ಕರ ಇಲ್ಲಿ ಈ ಸರೋವರವನ್ನು ನಿರ್ಮಿಸಿರುವೆನು. ಸುಂದರನಾರಿಯಾದ ಗಿರಿಜೆಯೆ! ಇದರಲ್ಲಿ ನೀನು ಸ್ನಾನಮಾಡಿ ತಾಪವನ್ನು ಪರಿಹರಿಸಿಕೊಳ್ಳುವವಳಾಗು.

೪೮. ದೇವಾಧಿದೇವನಿಂದ ಈ ರೀತಿಯಾಗಿ ಹೇಳಲ್ಪಟ್ಟ ಪಾರ್ವತಿಯು ಆ ಸರೋವರದಲ್ಲಿ ಸ್ನಾನಮಾಡಿ ಆದರಿಂದ ನಿಖಿಲತಾಪವನ್ನು ಕಳೆದುಕೊಂಡು ಆ ಹರಿಯ ಮುಂದುಗಡೆಯಲ್ಲಿ ತನ್ನ ಕರ್ತವ್ಯವನ್ನು ಆರಂಭಿಸಿದಳು.

ತದಾಜ್ಞಯಾ ಪುನರ್ಲಿಂಗೇ ಶಂಭುಮರ್ಚಿತುಮಾರಭತ್ ।
ತದಾ ರೌದ್ರಾಗ್ನಿಸಂದಗ್ಧಶ್ಚಾಮ್ರೋsಪ್ಯಮೃತವರ್ಷಣಾತ್ ॥ ೪೯ ॥

ಅಭೂತ್ಪಲ್ಲವಿತಃ ಸದ್ಯಃ ಫಲೈಃ ಪುಷ್ಪೈಶ್ಚ ಸಂಭೃತಃ ।
ತನ್ಮೂಲೇ ಲಿಂಗಮಗಜಾ ಸಮ್ಯಕ್ ಸಂಸ್ಥಾಪ್ಯ ಸೈಕತಂ ॥ ೫೦ ॥

ತಸ್ಮಿನ್ನಾವಾಹ್ಯ ದೇವೇಶಂ ಪೂಜಯಾಮಾಸ ಶಂಕರಂ ।
ಯನ್ನಿರ್ಮಿತಂ ತತ್ರ ಸರಶ್ಚಂದ್ರರೂಪೇಣ ವಿಷ್ಣುನಾ ॥ ೫೧ ॥

ನಾಮ್ನಾ ತಚ್ಚಂದ್ರತೀರ್ಥಾಖ್ಯಮಭೂತ್ಪಾಪಹಂ ನೃಣಾಂ ।
ಚಂದ್ರತೀರ್ಥೇ ಸಕೃತ್ಕಾಂಚ್ಯಾಂ ಭಕ್ತ್ಯಾ ಸ್ನಾತಿ ನರೋ ಯದಿ ॥ ೫೨ ॥

ತಾಪತ್ರಯಾದ್ವಿನಿರ್ಮುಕ್ತಃ ಸರ್ವಾನ್ ಕಾಮಾನವಾಪ್ನುಯಾತ್ ।
ತೀರ್ಥಸ್ಯ ಪಶ್ಚಿಮೇ ತೀರೇ ಪಶ್ಚಿಮಾಭಿಮುಖಂ ಹರಿಂ ॥ ೫೩ ॥

---

೪೯. ಆಗ ಆ ವಾಮನಮೂರ್ತಿಯ ಆದೇಶದಿಂದ ಆ ಲಿಂಗದಲ್ಲಿ ಮತ್ತೆ ಶಂಕರನನ್ನು ಅರ್ಚಿಸಲು ಪ್ರಾರಂಭಿಸಿದಳು. ಆಗ ಹಿಂದೆ ಹುಟ್ಟಿದ್ದ ಮಾವಿನಮರವು ರುದ್ರನ ಅಗ್ನಿಯಿಂದ ಸುಟ್ಟುಹೋಗಿದ್ದರೂ ಕೂಡ ಪುನಃ ಈ ಅಮೃತವೃಷ್ಟಿಯಿಂದ ನೆನೆಸಲ್ಪಟ್ಟಿತು.

೫೦. ಆ ಅಮೃತವೃಷ್ಟಿಯ ಬಲದಿಂದ ಕೂಡಲೆ ಚಿಗುರು, ಫಲ, ಪುಷ್ಪಗಳಿಂದ ತುಂಬಿಹೋಗಿರುವುದಾಯಿತು. ಆ ಗಿಡದ ಮೂಲದಲ್ಲಿಯೇ ಗೌರಿಯು ಮಳಲಿನ ಲಿಂಗವನ್ನು ಸ್ಥಾಪಿಸಿದಳು.

೫೧. ಮತ್ತು ಆ ಲಿಂಗದಲ್ಲಿ ದೇವತೆಗಳಿಗೆ ಸ್ವಾಮಿಯಾದ ಈಶ್ವರನನ್ನು ಆವಾಹಿಸಿ ಪೂಜಿಸಿದಳು. ಹೀಗೆ ಪಾರ್ವತಿಯ ತಾಪಶಾಂತಿಗೋಸ್ಕರ ಚಂದ್ರನ ಆಕಾರದಿಂದ ಅವತರಿಸಿದ ವಿಷ್ಣುವಿನಿಂದ ಅಲ್ಲಿ ಸರೋವರವು ನಿರ್ಮಿಸಲ್ಪಟ್ಟಿತು.

೫೨. ಅದು ಚಂದ್ರತೀರ್ಥವೆಂಬ ಹೆಸರಿನಿಂದ ಪ್ರಸಿದ್ಧವಾಗಿ ಜನಗಳ ಪಾಪಗಳನ್ನು ಕಳೆಯುವ ಪುಣ್ಯ ತೀರ್ಥವಾಯಿತು. ನರನು ಕಾಂಚೀನಗರದಲ್ಲಿರುವ ಆ ಚಂದ್ರತೀರ್ಥದಲ್ಲಿ ಭಕ್ತಿಪೂರ್ವಕವಾಗಿ ಒಂದು ಸಲವಾದರೂ ಸ್ನಾನಮಾಡಬೇಕು.

೫೩. ಅವನು ಸ್ನಾನಮಾಡಿದ ಪುಣ್ಯದಿಂದ ತಾಪತ್ರಯಗಳಿಂದ ಮುಕ್ತನಾಗಿ ಸರ್ವಮನೋರಥಗಳನ್ನು ಹೊಂದುತ್ತಾನೆ. ಆ ತೀರ್ಥದ ಪಶ್ಚಿಮದಿಕ್ಕಿನ ತೀರದಲ್ಲಿ ಹರಿಯು ಪಶ್ಚಿಮಾಭಿಮುಖನಾಗಿರುವನು.

ತಿಷ್ಠಂತಂ ಚಂದ್ರಖಂಡಾಖ್ಯಮುಮಾಯಾಸ್ತಾಪನಾಶನಂ ।
ತಂ ದೃಷ್ಟ್ವಾ ಮನುಜಃ ಪಾಪಾನ್ಮುಕ್ತೋ ಮೋಕ್ಷಮವಾಪ್ನುಯಾತ್ ॥
ಯಸ್ಮಾತ್ ಸ ಚಂದ್ರರೂಪೇಣ ಗೌರ್ಯಾಸ್ತಾಪಮಖಂಡಯತ್
ತಸ್ಮಾತ್ತಂ ಚಂದ್ರಖಂಡಾಖ್ಯಂ ಪ್ರವದಂತಿ ಮನೀಷಿಣಃ ॥ ೫೫ ॥

ಏವಂ ಸತ್ಯವ್ರತೇ ಕ್ಷೇತ್ರೇ ಚಂದ್ರಖಂಡಾಭಿಧೋ ಹರಿಃ ।
ಪ್ರಾದುರ್ಬಭೂವ ರಾಜೇಂದ್ರ ಲೋಕಾನಾಂ ಹಿತಕಾಮ್ಯಯಾ ॥ ೫೬ ॥

ತತಸ್ತು ಗೌರೀ ಮುದಿತಾ ಹರೇಃ ಪುರ-
ಸ್ತತ್ರೈವ ಚೈಕಾಮ್ರತರೋರಧಸ್ತಾತ್ ।
ಚಕಾರ ಪೂಜಾಂ ವಿಧಿವದ್ವೃಷಾಕಪೇ-
ಸ್ತದೀಯಸಂದರ್ಶನಸೌಖ್ಯಲಾಲಸಾ ॥ ೫೭ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಚತುರ್ವಿಂಶೋऽಧ್ಯಾಯಃ.

---

೫೪. ಪಾರ್ವತಿಯ ತಪೋವಿಘ್ನವನ್ನುಂಟುಮಾಡುವ ತಾಪಗಳನ್ನು ನಾಶ ಮಾಡುತ್ತಲಿರುವ ಆ ಹರಿಯ ವಿಗ್ರಹಕ್ಕೆ ಚಂದ್ರಖಂಡವೆಂದು ಹೆಸರು. ಆ ಮೂರ್ತಿಯನ್ನು ಸಾಕ್ಷಾತ್ಕರಿಸಿದ ಮನುಷ್ಯನು ಪಾಪಮುಕ್ತನಾಗಿ ಮುಕ್ತಿಯನ್ನು ಹೊಂದುವನು.

೫೫. ಹರಿಯು ಚಂದ್ರನ ಆಕಾರವನ್ನು ಧರಿಸಿ ಬಂದು ಗೌರಿಯ ತಾಪವನ್ನು ನಿವಾರಿಸಿದುದರಿಂದ ಜ್ಞಾನಿಗಳು ಆ ಮೂರ್ತಿಯನ್ನು ಚಂದ್ರಖಂಡ ಎಂಬುದಾಗಿ ಕರೆಯುವರು.

೫೬. ರಾಜೇಂದ್ರನೆ! ಈ ರೀತಿಯಾಗಿ ಸತ್ಯವ್ರತಕ್ಷೇತ್ರದಲ್ಲಿ ಹರಿಯು ಲೋಕಕ್ಕೆ ಹಿತವನ್ನುಂಟುಮಾಡಬೇಕೆಂಬ ಕರುಣಾದೃಷ್ಟಿಯಿಂದ ಚಂದ್ರಖಂಡ ಎಂಬ ಹೆಸರಿನಿಂದ ಆವಿರ್ಭಾವಹೊಂದಿದನು.

೫೭. ಅನಂತರದಲ್ಲಿ ಗೌರಿಯು ಬಹು ಸಂತೋಷಪಟ್ಟವಳಾಗಿ ಹರಿಯ ಮುಂಭಾಗದಲ್ಲಿ ಆಮ್ರವೃಕ್ಷದ ಮೂಲದಲ್ಲಿ ಕುಳಿತುಕೊಂಡು ಶಂಕರನನ್ನು ಸಂದರ್ಶನ ಮಾಡುವುದರಲ್ಲಿ ಉತ್ಕಟವಾದ ಅಭಿಲಾಷೆಯುಳ್ಳವಳಾಗಿ ಶಂಕರನ ಪೂಜೆಯನ್ನು ವಿಧಿಪೂರ್ವಕವಾಗಿ ಆಚರಿಸಿದಳು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಪಂಚವಿಂಶೋಽಧ್ಯಾಯಃ

ನಾರದ ಉವಾಚ :—

ತತಃ ಶಂಭುಃ ಪ್ರಸನ್ನಾತ್ಮಾ ತಾಂ ಪರೀಕ್ಷಯಿತುಂ ಪುನಃ ।
ದ್ರಷ್ಟುಂ ಚ ಪರಮಾಂ ತಸ್ಯಾ ಭಕ್ತಿಮಾತ್ಮನಿ ನಿಶ್ಚಲಾಂ ॥ ೧ ॥

ಸ ತು ಗಂಗಾಧರೋ ರಾಜನ್ ಕ್ಷೇತ್ರೇ ಸತ್ಯವ್ರತೇ ತದಾ ।
ಗಿರಿಜಾಯಾಃ ಪೂಜಯಂತ್ಯಾಃ ಪಶ್ಚಿಮೇ ಯೋಜನತ್ರಯೇ ॥ ೨ ॥

ಸ್ಥಿತಸ್ತತ್ರ ಜಟಾಜೂಟಜಾಹ್ನವೀಮುತ್ಸಸರ್ಜ ಹ ।
ಉವಾಚ ಚ ಸ್ವಶಿರಸೋ ಧರಾಯಾಮುವತಾರ್ಯ ತಾಂ ॥ ೩ ॥

---

೧. ನಾರದ ಮುನಿಯು ಇಂತೆಂದನು:---ಅನಂತರದಲ್ಲಿ ಪಾರ್ವತಿಯ ಈ ತಪೋಬಲದಿಂದ ಶಂಕರನು ಪ್ರಸನ್ನನಾಗಿ ಪಾರ್ವತಿದೇವಿಗೆ ತನ್ನಲ್ಲಿರುವ ನಿಶ್ಚಲವಾದ ಪರಮಭಕ್ತಿಯನ್ನು ಪರೀಕ್ಷೆಮಾಡಲು ಚಿಂತಿಸಿದನು.

೨. ರಾಜನೇ! ಶಂಕರನು ಹೀಗೆ ಚಿಂತಿಸಿ ಪೂಜೆಮಾಡುತ್ತಲಿದ್ದ ಪಾರ್ವತಿಯು ವಾಸಮಾಡಿರುವ ಸ್ಥಳಕ್ಕಿಂತ ಪಶ್ಚಿಮದಲ್ಲಿ ಮೂರು ಯೋಜನಗಳ ದೂರದಲ್ಲಿ ಆ ಸತ್ಯವ್ರತಕ್ಷೇತ್ರದಲ್ಲಿ ಆಗ ಪ್ರಾದುರ್ಭವಿಸಿದನು.

೩. ಮತ್ತು ಅಲ್ಲಿ ತನ್ನ ಜಟಾಜೂಟದಲ್ಲಿದ್ದ ಗಂಗೆಯನ್ನು ಕೆಳಕ್ಕೆ ಬಿಟ್ಟನು ಅಲ್ಲದೆ ಗಂಗಾನದಿಯನ್ನು ತನ್ನ ಶಿರದಿಂದ ಕೆಳಕ್ಕೆ ಇಳಿಸಿ ಅದನ್ನು ಕುರಿತು ಈರೀತಿಯಾಗಿ ಹೇಳಿದನು.

ಜಾಹ್ನವಿ ತ್ವಮಿತೋ ಗತ್ವಾ ವೇಗಾತ್ ಸ್ರೋತಸ್ಸ್ವರೂಪಿಣೀ ।
ಪ್ಲಾವಯಂತೀವ ಗಿರಿಜಾಂ ವಿಭೀಷಯಿತುಮರ್ಹಸಿ ॥ ೪ ॥

ಇತ್ಯುಕ್ತಾ ಶಂಭುನಾ ಗಂಗಾ ಭೂತ್ವಾ ಸ್ರೋತಃಸ್ವರೂಪಿಣೀ ।
ವೇಗಾದಾಗಾತ್ ಪ್ಲಾವಯಿತುಂ ಪಶ್ಚಿಮಾದ್ಯೋಜನತ್ರಯಾತ್ ॥ ೫ ॥

ಪ್ರೇಷಯಿತ್ವಾ ತತೋ ಗಂಗಾಂ ಗೌರೀಂ ಭೀಷಯಿತುಂ ಹರಃ ।
ಗಂಗಾಧರ ಇತಿ ಖ್ಯಾತಸ್ತತ್ರೈವೋವಾಸ ಪಶ್ಚಿಮೇ ॥ ೬ ॥

ತತಃ ಸ್ರೋತಃ ಸಮುದ್ವೀಕ್ಷ್ಯ ತತ್ರಾಕಸ್ಮಾದುಪಾಗತಂ ।
ಸಂಭ್ರಾಂತಾ ಗಿರಿಜಾ ರಾಜನ್ ಬಭೂವ ಭಯವಿಕ್ಲವಾ ॥ ೭ ॥

ಭಯಪ್ರಕಂಪಿತಾಂಗೀ ಸಾ ದಧ್ಯೌ ದೇವಂ ಪುರಃ ಸ್ಥಿತಂ ।
ಚಂದ್ರಖಂಡಮುಮಾ ರಾಜನ್ ತಾಂ ಚ ದೇವೋಽಪ್ಯುವಾಚ ಹ ॥ ೮ ॥

---

೪. ಜಾಹ್ನವಿಯೆ! ನೀನು ಪ್ರವಾಹರೂಪದಿಂದ ಇಲ್ಲಿಂದ ವೇಗವಾಗಿ ಹೋಗಿ ಪಾರ್ವತಿಯನ್ನು ತೇಲಿಸಿಕೊಂಡು ಹೋಗುವವಳಂತೆ ಅವಳಿಗೆ ಭೀತಿಯನ್ನುಂಟು ಮಾಡು.

೫. ಹೀಗೆಂದು ಶಿವನಿಂದ ಆಜ್ಞಾಪಿಸಲ್ಪಟ್ಟ ಗಂಗೆಯು ಕೂಡಲೆ ಪ್ರವಾಹ ರೂಪವನ್ನು ಧರಿಸಿ ಪಶ್ಚಿಮದಿಕ್ಕಿನ ಯೋಜನತ್ರಯ ದೂರದಿಂದ ಎಲ್ಲವನ್ನೂ ತೇಲಿಸಿ ಕೊಂಡು ಹೋಗಲು ವೇಗವಾಗಿ ಹರಿದುಬಂದಳು.

೬. ಅನಂತರದಲ್ಲಿ ಈಶ್ವರನು ಪಾರ್ವತಿಯನ್ನು ಭಯಪಡಿಸಲು ಗಂಗೆಯನ್ನು ಕಳುಹಿಸಿ ಆ ಪಶ್ಚಿಮದಿಕ್ಕಿನ ಭೂಮಿಯಲ್ಲಿಯೇ ಗಂಗಾಧರನೆಂಬ ಹೆಸರಿನಿಂದ ಖ್ಯಾತ ನಾಗಿ ವಾಸಮಾಡಿದನು.

೭. ರಾಜನೆ! ಆಗ ಪಾರ್ವತಿಯು ಆ ಸ್ಥಳದಲ್ಲಿ ಅಕಸ್ಮಾತ್ತಾಗಿ ಬಂದಿರುವ ಪ್ರವಾಹವನ್ನು ಕಂಡು ಬಹಳ ಗಾಬರಿಗೊಂಡು ತುಂಬ ಭಯಗ್ರಸ್ತಳಾದಳು.

೮. ರಾಜನೆ! ಭೀತಿಯಿಂದ ನಡುಗುತ್ತಲಿದ್ದ ಸರ್ವಾವಯವಗಳುಳ್ಳ ಪಾರ್ವತಿಯು ಮುಂಭಾಗದಲ್ಲಿರುವ ಚಂದ್ರಖಂಡಸ್ವಾಮಿಯನ್ನು ಧ್ಯಾನಿಸಲು ಆ ಸ್ವಾಮಿಯು ಪಾರ್ವತಿಗೆ ಈ ರೀತಿಯಾಗಿ ಹೇಳಿದನು.

ಗೌರಿ ಗಂಗೇಯಮಭ್ಯೇತಿ ಪೂರ್ವಜಾ ಭಗಿನೀ ತವ ।
ತಾಂ ಪ್ರಾರ್ಥಯ ವರಾರೋಹೇ ಭಯಮುತ್ಸೃಜ್ಯ ಮಾನಸಂ ॥ ೯ ॥

ಕುರ್ಯಾತ್ ಸಾಹಾಯ್ಯಕಂ ಸಾ ತೇ ಭಗಿನೀಸ್ನೇಹಯಂತ್ರಿತಾ ।
ಇತ್ಯುಕ್ತ್ವಾ ಚಂದ್ರಖಂಡೇನ ಗೌರೀ ಸಂತುಷ್ಟಮಾನಸಾ ॥ ೧೦ ॥

ಗಂಗಾಂ ಸಂಪ್ರಾರ್ಥಯಾಮಾಸ ಕೃತಾಂಜಲಿಪುಟಾ ತದಾ ।
ಸಂಪ್ರಾರ್ಥಿತಾಪಿ ಸಾ ಗಂಗಾ ಭೃಶಂ ಗೌರ್ಯಾ ಸುಭೀತಯಾ ॥ ೧೧ ॥

ನೈವ ಶಾಂತಾಭವದ್ರಾಜನ್ ಪ್ರವೃದ್ಧೈವಾಭವತ್ಪುನಃ ।
ಸಫೇನಬುದ್ಬುದಾವರ್ತತರಂಗಾತಿಭಯಂಕರೀ ॥ ೧೨ ॥

ಮಹತಾ ಸ್ರೋತಸಾ ಪೂರ್ಣಾ ಗರ್ಜಂತೀ ಘೋರಮಭ್ಯಗಾತ್ ।
ಆಪ್ಲಾವಯಚ್ಚ ಪಾರ್ವತ್ಯಾಃ ಪೂಜೋಪಕರಣಾನ್ಯಪಿ ॥ ೧೩ ॥

---

೯. ಗೌರಿಯೇ! ನಿನ್ನ ಅಕ್ಕನಾದ ಗಂಗೆಯು ಇಲ್ಲಿ ಪ್ರವಹಿಸಿ ಬರುತ್ತಿರುವಳು. ನಾರೀಮಣಿಯೇ, ಮನಸ್ಸಿನಲ್ಲಿ ಹುಟ್ಟಿದ ಭೀತಿಯನ್ನು ದೂರಮಾಡಿ ಆ ಗಂಗೆಯನ್ನು ನೀನು ಪ್ರಾರ್ಥನೆಮಾಡು.

೧೦. ಆಗ ಗಂಗೆಯು ಭಗಿನಿಯಾದ ನಿನ್ನಲ್ಲಿರುವ ಪ್ರೀತಿಗೆ ಬದ್ಧಳಾಗಿ ನಿನಗೆ ಸಹಾಯವನ್ನು ಮಾಡುವಳು, ಎಂದು ಚಂದ್ರಖಂಡಸ್ವಾಮಿಯಿಂದ ಹೇಳಲ್ಪಟ್ಟ ಪಾರ್ವತಿಯು ಹರ್ಷಗೊಂಡ ಮನಸ್ಸುಳ್ಳವಳಾದಳು.

೧೧. ಆಗ ಪಾರ್ವತಿಯು ಭಕ್ತಿಯಿಂದ ಅಂಜಲಿಯನ್ನು ಕಟ್ಟಿಕೊಂಡು ನಮಸ್ಕರಿಸಿ ಗಂಗೆಯನ್ನು ಪ್ರಾರ್ಥಿಸಿಕೊಂಡಳು. ಹಾಗೆ ಭೀತಳಾದ ಪಾರ್ವತಿಯು ಗಂಗೆಯನ್ನು ಪ್ರಾರ್ಥಿಸಿಕೊಂಡರೂ ಕೂಡ ಆ ಪ್ರಾರ್ಥನೆಯು ಸಾರ್ಥಕವಾಗಲಿಲ್ಲ.

೧೨. ರಾಜನೆ! ಆಗ ಗಂಗೆಯು ಶಾಂತಳಾಗಲಿಲ್ಲ. ಮತ್ತಷ್ಟು ಹೆಚ್ಚಾಗಿ ನೊರೆ, ಗುಳ್ಳೆ, ಸುಳಿ, ಮತ್ತು ಅಲೆಗಳಿಂದ ಭಯಂಕರ ಆಕಾರದಿಂದ ವೃದ್ಧಿಯನ್ನು ಹೊಂದಿದಳು.

೧೩. ಮಹಾಪ್ರವಾಹದಿಂದ ಪೂರ್ಣಳಾಗಿ ಘೋರವಾಗಿ ಗರ್ಜಿಸುತ್ತ ಬಂದು ಪಾರ್ವತಿಯ ಪೂಜೆಯ ಉಪಕರಣ ವಸ್ತುಗಳನ್ನು ತೇಲಿಸಿದಳು.

ಪುಷ್ಪಚಂದನಮುಖ್ಯಾನಿ ವಸ್ತ್ರಾಣ್ಯಾಭರಣಾನಿ ಚ ।
ಪೂಜಯಂತೀಂ ಚ ಗಿರಿಜಾಂ ತಚ್ಚ ಲಿಂಗಂ ತದರ್ಚಿತಂ ॥ ೧೪ ॥

ಪ್ಲಾವಯಂತೀವ ವೇಗೇನ ಭೀಷಯಾಮಾಸ ಜಾಹ್ನವೀ ।
ತತಸ್ತು ಗಿರಿಜಾ ದೃಷ್ಟ್ವಾ ನದ್ಯಾಃ ಪೂರಮುಪಾಗತಂ ॥ ೧೫ ॥

ಪೂರಾತ್ಪೀಡಾ ಭವೇಧಸ್ಯ ಲಿಂಗಸ್ಯೇತಿ ಭಯಾನ್ವಿತಾ ।
ತಲ್ಲಿಂಗಂ ಸ್ವಾರ್ಚಿತಂ ಗೋಪ್ತುಂ ಸೈಕತಂ ಪುರತಃ ಸ್ಥಿತಂ ॥ ೧೬ ॥

ಆಲಿಲಿಂಗ ದೃಢಂ ದೋರ್ಭ್ಯಾಮೂರುಭ್ಯಾಂ ವಕ್ಷಸಾ ಸಹ ।
ಅತೋಽಭೂಲ್ಲಿಂಗಮಗಜಾಸ್ತನಕಂಕಣಮುದ್ರಿತಂ ॥ ೧೭ ॥

ಕಾಂಚ್ಯಾಮಾಮ್ರತರೋರ್ಮೂಲೇ ಸರ್ವಪಾಪಹರಂ ನೃಪ ।
ತತಃ ಪ್ರಕುಪಿತಾ ಗೌರೀ ರೋಷಸಂರಕ್ತಲೋಚನಾ ॥ ೧೮ ॥

---

೧೪. ಪುಷ್ಪ, ಚಂದನ, ವಸ್ತ್ರ, ಆಭರಣ ಮುಂತಾದ ಮುಖ್ಯವಾದ ಉಪಕರಣಗಳನ್ನು ತೇಲಿಸಿ ಪೂಜೆಮಾಡುತ್ತಲಿದ್ದ ಪಾರ್ವತಿಯನ್ನು ಮತ್ತು ಪೂಜಿಸಲ್ಪಟ್ಟಿರುವ ಲಿಂಗವನ್ನು ಸೆಳೆದುಕೊಂಡು ಹೋಗಲು ಯತ್ನಿಸಿದಳು.

೧೫. ಎಲ್ಲವನ್ನು ಸೆಳೆದುಕೊಂಡು ಹೋಗುವಂತೆ ಯತ್ನಿಸಿ ವೇಗದಿಂದ ಗಂಗೆಯು ಪಾರ್ವತಿಯನ್ನು ಭಯಪಡಿಸಿದಳು. ಆಗ ಪಾರ್ವತಿಯು ಭಾರಿಯಾದ ವಿಪತ್ತಿನ ರೂಪದಿಂದ ಬಂದ ನದೀಪ್ರವಾಹವನ್ನು ನೋಡಿದಳು.

೧೬. ಈ ನದಿಯ ಪ್ರವಾಹ ವೇಗದಿಂದ ನನ್ನ ಪೂಜ್ಯವಾದ ಈ ಲಿಂಗಕ್ಕೆ ಪೀಡೆಯುಂಟಾಗಬಹುದೆಂದು ಭಯಪಟ್ಟು ತಾನು ಪೂಜಿಸಿದ ತನ್ನ ಮುಂದುಗಡೆಯಲ್ಲಿರುವ ಪಾರ್ಥಿವಲಿಂಗವನ್ನು ರಕ್ಷಿಸಲು ಯತ್ನಿಸಿದಳು.

೧೭. ಆಗ ತನ್ನ ತೋಳು, ತೊಡೆ, ಎದೆಗಳಿಂದ ಆ ಲಿಂಗವನ್ನು ಗಟ್ಟಿಯಾಗಿ ಆಲಿಂಗಿಸಿದಳು. ಆ ಗಾಢವಾದ ಆಲಿಂಗನದಿಂದ ಲಿಂಗವಲ್ಲಿ ಪಾರ್ವತಿಯ ಸ್ತನ, ಕಂಕಣಗಳ ಚಿಹ್ನೆಯಿಂದ ಮುದ್ರೆ ಒತ್ತಿದಂತಾಯಿತು.

೧೮ ರಾಜನೆ! ಕಾಂಚೀನಗರದಲ್ಲಿ ಆಮ್ರವೃಕ್ಷದ ಮೂಲದಲ್ಲಿರುವ ಸಕಲ ಪಾಪಗಳಿಂದ ಉದ್ಧಾರಮಾಡುವ ಲಿಂಗವು ಈ ರೀತಿಯಾಗಿ ಪಾರ್ವತಿಯಿಂದ ರಕ್ಷಿಸಲ್ಪಟ್ಟಿತು. ಆಗಲೂ ಪ್ರವಾಹವು ಶಾಂತವಾಗದಿರುವುದನ್ನು ಕಂಡು ಗೌರಿಯು ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ರೌದ್ರಾವಸ್ಥೆಯನ್ನು ಹೊಂದಿದಳು.

ನಿರ್ದಹಂತೀವ ತಾಂ ದೃಷ್ಟ್ವಾ ಗಂಗಾಮಪ್ರಿಯಕಾರಿಣೀಂ ।
ನಿರ್ಭರ್ತ್ಸಯಂತೀ ವಚಸಾ ಶಶಾಪ ಕಿಲ ಪಾರ್ವತೀ ॥ ೧೯ ॥

ಯಸ್ಮಾನ್ಮಾಮಿಹೈತ್ಯ ಗರ್ವೇಣ ವಿಭೀಷಯಸಿ ದುರ್ಭಗೇ ।
ತಸ್ಮಾತ್ತ್ವಮೇತದಾರಭ್ಯ ಸರ್ವೈರ್ಲೋಕೈಶ್ಚ ಸಾಮರೈಃ ॥ ೨೦ ॥
ಅಸ್ಪೃಶ್ಯಾ ಭವ ದುರ್ಮೇಧೇ ಮಮ ಶಾಪಾದಮಂಗಲಾ ।
ತ್ಯಜಂತು ತ್ವಾಂ ಜನಾಃ ಸರ್ವೇ ಚಂಡಾಲೀಮಿವ ದೂರತಃ ॥ ೨೧ ॥
ಯೋ ವಾ ತ್ವಾಂ ಸಂಸ್ಪೃಶೇನ್ಮೋಹಾತ್ ಸ ಚಂಡಾಲೋ ಭವೇದ್ಧ್ರುವಂ ।
ಇತಿ ಶಪ್ತಾ ತದಾ ಗೌರ್ಯಾ ಗಂಗಾ ಸಂಭ್ರಾಂತಮಾನಸಾ ॥ ೨೨ ॥
ಸುಭೀತಾ ಶುಷ್ಕತೋಯಾ ಚ ಬಭೂವ ಭೃಶದುಃಖಿತಾ ।
ಭೀತ್ಯಾ ಪ್ರಕಂಪಿತಾ ಭೂತ್ವಾ ಭೂಮ್ಯಾಮಂತರ್ದಧೇ ಕಿಲ ॥ ೨೩ ॥

---

೧೯. ಮತ್ತು ತನಗೆ ಅನಿಷ್ಟವನ್ನುಂಟುಮಾಡಿದ ಗಂಗೆಯನ್ನು ದಹಿಸುವಂತೆ ಭೀಷಣವಾದ ದೃಷ್ಟಿಯಿಂದ ನೋಡಿ ಪಾರ್ವತಿಯು ಕ್ರೂರಭಾಷಣದಿಂದ ಬೆದರಿಸುತ್ತ ಅವಳನ್ನು ಶಪಿಸಿದಳು.

೨೦. ಸೌಭಾಗ್ಯಶೂನ್ಯಳೆ, ನೀನು ಇಲ್ಲಿಗೆ ಬಂದು ಅಹಂಕಾರದಿಂದ ನನ್ನನ್ನು ಭಯಪಡಿಸುತ್ತ ಪೀಡೆಯನ್ನುಂಟುಮಾಡುವುದರಿಂದ ಇನ್ನು ಮುಂದೆ ದೇವತೆಗಳು ಮೊದಲಾಗಿ ಸಕಲ ಲೋಕಗಳಿಗೂ ಅಸ್ಪೃಶ್ಯಳಾಗು.

೨೧. ದುಷ್ಟವಾದ ಬುದ್ಧಿಯುಳ್ಳವಳೆ, ನನ್ನ ಶಾಪದಿಂದ ಅಮಂಗಳಕಾರವಾದ ಶೀಲವುಳ್ಳವಳೂ ಸರ್ವರಿಗೂ ಅಸ್ಪೃಶ್ಯಳೂ ಆಗು, ಸಮಸ್ತ ಜನರೂ ಚಂಡಾಲ ಸ್ತ್ರೀಯನ್ನು ದೂರವಾಗಿ ಪರಿಹರಿಸುವಂತೆ ನಿನ್ನನ್ನು ದೂರಮಾಡಲಿ.

೨೨. ಯಾವ ಮಾನವನು ಅಜ್ಞಾನದಿಂದ ನಿನ್ನನ್ನು ಸ್ಪರ್ಶಮಾಡುವನೋ ಅವನು ಕೂಡಲೆ ಚಂಡಾಲನಾಗಲಿ ಎಂದು ಪಾರ್ವತಿಯು ಗಂಗೆಗೆ ಶಾಪವನ್ನು ಕೊಡಲಾಗಿ ಗಂಗೆಯು ಗಾಬರಿಗೊಂಡ ಚಿತ್ತವುಳ್ಳವಳಾದಳು.

೨೩. ಆಗ ಶಾಪ ಮಹಿಮೆಯಿಂದ ಗಂಗೆಯು ಬಹು ಭಯಗೊಂಡವಳೂ ಅತ್ಯಂತವಾಗಿ ದುಃಖಿತಳೂ ಆಗಿ-ತನ್ನ ಅಗಾಧವಾದ ನೀರೆಲ್ಲ ಒಣಗಿ ಭಯದಿಂದ ನಡುಗುತ್ತ ಭೂಮಿಯಲ್ಲಿ ಅಂತರ್ಧಾನಹೊಂದಿ ಅದೃಶ್ಯಳಾದಳು.

ಯಸ್ಮಾತ್ತ್ವಂ ಗಿರಿಜಾಶಾಪಾತ್ ಕಂಪಿತಾ ವಸುಧಾಂ ಗತಾ ।
ತಸ್ಮಾತ್ತ್ವಾಂ ನಾಮತಃ ಕಂಪಾಂ ಪ್ರವದಂತಿ ಮನೀಷಿಣಃ ॥ ೨೪ ॥

ತತಃ ಪ್ರಶಾಂತೇ ತೋಯೌಘೇ ಗಿರಿಜಾ ಹೃಷ್ಟಮಾನಸಾ ।
ಪುನಃ ಸಂಕಲ್ಪ್ಯ ವಿಧಿವತ್ ಪೂಜಯಾಮಾಸ ಶಂಕರಂ ॥ ೨೫ ॥

ವಿಧೂತವಿಘ್ನಾ ದೇವೇಶ ಚಂದ್ರಖಂಡೇನ ರಕ್ಷಿತಾ ।
ಅಪೂಜಯತ್ ಸ್ವಭರ್ತಾರಂ ತತ್ಸಮಾಗಮಕಾಂಕ್ಷಯಾ ॥ ೨೬ ॥

ಶಂಕರೋಽಪಿ ಸಮರ್ಚಂತೀಮಗಜಾಮಾತ್ಮನಃ ಪ್ರಿಯಾಂ ।
ದೃಷ್ಟ್ವಾ ಚಿರಾಯ ಸಂತುಷ್ಟಸ್ತತ್ಸಮಾಗಮಲಾಲಸಃ ॥ ೨೭ ॥

ತಸ್ಮಿಂಲ್ಲಿಂಗೇ ಸ್ಥಿತಃ ಸಮ್ಯಗ್ಭಕ್ತ್ಯಾ ಸಂಪೂಜಿತಸ್ತಯಾ ।
ಪರಿಷ್ವಕ್ತಶ್ಚ ಬಾಹುಭ್ಯಾಮೂರುಭ್ಯಾಮುರಸಾ ಸಹ ॥ ೨೮ ॥

---

೨೪. ಗೌರೀಶಾಪದಿಂದ ಗಂಗೆಯು ಕಂಪ-ನಡುಕುವುಳ್ಳವಳಾಗಿ ಭೂಮಿಯಲ್ಲಿ ಅಂತರ್ಗತಳಾಗಿರುವುದರಿಂದ ಜ್ಞಾನಿಗಳು ಆ ನದಿಯನ್ನು ಕಂಪಾ ಎಂಬ ಹೆಸರಿನಿಂದ ಕರೆಯುವರು.

೨೫. ಆಗ ನದಿಯ ಪ್ರವಾಹವು ಶಾಂತವಾಗಲು ಗೌರಿಯು ಸಂತೋಷ ಗೊಂಡ ಮಾನಸವುಳ್ಳವಳಾಗಿ ಮತ್ತೆ ಸಂಕಲ್ಪಮಾಡಿ ವಿಧಿಪೂರ್ವಕವಾಗಿ ಶಂಕರನನ್ನು ಪೂಜಿಸಿದಳು.

೨೬. ತನ್ನ ಮುಂಭಾಗದಲ್ಲಿರುವ ಚಂದ್ರಖಂಡಸ್ವಾಮಿಯಿಂದ ರಕ್ಷಿಸಲ್ಪಟ್ಟು ಸಕಲ ವಿಘ್ನಗಳನ್ನು ಕಳೆದುಕೊಂಡು ತನ್ನ ಪತಿಯ ಸಮಾಗಮ ಕಾಂಕ್ಷೆಯಿಂದ ಪತಿಯನ್ನು ಪೂಜಿಸಿದಳು.

೨೭. ಶಂಕರನು ತನ್ನನ್ನು ಪೂಜಿಸುತ್ತಲಿದ್ದ ತನ್ನ ಪ್ರಿಯೆಯಾದ ಗೌರಿಯನ್ನು ನೋಡಿ ಬಹಳ ಸಂತುಷ್ಟನಾಗಿ ಬಹುಕಾಲದಿಂದ ಆಕೆಯ ಸಮಾಗಮದಲ್ಲಿ ಲಾಲಸೆಯುಳ್ಳವನಾದನು.

೨೮. ಆ ಲಿಂಗದಲ್ಲಿದ್ದು ಶಂಕರನು ಪಾರ್ವತಿಯನ್ನು ಭಕ್ತಿಪೂರ್ವಕವಾಗಿ ಪೂಜಿಸಲ್ಪಟ್ಟನು. ಮತ್ತು ತೋಳು, ತೊಡೆ, ಎದೆಗಳಿಂದ ಆಲಿಂಗಿಸಲ್ಪಟ್ಟನು.

ಬಭೂವ ಪರಮಪ್ರೀತಃ ಸರ್ವಪಾಪಹರೋ ಹರಃ ।
ತತಃ ಪ್ರಾದುರಭೂದ್ದೇವಸ್ತಸ್ಮಾಲ್ಲಿಂಗಾತ್ತದರ್ಚಿತಾತ್ ॥ ೨೯ ॥

ವಲಕ್ಷಂ ವೃಷಮಾರುಹ್ಯ ಸರ್ವಾಭರಣಭೂಷಿತಃ ।
ಸಂಸ್ತೂಯಮಾನೋ ಗಂಧರ್ವೈರ್ಋಷಿಭಿಶ್ಚ ಸ್ವಪಾರ್ಷದೈಃ ॥ ೩೦ ॥

ಸಂವೀಜ್ಯಮಾನೋ ಗಣಪೈಶ್ಚಾಮರೈರ್ವ್ಯಜನೈರಪಿ ।
ತತ್ರೈಕಾಮ್ರತರೋರ್ಮೂಲೇ ದದೃಶೇಽದ್ಭುತದರ್ಶನಃ ॥ ೩೧ ॥

ತಂ ದೃಷ್ಟ್ವಾ ದೇವದೇಶಂ ಶಂಭುಂ ತ್ರಿಭುವನೇಶ್ವರಂ ।
ಚಿರಾಯ ದೃಷ್ಟ್ವಾ ಭರ್ತಾರಂ ಗೌರೀ ಪರಮಹರ್ಷಿತಾ ॥ ೩೨ ॥

ಗಲನ್ಮೋದಾಂಬುಸಂಸಿಕ್ತವಕ್ಷೋಜಾಗ್ರದ್ವಯಾನ್ವಿತಾ ।
ನನಾಮ ಪಾದಯೋಸ್ತಸ್ಯ ಭಕ್ತ್ಯಾ ಪರಮಯಾ ಯುತಾ ॥ ೩೩ ॥

---

೨೯. ಪಾರ್ವತಿಯು ಮಾಡಿದ ಪೂಜೆಯಿಂದ ಸಮಸ್ತ ಪಾಪಗಳನ್ನು ಪರಿಹರಿಸುವ ಶಿವನು ಸುಪ್ರೀತನಾದನು. ಅನಂತರದಲ್ಲಿ ಪಾರ್ವತಿಯಿಂದ ಪೂಜಿಸಲ್ಪಟ್ಟ ಆ ಲಿಂಗದಿಂದ ಶಿವನು ಪ್ರಾದುರ್ಭವಿಸಿದನು.

೩೦. ಮತ್ತು ಸಕಲ ಆಭರಣಗಳಿಂದ ಅಲಂಕರಿಸಲ್ಪಟ್ಟವನಾಗಿಯೂ ಗಂಧರ್ವರಿಂದಲೂ, ಮಹರ್ಷಿಗಳಿಂದಲೂ ಮತ್ತು ತನ್ನ ಪಾರ್ಷದರಿಂದಲೂ ಸ್ತುತಿಸಲ್ಪಟ್ಟವನಾಗಿಯೂ ಶಿವನು ಪಾರ್ವತಿಯ ಎದುರಿನಲ್ಲಿ ಶುಭ್ರವಾದ ವೃಷಭವನ್ನು ಏರಿಕೊಂಡು ಪ್ರಾದುರ್ಭವಿಸಿದನು.

೩೧. ಪ್ರಮಥಗಣಾಧಿಪತಿಗಳು ಮಾಡುವ ಚಾಮರ-ವ್ಯಜನ ಸೇವೆಯನ್ನು ಸ್ವೀಕರಿಸುತ್ತ ಅದ್ಭುತ ದರ್ಶನವುಳ್ಳವನಾಗಿ ಆ ಆಮ್ರವೃಕ್ಷದ ಮೂಲದಲ್ಲಿ ಕಾಣಿಸಿಕೊಂಡನು.

೩೨. ಗೌರಿಯು ದೇವತೆಗಳಿಗೆ ಪ್ರಭುವಾದ ಮತ್ತು ತ್ರಿಭುವನಗಳಿಗೆ ಈಶ್ವರನಾದ ತನ್ನ ಪತಿಯಾದ ಈಶ್ವರನನ್ನು ಬಹುಕಾಲದಿಂದ ನೋಡಿ ಅತಿಯಾಗಿ ಹರ್ಷಿಸಿದಳು.

೩೩. ಆ ಕ್ಷಣದಲ್ಲಿ ಉಂಟಾದ ಆನಂದಬಾಷ್ಪದ ಧಾರಾಪಾತದಿಂದ ನೆನೆದು ಹೋದ ಸ್ತನದ್ವಯದ ಅಗ್ರಭಾಗವುಳ್ಳವಳಾಗಿ ಉತ್ತಮವಾದ ಭಕ್ತಿಯಿಂದ ಕೂಡಿಕೊಂಡು ಪತಿಯ ಪಾದಗಳಲ್ಲಿ ನಮಸ್ಕರಿಸಿದಳು.

ಅಪಿ ತೇ ಕುಶಲಂ ಭದ್ರೇ ದಿಷ್ಟ್ಯಾ ದೃಷ್ಟಾಸಿ ಶೋಭನೇ ।
ದಿಷ್ಟ್ಯಾ ಚಿರಾದಿಹಾದ್ಯ ತ್ವಾಮುಪಶ್ಯಮಹಮದ್ರಿಜೇ ॥ ೩೪ ॥

ದಿಷ್ಟ್ಯಾ ದೃಷ್ಟಸ್ತ್ವಯಾ ದೇವೋ ವಾಮನಃ ಕರುಣಾನಿಧಿಃ ।
ದಿಷ್ಟ್ಯಾ ಲಬ್ಧವರಾ ಚಾಸಿ ವಾಮನೇನ ಮಹಾತ್ಮನಾ ॥ ೩೫ ॥

ತಾಂ ತದಾ ಪ್ರಣತಾಂ ದೃಷ್ಟ್ವಾ ಶಂಕರಃ ಕರುಣಾಕರಃ ।
ಸಮುತ್ಥಾಪ್ಯ ಸ್ವಬಾಹುಭ್ಯಾಮಂಕಮಾರೋಪ್ಯ ಸಸ್ವಜೇ ॥ ೩೬ ॥

ಪುನಃ ಪುನಃ ಪರಿಷ್ವಜ್ಯ ಸಮಾಶ್ವಾಸಯದದ್ರಿಜಾಂ ।
ಉವಾಚ ವಚನಂ ಚಾಪಿ ಪ್ರೇಮ್ಣಾ ಪರಮವಲ್ಗುನಾ ॥ ೩೭ ॥

---

೩೪. ಪಾರ್ವತಿಯೆ! ಬಹು ಕಾಲದಿಂದ ಕಾಂಕ್ಷಿಸಿ ಈಗ ಇಲ್ಲಿ ನಿನ್ನನ್ನು ನೋಡುತ್ತಿರುವುದು ಆನಂದಕರವಾಗಿದೆ. ಮಂಗಳಕರಳೆ! ನಿನಗೆ ಕುಶಲವೆ? ಮಂಗಳಶೀಲಳೆ! ನೀನು ಸುಭಾಗ್ಯದಿಂದ ನೋಡಲ್ಪಟ್ಟಿರುತ್ತೀ.

೩೫. ನಿನ್ನ ಸುಭಾಗ್ಯದಿಂದ ನೀನು ಕರುಣಾಸಮುದ್ರನಾದ ವಾಮನನನ್ನು ಸಾಕ್ಷಾತ್ಕಾರಮಾಡಿರುತ್ತೀ. ಮತ್ತು ಭಾಗ್ಯೋದಯದಿಂದ ಮಹಾತ್ಮನಾದ ವಾಮನ ಮೂರ್ತಿಯಿಂದ ನೀನು ವರಗಳನ್ನು ಪಡೆದಿರುತ್ತಿ. ಇವೆಲ್ಲವೂ ಆನಂದಕರವಾದ ಸಂಗತಿಯು.

೩೬. ದಯಾಘನನಾದ ಶಂಕರನು ತನ್ನ ಕಾಲುಗಳಲ್ಲಿ ಬಿದ್ದು ನಮಸ್ಕಾರ ಮಾಡಿದ ಪಾರ್ವತಿಯನ್ನು ನೋಡಿ ತನ್ನ ತೋಳುಗಳಿಂದ ಮೇಲಕ್ಕೆತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಆಲಿಂಗಿಸಿದನು.

೩೭. ಹೀಗೆ ಶಂಕರನು ತನ್ನ ತೊಡೆಯ ಮೇಲೆ ಕುಳಿತಿರುವ ಪಾರ್ವತಿಯನ್ನು ಅತಿ ಮಧುರವಾದ ಪ್ರೇಮಭರದಿಂದ ಮತ್ತೆ ಆಲಿಂಗಿಸಿಕೊಂಡು ಸಮಾಶ್ವಾಸನಮಾಡಿ ಮುಂದೆ ಹೇಳುವಂತೆ ಮಾತನಾಡಿದನು.

ದಿಷ್ಟ್ಯಾ ತ್ವಾಮಕರೋ ದ್ದೇವಃ ಕಾಮಾಕ್ಷೀಂ ಕಾಮರೂಪಿಣೀಂ ।
ದಿಷ್ಟ್ಯಾ ತವ ಹಿತಾರ್ಥಾಯ ಸರ್ವಲೋಕೇಶ್ವರೋ ಹರಿಃ ॥ ೩೮ ॥

ಪೂರ್ಣ ಚಂದ್ರಾಕೃತಿರ್ಭೂತ್ವಾ ರಕ್ಷಿತುಂ ತ್ವಾಮುಪಸ್ಥಿತಃ ।
ಕಥಂ ಹರೇಃ ಕೃಪಾಯಾಸ್ತ್ವಮಭವಃ ಪಾತ್ರಮದ್ಭುತಂ ॥ ೩೯ ॥

ಅಹಂ ತ್ವಯಿ ಪ್ರಸನ್ನೋಽಸ್ಮಿ ಸಂತುಷ್ಟಸ್ತವ ಪೂಜಯಾ ।
ವಸಾಮ್ಯತ್ರೈವ ಲಿಂಗೇಸ್ಮಿಂಸ್ತ್ವಯಾ ಸಂಪೂಜಿತೇ ಶುಭೇ ॥ ೪೦ ॥

ಸರ್ವಲೋಕಹಿತಾರ್ಥಾಯ ತವ ಚ ಪ್ರಿಯಕಾಮ್ಯಯಾ ।
ಆಬ್ರಹ್ಮಕಲ್ಪಮತ್ರೈವ ಕಾಂಚ್ಯಾಮೇಕಾಮ್ರಮೂಲಗಃ ॥ ೪೧ ॥

---

೩೮. ಸಕಲ ಲೋಕಗಳಿಗೆ ಈಶ್ವರನೂ ದೇದೀಪ್ಯಮಾನನೂ ಆದ ಪರಮಾತ್ಮನು ಲೋಕಹಿತವನ್ನುಂಟುಮಾಡುವುದಕ್ಕೋಸ್ಕರ ನಿನ್ನ ಭಾಗ್ಯೋದಯದಿಂದ ವಿರೂಪಳಾದ ನಿನ್ನನ್ನು ಮೋಹನವಾದ ರೂಪವುಳ್ಳವಳನ್ನಾಗಿಯೂ ಸುಂದರವಾದ ನೇತ್ರವುಳ್ಳವನ್ನಾಗಿಯೂ ಮಾಡಿರುವನು.

೩೯. ಮತ್ತು ಹರಿಯು ಪೂರ್ಣಚಂದ್ರನ ಆಕಾರವನ್ನು ಧರಿಸಿ ನಿನ್ನನ್ನು ರಕ್ಷಿಸಲು ನಿನ್ನ ಸನ್ನಿಧಿಗೆ ಬಂದನು. ಮತ್ತು ಹರಿಪರಮಾತ್ಮನ ಕರುಣೆಗೆ ನೀನು ಹೇಗೆ ಪಾತ್ರಳಾಗಿರುವೆಯೋ ಆತ್ಯಾಶ್ಚರ್ಯವು.

೪೦. ನಾನು ನಿನ್ನ ಪೂಜೆಯಿಂದ ಸಂತುಷ್ಟನಾಗಿ ನಿನ್ನ ಭಕ್ತಿಗೆ ಮೆಚ್ಚಿ ನಿನ್ನಲ್ಲಿ ಪ್ರಸನ್ನನಾಗಿರುವೆನು, ನಿನ್ನಿಂದ ಪೂಜಿಸಲ್ಪಟ್ಟ ಮಂಗಳಕರವಾದ ಈ ಲಿಂಗದಲ್ಲಿಯು ನಾನು ವಾಸಮಾಡುತ್ತೇನೆ.

೪೧. ಲೋಕಗಳ ಹಿತಸಾಧನೆಗೋಸ್ಕರವೂ ಮತ್ತು ವಿಶೇಷವಾಗಿ ನಿನ್ನ ಇಷ್ಟವನ್ನು ನೆರವೇರಿಸಬೇಕೆಂಬ ಉದ್ದೇಶದಿಂದಲೂ ಬ್ರಹ್ಮನ ಈ ಕಲ್ಪವು ಸಮಾಪ್ತಿಯಾಗುವವರೆಗೂ ನಾನು ಇಲ್ಲಿಯೇ ವಾಸಮಾಡುವೆನು.

ಭವಿಷ್ಯಾಮಿ ತ್ವಯಾ ಸಾರ್ಧಂ ಸರ್ವೇಷಾಮಿಷ್ಟದೋ ನೃಣಾಂ ।
ಇತ್ಯುಕ್ತ್ವಾ ಶಂಕರೋ ರಾಜನ್ ಸಹ ಗೌರ್ಯಾ ಸುಹೃಷ್ಟಯಾ ।
ತತ್ರೈವ ಕಾಂಚ್ಯಾಮವಸತ್ ಸಹ ಸರ್ವೈಶ್ಚ ಪಾರ್ಷದೈಃ ॥ ೪೨ ॥

ಯಸ್ಮಾದೇಕಾಮ್ರವೃಕ್ಷಸ್ಯ ಮೂಲ ಆಸ್ತೇಽನಿಶಂ ಶಿವಃ ।
ತಸ್ಮಾದೇಕಾಮ್ರನಾಥಾಖ್ಯಂ ತಂ ವದಂತಿ ಜನಾ ಭುವಿ ॥ ೪೩ ॥

ಕಾಂಚ್ಯಾಮೇಕಾಮ್ರನಾಥಸ್ಯ ದರ್ಶನಂ ಪುಣ್ಯವರ್ಧನಂ ।
ಸರ್ವಾಭೀಷ್ಟಪ್ರದಂ ನೃಣಾಮಾಯುರಾರೋಗ್ಯವರ್ಧನಂ ॥ ೪೪ ॥

ಕಾಮಾಕ್ಷೀಂ ಚಾಪಿ ಯಃ ಪಶ್ಯೇತ್ ಕಾಮಿತಾರ್ಥಪ್ರದಾಯಿನೀಂ ।
ಸ ಸರ್ವಾನ್ ಲಭತೇ ಕಾಮಾನಾಯುಃ ಕೀರ್ತಿಂ ಚ ವಿಂದತಿ ॥ ೪೫ ॥

---

೪೨. ನಿನ್ನೊಡನೆ ಇಲ್ಲಿ ವಾಸಮಾಡಿ ಭಕ್ತ ಜನರಿಗೆ ಇಷ್ಟಾರ್ಥವನ್ನು ಕೊಡುವವನಾಗುವೆನು. ರಾಜನೆ, ಈ ರೀತಿಯಾಗಿ ಶಂಕರನು ಹೇಳಿ ಇಂತಹ ಮಧುರ ವಚನವನ್ನು ಶ್ರವಣಮಾಡಿದುದರಿಂದ ಸಂತುಷ್ಟಳಾದ ಪಾರ್ವತಿಯೊಡನೆ ತನ್ನ ಸಕಲ ಪಾರ್ಷದರ ಜೊತೆಯಲ್ಲಿ ಕಾಂಚೀನಗರದಲ್ಲಿ ವಾಸಮಾಡಿದನು.

೪೩. ಶಿವನು ಕಾಂಚೀನಗರದಲ್ಲಿ ಏಕಾಮ್ರವೃಕ್ಷದ ಮೂಲದಲ್ಲಿ ವಾಸಮಾಡುತ್ತಲಿರುವುದರಿಂದ ಆ ಮೂರ್ತಿಯನ್ನು ಭೂಲೋಕದಲ್ಲಿ ಏಕಾಮ್ರನಾಥೇಶ್ವರನೆಂದು ಜನರೆಲ್ಲ ಕರೆಯುವರು.

೪೪. ಕಾಂಚೀನಗರದಲ್ಲಿ ಇಂತಹ ಏಕಾಮ್ರನಾಥೇಶ್ವರನ ದರ್ಶನವು ಅತ್ಯಂತ ಪುಣ್ಯಕರವಾದುದು. ಮತ್ತು ಭಕ್ತರ ಸರ್ವ ವಿಧವಾದ ಇಷ್ಟವನ್ನು ಪೂರ್ತಿಮಾಡಿ ಕೊಡುವುದು, ಹಾಗು ಆಯುಷ್ಯ, ಆರೋಗ್ಯ ಮುಂತಾದುವುಗಳನ್ನು ವೃದ್ಧಿಮಾಡುವುದೂ ಆಗಿದೆ.

೪೫. ಹಾಗೇ ಕಾಮಿತವಾದ ಫಲಗಳನ್ನು ಕೊಡಲೋಸ್ಕರವೆ ಅಲ್ಲಿ ವಾಸಮಾಡುತ್ತಲಿರುವ ಕಾಮಾಕ್ಷೀದೇವಿಯನ್ನು ಯಾವ ಮಾನವನು ಅಲ್ಲಿ ಸಂದರ್ಶಿಸುವನೋ ಅವನು ತನ್ನ ಸರ್ವ ಇಷ್ಟಾರ್ಥಗಳನ್ನೂ ಹೊಂದುವನು. ಮತ್ತು ಆಯುಷ್ಯ ಕೀರ್ತಿಗಳನ್ನು ಹೊಂದುತ್ತಾನೆ.

ಇತ್ಥಂ ಹಿ ರುದ್ರೇಣ ದುರೋದರೇ ಪುರಾ ।
ಕ್ರುದ್ಧೇನ ಶಪ್ತಾ ಗಿರಿರಾಜಪುತ್ರೀ ।
ಪೂತಾ ಪುನಃ ಪೂರ್ಣಮನೋರಥಾ ಚ ।
ಬಭೂವ ಕಾಂಚ್ಯಾಂ ಕಿಲ ವಾಮನೇನ ॥ ೪೬ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಪಂಚವಿಂಶೋಽಧ್ಯಾಯಃ

---

೪೬. ಈ ರೀತಿಯಾಗಿ ಪೂರ್ವದಲ್ಲಿ ಅಕ್ಷದ್ಯೂತ ಕ್ರೀಡೆಯಲ್ಲಿ ಕುಪಿತನಾದ ಶಿವನಿಂದ ಶಪಿಸಲ್ಪಟ್ಟ ಪರ್ವತರಾಜನಾದ ಹಿಮವಂತನ ಮಗಳಾದ ಪಾರ್ವತಿಯು ಕಾಂಚೀನಗರದಲ್ಲಿ ವಾಮನಮೂರ್ತಿಯ ಅನುಗ್ರಹದಿಂದ ಶಾಪಮುಕ್ತಳಾಗಿ ಪವಿತ್ರಳೂ ಪೂರ್ಣಕಾಮಳೂ ಆದಳು.

ಕಾಂಚೀಮಾಹಾತ್ಮ್ಯೆಯಲ್ಲಿ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಷಡ್ವಿಂಶೋಽಧ್ಯಾಯಃ

ಅಂಬರೀಷ ಉವಾಚ :—

ಆಸೀತ್ ಕಿಲ ತದಾ ಗಂಗಾ ಗೌರೀಶಾಪಾದಮಂಗಲಾ ।
ತತಃ ಕಿಮಕರೋದ್ದೇವೀ ಕಥಂ ಪೂತಾಽಭವತ್ಪುನಃ ॥ ೧ ॥

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ತಪೋಧನ ।
ಗಂಗಾಯಾಶ್ಚರಿತಂ ಸಮ್ಯಗ್ವಕ್ತುಮರ್ಹಸಿ ನಾರದ ॥ ೨ ॥

ನಾರದ ಉವಾಚ :—

ಶೃಣು ರಾಜನ್ ಪ್ರವಕ್ಷ್ಯಾಮಿ ಗಂಗಾಯಾ ಮೋಕ್ಷಮುತ್ತಮಂ ।
ಶೃಣ್ವತಾಂ ಸರ್ವಪಾಪಘ್ನಮಾಯುರಾರೋಗ್ಯವರ್ಧನಂ ॥ ೩ ॥

---

೧. ಅಂಬರೀಷರಾಜನು ನಾರದಮುನಿಯನ್ನು ಕುರಿತು ಮತ್ತೆ ಪ್ರಶ್ನೆಮಾಡಿದನು:—ಆಗ ಗಂಗೆಯು ಗೌರಿಯ ಶಾಪದಿಂದ ಅಮಂಗಲವಾದ ಸ್ವರೂಪವುಳ್ಳವಳಾದಳಲ್ಲವೆ. ತರುವಾಯ ಅವಳು ಏನು ಮಾಡಿದಳು· ಮತ್ತೆ ಅವಳು ಪವಿತ್ರಳಾದ ಬಗೆ ಹೇಗೆ?

೨. ತಪಸ್ವಿಯಾದ ನಾರದಮುನಿಯೇ! ಈ ವಿಷಯವನ್ನು ನಾನು ತಿಳಿಯಲು ಬಹಳ ಕುತೂಹಲಿಯಾಗಿರುವೆನು. ಪವಿತ್ರವಾದ ಗಂಗಾದೇವಿಯ ಚರಿತ್ರವನ್ನು ನನಗೆ ಚನ್ನಾಗಿ ಹೇಳಲು ಅರ್ಹನಾಗಿದ್ದೀಯೆ.

೩. ಆಗ ನಾರದಮುನಿಯು ಈರೀತಿಯಾಗಿ ಪ್ರತ್ಯುತ್ತರವಿತ್ತನು. ರಾಜನೆ! ಭಕ್ತಿಯಿಂದ ಶ್ರವಣಮಾಡಿದವರಿಗೆ ಸಕಲ ಪಾಪಗಳನ್ನು ಧ್ವಂಸಮಾಡಿ ಆಯುಷ್ಯ-ಆರೋಗ್ಯ ಮುಂತಾದ ಇಷ್ಟಾರ್ಥಗಳನ್ನು ಕೊಡುವ ಗಂಗಾದೇವಿಯ ಪವಿತ್ರ ಶಾಪೋದ್ಧಾರ ಕಥೆಯನ್ನು ಹೇಳುವೆನು ಕೇಳು.

ಏವಂ ಶಪ್ತಾ ತು ಪಾರ್ವತ್ಯಾ ಗಂಗಾ ಸಂಕ್ರುದ್ಧಯಾ ತಯಾ ।
ಬಭೂವ ತತ್ಕ್ಷಣಾತ್ಸರ್ವೈರಸ್ಪೃಶ್ಯಾ ಚಾಪ್ಯಮಂಗಲಾ ॥ ೪ ॥

ತಸ್ಯಾಸ್ತತ್ತೋಯಮಖಿಲಂ ದುರ್ಗಂಧಂ ಪೂಯಸನ್ನಿಭಂ ।
ಬಭೂವಾನುಪಭೋಗ್ಯಂ ಚ ಗೌರೀಶಾಪಾದ್ವಿನಿಂದಿತಂ ॥ ೫ ॥

ಯೋಷಿದ್ರೂಪವತೀ ಚಾಪಿ ಚಾಂಡಾಲೀವ ವಿರೂಪಿಣೀ ।
ಬಭೂವ ದುಃಖಿತಾ ದೇವೀ ಸರ್ವಲೋಕವಿನಿಂದಿತಾ ॥ ೬ ॥

ತತಃ ಸಂತಪ್ತಹೃದಯಾ ಪಶ್ಚಾತ್ತಾಪೇನ ಯಂತ್ರಿತಾ ।
ಗೌರೀಂ ಸಂಪ್ರಾರ್ಥಯಾಮಾಸ ಯೋಷಿದ್ರೂಪೇಣ ಸಂಯುತಾ ॥ ೭ ॥

ಗೌರ್ಯಾಶ್ಚಾಗ್ನೇಯದಿಗ್ಭಾಗೇ ಸ್ಥಿತ್ವಾ ತತ್ರೈವ ದುಃಖಿತಾ ।
ದೇವೇಶಂ ಚಂದ್ರಖಂಡಾಖ್ಯಂ ಗೌರೀಂ ಚಾಪಿ ಮುಹುರ್ಮುಹುಃ ॥

---

೪. ಹಿಂದೆ ಹೇಳಿದಂತೆ ಪಾರ್ವತಿಯು ಕೋಪದಿಂದ ಶಾಪಕೊಟ್ಟ ಕ್ಷಣವಲ್ಲಿ ಗಂಗೆಯು ಸರ್ವರಿಂದಲೂ ಸ್ಪರ್ಶಿಸುವುದಕ್ಕೆ ಅನರ್ಹಳೂ ಮತ್ತು ಅಮಂಗಳ ಸ್ವರೂಪವುಳ್ಳವಳೂ ಆದಳು.

೫. ಗೌರಿಯು ಕೊಟ್ಟ ಶಾಪದ ಬಲದಿಂದ ಗಂಗಾನದಿಯ ಜಲವೆಲ್ಲವೂ ದುರ್ವಾಸನೆಯಿಂದ ಕೂಡಿರುವುದೂ, ಗಾಯದ ಕೀವಿನಂತೆ ಅಸಹ್ಯವಾದುದೂ. ಯಾವ ಪ್ರಾಣಿಗೆ ಕೂಡ ಉಪಭೋಗಿಸಲು ಅನರ್ಹವೂ, ಮತ್ತು ನಿಂದಾಸ್ಪದವೂ ಆಯಿತು.

೬. ಮತ್ತು ಸ್ತ್ರೀರೂಪವನ್ನು ಧರಿಸಿದ ಗಂಗೆಯು ಚಂಡಾಲಸ್ತ್ರೀಯಂತೆ ವಿರೂಪವಾದ ಆಕಾರವುಳ್ಳವಳೂ ಮತ್ತು ಸರ್ವ ಲೋಕಗಳಿಗೆ ನಿಂದ್ಯಳೂ, ಆಗಿ ಬಹಳ ದುಃಖಿತಳಾದಳು.

೭. ಅನಂತರವಲ್ಲಿ ಸಂತಾಪದಿಂದ ಬೆಂದುಹೋದ ಹೃದಯವುಳ್ಳವಳೂ ಪಶ್ಚಾತ್ತಾಪದಿಂದ ಕೂಡಿದವಳೂ ಆಗಿ ಸ್ತ್ರೀರೂಪವನ್ನು ಧರಿಸಿ ಶಾಪದ ಉದ್ಧಾರಕ್ಕಾಗಿ ಗೌರಿಯನ್ನು ಪ್ರಾರ್ಥಿಸಿಕೊಂಡಳು.

೮. ದುಃಖಿತಳಾದ ಗಂಗೆಯು ಗೌರಿಯು ವಾಸಮಾಡಿರುವ ಸ್ಥಳಕ್ಕೆ ಆಗ್ನೇಯ ಭಾಗದಲ್ಲಿ ವಾಸಮಾಡಿ ಗೌರಿಯನ್ನು ಮತ್ತು ಗೌರಿಯಲ್ಲಿ ಅನುಗ್ರಹವನ್ನು ತೋರಿಸಿರುವ ಚಂಖಂದ್ರಡಸ್ವಾಮಿಯನ್ನು ಮತ್ತೆ ಮತ್ತೆ ಧ್ಯಾನಿಸುವವಳಾದಳು.

ಧ್ಯಾಯಂತೀ ಸತತಂ ಭಕ್ತ್ಯಾ ಚಕಾರ ತಪ ಉತ್ತಮಂ ।
ತತೋ ದೇವರ್ಷಿಗಂಧರ್ವಾಃ ಸಿದ್ಧಾಃ ಪತಗಪನ್ನಗಾಃ ॥ ೯ ॥

ಸಮುದ್ರಾಃ ಸರಿತಶ್ಚೈವ ತೀರ್ಥಾನಿ ನಿಖಿಲಾ ಹ್ರದಾಃ ।
ದುರ್ಗಂಧತೋಯಾಮಸ್ಪೃಶ್ಯಾಮತಿನಿಂದ್ಯಾಮಮಂಗಲಾಂ ॥ ೧೦ ॥

ದೃಷ್ಟ್ವಾ ಗಂಗಾಂ ತದಾ ಭೀತಾಶ್ಚಂಡಾಲೀಮಿವ ರೂಪಿಣೀಂ ।
ತೇ ಸಮೇತ್ಯ ಸುಸಂಭ್ರಾಂತಾಃ ಸರ್ವೇ ಮಂತ್ರಮಮಂತ್ರಯನ್ ॥ ೧೧ ॥

ಸ್ವಪತ್ನೀಂ ವರುಣಶ್ಚಾಪಿ ದೃಷ್ಟ್ವಾ ಗಂಗಾಂ ಸುದುಃಖಿತಃ ।
ದೇವಾನ್ ಸಂಪ್ರಾರ್ಥಯಾಮಾಸ ಗಂಗಾಯಾಃ ಶುದ್ಧಿಕಾರಣಾತ್ ॥ ೧೨ ॥

ಕಥಂ ವಿನಾ ವಯಂ ಸರ್ವೇ ಜೀವಾಮಃ ಸುರನಿಮ್ನಗಾಂ ।
ತಸ್ಮಾಚ್ಚತುರ್ಮುಖಂ ದೇವಂ ಗಚ್ಛಾಮಃ ಶರಣಂ ವಯಂ ॥ ೧೩ ॥

---

೯. ಹೀಗೆಯೇ ಭಕ್ತಿಯಿಂದ ಗೌರೀ ಮತ್ತು ಚಂದ್ರಖಂಡಸ್ವಾಮಿಯನ್ನು ಸಂತತವಾಗಿ ಧ್ಯಾನಿಸುತ್ತ ಉತ್ತಮವಾದ ತಪಸ್ಸನ್ನು ಆಚರಿಸಿದಳು. ಆಗ ದೇವತೆ, ಋಷಿ, ಗಂಧರ್ವ, ಸಿದ್ಧ, ಪಕ್ಷಿ, ಸರ್ಪ ಮುಂತಾದವರು ಗಂಗೆಯ ದುರವಸ್ಥೆಯನ್ನು ನೋಡಿ ಚಿಂತಿಸಿದರು.

೧೦. ಸಮುದ್ರ, ನದಿ, ಸಕಲ ತೀರ್ಥ, ಹುದ ಇವುಗಳೆಲ್ಲವೂ ಅಸ್ಪೃಶ್ಯವೂ ದುರ್ವಾಸನೆಯ ಜಲದಿಂದ ಪೂರ್ಣವೂ ಅತ್ಯಂತ ನಿಂದ್ಯವೂ ಮತ್ತು ಅಮಂಗಳ ಸ್ವರೂಪವೂ ಆದ ಗಂಗೆಯ ಆಕಾರವನ್ನು ನೋಡಿ ವಿಷಾದಿಸಿದವು.

೧೧. ಮತ್ತು ಚಂಡಾಲಸ್ತ್ರೀಯಂತೆ ವಿರೂಪಳಾದ ಆ ಗಂಗೆಯನ್ನು ಆಗ ದೇವಾದಿಗಳೆಲ್ಲರೂ ನೋಡಿ ಭಯಗೊಂಡವರಾಗಿ ಗಾಬರಿಯಿಂದ ಎಲ್ಲರೂ ಸಭೆ ಸೇರಿ ಈ ವಿಪತ್ತನ್ನು ಪರಿಹಾರಮಾಡಲೋಸ್ಕರ ಮಂತ್ರಾಲೋಚನೆಯನ್ನು ಮಾಡಿದರು.

೧೨. ಇಷ್ಟರಲ್ಲಿ ಜಲರಾಜನಾದ ವರುಣದೇವನು ತನ್ನ ಪತ್ನಿಯಾದ ಗಂಗಾದೇವಿಗೆ ಈ ದುರವಸ್ಥೆಯು ಪ್ರಾಪ್ತವಾದುದನ್ನು ಕಂಡು ದುಃಖಿತನಾಗಿ ಪುನಃ ಪವಿತ್ರತೆಯು ಪ್ರಾಪ್ತವಾಗುವುದಕ್ಕೋಸ್ಕರ ದೇವತೆಗಳನ್ನು ಪ್ರಾರ್ಥಿಸಿಕೊಂಡನು.

೧೩. ದೇವಾದಿಗಳು ಎಲ್ಲರೂ ಸೇರಿ ಈ ರೀತಿಯಾಗಿ ಚಿಂತಿಸಿದರು. ಶಾಪದಿಂದ ಉಪಭೋಗಕ್ಕೆ ಅನರ್ಹಳಾದ ಈ ಗಂಗಾನದಿಯನ್ನು ಬಿಟ್ಟು ನಾವೆಲ್ಲರೂ ಜೀವಿಸುವುದು ಹೇಗೆ? ಆದುದರಿಂದ ಇದರ ಪರಿಹಾರಕ್ಕಾಗಿ ನಾವು ಚತುರ್ಮುಖನಾದ ಬ್ರಹ್ಮದೇವನನ್ನು ಶರಣಹೊಂದೋಣ.

ಸಂಪ್ರಾರ್ಥಯಾಮಸ್ತಂ ಸರ್ವೇ ಗಂಗಾಯಾಃ ಶುದ್ಧಿಕಾರಣಾತ್ ।
ಇತಿ ನಿಶ್ಚಿತ್ಯ ವಿಬುಧಾ ವರುಣೇನ ಸಮನ್ವಿತಾಃ ॥ ೧೪ ॥

ಪ್ರಜಗ್ಮುಃ ಸಹಿತಾಃ ಸರ್ವೇ ಬ್ರಹ್ಮಾಣಂ ಶರಣಂ ತದಾ ।
ಕಾಂಚ್ಯಾಂ ಸತ್ಯವ್ರತೇ ಕ್ಷೇತ್ರೇ ಶಪ್ತಾ ಯತ್ರಾಸ್ತಿ ಜಾಹ್ನವೀ ॥ ೧೫ ॥

ತತ್ರೈವ ಹಸ್ತಿಶೈಲಾಗ್ರೇ ಸೋಽಪ್ಯಾಸ್ತೇ ಚತುರಾನನಃ ।
ಅರ್ಚಯನ್ ವರದಂ ದೇವಂ ತಸ್ಮಾದ್ಯಾಮಸ್ತದಂತಿಕಂ ॥ ೧೬ ॥

ಇತಿ ನಿಶ್ಚಿತ್ಯ ತೇ ಸರ್ವೇ ಸಮೇತಾಸ್ತ್ರಿದಶೋತ್ತಮಾಃ ।
ಪ್ರಜಗ್ಮುರ್ಹಸ್ತಿಶೈಲಾಗ್ರೇ ಪೂಜಯಂತಂ ಹರಿಂ ವಿಧಿಂ ॥ ೧೭ ॥

ದೃಷ್ಟ್ವಾ ತತ್ರ ಚತುರ್ವಕ್ತ್ರಂ ನತ್ವಾ ಪ್ರಾಂಜಲಯಃ ಸ್ಥಿತಾಃ ।
ತಸ್ಮೈ ನಿವೇದಯಾಮಾಸುರ್ಗಂಗಾಯಾಶ್ಶಾಪಕಾರಣಂ ॥ ೧೮ ॥

---

೧೪. ಮತ್ತು ನಾವೆಲ್ಲರೂ ಗಂಗೆಯ ಶುದ್ಧಿಗೋಸ್ಕರ ಚತುರ್ಮುಖನನ್ನು ಪ್ರಾರ್ಥಿಸಿಕೊಳ್ಳೋಣ ಎಂಬುದಾಗಿ ವರುಣದೇವನಿಂದ ಸಹಿತರಾಗಿ ಸಕಲ ದೇವತೆಗಳೂ ನಿಶ್ಚಯಿಸಿದರು.

೧೫. ಮತ್ತು ಆಗ ಎಲ್ಲರೂ ಬ್ರಹ್ಮದೇವನಿಂದ ನಮ್ಮ ಚಿಂತಿತವನ್ನು ಸಾಧಿಸಿಕೊಳ್ಳಬೇಕೆಂದು ಮನಸ್ಸಿನಲ್ಲಿ ಅವನನ್ನೇ ಶರಣವೆಂದು ಸ್ಥಿರಪಡಿಸಿಕೊಂಡರು. ಮತ್ತು ವಿರೂಪಳಾದ ಗಂಗೆಯು ವಾಸಮಾಡುತ್ತಿದ್ದ ಸತ್ಯವ್ರತಕ್ಷೇತ್ರದಲ್ಲಿರುವ ಕಾಂಚೀನಗರ ಸಮೀಪದಲ್ಲಿ ಬ್ರಹ್ಮದೇವನನ್ನು ದರ್ಶನಮಾಡಲು ಹೊರಟರು.

೧೬. ಬ್ರಹ್ಮದೇವನು ಆ ಕಾಂಚೀನಗರದ ಸಮೀಪದಲ್ಲಿರುವ ಹಸ್ತಿಶೈಲದ ಶಿಖರದಲ್ಲಿ ವರದಸ್ವಾಮಿಯನ್ನು ಅರ್ಚಿಸುತ್ತ ವಾಸಮಾಡುವನಾದ್ದರಿಂದ ಅಲ್ಲಿಗೆ ಹೋಗೋಣವೆಂದು ಯೋಚಿಸಿದರು.

೧೭. ಹೀಗೆಂದು ಆ ದೇವಾದಿಗಳೆಲ್ಲರೂ ದೃಢವಾಗಿ ನಿಶ್ಚಯಿಸಿ ಹಸ್ತಿಶೈಲದ ಶಿಖರದಲ್ಲಿದ್ದ ವರದಸ್ವಾಮಿಯನ್ನು ಪೂಜಿಸುತ್ತಲಿದ್ದ ಬ್ರಹ್ಮನ ಸಮೀಪಕ್ಕೆ ಬಂದರು.

೧೮. ಅಲ್ಲಿ ಬ್ರಹ್ಮನನ್ನು ಕಂಡು ಅಂಜಲಿಬದ್ಧರಾಗಿ ನಮಸ್ಕರಿಸಿ ಗಂಗಾದೇವಿಗೆ ಉಂಟಾದ ಶಾಪಪ್ರಾಪ್ತಿಯ ಕಾರಣವನ್ನು ಹೇಳಿದರು.

ಸ ತೇಷಾಂ ತು ವಚಃ ಶ್ರುತ್ವಾ ಬ್ರಹ್ಮಾ ಬ್ರಹ್ಮವಿದಾಂ ವರಃ ।
ಧ್ಯಾತ್ವಾ ಮುಹೂರ್ತಂ ತಾನ್ ಸರ್ವಾನಿದಂ ವಚನಮಬ್ರವೀತ್ ॥ ೧೯ ॥

ಜಾಹ್ನವೀ ಗಿರಿಜಾಶಾಪಾದ್ಬಭೂವಾಮಂಗಲಾ ಕಿಲ ।
ಗಿರಿಜಾಪ್ಯಗ್ರಜಾಂ ಗಂಗಾಂ ನ ಶಶಾಪ ಸ್ವಯೇಚ್ಛಯಾ ॥ ೨೦ ॥

ತತ್ರ ಚಂದ್ರಾವತಾರಸ್ಯ ದೇವಸ್ಯೈವಾಜ್ಞಯಾ ಹರೇಃ ।
ಶಶಾಪ ಗೌರೀ ಕುಪಿತಾ ಜಾಹ್ನವೀಂ ಕೃತಕಿಲ್ಬಿಷಾಂ ॥ ೨೧ ॥

ತಸ್ಮಾದ್ಯೂಯಂ ಚಂದ್ರಖಂಡಂ ವ್ರಜಧ್ವಂ ಶರಣಂ ಹರಿಂ ।
ಅಹಂ ಚ ವೋಽನುಯಾಸ್ಯಾಮಿ ಗಂಗಾಯಾಃ ಶುದ್ಧಿಕಾರಣಾತ್ ॥ ೨೨ ॥

ಇತ್ಯುಕ್ತಾ ಬ್ರಹ್ಮಣಾ ದೇವಾಃ ಸಹ ತೇನ ಸ್ವಯಂಭುವಾ ।
ಉಪೇತ್ಯ ಚಂದ್ರಖಂಡಸ್ಯ ನೈರ್ಋತ್ಯಾಂ ದಿಶಿ ಸಂಸ್ಥಿತಾಃ ॥ ೨೩ ॥

---

೧೯. ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಬ್ರಹ್ಮನು ದೇವಾದಿಗಳ ಆ ವಚನವನ್ನು ಕೇಳಿ ಸ್ವಲ್ಪ ಹೊತ್ತು ಧ್ಯಾನದೃಷ್ಟಿಯಿಂದ ನೋಡಿ ಎಲ್ಲರನ್ನು ಕುರಿತು ಈ ರೀತಿಯಾಗಿ ಹೇಳಿದನು.

೨೦. ಗಂಗೆಯು ಗೌರಿಯ ಶಾಪದಿಂದ ಈ ರೀತಿಯಾದ ಅಮಂಗಲ ಸ್ವರೂಪವನ್ನು ಹೊಂದಿರುವಳಲ್ಲವೆ, ಆದರೆ ಗೌರಿಯು ತನ್ನ ಇಚ್ಛೆಯಿಂದ ತನ್ನ ಅಗ್ರಜಳಾದ ಗಂಗೆಯನ್ನು ಶಪಿಸಲಿಲ್ಲ.

೨೧. ಗೌರಿಯು ಚಂದ್ರನ ಆಕಾರವನ್ನು ಧರಿಸಿದ ದೇದೀಪ್ಯಮಾನನಾದ ಹರಿಪರಮಾತ್ಮನ ಆಜ್ಞೆಯಿಂದ ಅಪರಾಧಮಾಡಿರುವ ಗಂಗೆಯನ್ನು ಕೋಪದಿಂದ ಶಪಿಸಿರುವಳು.

೨೨. ಆದುದರಿಂದ ನೀವೆಲ್ಲರೂ ಪೂರ್ಣ ಚಂದ್ರಾವತಾರಿಯಾದ ಹರಿಯನ್ನು ಶರಣಹೊಂದಿರಿ, ಶಾಪದಿಂದ ಅಪವಿತ್ರಳಾದ ಈ ಗಂಗೆಯನ್ನು ಶುದ್ಧಿಮಾಡುವ ಪ್ರಯತ್ನಕ್ಕೋಸ್ಕರ ನಾನು ನಿಮ್ಮ ಸಂಗಡ ಬರುವೆನು.

೨೩. ಬ್ರಹ್ಮದೇವನಿಂದ ಈ ರೀತಿಯಾಗಿ ಹೇಳಲ್ಪಟ್ಟ ಸಮಸ್ತ ದೇವತೆಗಳು

ಸಮೇತಾಃ ಪುರತೋ ವಿಷ್ಣುಂ ತುಷ್ಟುವುರ್ವಿವಿಧೈಃ ಸ್ತವೈಃ ।
ದೇವದೇವ ಜಗನ್ನಾಥ ಕರುಣಾವರುಣಾಲಯ ॥ ೧೪ ॥

ತ್ವಾಂ ಪ್ರಪನ್ನಾಃ ಸ್ಮ ದೇವೇಶಂ ಪಾಹ್ಯಸ್ಮಾನ್ ಶರಣಾಗತಾನ್ ।
ಇಯಂ ಸುರನದೀ ಗಂಗಾ ಸುರಾಣಾಂ ಹಿತಕಾರಿಣೀ ॥ ೧೫ ॥

ತ್ವಯೈವ ಸೃಷ್ಟಾ ದೇವೇಶ ಪಾದಾಂಗುಷ್ಠಾಗ್ರತಃ ಪುರಾ ।
ಜೀವನಂ ಸರ್ವಭೂತಾನಾಂ ಗಂಗಾ ತ್ರಿಪಥಗಾ ಕಿಲ ॥ ೧೬ ॥

ತಾಂ ವಿನಾದ್ಯ ಕಥಂ ಸರ್ವೇ ಜೀವಾಮಃ ಪುರುಷೋತ್ತಮ ।
ಸಾ ಭೀಷಯಿತ್ವಾ ಗಿರಿಜಾಂ ತ್ವದ್ಭಕ್ತಾಂ ಶಂಕರಾಜ್ಞಯಾ ॥ ೧೭ ॥

ಅದನ್ನು ಅಂಗೀಕರಿಸಿ ಆ ಬ್ರಹ್ಮನೊಡನೆ ಬಂದು ಚಂದ್ರಖಂಡಸ್ವಾಮಿಯು ನಿರ್ಋತಿ ದಿಕ್ಕಿನಲ್ಲಿ ನಿಂತರು.

೧೪. ಆ ಸ್ಥಳದಲ್ಲಿ ಎಲ್ಲರೂ ಸೇರಿಕೊಂಡು ನಾನಾವಿಧವಾದ ಸ್ತುತಿವಚನಗಳಿಂದ ಸ್ವಾಮಿಯನ್ನು ಸ್ತೋತ್ರಮಾಡಿದರು. ದೇವತೆಗಳಿಗೆ ಪ್ರಭುವೆ! ಪ್ರಪಂಚಕ್ಕೆ ನಾಥನೆ! ಕರುಣಾಸಮುದ್ರನೆ! ನಮ್ಮನ್ನು ಪಾಲಿಸು.

೧೫. ಸ್ವಾಮಿಯೇ, ನಾವೆಲ್ಲರೂ ಅನಾಥರಾಗಿ ನಿನ್ನನ್ನು ಶರಣಹೊಂದಿರುವೆವು, ಶರಣಹೊಂದಿರುವ ನಮ್ಮನ್ನು ರಕ್ಷಿಸು. ದೇವತೆಗಳಿಗೆ ಹಿತವನ್ನು ಉಂಟುಮಾಡುವ ದೇವನದಿಯಾದ ಗಂಗೆಯು ನಮ್ಮೊಡನೆ ಬಂದಿರುವಳು, ನೋಡು.

೧೬. ದೇವೋತ್ತಮನೆ! ಈ ಗಂಗೆಯು ನಿನ್ನಿಂದ ಪಾದದ ಅಂಗುಷ್ಠದಿಂದ ಪೂರ್ವದಲ್ಲಿ ಸೃಷ್ಟಿಸಲ್ಪಟ್ಟವಳಲ್ಲವೆ, ಈ ಗಂಗಾನದಿಯು ಸರ್ವ ಪ್ರಾಣಿಗಳಿಗೂ ಜೀವನವನ್ನು ಕೊಡುವ ಆಧಾರರೂಪಳಲ್ಲವೆ.

೧೭. ಪುರುಷೋತ್ತಮನೆ! ಜೀವನಾಧಾರಳಾದ ಆ ಗಂಗೆಯನ್ನು ಕಳೆದುಕೊಂಡು ನಾವೆಲ್ಲರೂ ಹೇಗೆ ಜೀವಿಸೋಣ? ಆ ಗಂಗೆಯು ನಿನ್ನ ಭಕ್ತಳಾದ ಗಿರಿಜೆಯನ್ನು ಶಂಕರನ ಆಜ್ಞಾನುಸಾರವಾಗಿ ಭೀತಿಪಡಿಸಿದಳು.

ತಯಾ ಸಂಕ್ರುದ್ಧಯಾ ಶಪ್ತಾ ಬಭೂವೇಯಮಮಂಗಲಾ ।
ತಸ್ಮಾತ್ತ್ವಾಮುದ್ಧರ ಹರೇ ತ್ವಾಮೇವ ಶರಣಂ ಗತಾಂ ॥ ೨೮ ॥

ತಸ್ಯಾ ವಿಶುದ್ಧಿಮಿಚ್ಛಂತಸ್ತ್ವಾಂ ವಯಂ ಶರಣಂ ಗತಾಃ ।
ತ್ವಮೇವ ದೇವ ಸರ್ವೇಷಾಂ ಸುರಾಣಾಂ ಪರಮಾ ಗತಿಃ ॥ ೨೯ ॥

ಇತ್ಯುಕ್ತ್ವಾ ತತ್ರ ತೇ ಸರ್ವೇ ಬ್ರಹ್ಮಾದ್ಯಾಸ್ತ್ರಿದಿವೌಕಸಃ ।
ಪ್ರಸೀದ ದೇವದೇವೇತಿ ಕ್ರೋಶಂತಸ್ತತ್ರ ತಸ್ಥಿರೇ ॥ ೩೦ ॥

ಗಂಗಾಪಿ ತೇಷಾಂ ಪುರತಃ ಪೃಥಗೇಕೈವ ಸಂಸ್ಥಿತಾ ।
ಚಂದ್ರಖಂಡಸ್ಯ ದೇವಸ್ಯ ಚಾಗ್ನೇಯಂ ದೇಶಮಾಸ್ಥಿತಾ ॥ ೩೧ ॥

ದಧ್ಯೌ ದೇವಂ ರಮಾನಾಥಂ ಗೌರೀಶಾಪಾದಮಂಗಲಾ ।
ಇತಿ ಸ್ತುವತ್ಸು ದೇವೇಷು ಸಂಗತೇಷು ತತೋ ನೃಪ ॥ ೩೨ ॥

---

೨೮. ಆಗ ಕುಪಿತಳಾದ ಪಾರ್ವತಿಯಿಂದ ಅದಕ್ಕೆ ಪ್ರತೀಕಾರವಾಗಿ ಶಪಿಸಲ್ಪಟ್ಟು ಇವಳು ಅಮಂಗಳಸ್ವರೂಪಳಾಗಿರುವಳು. ಹರಿಯೆ ! ಆದುದರಿಂದ ನಿನ್ನನ್ನು ಶರಣಾಗತಳಾದ ಈ ಗಂಗೆಯನ್ನು ಉದ್ಧಾರಮಾಡು.

೨೯. ಅಂತಹ ಗಂಗಾನದಿಗೆ ಪವಿತ್ರತೆಯು ಉಂಟಾಗಬೇಕೆಂಬ ಅಭಿಲಾಷೆಯಿಂದ ನಾವೆಲ್ಲರೂ ನಿನ್ನನ್ನು ಶರಣಹೊಂದಿರುವೆವು. ಪರಮಾತ್ಮನೇ ದೇವತೆಗಳಾದ ನಮ್ಮೆಲ್ಲರಿಗೂ ನೀನೇ ಉತ್ತಮವಾದ ಶರಣವು.

೩೦. ಸ್ವರ್ಗಲೋಕದಲ್ಲಿ ವಾಸಮಾಡುತ್ತಿರುವ ಆ ಬ್ರಹ್ಮವೇ ಮುಂತಾದ ನಿಖಿಲ ದೇವತೆಗಳು ಈ ರೀತಿಯಾಗಿ ವಿಜ್ಞಾಪಿಸಿ ದೇವಾಧಿದೇವನಾದ ಪರಮಾತ್ಮನೆ; ಪ್ರಸನ್ನನಾಗು ಎಂದು ದೈನ್ಯದಿಂದ ಆಕ್ರೋಶಿಸುತ್ತ ಅಲ್ಲಿಯೇ ನಿಂತರು.

೩೧. ಗಂಗೆಯು ಕೂಡ ಚಂದ್ರಖಂಡಸ್ವಾಮಿಯ ವಾಸದೇಶಕ್ಕಿಂತ ಆಗ್ನೇಯದಿಕ್ಕಿನ ಪ್ರದೇಶದಲ್ಲಿ ಆ ದೇವತೆಗಳ ಎದುರಿನಲ್ಲಿ ತಾನೊಬ್ಬಳೆ ಬೇರೆಯಾಗಿ ನಿಂತಳು.

೩೨. ರಾಜನೆ! ಬೇರೆಯಾಗಿ ನಿಂತುಕೊಂಡಿರುವ ಗಂಗಾನದಿಯು ಗೌರಿಯ ಶಾಪದಿಂದ ಪ್ರಾಪ್ತವಾದ ಅಮಂಗಳ ಸ್ವರೂಪವನ್ನು ಕಳೆದುಕೊಳ್ಳುವುದಕ್ಕೋಸ್ಕರ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನನ್ನು ಧ್ಯಾನಮಾಡಿದಳು. ಹೀಗೆ ದೇವತೆಗಳೆಲ್ಲರೂ ಒಟ್ಟಾಗಿ ಸೇರಿ ಸ್ವಾಮಿಯನ್ನು ಸ್ತೋತ್ರಮಾಡಲು ಆರಂಭಿಸಿದರು.

ತತ್ರ ಸತ್ಯವ್ರತಕ್ಷೇತ್ರೇ ಕಾಂಚ್ಯಾ ಮಧ್ಯೇ ಕೃತೇ ಯುಗೇ ।
ವೈಶಾಖೇ ಮಾಸಿ ಪೌರ್ಣಮ್ಯಾಂ ಸಮುದ್ಯತಿ ದಿವಾಕರೇ ॥ ೩೩ ॥

ವ್ಯೋಮ್ನಿ ಪ್ರಾದುರಭೂದ್ದಿವ್ಯಂ ಜ್ಯೋತಿಃ ಸೌದಾಮಿನೀಪ್ರಭಂ ।
ಜ್ಯೋತಿಷಾ ನಭಸಿ ವ್ಯಾಪ್ತೇ ಸಹಸ್ರಾದಿತ್ಯರೋಚಿಷಾ ॥ ೩೪ ॥

ತತ್ರ ದೇವಃ ಪ್ರಾದುರಭೂದಂತರಿಕ್ಷಾದ್ರಮಾಪತಿಃ ।
ವರಂ ದಾತುಂ ಹಿ ಗಂಗಾಯೈ ದೇವಾನಾಂ ಹಿತಕಾಮ್ಯಯಾ ॥ ೩೫ ॥

ಛಂದೋಮಯಮನಂತಾಖ್ಯಂ ಸಮಾರುಹ್ಯ ಖಗೇಶ್ವರಂ ।
ದಿವ್ಯಪಿತಾಂಬರಧರಃ ಸ್ರಗ್ವೀ ರುಚಿರಕುಂಡಲಃ ॥ ೩೬ ॥

---

೩೩. ಆಗ ಆ ಸತ್ಯವ್ರತಕ್ಷೇತ್ರದಲ್ಲಿರುವ ಕಾಂಚೀನಗರದ ಮಧ್ಯದಲ್ಲಿ ಕೃತಯುಗದಲ್ಲಿ ಒಂದು ವೈಶಾಖಮಾಸದ ಪೂರ್ಣಿಮಾತಿಥಿಯಲ್ಲಿ ಸೂರ್ಯನು ಉದಯಿಸುತ್ತಿರುವಾಗ ಪರಮಾತ್ಮನು ದೇವತೆಗಳನ್ನು ಅನುಗ್ರಹಿಸಿದನು.

೩೪. ಆಕಾಶದಲ್ಲಿ ದಿವ್ಯವೂ ಮಿಂಚಿನಂತೆ ಪ್ರಭೆಯಿಂದ ಕೂಡಿರುವುದೂ ಆದ ಒಂದು ಜ್ಯೋತಿಯು ಉದಯಿಸಿತು. ಸಾವಿರಾರು ಸೂರ್ಯಬಿಂಬಗಳಂತೆ ತೇಜಃಪುಂಜವುಳ್ಳ ಆ ಜ್ಯೋತಿಯಿಂದ ಆಕಾಶವೆಲ್ಲವೂ ವ್ಯಾಪ್ತವಾಯಿತು.

೩೫. ಆಗ ಆ ಜ್ಯೋತಿಯ ಮಧ್ಯದಲ್ಲಿ ಲಕ್ಷ್ಮೀಪತಿಯಾದ ಪರಮಾತ್ಮನು ದೇವತೆಗಳ ಇಷ್ಟವನ್ನು ನೆರವೇರಿಸಿ ಗಂಗಾನದಿಗೆ ವರವನ್ನು ನೀಡಲೋಸ್ಕರ ಆಕಾಶದಿಂದ ಪ್ರಾದುರ್ಭವಿಸಿದನು.

೩೬, ಅಲ್ಲಿ ಪ್ರತ್ಯಕ್ಷವಾಗಿ ಬಂದ ನಾರಾಯಣನಮೂರ್ತಿಯು ಛಂದಸ್ಸುಗಳ ರೂಪಾಂತರವಾದ ಅನಂತ ಎಂಬ ಹೆಸರಿನ ಗರುಡನನ್ನು ಏರಿಕೊಂಡು ದಿವ್ಯವಾದ ಪೀತಾಂಬರವನ್ನು ಉಟ್ಟುಕೊಂಡು ಪುಷ್ಪಮಾಲಿಕೆ, ಸುಂದರವಾದ ಕರ್ಣಕುಂಡಲ ಮುಂತಾದವುಗಳಿಂದ ಶೋಭಿತವಾಗಿತ್ತು.

ದಿವ್ಯಚಂದನಲಿಪ್ತಾಂಗೋ ವನಮಾಲಾವಿಭೂಷಿತಃ ।
ಕಿರೀಟಾಂಗದಕೇಯೂರಕಟಿಸೂತ್ರೈರಲಂಕೃತಃ ॥ ೩೭ ॥

ಸುಪರ್ಣಸ್ಕಂಧನಿಕ್ಷಿಪ್ತನಿತಂಬೋರುದ್ವಯಾನ್ವಿತಃ ।
ವೈನತೇಯಕರನ್ಯಸ್ತಕೋಮಲಾಂಘ್ರ್ಯಂಬುಜದ್ವಯಃ ॥ ೩೮ ॥

ಶ್ವೇತಚಾಮರಹಸ್ತೈಶ್ಚ ವ್ಯಜನಚ್ಛತ್ರಪಾಣಿಭಿಃ ।
ಸನಂದನಂದಪ್ರಮುಖೈಃ ಸೇವ್ಯಮಾನಶ್ಚ ಪಾರ್ಷದೈಃ ॥ ೩೯ ॥

ಯೋಗಿಭಿಃ ಸನಕಾದ್ಯೈಶ್ಚ ಸ್ತೂಯಮಾನಪದಾಂಬುಜಃ ।
ತತ್ರೇತ್ಥಂ ದದೃಶೇ ವಿಷ್ಣುರಯುತಾರ್ಕಸಮದ್ಯುತಿಃ ॥ ೪೦ ॥

---

೩೭. ಮತ್ತು ದಿವ್ಯಚಂದನದಿಂದ ಲೇಪಿಸಲ್ಪಟ್ಟ ಸರ್ವಾವಯವಗಳುಳ್ಳದ್ದೂ, ವನಮಾಲೆಯಿಂದ ಭೂಷಿಸಲ್ಪಟ್ಟಿರುವುದೂ, ಮತ್ತು ಕಿರೀಟ, ಅಂಗದ, ಕೇಯೂರ, ಕಟಿಸೂತ್ರಗಳೆಂಬ ವಿವಿಧವಾದ ಭೂಷಣಗಳಿಂದ ಶೋಭಿಸಲ್ಪಟ್ಟಿರುವುದೂ ಆಗಿತ್ತು.

೩೮. ಗರುಡನ ಸ್ಕಂಧದಲ್ಲಿ ಕುಳಿತಿರುವುದರಿಂದ ಆ ಸ್ಕಂಧದಲ್ಲಿರಿಸಲ್ಪಟ್ಟ ನಿತಂಬಭಾಗ ಮತ್ತು ತೊಡೆಗಳುಳ್ಳದ್ದಾಗಿಯೂ, ಮತ್ತು ಆ ಗರುಡನ ಕರಗಳಲ್ಲಿ ಇಟ್ಟ ತನ್ನ ಕೋಮಲವಾದ ಚರಣದ್ವಯವುಳ್ಳದ್ದಾಗಿಯೂ ಇತ್ತು.

೩೯. ಸನಂದ-ನಂದರು ಆದಿಯಾಗಿ ತನ್ನ ಸಮಸ್ತ ಪಾರ್ಷದರೆಂಬ ಪರಿವಾರದಿಂದ ಶುಭ್ರವಾದ ಚಾಮರ, ಛತ್ರ, ಬೀಸಣಿಗೆ ಮುಂತಾದ ಉಪಕರಣಗಳಿಂದ ಸೇವಿಸಲ್ಪಡುತ್ತಲೂ ಇತ್ತು.

೪೦. ಸನಕ ಮುಂತಾದ ಶ್ರೇಷ್ಠಯೋಗಿಗಳಿಂದ ಸ್ತುತಿಸಲ್ಪಡುವ ಚರಣದ್ವಂದ್ವವುಳ್ಳದ್ದಾಗಿಯೂ ಕೋಟಿ ಸೂರ್ಯರಂತೆ ಉಜ್ಜ್ವಲವಾದ ಪ್ರಭೆಯುಳ್ಳದ್ದಾಗಿಯೂ ಇರುವ ಅಂತಹ ಮೂರ್ತಿಯಿಂದ ವಿಷ್ಣುವು ಆ ದೇವತೆಗಳಿಗೆ ಪ್ರತ್ಯಕ್ಷನಾದನು.

ಪ್ರಾದುರ್ಭೂತೇ ತಥಾ ದೇವೇ ಸರ್ವೇಷಾಂ ಚ ದಿವೌಕಸಾಂ ।
ಪ್ರಸನ್ನಾನಿ ಮನಾಂಸ್ಯಾಸನ್ ಸತಾಮಪಿ ಚ ಭೂತಲೇ ॥ ೪೧ ॥

ವವೌ ವಾಯುಃ ಸುಖಸ್ಪರ್ಶಃ ಪುಣ್ಯಗಂಧವಹಃ ಶುಚಿಃ ।
ಸರಾಂಸಿ ವಿಮಲಾಂಭಾಂಸಿ ನದ್ಯಶ್ಚ ವಿಮಲೋದಕಾಃ ॥ ೪೨ ॥

ಗಂಧವಂತಿ ಚ ಪುಷ್ಪಾಣಿ ಸ್ವಾದೂನ್ಯಾಸನ್ ಫಲಾನಿ ಚ ।
ಪುಷ್ಪವೃಷ್ಟಿರ್ಮಹತ್ಯಾಸೀದಂತರಿಕ್ಷಾತ್ಸುಭಾಸ್ವರಾ ॥ ೪೩ ॥

ತತಶ್ಚ ಸಂವೀಕ್ಷ್ಯ ಸುರಾಃ ಪ್ರಹೃಷ್ಟಾ
ಹರಿಂ ಸಮಾರೂಢಖಗೇಂದ್ರಮಾದ್ಯಂ
ನಂದಂತಿ ನೃತ್ಯಂತಿ ನದಂತಿ ಕೇಚಿ-
ದ್ವಧ್ಮುರ್ಮುದಾ ಕಾಹಳಶಂಖಗೋಮುಖಾನ್ ॥ ೪೪ ॥

---

೪೧. ಈ ರೀತಿಯಾಗಿ ಸಮಸ್ತ ದೇವತೆಗಳಿಗೆ ಹರಿಯು ಪ್ರತ್ಯಕ್ಷನಾಗಿ ಬರಲು ಭೂಲೋಕದಲ್ಲಿ ಸಮಸ್ತ ಸಾಧುಜನರ ಮಾನಸಗಳೆಲ್ಲವೂ ಅತ್ಯಂತ ನಿರ್ಮಲವಾಯಿತು.

೪೨. ಮತ್ತು ಸುಖಕರವಾದ ಸ್ಪರ್ಶಗುಣದಿಂದಲೂ ಪವಿತ್ರವಾದ ಸುಗಂಧದಿಂದಲೂ ಕೂಡಿ ಹಿತವಾದ ಗಾಳಿಯು ಬೀಸಿತು. ಸರೋವರಗಳು ಮತ್ತು ನದಿಗಳು ನಿರ್ಮಲವಾದ ನೀರಿನಿಂದ ಪೂರ್ಣವಾಗಿ ಶೋಭಿಸಿದವು.

೪೩. ಭೂಮಿಯಲ್ಲಿ ಬೆಳೆಯುವ ಹೂಗಳೆಲ್ಲವೂ ಸುವಾಸನೆಯಿಂದ ಪೂರ್ಣವಾಗಿದ್ದವು, ಹಣ್ಣುಗಳು ಮಧುರವಾದವು, ಮತ್ತು ಆಗ ಆಕಾಶದಿಂದ ರಮ್ಯವಾಗಿ ಪ್ರಕಾಶಿಸುವ ಪುಷ್ಪವೃಷ್ಟಿಯು ಉಂಟಾಯಿತು. ವಿಷ್ಣುವು ಪ್ರತ್ಯಕ್ಷನಾಗಿ ಬಂದ ಸಮಯದಲ್ಲಿ ಈ ವಿಧವಾದ ಶುಭ ನಿಮಿತ್ತಗಳೆಲ್ಲವೂ ಕಾಣಿಸಿಕೊಂಡವು.

೪೪. ಆಗ ದೇವತೆಗಳು ಪಕ್ಷಿಶ್ರೇಷ್ಠನಾದ ಗರುಡನನ್ನು ಏರಿಕೊಂಡು ಬಂದಿರುವ ಸನಾತನನಾದ ವಿಷ್ಣುಪರಮಾತ್ಮನನ್ನು ನೋಡಿ ಆನಂದವನ್ನು ಹೊಂದಿದರು. ಮತ್ತು ಕೆಲವರು ಪ್ರೀತಿಸುತ್ತ ಕೆಲವರು ನರ್ತನಮಾಡುತ್ತ ಮತ್ತೆ ಕೆಲವರು ಸ್ತುತಿಶಬ್ದವನ್ನು ಉಚ್ಚರಿಸುತ್ತ ಮತ್ತು ಇನ್ನು ಕೆಲವರು ಕಾಹಳ-ಶಂಖ-ಗೋಮುಖವೆಂಬ ವಾದ್ಯಗಳನ್ನು ಧ್ವನಿಮಾಡುತ್ತ ಆನಂದವನ್ನು ಪ್ರಕಾಶಪಡಿಸಿದರು.

ಸ್ತುವಂತಿ ಕೇಚಿತ್ಪ್ರಣಮಂತಿ ಕೇಚಿತ್
ಕುರ್ವಂತಿ ಕೇಚಿತ್ಕರತಾಳಶಬ್ದಾನ್ ।
ಗಾಯಂತಿ ಕೇಚಿತ್ಪಣವಾನಕಾದೀನ್
ಪ್ರವಾದಯಂತಿ ಸ್ಮ ಸುವಾದ್ಯಸಂಘಾನ್ ॥ ೪೫ ॥

ಅಥ ಸುರಮನುಜಾದಯಸ್ತದಾ
ಹರಿಮಭಿವೀಕ್ಷ್ಯ ವಿಹಂಗರಾಜಪೃಷ್ಠೇ ।
ದಿವಸಕರಮಿವೋದಯಾದ್ರಿಶೃಂಗೇ
ಕಮಲವನಾನಿ ಯಥಾ ಯಯುಃ ಪ್ರಮೋದಂ ॥ ೪೬ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಷಟ್ತ್ರಿಂಶೋಽಧ್ಯಾಯಃ.

---

೪೫. ಹಾಗೆಯೇ ಸ್ತೋತ್ರಮಾಡುವುದು, ಕೈಚಪ್ಪಾಳೆಯನ್ನು ಹೊಡೆಯುವುದು, ಗಾನಮಾಡುವುದು, ಪಣವ ಮುಂತಾದ ಉತ್ತಮವಾದ್ಯ ಪ್ರಭೇದಗಳನ್ನು ಧ್ವನಿಗೈಯ್ಯುವುದು, ಮುಂತಾದ ನಾನಾವಿಧವಾದ ಕರ್ತವ್ಯಗಳನ್ನು ಕೆಲಕೆಲವರು ತಮ್ಮ ತಮ್ಮ ಆನಂದದಿಂದ ಭಕ್ತಿ ನಮ್ರರಾಗಿ ಆಚರಿಸಿದರು.

೪೬. ಆಗ ಉದಯಪರ್ವತದ ಶಿಖರದಲ್ಲಿ ಸೂರ್ಯನು ಉದಯಿಸಿ ಬಂದಾಗ ಕಮಲಪುಷ್ಪಗಳ ಸಮೂಹವು ವಿಕಾಸವನ್ನು ಹೊಂದುವಂತೆ, ದೇವತೆಗಳು, ಮಾನವರು ಎಲ್ಲರೂ ಪಕ್ಷೀಂದ್ರನಾದ ಗರುಡನ ಸ್ಕಂಧದಲ್ಲಿ ಕುಳಿತಿರುವ ಹರಿಯನ್ನು ನೋಡಿ ಬಹಳ ಸಂತೋಷವನ್ನು ಹೊಂದಿದರು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಸಪ್ತವಿಂಶೋಽಧ್ಯಾಯಃ

ನಾರದ ಉವಾಚ :—

ತತಃ ಸಮುದ್ವೀಕ್ಷ್ಯ ಹರಿಂ ಶಂಖಚಕ್ರಗದಾಧರಂ ।
ವೈನತೇಯಂ ಸಮಾರುಹ್ಯ ಸಂಪ್ರಾಪ್ತಮಮರೋತ್ತಮಂ ॥ ೧ ॥

ಪ್ರಣಮ್ಯ ಪ್ರಾಂಜಲಿರ್ಭೂತ್ವಾ ತುಷ್ಟಾವ ಚತುರಾನನಃ ।
ದೇವದೇವ ಜಗನ್ನಾಥ ಜಗದಾಧಾರ ಕೇಶವ ॥ ೨ ॥

ವಯಂ ತ್ವಾಂ ಶರಣಂ ಪ್ರಾಪ್ತಾಸ್ತ್ವನ್ನಾಥಾಸ್ತ್ವತ್ಪರಾಯಣಾಃ ।
ಪಾಹ್ಯಸ್ಮಾನ್ ಕೃಪಯಾ ನಾಥ ಸತತಂ ಮಧುಸೂದನ ॥ ೩ ॥

---

೧. ನಾರದಮುನಿಯು ಅಂಬರೀಷರಾಜನಿಗೆ ಈ ರೀತಿಯಾಗಿ ಹೇಳಿದನು. ತರುವಾಯ ಬ್ರಹ್ಮದೇವನು ಶಂಖ-ಚಕ್ರ-ಗದೆಗಳನ್ನು ಧರಿಸಿ ಗರುಡ ವಾಹನವನ್ನು ಏರಿಬಂದಿರುವ ದೇವತೆಗಳ ಪ್ರಭುವಾದ ಹರಿಯನ್ನು ಸಾಕ್ಷಾತ್ಕರಿಸಿದನು.

೨. ಆಗ ಭಕ್ತಿಯಿಂದ ಅಂಜಲಿಯನ್ನು ಕಟ್ಟಿಕೊಂಡು ನಮಸ್ಕರಿಸಿ ಪವಿತ್ರ ನಾಮಗಳಿಂದ ಸಂಬೋಧಿಸಿ ಈರೀತಿಯಾಗಿ ಸ್ತುತಿಮಾಡಿದನು :—ದೇವತೆಗಳಿಗೆಲ್ಲ ದೇವತೆಯೆ! ಪ್ರಪಂಚಕ್ಕೆ ನಾಥನೆ! ಜಗತ್ತಿನ ಆಧಾರಭೂತನೆ! ಕೇಶವನೆ! ಈ ನಮ್ಮ ದೇವವೃಂದವೆಲ್ಲವೂ ನಿನ್ನನ್ನು ಆಶ್ರಯಿಸಿರುವುದು.

೩. ಮಧುದೈತ್ಯನನನ್ನು ಸಂಹರಿಸಿ ದೇವತೆಗಳನ್ನು ಬದುಕಿಸಿದ ನಾಥನೆ! ನಾವೆಲ್ಲರೂ ನಿನ್ನನ್ನು ಶರಣಹೊಂದಿರುವೆವು. ನಿನ್ನನ್ನೇ ನಾಥನನ್ನಾಗಿಯೂ ಪರಮ ಗತಿಯನ್ನಾಗಿಯೂ ಅವಲಂಬಿಸಿರುವೆವು. ಆದುದರಿಂದ ಕರುಣೆಯಿಂದ ನಮ್ಮನ್ನು ಯಾವಾಗಲೂ ರಕ್ಷಿಸು.

ಕೋ ವಾನ್ಯಃ ಸರ್ವಕಾರ್ಯೇಷು ತ್ವತ್ತೋಽನ್ಯಃ ಶರಣಂ ಭವೇತ್ ।
ಇಯಂ ಹೈಮವತೀ ಗಂಗಾ ಸರ್ವಲೋಕೈಕಪಾವನೀ ॥ ೪ ॥

ಸರ್ವಲೋಕಹಿತಾರ್ಥಾಯ ತ್ವಯೈವ ಜನಿತಾ ಪುರಾ ।
ಸಾದ್ಯ ತ್ವದ್ಭಕ್ತಯಾ ಗೌರ್ಯಾ ಸಂಶಪ್ತಾಽಭೂದಮಂಗಲಾ ॥ ೫ ॥

ಅತಸ್ತಾಂ ಕುರು ಕಲ್ಯಾಣೀಂ ವೀತಶಾಪಾಂ ಸುಮಂಗಲಾಂ ।
ಏಷ ನಃ ಪರಮಃ ಕಾಮಸ್ತದನುಜ್ಞಾತುಮರ್ಹಸಿ ॥ ೬ ॥

ಇತಿ ಬ್ರುವತಿ ದೇವೇಶೇ ವಿಧಾತರಿ ರಮಾಪತಿಂ ।
ಗಂಗಾಪಿ ಸಂಪ್ರಣಮ್ಯೋಚ್ಚೈಸ್ತುಷ್ಟಾವ ಪುರುಷೋತ್ತಮಂ ॥ ೭ ॥

ನಮಸ್ತೇ ಪುಂಡರೀಕಾಕ್ಷ ಪುರಾಣಪುರುಷಾವ್ಯಯ ।
ಯೋಗಿಧ್ಯೇಯ ರಮಾನಾಥ ನಮಸ್ತೇ ವಿಶ್ವಭಾವನ ॥ ೮ ॥

---

೪. ನಮಗೆ ಒದಗುವ ಸಮಸ್ತ ಕಾರ್ಯಗಳಲ್ಲಿಯೂ ನಿನ್ನ ಹೊರತು ಬೇರೆ ಶರಣರು ಯಾರಿರುವರು! ಹಿಮವಂತನ ಪುತ್ರಿಯಾದ ಈ ಗಂಗೆಯು ಸಕಲ ಲೋಕಗಳನ್ನು ಪವಿತ್ರವನ್ನಾಗಿಮಾಡುವ ಮಹಾನದಿಯಲ್ಲವೆ.

೫. ಮತ್ತು ಈ ನದಿಯು ಲೋಕಗಳ ಹಿತಕ್ಕೋಸ್ಕರವಾಗಿ ನಿನ್ನಿಂದ ಸೃಷ್ಟಿಸಲ್ಪಟ್ಟವಳಲ್ಲವೆ. ಅಂತಹ ಗಂಗಾನದಿಯು ಈಗ ನಿನ್ನಲ್ಲಿ ಭಕ್ತಳಾದ ಗೌರಿಯ ಶಾಪದಿಂದ ಅಮಂಗಳವಾದ ಸ್ವರೂಪವನ್ನು ಹೊಂದಿ ಬಾಹ್ಯಳಾಗಿರುವಳು.

೬. ಆದುದರಿಂದ ಆ ಗಂಗೆಯನ್ನು ಶಾಪದಿಂದ ಮುಕ್ತಳನ್ನಾಗಿಮಾಡಿ ಸುಂದರವಾದ ಆಕಾರ ಮಂಗಳವಾದ ಶೀಲಸ್ವರೂಪಗಳುಂಟಾಗುವಂತೆಮಾಡು. ಇದೇ ನಮ್ಮ ಸಾರವಾದ ಕಾಮನೆಯು, ಇದನ್ನು ಅಂಗೀಕರಿಸಿ ನಿರ್ವಾಹಮಾಡಬೇಕೆಂದು ಬೇಡಿಕೊಳ್ಳುತ್ತೇವೆ.

೭. ಹೀಗೆಂದು ದೇವತೆಗಳಿಗೆ ಅಗ್ರೇಸರನಾದ ಬ್ರಹ್ಮದೇವನು ಲಕ್ಷ್ಮೀಪತಿಯನ್ನು ವಿಜ್ಞಾಪಿಸಿಕೊಳ್ಳುತ್ತಿರಲು ಗಂಗೆಯೂ ಕೂಡ ಪುರುಷೋತ್ತಮನಾದ ಹರಿಯನ್ನು ನಮಸ್ಕರಿಸಿ ಉಚ್ಚಧ್ವನಿಯಿಂದ ಸ್ತೋತ್ರಮಾಡಿದಳು.

೮. ಕಮಲದಂತೆ ನೇತ್ರವುಳ್ಳವನೂ, ಸನಾತನನಾದ ಪುರುಷನೂ, ನಾಶರಹಿತನೂ, ಯೋಗಿಗಳಿಂದ ಧ್ಯಾನಿಸಲ್ಪಡುವವನೂ, ಲಕ್ಷ್ಮಿಯ ಪತಿಯೂ ಮತ್ತು ಪ್ರಪಂಚವನ್ನು ಸೃಷ್ಟಿಸಿದವನೂ ಆದ ಪರಮಾತ್ಮನೆ! ನಿನ್ನನ್ನು ನಮಸ್ಕರಿಸುವೆನು.

ವಿಶ್ವರೂಪಂ ವಿಶ್ವಸೃಜಂ ವಿಶ್ವಾತ್ಮಾನಮನೀಶ್ವರಂ ।
ತ್ವಾಂ ಪ್ರಪನ್ನಾಸ್ಮ್ಯಹಂ ದೇವ ಯೋಗಿಧ್ಯೇಯಂ ರಮಾಪತಿಂ ॥ ೯ ॥
ನಿರ್ಗುಣಂ ನಿಷ್ಕಲಂ ಶಾಂತಂ ನಿರವದ್ಯಂ ನಿರಾಮಯಂ ।
ತ್ವಾಂ ಪ್ರಪನ್ನಾಸ್ಮ್ಯಹಂ ದೇವ ಯೋಗಿಧ್ಯೇಯಂ ರಮಾಪತಿಂ ॥ ೧೦ ॥
ಸೂಕ್ಷ್ಮಾತ್ ಸೂಕ್ಷ್ಮತರಂ ವಿಷ್ಣುಂ ಮಹತೋಽಪಿ ಮಹತ್ತರಂ ।
ತ್ವಾಂ ಪ್ರಪನ್ನಾಸ್ಮ್ಯಹಂ ದೇವ ಯೋಗಿಧ್ಯೇಯಂ ರಮಾಪತಿಂ ॥ ೧೧ ॥
ವಿಶುದ್ಧವಿಜ್ಞಾನಘನಮನಂತಮಜರಾಮರಂ ।
ತ್ವಾಂ ಪ್ರಪನ್ನಾಸ್ಮ್ಯಹಂ ದೇವ ಯೋಗಿಧ್ಯೇಯಂ ರಮಾಪತಿಂ ॥ ೧೨ ॥
ಅಭೀತಮಭಯಂ ಸ್ಥಾಣುಮನಾದಿಮಕುತೋಭಯಂ ।
ತ್ವಾಂ ಪ್ರಪನ್ನಾಸ್ಮ್ಯಹಂ ದೇವ ಯೋಗಿಧ್ಯೇಯಂ ರಮಾಪತಿಂ ॥ ೧೩ ॥

---

೯. ಸ್ವಾಮಿಯೇ! ವಿಶ್ವದರೂಪವುಳ್ಳವನೂ, ವಿಶ್ವವನ್ನು ಸೃಷ್ಟಿಸಿದವನೂ, ಪ್ರಪಂಚದ ಆತ್ಮಸ್ವರೂಪನೂ, ಬೇರೊಬ್ಬ ನಿಯಾಮಕನಿಲ್ಲದ ಸರ್ವೇಶ್ವರನೂ, ಯೋಗಿಗಳಿಂದ ಧ್ಯಾನಿಸಲ್ಪಡುವವನೂ ಮತ್ತು ಲಕ್ಷ್ಮೀಪತಿಯೂ ಆದ ನಿನ್ನನ್ನು ನಾನು ಶರಣಹೊಂದಿರುವೆನು.

೧೦. ತ್ಯಾಜ್ಯವಾದ ಗುಣಗಳಿಂದ ವರ್ಜಿತನೂ, ನಿರವಯವನೂ, ನಿರ್ವಿಕಾರವಾದ ಶಾಂತಸ್ವರೂಪವುಳ್ಳವನೂ, ದೋಷರಹಿತನೂ, ಯಾವದೊಂದು ರೋಗಾದಿ ಬಾಧಾ ಶೂನ್ಯನೂ ಯೋಗಿಗಳಿಗೆ ಧ್ಯೇಯನೂ ಮತ್ತು ರಮಾದೇವಿಯ ಪತಿಯೂ ಆದ ನಿನ್ನನ್ನು ಶರಣಹೊಂದಿರುವೆನು.

೧೧. ಸ್ವಾಮಿಯೆ! ವಿಶ್ವರೂಪನಾಗಿ ಪ್ರಪಂಚವನ್ನು ವ್ಯಾಪಿಸಿರುವುದರಿಂದ ಸೂಕ್ಷ್ಮವಾದ ಉಪಾಧಿರೂಪದಿಂದ ಸೂಕ್ಷ್ಮವಸ್ತುಗಳಿಗಿಂತ ಸೂಕ್ಷ್ಮವಾದ ಪರಿಮಾಣವುಳ್ಳವನೂ, ಸ್ಥೂಲಸೃಷ್ಟಿಯಿಂದ ಮಹತ್ತಾದ ವಸ್ತುಗಳಿಗಿಂತ ಮಹಾಪರಿಮಾಣವುಳ್ಳವನೂ, ಯೋಗಿಧ್ಯೇಯನೂ, ಲಕ್ಷ್ಮೀಪತಿಯೂ ಆದ ನಿನ್ನನ್ನು ಶರಣಹೊಂದಿರುವೆನು.

೧೨. ನಿರುಪಾಧಿಕವಾದ ಚೈತನ್ಯಮಾತ್ರದಿಂದ ಘನವಾದ ಸ್ವರೂಪವುಳ್ಳವನೂ, ಪರಿಚ್ಛೇದವಿಲ್ಲದವನೂ, ಜರಾ-ಮರಣಗಳಿಂದ ವರ್ಜಿತನೂ ಯೋಗಿಗಳಿಗೆ ಧ್ಯೇಯನೂ ರಮಾನಾಥನೂ ಆದ ನಿನಗೆ ನಾನು ಶರಣಾಗತಳಾಗಿರುವೆನು.

೧೩. ಭಯಕಾರಣರಹಿತನೂ, ಭೀತಿ ವರ್ಜಿತನೂ, ಸ್ಥಿರಸ್ವಭಾವವುಳ್ಳವನೂ, ಉತ್ಪತ್ತಿಶೂನ್ಯನೂ ಭೀತರಸಂಗದಿಂದ ಮುಕ್ತನೂ ಯೋಗಿಗಳಿಂದ ಧ್ಯಾನಮಾಡಲ್ಪಡುವವನೂ ಲಕ್ಷ್ಮೀರಮಣನೂ ಆದ ನಿನಗೆ ನಾನು ಶರಣಾಗತಳಾಗಿರುವೆನು.

ಇತಿ ಸ್ತುತೋಽಥ ಭಗವಾನ್ ಗಂಗಯಾ ಭಕ್ತವತ್ಸಲಃ ।
ಸಂತುಷ್ಟಸ್ತಾಮುವಾಚೇದಂ ವಚನಂ ಮಧುರಾಕ್ಷರಂ ॥ ೧೪ ॥

ಭೃಶಂ ತುಷ್ಟೋಽಸ್ಮ್ಯಹಂ ಗಂಗೇ ತಪಸಾ ತವ ಸುವ್ರತೇ ।
ಪ್ರೀತಸ್ತುಭ್ಯಂ ಪ್ರದಾಸ್ಯಾಮಿ ಮನಸಾ ಕಾಂಕ್ಷಿತಾನ್ ವರಾನ್ ॥ ೧೫ ॥

ಗೌರೀಶಾಪಾತ್ ಪ್ರಮುಕ್ತಾ ತ್ವಂ ಭವ ಪೂತಾ ಚ ಮಂಗಳಾ ।
ವಿಪಾಪಾ ಸುಭಗಾ ಚೈವ ಸರ್ವಲೋಕೈಕಪಾವನೀ ॥ ೧೬ ॥

ಭವ ಮಚ್ಛಾಸನಾದ್ಗಂಗೇ ಸರ್ವಲೋಕೇಷು ಪೂಜಿತಾ ।
ಇದಂ ಚಾಪ್ಯಪರಂ ವಾಕ್ಯಂ ಶೃಣು ವಕ್ಷ್ಯಾಮಿ ತೇ ಹಿತಂ ॥ ೧೭ ॥

ಸರ್ವಲೋಕಹಿತಾರ್ಥಾಯ ತವ ಚ ಖ್ಯಾತಿಕಾರಣಾತ್ ।
ಯತ್ರ ಸ್ಥಿತ್ವಾ ತು ಮಾಂ ದೃಷ್ಟ್ವಾ ತಪಸ್ತ್ವಂ ಕೃತವತ್ಯಸಿ ॥ ೧೮ ॥

---

೧೪. ಈರೀತಿಯಾಗಿ ಗಂಗೆಯಿಂದ ಸ್ತುತಿಸಲ್ಪಟ್ಟ, ಭಕ್ತರಲ್ಲಿ ಪ್ರೇಮಿಯೂ ಭಗವಂತನು ಸಂತುಷ್ಟನಾಗಿ ಆ ಗಂಗೆಯನ್ನು ಮಧುರವಾದ ಅಕ್ಷರಗಳುಳ್ಳ ಈ ವಿಧವಾದ ವಚನವನ್ನು ಆಡಿದನು.

೧೫. ವ್ರತಾನುಷ್ಠಾನಪರಳಾದ ಗಂಗೆಯೆ! ನೀನು ಮಾಡಿರುವ ತಪಸ್ಸು ಮತ್ತು ಧ್ಯಾನಗಳಿಂದ ನಾನು ಅತ್ಯಂತ ಸಂತುಷ್ಟನಾಗಿರುವೆನು. ನಿನ್ನಲ್ಲಿ ಸುಪ್ರೀತನಾದ ನಾನು ನಿನ್ನ ಮನಸ್ಸಿಗೆ ಇಷ್ಟವಾದ ಸಕಲ ವರಗಳನ್ನು ಕೊಡುವೆನು.

೧೬. ನೀನು ಗೌರಿಯ ಶಾಪದಿಂದ ಮುಕ್ತಳಾಗು. ಮತ್ತು ಪವಿತ್ರಳೂ, ಮಂಗಳಕರಳೂ, ಪಾಪಸಂಪರ್ಕಶೂನ್ಯಳೂ, ಸರ್ವಸೌಭಾಗ್ಯಗಳಿಂದ ಪೂರ್ಣಳೂ, ಮತ್ತು ಸಕಲ ಲೋಕಗಳನ್ನು ಪವಿತ್ರಮಾಡುವವಳೂ ಆಗು.

೧೭. ಗಂಗೆಯೇ! ನನ್ನ ಆಜ್ಞಾವಚನದಿಂದ ನೀನು ಸರ್ವ ಲೋಕಗಳಲ್ಲಿಯೂ ಪೂಜ್ಯಳಾಗು, ಮತ್ತು ನಿನಗೆ ಹಿತಕರವಾದ ಇದೊಂದು ಮಾತನ್ನು ಹೇಳುವೆನು ಕೇಳು.

೧೮. ಈ ನನ್ನ ವಚನವು ಸಕಲ ಲೋಕಗಳ ಹಿತಕ್ಕೆ ಸಾಧನವೂ ನಿನ್ನ ಖ್ಯಾತಿಲಾಭಕ್ಕೆ ಸಾಧನವೂ ಆಗಿರುವುದು, ಅದನ್ನು ಕೇಳು, ನೀನು ನನ್ನನ್ನು ಉದ್ದೇಶಿಸಿ ಒಂದು ಪವಿತ್ರಸ್ಥಳದಲ್ಲಿ ಇದ್ದು ತಪಸ್ಸನ್ನು ಆಚರಿಸಿರುತ್ತೀ.

ತತ್ರ ತೀರ್ಥಂ ಮಹಾಪುಣ್ಯಂ ಭವತ್ವಘಹರಂ ನೃಣಾಂ ।
ಯಸ್ಮಾದಮಂಗಲಾನ್ಮುಕ್ತಾ ಪುನಃ ಪ್ರಾಪ್ತಾಸಿ ಮಂಗಲಂ ॥ ೧೯ ॥

ತಸ್ಮಾನ್ಮಂಗಲತೀರ್ಥಾಖ್ಯಂ ಲೋಕೇ ಭವತು ಪಾವನಂ ।
ಮಂಗಳಾಖ್ಯೇ ಪುಣ್ಯತಮೇ ತೀರ್ಥೇ ಯಃ ಸ್ನಾತಿ ಮಾನವಃ ॥ ೨೦ ॥

ಸೋಽನುಭೂಯಾಖಿಲಾನ್ ಕಾಮಾನಂತೇ ಮೋಕ್ಷಂ ಚ ವಿಂದತಿ ।
ಇದಂ ಚೈವಾಪರಂ ವಕ್ಷ್ಯೇ ಶೃಣು ಮದ್ವಚನಂ ಶುಭೇ ॥ ೨೧ ॥

ಏತೇಽಪಿ ತ್ವಾಂ ಮೋಚಯಿತುಂ ಶಾಪಾದಸ್ಮಾದಮಂಗಲಾತ್ ।
ಸಹಿತಾಃ ಸಂಘಶೋ ಯತ್ರ ಸ್ಥಿತ್ವಾ ಮಾಂ ತುಷ್ಟುವುಃ ಸುರಾಃ ॥ ೨೨ ॥

ತತ್ರಾಪಿ ಸುಮಹತ್ಪುಣ್ಯಂ ಸರೋ ಭವತು ಪಾವನಂ ।
ತಸ್ಮಿನ್ ಸರಸಿ ತೇ ಸರ್ವೇ ವಸಂತ್ವಿಹ ಮದಾಜ್ಞಯಾ ॥ ೨೩ ॥

---

೧೯. ಆ ಸ್ಥಳದಲ್ಲಿ ಮನುಷ್ಯರ ಸಕಲ ಪಾಪಗಳನ್ನು ಮೋಚನಮಾಡುವ, ಮತ್ತು ಅತಿಶಯವಾದ ಪುಣ್ಯವನ್ನು ಕೊಡುವ ಒಂದು ಉತ್ತಮತೀರ್ಥವಾಗಲಿ, ಆ ಸ್ಥಳದಲ್ಲಿ ನೀನು ಅಮಂಗಳ ರೂಪದಿಂದ ಬಿಡುಗಡೆಯನ್ನು ಹೊಂದಿ ಮತ್ತೆ ಮಂಗಳ ವನ್ನು ಹೊಂದಿರುತ್ತೀ.

೨೦. ಆದುದರಿಂದ ಆ ತೀರ್ಥವು ಮಂಗಳತೀರ್ಥನೆಂಬ ಹೆಸರಿನಿಂದ ಲೋಕ ದಲ್ಲಿ ಖ್ಯಾತಿಯನ್ನು ಹೊಂದಲಿ, ಮಾನವರು ಅಂತಹ ಪುಣ್ಯತಮವಾದ ಆಮಂಗಳ ತೀರ್ಥದಲ್ಲಿ ಅವಶ್ಯವಾಗಿ ಸ್ನಾನಮಾಡಬೇಕು.

೨೧. ಅಂತಹ ಮಾನವನು ಸಮಸ್ತ ಕಾಮ್ಯಭೋಗಗಳನ್ನು ಅನುಭವಿಸಿ ಆಯುಸ್ಸಿನ ಅವಸಾನದಲ್ಲಿ ಮೋಕ್ಷವನ್ನು ಹೊಂದುವನು, ಮಂಗಲಕರಳೆ! ಇನ್ನೊಂದು ಹಿತವಚನವನ್ನು ಆಡುವೆನು. ಅದನ್ನು ಕೇಳು.

೨೨. ಈ ದೇವತೆಗಳು ಅಮಂಗಲವಾದ ಈ ಶಾಪದಿಂದ ನಿನ್ನನ್ನು ಬಿಡುಗಡೆ ಮಾಡಲು ಒಂದು ಸ್ಥಳದಲ್ಲಿ ಎಲ್ಲರೂ ಸಂಘವಾಗಿ ನಿಂತು ನನ್ನನ್ನು ಭಕ್ತಿಯಿಂದ ಸ್ತೋತ್ರಮಾಡಿರುವರಲ್ಲವೆ.

೨೩. ಆ ಸ್ಥಳದಲ್ಲಿಯೂ ಅತ್ಯಂತ ಪುಣ್ಯವನ್ನು ಪ್ರದಾನಮಾಡುವ ಪಾವನ ವಾದ ಒಂದು ಸರೋವರವು ಉಂಟಾಗಲಿ, ಆ ಸರೋವರದ ಸನ್ನಿಧಿಯಲ್ಲಿ ಸಮಸ್ತ ದೇವತೆಗಳೂ ನನ್ನ ಆಜ್ಞಾನುಸಾರವಾಗಿ ಯಾವಾಗಲೂ ವಾಸಮಾಡಲಿ.

ಯಸ್ಮಾತ್ ಸರ್ವೇಽಪಿ ತೀರ್ಥೇಽಸ್ಮಿನ್ ನಿವಸಂತ್ಯನಿಶಂ ಸುರಾಃ ।
ತಸ್ಮಾತ್ತತ್ಸರ್ವತೀರ್ಥಾಖ್ಯಂ ಸರೋ ಭವತು ಪಾವನಂ ॥ ೨೪ ॥

ಅತ್ರ ಭಕ್ತ್ಯಾ ನರಃ ಸ್ನಾತ್ವಾ ಕೃತ್ವಾ ತು ವಪನಕ್ರಿಯಾಂ ।
ಯಃ ಕುರ್ಯಾತ್ ಪಾರ್ವಣಶ್ರಾದ್ಧಂ ತಂ ವಿದ್ಯಾದಶ್ವಮೇಧಿನಂ ॥ ೨೫ ॥

ಏವಂ ಪ್ರಸನ್ನೇ ಬ್ರುವತಿ ಗಂಗಾ ಮುದ್ವೀಕ್ಷ್ಯ ಶಾಂಙ್ರ್ಗಿಣಿ ।
ಬಭೂವುಃ ಸಂಪ್ರಹೃಷ್ಟಾಸ್ತೇ ಬ್ರಹ್ಮಾದ್ಯಾಸ್ತ್ರಿದಿವೌಕಸಃ ॥ ೨೬ ॥

ಗಂಗಾಪಿ ಗಿರಿಜಾಶಾಪಾನ್ಮುಕ್ತಾ ಸಂಪೂರ್ಣಮಾನಸಾ ।
ಅವದತ್ಪುನರಪ್ಯೇವಂ ಭಗವಂತಂ ಜನಾರ್ದನಂ ॥ ೨೭ ॥

ಭಗವಂಸ್ತವ ದೇವಸ್ಯ ದರ್ಶನಾನ್ಮುಕ್ತಕಿಲ್ಬಿಷಾ ।
ಲಬ್ಧಕಾಮಾ ವಿಶುದ್ಧಾಂಗೀ ಚಾಭವಂ ನಾತ್ರ ಸಂಶಯಃ ॥ ೨೮ ॥

---

೨೪. ಯಾವ ಕಾರಣದಿಂದ ಈ ತೀರ್ಥದಲ್ಲಿ ಸಮಸ್ತ ದೇವತೆಗಳೂ ಸರ್ವ ಕಾಲದಲ್ಲಿಯೂ ವಾಸಮಾಡುವರೋ ಆದರಿಂದ ಪವಿತ್ರವಾದ ಆ ಸರೋವರವು ಸರ್ವ ತೀರ್ಥವೆಂಬ ಸಂಜ್ಞೆಯಿಂದ ಪ್ರಸಿದ್ಧಿಹೊಂದುವುದು.

೨೫. ಈ ಸರ್ವ ತೀರ್ಥದಲ್ಲಿ ಯಾವ ಮನುಜನು ಭಕ್ತಿಯಿಂದ ಸ್ನಾನಮಾಡಿ ಶಾಸ್ತ್ರವಿಧಿಯನ್ನು ಅನುಸರಿಸಿ ಕ್ಷೌರಕರ್ಮವನ್ನು ಮಾಡಿಸಿ ಪಿತೃಗಳಿಗೆ ಪಾರ್ವಣ ಶ್ರಾದ್ಧವನ್ನು ಆಚರಿಸುವನೋ ಅವನು ಅಶ್ವಮೇಧಯಾಗಕ್ಕೆ ಸಮಾನವಾದ ಫಲ ವನ್ನು ಹೊಂದುತ್ತಾನೆ.

೨೬. ಈ ರೀತಿಯಾಗಿ ವಿಷ್ಣುವು ಪ್ರಸನ್ನನಾಗಿ ಗಂಗೆಯನ್ನು ನೋಡುತ್ತ ಹೇಳುತ್ತಿರಲು ಬ್ರಹ್ಮನೆ ಮುಂತಾದ ಸಕಲ ದೇವತೆಗಳು ಬಹು ಸಂತೋಷಪಟ್ಟರು.

೨೭. ಗಂಗೆಯೂ ಕೂಡ ಭಗವಂತನ ಕರುಣೆಯಿಂದ ಗಿರಿಜೆಯ ಶಾಪದಿಂದ ಮುಕ್ತಳಾಗಿ ಮತ್ತು ಸಫಲವಾದ ಮನೋರಥವುಳ್ಳವಳಾಗಿ ಭಗವಂತನಾದ ಜನಾರ್ದ ನನ್ನು ಕುರಿತು ಮತ್ತೆ ಈ ವಚನವನ್ನು ಹೇಳಿದಳು.

೨೮. ಭಗವಂತನೆ! ಪರಮಾತ್ಮನಾದ ನಿನ್ನ ದರ್ಶನದಿಂದ ನಾನು ಪಾಪ ಸಂಗದಿಂದ ಮುಕ್ತಳಾದೆನು. ಮತ್ತು ಪರಿಶುದ್ಧವಾದ ಅವಯವಗಳುಳ್ಳವಳೂ, ಸಂಪೂರ್ಣವಾದ ಮನೋರಥವುಳ್ಳವಳೂ ಆಗಿರುವೆನು. ಆ ವಿಷಯದಲ್ಲಿ ಸಂಶಯವಿಲ್ಲ.

ತಥಾಪಿ ತ್ವಮಿಮಂ ದೇವ ವರಂ ಮೇ ದಾತುಮರ್ಹಸಿ ।
ನರಾಃ ಪಾತಕಿನೋ ಲೋಕೇ ಮತ್ತೋಯೇ ಕೃತಮಜ್ಜನಾಃ ॥ ೨೯ ॥
ವಿಸೃಜಂತಿ ಚ ಮಯ್ಯೇವ ಸ್ವಾನಿ ಪಾಪಾನಿ ನಿತ್ಯಶಃ ।
ವಿಸೃಜ್ಯ ಮಯಿ ಪಾಪಾನಿ ಶುದ್ಧಾಸ್ತೇ ಯಾಂತಿ ಮಾನವಾಃ ॥ ೩೦ ॥
ತಾನಿ ಮಾಮೇವ ಬಾಧಂತೇ ನರಂ ಕುಕ್ಷಿರುಜೋ ಯಥಾ ।
ತವ ಸಂದರ್ಶನಂ ಲೋಕೇ ಸರ್ವಪಾಪಾಪಹಂ ಕಿಲ ॥ ೩೧ ॥
ಸರ್ವಾಭೀಷ್ಟಪ್ರದಂ ಚಾಪಿ ಸರ್ವೋಪದ್ರವನಾಶನಂ ।
ಅತಸ್ತ್ವಾಂ ದ್ರಷ್ಟುಕಾಮಾಹಮಿಹೈವಾಸ್ಮಿ ದಿನೇ ದಿನೇ ॥ ೩೨ ॥
ತಸ್ಮಾತ್ತಿಷ್ಠತು ದೇವೇಶೋ ಭವಾನತ್ರೈವ ಸಂತತಂ ।
ಯಥಾ ನರೈರ್ವಿಸೃಷ್ಟೇಭ್ಯಃ ಪಾಪೇಭ್ಯೋಽಹಂ ದಿನೇ ದಿನೇ ॥ ೩೩ ॥

---

೨೯. ಸ್ವಾಮಿಯೇ! ಹಾಗಾದರೂ ನೀನು ನನಗೆ ಇದೊಂದು ವರವನು ಅನುಗ್ರಹಿಸಬೇಕು, ಲೋಕದಲ್ಲಿ ನನ್ನ ಜಲದಲ್ಲಿ ಪಾಪಿ ಜನರು ಬಂದು ಸ್ನಾನ ಮಾಡುವರು.

೩೦. ಪಾಪಿಗಳು ಪ್ರತಿನಿತ್ಯವೂ ಸ್ನಾನಮಾಡಿ ತಮ್ಮ ಮಹಾಪಾತಕಗಳನ್ನು ನನ್ನಲ್ಲಿ ಬಿಡುವರು. ಆ ಮಾನವರು ತಮ್ಮ ಪಾಪವನ್ನು ನನ್ನಲ್ಲಿ ಬಿಟ್ಟು ಪಾಪಮುಕ್ತರಾಗಿ ಪವಿತ್ರರಾಗುವರು.

೩೧. ಆ ಪಾಪಗಳೆಲ್ಲವೂ ಉದರದ ವ್ಯಾಧಿಯು ಹೇಗೆ ಅಸಹ್ಯವಾದ ಪೀಡೆಯನ್ನು ಉಂಟುಮಾಡುವುದೋ ಅದೇ ರೀತಿಯಲ್ಲಿ ನನ್ನನ್ನೇ ಬಾಧಿಸುತ್ತವೆ. ಲೋಕದಲ್ಲಿ ನಿನ್ನ ದರ್ಶನವು ಸಮಸ್ತ ಪಾಪಗಳನ್ನು ಪರಿಹರಿಸುವುದೆಂದು ಪ್ರಸಿದ್ಧವಾಗಿರುವುದಲ್ಲವೆ.

೩೨. ಮತ್ತು ನಿನ್ನ ಸಂದರ್ಶನವು ಸಮಸ್ತ ಇಷ್ಟಾರ್ಥಗಳನ್ನು ಕೊಡುವುದೂ ಸಕಲ ಉಪದ್ರವಗಳನ್ನು ಶಮನಮಾಡುವುದೂ ಆಗಿರುವುದರಿಂದ ನಿನ್ನ ದರ್ಶನವನ್ನು ದಿನೇ ದಿನೇ ಪಡೆಯಲೋಸ್ಕರ ಇಲ್ಲಿಯೇ ವಾಸಮಾಡುತ್ತಿರುತ್ತೇನೆ.

೩೩. ಆದುದರಿಂದ ದೇವಾಧಿಪತಿಯಾದ ನೀನು ಈ ಸ್ಥಳದಲ್ಲಿಯೇ ಸಂತತವಾಗಿ ವಾಸಮಾಡಬೇಕು. ನೀನು ಇಲ್ಲಿ ವಾಸಮಾಡುವುದರಿಂದ ಪ್ರತಿನಿತ್ಯವೂ ಪಾಪಿಗಳು ಸ್ನಾನಮಾಡಿ ನನ್ನಲ್ಲಿ ಕಳೆದುಕೊಳ್ಳುವ ಪಾಪಗಳಿಂದ ನಾನು ಪೀಡಿತಳಾಗುವುದಿಲ್ಲ.

ದೃಷ್ಟ್ವಾ ತ್ವಾಮಿಹ ಮುಕ್ತಾ ಸ್ಯಾಂ ತಥಾ ಕುರು ದಯಾಂ ಮಯಿ ।
ಇತಿ ಸಂಪ್ರಾರ್ಥಿತೋ ದೇವ್ಯಾ ಗಂಗಾಯಾ ಲೋಕಕಾಂತಯಾ ॥ ೩೪ ॥

ಉವಾಚ ಭಗವಾನ್ ವಾಕ್ಯಂ ಜಾಹ್ನವೀಂ ಸಂಪ್ರಹರ್ಷಯನ್ ।
ಶೃಣು ಜಾಹ್ನವಿ ಮದ್ವಾಕ್ಯಂ ಯದ್ಬ್ರವೀಮಿ ಹಿತಂ ತವ ॥ ೩೫ ॥

ನರಾಃ ಪಾತಕಿನೋ ಲೋಕೇ ಮತ್ವಾ ತ್ವಾಂ ಪಾಪನಾಶಿನೀಂ ।
ಸ್ನಾತ್ವಾ ತ್ವಯಿ ವಿಮುಂಚಂತಿ ಸ್ವಪಾಪಾನಿ ದಿನೇ ದಿನೇ ॥ ೩೬ ॥

ತ್ವಾಮೇವ ತಾನಿ ಸರ್ವಾಣಿ ಸಂಶ್ರಯಂತಿ ಹಿ ಕೇವಲಂ ।
ತಸ್ಮಾತ್ತತ್ಪಾಪಶಾಂತ್ಯರ್ಥಮುಪಾಯಂ ಶೃಣು ಜಾಹ್ನವಿ ॥ ೩೭ ॥

ಅನ್ವಹಂ ತ್ವಯಿ ಮುಕ್ತಾನಿ ಸ್ನಾತ್ವಾ ಯಾನಿ ತು ಪಾಪಿಭಿಃ ।
ತಾನಿ ಸರ್ವಾಣಿ ಸಂಗೃಹ್ಯ ಪಾತಕಾನ್ಯನುವತ್ಸರಂ ॥ ೩೮ ॥

---

೩೪. ನಿನ್ನನ್ನು ಪ್ರತಿನಿತ್ಯವೂ ಸಂದರ್ಶನಮಾಡಿ ಆ ಪಾಪಗಳನ್ನು ಕಳೆದು ಕೊಳ್ಳುವೆನು. ಹಾಗೆ ನನ್ನಲ್ಲಿ ದಯೆಯನ್ನಿಡಬೇಕು. ಈ ರೀತಿಯಾಗಿ ಲೋಕಕ್ಕೆ ಮಹನೀಯಳಾದ ಗಂಗಾದೇವಿಯಿಂದ ಭಗವಂತನು ಪ್ರಾರ್ಥಿಸಲ್ಪಟ್ಟನು.

೩೫. ಆಗ ಭಗವಂತನು ಗಂಗೆಯನ್ನು ಸಂತೋಷಪಡಿಸುವಂತೆ ಮುಂದೆ ಹೇಳುವಂತೆ ವಚನವನ್ನು ಆಡಿದನು. ಜಹ್ನು ಮಹರ್ಷಿಯ ಪುತ್ರಿಯೇ? ನಿನ್ನ ಹಿತ ದೃಷ್ಟಿಯಿಂದ ಆಡುವ ನನ್ನ ಮಾತನ್ನು ಕೇಳು.

೩೬. ಲೋಕದಲ್ಲಿ ಪಾಪಿಜನರು ನಿನ್ನನ್ನು ಪಾಪನಾಶಿನಿಯೆಂದು ತಿಳಿದು ಪ್ರತಿ ದಿನದಲ್ಲಿಯೂ ನಿನ್ನಲ್ಲಿ ಸ್ನಾನಮಾಡಿ ಪಾಪಗಳನ್ನು ಕಳೆದುಕೊಳ್ಳುವರು.

೩೭. ಜಾಹ್ನವಿಯೆ! ಎಲ್ಲ ಆ ಪಾಪಗಳಾದರೋ ಬೇರೆ ಆಶ್ರಯವಿಲ್ಲದೆ ನಿನ್ನನ್ನು ಮಾತ್ರವೇ ಆಶ್ರಯಿಸುತ್ತವೆಂಬುದು ನಿಜ. ಆದುದರಿಂದ ಆ ಪಾಪಗಳನ್ನು ಶಾಂತಿಮಾಡಲೋಸ್ಕರ ನಾನು ಉಪದೇಶಿಸುವ ಒಂದು ಉಪಾಯವನ್ನು ಕೇಳು.

೩೮. ಪಾಪಿಗಳು ಪ್ರತಿನಿತ್ಯವೂ ಸ್ನಾನಮಾಡಿ ನಿನ್ನಲ್ಲಿ ಅಂಟಿಸಿದ ಸಕಲ ಪಾಪ ಗಳನ್ನೂ ನೀನು ಸಂಗ್ರಹಿಸಿ ವರ್ಷವೆಲ್ಲವೂ ಯಾವ ಸ್ಥಳದಲ್ಲಿ ವಾಸಮಾಡಿದ್ದರೂ ಒಂದು ದಿನ ಮಾತ್ರ ಅವುಗಳ ಪರಿಹಾರಕ್ಕೆ ಯತ್ನವನ್ನು ಮಾಡಬಹುದು.

ಯತ್ರ ಕುತ್ರ ಸ್ಥಿತಾಪಾಪಿ ತ್ವಮಿಹಾಗಂತುಮರ್ಹಸಿ ।
ಅತ್ರ ಸತ್ಯವ್ರತಕ್ಷೇತ್ರೇ ತೀರ್ಥೇಽಸ್ಮಿನ್ ಮಂಗಳಾಭಿಧೇ ॥ ೩೯ ॥

ವೈಶಾಖೇ ಮಾಸಿ ಪೌರ್ಣಮ್ಯಾಮಿಹ ಸನ್ನಿಹಿತಾ ಭವ ।
ಸುರಾಃ ಸೇಂದ್ರಾಃ ಸಮೇಷ್ಯಂತಿ ಸರ್ವೇಽಪ್ಯತ್ರ ಮದಾಜ್ಞಯಾ ॥ ೪೦ ॥

ತಸ್ಮಿನ್ ದಿನೇ ತ್ವಯಂ ಬ್ರಹ್ಮಾ ಮಾಂ ತೇ ಸಂದರ್ಶಯಿಷ್ಯತಿ ।
ವತ್ಸರೇ ವತ್ಸರೇಽಪ್ಯೇವಮಸ್ಮಿನ್ನೇವ ಶುಭೇ ದಿನೇ ॥ ೪೧ ॥

ವೈನತೇಯಸಮಾರೂಢಮತ್ರ ಮಾಂ ದರ್ಶಯಿಷ್ಯತಿ ।
ವಿಧಾತ್ರಾ ದರ್ಶಿತಂ ಮಾಂ ತ್ವಮತ್ರ ದೃಷ್ಟ್ವಾನುವತ್ಸರಂ ॥ ೪೨ ॥

ಪಾಪಾತ್ ಸರ್ವಜನೈರ್ಮುಕ್ತಾತ್ ಸದ್ಯಃ ಪೂತಾ ಭವಿಷ್ಯಸಿ ।
ತಸ್ಮಿನ್ನಹನಿ ಯೇ ಮರ್ತ್ಯಾಸ್ತೀರ್ಥೇಽಸ್ಮಿನ್ ಕೃತಮಜ್ಜನಾಃ ॥ ೪೩ ॥

---

೩೯. ಈ ಸತ್ಯವ್ರತಕ್ಷೇತ್ರದಲ್ಲಿರುವ ಮಂಗಳತೀರ್ಥವೆಂಬ ಹೆಸರುಳ್ಳ ಈ ತೀರ್ಥದಲ್ಲಿ ನೀನು ವಾಸಮಾಡಿದ್ದ ಸ್ಥಳದಿಂದ ಪ್ರತಿವರ್ಷವೂ ಒಂದು ದಿನ ಮಾತ್ರ ಬಂದು ಸೇರುವವಳಾಗು.

೪೦. ಪ್ರತಿ ವರ್ಷದ ವೈಶಾಖ ಶುಕ್ಲ ಪೂರ್ಣಿಮಾ ದಿನದಲ್ಲಿ ನೀನು ಈ ತೀರ್ಥದಲ್ಲಿ ಸನ್ನಿಹಿತಳಾಗು. ಆಗ ಇಂದ್ರಾದಿ ಸಕಲ ದೇವತೆಗಳೂ ನನ್ನ ಆಜ್ಞಾನುಸಾರವಾಗಿ ಇಲ್ಲಿ ಬಂದು ಸೇರುವರು.

೪೧. ಈ ಬ್ರಹ್ಮದೇವನು ಆ ದಿನದಲ್ಲಿ ನನ್ನ ದರ್ಶನವನ್ನು ನಿನಗೆ ದೊರಕಿಸುವನು. ಪ್ರತಿಯೊಂದು ವರ್ಷದಲ್ಲಿಯೂ ಆ ಶುಭ ದಿನವು ನಿನಗೆ ನನ್ನ ದರ್ಶನ ಲಾಭವಾಗುವ ಪವಿತ್ರದಿನವಾಗುವುದು.

೪೨. ಬ್ರಹ್ಮದೇವನು ಈ ಸ್ಥಳವಲ್ಲಿ ಗರುಡವಾಹನಾರೂಢನಾದ ನನ್ನನ್ನು ನಿನಗೆ ದರ್ಶನಮಾಡಿಸುವನು. ಹೀಗೆ ಪ್ರತಿಯೊಂದು ಸಂವತ್ಸರವಲ್ಲಿಯೂ ಬ್ರಹ್ಮನಿಂದ ತೋರಿಸಲ್ಪಟ್ಟ ನನ್ನನ್ನು ಈ ಸ್ಥಳದಲ್ಲಿ ನೀನು ಸಾಕ್ಷಾತ್ಕರಿಸು.

೪೩. ಆಗ ಸಮಸ್ತ ಪಾಪಿ ಜನರು ನಿನ್ನಲ್ಲಿ ತಂದುಹಾಕಿದ ಪಾಪರಾಶಿಯಿಂದ ನೀನು ಆ ಕ್ಷಣದಲ್ಲಿ ಮುಕ್ತಳಾಗುತ್ತೀ. ಮತ್ತು ಈ ತೀರ್ಥದಲ್ಲಿ ಆ ಪವಿತ್ರದಿನದಲ್ಲಿ ಸ್ನಾನಮಾಡುವುದು ಮಾನವರಿಗೆ ಶ್ರೇಯಸ್ಕರವಾದುದು.

ಮಾಂ ಪ್ರಪಶ್ಯಂತ್ಯಕಲುಷಾಸ್ತೇಽಪಿ ಯಾಂತಿ ಪರಾಂ ಗತಿಂ ।
ಏವಮುಕ್ತ್ವಾ ಹರಿರ್ಗಂಗಾಂ ದತ್ವಾ ಚಾಭಯಮುತ್ತಮಂ ॥ ೪೪ ॥

ತತಃ ಪಾರ್ಶ್ವಗತಂ ವೀಕ್ಷ್ಯ ಬ್ರಹ್ಮಾಣಂ ವಾಕ್ಯಮಬ್ರವೀತ್ ।
ಬ್ರಹ್ಮನ್ನಿಯಂ ಸುರನದೀ ಮಾಮತ್ರ ಶರಣಂ ಗತಾ ॥ ೪೫ ॥

ಅತಸ್ತ್ವಾಮಿಹ ವಕ್ಷ್ಯಾಮಿ ಮದಾಜ್ಞಾಂ ಕುರು ಪದ್ಮಜ ।
ಯದಾತ್ರ ಹಯಮೇಧೇನ ಸಮ್ಯಙ್ ಮಾಮಯಜದ್ಭವಾನ್ ॥ ೪೬ ॥

ತದಾರಭ್ಯ ತ್ವಮತ್ರೈವ ಹಸ್ತಿಶೈಲಸ್ಯ ಮೂರ್ಧನಿ ।
ಮದಾಜ್ಞಯೈವ ಪ್ರತಿಮಾಃ ಕೃತ್ವಾ ಮಲ್ಲಕ್ಷಣೈರ್ಯುತಾಃ ॥ ೪೭ ॥

ತತ್ರ ಮಾಂ ಪೂಜಯನ್ ಭಕ್ತ್ಯಾ ನ್ಯವಾತ್ಸೀಃ ಕಿಲ ಪದ್ಮಜ ।
ಉತ್ಸವಾನ್ ಕುರು ಮತ್ಪ್ರೀತ್ಯೈ ಪ್ರತಿಮಾಸ್ವಾಸ್ಥಿತಸ್ಯ ಮೇ ॥ ೪೮ ॥

---

೪೪. ಮತ್ತು ಪವಿತ್ರತೀರ್ಥದಲ್ಲಿ ಸ್ನಾನಮಾಡಿದ ಮಾನವರು ನನ್ನ ಸಾಕ್ಷಾತ್ಕಾರದಿಂದ ಪಾಪನಿರ್ಮುಕ್ತರಾಗಿ ಪರಮಗತಿಯನ್ನು ಹೊಂದುವರು. ಈ ರೀತಿಯಾಗಿ ಗಂಗೆಯನ್ನು ಕುರಿತು ನಾರಾಯಣನು ವಚನವನ್ನಿತ್ತು ಉತ್ತಮವಾದ ಅಭಯದಾನವನ್ನು ಮಾಡಿದನು.

೪೫. ಅನಂತರದಲ್ಲಿ ಹರಿಯು ತನ್ನ ಪಕ್ಕದಲ್ಲಿರುವ ಬ್ರಹ್ಮನನ್ನು ಕುರಿತು ಮುಂದೆ ಹೇಳುವಂತೆ ಮಾತನಾಡಿದನು. ಬ್ರಹ್ಮನೆ, ದೇವನದಿಯಾದ ಈ ಗಂಗೆಯು ನನ್ನನ್ನು ಶರಣಹೊಂದಿರುವಳು.

೪೬. ಪದ್ಮದಲ್ಲಿ ಜನ್ಮವೆತ್ತಿದ ಬ್ರಹ್ಮನೆ! ಆದ್ದರಿಂದ ನಿನಗೆ ಈ ವಚನವನ್ನು ಹೇಳುವೆನು. ನೀನು ಈ ನನ್ನ ಆಜ್ಞಾವಚನವನ್ನು ನೆರವೇರಿಸು. ನೀನು ಹಿಂದೆ ಅಶ್ವಮೇಧಯಾಗವನ್ನು ಮಾಡಿ ನನ್ನನ್ನು ಪೂಜಿಸಿರುತ್ತಿ.

೪೭. ನೀನು ಅಶ್ವಮೇಧಯಾಗವನ್ನು ಅನುಷ್ಠಾಮಾಡಿದ ಮೊದಲುಗೊಂಡು ಈ ಕ್ಷೇತ್ರದಲ್ಲಿಯೇ ಹಸ್ತಿಶೈಲದ ಶಿಖರದಲ್ಲಿ ನನ್ನ ಆಜ್ಞೆಯಂತೆ ನನ್ನ ಶುಭ ಲಕ್ಷಣಗಳಿಂದ ಕೂಡಿದ ಪ್ರತಿಮೆಗಳನ್ನು ಪ್ರತಿಷ್ಠೆಮಾಡಿರುತ್ತಿ.

೪೮. ಬ್ರಹ್ಮನೆ! ಆ ಪ್ರತಿಮೆಗಳಲ್ಲಿ ನನ್ನನ್ನು ಭಕ್ತಿಯಿಂದ ಪೂಜಿಸುತ್ತ ವಾಸಮಾಡುತ್ತ ಇದ್ದೀಯೆ. ಈ ಪ್ರತಿಮೆಗಳಲ್ಲಿ ವಾಸಮಾಡುವ ನನಗೆ ನೀನು ಉತ್ಸವಗಳನ್ನು ನಡೆಸಿ ಪ್ರೀತಿಯನ್ನುಂಟುಮಾಡುವನಾಗು.

ಮಾಸೇ ಮಾಸೇ ಚ ಪಕ್ಷೇ ಚ ತಥೈವಾಯನಯೋರ್ದ್ವಯೋಃ ।
ಜಲೈಃ ಫಲೈಶ್ಚ ಕುಸುಮೈರ್ವಸ್ತ್ರೈ ರತ್ನೈಶ್ಚ ಮೌಕ್ತಿಕೈಃ ॥ ೪೯ ॥

ಅನ್ಯೈರ್ಭಕ್ಷೈಶ್ಚ ಭೋಜ್ಯೈಶ್ಚ ಪ್ಲವಾದೀನುತ್ಸವಾನ್ ಕುರು ।
ಸಂವತ್ಸರೋತ್ಸವಂ ಚಾಪಿ ಕುರು ಮತ್ಪ್ರೀತಿವರ್ಧನಂ ॥ ೫೦ ॥

ವೈಶಾಖೇ ಮಾಸಿ ಸಂಪ್ರಾಪ್ತೇ ಕುರು ಸಂವತ್ಸರೋತ್ಸವಂ ।
ವಿಷ್ವಕ್ಸೇನಬಲಿಂ ಕೃತ್ವಾ ಗಾರುಡಂ ಬಲಿಮೇವ ಚ ॥ ೫೧ ॥

ಅಭಿಷೇಕೈಶ್ಚ ಹೋಮೈಶ್ಚ ಬಲಿಭಿರ್ವೈಷ್ಣವೈರಪಿ ।
ದಾನೈಶ್ಚ ಬಹುಭಿಃ ಸಮ್ಯಕ್ತಥಾ ಬ್ರಾಹ್ಮಣಭೋಜನೈಃ ॥ ೫೨ ॥

ಪ್ರೀಣಯ ಪ್ರತಿಮಾಸಂಸ್ಥಂ ಮಾಮೇವಂ ವತ್ಸರೋತ್ಸವೇ ।
ಹಂಸೋಕ್ತವಿಧಿನಾ ಸಮ್ಯಕ್ ಪ್ರಯತಃ ಪ್ರೀತಮಾನಸಃ ॥ ೫೩ ॥

---

೪೯. ಪ್ರತಿಯೊಂದು ಮಾಸದಲ್ಲಿಯೂ, ಪಕ್ಷದಲ್ಲಿಯೂ, ಉತ್ತರಾಯಣ-ದಕ್ಷಿಣಾಯನವೆಂಬ ಎರಡು ಅಯನಗಳಲ್ಲಿಯೂ ನನ್ನ ಪ್ರೀತಿಗಾಗಿ ಮಾಡುವ ಉತ್ಸವಗಳಲ್ಲಿ ತೀರ್ಥ, ಫಲ, ಪುಷ್ಪ, ವಸ್ತ್ರ, ರತ್ನ, ಮತ್ತು ಮುತ್ತುಗಳೆಂಬ ಅಮೋಘ ವಸ್ತುಗಳನ್ನು ಅರ್ಪಿಸು.

೫೦. ಮತ್ತು ಇತರ ಭಕ್ಷ್ಯ-ಭೋಜ್ಯಾದಿ ಉಪಚಾರಗಳನ್ನು ಅರ್ಪಿಸು. ಡೋಲೋತ್ಸವ, ಪ್ಲವೋತ್ಸವಗಳನ್ನು ನೆರವೇರಿಸು. ಹಾಗು ನನಗೆ ವಿಶೇಷ ಪ್ರಿಯಕರವಾದ ಸಂವತ್ಸರೋತ್ಸವವನ್ನು ವಿಜೃಂಭಣೆಯಿಂದ ಮಾಡಿಸು.

೫೧. ಪ್ರತಿಯೊಂದು ಸಂವತ್ಸರ ವೈಶಾಖಮಾಸದಲ್ಲಿ ಸಂವತ್ಸರೋತ್ಸವವನ್ನು ಮಾಡಬೇಕು. ಉತ್ಸವದಲ್ಲಿ ವಿಷ್ವಕ್ಸೇನ ಬಲಿಯನ್ನೂ ಗರುಡಬಲಿಯನ್ನೂ ಅಂಗವಾಗಿ ಆಚರಿಸಬೇಕು.

೫೨. ಮತ್ತು ಆ ಸಂವತ್ಸರೋತ್ಸವದಲ್ಲಿ ಅಭಿಷೇಕ, ಹೋಮ, ವಿಷ್ಣುಪ್ರೀತಿಕರವಾದ ಬಲಿದಾನ, ಅನೇಕವಾದ ದಾನಕರ್ಮ, ಬ್ರಾಹ್ಮಣ ಭೋಜನ ಮುಂತಾದುವುಗಳ ಸಮಾರಂಭವು ವಿಶೇಷವಾಗಿ ಆಚರಿಸಲ್ಪಡಬೇಕು.

೫೩. ಈರೀತಿಯಾಗಿ ಸಂವತ್ಸರೋತ್ಸವವನ್ನು ಮಾಡಿ -ಪ್ರತಿಮೆಗಳಲ್ಲಿ ವಾಸ ಮಾಡಿದ ನನ್ನನ್ನು ಸಂತೋಷಪಡಿಸು. ಮೇಲೆ ಹೇಳಿದ ಉತ್ಸವ ವಿಧಾನವನ್ನು ಹಂಸಾಗಮದಲ್ಲಿ ಹೇಳಿರುವ ರೀತಿಯಲ್ಲಿ ಪರಿಶುದ್ಧನಾಗಿಯೂ ಸಂತುಷ್ಟವಾದ ಮಾನಸ ಉಳ್ಳವನಾಗಿಯೂ ಮಾಡಬೇಕು.

ಕೃತ್ವಾ ನವಾಹದೀಕ್ಷಾಂ ತ್ವಮೇವಂ ಕುರು ಮಮೋತ್ಸವಂ ।
ಅಂಕುರಾರೋಪಣಂ ಕೃತ್ವಾ ಭೇರಿತಾಡನಮೇವ ಚ ॥ ೫೪ ॥

ಧಾನ್ಯಮಾನಂ ನದೀಯಾತ್ರಾಂ ತಥಾ ರತ್ನೌಘವೀಕ್ಷಣಂ ।
ತಥೈವಾರಾಮಯಾತ್ರಾಂ ಚ ಗ್ರಾಮಯಾತ್ರಾಂ ಚ ಕಾರಯ ॥ ೫೫ ॥

ವಸ್ತ್ರೈರಾಭರಣೈಃ ಪುಷ್ಪೈರ್ಯಾನೈಶ್ಚ ವಿವಿಧೈರಪಿ ।
ಅಲಂಕುರುಷ್ವ ಮಾಂ ಸಮ್ಯಕ್ ಪ್ರತ್ಯಹಂ ತು ನವೈರ್ನವೈಃ ॥ ೫೬ ॥

ತದಾ ತ್ವಂ ಪೌರ್ಣಮಾಸ್ಯಾಂ ತು ವೈಶಾಖೇ ಮಾಸಿ ಪದ್ಮಜ ।
ವೈನತೇಯಸಮಾರೂಢಂ ಕೃತ್ವಾ ಮಾಂ ವಿಬುಧೈಃ ಸಹ ॥ ೫೭ ॥

ನದೀಯಾತ್ರಾಂ ಪ್ರಕುರ್ವಾಣಸ್ತೀರ್ಥೇಽಸ್ಮಿನ್ಮಂಗಲಾಭಿಧೇ ।
ಅಭ್ಯಾಗತಾಯೈ ಗಂಗಾಯೈ ವರದಂ ಮಾಂ ಪ್ರದರ್ಶಯ ॥ ೫೮

---

೫೪. ಇದಕ್ಕೆ ಆರಂಭದಲ್ಲಿ ಒಂಭತ್ತು ದಿನಗಳವರೆಗೆ ಆಚರಿಸಬೇಕಾದ ವಿಧಾನವನ್ನು ಪರಿಗ್ರಹಿಸಿ ನನ್ನ ಉತ್ಸವವನ್ನು ಅನುಷ್ಠಾನಮಾಡಬೇಕು.' ಇದಕ್ಕೆ ಅಂಗವಾಗಿ ಅಂಕುರಾರ್ಪಣ ಮತ್ತು ಭೇರಿತಾಡನವೆಂಬ ಕರ್ಮಗಳನ್ನು ನೆರವೇರಿಸಬೇಕು.

೫೫. ಮತ್ತು ಉತ್ಸವ ಸಮಾರಂಭದಲ್ಲಿ ಶಾಸ್ತ್ರವಿಧಾನದಿಂದ ಆಯಾಯ ವಿಹಿತದಿನಗಳಲ್ಲಿ ಧಾನ್ಯದ ರಾಶಿ ಸುರಿದು ಅಳೆಯುವುದು, ನದೀಯಾತ್ರೆ, ರತ್ನರಾಶಿಗಳ ದರ್ಶನ, ಆರಾಮಯಾತ್ರೆ, ಗ್ರಾಮಯಾತ್ರೆ ಮುಂತಾದುವುಗಳನ್ನು ನಡೆಯಿಸಬೇಕು.

೫೬. ಉತ್ಸವ ದಿನಗಳಲ್ಲಿ ವಸ್ತ್ರ, ಆಭರಣ, ಪುಷ್ಪ, ವಾಹನ, ಮುಂತಾದುವುಗಳನ್ನು ಬಗೆಬಗೆಯಾಗಿ ವಿನಿಯೋಗಿಸಿ ಪ್ರತಿನಿತ್ಯವೂ ಹೊಸ ರೀತಿಯಿಂದ ನನ್ನನ್ನು ಅಲಂಕರಿಸು.

೫೭. ಬ್ರಹ್ಮನೆ! ಆ ಸಮಯದಲ್ಲಿ ವೈಶಾಖಮಾಸದ ಪೂರ್ಣಿಮಾ ದಿನದಲ್ಲಿ ನನ್ನನ್ನು ಗರುಡವಾಹನಾರೂಢನನ್ನಾಗಿ ಅಲಂಕರಿಸಿ ಸಮಸ್ತ ದೇವತೆಗಳೊಂದಿಗೆ ನದೀಯಾತ್ರೆಯನ್ನು ನೆರವೇರಿಸು.

೫೮. ಆ ನದೀಯಾತ್ರೆಯ ಸಮಯದಲ್ಲಿ ಮಂಗಳತೀರ್ಥವೆಂಬ ಈ ತೀರ್ಥದಲ್ಲಿ ಸನ್ನಿಹಿತಳಾಗಿರುವ ಗಂಗಾದೇವಿಗೆ ವರದನಾದ ನನ್ನ ಮೂರ್ತಿಯನ್ನು ಸಾಕ್ಷಾತ್ಕಾರಮಾಡಿಸು.

ಅತ್ರ ದೃಷ್ಟ್ವಾ ತು ಮಾಂ ಗಂಗಾ ಪಾಪಾನ್ಮುಕ್ತಾ ಭವತ್ವಿಯಂ ।
ವತ್ಸರೇ ವತ್ಸರೇಽಪ್ಯೇವಮಸ್ಮಿನ್ನಹನಿ ಪದ್ಮಜ ॥ ೫೯ ॥

ತೀರೇ ಮಂಗಲತೀರ್ಥಸ್ಯ ಗಂಗಾಯೈ ಮಾಂ ಪ್ರದರ್ಶಯ ।
ಸಾಪಿ ಪ್ರತ್ಯಬ್ದಮಭ್ಯೇತ್ಯ ತೀರ್ಥೇ ಸನ್ನಿಹಿತಾತ್ರ ಹಿ ॥ ೬೦ ॥

ದೃಷ್ಟ್ವಾ ಮಾಂ ಮನುಜೋತ್ಸೃಷ್ಟಾತ್ಪಾಪಾತ್ಪೂತಾ ಭವತ್ವಲಂ ।
ತಸ್ಮಿನ್ನಹನಿ ಯೇ ಮರ್ತ್ಯಾಸ್ತೀರ್ಥೇಽಸ್ಮಿನ್ ಕೃತಮಜ್ಜನಾಃ ॥ ೬೧ ॥

ಮಾಂ ಪಶ್ಯಂತ್ಯತ್ರ ವರದಂ ಸದ್ಯಃ ಪೂತಾ ಭವಂತಿ ತೇ ।
ಇತಿ ಬ್ರಹ್ಮಾಣಮಾದಿಶ್ಯ ತತ್ರ ದೇವೇಶ್ವರೋ ಹರಿಃ ॥ ೬೨ ॥

ಸಮ್ಯಗಾಶ್ವಾಸ್ಯ ಗಂಗಾಂ ಚ ತತ್ರೈವಾಂತರ್ಹಿತೋಽಭವತ್ ।
ಅಂತರ್ಹಿತೇ ಭಗವತಿ ಬ್ರಹ್ಮಾ ಬ್ರಹ್ಮವಿದಾಂ ವರಃ ॥ ೬೩ ॥

---

೫೯. ಬ್ರಹ್ಮನೇ! ಈ ತೀರ್ಥದಲ್ಲಿ ಗಂಗೆಯು ನನ್ನನ್ನು ಸಂದರ್ಶಿಸಿ ತನ್ನ ಸಕಲ ಪಾಪಗಳಿಂದಲೂ ಮುಕ್ತಳಾಗಲಿ. ಹೀಗೆ ಪ್ರತಿಯೊಂದು ವರ್ಷದಲ್ಲಿಯೂ ಈ ಒಂದು ದಿನವು ಅವಳಲ್ಲಿದ್ದ ಪಾಪಸಂಗವನ್ನು ದೂರಮಾಡಲು ಸಾಧನವಾಗಲಿ.

೬೦. ಆದುದರಿಂದ ಈ ಮಂಗಲತೀರ್ಥದಲ್ಲಿ ಪ್ರತಿಯೊಂದು ವರ್ಷದ ಈ ದಿನದಲ್ಲಿ ನನ್ನ ದರ್ಶನವನ್ನು ಗಂಗೆಗೆ ದೊರೆಯುವಂತೆ ಮಾಡಬೇಕು. ಆ ಸಮಯದಲ್ಲಿ ಗಂಗೆಯು ಇಲ್ಲಿಗೆ ಬಂದು ಈ ತೀರ್ಥದಲ್ಲಿ ಸನ್ನಿಹಿತಳಾಗಿರುವಳು.

೬೧. ನನ್ನ ದರ್ಶನವನ್ನು ಪಡೆದ ಗಂಗೆಯು ಪಾಪಿ ಮಾನವರು ತನ್ನಲ್ಲಿ ಬಿಟ್ಟಿರುವ ಪಾಪಗಳಿಂದ ಬಿಡುಗಡೆಯನ್ನು ಹೊಂದಿ ಪವಿತ್ರಳಾಗಲಿ ಮತ್ತು ಆ ಪವಿತ್ರ ದಿನದಲ್ಲಿ ಮಾನವರು ಆ ಮಂಗಳ ತೀರ್ಥದಲ್ಲಿ ಬಂದು ಸ್ನಾನಮಾಡುವರು.

೬೨. ಆ ಮಾನವರು ಸ್ನಾನಮಾಡಿ ಒಡನೆ ವರದಸ್ವಾಮಿಯಾದ ನನ್ನ ದರ್ಶನವನ್ನು ಪಡೆದು ಆಗಲೇ ಪಾಪಮುಕ್ತರಾಗಿ ಪರಿಶುದ್ಧರಾಗುವರು. ಹೀಗೆಂದು ದೇವೇಶ್ವರನಾದ ಬ್ರಹ್ಮದೇವನಿಗೆ ಅಪ್ಪಣೆಮಾಡಿದನು.

೬೩. ಮತ್ತು ದುಃಖಿತಳಾದ ಗಂಗೆಗೆ ಸ್ಥಿರವಾದ ಆಶ್ವಾಸನವನ್ನು ಕೊಟ್ಟು ಅಲ್ಲಿಯೇ ಹರಿಯು ಅಂತರ್ಧಾನಹೊಂದಿದನು. ಆಗ ಬ್ರಹ್ಮಜ್ಞಾನಿಗಳಲ್ಲಿ ಅಗ್ರೇಸರನಾದ ಬ್ರಹ್ಮನು ಭಗವಂತನು ಅದೃಶ್ಯನಾಗಲು ಮುಂದೆ ತನ್ನ ಕರ್ತವ್ಯವನ್ನು ನೆರವೇರಿಸಿದನು.

ತಸ್ಯಾಜ್ಞಾಂ ಶಿರಸಾ ಗೃಹ್ಯ ತಥಾ ಸರ್ವಂ ಚಕಾರ ಚ ।
ಹಸ್ತಿಶೈಲಸ್ಯ ಶಿಖರೇ ವರದಂ ಪೂಜಯರ್ಚ ಹರಿಂ ॥ ೬೪ ॥

ಉತ್ಸವೈರ್ಬಹುಭಿಶ್ಚಾಪಿ ಪ್ರೀಣಯಾಮಾಸ ಕೇಶವಂ ।
ತತೋ ಗಂಗಾಂ ಸಮುದ್ವೀಕ್ಷ್ಯ ವಿಶಾಪಾಂ ವೀತಕಲ್ಮಷಾಂ ॥ ೬೫ ॥

ದೇವಾಃ ಸವಾಸವಾಃ ಸರ್ವೇ ಬಭೂವುರ್ಹೃಷ್ಟಮಾನಸಾಃ ।
ರುದ್ರೋಽಪಿ ಗಂಗಾಮಾಲೋಕ್ಯ ತತ್ರ ಚೈಕಾಮ್ರಮೂಲಗಃ ॥ ೬೬ ॥

ಮುಕ್ತಶಾಪಾಂ ಪಾಪಹರಾಂ ಸ್ತೋತ್ರಯಾಮಾಸ ಭಕ್ತಿತಃ ।
ಸಂಪ್ರಾರ್ಥ್ಯ ಚ ಪುನರ್ಗಂಗಾಂ ಮಂಗಳಾಂ ಮಂಗಳಾವಹಾಂ ॥ ೬೭ ॥

ಚಂದ್ರತೀರ್ಥೇ ಸನ್ನಿಹಿತಾಂ ತಸ್ಯ ಪ್ರಾರ್ಥನಯಾ ತದಾ ।
ದಧಾರ ಶಿರಸಾ ಭೂಯೋ ಭಕ್ತ್ಯಾ ಗಂಗಾಧರೋ ನೃಪ ॥ ೬೮ ॥

---

೬೪. ಹರಿಯ ಆಜ್ಞೆಯನ್ನು ಬ್ರಹ್ಮದೇವನು ಶಿರಸಾವಹಿಸಿ ಆದರಂತೆ ಎಲ್ಲವನ್ನೂ ಆಚರಿಸಿದನು. ಮತ್ತು ವರದಸ್ವಾಮಿಯಾದ ಹರಿಯನ್ನು ಹಸ್ತಿಶೈಲದ ಶಿಖರದಲ್ಲಿ ಪೂಜಿಸಿದನು.

೬೫. ಅನೇಕ ಉತ್ಸವಗಳನ್ನು ನೆರವೇರಿಸಿ ವಿಷ್ಣುಪರಮಾತ್ಮನನ್ನು ಸಂತೋಷಪಡಿಸಿದನು. ಆಗ ಶಾಪನಿರ್ಮುಕ್ತಳಾಗಿಯೂ ಸಕಲ ಕಲ್ಮಷಗಳಿಂದ ದೂರಳಾಗಿಯೂ ಇರುವ ಸಮೀಪದಲ್ಲಿದ್ದ ಗಂಗೆಯನ್ನು ನೋಡಿದನು.

೬೬. ಅಂತಹ ಗಂಗೆಯನ್ನು ನೋಡಿ ಸಮಸ್ತ ದೇವತೆಗಳೂ ಸಂತೋಷಪೂರ್ಣವಾದ ಮನಸ್ಸುಳ್ಳವರಾದರು. ಆ ಏಕಾಮ್ರವೃಕ್ಷದ ಮೂಲದಲ್ಲಿದ್ದ ಈಶ್ವರನೂ ಕೂಡ ಶಾಪಯುಕ್ತಳಾದ ಗಂಗೆಯನ್ನು ನೋಡಿದನು.

೬೭. ಶಾಪದಿಂದ ಮುಕ್ತಳೂ, ಸಕಲ ಪಾಪಗಳನ್ನು ಕಳೆಯುವವಳೂ ಆದ ಗಂಗೆಯನ್ನು ನೋಡಿ ಶಿವನು ಭಕ್ತಿಯಿಂದ ಸ್ತೋತ್ರಮಾಡಿ ಮಂಗಳಸ್ವರೂಪಳೂ ಭಕ್ತರಿಗೆ ಮಂಗಳೋದಯಕ್ಕೆ ಕಾರಣಳೂ ಆದ ಗಂಗೆಯನ್ನು ಪ್ರಾರ್ಥಿಸಿದನು.

೬೮. ರಾಜನೆ! ಆಗ ಶಿವನ ಪ್ರಾರ್ಥನೆಯಿಂದ ಚಂದ್ರತೀರ್ಥವಲ್ಲಿ ಸನ್ನಿಹಿತಳಾಗಿರುವ ಗಂಗೆಯನ್ನು ಶಿವನು ಮತ್ತೆ ಭಕ್ತಿಯಿಂದ ಶಿರಸ್ಸಿನಲ್ಲಿ ಧರಿಸಿ ಗಂಗಾಧರನಾದನು.

ಯತಃ ಸಾ ಚಂದ್ರತೀರ್ಥಸ್ಥಾ ಬಭೂವ ಕೃಪಯಾ ಶಿವೇ ।
ಅತಶ್ಚಂದ್ರಸರೋ ರಾಜನ್ ಶಿವಗಂಗೇತಿ ವಿಶ್ರುತಾ ।
ಏತತ್ತೇ ಸರ್ವಮಾಖ್ಯಾತಂ ಗಂಗಾಯಾಃ ಶಾಪಮೋಕ್ಷಣಂ ॥ ೬೯ ॥

ತದಿದಮಘಕುಲಘ್ನಂ ದೇವವರ್ಯಸ್ಯ ವಿಷ್ಣೋ -
ಶ್ಚರಿತಮಮರನದ್ಯಾ ಮೋಕ್ಷಣಂ ಯಃ ಶೃಣೋತಿ ।
ಪಠತಿ ಚ ಸಕಲಾರ್ಥಾನ್ ಪ್ರಾಪ್ಯ ಭೂಮೌ ಸಮೃದ್ಧಾನ್ ।
ವ್ರಜತಿ ಸ ಪುನರಗ್ರ್ಯಂ ವಿಷ್ಣುಸಾಯುಜ್ಯಮಂತೇ ॥ ೭೦ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಸಪ್ತವಿಂಶೋಽಧ್ಯಾಯಃ.

---

೬೯. ರಾಜನೆ! ಗಂಗೆಯು ಶಿವನ ಪ್ರಾರ್ಥನೆಯಿಂದ ಶಿವನಲ್ಲಿ ಕೃಪೆಯಿಟ್ಟು, ಆಚಂದ್ರತೀರ್ಥದಲ್ಲಿ ಸನ್ನಿಹಿತಳಾಗಿ ಬಂದಕಾರಣದಿಂದ ಆ ಚಂದ್ರತೀರ್ಥವು ಶಿವಗಂಗಾ ಎಂಬ ಪ್ರಸಿದ್ಧವಾದ ಸಂಜ್ಞೆಯನ್ನು ಹೊಂದಿತು. ಈ ರೀತಿಯಾಗಿ ಗಂಗೆಗೆ ಶಾಪಮೋಚನೆಯನ್ನು ಸಂಪೂರ್ಣವಾಗಿ ನಿನಗೆ ಹೇಳಿರುವೆನು.

೭೦. ಈ ರೀತಿಯಾಗಿ ದೇವನದಿಯ ಶಾಪದಿಂದ ಬಿಡುಗಡೆಯನ್ನುಂಟು ಮಾಡಿದ, ಪಾಪರಾಶಿಯನ್ನು ಧ್ವಂಸಮಾಡುವ, ದೇವತೋತ್ತಮನಾದ ವಿಷ್ಣು ಪರಮಾತ್ಮನ ಚರಿತ್ರೆಯನ್ನು ಯಾವ ಮಾನವನು ಶ್ರವಣ ಪಠನಗಳನ್ನು ಮಾಡುವನೋ, ಅಂತಹ ಮಾನವನು ಭೂಮಿಯಲ್ಲಿ ಸಮೃದ್ಧಿಯಾಗಿ ಸಕಲ ಮನೋರಥ ಹೊಂದಿ ಕಡೆಯಲ್ಲಿ ಉತ್ತಮವಾದ ವಿಷ್ಣು ಸಾಯುಜ್ಯವನ್ನು ಹೊಂದುವನು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಅಷ್ಟವಿಂಶೋಽಧ್ಯಾಯಃ

ಅಂಬರೀಷ ಉವಾಚ :—

ಬ್ರಹ್ಮಂಶ್ಚತುರ್ಮುಖೋ ಬ್ರಹ್ಮಾ ಹರೇರಾಜ್ಞಾಯ ಶಾಸನಂ ।
ಕಥಂ ಚಕಾರ ಪ್ರತಿಮಾಮುತ್ಸವಂ ಚಾಪಿ ಮೇ ವದ ॥ ೧ ॥

ನಾರದ ಉವಾಚ :—

ಅನುಜ್ಞಾಂ ಪ್ರಾಪ್ಯ ದೇವಸ್ಯ ತತೋ ವಿಷ್ಣುಶ್ಚತುರ್ಮುಖಃ ।
ಕಾರಯಾಮಾಸ ವೈ ವಿಷ್ಣೋರಾಲಯಂ ವಿಶ್ವಕರ್ಮಣಾ ॥ ೨ ॥

ಹಸ್ತಿಶೈಲಸ್ಯ ಪರಿತಃ ಪ್ರಾಕಾರತ್ರಯಮಂಡಿತಂ ।
ಸುವರ್ಣವಿಕೃತೈಶ್ಚಿತ್ರೈ ರತ್ನಶೃಂಗೈರಲಂಕೃತಂ ॥ ೩ ॥

---

೧. ಅಂಬರೀಷರಾಜನು ಮತ್ತೆ ಮುಂದಿನ ಮಾಹಾತ್ಮ್ಯವನ್ನು ಕೇಳಬೇಕೆಂಬ ಅಭಿಲಾಷೆಯಿಂದ ಪ್ರಶ್ನೆಮಾಡಿದನು :—ನಾರದಮುನಿಯೆ ! ಚತುರ್ಮುಖನಾದ ಬ್ರಹ್ಮನು ಹರಿಯ ಆಜ್ಞೆಯನ್ನು ಹೊಂದಿ ಪ್ರತಿಮೆಗಳನ್ನೂ ಉತ್ಸವವನ್ನೂ ಹೇಗೆ ಮಾಡಿದನೆಂಬುದನ್ನು ನನಗೆ ಹೇಳು.

೨. ನಾರದಮುನಿಯು ಪ್ರತ್ಯುತ್ತರವನ್ನು ಹೇಳಿದನು :—ಅನಂತರದಲ್ಲಿ ಚತುರ್ಮುಖಬ್ರಹ್ಮನು ವಿಷ್ಣುಪರಮಾತ್ಮನ ಆಜ್ಞೆಯನ್ನು ಹೊಂದಿ ವಿಶ್ವಕರ್ಮನ ಮೂಲಕವಾಗಿ ವಿಷ್ಣುವಿನ ಆಲಯವನ್ನು ನಿರ್ಮಾಣಮಾಡಿಸಿದನು.

೩. ವಿಶ್ವಕರ್ಮನು ರಚಿಸಿದ ಆ ವಿಷ್ಣ್ವಾಲಯವು ಹಸ್ತಿಶೈಲದ ಸುತ್ತಲೂ ಮೂರು ಪ್ರಾಕಾರಗಳಿಂದ ಅಲಂಕರಿಸಲ್ಪಟ್ಟಿರುವುದೂ, ವಿಚಿತ್ರವಾದ ಮತ್ತು ಸುವರ್ಣ ಮಯವಾದ ರತ್ನಶಿಖರಗಳಿಂದ ಶೋಭಿಸಲ್ಪಟ್ಟಿರುವುದೂ ಆಗಿತ್ತು.

ಗೋಪುರೈಶ್ಚ ವಿಮಾನೈಶ್ಚ ಮಂಟಪೈರುಪಶೋಭಿತಂ ।
ಸ್ಫಾಟಿಕಾಂತರಸೋಪಾನೈಃ ಶೋಭಿತಂ ಸ್ವರ್ಣಕುಟ್ಟಿಮೈಃ ॥ ೪ ॥

ಜಾಲವಾತಾಯನೋಪೇತೈರ್ವಿತರ್ದೀಶತಸಂಕುಲೈಃ ।
ರತ್ನಸ್ತಂಭಶತಾಕೀರ್ಣೈರ್ಮಂಟಪೈರುಪಶೋಭಿತಂ ॥ ೫ ॥

ಉದ್ಯಾನಾಮ್ರವಣೋಪೇತಂ ವಾಪೀಕೂಪಸಮನ್ವಿತಂ ।
ಹಸ್ತಿಶೈಲಸ್ಯ ಶಿಖರೇ ವಿಮಾನಮತುಲಪ್ರಭಂ ॥ ೬ ॥

ಪ್ರಾದುರ್ಭೂತಂ ಹಿ ಯತ್ಪೂರ್ವಂ ಪುಣ್ಯಕೋಟ್ಯಾಖ್ಯಮದ್ಭುತಂ ।
ತತ್ರೈವ ಸ್ಥಿತಮಭೂತ್ ಸರ್ವಪಾಪಹರಂ ನೃಣಾಂ ॥ ೭ ॥

ವಿಷ್ವಕ್ಸೇನಂ ಚ ಗರುಡಮನ್ಯಾನಷ್ಟೌ ಚ ಪಾರ್ಷದಾನ್ ।
ಚಕಾರ ಸಮ್ಯಗ್ವಿಧಿನಾ ವಿಶ್ವಕರ್ಮಾ ಸಮಾಹಿತಃ ॥ ೮ ॥

---

೪. ಮತ್ತು ಆ ಆಲಯದಲ್ಲಿ ಅನೇಕ ಗೋಪುರಗಳು, ವಿಮಾನಗಳು ಮತ್ತು ಮಂಟಪಗಳು ರಾಜಿಸುತ್ತಿದ್ದುವು. ಹಾಗು ಸ್ಫಟಿಕಮಣಿಗಳಿಂದ ರಚಿಸಲ್ಪಟ್ಟ ಸೋಪಾನಗಳಿಂದ ಕೂಡಿದ ಚಿನ್ನದ ಭೂಮಿಯಿಂದ ಆಲಯವು ಶೋಭಾಯಮಾನವಾಗಿತ್ತು.

೫. ಮತ್ತು ವಿಶಾಲವಾದ ದ್ವಾರವುಳ್ಳ ಸುಂದರ ಕಿಟಕಿಗಳೂ, ವ್ಯಾಪಿಸಿಕೊಂಡಿರುವ ನೂರಾರು ಭಾವಣಿಗಳೂ, ಮತ್ತು ಅನೇಕ ರತ್ನಸ್ತಂಭಗಳಿಂದ ಕೂಡಿದ ಮಂಟಪಗಳೂ ಆಲಯವನ್ನು ಶೋಭಿಸುತ್ತಲಿದ್ದುವು.

೬. ಅನೇಕ ಉದ್ಯಾನ-ಮಾವಿನ ತೋಪುಗಳಿಂದಲೂ, ವಾಪೀ-ಕೂಪ ಮುಂತಾದ ಜಲಾಶಯಗಳಿಂದಲೂ ಆಲಯವು ವ್ಯಾಪ್ತವಾಗಿದ್ದಿತು. ಹಸ್ತಿಶೈಲದ ಶಿಖರದಲ್ಲಿ ನಿರುಪಮವಾದ ಪ್ರಭೆಯುಳ್ಳ ಒಂದು ವಿಮಾನವು ಸ್ಥಾಪಿಸಲ್ಪಟ್ಟಿತು.

೭. ಆದರೆ ಹಿಂದೆ ಪುಣ್ಯಕೋಟಿಯೆಂಬ ಸಂಜ್ಞೆಯುಳ್ಳ ಅದ್ಭುತವಾದ ಯಾವ ವಿಮಾನವು ಪ್ರಾದುರ್ಭವಿಸಿತ್ತೋ ಆ ವಿಮಾನವು ಮಾನವರ ಸಮಸ್ತ ಪಾಪಗಳೂ ಧ್ವಂಸವಾಗಲೋಸ್ಕರ ಹಸ್ತಿಶೈಲದ ಶಿಖರದಲ್ಲಿ ಹಾಗೆಯೇ ಇರಿಸಲ್ಪಟ್ಟಿತು.

೮. ವಿಶ್ವಕರ್ಮನು ನಿರ್ಮಾಣವಿಧಾನದಲ್ಲಿ ಅತ್ಯಂತವಾದ ಚಿತ್ತಸಮಾಧಾನವನ್ನಿಟ್ಟು ವಿಷ್ವಕ್ಸೇನ, ಗರುಡ ಮತ್ತು ಇತರ ಎಂಟುಮಂದಿ ವಿಷ್ಣು ಪಾರ್ಷದರನ್ನು ವಿಧಿಪೂರ್ವಕವಾಗಿ ಚನ್ನಾಗಿ ಮಾಡಿದನು.

ತತಃ ಸ ಪ್ರಯತೋ ವಿಷ್ಣೋಶ್ಚಕಾರ ಪ್ರತಿಮಾತ್ರಯಂ ।
ಶುದ್ಧಾಂ ದಾರುಮಯೀಮೇಕಾಂ ಚಕಾರಾಸ್ಥಾನಕಾರಣಾತ್ ॥ ೯ ॥

ತಥಾ ತಾಮ್ರಮಯೀಂ ಚಾನ್ಯಾಂ ಪ್ರತಿಮಾಂ ಭೋಗರೂಪಿಣೀಂ ।
ಶುದ್ಧಾಂ ತೀರ್ಥಮಯೀಂ ಚಾನ್ಯಾಂ ಪ್ರತಿಮಾಂ ರಜತಾತ್ಮಿಕಾಂ ॥ ೧೦ ॥

ತಾಂ ವಿತಸ್ತಿಮಿತಾಂ ಸೂಕ್ಷ್ಮಾಂ ಚಕಾರ ವಿಧಿಪೂರ್ವಕಂ ।
ದೇವೀಭ್ಯಾಂ ಸಹಿತಾಂ ವಿಷ್ಣೋರ್ಭೋಗಬಿಂಬಮನುತ್ತಮಂ ॥ ೧೧ ॥

ಚಕಾರ ವಿಧಿವತ್ತತ್ರ ವಿತಸ್ತಿತ್ರಯಸಮ್ಮಿತಂ ।
ವಿಷ್ಣೋರ್ದಾರುಮಯಂ ಬಿಂಬಮಾಶ್ರಯಾಖ್ಯಮನುತ್ತಮಂ ॥ ೧೨ ॥

---

೯. ಅನಂತರದಲ್ಲಿ ಆ ವಿಶ್ವಕರ್ಮನು ಪವಿತ್ರನಾಗಿ ವಿಷ್ಣುವಿನ ಮೂರು ಪ್ರತಿಮೆಗಳನ್ನು ಮಾಡಿದನು. ಆ ಮೂರು ಪ್ರತಿಮೆಗಳಲ್ಲಿ ವಿಷ್ಣುವಿನ ಉತ್ಸವಗಳಲ್ಲಿ ಆಸ್ಥಾನಮಂಟಪಗಳಲ್ಲಿ ಇರಿಸಲು ಯೋಗ್ಯವಾದ ಒಂದು ಮರದ ಪ್ರತಿಮೆಯನ್ನು ರಚಿಸಿದನು.

೧೦. ಇನ್ನೊಂದು ತಾಮ್ರದ ಪ್ರತಿಮೆಯನ್ನು ಮಾಡಿ ವಿಷ್ಣುವಿನ ಭೋಗ ಮೂರ್ತಿಯನ್ನು ಕಲ್ಪಿಸಿದನು. ಅತ್ಯಂತ ಪವಿತ್ರವಾಗಿ ತೀರ್ಥಮಯವಾದ ಬೆಳ್ಳಿಯ ಪ್ರತಿಮೆಯನ್ನು ಮೂರನೆಯದಾಗಿ ರಚಿಸಿದನು. ಈ ರೀತಿಯಾಗಿ ವಿಲಕ್ಷಣವಾದ ಮೂರು ಪ್ರತಿಮೆಗಳು ನಿರ್ಮಿಸಲ್ಪಟ್ಟವು.

೧೧. ಇವುಗಳಲ್ಲಿ ರಜತಮೂರ್ತಿಯನ್ನು ಒಂದು ವಿತಸ್ತಿ ಪರಿಮಾಣದಿಂದ ಬಹಳ ಚಿಕ್ಕದನ್ನಾಗಿ ವಿಧಿಪೂರ್ವಕವಾಗಿ ಮಾಡಿದನು. ವಿಷ್ಣುವಿನ ಭೋಗಮೂರ್ತಿಯು ನಿರುಪಮವಾಗಿಯೂ ದೇವಿಯರಿಂದ ಸಹಿತವಾಗಿಯೂ ಇತ್ತು.

೧೨. ಆ ಮೂರ್ತಿಯನ್ನು ವಿಧಿಯನ್ನನುಸರಿಸಿ ಮೂರು ವಿತಸ್ತಿಪರಿಮಾಣ ವುಳ್ಳದ್ದನ್ನಾಗಿಮಾಡಿದನು. ವಿಷ್ಣುವಿನ ದಾರುಮಯವಾದ ಬಿಂಬವು ಆಶ್ರಯಮೂರ್ತಿ ಯೆಂದು ಪ್ರಸಿದ್ಧವೂ ಅತ್ಯುತ್ತಮವೂ ಆಗಿತ್ತು.

ಆಹುರಾಸ್ಥಾನಿಕಂ ಬಿಂಬಂ ಪಂಚಕಿಷ್ಕೂನ್ನತಂ ನೃಪ ।
ಏವಂ ವಿಧಾಯ ವಿಧಿವದ್ವಿಶ್ವಕರ್ಮಾ ವಿಧಾನವಿತ್ ॥ ೧೩ ॥

ನ್ಯವೇದಯದ್ವಿಧಾತ್ರೇ ತಾಃ ಪ್ರತಿಮಾಃ ಪರಮಾತ್ಮನಃ ।
ದೃಷ್ಟ್ವಾ ತಾಃ ಪ್ರತಿಮಾ ಬ್ರಹ್ಮಾ ರಚಿತಾ ವಿಶ್ವಕರ್ಮಣಾ ॥ ೧೪ ॥

ತಾಸು ದಧ್ಯೌ ರಮಾನಾಥಂ ಶಂಖಚಕ್ರಗದಾಧರಂ ।
ದೇವೇಶೋಽಪಿ ರಮಾನಾಥಃ ಪ್ರತಿಮಾಸ್ತಾ ವಿವೇಶ ಹ ॥ ೧೫ ॥

ಪ್ರತಿಮಾಸು ಸ್ಥಿತೋ ವಾಪಿ ಭಗವಾನ್ ಭೂತಭಾವನಃ ।
ಆಸೀತ್ ಸರ್ವೇಷು ಕಾಲೇಷು ಪ್ರಜಲ್ಪನ್ನೇವ ವೇಧಸಾ ॥ ೧೬ ॥

ತತಶ್ಚತುರ್ಮುಖೋ ದೇವಂ ಪೂಜಯಾಮಾಸ ನಿತ್ಯಶಃ ।
ಪವಿತ್ರಪಾಣಿಃ ಸಂಕಲ್ಪ್ಯ ಯತವಾಕ್ಕಾಯಮಾನಸಃ ॥ ೧೭ ॥

---

೧೩. ರಾಜನೆ! ಆ ದಾರುಮೂರ್ತಿಯು ಐದು ಕಿಷ್ಕುಪರಿಮಾಣದಷ್ಟು ಉನ್ನತವೂ ಆಸ್ಥಾನಮಂಟಪದಲ್ಲಿ ಇರಿಸುವ ಬಿಂಬವೂ ಆಗಿತ್ತು. ಈ ರೀತಿಯಾಗಿ ವಿಧಾನವನ್ನು ಬಲ್ಲ ವಿಶ್ವಕರ್ಮನು ವಿಧಿಪೂರ್ವಕವಾಗಿ ಪ್ರತಿಮೆಗಳನ್ನು ರಚಿಸಿದನು.

೧೪. ಮತ್ತು ಪರಮಾತ್ಮನ ಆ ಪ್ರತಿಮೆಗಳನ್ನು ವಿಶ್ವಕರ್ಮನು ಬ್ರಹ್ಮನಿಗೆ ಅರ್ಪಿಸಲಾಗಿ ಬ್ರಹ್ಮನು ವಿಶ್ವಕರ್ಮನಿಂದ ಯಥಾವಿಧಿಯಾಗಿ ರಚಿಸಲ್ಪಟ್ಟ ಆ ಪ್ರತಿಮೆಗಳನ್ನು ನೋಡಿದನು.

೧೫. ಆಗ ಬ್ರಹ್ಮನು ಆ ಪ್ರತಿಮೆಗಳಲ್ಲಿ ಲಕ್ಷ್ಮೀಕಾಂತನೂ ಶಂಖ-ಚಕ್ರ-ಗದೆಗಳನ್ನು ಧರಿಸಿದವನೂ ಆದ ವಿಷ್ಣುವನ್ನು ಧ್ಯಾನಿಸಲು ಬ್ರಹ್ಮನ ಮುಂದುಗಡೆಯಲ್ಲಿ ವಿಷ್ಣುರೂಪದಿಂದ ಧ್ಯಾನಿಸಲ್ಪಟ್ಟ ಆ ಪ್ರತಿಮೆಗಳಲ್ಲಿ ದೇವೋತ್ತಮನೂ ಲಕ್ಷ್ಮೀಪತಿಯೂ ಆದ ವಿಷ್ಣುವು ಪ್ರವೇಶಮಾಡಿದನು.

೧೬. ಸಕಲ ಭೂತ ಸೃಷ್ಟಿಕಾರಣನಾದ ಭಗವಂತನು ಪ್ರತಿಮೆಗಳಲ್ಲಿ ಇದ್ದವನಾದರೂ ಸದಾ ಕಾಲದಲ್ಲಿಯೂ ಬ್ರಹ್ಮನ ಸಂಗಡ ಸಲ್ಲಾಪಮಾಡುತ್ತಲೇ ಇದ್ದನು.

೧೭. ತರುವಾಯ ಚತುರ್ಮುಖನಾದ ಬ್ರಹ್ಮನು ಪವಿತ್ರವನ್ನು ಹಸ್ತದಲ್ಲಿ ಧರಿಸಿದವನೂ, ಶರೀರ-ವಾಕ್-ಮಾನಸಗಳನ್ನು ನಿಗ್ರಹಿಸಿದವನೂ ಆಗಿ ಸಂಕಲ್ಪಮಾಡಿ ಪ್ರತಿನಿತ್ಯವೂ ವಿಷ್ಣುಪರಮಾತ್ಮನನ್ನು ಪೂಜಿಸಿದನು.

ಓಮಿತ್ಯೇಕಾಕ್ಷರಂ ಪೂರ್ವಂ ವ್ಯಾಹರನ್ ಮೀಲಿತೇಕ್ಷಣಃ ।
ತತೋ ನಮ ಇತಿ ಶ್ಲಕ್ಷ್ಣಮುಚ್ಚರನ್ನಕ್ಷರದ್ವಯಂ ॥ ೧೮ ॥

ತತೋ ಭಗವತೇ ವಾಸುದೇವಾಯೇತಿ ನವಾಕ್ಷರೈಃ ।
ದದದರ್ಘ್ಯಂ ಚ ಪಾದ್ಯಂ ಚ ತಥೈವಾಚಮನೀಯಕಂ ॥ ೧೯ ॥

ಮೂಲಮಂತ್ರೇಣ ಸಂಪ್ರೋಕ್ಷ್ಯ ಸ್ಥಂಡಿಲೇ ದರ್ಭಸಂಸ್ತರೇ ।
ತತ್ರ ಸಂಸ್ಥಾಪಯಾಮಾಸ ಪಂಚಪಾತ್ರಾಣಿ ಶಾಸ್ತ್ರತಃ ॥ ೨೦ ॥

ಅರ್ಘ್ಯಪಾತ್ರಂ ತು ವಾಯವ್ಯೇ ನೈರ್ಋತ್ಯಾಂ ದಿಶಿ ಪಾದ್ಯಕಂ ।
ತಥೈವಾಚಮನಂ ಪಾತ್ರಮೈಶಾನ್ಯೇ ಸ್ಥಾಪಿತಂ ಕಿಲ ॥ ೨೧ ॥

ಸ್ನಾನಪಾತ್ರಂ ತಥಾಗ್ನೇಯೇ ಮಧುಪರ್ಕಂ ತು ಮಧ್ಯಮೇ ।
ಏವಂ ಸಂಸ್ಥಾಪ್ಯ ಪಾತ್ರಾಣಿ ತೋಯೈಃ ಸಂಪೂರ್ಣನಿರ್ಮಲೈಃ ॥ ೨೨ ॥

---

೧೮. ದೇವನನ್ನು ಪೂಜಿಸುವಾಗ ಭಕ್ತಿಯಿಂದ ವಿಷ್ಣುಮಂತ್ರವನ್ನು ಉಚ್ಚರಿಸಿದನು. ಮಂತ್ರ ಆರಂಭದಲ್ಲಿ ನೇತ್ರಗಳನ್ನು ಮುಚ್ಚಿಕೊಂಡು ಮೊದಲು ಓಂ ಎಂಬುವ ಒಂದು ಅಕ್ಷರವನ್ನು ಅನಂತರದಲ್ಲಿ ನಮಃ ಎಂಬ ಎರಡು ಅಕ್ಷರಗಳನ್ನೂ ಮೃದುವಾಗಿ ಉಚ್ಚಾರಮಾಡಿದನು.

೧೯. ತರುವಾಯ ಭಗವತೇ ವಾಸುದೇವಾಯ ಎಂಬ ಒಂಭತ್ತು ಅಕ್ಷರಗಳನ್ನು ಮಂತ್ರದ ಕಡೆಯಭಾಗವಾಗಿ ಸೇರಿಸಿ ಉಚ್ಚರಿಸಿ ಪಾದ್ಯ-ಅರ್ಘ್ಯ-ಆಚಮನೀಯ ಮುಂತಾದ ಎಲ್ಲ ಉಪಚಾರಗಳನ್ನು ಅರ್ಪಿಸಿದನು.

೨೦. ಓಂ ನಮೋ ಭಗವತೇ ವಾಸುದೇವಾಯ ಎಂಬುದು ವಿಶಿಷ್ಟಮಂತ್ರ ಸ್ವರೂಪವು, ಮೇಲೆ ಹೇಳಿದ ಮೂಲಮಂತ್ರದಿಂದದರ್ಭಗಳನ್ನು ಇಟ್ಟಿರುವಸ್ಥಂಡಿಲವನ್ನು ಪ್ರೋಕ್ಷಿಸಿ ಅದರಲ್ಲಿ ವಿಧಿಯನ್ನು ಅನುಸರಿಸಿ ಐದುಪೂಜಾಪಾತ್ರಗಳನ್ನು ಸ್ಥಾಪಿಸಿದನು.

೨೧. ಆ ಐದು ಪಾತ್ರಗಳಲ್ಲಿ ವಾಯವ್ಯದಿಕ್ಕಿನಲ್ಲಿ ಅರ್ಘ್ಯಪಾತ್ರೆಯನೂ ನೈರ್ಋತ್ಯದಿಕ್ಕಿನಲ್ಲಿ ಪಾದ್ಯವನ್ನೂ, ಮತ್ತು ಈಶಾನ್ಯದಿಕ್ಕಿನಲ್ಲಿ ಆಚಮನಪಾತ್ರವನ್ನೂ ಸ್ಥಾಪಿಸಿದನು.

೨೨. ಆಗ್ನೇಯದಿಕ್ಕಿನಲ್ಲಿ ಸ್ನಾನೋದಕ ಪಾತ್ರೆಯನ್ನು ಸ್ಥಾಪಿಸಿದನು. ಮಧುಪರ್ಕದ ಪಾತ್ರವನ್ನು ಮಧ್ಯಮವಾಗಿ ಸ್ಥಾಪಿಸಿದನು. ಈ ರೀತಿಯಾಗಿ ನಿರ್ಮಲವಾದ ಜಲದಿಂದ ಪೂರ್ಣವಾದ ಪಾತ್ರಗಳನ್ನು ಪ್ರತಿಷ್ಠೆಮಾಡಿದನು.

ಮೌಕ್ತಿಕೈಃ ಪುಷ್ಪರಾಗೈಶ್ಚ ಪ್ರವಾಳೈಃ ಕಾಂಚನೈರಪಿ ।
ಏಲಾಲವಂಗಕರ್ಪೂರಚಂದನೈರಧಿವಾಸ್ಯ ಚ ॥ ೨೩ ॥

ಜಪ್ತ್ವಾ ಚ ವಿಷ್ಣುಗಾಯತ್ರ್ಯಾ ಸಮ್ಯಗಷ್ಟಾಕ್ಷರೈರ್ಮುಹುಃ ।
ಮೂಲಮಂತ್ರಂ ಸಮುಚ್ಚಾರ್ಯಾರ್ಘ್ಯ ನಿವೇದಯತಿ ವಿಷ್ಣವೇ ॥ ೨೪ ॥

ಇದಮರ್ಘ್ಯಮಿದಂ ಪಾದ್ಯಂ ಮಧುಪರ್ಕಮಿದಂ ತ್ವಿತಿ ।
ತಥೈವ ಪೌರುಷೈಃ ಸೂಕ್ತೈಃ ಕುರ್ವಂಶ್ಚೈವಾಭಿಷೇಚನಂ ॥ ೨೫ ॥

ತತೋ ವಸ್ತ್ರೈರಲಂಕೃತ್ಯ ಚಂದನೈಶ್ಚ ಸುಗಂಧಿಭಿಃ ।
ಪುಷ್ಪೈರಾಭರಣೈಶ್ಚಿತ್ರೈರ್ಮುಕ್ತಾಮಣಿವಿಚಿತ್ರಿತೈಃ ॥ ೨೬ ॥

ಸ್ವಲಂಕೃತ್ಯ ವಿಧಾನೇನ ಧೂಪದೀಪೇ ನಿವೇದ್ಯ ಚ ।
ನಿವೇದಯತಿ ಮೃಷ್ಟಾನ್ನಂ ವಿಷ್ಣವೇ ಕಮಲಾಸನಃ ॥ ೨೭ ॥

---

೨೩. ಆ ಕಲಶಗಳಲ್ಲಿ ಶಾಸ್ತ್ರರೀತಿಯನ್ನು ಅನುಸರಿಸಿ ಮುತ್ತು, ಪುಷ್ಯರಾಗ, ಹವಳ, ಸುವರ್ಣ ಮುಂತಾದ ರತ್ನಗಳಿಂದಲೂ ಏಲಕ್ಕಿ, ಲವಂಗ, ಕರ್ಪೂರ ಚಂದನ ಗಳಿಂದಲೂ ಕಲಶೋದಕಗಳನ್ನು ಮಿಶ್ರಮಾಡಿದನು.

೨೪. ಮತ್ತು ಆ ಕಲಶತೀರ್ಥಗಳನ್ನು ವಿಷ್ಣುವಿನ ಗಾಯತ್ರೀ ಮಂತ್ರ ದಿಂದಲೂ ಅಷ್ಟಾಕ್ಷರ ಮಂತ್ರದಿಂದಲೂ ಮತ್ತು ಮೂಲಮಂತ್ರದಿಂದಲೂ ಅನೇಕ ಆವೃತ್ತಿಯಿಂದ ಅಭಿಮಂತ್ರಿಸಿ ವಿಷ್ಣುವಿಗೆ ಸಮರ್ಪಿಸಿದನು.

೨೫. ಅರ್ಘ್ಯವನ್ನು ಸಮರ್ಪಿಸುವೆನು, ಪಾದ್ಯವನ್ನು ಸಮರ್ಪಿಸುವೆನು ಎಂಬುದಾಗಿ ಆಯಾಯ ಉಪಚಾರಗಳನ್ನು ನಿರ್ದೇಶಮಾಡಿ ಅರ್ಘ್ಯ, ಪಾದ್ಯ, ಮಧು ಪರ್ಕಗಳನ್ನು ಅರ್ಪಿಸಿದನು. ಮತ್ತು ಪುರುಷಸೂಕ್ತಗಳನ್ನು ಪಠಿಸಿ ಅಭಿಷೇಕ ಮಾಡಿದನು.

೨೬. ಅನಂತರದಲ್ಲಿ ಸುವಾಸನೆಯ ಗಂಧವನ್ನು ಅರ್ಪಿಸಿ ಶುಭಕರವಾದ ವಸ್ತ್ರ ಗಳಿಂದಲೂ ವಿಚಿತ್ರವಾದ ಪುಷ್ಪಗಳಿಂದಲೂ ಮತ್ತು ನಾನಾ ಬಗೆಯ ಮುತ್ತುಗಳಿಂದ ಶೋಭಿಸುವ ಆಭರಣಗಳಿಂದಲೂ ದೇವತೆಯನ್ನು ಅಲಂಕಾರಮಾಡಿದನು.

೨೭. ಪದ್ಮಾಸನದಲ್ಲಿ ಕುಳಿತಿರುವ ಬ್ರಹ್ಮನು ವಿಷ್ಣುಮೂರ್ತಿಯನ್ನು ಅಲಂಕರಿಸಿ ಧೂಪ-ದೀಪೋಪಚಾರಗಳನ್ನು ಅರ್ಪಿಸಿ ಮಿಷ್ಟಾನ್ನವನ್ನು ನಿವೇದನ ಮಾಡಿದನು.

ದಧ್ಯೋದನಂ ಚ ಮುದ್ಗಾನ್ನಂ ಕ್ಷೀರಾನ್ನಂ ಚ ಗುಡೋದನಂ ।
ಚಿತ್ರಾನ್ನಂ ಪರಮಾನ್ನಂ ಚ ಶರ್ಕರಾನ್ನಂ ತಥೈವ ಚ ॥ ೨೮ ॥

ಭಕ್ಷ್ಯೈರ್ನಾನಾವಿಧೈರ್ದಿವ್ಯೈಃ ಸಾಪೂಪೈಃ ಸಗುಡೈರಪಿ ।
ಲೇಹ್ಯೈರುಚ್ಚಾವಚೈಃ ಶಾಕೈಶ್ಚೋಷ್ಯೈಃ ಖಾದ್ಯೈರನೇಕಶಃ ॥ ೨೯ ॥

ಸ್ವಾದೂದಕೈಶ್ಚ ತಾಂಬೂಲೈರ್ನಿವೇದ್ಯ ಸಹಿತಂ ವಿಧಿಃ ।
ತತಃ ಪ್ರದಕ್ಷಿಣಂ ಕುರ್ವನ್ ವೀಜಯನ್ ವ್ಯಜನೈರಪಿ ॥ ೩೦ ॥

ಸ್ತೋತ್ರೈರ್ನಾನಾವಿಧೈರ್ದಿವ್ಯೈಃ ಪ್ರಸ್ತುವಂಶ್ಚ ಮುಹುರ್ಮುಹುಃ ।
ರಾತ್ರೌ ಚ ರತ್ನಪರ್ಯಂಕೇ ಸಮ್ಯಗಾವೇಶ್ಯ ಕೇಶವಂ ॥ ೩೧ ॥

ಪಾದಸಂವಾಹನಂ ಕುರ್ವನ್ ವೀಜಯನ್ ವ್ಯಜನೈರಪಿ ।
ಏವಂ ಚಕಾರ ದೇವಸ್ಯ ಪೂಜಾಮನ್ವಹಮಬ್ಜಜಃ ॥ ೩೨ ॥

---

೨೮. ಮತ್ತು ದಧ್ಯನ್ನ, ಹುಗ್ಗಿ, ಕ್ಷೀರಾನ್ನ, ಗುಡಾನ್ನ, ಚಿತ್ರಾನ್ನ, ಪರಮಾನ್ನ, ಮತ್ತು ಶರ್ಕರಾನ್ನ ಮುಂತಾದ ಬಗೆಬಗೆಯ ಅನ್ನಗಳನ್ನು ನಿವೇದನ ಮಾಡಿದನು.

೨೯. ನಾನಾವಿಧವಾದ ಭಕ್ಷ್ಯಗಳನ್ನೂ ಗುಡ ಮುಂತಾದ ಉಪಕರಣದಿಂದ ಕೂಡಿದ ಒಬ್ಬಟ್ಟು ಮುಂತಾದುವುಗಳನ್ನೂ, ಬಗೆಬಗೆಯ ಲೇಹ್ಯ, ಚೋಷ್ಯ, ಖಾದ್ಯ, ಶಾಕಾಹಾರಗಳನ್ನೂ ಅರ್ಪಿಸಿದನು.

೩೦. ಮತ್ತು ಬ್ರಹ್ಮದೇವನು ಶುದ್ಧವೂ ರುಚಿಕರವೂ ಆದ ಜಲವನ್ನೂ ತಾಂಬೂಲವನ್ನೂ ನಿವೇದನಮಾಡಿ ಅನಂತರದಲ್ಲಿ ಪ್ರದಕ್ಷಿಣೆಮಾಡಿ ಬೀಸಣಿಗೆಯನ್ನು ಹಿಡಿದು ಗಾಳಿಹಾಕಿ ಸೇವೆಮಾಡಿದನು.

೩೧. ದಿವ್ಯವಾದ ನಾನಾವಿಧದ ಸ್ತೋತ್ರಗಳನ್ನು ಹೇಳಿ ಮತ್ತೆ ಮತ್ತೆ ಸ್ತುತಿಸಿ ರಾತ್ರಿಯಲ್ಲಿ ರತ್ನಮಯವಾದ ಮಂಚದಲ್ಲಿ ಸ್ವಾಮಿಯನ್ನು ಕುಳ್ಳಿರಿಸಿದನು.

೩೨. ಬ್ರಹ್ಮದೇವನು ಮಂಚದಲ್ಲಿರುವ ಸ್ವಾಮಿಗೆ ಸುಖಕರವಾಗಿ ಕಾಲನ್ನು ಒತ್ತುತ್ತಲೂ ಬೀಸಣಿಗೆಯಿಂದ ಗಾಳಿ ಹಾಕಿ ಶ್ರಮಪರಿಹಾರಮಾಡುತ್ತಲೂ ಸರ್ವೋಪಚಾರಗಳಿಂದ ಕೂಡಿದ ಪೂಜೆಯನ್ನು ಪ್ರತಿನಿತ್ಯವೂ ಆಚರಿಸಿದನು.

ಮಾಸಾಂತೇ ಚೈವ ಪಕ್ಷಾಂತೇ ವಿಶೇಷೇಣಾಕರೋದ್ಬಲಿಂ ।
ತತಃ ಪ್ಲವೋತ್ಸವಮುಖಾನುತ್ಸವಾಂಶ್ಚಾಕರೋದ್ವಿಧಿಃ ॥ ೩೩ ॥

ಫಲೈಶ್ಚ ಪಲ್ಲವೈಶ್ಚೈವ ಪುಷ್ಪೈಸ್ತತ್ತದೃತೂದ್ಭವೈಃ ।
ರತ್ನೈರಾಭರಣೈಃ ಸಮ್ಯಗಲಂಕೃತ್ಯ ಜನಾರ್ದನಂ ॥ ೩೪ ॥

ಆಂದೋಳಿಕಾಯಾಮಾರೋಪ್ಯ ದೇವೀಭ್ಯಾಂ ಸಹಿತಂ ಹರಿಂ ।
ವಾಪೀಕೂಪತಟಾಕೇಷು ರಮ್ಯೋದ್ಯಾನವನೇಷು ಚ ॥ ೩೫ ॥

ವರದಂ ರಮಯಾಮಾಸ ನೃತ್ತೈರ್ಗೀತೈರನೇಕಶಃ ।
ತತಃ ಕಮಲಜೋ ರಾಜನ್ ಹರೇರಾಜ್ಞಾಯ ಶಾಸನಂ ॥ ೩೬ ॥

ಸಂವತ್ಸರೋತ್ಸವಂ ಚಾಪಿ ವೈಶಾಖೇ ಮಾಸಿ ಚಾಕರೋತ್ ।
ಪವಿತ್ರಪಾಣಿಃ ಸಂಕಲ್ಪ್ಯ ಬದ್ಧ್ವಾ ಪ್ರತಿಸರಂ ಕರೇ ॥ ೩೭ ॥

---

೩೩. ಪ್ರತಿಯೊಂದು ಮಾಸದ ಅಂತದಲ್ಲಿಯೂ ಪಕ್ಷದ ಕಡೆಯಲ್ಲಿಯೂ ವಿಶೇಷವಾಗಿ ಬಲಿದಾನಮಾಡಿದನು. ಅನಂತರ ಬ್ರಹ್ಮನು ತೆಪ್ಪೋತ್ಸವ ಮುಂತಾದ ಉತ್ಸವಗಳನ್ನು ಮಾಡಿಸಿದನು.

೩೪. ಆಯಾಯ ಋತುಗಳಲ್ಲಿ ಹುಟ್ಟುವ ಫಲ, ಪಲ್ಲವ, ಮತ್ತು ಪುಷ್ಪಗಳನ್ನು ಒಪ್ಪಿಸುತ್ತ ರತ್ನಮಯವಾದ ಆಭರಣಗಳಿಂದ ಜನಾರ್ದನ ಸ್ವಾಮಿಯನ್ನು ಅಲಂಕಾರಮಾಡಿದನು.

೩೫. ಪಾರ್ಶ್ವಗಳಲ್ಲಿ ದೇವಿಯರಿಬ್ಬರಿಂದ ಸಹಿತನಾಗಿರುವ ಹರಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳರಿಸಿ ವಾಪಿ-ಕೂಪ-ತಟಾಕ, ರಮ್ಯವಾದ ಉದ್ಯಾನವನಗಳಲ್ಲಿ ದೇವರನ್ನು ಯಾತ್ರಾರೂಪವಾಗಿ ವಿಜಯಮಾಡಿಸಿದನು.

೩೬. ವರದಸ್ವಾಮಿಗೆ ಅನೇಕ ಬಗೆಯ ನೃತ್ತ ಗೀತ ಮುಂತಾದ ಉಪಚಾರಗಳಿಂದ ಪ್ರೀತಿಯನ್ನು ಉಂಟುಮಾಡಿದನು. ರಾಜನೆ! ಮತ್ತು ಕಮಲಾಸನನಾದ ಬ್ರಹ್ಮನು ಸಂಪೂರ್ಣವಾಗಿ ಹರಿಯ ಆಜ್ಞೆಯನ್ನು ಅನುವರ್ತಿಸಿದನು.

೩೭. ವೈಶಾಖಮಾಸದಲ್ಲಿ ಸಂವತ್ಸರೋತ್ಸವವನ್ನೂ ಆಚರಿಸಿದನು. ಅದಕ್ಕೆ ಅಂಗವಾಗಿ ಆದಿಯಲ್ಲಿ ಪವಿತ್ರವನ್ನು ಧರಿಸಿ ಸಂಕಲ್ಪಮಾಡಿ ಪಾಣಿಯಲ್ಲಿ ಕಂಕಣವನ್ನು ಕಟ್ಟಿಕೊಂಡನು.

ಚಕಾರ ವೈಷ್ಣವೀಂ ದೀಕ್ಷಾಮಾನವಾಹಮಭೋಜನಃ ।
ಆವಾಹ್ಯ ವೈಷ್ಣವಾನ್ ದೇವಾನ್ ಭೇರೀತಾಡನಪೂರ್ವಕಂ ॥ ೩೮ ॥

ಹಂಸೋಕ್ತಾಗಮಮಾರ್ಗೇಣ ಚಕಾರಾಂಕುರಮಬ್ಜಭೂಃ
ವಿಷ್ವಕ್ಸೇನಬಲಿಂ ಕೃತ್ವಾ ಗಾರುಡಂ ಬಲಿಮೇವ ಚ ॥ ೩೯ ॥

ಭಕ್ಷ್ಯೈರ್ಭೋಜ್ಯೈಶ್ಚ ಮೃಷ್ಟಾನ್ನೈರ್ಭೋಜಯಿತ್ವಾ ದ್ವಿಜೋತ್ತಮಾನ್ ।
ದತ್ವಾ ದಾನಾನಿ ವಿಪ್ರೇಭ್ಯಃ ಸಹಿತಸ್ತೈರ್ಮಹರ್ಷಿಭಿಃ ॥ ೪೦ ॥

ದೇವಂ ಪುಷ್ಪಕಮಾರೋಪ್ಯ ಸರ್ವಾಭರಣಭೂಷಿತಂ ।
ದೇವರ್ಷಿಪಿತೃಗಂಧರ್ವೈಃ ಸ ಕಿನ್ನರಮಹೋರಗೈಃ ॥ ೪೧ ॥

ನೃತ್ಯದ್ಭಿಶ್ಚೈವ ಗಾಯದ್ಭಿಃ ಸಹ ಸರ್ವಾಪ್ಸರೋಗಣೈಃ ।
ವೀಣಾಮೃದಂಗಪಣವಭೇರೀದುಂದುಭಿವಾದಕೈಃ ॥ ೪೨ ॥

---

೩೮. ಮತ್ತು ಒಂಭತ್ತು ದಿವಸಗಳವರೆಗೆ ಭೋಜನವಿಲ್ಲದೆ ಉಪವಾಸಮಾಡಿ ವಿಷ್ಣುದೀಕ್ಷೆಯನ್ನು ಕೈಗೊಂಡನು. ವಿಷ್ಣುಪಾರ್ಷದ ದೇವತೆಗಳನ್ನು ಭೇರಿಯ ಶಬ್ದ ವಿಜೃಂಭಣೆಯೊಡನೆ ಆವಾಹಿಸಿದನು.

೩೯. ಕಮಲಾಸನನಾದ ಬ್ರಹ್ಮನು ಹಂಸಾಗಮದಲ್ಲಿ ಹೇಳಿರುವ ವಿಧಾನದಿಂದ ಉತ್ಸವವನ್ನು ಪ್ರಾರಂಭಿಸಿ ಅಂಕುರಾರ್ಪಣವನ್ನೂ ವಿಷ್ವಕ್ಸೇನ ಬಲಿಯನ್ನೂ ಮತ್ತು ಗರುಡಬಲಿಯನ್ನೂ ಕೂಡ ನೆರವೇರಿಸಿದನು.

೪೦. ಮತ್ತು ಉತ್ಸವಾಂಗವಾಗಿ ಬ್ರಾಹ್ಮಣಶ್ರೇಷ್ಠರಿಗೆ ಭಕ್ಷ್ಯ-ಭೋಜ್ಯಗಳಿಂದ ಕೂಡಿದ ಮೃಷ್ಟಾನ್ನದಿಂದ ಭೋಜನ ಸಮಾರಾಧನೆಯನ್ನು ಮಾಡಿ ಅನೇಕ ಮಹರ್ಷಿಗಳೊಡನೆ ಕೂಡಿ ಅನೇಕ ದಾನಗಳನ್ನು ಅರ್ಪಿಸಿದನು.

೪೧. ಪೂಜಾನಂತರದಲ್ಲಿ ಸರ್ವಾಭರಣಗಳಿಂದ ಅಲಂಕರಿಸಿದ ದೇವರನ್ನು ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿದನು, ಮತ್ತು ದೇವ, ಋಷಿ, ಗಂಧರ್ವ, ಕಿನ್ನರ ಮತ್ತು ಸರ್ಪ ಮುಂತಾದ ಪರಿವಾರವನ್ನು ದೇವಪಾರ್ಶ್ವದಲ್ಲಿ ಸ್ಥಾಪಿಸಿದನು.

೪೨. ಆ ಪರಿವಾರದಲ್ಲಿ ನೃತ್ಯ-ಗಾನ ಕಲಾಸಕ್ತರಾದ ಅಪ್ಸರಃ ಸ್ತ್ರೀಯರ ಗುಂಪು, ವೀಣಾ-ಮೃದಂಗ-ಪಣವ-ಭೇರೀ-ದುಂದುಭಿ ಮುಂತಾದ ವಾದ್ಯಗಳನ್ನು ಧ್ವನಿಗೆಯ್ಯುವವರ ವೃಂದವು ಸೇರಿದ್ದವು.

ಬ್ರಾಹ್ಮಣೈಃ ಸಹಿತಃ ಸರ್ವೈರ್ಋಗ್ಯಜುಃಸಾಮಪಾರಗೈಃ ।
ಕಾರಯಾಮಾಸ ದೇವಸ್ಯ ಗ್ರಾಮಯಾತ್ರಾಂ ಪಿತಾಮಹಃ ॥ ೪೩ ॥

ತತ್ರ ತತ್ರ ಬಲಿಂ ಚೈವ ಕೃತ್ವೈವಂ ಪ್ರಥಮೇಽಹನಿ ।
ದ್ವಿತೀಯೇಽಹನಿ ಚಾಪ್ಯೇವಂ ಪೂಜಯಿತ್ವಾ ವಿಧಾನತಃ ॥ ೪೪ ॥

ಹಂಸಮಾರೋಪ್ಯ ವರದಂ ಚಕ್ರೇ ರತ್ನಪರೀಕ್ಷಣಂ ।
ತೃತೀಯೇ ದಿವಸೇ ಪ್ರಾಪ್ತೇ ಪೌರ್ಣಮ್ಯಾಮರುಣೋದಯೇ ॥ ೪೫ ॥

ಹರೇರನುಜ್ಞಯಾ ಬ್ರಹ್ಮಾ ಸಸ್ಮಾರ ಗರುಡಂ ತದಾ ।
ಸೋಽಭ್ಯಾಗಾತ್ ಸ್ಮೃತಮಾತ್ರಸ್ತು ವೈಕುಂಠಾತ್ ಖಗಸತ್ತಮಃ ॥ ೪೬ ॥

ಚಂದನಾನಿ ಚ ಪುಷ್ಪಾಣಿ ವಸ್ತ್ರಾಣ್ಯಾಭರಣಾನಿ ಚ ।
ವೈಕುಂಠಾತ್ ಸ್ವಯಮಾಜಹ್ರೇ ವರದಾಯಾಂಡಜೇಶ್ವರಃ ॥ ೪೭ ॥

---

೪೩. ಹೀಗೆ ಪುಷ್ಪಕ ವಿಮಾನಾರೂಢನಾದ ಸ್ವಾಮಿಗೆ ಋಕ್, ಯಜುಸ್ಸು ಮತ್ತು ಸಾಮವೇದಗಳಲ್ಲಿ ಪಾರಂಗತರಾದ ಬ್ರಾಹ್ಮಣರಿಂದ ವೇದಘೋಷ ಪೂರ್ವಕವಾಗಿ ಬ್ರಹ್ಮನು ಗ್ರಾಮ ಯಾತ್ರೋತ್ಸವವನ್ನು ಮಾಡಿಸಿದನು.

೪೪. ಮತ್ತು ಆಯಾಯ ಯಾತ್ರೋತ್ಸವಗಳಲ್ಲಿ ವಿಧ್ಯುಕ್ತನಾದ ಆಯಾಯ ಸ್ಥಳಗಳಲ್ಲಿ ಮೊದಲನೆಯ ದಿನದಲ್ಲಿ ಬಲಿದಾನವನ್ನು ಮಾಡಿ ಅದೇ ಕ್ರಮದಲ್ಲಿ ಎರಡನೆಯ ದಿನದಲ್ಲಿಯೂ ಶಾಸ್ತ್ರವಿಧಾನವನ್ನು ಅನುಸರಿಸಿ ಪೂಜೆಯನ್ನು ಮಾಡಿದನು.

೪೫. ಮತ್ತು ಹಂಸವಾಹನವನ್ನು ಏರಿರುವಂತೆ ವರದಸ್ವಾಮಿಯನ್ನು ಅಲಂಕರಿಸಿ ರತ್ನಪರೀಕ್ಷಾರೂಪವಾದ ಉತ್ಸವವನ್ನು ಮಾಡಿದನು. ಅನಂತರ ಮೂರನೆಯ ದಿನದಲ್ಲಿ ಪ್ರಾಪ್ತವಾದ ಪೂರ್ಣಿಮಾತಿಥಿಯ ಅರುಣೋದಯಕಾಲದಲ್ಲಿ ಮುಂದಿನ ಉತ್ಸವಕ್ರಮಕ್ಕೆ ಪ್ರಾರಂಭಿಸಿದನು.

೪೬. ಅನಂತರದಲ್ಲಿ ಹರಿಯ ಆಜ್ಞೆಯನ್ನು ಹೊಂದಿ ಬ್ರಹ್ಮನು ಗರುಡನನ್ನು ಸ್ಮರಿಸಿದನು. ಪಕ್ಷಿಶ್ರೇಷ್ಠನಾದ ಗರುಡನು ಸ್ಮರಿಸಲ್ಪಟ್ಟ ಕೂಡಲೆ ವೈಕುಂಠಲೋಕದಿಂದ ಬಂದು ಬ್ರಹ್ಮನಿಗೆ ಸನ್ನಿಹಿತನಾದನು.

೪೭. ಪಕ್ಷೀಂದ್ರನಾದ ಗರುಡನು ಬರುವ ಸಮಯದಲ್ಲಿ ವೈಕುಂಠಲೋಕದಲ್ಲಿರುವ ದಿವ್ಯವಾದ ಚಂದನ-ಪುಷ್ಪ-ವಸ್ತ್ರ, ಮತ್ತು ಆಭರಣಗಳನ್ನು ವರದಸ್ವಾಮಿಗೆ ಅರ್ಪಿಸಲು ತಾನಾಗಿ ತಂದನು.

ಸ್ಕಂಧಮಾರೋಪ್ಯ ವರದಂ ಶಂಖಚಕ್ರಗದಾಧರಂ ।
ಪಕ್ಷೌ ವಿತತ್ಯ ಗರುಡಶ್ಚಕಾರೋಡ್ಡೀನಮಂಬರೇ ॥ ೪೮ ॥

ತತಃ ಸುರೇಂದ್ರಾ ವಸವೋ ಮುನೀಂದ್ರಾ
ಗಂಧರ್ವವಿದ್ಯಾಧರಪನ್ನಗೇಂದ್ರಾಃ ।
ಹರಿಂ ಸುಪರ್ಣಾಂಸಗತಂ ದಿದೃಕ್ಷವ-
ಸ್ತದಾಭ್ಯಯುರ್ದೇವಗಣಾಶ್ಚ ಸರ್ವೇ ॥ ೪೯ ॥

ನೃತ್ಯಂತಿ ಗಾಯಂತಿ ಸಮೇತ್ಯ ತತ್ರ
ನೃತ್ಯಂ ಪ್ರಕುರ್ವಂತಿ ಸುರೇಂದ್ರನಾರ್ಯಃ ।
ವಂಶಾಂಶ್ಚ ವೀಣಾಃ ಪಣವಾಂಶ್ಚ ಭೇರೀಃ
ಸಂನಾದಯಂತಿ ಸ್ಮ ಸಹಸ್ರಶೋಽನ್ಯೇ ॥ ೫೦ ॥

ಸ್ತುವಂತಿ ಗಾಯಂತಿ ನದಂತಿ ಚೋಚ್ಚೈ-
ರ್ನಂದಂತಿ ನೃತ್ಯಂತಿ ನಿರೀಕ್ಷ್ಯ ದೇವಂ ।

---

೪೮. ಆಗ ಗರುಡನು ಶಂಖ-ಚಕ್ರ-ಗದೆಗಳನ್ನು ಧರಿಸಿದ ವರದಸ್ವಾಮಿಯನ್ನು ತನ್ನ ಸ್ಕಂಧದಲ್ಲಿ ಕುಳ್ಳಿರಿಸಿಕೊಂಡು ಆಕಾಶದಲ್ಲಿ ತನ್ನ ರೆಕ್ಕೆಗಳನ್ನು ವಿಸ್ತರಿಸಿಕೊಂಡು ಹಾರುತ್ತ ಮಂಡಲಾಕಾರವಾಗಿ ಸಂಚರಿಸಿದನು.

೪೯. ಆಗ ದೇವಶ್ರೇಷ್ಠ, ವಸು, ಮುನೀಂದ್ರ, ಗಂಧರ್ವ, ವಿದ್ಯಾಧರ, ನಾಗೇಂದ್ರ ಮತ್ತು ನಿಖಿಲ ದೇವಗಣ ಮುಂತಾದವರೆಲ್ಲರೂ ಗರುಡನ ಸ್ಕಂಧದಲ್ಲಿರುವ ದೇವನನ್ನು ಸಂದರ್ಶಿಸಲು ಅಲ್ಲಿಗೆ ಬಂದರು.

೫೦. ಆಗ ಉಂಟಾದ ಹರ್ಷಭರದಿಂದ ಅನೇಕರು ಅಲ್ಲಿ ಸೇರಿ ನರ್ತನಮಾಡುತ್ತಾರೆ. ಕೆಲವರು, ಗಾನಮಾಡುತ್ತಾರೆ. ದೇವತಾಸ್ತ್ರೀಯರು ನೃತ್ಯಮಾಡುತ್ತಾರೆ. ಮತ್ತು ಸಾವಿರಾರು ಮಂದಿ ಇತರರು ಕೊಳಲು, ವೀಣೆ, ಪಣವ, ಭೇರಿ ಮುಂತಾದ ವಾದ್ಯಗಳನ್ನು ಧ್ವನಿಗೆಯ್ಯುತ್ತಾರೆ.

೫೧. ಆ ಉತ್ಸವದಲ್ಲಿ ಸ್ವಾಮಿಯನ್ನು ಸಂದರ್ಶಿಸಿದವರು ಆನಂದಭರಿತರಾಗಿ ಕೆಲವರು ಸ್ತುತಿಮಾಡುವರು, ಗಾನಮಾಡುವರು, ಗಟ್ಟಿಯಾಗಿ ಹರ್ಷಧ್ವನಿಮಾಡು

ಪ್ರಸೂನವೃಷ್ಟಿಂ ಸಸೃಜುಸ್ತದಾಂಬರಾತ್
ಸುರರ್ಷಿಗಂಧರ್ವಗಣಾಃ ಸಮೇತಾಃ ॥ ೫೧ ॥

ಏವಂ ತೃತೀಯೇ ದಿವಸೇ ಪೌರ್ಣಮ್ಯಾಮಾಜ್ಞಯಾ ಹರೇಃ ॥ ೫೨ ॥

ದೇವಂ ದರ್ಶಯಿತುಂ ದೇವ್ಯೈ ಗಂಗಾಯೈ ಕಮಲಾಸನಃ
ನದೀಯಾತ್ರಾಂ ಪ್ರಕುರ್ವಾಣಃ ಸಮಾದಾಯ ಹರಿಂ ಮುದಾ ॥ ೫೩ ॥

ಮಂಗಳಾಖ್ಯಸ್ಯ ತೀರ್ಥಸ್ಯ ತೀರಮಭ್ಯಾಯಯೌ ನೃಪ ।
ತದ್ದಿನೇ ತತ್ರ ಗಂಗಾಪಿ ದೇವಂ ದ್ರಷ್ಟುಮುಪಾಗತಾ ॥ ೫೪ ॥

ತಸ್ಯೈ ಸಂದರ್ಶಯಾಮಾಸ ದೇವಂ ದೇವಾಜ್ಞಯಾ ವಿಧಿಃ ।
ಗಂಗಾ ತು ದೃಷ್ಟ್ವಾ ದೇವೇಶಂ ಬ್ರಹ್ಮಣಾ ದರ್ಶಿತಂ ಹರಿಂ ॥ ೫೫ ॥

ವರು, ಅಭಿನಂದಿಸುವರು, ನರ್ತನಮಾಡುವರು ಆಗ ದೇವ-ಋಷಿ- ಗಂಧರ್ವರು ಗುಂಪಾಗಿ ಸೇರಿ ಆಕಾಶದಿಂದ ಪುಷ್ಪ ವೃಷ್ಟಿಯನ್ನು ಸುರಿದರು.

೫೨. ಈ ರೀತಿಯಾಗಿ ಉತ್ಸವದ ಮೂರನೆಯ ದಿನವಾದ ಪೂರ್ಣಿಮೆಯಲ್ಲಿ ಬ್ರಹ್ಮನು ಹರಿಯ ಆಜ್ಞೆಯನ್ನು ಅನುಸರಿಸಿ ಉತ್ಸವ ಕ್ರಮವನ್ನು ನೆರವೇರಿಸಿದನು.

೫೩. ಮತ್ತು ಕಮಲಾಸನನಾದ ಬ್ರಹ್ಮನು ಗಂಗೆಗೆ ಸ್ವಾಮಿಯ ದರ್ಶನವನ್ನು ದೊರಕಿಸಲು ನದೀಯಾತ್ರೋತ್ಸವವನ್ನು ಮಾಡಲು ಸ್ವಾಮಿಯನ್ನು ಕರೆದೊಯ್ದನು.

೫೪. ರಾಜನೇ! ಹರಿಯನ್ನು ಕರಕೊಂಡು ಬ್ರಹ್ಮನು ಮಂಗಳತೀರ್ಥದ ತೀರಕ್ಕೆ ಬಂದನು. ಆ ದಿವಸದಲ್ಲಿ ಗಂಗೆಯು ಸ್ವಾಮಿಯ ದರ್ಶನವನ್ನು ಹೊಂದಲು ಆ ತೀರ್ಥದಲ್ಲಿ ಸನ್ನಿಹಿತಳಾಗಿದ್ದಳು.

೫೫. ಆಗ ಬ್ರಹ್ಮನು ಸ್ವಾಮಿಯ ಆಜ್ಞೆಯಂತೆ ಗಂಗೆಗೆ ಹರಿಯ ದರ್ಶನವನ್ನು ಮಾಡಿಸಿದನು. ಬ್ರಹ್ಮದೇವನಿಂದ ತೋರಿಸಲ್ಪಟ್ಟ ಹರಿಯನ್ನು ಗಂಗೆಯು ಭಕ್ತಿಯಿಂದ ಸಂದರ್ಶಿಸಿದಳು.

ತತ್ರ ಮಂಗಳತೀರ್ಥಸ್ಥಾ ಪಾಪಾನ್ಮುಕ್ತಾ ಬಭೂವ ಹ ।
ತತೋ ಮಂಗಳತೀರ್ಥೇ ತು ಸ್ನಾನಂ ಸರ್ವಾಘನಾಶನಂ ॥ ೫೬ ॥

ವೈಶಾಖಮಾಸಿ ಪೌರ್ಣಮ್ಯಾಂ ಪ್ರೋಕ್ಷೇಪಾದ್ಭುಕ್ತಿಮುಕ್ತಿದಂ ।
ಏವಂ ಚತುರ್ಮುಖೋ ರಾಜನ್ ಸರ್ವೈರ್ದೇವಗಣೈಃ ಸಹ ॥ ೫೭ ॥

ಕಾರಯಾಮಾಸ ದೇವಸ್ಯ ನದೀಯಾತ್ರಾಂ ತು ತದ್ದಿನೇ ।
ಗರುಡೋಽಪ್ಯುದ್ವಹನ್ ಭಕ್ತ್ಯಾ ತಸ್ಮಿನ್ನೇವ ದಿನೇ ಹರಿಂ ॥ ೫೮ ॥

ತತ್ರೈವ ಹಸ್ತಿಶೈಲಾಗ್ರೇ ನ್ಯವಸತ್ಪುರತೋ ಹರೇಃ ।
ತತಶ್ಚತುರ್ಥೇ ದಿವಸೇ ಕೃತ್ವಾ ಶೇಷಗತಂ ಹರಿಂ ॥ ೫೯ ॥

ಆರಾಮಯಾತ್ರಾಂ ತು ಹರೇಃ ಕಾರಯಾಮಾಸ ಪದ್ಮಭೂಃ ।
ಆಂದೋಳಿಕಾಯಾಮಾರೋಪ್ಯ ವರದಂ ಪಂಚಮೇಽಹನಿ ॥ ೬೦ ॥

---

೫೬. ಅನಂತರವಲ್ಲಿ ಮಂಗಳತೀರ್ಥದಲ್ಲಿ ಇದ್ದವಳಾಗಿ ಗಂಗೆಯು ಪಾಪದಿಂದ ಮುಕ್ತಳಾದಳು. ಆದುದರಿಂದ ಮಂಗಳತೀರ್ಥದಲ್ಲಿ ಸ್ನಾನಾನುಷ್ಠಾನವು ಸಕಲ ಪಾಪಗಳನ್ನೂ ನಿರ್ಮೂಲಮಾಡುವುದು.

೫೭. ರಾಜನೆ! ವೈಶಾಖಮಾಸದ ಪೂರ್ಣಿಮೆಯಲ್ಲಿ ಆ ಮಂಗಲತೀರ್ಥದ ನೀರನ್ನು ಪ್ರೋಕ್ಷಿಸುವುದರಿಂದ ಭೋಗಮತ್ತು ಮೋಕ್ಷವೆಂಬ ಫಲಗಳನ್ನು ಹೊಂದುವರು ಈ ರೀತಿಯಾಗಿ ಬ್ರಹ್ಮನು ಸಕಲ ದೇವವೃಂದದ ಸಂಗಡ ಉತ್ಸವವನ್ನು ಮಾಡಿದನು.

೫೮. ಬ್ರಹ್ಮನು ಆ ದಿನದಲ್ಲಿ ಸ್ವಾಮಿಗೆ ನದೀಯಾತ್ರೆಯನ್ನು ಮಾಡಿಸಿದನು. ಆ ದಿನ ಗರುಡನು ಭಕ್ತಿಯಿಂದ ಹರಿಗೆ ವಾಹನವಾಗಿ ತಾನು ಸ್ಕಂಧದಲ್ಲಿ ಧರಿಸಿದನು.

೫೯. ಮತ್ತು ಹರಿಯ ಮುಂಭಾಗದಲ್ಲಿ ಹಸ್ತಿಶೈಲದ ಶಿಖರದಲ್ಲಿ ಆ ದಿನ ಪೂರ್ತಿಯಾಗಿ ವಾಸಮಾಡಿದನು. ನಾಲ್ಕನೆಯ ದಿನದಲ್ಲಿ ಶೇಷವಾಹನಾರೂಢನನ್ನಾಗಿ ಸ್ವಾಮಿಯನ್ನು ಅಲಂಕರಿಸಿದನು.

೬೦. ಮತ್ತು ಶೇಷಾರೂಢನಾದ ಸ್ವಾಮಿಯನ್ನು ಕರೆದುಕೊಂಡುಹೋಗಿ ವರದ ಪರಮಾತ್ಮನಿಗೆ ಆರಾಮೋತ್ಸವ ಯಾತ್ರೆಯನ್ನು ಕಮಲಾಸನನಾದ ಬ್ರಹ್ಮನು ಮಾಡಿದನು. ಮತ್ತು ಉತ್ಸವದ ಐದನೆಯ ದಿನದಲ್ಲಿ ಉತ್ಸವಾಂಗವಾಗಿ ಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಅಲಂಕರಿಸಿದನು.

ತದಲಂ ತ್ವಮಿತೋ ಗಚ್ಛ ಸತ್ಯಲೋಕಂ ಸನಾತನಂ ।
ಏತೇಷು ತ್ರಿಷು ಭೂಯಸ್ತ್ವಂ ತ್ರೇತಾದಿಷು ಯುಗೇಷ್ವಪಿ ॥ ೭೧ ॥

ವೈಶಾಖೇ ಮಾಸಿ ಪೌರ್ಣಮ್ಯಾಮನುವತ್ಸರಮೇತ್ಯ ಮಾಂ ।
ಅತ್ರ ಹಸ್ತಿಗಿರೌ ಕಾಂಚ್ಯಾಂ ದ್ರಷ್ಟುಮರ್ಹಸಿ ಪದ್ಮಜ ॥ ೭೨ ॥

ತದ್ಗಚ್ಛ ತ್ವಮಿತಃ ಕ್ಷಿಪ್ರಂ ಸ್ವಲೋಕಂ ಸತ್ಯನಾಮಕಂ ।
ಅಹಮತ್ರೈವ ವತ್ಸ್ಯಾಮಿ ಹಸ್ತಿಶೈಲಸ್ಯ ಮೂರ್ಧನಿ ॥ ೭೩ ॥

ಸರ್ವಲೋಕಹಿತಾರ್ಥಾಯ ತವ ಚ ಪ್ರಿಯಕಾಮ್ಯಯಾ ।
ಇತ್ಯುಕ್ತೋ ದೇವದೇವೇನ ಬ್ರಹ್ಮಾ ಬ್ರಹ್ಮವಿದಾಂ ವರಃ ॥ ೭೪ ॥

ತತಃ ಪ್ರಣಮ್ಯ ದೇವೇಶಂ ವರದಂ ಭಕ್ತವತ್ಸಲಂ ।
ತದಾಜ್ಞಯೈವ ಪ್ರಯಯೌ ಸತ್ಯಾಖ್ಯಂ ಲೋಕಮುತ್ತಮಂ ॥ ೭೫ ॥

---

೭೧. ಆದುದರಿಂದ ಇನ್ನು ನೀನು ಪೂಜೆಯನ್ನು ಮಾಡಿರುವುದು ಸಾಕು. ನೀನು ಇಲ್ಲಿಂದ ಸನಾತನವಾದ ನಿನ್ನ ಸತ್ಯಲೋಕಕ್ಕೆ ಹೋಗು. ಮುಂದೆ ತ್ರೇತಾ ಮುಂತಾದ ಮೂರು ಯುಗಗಳಲ್ಲಿಯೂ ನನ್ನ ದರ್ಶನವನ್ನು ಹೊಂದುತ್ತೀ.

೭೨. ಪದ್ಮಜನಾದ ಬ್ರಹ್ಮನೆ! ಪ್ರತಿಯೊಂದು ವರ್ಷದಲ್ಲಿಯೂ ವೈಶಾಖ ಶುಕ್ಲ ಪೂರ್ಣಿಮಾ ತಿಥಿಯಲ್ಲಿ ಇಲ್ಲಿಗೆ ಬಂದು ಈ ಹಸ್ತಿಶೈಲದ ಕಾಂಚೀನಗರದಲ್ಲಿ ನನ್ನ ದರ್ಶನವನ್ನು ಪಡೆಯಲು ಅರ್ಹನಾಗಿರುತ್ತೀ.

೭೩. ಆದುದರಿಂದ ನೀನು ಬೇಗ ಇಲ್ಲಿಂದ ಸತ್ಯಲೋಕಕ್ಕೆ ತೆರಳು. ನಾನು ಈ ಹಸ್ತಿಶೈಲದ ಶಿಖರದಲ್ಲಿಯೇ ವಾಸಮಾಡುತ್ತೇನೆ.

೭೪. ಸಮಸ್ತ ಲೋಕಗಳಿಗೆ ಹಿತವನ್ನು ಉಂಟುಮಾಡುವ ಮತ್ತು ನಿನಗೆ ಪ್ರಿಯವನ್ನು ಸಾಧಿಸುವ ಉದ್ದೇಶದಿಂದ ನಾನು ಇಲ್ಲಿಯೇ ವಾಸಮಾಡುತ್ತೇನೆಂದು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಬ್ರಹ್ಮನು ದೇವತೆಗಳಿಗೆ ಈಶ್ವರನಾದ ಹರಿಯಿಂದ ಹೇಳಲ್ಪಟ್ಟನು.

೭೫. ಅನಂತರದಲ್ಲಿ ಬ್ರಹ್ಮನು ದೇವೇಶ್ವರನೂ ಭಕ್ತವತ್ಸಲನೂ ಆದ ವರದ ಸ್ವಾಮಿಯನ್ನು ನಮಸ್ಕರಿಸಿ ಅವನ ಆಜ್ಞೆಯಂತೆ ಸತ್ಯಲೋಕವೆಂಬ ಹೆಸರುಳ್ಳ ಸ್ವಲೋಕಕ್ಕೆ ಪ್ರಯಾಣಮಾಡಿದನು.

ಏವಂ ವಿಧಾತಾ ವಿಧಿವನ್ಮಹೋತ್ಸವಂ
ಚಕಾರ ಕಾಂಚ್ಯಾಮನುವತ್ಸರಂ ಹರೇಃ ।
ಕೃತೇ ಯುಗೇ ತತ್ರ ಸಮರ್ಚ್ಯ ಹರಿಂ
ತತಃ ಸ್ವಲೋಕಂ ಪ್ರಯಯೌ ತದಾಜ್ಞಯಾ ॥ ೭೬ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಅಷ್ಟಾವಿಂಶೋಽಧ್ಯಾಯಃ.

---

೭೬. ಈ ರೀತಿಯಾಗಿ ಬ್ರಹ್ಮನು ಕೃತಯುಗದಲ್ಲಿ ಕಾಂಚೀನಗರದಲ್ಲಿ ವಿಧಿಪೂರ್ವಕವಾಗಿ ಹರಿಪರಮಾತ್ಮನನ್ನು ಪೂಜಿಸುತ್ತ ಪ್ರತಿಯೊಂದು ವರ್ಷದಲ್ಲಿಯೂ ಉತ್ಸವವನ್ನು ಮಾಡಿದನು. ಅನಂತರದಲ್ಲಿ ಹರಿಯ ಆಜ್ಞೆಯನ್ನು ಪಡೆದು ಸತ್ಯಲೋಕಕ್ಕೆ ಹೋದನು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಕಥಂ ದದರ್ಶ ದೇವಂ ಚ ತನ್ಮಮಾಚಕ್ಷ್ವ ನಾರದ ।

ನಾರದ ಉವಾಚ :—

ಶೃಣು ರಾಜರ್ಷೇ ಪ್ರವಕ್ಷ್ಯಾಮಿ ಕಥಾಂ ಭಾಗವತೀಮಹಂ ॥ ೯ ॥

ಅಸ್ತಿ ಖಲ್ವಿಹ ರಾಜೇಂದ್ರ ಹಾಸ್ತಿನಾಖ್ಯಾ ಮಹಾಪುರೀ ।
ತಸ್ಯಾಮಾಸೀತ್ ಪುರಾ ರಾಜಾ ಶಂತನುರ್ನಾಮ ನಾಮತಃ ॥ ೧೦ ॥

ವಿಖ್ಯಾತೋ ಭಾರತೇ ವಂಶೇ ಯಜ್ವಾ ದಾನರತೋ ವಶೀ ।
ವಿಚಿತ್ರವೀರ್ಯಸ್ತಸ್ಯಾಸೀತ್ ಪುತ್ರಃ ಪರಮಧಾರ್ಮಿಕಃ ॥ ೧೧ ॥

ತಸ್ಯ ಪುತ್ರೌ ಮಹಾಪ್ರಾಜ್ಞೌ ಬಭೂವತುರರಿಂದಮೌ ।
ಧೃತರಾಷ್ಟ್ರಶ್ಚ ಪಾಂಡುಶ್ಚ ಶ್ರುತಪೂರ್ವೌ ತ್ವಯಾ ಚ ತೌ ॥ ೧೨ ॥

---

೯. ನಾರದಮುನಿಯೆ ! ಮತ್ತು ಆ ಯಜ್ಞಸಂದರ್ಭದಲ್ಲಿ ಶ್ರೀ ಕೃಷ್ಣನನ್ನು ಹೇಗೆ ಸಾಕ್ಷಾತ್ಕರಿಸಿದನೆಂಬುದನ್ನು ನನಗೆ ಹೇಳು, ಎಂದು ಪ್ರಶ್ನಿಸಲು ನಾರದಮುನಿಯು ಇಂತೆಂದನು. ಭಗವಂತನ ಕಥೆಯನ್ನು ನಾನು ಹೇಳುತ್ತೇನೆ, ರಾಜನೆ! ಅದನ್ನು ಕೇಳು.

೧೦. ರಾಜೇಂದ್ರನೆ! ಇಲ್ಲಿ ಹಸ್ತಿನಾಪುರವೆಂಬ ಹೆಸರಿನ ಒಂದು ನಗರವು ಇರುವುದು. ಆ ನಗರದಲ್ಲಿ ಪೂರ್ವದಲ್ಲಿ ಶಂತನುವೆಂಬ ಹೆಸರಿನ ಪ್ರಖ್ಯಾತ ರಾಜನು ಇದ್ದನು.

೧೧. ಆ ರಾಜನು ಭರತವಂಶದಲ್ಲಿ ಪ್ರಖ್ಯಾತನಾದವನೂ, ಯಾಗಾನುಷ್ಠಾನ ಶೀಲನೂ ದಾನದಲ್ಲಿ ತತ್ಪರನೂ, ಮತ್ತು ಜಿತೇಂದ್ರಿಯನೂ ಆಗಿದ್ದನು. ಅವನಿಗೆ ಅತ್ಯಂತ ಧಾರ್ಮಿಕನಾದ ವಿಚಿತ್ರವೀರ್ಯನೆಂಬ ಪುತ್ರನಿದ್ದನು.

೧೨. ಆ ವಿಚಿತ್ರವೀರ್ಯರಾಜನಿಗೆ ಮಹಾಪ್ರಾಜ್ಞರೂ ಶತ್ರುನಿಗ್ರಹ ತತ್ಪರರೂ ನಿನಗೆ ಪೂರ್ವದಲ್ಲಿ ಶ್ರವಣಗೋಚರರೂ ಆದ ಧೃತರಾಷ್ಟ್ರ ಮತ್ತು ಪಾಂಡು ಎಂಬ ಇಬ್ಬರು ಪುತ್ರರಿದ್ದರು.

ತಯೋಸ್ತ್ವವರಜಃ ಪಾಂಡುರ್ಧೃತರಾಷ್ಟ್ರೋಽಗ್ರಜೋಽಭವತ್ ।
ಪಾಂಡೋರ್ಹಿ ಪಂಚ ದಾಯಾದಾ ಆಸನ್ ವಿಷ್ಣುಪದಾಶ್ರಯಾಃ ॥ ೧೩ ॥

ಧೃತರಾಷ್ಟ್ರಸ್ಯ ಪುತ್ರಾಣಾಂ ಶತಮಾಸೀತ್ ಸುಪಾಪಿನಾಂ ।
ತತಸ್ತೇಷಾಂ ಕೃತೇ ಭೂಮಿರಾಸೀನ್ನಿಃಕ್ಷತ್ರಿಯಾ ತದಾ ॥ ೧೪ ॥

ಕೃಷ್ಣೇನ ಸಹಿತಾಃ ಪಾರ್ಥಾ ಹತ್ವಾ ತಾನಾತತಾಯಿನಃ ।
ಅಪಾಲಯಂತ ಪೃಥಿವೀಂ ಭಗವತ್ಪಾದಸಂಶ್ರಯಾಃ ॥ ೧೫ ॥

ತತಃ ಕಾಲೇನ ತೇ ಸರ್ವೇ ಸ್ವರ್ಗಂ ಗಂತುಂ ಕೃತತ್ವರಾಃ ।
ಹಸ್ತಿನಾಯಾಮಭ್ಯಷಿಂಚನ್ ಸ್ವಪೌತ್ರಮಭಿಮನ್ಯುಜಂ ॥ ೧೬ ॥

ಸ್ವರ್ಗತಾಃ ಪಾಂಡವಾ ರಾಜ್ಯೇ ಸ್ಥಾಪಯಿತ್ವಾ ಪರೀಕ್ಷಿತಂ ।
ತಸ್ಯ ಪುತ್ರೋ ಮಹಾಪ್ರಾಜ್ಞೋ ನಾಮ್ನಾ ಭೂಜ್ಜನಮೇಜಯಃ ॥ ೧೭ ॥

---

೧೩. ಅವರಿಬ್ಬರಲ್ಲಿ ಪಾಂಡು ಎಂಬುವನು ಚಿಕ್ಕವನೂ, ಧೃತರಾಷ್ಟ್ರನೆಂಬುವನು ಅಗ್ರಜನೂ ಆಗಿದ್ದನು. ಪಾಂಡುವಿಗೆ ವಿಷ್ಣುಚರಣವನ್ನಾಶ್ರಯಿಸಿದ ಭಕ್ತರಾದ ಐದು ಜನ ಪುತ್ರರು ಜನಿಸಿದರು.

೧೪. ಧೃತರಾಷ್ಟ್ರನಿಗೆ ಮಹಾಪಾಪಿಗಳಾದ ಒಂದು ನೂರು ಮಂದಿ ಪುತ್ರರಿದ್ದರು. ಆ ಪಾಂಡವ-ಕೌರವರ ನಿಮಿತ್ತದಿಂದ ಭೂಮಿಯೆಲ್ಲವೂ ಕ್ಷತ್ರಿಯ ರಾಜರಿಂದ ಶೂನ್ಯವಾಯಿತು.

೧೫. ಐವರು ಪಾಂಡವರು ಕೃಷ್ಣನ ಸಹಾಯದಿಂದ ಕೂಡಿ ಅಗ್ನಿ-ವಿಷಾದಿಗಳಿಂದ ತಮ್ಮನ್ನು ಕೊಲ್ಲಲು ಯತ್ನಿಸಿದ ಕೌರವ ಶತ್ರುವೀರರನ್ನು ಕೊಂದು ಭಗವಂತನ ಚರಣಗಳಲ್ಲಿ ಭಕ್ತರಾಗಿ ಭೂಮಿಯನ್ನು ರಕ್ಷಿಸಿದರು.

೧೬. ಅನಂತರದಲ್ಲಿ ಅವರೆಲ್ಲರೂ ಕೆಲವು ಕಾಲ ಹಾಗೆಯೇ ಕಳೆದು ಅನಂತರ ತಾವು ಸ್ವರ್ಗಲೋಕಕ್ಕೆ ತೆರಳಲು ತ್ವರೆಮಾಡಿದವರಾಗಿ ತಮ್ಮ ಮೊಮ್ಮಗನಾದ ಅಭಿಮನ್ಯುವಿನ ಪುತ್ರನಾದ ಪರೀಕ್ಷಿತ್ ರಾಜನನ್ನು ಹಸ್ತಿನಾವತಿಯಲ್ಲಿ ಪಟ್ಟಗಟ್ಟಿದರು.

೧೭. ಹೀಗೆ ಪಾಂಡವರು ರಾಜ್ಯದಲ್ಲಿ ಪರೀಕ್ಷಿತನನ್ನು ರಾಜನನ್ನಾಗಿಮಾಡಿ ತಾವು ಸ್ವರ್ಗವನ್ನು ಹೊಂದಿದರು. ಆ ಪರೀಕ್ಷಿತ್ ರಾಜನಿಗೆ ಮಹಾಪ್ರಜ್ಞಾವಂತನಾದ ಜನಮೇಜಯನೆಂಬ ಪುತ್ರನಿದ್ದನು.

ಸ ರಾಜ್ಯಂ ಪ್ರಾಪ್ಯ ರಾಜರ್ಷಿಃ ಸ್ವರ್ಯಾತೇ ಪಿತರಿ ಸ್ವಕೇ ।
ಹಸ್ತಿನಾಖ್ಯಾಂ ಪುರೀಂ ರಾಜನ್ ಶಶಾಸಾಮರರಾಜವತ್ ॥ ೧೮ ॥

ಸ ಕದಾಚಿತ್ ಸಭಾಮಧ್ಯೇ ರತ್ನಸಿಂಹಾಸನೇ ಶುಭೇ ।
ಆಸೀನೋ ಮಂತ್ರಿಭಿಃ ಸಾರ್ಧಂ ಬ್ರಾಹ್ಮಣೈಶ್ಚೈವ ನೈಗಮೈಃ ॥ ೧೯ ॥

ತತ್ರಾಭ್ಯಾಗತಮುದ್ವೀಕ್ಷ್ಯ ಬ್ರಹ್ಮರ್ಷಿಂ ವೇದಪಾರಗಂ ।
ವೈಶಂಪಾಯನಮಾಚಾರ್ಯಂ ವ್ಯಾಸಶಿಷ್ಯಂ ನೃಪೋತ್ತಮಃ ॥ ೨೦ ॥

ಸಂಪೂಜಯಿತ್ವಾ ವಿಧಿವತ್ ಪ್ರಷ್ಟುಂ ಸಮುಪಚಕ್ರಮೇ ।
ಬ್ರಹ್ಮನ್ ಅತ್ರ ಕುರುಕ್ಷೇತ್ರೇ ಮಮ ಪೂರ್ವಪಿತಾಮಹಾಃ ॥ ೨೧ ॥

ಕಥಂ ಯುಯುಧಿರೇ ಪಾರ್ಥಾಃ ಕೌರವೈಃ ಸಹ ಪಾಪಿಭಿಃ ।
ತದ್ಯುದ್ಧಂ ಶ್ರೋತುಕಾಮಾಯ ಮಮ ತ್ವಂ ವಕ್ತುಮರ್ಹಸಿ ॥ ೨೨ ॥

---

೧೮. ರಾಜನೆ! ಜನಮೇಜಯನೆಂಬ ಆ ರಾಜರ್ಷಿಯು ತನ್ನ ತಂದೆಯು ಸ್ವರ್ಗಕ್ಕೆ ಹೋಗಲಾಗಿ ರಾಜ್ಯಭಾರಾಧಿಕಾರವನ್ನು ಹೊಂದಿ ದೇವೇಂದ್ರನು ಅಮರಾವತೀ ನಗರವನ್ನು ಆಳುವಂತೆ ಹಸ್ತಿನಾವತಿಯನ್ನು ಆಳಿದನು.

೧೯. ಅವನು ಒಂದಾನೊಂದು ಸಮಯದಲ್ಲಿ ಮಂತ್ರಿಗಳಿಂದಲೂ ನಿಗಮಾಗಮ ವೇತ್ತರಾದ ವಿಪ್ರರಿಂದಲೂ ಕೂಡಿ ಮಂಗಳಕರವಾದ ರತ್ನಸಿಹ್ಮಾಸನದಲ್ಲಿ ಕುಳಿತು ಕೊಂಡು ಆಸ್ಥಾನ ಸಭಾಗೋಷ್ಠಿಯನ್ನು ನಡೆಸಿದನು.

೨೦. ಆಗ ಆ ರಾಜಶ್ರೇಷ್ಠನು ವ್ಯಾಸಮಹರ್ಷಿಯ ಶಿಷ್ಯನೂ, ಬ್ರಹ್ಮರ್ಷಿಯೂ, ವೇದಪಾರಂಗತನೂ, ಆದ ವೈಶಂಪಾಯನಾಚಾರ್ಯನು ಬಂದಿರುವುದನ್ನು ಕಂಡನು.

೨೧. ಆ ವೈಶಂಪಾಯನ ಮುನಿಯನ್ನು ಶಾಸ್ತ್ರವಿಧಿಯಿಂದ ಪೂಜಿಸಿ ಪೂಜಾ ನಂತರದಲ್ಲಿ ಪ್ರಶ್ನಮಾಡಲಾರಂಭಿಸಿದನು :—ವಿಪ್ರನೆ, ಇಲ್ಲಿ ನನ್ನ ಪೂರ್ವಿಕರಾದ ಪಿತಾಮಹರು ಇದ್ದರಲ್ಲವೆ.

೨೨. ಆ ಪಿತಾಮಹರಾದ ಪಾರ್ಥರು ಪಾಪಿಗಳಾದ ಕೌರವರೊಡನೆ ಹೇಗೆ ಯುದ್ಧಮಾಡಿದರು? ಆ ಯುದ್ಧದ ಚರಿತ್ರೆಯನ್ನು ಕೇಳಬೇಕೆಂದು ಆಶಿಸುವ ನನಗೆ ನೀನು ಉಪದೇಶಿಸಲು ಅರ್ಹನಾಗಿರುತ್ತಿ.

ಇತ್ಯುಕ್ತಸ್ತೇನ ವಿಪ್ರೇಂದ್ರಸ್ತಸ್ಮೈ ಪ್ರೋವಾಚ ಪೃಚ್ಛತೇ ।
ಭಾರತಾಖ್ಯಾನಮಖಿಲಂ ವ್ಯಾಸಪ್ರೋಕ್ತಂ ಸುಪಾವನಂ ॥ ೨೩ ॥

ತನ್ಮಧ್ಯೇ ವಾಸುದೇವಸ್ಯ ಚರಿತಂ ಪರಮಾದ್ಭುತಂ ।
ದೌತ್ಯಂ ಕರ್ತುಂ ಪಾಂಡವಾರ್ಥೇ ಹಸ್ತಿನಾಮಭ್ಯುಪೇಯುಷಃ ॥ ೨೪ ॥

ಕೌರವೇಂದ್ರಸಭಾಮಧ್ಯೇ ಸಮಾಸೀನಸ್ಯ ಶೌರಿಣಃ ।
ತತ್ರ ಬ್ರಹ್ಮರ್ಷಿಭಿಃ ಸಾರ್ಧಂ ಚಿತ್ರಾಃ ಕಥಯತಃ ಕಥಾಃ ॥ ೨೫ ॥

ಸಭಾಯಾಂ ತತ್ರ ಸರ್ವೇಷಾಂ ವಿಶ್ವರೂಪಪ್ರದರ್ಶನಂ ।
ಶ್ರುತ್ವಾ ತಚ್ಚರಿತಂ ವಿಷ್ಣೋಃ ಸ ರಾಜಾ ಜನಮೇಜಯಃ ॥ ೨೬ ॥

ವೈಶಂಪಾಯನಮಾಚಾರ್ಯಂ ಪುನಃ ಪಪ್ರಚ್ಛ ಹೃಷ್ಟಧೀಃ ।
ಬ್ರಹನ್ನತ್ಯದ್ಭುತಂ ವಿಷ್ಣೋಶ್ಚರಿತಂ ತ್ವನ್ಮುಖಾಚ್ಛ್ರುತಂ ॥ ೨೭ ॥

---

೨೩. ಈ ರೀತಿಯಾಗಿ ರಾಜನಿಂದ ಪ್ರಶ್ನಿಸಲ್ಪಟ್ಟ ಮುನಿಯು ವ್ಯಾಸಮುನಿಯಿಂದ ತಾನು ತಿಳಿದಿರುವ ಪರಮಪಾವನವಾದ ಸಂಪೂರ್ಣಭಾರತ ಕಥೆಯನ್ನು ಜನಮೇಜಯ ರಾಜನಿಗೆ ಹೇಳಿದನು.

೨೪. ಆ ಆಖ್ಯಾನವನ್ನು ಹೇಳುವ ಸಂದರ್ಭದಲ್ಲಿ ಪಾಂಡವರ ದೂತ ಕರ್ಮವನ್ನು ನೆರವೇರಿಸಲು ಹಸ್ತಿನಾವತೀನಗರಿಗೆ ಬಂದ ಶ್ರೀಕೃಷ್ಣನ ಪಾವನ ಚರಿತ್ರೆಯನ್ನು ಹೇಳಿದನು.

೨೫. ಮತ್ತು ದೂತಕರ್ಮಕ್ಕೆ ಬಂದ ವಾಸುದೇವನು ಕೌರವೇಂದ್ರನ ಸಭಾಮಧ್ಯದಲ್ಲಿ ಕುಳಿತು ಬ್ರಹ್ಮರ್ಷಿಗಳೊಡನೆ ವಿಚಿತ್ರ ಕಥೆಗಳನ್ನು ಹೇಳುತ್ತಿದ್ದುದನ್ನು ಪ್ರತಿಪಾದಿಸಿದನು.

೨೬. ಮತ್ತು ಸಭೆಯಲ್ಲಿ ಇದ್ದ ಪ್ರತಿಯೊಬ್ಬರಿಗೂ ಕೂಡ ಶ್ರೀಕೃಷ್ಣನು ವಿಶ್ವರೂಪವನ್ನು ಪ್ರದರ್ಶಿಸಿರುವುದು ಮೊದಲಾದ ವಿಷ್ಣುವಿನ ಚರಿತ್ರೆಯನ್ನು ವೈಶಂಪಾಯನ ಮುನಿಯಿಂದ ಜನಮೇಜಯರಾಜನು ಶ್ರವಣಮಾಡಿದನು.

೨೭. ಮತ್ತು ಬಹಳ ಸಂತೋಷಪಟ್ಟ ಮಾನಸವುಳ್ಳವನಾಗಿ ವೈಶಂಪಾಯನ ಆಚಾರ್ಯನನ್ನು ಕುರಿತು ಮತ್ತೆ ಈ ರೀತಿಯಾಗಿ ಪ್ರಶ್ನೆಮಾಡಿದನು. ಬ್ರಹ್ಮರ್ಷಿಯೆ! ವಿಷ್ಣುವಿನ ಅತ್ಯದ್ಭುತ ಚರಿತ್ರೆಯನ್ನು ನಿನ್ನ ಮುಖದಿಂದ ಕೇಳಿದೆನು.

ಕುರ್ವತಃ ಪಾಂಡವಾರ್ಥಾಯ ದೌತ್ಯಂ ತೈಃ ಸಂಧಿಮಿಚ್ಛತಃ ।
ಯೋಽಯಮಸ್ಮಿನ್ ಸಭಾಮಧ್ಯೇ ವಿಶ್ವರೂಪಮದರ್ಶಯತ್ ॥ ೨೮ ॥

ತಮಹಂ ದೇವಕೀಸೂನುಂ ಪಾಂಡವಾನಾಂ ಹಿತಂಕರಂ ।
ಕೇನೋಪಾಯೇನ ಪಶ್ಯೇಯಂ ತನ್ಮಮಾಚಕ್ಷ್ವ ಸುವ್ರತ ॥ ೨೯ ॥

ಇತ್ಯುಕ್ತಃ ಸ ತು ವಿಪ್ರೇಂದ್ರಃ ಪ್ರೋವಾಚ ಜನಮೇಜಯಂ ।
ಧನ್ಯಸ್ತ್ವಮಸಿ ರಾಜೇಂದ್ರ ಯಸ್ಯ ತೇ ಮತಿರೀದೃಶೀ ॥ ೩೦ ॥

ಪಾವನೇ ಸರ್ವಪಾಪಘ್ನೇ ಸಂಜಾತಾ ಕೃಷ್ಣದರ್ಶನೇ ।
ಯೇನೋಪಾಯೇನ ದೇವೇಶಂ ಕೃಷ್ಣಂ ದ್ರಕ್ಷ್ಯಸಿ ಸುವ್ರತ ॥ ೩೧ ॥

---

೨೮. ಯಾವ ಕೃಷ್ಣಪರಮಾತ್ಮನು ಕೌರವ-ಪಾಂಡವರ ಸಂಧಿಯನ್ನು ಇಚ್ಛಿಸಿ ಪಾಂಡವರಿಗಾಗಿ ದೌತ್ಯವನ್ನು ಆಚರಿಸುತ್ತ ಸಭಾಮಧ್ಯದಲ್ಲಿ ಪರಮಾತ್ಮನು ವಿಶ್ವರೂಪವನ್ನು ತೋರಿಸಿದನೋ ಅಂತಹ ಪರಮಾತ್ಮನ ದಿವ್ಯಚರಿತ್ರೆಯನ್ನು ಶ್ರವಣ ಮಾಡಿದೆನು.

೨೯. ವ್ರತಾನುಷ್ಠಾನತತ್ಪರನೆ! ಪಾಂಡವರಿಗೆ ಹಿತವನ್ನು ಬಯಸುವ ದೇವಕೀಪುತ್ರನಾದ ಆ ಶ್ರೀಕೃಷ್ಣಪರಮಾತ್ಮನನ್ನು ನಾನು ಯಾವ ಉಪಾಯದಿಂದ ಸಾಕ್ಷಾತ್ಕರಿಸುವೆನೋ ಅದನ್ನು ನನಗೆ ಹೇಳು.

೩೦. ಈ ರೀತಿಯಾಗಿ ಪ್ರಶ್ನಿಸಲ್ಪಟ್ಟ ಆ ಬ್ರಹ್ಮರ್ಷಿಯು ಜನಮೇಜಯರಾಜನನ್ನು ಕುರಿತು ಈ ರೀತಿಯಾಗಿ ಹೇಳಿದನು. ರಾಜೇಂದ್ರನೆ, ವಿಷ್ಣುಪರಮಾತ್ಮನ ಚರಿತ್ರೆಯನ್ನು ಶ್ರವಣಮಾಡಲು ನಿನಗೆ ಕುತೂಹಲವುಂಟಾಗಿರುವುದರಿಂದ ನೀನು ಕೃತಕೃತ್ಯನಾಗಿರುತ್ತಿ.

೩೧. ಸಮಸ್ತ ಪಾಪಗಳನ್ನು ಕಳೆಯುವ ಪವಿತ್ರವಾದ ಕೃಷ್ಣನ ದರ್ಶನದಲ್ಲಿ ನಿನಗೆ ಅಭಿರುಚಿಯು ಹುಟ್ಟಿರುವುದು ಸ್ತುತ್ಯವಾಗಿದೆ. ವ್ರತಾಚರಣಾಸಕ್ತನೆ, ನೀನು ಕೃಷ್ಣಪರಮಾತ್ಮನನ್ನು ಪ್ರತ್ಯಕ್ಷ ನೋಡಬಹುದಾದ ಉಪಾಯವನ್ನು ಹೇಳುವೆನು.

ತಮುಪಾಯಮಹಂ ವಕ್ಷ್ಯೇ ಶೃಣುಷ್ವೈಕಮನಾ ನೃಪ ।
ಅಸ್ತಿ ಖಲ್ವತ್ರ ಪಾಪಘ್ನಃ ಪ್ರಯಾಗಸ್ತೀರ್ಥಸತ್ತಮಃ ॥ ೩೨ ॥

ತಸ್ಯ ಚಾಗ್ನೇಯದಿಗ್ಭಾಗೇ ದೇಶೇ ಕ್ರೋಶಸಹಸ್ರಕೇ ।
ಅಸ್ತಿ ಸತ್ಯವ್ರತಂ ನಾಮ ಕ್ಷೇತ್ರಂ ಪಾಪಪ್ರಣಾಶನಂ ॥ ೩೩ ॥

ತತ್ರ ಕಾಂಚೀತಿ ವಿಖ್ಯಾತಾ ಪುರೀ ಪುಣ್ಯವಿವರ್ಧಿನೀ ।
ಸ್ಮರಣಾನ್ಮುಕ್ತಿದಾ ನೃಣಾಮಸ್ತಿ ವಿಷ್ಣೋರತಿಪ್ರಿಯಾ ॥ ೩೪ ॥

ತತ್ರ ಗತ್ವಾಶ್ವಮೇಧೇನ ಯಷ್ಟಾಸಿ ಯದಿ ಕೇಶವಂ ।
ದ್ರಕ್ಷ್ಯಸಿ ತ್ವಂ ನ ಸಂದೇಹಃ ಕೃಷ್ಣಂ ಪಾಂಡವಸಾರಥಿಂ ॥ ೩೫ ॥

ಇತ್ಯುಕ್ತಸ್ತೇನ ವಿಪ್ರೇಣ ಕೌರವ್ಯೋ ಜನಮೇಜಯಃ ।
ಸಹೈವ ತೇನ ವಿಪ್ರೇಣ ತಥೈವಾನ್ಯೈರ್ದ್ವಿಜೋತ್ತಮೈಃ ॥ ೩೬ ॥

---

೩೨. ರಾಜನೆ! ಆ ಕೃಷ್ಣದರ್ಶನೋಪಾಯವನ್ನು ಏಕಾಗ್ರಚಿತ್ತದಿಂದ ಕೇಳುವವನಾಗು. ಸಕಲ ಪಾಪಗಳನ್ನು ನಿರ್ಮೂಲಮಾಡುವ ಪ್ರಯಾಗವೆಂಬುದೊಂದು ಶ್ರೇಷ್ಠವಾದ ತೀರ್ಥವಿರುವುದು.

೩೩. ಅದರ ಆಗ್ನೇಯದಿಕ್ಕಿನ ಭಾಗದಲ್ಲಿ ಸಹಸ್ರ ಹರದಾರಿ ದೂರ ದೇಶದಲ್ಲಿ ಪಾಪಗಳನ್ನಡಗಿಸುವ ಸತ್ಯವ್ರತವೆಂಬ ಕ್ಷೇತ್ರವಿರುವುದು.

೩೪. ಅಲ್ಲಿ ಕಾಂಚೀ ಎಂಬ ಹೆಸರಿನಿಂದ ಪ್ರಸಿದ್ಧಿಹೊಂದಿದ ಪುಣ್ಯಸಂಪಾದಕವಾದ ನಗರಿಯು ಇರುವುದು. ಅದು ವಿಷ್ಣುವಿಗೆ ಅತಿ ಪ್ರಿಯವಾದುದರಿಂದ ಸ್ಮರಣಮಾತ್ರದಿಂದ ಮೋಕ್ಷವನ್ನು ಕೊಡುವ ಮಹಿಮೆಯುಳ್ಳದ್ದಾಗಿರುವುದು.

೩೫. ನೀನು ಅಲ್ಲಿಗೆ ಹೋಗಿ ಕೇಶವನನ್ನು ಉದ್ದೇಶಿಸಿ ಅಶ್ವಮೇಧಯಾಗವನ್ನು ಮಾಡಿದ ಪಕ್ಷದಲ್ಲಿ ಪಾಂಡವರಿಗೆ ಸಾರಥಿಯಾದ ಶ್ರೀ ಕೃಷ್ಣನನ್ನು ಸಾಕ್ಷಾತ್ಕಾರ ಮಾಡುತ್ತೀ. ಅದರಲ್ಲಿ ಸಂದೇಹವಿಲ್ಲ.

೩೬. ಆ ವೈಶಂಪಾಯನ ಮುನಿಯಿಂದ ಈ ರೀತಿಯಾಗಿ ಹೇಳಲ್ಪಟ್ಟಿರುವ ಕುರುವಂಶದಲ್ಲಿ ಹುಟ್ಟಿದ ಜನಮೇಜಯರಾಜನು ಆ ಮುನಿಯಿಂದಲೂ ಇತರ ಬ್ರಾಹ್ಮಣಶ್ರೇಷ್ಠರಿಂದಲೂ ಕೂಡಿ ಕೃಷ್ಣ ಸಂದರ್ಶನಕ್ಕೆ ಯತ್ನಿಸಿದನು.

ಸಂಪ್ರಹೃಷ್ಟಮನಾ ಭೂತ್ವಾ ಕೃಷ್ಣದರ್ಶನಕಾಂಕ್ಷಯಾ ।
ಮಂತ್ರಿಷ್ವಾಧಾಯ ತದ್ರಾಜ್ಯಂ ಯಯೌ ಸತ್ಯವ್ರತಂ ಪ್ರತಿ ॥ ೩೭ ॥

ತತ್ರ ಕಾಂಚೀಪುರೀಂ ದೃಷ್ಟ್ವಾ ಪುರೀಂ ಪುಣ್ಯವಿವರ್ಧಿನೀಂ ।
ನಾನಾಮೃಗಗಣಾಕೀರ್ಣಾಂ ನಾನಾವೃಕ್ಷಸಮಾಕುಲಾಂ ॥ ೩೮ ॥

ನಾನಾಶಕುನಿಸಂಘುಷ್ಟಾಂ ನಾನಾತೀರ್ಥಸಮನ್ವಿತಾಂ ।
ವನೀಭೂತಾಂ ಪುರೀಂ ದಿವ್ಯಾಂ ಜೀರ್ಣೈರ್ದೇವಾಲಯೈರ್ಯುತಾಂ ॥

ನನಂದ ದೃಷ್ಟ್ವಾ ದೇವೇಶಂ ತತ್ರ ಹಸ್ತಿಗಿರೌ ಹರಿಂ ।
ಗುಹಾಯಾಂ ನರಸಿಹ್ಮಂ ಚ ವರಾಹಂ ಶೇಷಪಲ್ವಲೇ ॥ ೪೦ ॥

ಪಶ್ಯನ್ ಸ್ಥಾನಾನಿ ದಿವ್ಯಾನಿ ತತ್ರ ತತ್ರ ಚ ಶಾರ್ಙ್ಗಿಣಃ ।
ಚಚಾರ ಸಹಿತೋ ವಿಪ್ರೈರ್ವೈಶಂಪಾಯನಪೂರ್ವಕೈಃ ॥ ೪೧ ॥

---

೩೭. ಮತ್ತು ಅತಿಶಯವಾಗಿ ಸಂತೋಷಪಟ್ಟ ಮಾನಸವುಳ್ಳವನಾಗಿ ಕೃಷ್ಣ ದರ್ಶನಮಾಡಬೇಕೆಂಬ ಕುತೂಹಲದಿಂದ ತನ್ನ ರಾಜ್ಯಭಾರವನ್ನು ಮಂತ್ರಿಗಳಲ್ಲಿ ಅರ್ಪಿಸಿ ಸತ್ಯವ್ರತಕ್ಷೇತ್ರಕ್ಕೆ ಹೊರಟುಹೋದನು.

೩೮. ಅಲ್ಲಿ ಪುಣ್ಯಗಳನ್ನು ಹೆಚ್ಚಿಸುವ ಕಾಂಚೀನಗರಿಯನ್ನು ನೋಡಿದನು. ಆದರೆ ಆ ನಗರಿಯು ವನರೂಪವಾಗಿ ಪರಿಣಮಿಸಿದುದರಿಂದ ಅನೇಕ ಮೃಗಗಳ ಗುಂಪಿನಿಂದಲೂ ಅನೇಕ ವೃಕ್ಷಗಳಿಂದಲೂ ತುಂಬಿರುವುದು ಆಗಿತ್ತು.

೩೯. ಮತ್ತು ಬಗೆಬಗೆಯ ಪಕ್ಷಿಧ್ವನಿಯಿಂದ ಕೂಡಿರುವುದೂ ಅನೇಕ ಪವಿತ್ರ ತೀರ್ಥಗಳಿಂದ ಶೋಭಿಸಲ್ಪಟ್ಟಿರುವುದೂ ಮತ್ತು ಅನೇಕ ಜೀರ್ಣದೇವಾಲಯಗಳಿಂದ ಪೂರ್ಣವೂ ಆಗಿ ಕಾಂಚೀನಗರವು ವನಪ್ರಾಯವಾಗಿ ಕಂಡಿತು.

೪೦. ಅಲ್ಲಿ ಹಸ್ತಿಶೈಲದಲ್ಲಿ ದೇವೋತ್ತಮನಾದ ಹರಿಯನ್ನು ನೋಡಿ ಆನಂದಿಸಿದನು. ಹಾಗು ಗವಿಯಲ್ಲಿ ನರಸಿಹ್ಮಸ್ವಾಮಿಯನ್ನೂ ಶೇಷಸರೋವರದಲ್ಲಿ ವರಾಹಸ್ವಾಮಿಯನ್ನೂ ಸಂದರ್ಶಿಸಿದನು.

೪೧. ಮತ್ತು ಆ ಕ್ಷೇತ್ರದಲ್ಲಿ ಅಲ್ಲಲ್ಲಿರುವ ಅನೇಕ ವಿಷ್ಣುವಿನ ದಿವ್ಯವಾದ ಆಲಯಗಳನ್ನು ಸಂದರ್ಶಿಸುತ್ತ ವೈಶಂಪಾಯನ ಮುನಿಯೇ ಮುಂತಾದ ಅನೇಕ ವಿಪ್ರರಿಂದ ಕೂಡಿ ಸಂಚರಿಸಿದನು.

ಯಥೋಕ್ತಕಾರಿಣಂ ದೇವಂ ತಥೈವಾಷ್ಟಭುಜಂ ಹರಿಂ ।
ದೀಪಾಕಾರಂ ನೃಸಿಹ್ಮಂ ಚ ತಥಾ ಶಾರ್ಙ್ಗಧರಂ ಹರಿಂ ॥ ೪೨ ॥

ಕಾಮಕೋಷ್ಠೇ ಬಿಲದ್ವಾರೇ ವಾಮನಂ ಸರ್ವಕಾಮದಂ ।
ಶೇಷಾಕಾರಂ ಸುಧಾಕಾರಂ ಮೇಘಾಕಾರಂ ತ್ರಿವಿಕ್ರಮಂ ॥ ೪೩ ॥

ಪ್ರವಾಲವರ್ಣಂ ಹೇಮಾಭಂ ಚಂದ್ರಖಂಡಂ ಚ ಪಾರ್ಥಿವಃ ।
ದೃಷ್ಟ್ವಾ ಚೈಕಾಮ್ರಮೂಲಸ್ಥಂ ಕಾಮಾಕ್ಷ್ಯಾ ಸಹಿತಂ ಹರಂ ॥ ೪೪ ॥

ಪ್ರಣಮ್ಯ ಭಕ್ತ್ಯಾ ತಾನ್ ಸರ್ವಾನ್ ಬಭೂವ ಪ್ರೀತಮಾನಸಃ ।
ತತ್ರ ತತ್ರ ಚ ತೀರ್ಥೇಷು ಪುಣ್ಯೇಷು ಕೃತಮಜ್ಜನಃ ॥ ೪೫ ॥

ತರ್ಪಯಿತ್ವಾ ಪಿತೄನ್ ಸರ್ವಾನ್ ದೇವಾಂಶ್ಚ ವಿಧಿವನ್ನೃಪಃ ।
ದತ್ವಾ ದಾನಾನಿ ವಿಪ್ರೇಭ್ಯಃ ಪುರೀಂ ಕರ್ತುಮುಪಾರಭತ್ ॥ ೪೬ ॥

---

೪೨. ಮತ್ತು ಯಥೋಕ್ತಕಾರಿಮೂರ್ತಿ, ಅಷ್ಟಭುಜಸ್ವಾಮಿ, ದೀಪಾಕಾರ ದೇವ, ನರಸಿಹ್ಮ, ಮತ್ತು ಶಾರ್ಙ್ಗವನ್ನು ಧರಿಸಿದ ಮೂರ್ತಿ ಈ ವಿಧವಾಗಿ ವಿಷ್ಣುವಿನ ಅನೇಕ ಲೀಲಾಮೂರ್ತಿಗಳನ್ನು ಸಾಕ್ಷಾತ್ಕರಿಸಿದನು.

೪೩. ಕಾಮಕೋಷ್ಠ ಬಿಲದ್ವಾರದಲ್ಲಿ ಸಕಲ ಕಾಮನೆಗಳನ್ನು ಪೂರ್ತಿ ಮಾಡುವ ವಾಮನನನ್ನೂ ಸುಧೆಯುವರ್ಣವುಳ್ಳ ಶೇಷಾಕಾರಮೂರ್ತಿ, ತ್ರಿವಿಕ್ರಮ ಮೂರ್ತಿಗಳನ್ನೂ ಸಂದರ್ಶಿಸಿದನು.

೪೪. ರಾಜನು ಹವಳದ ವರ್ಣದಿಂದ ಕೂಡಿರುವ ಮೂರ್ತಿಯನ್ನೂ, ಚಿನ್ನದಂತಿರುವ ಮೂರ್ತಿಯನ್ನೂ, ಚಂದ್ರಖಂಡ ದೇವರನ್ನೂ, ಮತ್ತು ಏಕಾಮ್ರವೃಕ್ಷ ಮೂಲದಲ್ಲಿರುವ ಕಾಮಾಕ್ಷೀದೇವಿಯಿಂದ ಕೂಡಿದ ಈಶ್ವರನನ್ನೂ ನೋಡಿದನು.

೪೫. ಅಲ್ಲಲ್ಲಿ ನೋಡಿರುವ ಸ್ವಾಮಿಯ ಮೂರ್ತಿಗಳನ್ನು ಭಕ್ತಿಯಿಂದ ನಮಸ್ಕರಿಸಿ ಸುಪ್ರೀತವಾದ ಮನಸ್ಸುಳ್ಳವನಾದನು. ಮತ್ತು ಆಯಾಯ ಪವಿತ್ರ ತೀರ್ಥಗಳಲ್ಲಿ ಸ್ನಾನಮಾಡಿದನು.

೪೬. ಮತ್ತು ತೀರ್ಥಸ್ನಾನಾನಂತರದಲ್ಲಿ ಸಮಸ್ತ ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ದೇವ-ಪಿತೃತರ್ಪಣಗಳನ್ನು ಮಾಡಿದನು. ಮತ್ತು ಅನೇಕ ವಿಪ್ರರಿಗೆ ದಾನಗಳನ್ನು ಕೊಟ್ಟು ಆ ಅರಣ್ಯವನ್ನು ನಗರವನ್ನಾಗಿ ಪರಿವರ್ತಿಸಲು ಆರಂಭಮಾಡಿದನು.

ತತಶ್ಚಕ್ರೇ ಪುರೀಂ ರಮ್ಯಾಂ ಸೌಧಪ್ರಾಕಾರಗೋಪುರಾಂ ।
ವಾಪೀಕೂಪತಟಾಕಾಢ್ಯಾಂ ಯೋಜನತ್ರಯವಿಸ್ತೃತಾಂ ॥ ೪೭ ॥

ಬ್ರಾಹ್ಮಣಾನಾಂ ಚ ವೇಶ್ಮಾನಿ ಚಕ್ರೇ ದೇವಾಲಯಾನಪಿ ।
ಕೃತ್ವಾ ಸಮ್ಯಗ್ವಿಧಾನೇನ ತತೋ ಯಷ್ಟುಮುಪಾರಭತ್ ॥ ೪೮ ॥

ಪ್ರದೇಶೇ ಕಾಮಕೋಷ್ಠಸ್ಯ ಬಿಲದ್ವಾರಸ್ಯ ಪಶ್ಚಿಮೇ ।
ಯಜ್ಞಶಾಲಾಂ ಸುವಿಪುಲಾಂ ಕೃತ್ವಾ ವೇದಿಂ ಚ ಶಾಸ್ತ್ರತಃ ॥ ೪೯ ॥

ತೋಯಾರ್ಥಂ ತತ್ರ ಯಜ್ಞಸ್ಯ ನಿರ್ಮಮೇ ಸರ ಉತ್ತಮಂ ।
ತದ್ವೈ ಪಾಂಡವತೀರ್ಥಾಖ್ಯಂ ಸರಃ ಪರಮಪಾವನಂ ॥ ೫೦ ॥

ಸ ತತ್ರ ಪ್ರಾರಭದ್ಯಜ್ಞಂ ಬಹ್ವನ್ನಂ ಭೂರಿದಕ್ಷಿಣಂ ।
ತತ್ರ ಕರ್ಮಾಣಿ ವಿಧಿವಚ್ಚಕ್ರುಃ ಸರ್ವೇ ದ್ವಿಜರ್ಷಭಾಃ ॥ ೫೧ ॥

---

೪೭. ಅನಂತರದಲ್ಲಿ ಮೂರು ಯೋಜನಗಳ ವಿಸ್ತಾರವುಳ್ಳ, ವಾಪೀ, ಕೂಪ, ತಟಾಕ ಮುಂತಾದ ಜಲಾಶಯಗಳಿಂದ ಸಮೃದ್ಧಿಹೊಂದಿದ, ಮತ್ತು ಮಹಡಿ, ಪ್ರಾಕಾರ, ಗೋಪುರಗಳಿಂದ ರಮಣೀಯವಾದ ಪುರವನ್ನು ನಿರ್ಮಿಸಿದನು.

೪೮. ಅನೇಕ ಬ್ರಾಹ್ಮಣಾವಾಸಶ್ರೇಣಿಯನ್ನೂ ದೇವಾಲಯಗಳ ಸಾಲನ್ನೂ ಶಾಸ್ತ್ರವಿಧಾನದಿಂದ ಚನ್ನಾಗಿ ಮಾಡಿ ಅನಂತರ ಯಾಗಮಾಡಲಾರಂಭಿಸಿದನು.

೪೯. ಕಾಮಕೋಷ್ಠ ಬಿಲದ್ವಾರದ ಪಶ್ಚಿಮದಿಕ್ಕಿನ ಭಾಗದಲ್ಲಿ ವಿಸ್ತಾರವಾದ ಯಜ್ಞಶಾಲೆಯನ್ನೂ ಅದರಲ್ಲಿ ವೇದಿಯನ್ನೂ ಶಾಸ್ತ್ರವಿಧಿಯಂತೆ ಏರ್ಪಡಿಸಿದನು.

೫೦. ಅಲ್ಲಿ ಯಜ್ಞಕ್ಕೆ ಸಾಧನವಾಗಿ ಜಲವನ್ನು ಸಂಗ್ರಹಿಸುವುದಕ್ಕೋಸ್ಕರ ಒಂದು ಉತ್ತಮವಾದ ಸರೋವರವನ್ನು ಕಲ್ಪಿಸಿದನು. ಆ ಸರೋವರವು ಪಾಂಡವ ತೀರ್ಥವೆಂಬ ಹೆಸರಿನ ಪರಮಪಾವನವಾದ ತೀರ್ಥವಾಯಿತು.

೫೧. ಅಲ್ಲಿ ರಾಜನು ಬಹುವಾದ ಅನ್ನದಾನ ದಕ್ಷಿಣಾದಾನಗಳಿಂದ ಯಜ್ಞವನ್ನು ಆರಂಭಿಸಿದನು. ಅದರ ಅಂಗವಾಗಿ ಋತ್ವಿಜರು ಅನೇಕ ವಿಹಿತ ಕರ್ಮಗಳನ್ನು ಆಚರಿಸಿದರು.

ಹವೀಂಷಿ ಹೂಯಮಾನಾನಿ ಮಂತ್ರವಿದ್ಭಿರ್ದ್ವಿಜೋತ್ತಮೈಃ ।
ನ್ಯವೇದಯತ್ ಸ ಸರ್ವಾಣಿ ವಿಷ್ಣವೇ ರಾಜಸತ್ತಮಃ ॥ ೫೨ ॥

ತತಸ್ತಸ್ಯಾಶ್ವಮೇಧೇನ ಸಂತುಷ್ಟಃ ಪುರುಷೋತ್ತಮಃ ।
ತತ್ರಾವಿರಾಸೀದ್ಭಗವಾನ್ ದೇವಕೀನಂದನೋ ಹರಿಃ ॥ ೫೩ ॥

ತದಾ ಚೋತ್ತರದಿಗ್ಭಾಗಾದಂತರಿಕ್ಷಾದುಪಾಗತೇ ।
ಸಮಾಸೀನಃ ಶುಭೇ ದಿವ್ಯೇ ವಿಮಾನೇ ರತ್ನಸನ್ನಿಭೇ ॥ ೫೪ ॥

ವೇದಕೋಟೀತಿ ವಿಖ್ಯಾತೇ ದಿವ್ಯರತ್ನವಿಭೂಷಿತೇ ।
ರುಕ್ಮಿಣೀಸತ್ಯಭಾಮಾಭ್ಯಾಂ ಸಹಿತಃ ಸುರಸೇವಿತಃ ॥ ೫೫ ॥

ಕಿರೀಟಾಂಗದಕೇಯೂರಕೌಸ್ತುಭೈಃ ಸಮಲಂಕೃತಃ ।
ದಿವ್ಯಪೀತಾಂಬರಧರೋ ವನಮಾಲಾವಿಭೂಷಿತಃ ॥ ೫೬ ॥

---

೫೨. ಆ ರಾಜಶ್ರೇಷ್ಠನು ಮಂತ್ರಜ್ಞರಾದ ದ್ವಿಜೋತ್ತಮರಿಂದ ಅಗ್ನಿಯಲ್ಲಿ ಹೋಮಮಾಡಲ್ಪಡುತ್ತಿದ್ದ ಹವಿಸ್ಸನ್ನು ವಿಷ್ಣುದೇವತೆಯನ್ನು ಉದ್ದೇಶಮಾಡಿ ತ್ಯಾಗಮಾಡಿದನು.

೫೩. ತರುವಾಯ ಅವನು ಮಾಡಿದ ಅಶ್ವಮೇಧಯಾಗದಿಂದ ಸಂತುಷ್ಟನಾದ ಪುರುಷೋತ್ತಮನು ಪೂಜ್ಯನೂ ದೇವಕೀಪುತ್ರನೂ ಆದ ಕೃಷ್ಣಸ್ವರೂಪದಿಂದ ಪ್ರತ್ಯಕ್ಷನಾದನು.

೫೪. ಆಗ ಆಕಾಶದ ಉತ್ತರದಿಕ್ಕಿನ ಕಡೆಯಿಂದ ಬಂದಿರುವ, ಮಂಗಳಮಯವೂ ದಿವ್ಯವೂ ಆದ, ಮತ್ತು ರತ್ನಪುಂಜಗಳಂತೆ ಹೊಳೆಯುವ ವಿಮಾನದಲ್ಲಿ ಶ್ರೀಕೃಷ್ಣನು ಕುಳಿತುಕೊಂಡನು.

೫೫. ಆ ವಿಮಾನವು ವೇದಕೋಟಿಯೆಂಬ ದಿವ್ಯನಾಮದಿಂದ ಪ್ರಖ್ಯಾತವೂ ದಿವ್ಯವಾದ ರತ್ನರಾಶಿಗಳಿಂದ ಶೋಭಿತವೂ ಆಗಿತ್ತು. ಅದರಲ್ಲಿ ರುಕ್ಮಿಣೀ ಮತ್ತು ಸತ್ಯಭಾಮಾದೇವಿಯರಿಂದ ಪಕ್ಕಗಳಲ್ಲಿ ಅಲಂಕರಿಸಲ್ಪಟ್ಟವನಾಗಿಯೂ ಅನೇಕ ದೇವವೃಂದದಿಂದ ಸೇವಿಸಲ್ಪಡುವವನಾಗಿಯೂ ಶ್ರೀಕೃಷ್ಣನು ಕುಳಿತುಕೊಂಡಿದ್ದನು.

೫೬. ಮತ್ತು ಶ್ರೀಕೃಷ್ಣನು ಕಿರೀಟ, ಅಂಗದ, ಕೇಯೂರ, ಮತ್ತು ಕೌಸ್ತುಭರತ್ನವೆಂಬ ಆಭರಣಗಳಿಂದ ಶೃಂಗರಿಸಲ್ಪಟ್ಟವನೂ, ದಿವ್ಯವಾದ ಪೀತಾಂಬರವನ್ನುಟ್ಟುಕೊಂಡವನೂ ಮತ್ತು ವನಮಾಲೆಯಿಂದ ಅಲಂಕೃತನೂ ಆಗಿದ್ದನು.

ದದೃಶೇ ದೇವದೇವೇಶಃ ಕಂದರ್ಪಾಯುತಸುಂದರಃ ।
ತದಾ ಸುಮನಸಾಂ ವೃಷ್ಟಿರ್ಬಭೂವಾದ್ಭುತದರ್ಶನಾ ॥ ೫೭ ॥

ದಿವ್ಯದುಂದುಭಯೋ ನೇದುರ್ನನೃತುಶ್ಚಾಪ್ಸರೋಗಣಾಃ ।
ತದಾ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥ ೫೮ ॥

ತುಷ್ಟುವುರ್ದೇವಕೀಪುತ್ರಂ ದೃಷ್ಟ್ವಾ ತತ್ರ ನಭೋಗತಾಃ ।
ತತೋ ದೃಷ್ಟ್ವಾ ವಿಮಾನಸ್ಥಂ ಪ್ರಾಙ್ಮುಖಂ ಪುರತಃ ಸ್ಥಿತಂ ॥ ೫೯ ॥

ದೇವಂ ಪಾಂಡವದೂತಾಖ್ಯಂ ವವಂದೇ ಜನಮೇಜಯಃ ।
ಪ್ರಣಮ್ಯ ಪರಯಾ ಭಕ್ತ್ಯಾ ತುಷ್ಟಾವ ಚ ಜಗತ್ಪತಿಂ ॥ ೬೦ ॥

ನಮಸ್ತೇ ಜಗತಾಂ ನಾಥ ನಮಸ್ತೇ ಪುರುಷೋತ್ತಮ ।
ಕಂಸಮರ್ದನ ಗೋವಿಂದ ನಮಸ್ತೇ ಪೂತನಾಂತಕ ॥ ೬೧ ॥

---

೫೭. ಅಂತಹ ದೇವಾಧಿದೇವನು ಕೋಟಿ ಸಂಖ್ಯೆಯ ಮನ್ಮಥವ್ಯಕ್ತಿಗಳ ಸಮೂಹದಂತೆ ಸುಂದರನಾಗಿ ಕಾಣುತ್ತಲಿದ್ದನು. ಆಗ ಅದ್ಭುತವಾದ ದರ್ಶನದಿಂದ ಕೂಡಿದ ಪುಷ್ಪವೃಷ್ಟಿಯು ಆಕಾಶದಿಂದ ಬಿದ್ದಿತು.

೫೮. ಮತ್ತು ಆ ಶುಭೋದಯಕಾಲದಲ್ಲಿ ದಿವ್ಯವಾದ ದುಂದುಭಿಗಳು ಶಬ್ದ ಮಾಡುವು, ಅಪ್ಸರಃಸ್ತ್ರೀಯರು ಸಂತೋಷದಿಂದ ನರ್ತನಮಾಡಿದರು. ಆಗ ಶ್ರೀಕೃಷ್ಣನ ಸುತ್ತಲೂ ದೇವತೆಗಳು, ಗಂಧರ್ವರು, ಸಿದ್ಧರು ಮತ್ತು ಮಹರ್ಷಿಗಳು ಭಕ್ತಿ ನಮ್ರರಾಗಿದ್ದರು.

೫೯. ಮತ್ತು ಆಕಾಶದಲ್ಲಿ ನಿಂತು ದೇವಕೀಪುತ್ರನಾದ ಶ್ರೀಕೃಷ್ಣನನ್ನು ನೋಡಿ ಸ್ತುತಿಮಾಡಿದರು. ಆಗ ಜನಮೇಜಯರಾಜನು ತನ್ನ ಮುಂಭಾಗದಲ್ಲಿ ಪೂರ್ವಾಭಿಮುಖನಾಗಿ ವಿಮಾನಾರೂಢನಾದ ಸ್ವಾಮಿಯನ್ನು ಸಾಕ್ಷಾತ್ಕರಿಸಿದನು.

೬೦. ಮತ್ತು ಆ ಜನಮೇಜಯರಾಜನು ಜಗತ್ಪತಿಯಾದ ಆ ಪಾಂಡವ ದೂತನೆಂಬ ಮೂರ್ತಿಯನ್ನು ನಮಸ್ಕರಿಸಿದನು. ನಮಸ್ಕಾರಾನಂತರದಲ್ಲಿ ಭಕ್ತಿಯಿಂದ ಸ್ತುತಿಮಾಡಿದನು.

೬೧. ಜಗತ್ತಿಗೆ ಒಡೆಯನೆ! ಪುರುಷೋತ್ತಮನೆ! ಕಂಸಾಸುರನನ್ನು ಮರ್ದಿಸಿದವನೆ! ಗೋವಿಂದನೆ! ಮತ್ತು ಪೂತನೆಯನ್ನು ಕೊಂದವನೆ! ನಿನಗೆ ನಮಸ್ಕಾರವು, ನಿನಗೆ ನಮಸ್ಕಾರವು.

ಶಕಟಾಸುರಚಾಣೂರತೃಣಾವರ್ತಾದಿಮರ್ದನ ।
ಪ್ರಸೀದ ಕೃಷ್ಣ ದೇವೇಶ ಪಾಂಡವಾರ್ತಿಹರಾಚ್ಯುತ ॥ ೬೨ ॥

ಪಾಹಿ ಮಾಂ ಜಗತಾಂ ನಾಥ ಪದ್ಮನಾಭ ಯದೂದ್ವಹ ।
ಇತಿ ಸ್ತುತೋಽಥ ಭಗವಾನ್ ರಾಜ್ಞಾ ಪಾರಿಕ್ಷಿತೇನ ಹ ॥ ೬೩ ॥

ತಮುವಾಚ ಹಸನ್ ವಾಕ್ಯಂ ವೇದಕೋಟಿಸ್ಥಿತೋ ಹರಿಃ ।
ರಾಜನ್ನನೇನ ಯಜ್ಞೇನ ಕ್ಷೇತ್ರೇಽಸ್ಮಿನ್ ಸುಕೃತೇನ ತೇ ॥ ೬೪ ॥

ಸುಪ್ರಸನ್ನೋಽಸ್ಮಿ ಭದ್ರಂ ತೇ ವೃಣೀಷ್ವ ವರಮುತ್ತಮಂ ।
ಜನಮೇಜಯ ಉವಾಚ :—
ಕೃತಾರ್ಥೋಽಸ್ಮಿ ಜಗನ್ನಾಥ ತವ ಸಂದರ್ಶನಾದಹಂ ॥ ೬೫ ॥

ತಥಾಪ್ಯೇನಂ ವರಂ ದೇವ ಮಹ್ಯಂ ದಾತುಂ ತ್ವಮರ್ಹಸಿ ।
ತ್ವಮತ್ರೈವ ಚಿರಂ ಕಾಲಮೇತದ್ರೂಪೇಣ ಸಂಯುತಃ ॥ ೬೬ ॥

---

೬೨. ಶಕಟಾಸುರ, ಚಾಣೂರ, ತೃಣಾವರ್ತ ಮುಂತಾದ ಅಸುರರನ್ನು ಸಂಹರಿಸಿ ದವನೂ, ದೇವತೆಗಳಿಗೆ ಪ್ರಭುವೂ, ಅಚ್ಯುತನೂ ಆದ ಶ್ರೀಕೃಷ್ಣನೆ! ನನ್ನಲ್ಲಿ ಪ್ರಸನ್ನನಾಗು.

೬೩. ಜಗದ್ರಕ್ಷಕನಾದ ಪ್ರಭುವೆ! ಪದ್ಮನಾಭನೆ! ಯದುವಂಶದ ತಿಲಕನೆ! ನನ್ನನ್ನು ರಕ್ಷಿಸು ಎಂಬುದಾಗಿ ಪರೀಕ್ಷಿತ್‌ರಾಜನ ಪುತ್ರನಾದ ಜನಮೇಜಯರಾಜನಿಂದ ಸ್ತುತಿಸಲ್ಪಟ್ಟನು.

೬೪. ಆಗ ವೇದಕೋಟಿವಿಮಾನದಲ್ಲಿ ಕುಳಿತುಕೊಂಡಿರುವ ಹರಿಯು ರಾಜನನ್ನು ಕುರಿತು ನಗುತ್ತ ಈ ರೀತಿಯಾಗಿ ಮಾತನಾಡಿದನು. ರಾಜನೆ! ನೀನು ಈ ಪವಿತ್ರಕ್ಷೇತ್ರದಲ್ಲಿ ಅಶ್ವಮೇಧಯಾಗವನ್ನು ವಿಧಿಪೂರ್ವಕವಾಗಿ ಅನುಷ್ಠಾನಮಾಡಿದ್ದೀ.

೬೫. ಆದ್ದರಿಂದ ನಿನ್ನಲ್ಲಿ ನಾನು ಪ್ರಸನ್ನನಾಗಿರುವೆನು. ನಿನಗೆ ಮಂಗಳವಾಗಲಿ. ಮತ್ತು ನಿನಗೆ ಇಷ್ಟವಾದ ಉತ್ತಮ ವರವನ್ನು ಕೇಳು ಎಂದು ಸ್ವಾಮಿಯು ಹೇಳಲಾಗಿ ಜನಮೇಜಯರಾಜನು ಇಂತೆಂದನು. ಜಗನ್ನಾಥನೆ! ನಿನ್ನ ದರ್ಶನಮಾತ್ರದಿಂದಲೆ ನಾನು ಕೃತಾರ್ಥನಾಗಿರುವೆನು.

೬೬. ಹಾಗಿದ್ದರೂ ಇದೊಂದು ನನಗೆ ಇಷ್ಟವಾದ ವರವನ್ನು ನೀನು ಅನುಗ್ರಹಿಸಲು ಅರ್ಹನಾಗಿದ್ದಿ, ನೀನು ಈಗ ನನಗೆ ಪ್ರತ್ಯಕ್ಷವಾಗಿರುವ ರೂಪದಿಂದ ಕೂಡಿ ಈ ಸ್ಥಳದಲ್ಲಿ ಬಹಳ ಕಾಲ ವಾಸಮಾಡಬೇಕು.

ವೇದಕೋಟಿವಿಮಾನೇऽಸ್ಮಿನ್ ಋಷೀಣಾಮಭಯಪ್ರದಃ ।
ನಿವಸನ್ ಸತತಂ ಕಾಂಚ್ಯಾಂ ಸರ್ವೇಷಾಮಿಷ್ಟದೋ ಭವ ॥ ೬೭ ॥

ನಾರದ ಉವಾಚ:—

ಇತ್ಯುಕ್ತಃ ಪುಂಡರೀಕಾಕ್ಷೋ ರಾಜ್ಞಾ ತೇನ ಮಹಾತ್ಮನಾ ।
ತಮುವಾಚ ಪುನರ್ವಾಕ್ಯಂ ಮಂದಂ ಮಂದಸ್ಮಿತೋ ಹರಿಃ ॥ ೬೮ ॥

ಜನಮೇಜಯ ರಾಜೇಂದ್ರ ತವ ಪ್ರಿಯಚಿಕೀರ್ಷಯಾ ।
ಸರ್ವದಾ ನಿವಸಾಮ್ಯತ್ರ ಸರ್ವಸಂಪತ್ಪ್ರದೋ ನೃಣಾಂ ॥ ೬೯ ॥

ಇತಿ ದತ್ವಾ ವರಂ ತಸ್ಮೈ ಭಗವಾನ್ ದೇವಕೀಸುತಃ ।
ತತ್ರೈವೋವಾಸ ರಾಜೇಂದ್ರ ಕಾಂಚ್ಯಾಂ ಸರ್ವೇಷ್ಟದೋ ನೃಣಾಂ ॥

ತಂ ಹಿ ಪಾಂಡವದೂತಾಖ್ಯಂ ಪ್ರವದಂತಿ ಮನೀಷಿಣಃ ।
ತಸ್ಯ ಸಂದರ್ಶನಂ ನೄಣಾಂ ಭುಕ್ತಿಮುಕ್ತಿಪ್ರದಾಯಕಂ ॥ ೭೧ ॥

---

೬೭. ಈ ವೇದಕೋಟಿ ವಿಮಾನಾರೂಢನಾಗಿ ಸಮಸ್ತ ಋಷಿಗಳಿಗೆ ಅಭಯವನ್ನು ಪ್ರದಾನಮಾಡುತ್ತ ಕಾಂಚೀನಗರದಲ್ಲಿಯೇ ಸಂತತವಾಗಿ ವಾಸಮಾಡಿ ಸಕಲ ಭಕ್ತರಿಗೆ ಇಷ್ಟಾರ್ಥವನ್ನು ಪ್ರದಾನಮಾಡು.

೬೮. ನಾರದಮುನಿಯು ಇಂತೆಂದನು:—ಆ ಮಹಾತ್ಮನಾದ ರಾಜನಿಂದ ಈ ರೀತಿಯಾಗಿ ವಿಜ್ಞಾಪಿಸಲ್ಪಟ್ಟ ಪುಂಡರೀಕಾಕ್ಷನಾದ ವಿಷ್ಣುವು ಮಂದವಾದಸ್ಮಿತ ಮುಖದಿಂದ ಕೂಡಿ ಆ ರಾಜನನ್ನು ಕುರಿತು ಮತ್ತೆ ಈ ವಿಧವಾಗಿ ಮಾತನಾಡಿದನು.

೬೯. ರಾಜೇಂದ್ರನಾದ ಜನಮೇಜಯನೆ! ನಿನ್ನ ಇಷ್ಟವನ್ನು ನೆರವೇರಿಸಲೋಸ್ಕರ ಈ ಕಾಂಚೀನಗರದಲ್ಲಿ ನಾನು ಸರ್ವಮಾನವರಿಗೂ ಸಂಪತ್ತನ್ನು ಅನುಗ್ರಹಿಸುತ್ತ ಸಂತತವಾಗಿ ವಾಸಮಾಡುವೆನು.

೭೦. ರಾಜೇಂದ್ರನೇ! ಭಗವಂತನೂ ದೇವಕೀಪುತ್ರನೂ ಆದ ಶ್ರೀಕೃಷ್ಣನು ಆ ರಾಜನಿಗೆ ಈ ವರವನ್ನು ಕೊಟ್ಟು ಅದರಂತೆ ಸಕಲ ಮಾನವರ ಇಷ್ಟಫಲಗಳನ್ನು ಕೊಡುತ್ತ ಆ ಕಾಂಚೀನಗರದಲ್ಲಿಯೇ ವಾಸಮಾಡಿದನು.

೭೧. ಜ್ಞಾನಿಗಳು ಆ ಮೂರ್ತಿಯನ್ನು ಪಾಂಡವದೂತನೆಂದು ಹೆಸರಿಸಿಂದ ವ್ಯವಹರಿಸುತ್ತಾರೆ. ಆ ಮೂರ್ತಿಯ ಸಂದರ್ಶನವು ಜನರಿಗೆ ಭೋಗ ಮತ್ತು ಮೋಕ್ಷವೆಂಬ ಪುರುಷಾರ್ಥಗಳನ್ನು ಕೊಡುವುದು.

ತತಃ ಸಮಾಪ್ಯ ವಿಧಿವದಶ್ವಮೇಧಂ ಸುಪಾವನಂ ।
ಸ ಕೃತಾವಭೃಥೋ ರಾಜಾ ಋತ್ವಿಗ್ಭ್ಯೋ ದತ್ತದಕ್ಷಿಣಃ ॥ ೭೨ ॥

ತತ್ರೈವ ನಿವಸನ್ ಕಾಂಚ್ಯಾಂ ಪೂಜಯಾಮಾಸ ಕೇಶವಂ ।
ಅಸಂಖ್ಯೇಯಂ ಧನಂ ದತ್ವಾ ಬ್ರಾಹ್ಮಣೇಭ್ಯೋ ನೃಪೋತ್ತಮಃ ॥ ೭೩ ॥

ಉತ್ಸವೈರ್ವಿವಿಧೈಶ್ಚಾಪಿ ಪ್ರೀಣಯಾಮಾಸ ಕೇಶವಂ ।
ತತೋ ದೇವಸ್ಯ ಕೃಪಯಾ ತಸ್ಯ ರಾಜ್ಞೋ ಮಹಾತ್ಮನಃ ॥ ೭೪ ॥

ಸರ್ವಲಕ್ಷಣಸಂಪನ್ನೋ ಜಜ್ಞೇ ಪುತ್ರಃ ಸುಧಾರ್ಮಿಕಃ ।
ಕ್ಷೇಮಕಾಖ್ಯೋ ಮಹಾಪ್ರಾಜ್ಞಃ ಕಂದರ್ಪ ಇವ ಮೂರ್ತಿಮಾನ್ ॥

ತತೋ ದೇವಾಜ್ಞಯಾ ರಾಜ್ಯೇ ಸ್ವೀಯೇ ಸ್ಥಾಪಯಿತುಂ ಸುತಂ ।
ಸ ರಾಜಾ ಸಚಿವೈಃ ಸಾರ್ಧಂ ಪ್ರಯಯೌ ಹಸ್ತಿನಾಪುರೀಂ ॥ ೭೬ ॥

---

೭೨. ಅನಂತರದಲ್ಲಿ ಜನಮೇಜಯರಾಜನು ಪಾವನವಾದ ಅಶ್ವಮೇಧಯಾಗವನ್ನು ವಿಧಿಪೂರ್ವಕವಾಗಿ ಸಮಾಪ್ತಿಗೊಳಿಸಿ ಅವಭೃಥಸ್ನಾನವನ್ನು ಮಾಡಿ ಋತ್ವಿಜರಿಗೆ ದಕ್ಷಿಣೆಯನ್ನು ದಾನಮಾಡಿದನು.

೭೩. ಮತ್ತು ಆ ಕಾಂಚೀನಗರದಲ್ಲಿಯೇ ವಾಸಮಾಡುತ್ತ ಕೇಶವಸ್ವಾಮಿಯನ್ನು ಪೂಜೆಮಾಡಿದನು. ಆ ರಾಜಶ್ರೇಷ್ಠನು ಪೂಜಾಂಗವಾಗಿ ದೇವತಾಪ್ರೀತಿಗೋಸ್ಕರ ಬ್ರಾಹ್ಮಣರಿಗೆ ಸಂಖ್ಯೆಯಿಲ್ಲದಷ್ಟು ಅಪಾರವಾದ ಧನವನ್ನು ದಾನಮಾಡಿದನು.

೭೪. ಮತ್ತು ನಾನಾವಿಧವ ಉತ್ಸವಗಳನ್ನು ಏರ್ಪಡಿಸಿ ಸ್ವಾಮಿಗೆ ಪ್ರೀತಿಯನ್ನುಂಟುಮಾಡಿದನು. ಹೀಗೆ ಪೂಜಾದಿ ಸುಕೃತದಿಂದಲೂ ತನ್ನಲ್ಲಿರುವ ಭಕ್ತಿಯಿಂದಲೂ ಮಹಾತ್ಮನಾದ ಆ ರಾಜನ ಮೇಲೆ ಪರಮಾತ್ಮನು ಕೃಪೆಯನ್ನು ತೋರಿಸಿದನು.

೭೫. ಆದರಿಂದ ಜನಮೇಜಯರಾಜನಿಗೆ ಸರ್ವ ಲಕ್ಷಣಗಳಿಂದ ಕೂಡಿದವನೂ, ಧಾರ್ಮಿಕನೂ ಮಹಾಪ್ರಜ್ಞಾಶಾಲಿಯೂ ಮತ್ತು ಮೂರ್ತಿಮತ್ತಾಗಿ ಬಂದ ಮನ್ಮಥನಂತೆಯೂ ಇರುವ ಕ್ಷೇಮಕನೆಂಬ ಹೆಸರುಳ್ಳ ಪುತ್ರನು ಜನಿಸಿದನು.

೭೬. ಅನಂತರದಲ್ಲಿ ಸ್ವಾಮಿಯ ಆಜ್ಞೆಯಂತೆ ಆ ಪುತ್ರನನ್ನು ಸ್ವೀಯರಾಜ್ಯದಲ್ಲಿ ಇರಿಸುವುದಕ್ಕೋಸ್ಕರ ಮಂತ್ರಿಗಳೊಂದಿಗೆ ಆ ರಾಜನು ಹಸ್ತಿನಾವತಿಗೆ ಹಿಂದಿರುಗಿ ಹೋದನು.

ಸ್ಥಿತಃ ಸಚಿವೈಃ ಸರ್ವೈಶ್ಚತುರಂಗಬಲೇನ ಚ ॥ ೭೭ ॥

ಇತ್ಥಂ ಹರೇರ್ದರ್ಶನಕಾಂಕ್ಷಯಾ ಮಖಂ
ಚಕಾರ ಕಾಂಚ್ಯಾಂ ಜನಮೇಜಯೋ ನೃಪಃ ।
ದದರ್ಶ ದೇವಂ ಕೃಪಯಾ ಹರೇರ್ನೃಪಃ
ಪುತ್ರಂ ಚ ಲೇಭೇಽನುಪಮಂ ಗುಣೈರ್ಯುತಂ ॥ ೭೮ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಏಕೋನತ್ರಿಂಶೋಽಧ್ಯಾಯಃ.

---

೭೭. ಹಸ್ತಿನಾವತಿಗೆ ತೆರಳುವ ಸಮಯದಲ್ಲಿ ತನ್ನ ಸಮಸ್ತ ಮಂತ್ರಿಗಳೂ ಚತುರಂಗಬಲವೂ ಮುಂತಾದ ಸಮಸ್ತ ಪರಿವಾರದಿಂದ ಕೂಡಿ ವೈಭವದಿಂದ ಪ್ರಯಾಣಮಾಡಿದನು.

೭೮. ಈ ರೀತಿಯಾಗಿ ಜನಮೇಜಯರಾಜನು ಹರಿಯ ದರ್ಶನಾಕಾಂಕ್ಷೆಯಿಂದ ಕಾಂಚೀನಗರದಲ್ಲಿ ಅಶ್ವಮೇಧಯಾಗವನ್ನು ಆಚರಿಸಿದನು. ಅನಂತರದಲ್ಲಿ ಆ ರಾಜನು ಪರಮಾತ್ಮನಾದ ಶ್ರೀಕೃಷ್ಣನ ಕೃಪೆಯಿಂದ ತನ್ನ ಇಷ್ಟವಾದ ಹರಿಯ ಸಾಕ್ಷಾತ್ಕಾರವನ್ನು ಹೊಂದಿದನು. ಮತ್ತು ಅನೇಕ ಸದ್ಗುಣಗಳಿಂದ ಕೂಡಿ ನಿರುಪಮನಾದ ಪುತ್ರನನ್ನೂ ಹೊಂದಿದನು.

ಕಾಂಚೀಮಾಹಾತ್ಮ್ಯದಲ್ಲಿ ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ತ್ರಿಂಶೋಽಧ್ಯಾಯಃ

ನಾರದ ಉವಾಚ :—

ತಸ್ಮಿನ್ನೇವ ಯುಗೇ ರಾಜನ್ ವಿದರ್ಭನಗರೇ ನೃಪಃ ।
ಆಸೀದ್ವಿರೋಚನೋ ನಾಮ ಸತ್ಯಸಂಧೋ ಜಿತೇಂದ್ರಿಯಃ ॥ ೧ ॥

ರುಕ್ಮಿಣಸ್ತನಯೋ ಧೀಮಾನ್ ಪ್ರಜಾನಾಂ ಚ ಹಿತೇ ರತಃ ।
ತಸ್ಯಾಸೀನ್ಮಂಜುಳಾ ನಾಮ ಭಾರ್ಯಾ ರೂಪಗುಣಾನ್ವಿತಾ ॥ ೨ ॥

ಸ ಶಶಾಸ ಪುರೀಂ ರಮ್ಯಾಂ ಕುಂಡಿನಾಖ್ಯಾಂ ತಯಾ ಸಹ ।
ತಸ್ಯೈವಂ ವರ್ತಮಾನಸ್ಯ ಪ್ರಜಾ ಧರ್ಮೇಣ ರಕ್ಷತಃ ॥ ೩ ॥

---

೧. ನಾರದಮುನಿಯು ಈ ರೀತಿಯಾಗಿ ಕಥೆಯನ್ನು ಮುಂದುವರಿಸಿ ಹೇಳಿದನು :—ರಾಜನೆ, ಕೇಳು, ಆ ತ್ರೇತಾಯುಗದಲ್ಲಿಯೆ ಸತ್ಯಸಂಧನೂ, ಜಿತೇಂದ್ರಿಯನೂ ಆದ ವಿರೋಚನನೆಂಬ ವಿದರ್ಭದೇಶದ ರಾಜನಿದ್ದನು.

೨. ಸರ್ವ ಕಾಲದಲ್ಲಿಯೂ ಪ್ರಜೆಗಳ ಹಿತಚಿಂತನೆಯಲ್ಲಿಯೇ ಆಸಕ್ತನಾಗಿಯೂ ಬುದ್ಧಿಶಾಲಿಯಾಗಿಯೂ ಇದ್ದ ಆ ವಿರೋಚನನು ರುಕ್ಮಿ ಎಂಬುವನ ಮಗನಾಗಿದ್ದನು. ಅವನಿಗೆ ಸದ್ಗುಣಪೂರ್ಣಳಾದ ಮಂಜುಳಾ ಎಂಬುವಳು ಪತ್ನಿಯಾಗಿದ್ದಳು.

೩. ಆ ರಾಜನು ಪತ್ನಿಯೊಡನೆ ಕುಂಡಿನಪುರವೆಂಬ ಹೆಸರುಳ್ಳ ನಗರವನ್ನು ಆಳಿದನು. ಹೀಗೆಯೇ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಲಿದ್ದ ಆ ದೊರೆಗೆ ಕೆಲವು ಕಾಲವು ಕಳೆಯಿತು.

ಪುತ್ರಾರ್ಥಂ ತಪ್ಯಮಾನಸ್ಯ ನಾಸೀದ್ವಂಶಕರಃ ಸುತಃ ।
ಸ ಕದಾಚಿತ್ಸಮಾಹೂಯ ಸರ್ವಾನ್ ವೇದವಿದೋ ದ್ವಿಜಾನ್ ॥ ೪ ॥

ಪ್ರಣಮ್ಯ ಪೂಜಯಿತ್ವಾ ತಾನ್ ಪಪ್ರಚ್ಛಾತ್ಮಜಕಾಮ್ಯಯಾ ।
ಅನಪತ್ಯಸ್ಯ ಮೇ ಪುತ್ರಾ ಭವೇಯುಃ ಕೇನ ಕರ್ಮಣಾ ॥ ೫ ॥

ತದ್ಬ್ರುವಂತು ಭವಂತೋ ಮೇ ವಿನಿಶ್ಚಿತ್ಯ ಪರಸ್ಪರಂ ।
ಇತ್ಯುಕ್ತಾಸ್ತೇನ ವಿಪ್ರೇಂದ್ರಾಸ್ತಮೂಚುರ್ನೃಪತಿಂ ವಚಃ ॥ ೬ ॥

ಶೃಣು ರಾಜನ್ ಪ್ರವಕ್ಷ್ಯಾಮಸ್ತವ ಪುತ್ರಾಗಮಂ ಪ್ರತಿ ।
ಕೈಲಾಸವಾಸಿನಂ ದೇವಂ ಯದಾ ದ್ರಕ್ಷ್ಯಸಿ ಶಂಕರಂ ॥ ೭ ॥

ತದೈವ ಪುತ್ರಲಾಭಸ್ತೇ ಭವಿಷ್ಯತಿ ನ ಸಂಶಯಃ ।
ಸ ಹಿ ಸರ್ವಸ್ಯ ಲೋಕಸ್ಯ ಶಂಭುಃ ಸರ್ವಾರ್ಥದಾಯಕಃ ॥ ೮ ॥

---

೪. ಆದರೆ ಸತ್ಪುತ್ರರೂಪವಾದ ಸಂತತಿಯಾಗಬೇಕೆಂದು ಮನಸ್ಸಿನಲ್ಲಿ ತಪಿಸುತ್ತ ಸತ್ಕರ್ಮಗಳನ್ನು ಆಚರಿಸುತ್ತಿದ್ದರೂ ವಂಶವನ್ನು ಅವಿಚ್ಛಿನ್ನವಾಗಿ ಸಾಗಿಸುವ ಪುತ್ರಸಂತಾನವಾಗಲಿಲ್ಲ. ಆಗ ಒಂದು ಸಮಯದಲ್ಲಿ ವೇದಪಾರಂಗತರಾದ ಸಮಸ್ತ ದ್ವಿಜರನ್ನೂ ಕರೆಯಿಸಿ ಒಂದು ಸಭೆಯನ್ನು ಸೇರಿಸಿದನು.

೫. ಆಗ ಆ ದ್ವಿಜರನ್ನು ಭಕ್ತಿಯಿಂದ ನಮಸ್ಕರಿಸಿ ಮತ್ತು ಪೂಜಾವಿಧಾನದಿಂದ ಸತ್ಕರಿಸಿ ಪುತ್ರಾಕಾಂಕ್ಷೆಯಿಂದ "ವಿಪ್ರರೆ ! ಸಂತತಿ ರಹಿತನಾದ ನನಗೆ ಯಾವ ಸತ್ಕರ್ಮಾಚರಣೆಯಿಂದ ಸಂತತಿಯಾದೀತು" ಎಂದು ಕೇಳಿದನು.

೬. ಸಂತತಿ ಸಾಧನೋಪಾಯವನ್ನು ಪೂಜ್ಯರಾದ ನೀವೆಲ್ಲರೂ ಯೋಚಿಸಿ ಕರ್ತವ್ಯವನ್ನು ನಿಶ್ಚಯಿಸಿ ನನಗೆ ಹೇಳಿರಿ, ಎಂದು ರಾಜನು ಕೇಳಲಾಗಿ ಆ ದ್ವಿಜೇಂದ್ರರು ರಾಜನನ್ನು ಕುರಿತು ಈ ವಚನವನ್ನು ಹೇಳಿದರು.

೭. ರಾಜನೆ ! ನಿನಗೆ ಪುತ್ರಸಂತತಿ ಪ್ರಾಪ್ತಿಯ ಸಾಧನವನ್ನು ಹೇಳುತ್ತೇವೆ, ಕೇಳು. ಕೈಲಾಸಪರ್ವತದಲ್ಲಿ ವಾಸಮಾಡುವ ಶಂಕರನನ್ನು ನೀನು ಸಂತತಿಯ ಲಾಭಾರ್ಥವಾಗಿ ದರ್ಶನಮಾಡಬೇಕು.

೮. ಶಂಕರನ ದರ್ಶನವಾದ ಕೂಡಲೆ ನಿನಗೆ ಪುತ್ರಲಾಭವಾಗುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆ ಈಶ್ವರನು ಸಕಲ ಲೋಕಗಳಿಗೂ ಕಾಮಿತವಾದ ಫಲಗಳನ್ನು ಕೊಡುವವನಾಗಿದ್ದಾನೆ.

ತಮೇವ ಸರ್ವಥಾರಾಧ್ಯ ದೇವಾಶ್ಚ ಮನುಜಾ ಅಪಿ ।
ಲಭಂತೇ ಸಕಲಾನ್ ಕಾಮಾನ್ ಸರ್ವೇಷು ಭುವನೇಷ್ವಪಿ ॥ ೯ ॥

ಅನಪತ್ಯಾ ಪುರಾ ಭೈಷ್ಮೀ ರಾಜನ್ ತವ ಪಿತೃಷ್ವಸಾ ।
ಕೃಷ್ಣೇನ ಸಹಿತಾ ಭರ್ತ್ರಾ ಸಮಾರುಹ್ಯ ಖಗೇಶ್ವರಂ ॥ ೧೦ ॥

ಕೈಲಾಸಂ ಪರ್ವತಂ ಗತ್ವಾ ಸಮಭ್ಯರ್ಚ್ಯೈವ ಶಂಕರಂ ।
ಲೇಭೇ ಕಿಲ ಸುತಂ ಪೂರ್ವಂ ಪ್ರದ್ಯುಮ್ನಂ ಲೋಕವಿಶ್ರುತಂ ॥ ೧೧ ॥

ತಸ್ಮಾತ್ತ್ವಮಪಿ ದೇವೇಶಂ ಶಂಭುಂ ಕೈಲಾಸಪರ್ವತೇ ।
ಗತ್ವಾ ಸಂಪ್ರಾರ್ಥಯ ಹರಂ ತೇನ ಪುತ್ರೋ ಭವೇದ್ಧ್ರುವಂ ॥ ೧೨ ॥

ಇತ್ಯುಕ್ತಸ್ತೈಸ್ತದಾ ವಿಪ್ರೈಃ ಪ್ರತ್ಯುವಾಚ ದ್ವಿಜಾನ್ ಪುನಃ ।
ಬಹುಯೋಜನಸಾಹಸ್ರೇ ದೂರೇ ಸ್ಥಿತಮಗೋತ್ತಮಂ ॥ ೧೩ ॥

---

೯. ಸಮಸ್ತ ಭುವನಗಳಲ್ಲಿಯೂ ದೇವತೆಗಳು ಅಥವಾ ಮನುಷ್ಯರು ಶಂಕರನನ್ನು ಸರ್ವ ರೀತಿಗಳಿಂದ ಆರಾಧಿಸಿ ಸಕಲ ಕಾಮಗಳನ್ನೂ ಪೂರ್ತಿಮಾಡಿಕೊಳ್ಳುತ್ತಲಿರುವರು.

೧೦. ರಾಜನೇ, ಪೂರ್ವಕಾಲದಲ್ಲಿ ನಿನ್ನ ಸೋದರತ್ತೆಯಾದ ಭೈಷ್ಮಿಯು ಸಂತತಿ ರಹಿತಳಾಗಿ ಪತಿಯಾದ ಕೃಷ್ಣನೊಡನೆ ಪಕ್ಷೀಂದ್ರನಾದ ಗರುಡನನ್ನೇರಿಕೊಂಡು ಕೈಲಾಸಕ್ಕೆ ಹೋದಳು.

೧೧. ಆ ಕೈಲಾಸಪರ್ವತವನ್ನು ಹೊಂದಿ ಅಲ್ಲಿ ಶಂಕರನನ್ನು ಪೂಜೆಮಾಡಿ ಲೋಕಪ್ರಸಿದ್ಧನಾದ ಪ್ರದ್ಯುಮ್ನನೆಂಬ ಪುತ್ರನನ್ನು ಪೂರ್ವದಲ್ಲಿ ಹೊಂದಿರುವಳು, ಎಂಬುದು ಲೋಕಪ್ರಸಿದ್ಧವಾಗಿರುವುದು.

೧೨. ಆದುದರಿಂದ ನೀನು ಕೂಡ ಕೈಲಾಸಪರ್ವತಕ್ಕೆ ಹೋಗಿ ಅಲ್ಲಿ ದೇವಾಧಿಪತಿಯಾದ, ಸುಖವನ್ನು ಕೊಡುವ ಈಶ್ವರನನ್ನು ಕುರಿತು ಪುತ್ರಪ್ರಾರ್ಥನೆಯನ್ನು ಮಾಡು. ಅದರಿಂದ ನಿನಗೆ ನಿಜವಾಗಿಯೂ ಪುತ್ರಲಾಭವಾಗುವುದು.

೧೩. ಹೀಗೆಂದು ಉಪಾಯೋಪದೇಶವನ್ನು ಆ ದ್ವಿಜರು ಮಾಡಲಾಗಿ ಅವರನ್ನು ಕುರಿತು ರಾಜನು ಮತ್ತೆ ಈ ಮಾತನ್ನು ಆಡಿದನು. ಪರ್ವತಶ್ರೇಷ್ಠವಾದ ಕೈಲಾಸವು ಈ ದೇಶದಿಂದ ಅನೇಕ ಸಹಸ್ರ ಯೋಜನ ಪರಿಮಾಣದಷ್ಟು ದೂರದಲ್ಲಿರುವುದು.

ನೈವ ಶಕ್ನೋಽಮ್ಯಹಂ ಗಂತುಂ ಕೈಲಾಸಂ ಶಂಕರಾಲಯಂ ।
ತಸ್ಮಾದ್ವದಧ್ವಂ ಕೈಲಾಸಮುಪಾಯಂ ದ್ರಷ್ಟುಮಂತಿಕೇ ॥ ೧೪ ॥

ಇತಿ ತಸ್ಯ ವಚಃ ಶ್ರುತ್ವಾ ವಿಪ್ರಾಃ ಪ್ರೋಚುಃ ಪುನರ್ನೃಪಂ ।
ಶೃಣು ರಾಜನ್ ವಚೋಽಸ್ಮಾಕಮೇತತ್ತವ ಹಿತಂ ಶುಭಂ ॥ ೧೫ ॥

ಯಥಾ ಪಶ್ಯತಿ ಕೈಲಾಸಂ ಭವಾನತ್ರೈವ ಚಾಂತಿಕೇ ।
ತಥಾ ಸಮ್ಯಗ್ವಿನಿಶ್ಚಿತ್ಯ ವಕ್ಷ್ಯಾಮಸ್ತವ ಪಾರ್ಥಿವ ॥ ೧೬ ॥

ಇತೋಽಸ್ತಿ ದಕ್ಷಿಣೇ ಭಾಗೇ ಪಂಚಾಶದ್ಯೋಜನೇ ಶುಭೇ ।
ಕಾಂಚೀತಿ ಸಮ್ಯಗ್ವಿಖ್ಯಾತಾ ಪುರೀ ಪುಣ್ಯವಿವರ್ಧಿನೀ ॥ ೧೭ ॥

ತತ್ರಾಸ್ತಿ ಪರಮಂ ಸ್ಥಾನಂ ಪುಣ್ಯದಂ ಪಾಪನಾಶನಂ ।
ಕಾಮಕೋಷ್ಠಮಿತಿ ಖ್ಯಾತಂ ಸರ್ವಾಭೀಷ್ಟಪ್ರದಂ ನೃಣಾಂ ॥ ೧೮ ॥

---

೧೪. ಶಂಕರನಿಗೆ ಮನೆಯಾದ ದೂರದಲ್ಲಿದ್ದ ಆ ಕೈಲಾಸಪರ್ವತಕ್ಕೆ ಹೋಗಲು ನಾನು ಶಕ್ತನಾಗಿಲ್ಲ. ಆದುದರಿಂದ ಸಮೀಪದಲ್ಲಿ ಕೈಲಾಸಪರ್ವತವನ್ನು ನೋಡುವಂತೆ ಒಂದು ಉಪಾಯವನ್ನು ಹೇಳಿರಿ.

೧೫. ವಿಪ್ರರು ರಾಜನ ಈ ಮಾತನ್ನು ಕೇಳಿ ಮತ್ತೆ ರಾಜನನ್ನು ಕುರಿತು ಹೇಳಿದರು, ರಾಜನೆ! ನಿನಗೆ ಮಂಗಳಕರವೂ ಹಿತಕರವೂ ಆಗಿರುವ ನಾವಾಡುವ ವಚನವನ್ನು ಕೇಳು.

೧೬. ರಾಜನೆ! ನೀನು ಇಲ್ಲಿಯೇ ಹತ್ತಿರದಲ್ಲಿ ಕೈಲಾಸಪರ್ವತವನ್ನು ಹೇಗೆ ನೋಡಬಹುದೋ, ಆ ರೀತಿಯನ್ನು ನಾವೆಲ್ಲರೂ ಚನ್ನಾಗಿ ಯೋಚಿಸಿ ತೀರ್ಮಾನಿಸಿ ಹೇಳುತ್ತೇವೆ.

೧೭. ಈ ಸ್ಥಳದಿಂದ ದಕ್ಷಿಣದಿಕ್ಕಿನ ಐವತ್ತುಯೋಜನ ದೂರದ ಮಂಗಳ ಪ್ರದೇಶದಲ್ಲಿ ಪುಣ್ಯಪೂಜವನ್ನು ವಿಸ್ತರಿಸುವ ಕಾಂಚೀ ಎಂದು ಬಹು ಪ್ರಖ್ಯಾತವಾದ ನಗರವಿರುವುದು.

೧೮. ಅಲ್ಲಿ ಪಾಪಗಳನ್ನು ನಾಶಮಾಡಿ ಪುಣ್ಯವನ್ನು ಕೊಡುವ ಮತ್ತು ಭಜಿಸಿದ ಮಾನವರ ಸಕಲ ಇಷ್ಟಾರ್ಥಗಳನ್ನು ನೀಡುವ ಕಾಮಕೋಷ್ಠವೆಂದು ಪ್ರಸಿದ್ಧವಾದ ಒಂದು ಉತ್ತಮವಾದ ಸ್ಥಾನವಿದೆ.

ವಿಷ್ಣುಂ ವಾ ತತ್ರ ರುದ್ರಂ ವಾ ಸಂಪೂಜ್ಯ ವಿಧಿವನ್ನರಾಃ ।
ಪ್ರಾಪ್ನುವಂತಿ ಹಿ ಸರ್ವಾರ್ಥಾನ್ ಕ್ಷಿಪ್ರಮೇವ ನ ಸಂಶಯಃ ॥ ೧೯ ॥

ಪರೀಕ್ಷಿತ್ತನಯಃ ಶ್ರೀಮಾನ್ ರಾಜಾಪಿ ಜನಮೇಜಯಃ ।
ಅಭ್ಯೇತ್ಯ ಕಾಂಚೀಂ ಯಜ್ಞೇನ ಸಮ್ಯಗಿಷ್ಟ್ವಾ ಜನಾರ್ದನಂ ॥ ೨೦ ॥

ಲೇಭೇ ಸುಗುಣಸಂಪನ್ನಂ ಕ್ಷೇಮಕಾಖ್ಯಂ ಸುತಂ ಕಿಲ ।
ತಸ್ಮಾತ್ತ್ವಮಪಿ ರಾಜೇಂದ್ರ ಗತ್ವಾ ಕಾಂಚೀಪುರೀಮಿತಃ ॥ ೨೧ ॥

ತಪಸಾ ಪೂಜಯಾ ವಾಪಿ ತೋಷಯಿತ್ವಾ ಪಿನಾಕಿನಂ ।
ಕೈಲಾಸವಾಸಿನಂ ದೇವಂ ತತ್ರ ದ್ರಕ್ಷ್ಯಸಿ ಶಂಕರಂ ॥ ೨೨ ॥

ಇತ್ಯುಕ್ತಃ ಸ ತು ವಿಪ್ರೇಂದ್ರೈ ರಾಜಾ ಸಂತುಷ್ಟಮಾನಸಃ ।
ಪತ್ನ್ಯಾ ಮಂಜುಳಯಾ ಸಾರ್ಧಂ ಬ್ರಾಹ್ಮಣೈಃ ಸಚಿವೈರಪಿ ॥ ೨೩ ॥

---

೧೯. ಮಾನವರು ಆ ನಗರದಲ್ಲಿ ಯಥಾವಿಧಿಯಾಗಿ ವಿಷ್ಣು ಅಥವಾ ರುದ್ರನನ್ನು ಆರಾಧಿಸಿ ಶೀಘ್ರದಲ್ಲಿಯೇ ತಮ್ಮ ಸಕಲ ಇಷ್ಟಾರ್ಥಗಳನ್ನು ಹೊಂದುವರು, ಈ ವಿಷಯದಲ್ಲಿ ಸಂದೇಹವಿಲ್ಲ.

೨೦. ಪರೀಕ್ಷಿದ್ರಾಜನ ಮಗನೂ ಸಂಪತ್ತಿನಿಂದ ಕೂಡಿದವನೂ ಆದ ಜನಮೇಜಯರಾಜನು ಕಾಂಚೀನಗರಕ್ಕೆ ಹೋಗಿ ಅಲ್ಲಿ ಯಾಗಮಾಡಿ ಜನಾರ್ದನಸ್ವಾಮಿಯನ್ನು ಸಂತೋಷಪಡಿಸಿದನು.

೨೧. ರಾಜೇಂದ್ರನೇ! ಜನಮೇಜಯರಾಜನು ಯಾಗದ ಸುಕೃತದಿಂದ ಸುಗುಣಗಳಿಂದ ಕೂಡಿದ ಕ್ಷೇಮಕನೆಂಬ ನಾಮಾಂಕಿತನಾದ ಪುತ್ರನನ್ನು ಹೊಂದಿದನು. ಆದ್ದರಿಂದ ನೀನು ಕೂಡ ಅದರಂತೆ ಸುಕೃತ ಸಂಪಾದನೆಗೆ ಇಲ್ಲಿಂದ ಕಾಂಚೀನಗರಕ್ಕೆ ಪ್ರಯಾಣಮಾಡು.

೨೨. ಆ ಪವಿತ್ರಕ್ಷೇತ್ರದಲ್ಲಿ ತಪಸ್ಸು ಅಥವಾ ಪೂಜೆಗಳಿಂದ ಪಿನಾಕಾಯುಧಧಾರಿಯಾದ ಈಶ್ವರನನ್ನು ಸಂತೋಷಪಡಿಸಿ ಕೈಲಾಸಾಚಲವಾಸಿಯಾದ ಶಂಕರನನ್ನು ಅಲ್ಲಿ ಸಾಕ್ಷಾತ್ಕಾರಮಾಡುತ್ತೀ.

೨೩. ಈ ರೀತಿಯಾಗಿ ವಿಪ್ರೇಂದ್ರರಿಂದ ಬೋಧಿಸಲ್ಪಟ್ಟ ರಾಜನು ಸಂತೋಷಪಟ್ಟ ಮಾನಸವುಳ್ಳವನಾಗಿ ಬ್ರಾಹ್ಮಣರಿಂದಲೂ ಮಂತ್ರಿಗಳಿಂದಲೂ ಮತ್ತು ಪತ್ನಿಯಿಂದಲೂ ಕೂಡಿ ಪ್ರಯಾಣಮಾಡಿದನು.

ಜಗಾಮ ಕಾಂಚೀಂ ವೇಗೇನ ತತ್ರ ಪೂಜಯಿತುಂ ಹರಂ ।
ತತ್ರ ಗತ್ವಾ ಸ ರಾಜೇಂದ್ರಸ್ತೀರ್ಥೇಷು ಕೃತಮಜ್ಜನಃ ॥ ೨೪ ॥

ಸ್ಥಾನಸ್ಯ ಕಾಮಕೋಷ್ಠಸ್ಯ ನೈರ್ಋತ್ಯಾಂ ದಿಶಿ ಸಂಸ್ಥಿತಃ ।
ಪತ್ನ್ಯಾ ಮಂಜುಲಯಾ ಸಾರ್ಧಂ ಚಕಾರ ತಪ ಉತ್ತಮಂ ॥ ೨೫ ॥

ಪುತ್ರಾರ್ಥಂ ದ್ರಷ್ಟುಮನ್ವಿಚ್ಛನ್ ದ್ರಷ್ಟುಂ ಕೈಲಾಸವಾಸಿನಂ ।
ತತಸ್ತಸ್ಯ ಭೃಶಂ ತುಷ್ಟಸ್ತಪಸಾ ವೃಷಭಧ್ವಜಃ ॥ ೨೬ ॥

ತಸ್ಮೈ ಸಂದರ್ಶಯಾಮಾಸ ಕೈಲಾಸಂ ಸ್ವಾಲಯಂ ವಿಭುಃ ।
ಸೋಽಪಶ್ಯತ್ತತ್ರ ಕೈಲಾಸೇ ನಾನಾರತ್ನ ವಿಚಿತ್ರಿತೇ ॥ ೨೭ ॥

ಭದ್ರಪೀಠೇ ಸಮಾಸೀನಮುಮಯಾ ಸಹ ಶಂಕರಂ ।
ಗಂಧರ್ವೈಃ ಪಾರ್ಷದೈಶ್ಚೈವ ಸರ್ವಭೂತಗಣೈರ್ಯುತಂ ॥ ೨೮ ॥

---

೨೪. ಕಾಂಚೀನಗರಕ್ಕೆ ಹೋಗಿ ಅಲ್ಲಿ ಹರನನ್ನು ಪೂಜೆಮಾಡುವುದಕ್ಕೋಸ್ಕರ ಬೇಗ ಕಾಂಚೀನಗರಕ್ಕೆ ಹೋದನು. ಅಲ್ಲಿಗೆ ಹೋಗಿ ಆ ರಾಜೇಂದ್ರನು ತೀರ್ಥಗಳಲ್ಲಿ ಸ್ನಾನಮಾಡಿದನು.

೨೫. ಆ ಕಾಮಕೋಷ್ಠವೆಂಬ ಸ್ಥಾನದ ನೈರ್ಋತ್ಯ ದಿಕ್ಕಿನಲ್ಲಿ ಮಂಜುಲಾ ಪತ್ನಿಯೊಡನೆ ಆ ರಾಜೇಂದ್ರನು ನಿಂತು ಮಹತ್ತರವಾದ ತಪವನ್ನು ಆಚರಿಸಿದನು.

೨೬. ಕೈಲಾಸಾಚಲ ನಿವಾಸಿಯಾದ ಈಶ್ವರನನ್ನು ಪುತ್ರಲಾಭಕ್ಕೋಸ್ಕರ ಪ್ರತ್ಯಕ್ಷವಾಗಿ ಸಂದರ್ಶಿಸಲು ಇಷ್ಟಪಟ್ಟು ತಪವನ್ನು ಮಾಡಿದನು. ಆಗ ಈಶ್ವರನು ಆ ತಪಸ್ಸಿನಿಂದ ಅತ್ಯಂತವಾಗಿ ಸಂತೋಷಪಟ್ಟನು.

೨೭. ಸರ್ವನಿಯಾಮಕನಾದ ಈಶ್ವರನು ತನ್ನ ಆಲಯವಾದ ಕೈಲಾಸವನ್ನು ಆ ರಾಜನಿಗೆ ತೋರಿಸಿದನು. ರಾಜನು ಆ ಕೈಲಾಸಪರ್ವತದಲ್ಲಿ ನಾನಾವಿಧವಾದ ರತ್ನಗಳಿಂದ ಚಿತ್ರಿಸಲ್ಪಟ್ಟ ಆಸನದಲ್ಲಿ ಈಶ್ವರನನ್ನು ನೋಡಿದನು.

೨೮. ಗಂಧರ್ವ, ಪಾರ್ಷದ ಮತ್ತು ಸಕಲ ಭೂತಗಳಿಂದ ಸೇವಿಸಲ್ಪಡುತ್ತ ಪಾರ್ವತೀದೇವಿಯೊಡನೆ ಭದ್ರಪೀಠದಲ್ಲಿ ಕುಳಿತುಕೊಂಡಿರುವ ಈಶ್ವರನನ್ನು ಸಾಕ್ಷಾತ್ಕರಿಸಿದನು.

ಸ ದೃಷ್ಟ್ವಾ ದೇವಮೀಶಾನಂ ಶಂಭುಂ ಕೈಲಾಸವಾಸಿನಂ ।
ಪ್ರಣಮ್ಯ ಪ್ರಾರ್ಥಯಾಮಾಸ ಪತ್ನ್ಯಾ ಸಹ ವಿರೋಚನಃ ॥ ೨೯ ॥

ನಮಸ್ತೇ ದೇವದೇವೇಶ ಕರುಣಾಕರ ಶಂಕರ ।
ಪಾಹಿ ಮಾಂ ಪಾರ್ವತೀನಾಥ ಪ್ರಣತಂ ಶರಣಾಗತಂ ॥ ೩೦ ॥

ಅನಪತ್ಯೋಽಸ್ಮ್ಯಹಂ ತಸ್ಮಾತ್ಪುತ್ರಂ ಮೇ ದಾತುಮರ್ಹಸಿ ।
ಇತಿ ಸ್ತುತಃ ಸ ಭಗವಾನ್ ರುದ್ರಸ್ತಂ ನೃಪಮಬ್ರವೀತ್ ॥ ೩೧ ॥

ಭೃಶಂ ತುಷ್ಟೋಽಸ್ಮ್ಯಹಂ ರಾಜನ್ ತಪಸಾ ತವ ಸುವ್ರತ ।
ಸಂತುಷ್ಟೇನ ಮಯಾ ತುಭ್ಯಂ ಕೈಲಾಸೋಽಪಿ ಪ್ರದರ್ಶಿತಃ ॥ ೩೨ ॥

ಪುತ್ರೌ ಚ ತೇ ಮಹಾಪ್ರಾಜ್ಞ ಬಲಿನೌ ದ್ವೌ ಭವಿಷ್ಯತಃ ।
ಧರ್ಮಜ್ಞೌ ಚ ವದಾನ್ಯೌ ಚ ವಿಷ್ಣುಪಾದಸಮಾಶ್ರಯೌ ॥ ೩೩ ॥

---

೨೯. ಆ ವಿರೋಚನರಾಜನು ಕೈಲಾಸಪರ್ವತದಲ್ಲಿ ವಾಸಿಸುವ, ಸರ್ವೇಶ್ವರನಾದ ಮತ್ತು ಪ್ರಪಂಚ ಸುಖಕಾರಕನಾದ ಈಶ್ವರನನ್ನು ಸಂದರ್ಶಿಸಿ ಪತ್ನಿಯೊಡನೆ ನಮಸ್ಕರಿಸಿ ಪ್ರಾರ್ಥಿಸಿದನು.

೩೦. ದೇವಾಧಿದೇವನೆ! ಕರುಣಾಸಮುದ್ರನೆ! ಶಂಕರನೆ! ನಿನ್ನನ್ನು ವಂದಿಸುವೆನು. ಪಾರ್ವತೀ ಪ್ರಿಯನೆ! ನಿನ್ನನ್ನು ನಮಸ್ಕರಿಸಿದವನೂ ಶರಣಾಗತನೂ ಆದ ನನ್ನನ್ನು ಪಾಲಿಸು.

೩೧. ನಾನು ಸಂತತಿಯಿಲ್ಲದವನಾಗಿ ದುಃಖಿತನಾಗಿರುವೆನು. ಆದ್ದರಿಂದ ನನಗೆ ಪುತ್ರಲಾಭವನ್ನು ಅನುಗ್ರಹಿಸಬೇಕು. ಈ ರೀತಿಯಾಗಿ ಸ್ತುತಿಸಲ್ಪಟ್ಟ ಭಗವಂತನಾದ ರುದ್ರನು ಆ ರಾಜನನ್ನು ಕುರಿತು ಈ ರೀತಿಯಾಗಿ ಹೇಳಿದನು.

೩೨. ವ್ರತಾನುಷ್ಠಾನ ಪರನಾದ ರಾಜನೇ! ನೀನು ಆಚರಿಸಿದ ತಪಸ್ಸಿನಿಂದ ನಾನು ಅತ್ಯಂತ ತುಷ್ಟನಾಗಿರುವೆನು. ಸಂತುಷ್ಟನಾದ ನಾನು ನಿನಗೆ ನನ್ನ ಆವಾಸವಾದ ಕೈಲಾಸಪರ್ವತವನ್ನು ತೋರಿಸಿರುವೆನು.

೩೩. ಮಹಾಪ್ರಜ್ಞಾಶಾಲಿಯಾದ ರಾಜನೆ! ನಿನಗೆ ಧರ್ಮವನ್ನು ಅರಿತವರೂ, ವಿತರಣಶೀಲವುಳ್ಳವರೂ, ವಿಷ್ಣುಚರಣಕಮಲಗಳನ್ನು ಸೇವಿಸುವವರೂ ಆದ ಬಲಿಷ್ಠರಾದ ಇಬ್ಬರು ಪುತ್ರರು ಜನಿಸುವರು.

ಕೇನ ಚಿತ್ತ್ವಥ ಕಾಲೇನ ತಾವಸ್ಯತ್ರಾಗಮಿಷ್ಯತಃ ।
ಯಕ್ಷ್ಯಂತೌ ಹಯಮೇಧೇನ ವಿಷ್ಣುಂ ಲೋಕೇಶ್ವರಂ ಹರಿಂ ॥ ೩೪ ॥

ತಯೋರನುಗ್ರಹಾರ್ಥಾಯ ವಿಷ್ಣುಸ್ತ್ವತ್ಪುತ್ರಯೋರಿಹ ।
ದರ್ಶಯಿಷ್ಯತಿ ವೈಕುಂಠಂ ಭಕ್ತಯೋಸ್ಸ್ವಾಲಯಂ ಭುವಿ ॥ ೩೫ ॥

ಅಹಂ ಚಾಪ್ಯತ್ರ ಕೈಲಾಸೇ ತುಭ್ಯಂ ಸಂದರ್ಶಿತೇ ಮಯಾ ।
ವಸಾಮಿ ಸತತಂ ಕಾಂಚ್ಯಾಂ ನರಾಣಾಂ ಹಿತಕಾಮ್ಯಯಾ ॥ ೩೬ ॥

ಯೇ ವಾ ಮಾಮತ್ರ ಪಶ್ಯಂತಿ ಕಾಂಚ್ಯಾಂ ಕೈಲಾಸನಾಯಕಂ ।
ತೇಷಾಮಹಂ ಪ್ರದಾಸ್ಯಾಮಿ ಪುತ್ರಪೌತ್ರಾದಿಸಂಪದಂ ॥ ೩೭ ॥

ತ್ವಂ ಚಾಪಿ ಭಾರ್ಯಯಾ ಸಾರ್ಧಮನಯಾ ಮಂಜುಲಾಖ್ಯಯಾ ।
ಅತ್ರೈವ ಸತತಂ ಲಿಂಗೇ ಮಾಂ ಸಮ್ಯಗಭಿಷೇಚಯ ॥ ೩೮ ॥

---

೩೪. ಕೆಲವು ಕಾಲ ಕಳೆದ ತರುವಾಯ ಆ ನಿನ್ನ ಇಬ್ಬರು ಪುತ್ರರು ಇಲ್ಲಿಗೆ ಬರುವರು. ಮತ್ತು ಲೋಕಗಳಿಗೆಲ್ಲ ಈಶ್ವರನೂ ವ್ಯಾಪಕನೂ ಆದ ಹರಿಯನ್ನು ಕುರಿತು ಅಶ್ವಮೇಧಯಾಗವನ್ನು ಅನುಷ್ಠಾನಮಾಡುವರು.

೩೫. ಅವರಿಂದ ಪ್ರಸನ್ನನಾದ ವಿಷ್ಣುವು ಪರಮಭಕ್ತರಾದ ನಿನ್ನ ಇಬ್ಬರು ಪುತ್ರರಿಗೆ ಭೂಲೋಕದಲ್ಲಿ ತನ್ನ ಆಲಯವಾದ ವೈಕುಂಠಲೋಕವನ್ನು ತೋರಿಸುವನು.

೩೬. ನಾನು ನಿನಗೆ ನನ್ನ ಆವಾಸವಾದ ಕೈಲಾಸವನ್ನು ತೋರಿಸಿದನಂತರ ದಲ್ಲಿ ನರರಿಗೆ ಸಂತತವೂ ಹಿತವನ್ನು ಮಾಡಬೇಕೆಂದು ಅಭಿಲಾಷೆಯಿಂದ ಕಾಂಚಿ ಯಲ್ಲಿ ವಾಸಮಾಡುವೆನು.

೩೭. ಈ ಕಾಂಚೀನಗರದಲ್ಲಿ ಕೈಲಾಸಾಚಲಕ್ಕೆ ಈಶ್ವರನಾದ ನನ್ನನ್ನು ಯಾರು ಸಂದರ್ಶಿಸುವರೋ ಅಂತಹ ಭಕ್ತರಿಗೆ ನಾನು ಪುತ್ರ, ಪೌತ್ರ ಮುಂತಾದ ಸಂಪತ್ತನ್ನು ಅನುಗ್ರಹಿಸುವೆನು.

೩೮. ನೀನು ಕೂಡ ನಿನ್ನ ಮಂಜುಳಾ ಎಂಬ ಹೆಸರಿನ ಈ ಭಾರ್ಯೆ ಯೊಂದಿಗೆ ಈ ಲಿಂಗದಲ್ಲಿ ನನ್ನನ್ನು ಯಾವಾಗಲೂ ಭಕ್ತಿಯಿಂದ ಅಭಿಷೇಕವನ್ನು ಮಾಡು.

ಪಂಚಾಮೃತೈಶ್ಚ ಶುದ್ಧೋದೈರ್ವರ್ಷಮೇಕಂ ನಿರಂತರಂ ।
ತತಃ ಸಂವತ್ಸರಸ್ಯಾಂತೇ ಪುತ್ರೌ ದ್ವೌ ತೇ ಭವಿಷ್ಯತಃ ॥ ೩೯ ॥

ಪುತ್ರಾಭ್ಯಾಂ ಸಹಿತಶ್ಚೈವ ಸ್ವಾಂ ಪುರೀಂ ಗಂತುಮರ್ಹಸಿ ।
ಇತಿ ದತ್ವಾ ವರಂ ತಸ್ಮೈ ಶಂಭುಃ ಕೈಲಾಸನಾಯಕಃ ॥ ೪೦ ॥

ತತ್ರೈವ ಕಾಂಚ್ಯಾಂ ನ್ಯವಸತ್ ಸಹ ಸರ್ವೈಶ್ಚ ಪಾರ್ಷದೈಃ ।
ತತೋ ವಿರೋಚನೋ ಹೃಷ್ಟಸ್ತತ್ರ ದೇವಸ್ಯ ಶೂಲಿನಃ ॥ ೪೧ ॥

ಚಕ್ರೇಽಭಿಷೇಚನಂ ಭಕ್ತ್ಯಾ ವರ್ಷಮೇಕಮಹರ್ನಿಶಂ ।
ಕುಂಭೇನ ಜಲಮಾಹೃತ್ಯ ರಾಜಭಾರ್ಯಾಪಿ ಮಂಜುಲಾ ॥ ೪೨ ॥

ಪ್ರದದಾವಭಿಷೇಕಾರ್ಥಮನಿಶಂ ಭಕ್ತಿಸಂಯುತಾ ।
ಅಭಿಷೇಕೋದಕೈಸ್ತತ್ರ ಜಜ್ಞೇ ಸ್ರೋತಃ ಸುಪಾವನಂ ॥ ೪೩ ॥

---

೩೯. ಪಂಚಾಮೃತಗಳಿಂದಲೂ ಶುದ್ಧೋದಕಗಳಿಂದಲೂ ಒಂದು ವರ್ಷಕಾಲ ನಿರಂತರವಾಗಿ ನೀನು ನನಗೆ ಅಭಿಷೇಕವನ್ನು ಮಾಡಿದರೆ ವರ್ಷದ ಅಂತದಲ್ಲಿ ಇಬ್ಬರು ಪುತ್ರರು ಜನಿಸುತ್ತಾರೆ.

೪೦. ಪುತ್ರರಿಂದ ಸಹಿತನಾಗಿಯೇ ಇಲ್ಲಿಂದ ನಿನ್ನ ಪಟ್ಟಣಕ್ಕೆ ಪ್ರಯಾಣ ಮಾಡಲು ಅರ್ಹನಾಗಿದ್ದಿ, ಎಂಬುದಾಗಿ ಕೈಲಾಸಪರ್ವತದ ನಾಯಕನಾದ ಶಂಭುವು ಆ ರಾಜನಿಗೆ ವರವನ್ನು ಕೊಟ್ಟನು.

೪೧. ಹೀಗೆ ವರವನ್ನು ಕೊಟ್ಟು ತನ್ನ ಸಕಲ ಪಾರ್ಷದರೊಂದಿಗೆ ಈಶ್ವರನು ಕಾಂಚಿಯಲ್ಲಿ ವಾಸಮಾಡಿದನು. ಅನಂತರದಲ್ಲಿ ವಿರೋಚನರಾಜನು ಶಂಕರನ ವರ ಪ್ರಸಾದದಿಂದ ಸಂತುಷ್ಟನಾದನು.

೪೨. ಮತ್ತು ಒಂದು ವರ್ಷಕಾಲ ಸಂತತವಾಗಿ ಭಕ್ತಿಯಿಂದ ಈಶ್ವರನಿಗೆ ಅಭಿಷೇಕವನ್ನು ಮಾಡಿದನು. ಈ ಅಭಿಷೇಕ ಕಾರ್ಯದಲ್ಲಿ ಮಂಜುಲಾ ಎಂಬ ಅವನ ಪತ್ನಿಯು ಸಹಾಯಕಳಾಗಿದ್ದಳು.

೪೩. ಮಂಜುಲೆಗೆ ಅಭಿಷೇಕಕ್ಕೆ ಕುಂಭದಿಂದ ಜಲವನ್ನು ತಂದಿರಿಸುವುದು ಕಾರ್ಯವಾಗಿತ್ತು. ಅವಳು ಭಕ್ತಿಯಿಂದ ಕೂಡಿ ಹಗಲು ಮತ್ತು ರಾತ್ರಿ ಸರ್ವ ಕಾಲ ದಲ್ಲಿಯೂ ಆ ಕಾರ್ಯವನ್ನು ಮಾಡಿದಳು. ಈ ಅಭಿಷೇಕದ ತೀರ್ಥದಿಂದ ಪವಿತ್ರ ವಾದ ಒಂದು ಪ್ರವಾಹವು ಜನಿಸಿತು.

ತದೇವ ಮಂಜುಲಾಖ್ಯಾಭೂನ್ನದೀ ತತ್ರ ಸುಪಾವನೀ ।
ತೋಯೈರ್ಮಂಜುಲಯಾ ನೀತೈರ್ಯದ್ರುದ್ರಮಭಿಷಿಕ್ತವಾನ್ ॥ ೪೪ ॥

ತಸ್ಮಾತ್ತಾಂ ಮಂಜುಲಾಂ ಪ್ರಾಹುರಭಿಷೇಕೋದವಾಹಿನೀಂ ।
ತತಸ್ಸಂವತ್ಸರಸ್ಯಾಂತೇ ಮಂಜುಲಾಯಾಂ ನೃಪೋತ್ತಮ ॥ ೪೫ ॥

ಕೃಪಯಾ ದೇವದೇವಸ್ಯ ದ್ವೌ ಪುತ್ರೌ ಸಂಬಭೂವತುಃ ।
ಪಲ್ಲವೋ ವಿಲ್ಲವಶ್ಚೇತಿ ಮನ್ಮಥಾವಿವ ರೂಪಿಣೌ ॥ ೪೬ ॥

ಯೌ ವೈಕುಂಠೇ ಪುರಾದ್ವಾಸ್ಥಾವಭೂತಾಂ ವಿಷ್ಣುಮಂದಿರೇ ।
ಜಯಶ್ಚ ವಿಜಯಶ್ಚೇತಿ ಶಂಖಚಕ್ರಗದಾಧರೌ ॥ ೪೭ ॥

ತೌ ಪೂರ್ವದ್ವಾರಪೌ ವಿಷ್ಣೋರಾಸ್ತಾಮಾದೌ ಕೃತೇ ಯುಗೇ ।
ಕದಾಚಿತ್ತತ್ರ ದೇವೇಶಂ ದ್ರಷ್ಟುಂ ಪ್ರವಿಶತೋ ಮುನೀನ್ ॥ ೪೮ ॥

---

೪೪. ಮಂಜುಲೆಯಿಂದ ತರಲ್ಪಟ್ಟ ಜಲಗಳಿಂದ ರುದ್ರನನ್ನು ಅಭಿಷೇಕಮಾಡಿದಾಗ ಆ ಜಲವು ಪವಿತ್ರವೂ ಮತ್ತು ಮಂಜುಲಾ ಎಂಬ ನಾಮಾಂಕಿತವೂ ಆದ ನದಿಯಾಗಿ ಹರಿಯಿತು.

೪೫. ಆದುದರಿಂದ ಆ ಅಭಿಷೇಕದ ಜಲದ ಪ್ರವಾಹವನ್ನು ಮಂಜುಲಾ ನದಿಯೆಂದು ಕರೆಯುತ್ತಾರೆ. ರಾಜಶ್ರೇಷ್ಠನೆ, ಹೀಗೆ ಒಂದು ವರ್ಷವು ಪೂರ್ತಿಯಾಗಿ ಕಳೆದ ತರುವಾಯ ಮಂಜುಳಾಂಬೆಯು ಇಬ್ಬರು ಪುತ್ರರನ್ನು ಪ್ರಸವಿಸಿದಳು.

೪೬. ದೇವೋತ್ತಮನಾದ ಶಿವನ ಪ್ರಸಾದದಿಂದ ಮಂಜುಲೆಯಲ್ಲಿ ಇಬ್ಬರು ಪುತ್ರರು ಹುಟ್ಟಿದರು. ಅವರು ಮನ್ಮಥನಂತೆ ರೂಪವಂತರೂ ಮತ್ತು ಪಲ್ಲವ, ವಿಲ್ಲವ ಎಂಬ ನಾಮಾಂಕಿತರೂ ಆಗಿದ್ದರು.

೪೭. ಪೂರ್ವದಲ್ಲಿ ವೈಕುಂಠಲೋಕದ ವಿಷ್ಣುಮಂದಿರದಲ್ಲಿ ಇಬ್ಬರು ಜಯ-ವಿಜಯರೆಂಬ ನಾಮದಿಂದ ಪ್ರಸಿದ್ಧರೂ ಶಂಖ-ಚಕ್ರ-ಗದೆಗಳಿಂದ ಅಲಂಕೃತರೂ ಆದ ದ್ವಾರಪಾಲಕರಿದ್ದರಷ್ಟೆ.

೪೮. ಅವರು ಕೃತಯುಗದ ಆದಿಯಲ್ಲಿ ವಿಷ್ಣುಮಂದಿರದ ಪೂರ್ವದ್ವಾರದ ರಕ್ಷಕರಾಗಿದ್ದರು. ಆಗ ಒಂದಾನೊಂದು ವೇಳೆಯಲ್ಲಿ ದೇವೇಶ್ವರನಾದ ವಿಷ್ಣುವನ್ನು ಸಂದರ್ಶಿಸಲು ಮಹರ್ಷಿಗಳು ವಿಷ್ಣುಮಂದಿರಕ್ಕೆ ಪ್ರವೇಶಮಾಡಿದರು.

ವಾರಯಾಮಾಸತುರ್ವಿಪ್ರಾನ್ ಸನಕಾದೀಂಶ್ಚ ಯೋಗಿನಃ ।
ತೇ ವೈ ಶೇಪುಸ್ತದಾ ದ್ವಾಸ್ಥೌ ಪ್ರೇರಿತೌ ತತ್ರ ವಿಷ್ಣುನಾ ॥ ೪೯ ॥

ಯುವಾಮಿಹಾಪ್ರಪತಿತೌ ಸದ್ಯೋ ಭವತಮಾಸುರೌ ।
ಪುನಶ್ಚ ರಾಕ್ಷಸೌ ವಾಪಿ ರಾಜಾನೌ ಚ ಭವಿಷ್ಯತಃ ॥ ೫೦ ॥

ಏವಂ ತ್ರಿಜನ್ಮಸು ಯುವಾಂ ವಿಷ್ಣುದ್ವೇಷಪರಾಯಣೌ ।
ತತ್ರಾಯಮೇವೈತ್ಯ ಹರಿರ್ಹನಿಷ್ಯತಿ ಯುವಾಂ ಮೃಧೇ ॥ ೫೧ ॥

ಇತಿ ಶಪ್ತೌ ತದಾ ವಿಪ್ರೈರ್ದ್ವಾರಪೌ ಸನಕಾದಿಭಿಃ ।
ತತ್ರ ದೃಷ್ಟ್ವಾ ರಮಾನಾಥಂ ಪ್ರಾರ್ಥಯಾಮಾಸತುರ್ನೃಪ ॥ ೫೨ ॥

ಪಾಹಿ ನೌ ದೇವ ಸಂಶಪ್ತೌ ತ್ವದ್ಭಕ್ತೈಃ ಸನಕಾದಿಭಿಃ ।
ಯಥಾ ನೌ ನ ಭವೇಜ್ಜನ್ಮ ರಕ್ಷೋಽಸುರನರಾತ್ಮಕಂ ॥ ೫೩ ॥

---

೪೯. ಆಗ ಜಯವಿಜಯರು ಪ್ರವೇಶಮಾಡುತ್ತಲಿರುವ ಸನಕ ಮುಂತಾದ ಯೋಗಿವರ್ಯರಾದ ವಿಪ್ರರನ್ನು ತಡೆಗಟ್ಟಿದರು. ಆಗ ವಿಷ್ಣುವಿನಿಂದ ಪ್ರೇರೇಪಿತರಾಗಿ ತಡೆಮಾಡಿದ ದ್ವಾರಪಾಲಕರನ್ನು ಆ ವಿಪ್ರರು ಶಪಿಸಿದರು.

೫೦. ನೀವು ನಮ್ಮನ್ನು ತಡೆಗಟ್ಟಿದ್ದರ ಪರಿಣಾಮದಿಂದ ಒಡನೆಯೇ ಅಸುರ ಜನ್ಮವನ್ನೂ ಮತ್ತೆ ರಾಕ್ಷಸ ಜನ್ಮವನ್ನೂ ಕಡೆಯದಾಗಿ ರಾಜಜನ್ಮವನ್ನೂ ಹೊಂದಿರಿ.

೫೧. ಈ ರೀತಿಯಾಗಿ ಮೂರು ಜನ್ಮಗಳಲ್ಲಿ ನೀವು ವಿಷ್ಣುದ್ವೇಷವನ್ನು ಆಸಕ್ತಿಯಿಂದ ಆಚರಿಸುತ್ತೀರಿ. ಆಗ ಈ ಹರಿಯು ಪ್ರತ್ಯಕ್ಷನಾಗಿ ಬಂದು ಯುದ್ಧದಲ್ಲಿ ನಿಮ್ಮನ್ನು ಸಂಹರಿಸುವನು.

೫೨. ರಾಜನೆ! ಆಗ ಸನಕಾದಿ ವಿಪ್ರರಿಂದ ಈ ರೀತಿಯಾಗಿ ಶಪಿಸಲ್ಪಟ್ಟ ದ್ವಾರಪಾಲಕರು ಅಲ್ಲಿ ಲಕ್ಷ್ಮೀಪತಿಯಾದ ನಾರಾಯಣನನ್ನು ಕಂಡು ಪ್ರಾರ್ಥಿಸಿಕೊಂಡರು.

೫೩. ಸ್ವಾಮಿಯೇ! ನಿನ್ನ ಭಕ್ತರಾದ ಸನಕಾದಿ ಮಹರ್ಷಿಗಳಿಂದ ನಮ್ಮ ವಿಧಿಯ ಪರಿಪಾಕದಿಂದ ಶಪ್ತರಾಗಿರುವ ನಮ್ಮನ್ನು ರಕ್ಷಿಸು. ನಮಗೆ ಶಾಪದಿಂದ ರಾಕ್ಷಸ-ಅಸುರ ಮತ್ತು ಮಾನವರ ಜನ್ಮವು ಉಂಟಾಗದಂತೆ ಮಾಡು ಎಂದು ಪ್ರಾರ್ಥಿಸಿದರು.

ತಥಾ ಕುರು ದಯಾಂ ಕ್ಷಿಪ್ರಮಾವಯೋಃ ಶರಣೈಷಿಣೋಃ ।
ಇತಿ ಸಂಪ್ರಾರ್ಥಿತಸ್ತಾಭ್ಯಾಂ ಪ್ರೋವಾಚ ದ್ವಾರಪೌ ಹರಿಃ ॥ ೫೪ ॥

ಶಾಪೋ ಯುವಾಭ್ಯಾಂ ಯೋ ದತ್ತೋ ಮದ್ಭಕ್ತೈಃ ಸನಕಾದಿಭಿಃ ।
ಸ ತಥೈವಾನುಭೋಕ್ತವ್ಯೋ ಭವದ್ಭ್ಯಾಂ ನಾತ್ರ ಸಂಶಯಃ ॥ ೫೫ ॥

ಕೃತೇ ಯುಗೇ ಯುವಾಂ ಭೂಮಾವಸುರೌ ದ್ವೌ ಭವಿಷ್ಯತಃ ।
ತ್ರೇತಾಯಾಂ ರಾಕ್ಷಸೌ ಚಾಪಿ ದ್ವಾಪರೇ ಮನುಜೌ ತಥಾ ॥ ೫೬ ॥

ತತ್ರಾಹಮೇವ ವಾಮೇತ್ಯ ಹನಿಷ್ಯಾಮಿ ತ್ರಿಜನ್ಮಸು ।
ಚತುರ್ಥೇ ಜನ್ಮನಿ ಪುನರ್ಯುವಾಂ ಭೂಮೌ ಜನಿಷ್ಯಥಃ ॥ ೫೭ ॥

ಪಲ್ಲವೋ ವಿಲ್ಲವಶ್ಚೇತಿ ವಿದರ್ಭೇಷು ನೃಪೋತ್ತಮೌ ।
ಭವಿಷ್ಯತಶ್ಚ ಮದ್ಭಕ್ತೌ ವದಾನ್ಯೌ ಬ್ರಹ್ಮವಿತ್ತಮೌ ॥ ೫೮ ॥

---

೫೪. ಶರಣಾಗತರಾದ ನಮಗೆ ಶಾಪದಿಂದ ಯಾವ ಅಧೋಗತಿಯೂ ಉಂಟಾಗದಂತೆ ಬೇಗ ನಮ್ಮಲ್ಲಿ ದಯೆ ತೋರಿಸಬೇಕೆಂದು ಆ ಜಯವಿಜಯರಿಂದ ಪ್ರಾರ್ಥಿಸಲ್ಪಟ್ಟ ಹರಿಯು ಅವರನ್ನು ಕುರಿತು ಇಂತೆಂದನು.

೫೫. ನನ್ನ ಭಕ್ತಾಗ್ರೇಸರರಾದ ಸನಕಾದಿ ಯೋಗಿಗಳಿಂದ ನಿಮಗೆ ಯಾವ ಶಾಪವು ಕೊಡಲ್ಪಟ್ಟಿರುವುದೋ ಅದನ್ನು ನೀವು ಅವಶ್ಯವಾಗಿ ಅನುಭವಿಸಲೇಬೇಕು, ಈ ವಿಷಯದಲ್ಲಿ ಸಂಶಯವಿಲ್ಲ.

೫೬. ನೀವು ಈ ಶಾಪಪ್ರಭಾವದಿಂದ ಕೃತಯುಗದಲ್ಲಿ ಅಸುರರಾಗಿ ಭೂಮಿಯಲ್ಲಿ ಜನಿಸುತ್ತೀರಿ. ಹಾಗೆಯೇ ತ್ರೇತಾಯುಗದಲ್ಲಿ ರಾಕ್ಷಸರಾಗಿ ಹುಟ್ಟಿ ದ್ವಾಪರ ಯುಗದಲ್ಲಿ ಮನುಷ್ಯ ಜನ್ಮವನ್ನು ಸ್ವೀಕರಿಸುತ್ತೀರಿ.

೫೭. ಆ ಮೂರು ಜನ್ಮಗಳಲ್ಲಿ ನಾನು ನಿಮ್ಮ ಬಳಿಗೆ ಬಂದು ನಿಮ್ಮನ್ನು ಸಂಹರಿಸುತ್ತೇನೆ. ಆ ಮೂರು ಜನ್ಮಗಳನ್ನು ಕಳೆದು ನಾಲ್ಕನೆಯ ಜನ್ಮದಲ್ಲಿ ಮತ್ತೆ ಭೂಮಿಯಲ್ಲಿ ಮನುಷ್ಯರಾಗಿ ಹುಟ್ಟುತ್ತೀರಿ.

೫೮. ಆ ನಾಲ್ಕನೆಯ ಜನ್ಮದಲ್ಲಿ ವಿದರ್ಭದೇಶದಲ್ಲಿ ಶ್ರೇಷ್ಠರಾದ ಬ್ರಹ್ಮಜ್ಞಾನಿಗಳೂ, ಉದಾರಶೀಲರೂ, ನನ್ನ ಭಕ್ತರೂ ಆದ "ಪಲ್ಲವ, ವಿಲ್ಲವ" ಎಂಬ ಸಂಜ್ಞಾಂಕಿತರಾದ ಶ್ರೇಷ್ಠ ರಾಜರಾಗಿ ಹುಟ್ಟುತ್ತೀರಿ.

ಯುವಾಂ ತತ್ರಾಶ್ವಮೇಧೇನ ಕ್ಷೇತ್ರೇ ಮತ್ಪ್ರೀತಿವರ್ಧನೇ ।
ಸಹಿತೌ ಸರ್ವವಿಪ್ರೇಂದ್ರೈರ್ಮಾಮುದ್ದಿಶ್ಯ ಯಜಿಷ್ಯಥಃ ॥ ೫೯ ॥

ತದಾ ವೈಕುಂಠಭವನಂ ತತ್ರ ವಾಂ ದರ್ಶಯಾಮ್ಯಹಂ ।
ತತ್ರೈವ ಪಾರ್ಷದೌ ಭೂಯೋ ಯುವಾಂ ಮಮ ಭವಿಷ್ಯಥಃ ॥ ೬೦ ॥

ಇತಿ ಲಬ್ಧವರೌ ರಾಜನ್ ವಿಷ್ಣುತೋ ದ್ವಾರಪೌ ಪುರಾ ।
ತತಸ್ತಾವನುಭೂಯೈವ ಜನ್ಮಾನಿ ತ್ರೀಣಿ ಭೂತಲೇ ॥ ೬೧ ॥

ಚತುರ್ಥೇ ಜನ್ಮನಿ ಪುನಸ್ತಾವೇವೈ ಬಭೂವತುಃ ।
ಪಲ್ಲವೋ ವಿಲ್ಲವಶ್ಚೇತಿ ಮಂಜುಳಾತನಯೌ ನೃಪ ॥ ೬೨ ॥

ವಿರೋಚನೋಽಥ ವೈದರ್ಭಃ ಪತ್ನ್ಯಾ ಮಂಜುಳಯಾ ಸಹ ।
ನನಂದ ತನಯೌ ಲಬ್ಧ್ವಾ ಕಾಂಚ್ಯಾಂ ಶಂಭೋರನುಗ್ರಹಾತ್ ॥ ೬೩ ॥

---

೫೯. ಆಗ ನೀವು ನನಗೆ ವಿಶೇಷ ಪ್ರೀತಿಕರವಾದ ಕ್ಷೇತ್ರದಲ್ಲಿ ಅನೇಕ ಬ್ರಾಹ್ಮಣೋತ್ತಮರಿಂದ ಕೂಡಿ ನನ್ನನ್ನು ಉದ್ದೇಶಿಸಿ ಅಶ್ವಮೇಧಯಾಗವನ್ನು ಮಾಡಿ ನನ್ನನ್ನು ಪೂಜಿಸುತ್ತೀರಿ.

೬೦. ಆ ಸಮಯದಲ್ಲಿ ನಾನು ಅಲ್ಲಿಯೇ ವೈಕುಂಠಲೋಕವನ್ನು ತೋರಿಸುವೆನು. ಆಗ ನೀವು ಅಲ್ಲಿಯೇ ಮತ್ತೆ ನನಗೆ ಪಾರ್ಷದರಾಗಿ ನನ್ನ ಪರಿವಾರದಲ್ಲಿ ಸೇರಿ ಇರುತ್ತೀರಿ.

೬೧. ರಾಜನೆ! ಪೂರ್ವದಲ್ಲಿ ವಿಷ್ಣುವಿನಿಂದ ಈ ರೀತಿಯಾಗಿ ವರಗಳನ್ನು ಹೊಂದಿರುವ ಇಬ್ಬರು ದ್ವಾರಪಾಲಕರು ಭೂತಲದಲ್ಲಿ ಕ್ರಮವಾಗಿ ಅಸುರ-ರಾಕ್ಷಸ-ಮಾನವ ಜನ್ಮಗಳನ್ನು ಕಳೆದರು.

೬೨. ರಾಜೇಂದ್ರನೇ! ಚತುರ್ಥಜನ್ಮದಲ್ಲಿ ಆ ಇಬ್ಬರು ದ್ವಾರಪಾಲಕರು ಪಲ್ಲವ ವಿಲ್ಲವನೆಂಬ ಹೆಸರಿನಿಂದ ಮಂಜುಳಾಪುತ್ರರಾಗಿ ಜನಿಸಿದರು.

೬೩. ಅನಂತರದಲ್ಲಿ ವಿದರ್ಭದೇಶಾಧಿಪತಿಯಾದ ವಿರೋಚನನು ಶಂಕರನ ಅನುಗ್ರಹದಿಂದ ಕಾಂಚೀನಗರದಲ್ಲಿ ಇಬ್ಬರು ಪುತ್ರರನ್ನು ಹೊಂದಿ ಮಂಜುಳಾ ಪತ್ನಿಯೊಡಗೂಡಿ ಆನಂದವನ್ನು ಅನುಭವಿಸಿದನು.

ತತಸ್ತಸ್ಯಾಜ್ಞಯಾ ಶಂಭೋಃ ಪುತ್ರಾಭ್ಯಾಂ ಸಹಿತೋ ನೃಪಃ ।
ಗತ್ವಾ ಸ್ವರಾಜ್ಯೇ ತೌ ಪುತ್ರಾವಭಿಷಿಚ್ಯ ವಿರೋಚನಃ ॥ ೬೪ ॥

ಪತ್ನ್ಯಾ ಮಂಜುಳಯಾ ಸಾರ್ಧಂ ಕೈಲಾಸಂ ಪ್ರಯಯೌ ನೃಪಃ ।
ತತಃ ಸಂಪ್ರಾಪ್ಯ ತೌ ರಾಜ್ಯಂ ತದಾ ಪಲ್ಲವವಿಲ್ಲವೌ ॥ ೬೫ ॥

ಬ್ರಹ್ಮಣ್ಯೌ ಚ ವದಾನ್ಯೌ ಚ ವಿಷ್ಣುಭಕ್ತೌ ಬಭೂವತುಃ ।
ಕಲೌ ಯುಗೇ ತು ಸಂಪ್ರಾಪ್ತೇ ಕಾಂಚೀಮೇತ್ಯ ಚ ತಾವುಭೌ ॥ ೬೬ ॥

ಅಶ್ವಮೇಧೇನ ಯಜ್ಞೇನ ತತ್ರ ವಿಷ್ಣುಂ ಯಜಿಷ್ಯತಃ ।
ತೇನ ಯಜ್ಞೇನ ಸಂತುಷ್ಟೋ ವಿಷ್ಣುರ್ವೈಕುಂಠನಾಯಕಃ ॥ ೬೭ ॥

ತಯೋರ್ದ್ವಾರಪಯೋಃ ಪೂರ್ವಂ ಶಪ್ತಯೋಃ ಸನಕಾದಿಭಿಃ ।
ಕಾಂಚ್ಯಾಂ ವೈಕುಂಠಭವನಂ ಸ್ವಾಲಯಂ ದರ್ಶಯಿಷ್ಯತಿ ॥ ೬೮ ॥

---

೬೪. ತರುವಾಯ ವಿರೋಚನರಾಜನು ಆ ತನ್ನ ಪೂಜ್ಯದೇವತೆಯಾದ ಈಶ್ವರನ ಆಜ್ಞೆಯಿಂದ ಪುತ್ರರಿಂದ ಕೂಡಿ ತನ್ನ ರಾಜ್ಯಕ್ಕೆ ಹೋಗಿ ಆ ಪುತ್ರರಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜ್ಯವನ್ನು ಒಪ್ಪಿಸಿದನು.

೬೫. ಮತ್ತು ತನ್ನ ಕೃತ್ಯವನ್ನು ಸಾಧಿಸಿ ಮಂಜುಳಾಪತ್ನಿಯೊಡನೆ ಕೈಲಾಸಲೋಕಕ್ಕೆ ತೆರಳಿದನು. ಆಗ ಆ ಪಲ್ಲವ ವಿಲ್ಲವರು ಸ್ವತಂತ್ರವಾಗಿ ರಾಜ್ಯಾಧಿಕಾರವನ್ನು ಹೊಂದಿದರು.

೬೬. ಅವರು ಕೂಡ ಬ್ರಹ್ಮವಾದಿಗಳೂ ವಿತರಣಸ್ವಭಾವವುಳ್ಳವರೂ ಮತ್ತು ವಿಷ್ಣುಭಕ್ತರೂ ಆಗಿದ್ದರು. ಅವರು ಹಾಗೆಯೇ ಕಲಿಯುಗವು ಪ್ರಾಪ್ತವಾಗಲು ಕಾಂಚೀನಗರಕ್ಕೆ ಬರುವರು.

೬೭. ಮತ್ತು ಅಲ್ಲಿ ಅಶ್ವಮೇಧಯಾಗವನ್ನು ಮಾಡಿ ವಿಷ್ಣುಪರಮಾತ್ಮನನ್ನು ಪೂಜಿಸುವರು. ವೈಕುಂಠಲೋಕದ ನಾಯಕನಾದ ವಿಷ್ಣುವು ಆ ಯಜ್ಞಾಚರಣೆಯಿಂದ ಸಂತುಷ್ಟನಾಗುವನು.

೬೮. ಪೂರ್ವಕಾಲದಲ್ಲಿ ಸನಕಾದಿಯೋಗಿಗಳಿಂದ ಶಪಿಸಲ್ಪಟ್ಟ ಇಬ್ಬರು ದ್ವಾರಪಾಲಕರಿಗೆ ಹರಿಯು ಕಾಂಚೀನಗರದಲ್ಲಿ ತನ್ನ ವಾಸಭೂಮಿಯಾದ ವೈಕುಂಠವನ್ನು ತೋರಿಸುವನು.

ವೈಕುಂಠೇ ಯಾ ನದೀ ಪುಣ್ಯಾ ವಿರಜಾಖ್ಯಾ ಸುಪಾವನೀ ।
ಸಾಪಿ ತತ್ರಾಶ್ವಮೇಧಾಂತೇ ವೇದ್ಯಾಮಾವಿರ್ಭವಿಷ್ಯತಿ ॥ ೧೯ ॥

ಹಸ್ತಿಶೈಲಸ್ಯ ವಾಯವ್ಯೇ ದೇಶೇ ವೈಕುಂಠನಾಯಕಃ ।
ಪ್ರಾದುರ್ಭವಿಷ್ಯತಿ ಹರಿರ್ನದ್ಯಾ ವಿರಜಯಾ ಸಹ ॥ ೨೦ ॥

ಜಯಶ್ಚ ವಿಜಯಶ್ಚೋಭೌ ಮುಕ್ತಶಾಪೌ ತದಾ ನೃಪ ।
ಪುನಃ ಪ್ರಾಪ್ನುವತಃ ಕಾಂಚ್ಯಾಂ ತದ್ವಿಷ್ಣೋಃ ಪರಮಂ ಪದಂ ॥ ೨೧ ॥

ಯೇ ಚಾಪಿ ಮಾನವಾ ಭೂಮೌ ಕಾಂಚ್ಯಾಂ ವೈಕುಂಠನಾಯಕಂ ।
ಪಶ್ಯಂತಿ ವಿರಜಾಂ ಚಾಪಿ ತೇ ಯಾಸ್ಯಂತಿ ಪರಾಂ ಗತಿಂ ॥ ೨೨ ॥

ಏವಮಷ್ಟಾದಶಸ್ಥಾನಮಾಹಾತ್ಮ್ಯಂ ಶಾರ್ಙ್ಗಧನ್ವನಃ ।
ಕಾಂಚ್ಯಾಂ ಸತ್ಯವ್ರತಕ್ಷೇತ್ರೇ ಕಥಿತಂ ತೇ ಮಯಾ ನೃಪ ॥ ೨೩ ॥

---

೧೯. ಪವಿತ್ರವೂ ಪುಣ್ಯಾರ್ಜನ ಸಾಧನವೂ ಆದ ಯಾವ ವಿರಜಾ ಎಂಬ ನದಿಯು ವೈಕುಂಠಲೋಕದಲ್ಲಿ ಹರಿಯುತ್ತಿತ್ತೋ ಆ ನದಿಯು ಅಶ್ವಮೇಧಯಾಗದ ಸಮಾಪ್ತಿಯಲ್ಲಿ ಆ ಯಜ್ಞವೇದಿಕೆಯಲ್ಲಿ ಆವಿರ್ಭವಿಸುವುದು.

೨೦. ಹಸ್ತಿಶೈಲದ ವಾಯುವ್ಯದಿಕ್ಕಿನ ಪ್ರದೇಶದಲ್ಲಿ ವೈಕುಂಠಲೋಕನಾಯಕನಾದ ಹರಿಯು ವಿರಜಾನದಿಯೊಡನೆ ಪ್ರಾದುರ್ಭಾವವನ್ನು ಹೊಂದುವನು.

೨೧. ರಾಜನೆ! ಆ ಜಯ ಮತ್ತು ವಿಜಯರು ಇಬ್ಬರು ಆಗ ಶಾಪಮುಕ್ತರಾಗಿ ಕಾಂಚೀನಗರದಲ್ಲಿ ವಿಷ್ಣುವಿನ ಪರಮಪದವನ್ನು ಮತ್ತೆ ಹೊಂದುವರು.

೨೨. ಭೂಮಂಡಲದಲ್ಲಿ ಯಾವ ಮಾನವರು ಕಾಂಚೀನಗರದಲ್ಲಿದ್ದ ವೈಕುಂಠನಾಯಕನಾದ ಹರಿಯನ್ನೂ ವಿರಜಾನದಿಯನ್ನೂ ಸಂದರ್ಶಿಸುವರೋ ಅವರು ಪರಮಸದ್ಗತಿಯನ್ನು ಹೊಂದುವರು.

೨೩. ರಾಜನೆ! ಈ ರೀತಿಯಾಗಿ ಸತ್ಯವ್ರತಕ್ಷೇತ್ರದಲ್ಲಿದ್ದ ಕಾಂಚೀನಗರದಲ್ಲಿ ಶಾರ್ಙ್ಗಚಾಪವನ್ನು ಧರಿಸಿದ ವಿಷ್ಣುವಿನ ಹದಿನೆಂಟು ದಿವ್ಯಸ್ಥಾನಗಳ ಮಾಹಾತ್ಮ್ಯವನ್ನು ನಾನು ಹೇಳಿರುತ್ತೇನೆ.

ಅಶ್ವಮೇಧಸ್ಯ ಶಾಲಾಯಾಂ ಬ್ರಹ್ಮಣಃ ಪರಮೇಷ್ಠಿನಃ ।
ಸ್ಥಾನಾನ್ಯೇತಾನಿ ರಾಜೇಂದ್ರ ಪ್ರೋಕ್ತಾನ್ಯಷ್ಟಾದಶೈವ ಹಿ ॥ ೭೪ ॥

ಏವಂ ಸುರೇಂದ್ರೈರ್ಋಷಿಭಿರ್ನೃಪೇಂದ್ರೈ-
ರ್ದಾನೈಸ್ತಪೋಭಿರ್ಯಜನೈಃ ಸುಪೂಜಿತಃ ।
ದಾತುಂ ಚ ತೇಭ್ಯಃ ಸಕಲಾನ್ ಪುಮರ್ಥಾನ್
ತತ್ರಾವಿರಾಸೀದ್ಭಗವಾನ್ ಮುಕುಂದಃ ॥ ೭೫ ॥

ಅತಸ್ತು ತತ್ ಕ್ಷೇತ್ರಮಭೂತ್ ಸುಪುಣ್ಯಂ
ಸತ್ಯವ್ರತಾಖ್ಯಂ ಪರಮಂ ಹರೇಃ ಪ್ರಿಯಂ ।
ಪುರೀ ಚ ಕಾಂಚೀ ಕಲಿಕಲ್ಮಷಘ್ನೀ
ಬಭೂವ ವೈಕುಂಠಫಲಪ್ರದಾ ನೃಣಾಂ ॥ ೭೬ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ತ್ರಿಂಶೋಽಧ್ಯಾಯಃ.

---

೭೪. ರಾಜೇಂದ್ರನೇ! ಪರಮಸ್ಥಾನದಲ್ಲಿರುವ ಬ್ರಹ್ಮನು ಮಾಡಿದ ಅಶ್ವಮೇಧ ಯಾಗದ ಯಾಗಶಾಲೆಯಲ್ಲಿ ವಿಷ್ಣುವಿನ ಸ್ಥಾನಗಳು ಹದಿನೆಂಟು ಸಂಖ್ಯೆಯಿಂದ ಹೇಳಲ್ಪಟ್ಟಿವೆ.

೭೫. ಈ ರೀತಿಯಾಗಿ ದೇವಶ್ರೇಷ್ಠರಿಂದಲೂ ಋಷಿಗಳಿಂದಲೂ ರಾಜಾಧಿ ರಾಜರಿಂದಲೂ ಕೂಡ ದಾನ, ತಪಸ್ಸು ಮತ್ತು ಯಜ್ಞರೂಪವಾದ ಸತ್ಕರ್ಮಗಳಿಂದ ಪೂಜಿಸಲ್ಪಟ್ಟ ವಿಷ್ಣು ಪರಮಾತ್ಮನು ಭಕ್ತರಿಗೆ ಸಕಲ ಪುರುಷಾರ್ಥಗಳನ್ನು ಅನು ಗ್ರಹಿಸಲೋಸ್ಕರ ಕಾಂಚೀನಗರದಲ್ಲಿ ಆವಿರ್ಭವಿಸಿದನು.

೭೬. ಆದುದರಿಂದ ಆ ಸತ್ಯವ್ರತವೆಂಬ ಕ್ಷೇತ್ರವು ಅತ್ಯಂತ ಪವಿತ್ರವೂ ವಿಷ್ಣುವಿಗೆ ಪರಮಪ್ರಿಯವಾದುದೂ ಆಯಿತು. ಹಾಗೆಯೇ ಕಾಂಚೀನಗರವು ಕಲಿ ಕಾಲದ ಪಾಪಗಳನ್ನು ಧ್ವಂಸಮಾಡುವುದೂ ವೈಕುಂಠಲೋಕಸೇವನದ ದಿವ್ಯ ಫಲ ಗಳನ್ನು ಕೊಡುವುದೂ ಆಯಿತು.

ಕಾಂಚೀಮಾಹಾತ್ಮ್ಯದಲ್ಲಿ ಮೂವತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ಏಕತ್ರಿಂಶೋಽಧ್ಯಾಯಃ

ಪುರಾ ದೇವಸಭಾಮಧ್ಯೇ ಮಹೇಂದ್ರಃ ಪಾಕಶಾಸನಃ ।
ಆಸೀತ್ ಸಿಹ್ಮಾಸನೇ ದಿವ್ಯೇ ಸಮಾಸೀನಃ ಸುರೈಃ ಸಹ ॥ ೧ ॥

ತದಾ ಕೇಚಿನ್ಮಹಾಪ್ರಾಜ್ಞಾ ಬ್ರಾಹ್ಮಣಾ ಬ್ರಹ್ಮವಿತ್ತಮಾಃ ।
ಆಜಗ್ಮುಃ ಸಹಿತಾ ದ್ರಷ್ಟುಂ ಕದಾಚಿತ್ಪಾಕಶಾಸನಂ ॥ ೨ ॥

ಅಗಸ್ತ್ಯೋ ಭಗವಾನ್ಮೃಕಂಡುರ್ಗೌತಮೋ ಮಹಾನ್ ।
ಭಾರ್ಗವಶ್ಚ್ಯವನೋ ವಿದ್ವಾನ್ ತಥಾನ್ಯೇ ಚ ಮಹರ್ಷಯಃ ॥ ೩ ॥

---

೧. ಪೂರ್ವಕಾಲದಲ್ಲಿ ದೇವತೆಗಳಿಂದ ತುಂಬಿದ ಸಭೆಯ ಮಧ್ಯದಲ್ಲಿ ಪಾಕನೆಂಬ ಅಸುರನನ್ನು ಶಿಕ್ಷಿಸಿದ ದೇವೇಂದ್ರನು ದೇವತೆಗಳೆಂಬ ಸಭಿಕರೊಡನೆ ದಿವ್ಯವಾದ ಸಿಹ್ಮಾಸನದಲ್ಲಿ ಕುಳಿತುಕೊಂಡಿದ್ದನು.

೨. ಆಗ ಒಂದು ಸಮಯದಲ್ಲಿ ಮಹಾಪ್ರಜ್ಞಾಶಾಲಿಗಳೂ ಬ್ರಹ್ಮಜ್ಞಾನಿಗಳೂ ಆದ ಕೆಲವರು ಬ್ರಾಹ್ಮಣರು ವೃಂದವಾಗಿ ಸೇರಿ ಪಾಕಾಸುರನ ಅರಿಯಾದ ಇಂದ್ರನನ್ನು ನೋಡಲು ಸಭೆಗೆ ಬಂದರು.

೩. ಪೂಜ್ಯರೂ, ಮಹಾತ್ಮರೂ, ಮತ್ತು ಜ್ಞಾನಿಗಳೂ ಆದ ಅಗಸ್ತ್ಯ, ಮೃಕಂಡು, ಗೌತಮ, ಭಾರ್ಗವ, ಚ್ಯವನ ಮತ್ತು ಇತರ ಅನೇಕ ಮಹನೀಯರಾದ ಮುನಿಗಳೂ ಬಂದರು.

ತಾನಾಗತಾನ್ ಸಮುದ್ವೀಕ್ಷ್ಯ ಗುರುಣಾ ಸಹ ದೇವರಾಟ್ ।
ಪೂಜಯಿತ್ವಾ ಯಥಾನ್ಯಾಯಂ ಪಪ್ರಚ್ಛ ಕುಶಲಂ ದ್ವಿಜಾನ್ ॥ ೪ ॥

ತೈಶ್ಚಾಪಿ ಪೃಷ್ಟಃ ಕುಶಲಂ ನಿವೇದ್ಯ ಸ್ವಂ ಪುರಂದರಃ ।
ತತಃ ಪ್ರಪಚ್ಛ ಧರ್ಮಾರ್ಥನಿಶ್ಚಯಂ ದ್ವಿಜಸತ್ತಮಾನ್ ॥ ೫ ॥

ಚತುರ್ಣಾಮಾಶ್ರಮಾಣಾಂ ಹಿ ಗರೀಯಾನ್ ಕ ಉದಾಹೃತಃ ।
ತಮಾಶ್ರಮಂ ಪುಣ್ಯತಮಂ ಮುನಯಃ ಪ್ರಬ್ರುವಂತು ಮೇ ॥ ೬ ॥

ಏವಮಿಂದ್ರೇಣ ಸಂಪೃಷ್ಟಾಸ್ತಮೂಚುರ್ಮುನಿಪುಂಗವಾಃ ।
ಆಶ್ರಮಾಣಾಂ ಹಿ ಸರ್ವೇಷಾಂ ಜ್ಯಾಯಾನೇವ ಗೃಹಾಶ್ರಮಃ ॥ ೭ ॥

ನ ತಾದೃಶೋಽಸ್ತಿ ಲೋಕೇಽನ್ಯೋ ಹ್ಯಾಶ್ರಮೋ ಧರ್ಮಸಾಧನಃ ।
ಬ್ರುವಂತಿ ಮುನಯಃ ಸರ್ವೇ ಶ್ರೇಷ್ಠಂ ಗಾರ್ಹಸ್ಥ್ಯಮಾಶ್ರಮಂ ॥ ೮ ॥

---

೪. ಬಂದಿರುವ ಆ ಮುನಿಗಳನ್ನು ದೇವಗುರುವಾದ ಬೃಹಸ್ಪತಿಯೊಡನೆ ಇದ್ದ ದೇವೇಂದ್ರನು ನೋಡಿ ವಿಧಿಯನ್ನನುಸರಿಸಿ ಪೂಜಾಸತ್ಕಾರಗಳನ್ನು ಅರ್ಪಿಸಿ ಕುಶಲವನ್ನು ಪ್ರಶ್ನಿಸಿದನು.

೫. ಅವರಿಂದಲೂ ಕುಶಲವನ್ನು ಪ್ರಶ್ನಿಸಲ್ಪಟ್ಟ ದೇವೇಂದ್ರನು ತನ್ನ ಕುಶಲ ವಾರ್ತೆಯನ್ನು ಅವರಿಗೆ ತಿಳಿಸಿ ಅನಂತರ ಆ ಉತ್ತಮರಾದ ದ್ವಿಜರನ್ನು ಸಂಬೋಧಿಸಿ ಧರ್ಮ ವಿಷಯದ ಸಮಸ್ಯೆಯನ್ನು ಕೇಳಿದನು.

೬. ದ್ವಿಜರೆ! ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಯತಿ ಎಂಬ ನಾಲ್ಕು ಆಶ್ರಮಗಳಲ್ಲಿ ಅತ್ಯುತ್ತಮವಾದ ಆಶ್ರಮವು ಯಾವುದು! ಮುನಿಗಳೆ! ಆ ಉತ್ತಮವಾದ ಆಶ್ರಮವನ್ನು ನನಗೆ ಹೇಳಿರಿ.

೭. ಈ ರೀತಿಯಾಗಿ ಇಂದ್ರನಿಂದ ಪ್ರಶ್ನಿಸಲ್ಪಟ್ಟ ಮುನಿಪುಂಗವರು ಎಲ್ಲ ಆಶ್ರಮಗಳಿಗಿಂತಲೂ ಗೃಹಸ್ಥಾಶ್ರಮವು ಉತ್ತಮವಾದುದೆಂದು ಹೇಳಿದರು.

೮. ಲೋಕದಲ್ಲಿ ಗ್ರಹಸ್ಥಾಶ್ರಮವನ್ನು ಬಿಟ್ಟು ಅದಕ್ಕೆ ಸಮಾನವಾಗಿ ಧರ್ಮ ಸಾಧಕವಾದ ಮತ್ತೊಂದು ಆಶ್ರಮವಿಲ್ಲ. ಮುನಿಗಳೆಲ್ಲರೂ ಗ್ರಹಸ್ಥಾಶ್ರಮವೇ ಶ್ರೇಷ್ಠವೆಂದು ಹೇಳುವರು.

ತಸ್ಮಾತ್ತಮೇವ ದೇವೇಂದ್ರ ಶ್ರೇಷ್ಠಂ ವಿದ್ಯಾದ್ಗೃಹಾಶ್ರಮಂ ।
ಇತಿ ತೇಷು ಬ್ರುವಾಣೇಷು ವಾಕ್ಪತಿರ್ವಿಸ್ಮಯಾನ್ವಿತಃ ॥ ೯ ॥

ತತ್ರ ಧಿಕ್ಕೃತ್ಯ ತಾನ್ ವಿಪ್ರಾನುವಾಚ ವಚನಂ ನೃಪ ।
ಗರೀಯಾನ್ ಬ್ರಹ್ಮಚರ್ಯಾಖ್ಯಃ ಪರಮಃ ಪ್ರಥಮಾಶ್ರಮಃ ॥ ೧೦ ॥

ತಮುಲ್ಲಂಘ್ಯ ಕಥಂ ಬ್ರೂತ ಯೂಯಂ ಶ್ರೇಷ್ಠಂ ಗೃಹಾಶ್ರಮಂ ।
ಅನಾಲೋಚ್ಯೈವ ಶಾಸ್ತ್ರಾರ್ಥಾನ್ ಸರ್ವೇ ಮೂಢಧಿಯೋ ಯಥಾ ॥

ಇತ್ಯುಕ್ತವಂತಂ ಧಿಷಣಂ ತೇ ಸಮೀಕ್ಷ್ಯಾಥ ಗರ್ವಿತಂ ।
ಶೇಪುಃ ಪ್ರಕುಪಿತಾಃ ಸದ್ಯಸ್ತಮನರ್ಥಾರ್ಥವಾದಿನಂ ॥ ೧೨ ॥

ಯಸ್ಮಾತ್ತ್ವಮುಪಲೇಪೇನ ಸರ್ವಾನ್ನಃ ಸತ್ಯವಾದಿನಃ ।
ಅಧಿಕ್ಷಿಪಸಿ ಮಂದಾತ್ಮನ್ ಹೀನಾರ್ಥಂ ಸ್ವರ್ಥವದ್ಬ್ರುವನ್ ॥ ೧೩ ॥

---

೯. ದೇವೇಂದ್ರನೆ, ಆದುದರಿಂದ ಆ ಗೃಹಸ್ಥಾಶ್ರಮವನ್ನೇ ಶ್ರೇಷ್ಠವೆಂದು ತಿಳಿಯಬೇಕು. ಹೀಗೆಂದು ಆ ಮುನಿಪುಂಗವರು ಹೇಳಲಾಗಿ ಅಲ್ಲಿದ್ದ ಬೃಹಸ್ಪತಿಯು ಅತ್ಯಾಶ್ಚರ್ಯ ಚಕಿತನಾದನು.

೧೦. ರಾಜನೆ ! ಆಗ ಅಲ್ಲಿದ್ದ ಬೃಹಸ್ಪತಿಯು ಗ್ರಹಸ್ಥಾಶ್ರಮಕ್ಕೆ ಪ್ರಾಬಲ್ಯವನ್ನು ಹೇಳಿದವಿಪ್ರರನ್ನು ಧಿಕ್ಕರಿಸಿ ಈ ರೀತಿಯಾಗಿ ಹೇಳಿದನು :—ಆಶ್ರಮಗಳಲ್ಲಿ ಮೊದಲನೆಯ ಬ್ರಹ್ಮಚರ್ಯಾಶ್ರಮವು ಶ್ರೇಷ್ಠವೂ ಮಹನೀಯವೂ ಆಗಿರುವುದು.

೧೧. ಅಂತಹ ಬ್ರಹ್ಮಚರ್ಯಾಶ್ರಮವನ್ನು ಹಿಂದಕ್ಕೆ ಒತ್ತಿ ಮೂಢಬುದ್ಧಿಯುಳ್ಳವರಂತೆ ಶಾಸ್ತ್ರದ ಅರ್ಥವನ್ನು ಆಲೋಚಿಸದೆ ಗೃಹಸ್ಥಾಶ್ರಮವು ಮುಖ್ಯವೆಂದು ಹೇಗೆ ಹೇಳುತ್ತೀರಿ.

೧೨. ಈ ರೀತಿಯಾಗಿ ಮಾತನಾಡಿದ, ಮತ್ತು ಅನರ್ಥವನ್ನು ಅರ್ಥವೆಂದು ಸಾಧಿಸಿದ ಬೃಹಸ್ಪತಿಯನ್ನು ಬಹು ಗರ್ವಿತನಾಗಿರುವನೆಂದು ಎಲ್ಲರೂ ತಿಳಿದು ಕೂಡಲೇ ಕೋಪದಿಂದ ಶಾಪವನ್ನು ಕೊಟ್ಟರು.

೧೩. ಮೂಢನೆ ! ನೀನು ಸತ್ಯವನ್ನು ನುಡಿಯುತ್ತಲಿರುವ ನಮ್ಮೆಲ್ಲರನ್ನೂ ಅಹಂಕಾರದಿಂದ ಅಸತ್ಯವನ್ನು ಸತ್ಯವೆಂದು ಸಾಧಿಸುತ್ತ ಅವಮಾನಮಾಡುತ್ತಿರುವಿಯಲ್ಲವೆ.

ತಸ್ಮಾದಿತಃ ಪ್ರಪತಿತೋ ಭೂಮ್ಯಾಂ ದಾರಿದ್ರ್ಯಪೀಡಿತಃ ।
ಸರ್ವದುಃಖಸಮಾಯುಕ್ತೋ ಭವ ರೋಗೈಃ ಪ್ರಪೀಡಿತಃ ॥ ೧೪ ॥

ಇತಿ ಶಪ್ತ್ವಾ ಗುರುಂ ಸರ್ವೇ ಪ್ರಜಗ್ಮುಸ್ತೇ ಯಥಾಗತಂ ।
ತತಃ ಶಪ್ತೋ ಗುರುರ್ವಿಪ್ರೈಸ್ತತ್ಕ್ಷಣಾನ್ನ್ಯಪತತ್ ಕ್ಷಿತೌ ॥ ೧೫ ॥

ಕಸ್ಮಿಂಶ್ಚಿನ್ನರ್ಮದಾತೀರಗ್ರಾಮೇ ಬ್ರಾಹ್ಮಣಮಂದಿರೇ ।
ಉಂಛವೃತ್ತೇರ್ದರಿದ್ರಸ್ಯ ಜಜ್ಞೇ ತಸ್ಯ ಸುತೋ ನೃಪ ॥ ೧೬ ॥

ಜಾತಮಾತ್ರೇ ತು ಜನನೀ ಜಗಾಮ ಯಮಸಾದನಂ ।
ಕ್ಲೇಶೇನ ಮಹತಾ ಪಿತ್ರಾ ರಕ್ಷಿತೋಽತ್ಯಂತಬಾಲಕಃ ॥ ೧೭ ॥

ತತಃ ಸಂವತ್ಸರೇ ಪೂರ್ಣೇ ಮೃತೋಽಭೂಜ್ಜನಕೋಽಪಿ ಚ ।
ರುದತೋ ಬಾಲಕಸ್ಯಾಸ್ಯ ನೈವ ಸಂಬಂಧಿಬಾಂಧವಾಃ ॥ ೧೮ ॥

---

೧೪. ಆದುದರಿಂದ ಈ ಉನ್ನತಪದದಿಂದ ಭೂಮಿಯಲ್ಲಿ ಬಿದ್ದು ದಾರಿದ್ರ್ಯ ಮತ್ತು ಸಮಸ್ತ ದುಃಖಗಳಿಂದ ಕೂಡಿದವನೂ ಮತ್ತು ಸರ್ವ ವಿಧವಾದ ರೋಗಗಳಿಂದ ಪೀಡಿತನಾದವನೂ ಆಗು.

೧೫. ಹೀಗೆಂದು ಬೃಹಸ್ಪತ್ಯಾಚಾರ್ಯನಿಗೆ ಶಾಪಕೊಟ್ಟು ಬಂದ ಮುನಿಗಳೆಲ್ಲರೂ ತಮ್ಮ ಸ್ಥಾನಕ್ಕೆ ಹೊರಟುಹೋದರು. ಅನಂತರ ವಿಪ್ರರಿಂದ ಶಪಿಸಲ್ಪಟ್ಟ ಗುರುವು ಆ ಕ್ಷಣದಲ್ಲಿ ಭೂಮಿಗೆ ಬಿದ್ದನು.

೧೬. ರಾಜನೆ! ನರ್ಮದಾತೀರದಲ್ಲಿರುವ ಒಂದಾನೊಂದು ಗ್ರಾಮದಲ್ಲಿ ವಾಸಮಾಡುವ, ಕಾಳಾರಿಸುವ ವೃತ್ತಿಯಿಂದ ಜೀವಿಸುವ ದರಿದ್ರನಾದ ಬ್ರಾಹ್ಮಣನ ಮನೆಯಲ್ಲಿ ಅವನ ಮಗನಾಗಿ ಹುಟ್ಟಿದನು.

೧೭. ಮಗುವು ಜನಿಸಿದ ಕೂಡಲೆ ತಾಯಿಯು ಯಮಲೋಕಕ್ಕೆ ಹೋದಳು. ಆಗ ಅತ್ಯಂತ ಶಿಶು ಅವಸ್ಥೆಯ, ತಾಯಿಯಿಲ್ಲದ ಆ ಮಗುವನ್ನು ಬಹಳ ಕ್ಲೇಶಪಟ್ಟು ತಂದೆಯು ಸಾಕಿದನು.

೧೮. ಅನಂತರದಲ್ಲಿ ಆ ಮಗುವಿಗೆ ಒಂದು ವರ್ಷವು ಪೂರ್ತಿಯಾಗಿ ತುಂಬು ವಷ್ಟರಲ್ಲಿ ತಂದೆಯೂ ಮರಣಹೊಂದಿದನು, ಆಗ ಶರಣರಿಲ್ಲದೆ ಅಳುತ್ತಿರುವ ಬಾಲಕನಿಗೆ ಯಾರೊಬ್ಬ ಸಂಬಂಧಿಗಳೂ ಬಂಧುಗಳೂ ಇರಲಿಲ್ಲ.

ಯಯಾ ಕಯಾಚಿತ್ಕೃಪಯಾ ರಕ್ಷಿತೋ ಬಾಲಕಸ್ತಥಾ ।
ಮೃದುಶಯ್ಯಾ ನ ತಸ್ಯಾಸೀನ್ನ ಚ ದಂಶನಿವಾರಕಾಃ ॥ ೧೯ ॥

ಏವಂ ಸಂವರ್ಧಿತೋ ಬಾಲ್ಯೇ ಶಯಾನೋ ಯತ್ರ ಕುತ್ರ ಚಿತ್ ।
ಉಪನೀತಶ್ಚ ಕೃಪಯಾ ಕೇನ ಚಿದ್ಬ್ರಾಹ್ಮಣೇನ ಸಃ ॥ ೨೦ ॥

ತತಸ್ತು ಯೌವನಂ ಪ್ರಾಪ್ಯ ಕುಚೇಲಃ ಕುತ್ಸಿತಾಶನಃ ।
ಬಭೂವ ಭೃಶನಿರ್ವೇದಮಾಪನ್ನೋಽತ್ಯಂತದುರ್ಭಗಃ ॥ ೨೧ ॥

ಪೀಡಿತೋ ವ್ಯಾಧಿಭಿರ್ನಿತ್ಯಂ ಮನೋರಥಶತಾಕುಲಃ ।
ಸ ಕದಾಚಿನ್ನೃಪಶ್ರೇಷ್ಠ ತಪಸೇ ಕೃತನಿಶ್ಚಯಃ ॥ ೨೨ ॥

ಯಯೌ ಭಾಗೀರಥೀತೀರಂ ಪುಣ್ಯವೃಕ್ಷಲತಾಯುತಂ ।
ತತ್ರೋಪವಿಷ್ಟಮದ್ರಾಕ್ಷೀದ್ಭರದ್ವಾಜಂ ಮಹಾಮುನಿಂ ॥ ೨೩ ॥

---

೧೯. ಯಾವಳೊ ಒಬ್ಬ ವನಿತೆಯು ಕರುಣೆಯಿಂದ ಆ ಬಾಲಕನನ್ನು ಕಷ್ಟದಿಂದ ಸಾಕಿದಳು. ಆದರೆ ಆ ಶಿಶುವಿಗೆ ಮಲಗಲು ಮೃದುವಾದ ಹಾಸಿಗೆಯು ದೊರಕಲಿಲ್ಲ. ಹಾಗು ಮಲಗಿದಲ್ಲಿ ಸೊಳ್ಳೆ ಮುಂತಾದವುಗಳನ್ನೋಡಿಸಲು ಯಾರೊಬ್ಬರೂ ಗತಿ ಇರಲಿಲ್ಲ.

೨೦. ರಾಜನೆ! ಹೀಗೆ ಬಾಲ್ಯದಲ್ಲಿ ಎಲ್ಲಾದರಲ್ಲಿ ಬಿದ್ದು ಶಯನಮಾಡಿ ಆ ಬಾಲಕನು ಬೆಳೆಸಲ್ಪಟ್ಟನು. ಹೀಗೆಯೇ ಉಪನಯನೋಚಿತವಾದ ಕಾಲವು ಬಂದ ಕೂಡಲೆ ಯಾರೊ ಒಬ್ಬ ಬ್ರಾಹ್ಮಣನು ಕೃಪೆಯಿಂದ ಉಪನಯನವನ್ನು ಮಾಡಿದನು.

೨೧. ಅನಂತರ ತಾರುಣ್ಯವನ್ನು ಹೊಂದಿ ಉತ್ತಮವಾದ ಅನ್ನ-ವಸ್ತ್ರಗಳು ದೊರಕದೆ ಹೀನವಾದ ವಸ್ತ್ರಗಳನ್ನು ಧರಿಸಿ ಕದನ್ನವನ್ನು ಊಟಮಾಡಿ ಅತ್ಯಂತ ದೌರ್ಭಾಗ್ಯಾವಸ್ಥೆಯಿಂದ ಕೂಡಿ ಹೆಚ್ಚಾಗಿ ಬೇಸರವನ್ನು ಪಡೆದನು.

೨೨. ರಾಜೇಂದ್ರನೆ! ಆ ಬ್ರಾಹ್ಮಣನು ಯಾವಾಗಲೂ ವ್ಯಾಧಿಗಳಿಂದ ಪೀಡಿತನಾಗಿದ್ದು ವ್ಯರ್ಥವಾಗಿ ಜೀರ್ಣವಾಗುವ ನೂರಾರು ಮನೋರಥಗಳಿಂದ ಕೂಡಿ ಕಷ್ಟಗಳನ್ನು ಸಹಿಸಲಾರದೆ ಒಂದು ಸಮಯದಲ್ಲಿ ತಪಸ್ಸನ್ನು ಆಚರಿಸಬೇಕೆಂಬ ನಿಶ್ಚಯವನ್ನು ಮಾಡಿದನು.

೨೩. ಅಲ್ಲಿಂದ ಪವಿತ್ರವಾದ, ವೃಕ್ಷ-ಲತೆಗಳಿಂದ ಪರಿಪೂರ್ಣವಾದ ಭಾಗೀರಥೀ ತೀರಕ್ಕೆ ಬಂದನು. ಅಲ್ಲಿ ಒಂದು ಆಶ್ರಮದಲ್ಲಿ ಕುಳಿತಿರುವ ಭರದ್ವಾಜ ಎಂಬ ಮಹಾ ತಪಸ್ವಿಯನ್ನು ಕಂಡನು.

ತಂ ಪ್ರಣಮ್ಯ ಮಹಾಭಾಗಂ ಬ್ರಾಹ್ಮಣೋ ವಾಕ್ಯಮಬ್ರವೀತ್ ।
ಕೇನಾಹಮಸ್ಮಿ ವಿಪ್ರೇಂದ್ರ ದರಿದ್ರಃ ಪಾಪಕರ್ಮಣಾ ॥ ೨೪ ॥

ಮಾತಾಪಿತೃಭ್ಯಾಂ ಹೀನಶ್ಚ ಬಾಲ್ಯಾದಾರಭ್ಯ ದುಃಖಿತಃ ।
ನಿಃಶ್ರೀಕೋ ಭ್ರಷ್ಟಸಂಕಲ್ಪಃ ಕದನ್ನಾದಶ್ಚ ಕೇವಲಂ ॥ ೨೫ ॥

ಯದ್ಯಹಂ ಸುಖಮುತ್ಸೃಜ್ಯ ಭೌಮಂ ದುಃಖಸಮನ್ವಿತಂ ।
ಇಚ್ಛಾಮಿ ವಾ ತಪಃ ಕರ್ತುಂ ಪರಮಂ ವಿಷ್ಣುತುಷ್ಟಿದಂ ॥ ೨೬ ॥

ತತ್ರ ದುರ್ನಿಗ್ರಹಂ ಚಿತ್ತಂ ಚಂಚಲಂ ಮೇ ಭವತ್ಯಲಂ ।
ತಸ್ಮಾದಿಹಪರಾಭ್ಯಾಂ ಮಾಂ ಸುಖಾಭ್ಯಾಂ ಹೀನಮಾಗತಂ ॥ ೨೭ ॥

ತ್ರಾತುಮರ್ಹಸಿ ವಿಪ್ರೇಂದ್ರ ಯಥಾಹಂ ಮುಕ್ತಿಮಾಪ್ನುಯಾಂ ।
ಇತಿ ತಸ್ಯ ವಚಃ ಶ್ರುತ್ವಾ ಭರದ್ವಾಜೋ ಮಹಾಮುನಿಃ ॥ ೨೮ ॥

---

೨೪. ಆ ಮಹಾತ್ಮಮುನಿಯನ್ನು ಈ ಬ್ರಾಹ್ಮಣನು ಕಂಡು ನಮಸ್ಕರಿಸಿ ಮಾತನಾಡಿದನು ವಿಪ್ರೇಂದ್ರನೆ! ನಾನು ಯಾವ ಪಾಪಕರ್ಮದ ಪರಿಣಾಮದಿಂದ ಈ ರೀತಿಯಾಗಿ ದರಿದ್ರನಾಗಿ ಹುಟ್ಟಿರುವೆನು?

೨೫. ಮತ್ತು ನಾನು ಬಾಲ್ಯದಿಂದ ಮಾತಾಪಿತೃಗಳಿಂದ ಶೂನ್ಯನಾಗಿ ಬಹಳ ದುಃಖಿತನೂ ಸಂಪತ್ತಿಶೂನ್ಯನೂ, ಭ್ರಷ್ಟವಾದ ಸಂಕಲ್ಪಗಳುಳ್ಳವನೂ ಮತ್ತು ಕೇವಲ ಕದನ್ನವನ್ನು ಭುಂಜಿಸುವನೂ ಆಗಲು ನಿಮಿತ್ತವಾದ ಪಾಪಕರ್ಮವಾವುದು?

೨೬. ನಾನು ದುಃಖಮಿಶ್ರಿತವಾದ ಮರ್ತ್ಯಲೋಕದ ಈ ಸುಖದ ಆಶೆಯನ್ನು ಪರಿತ್ಯಾಗಮಾಡಿದರೆ ವಿಷ್ಣುಪರಮಾತ್ಮನ ಪ್ರಸಾದಕ್ಕಾಗಿ ತಪಸ್ಸನ್ನಾದರೂ ಆಚರಿಸಲೆ!

೨೭. ಆದರೆ ನನ್ನ ಮನಸ್ಸು ಅತ್ಯಂತ ಚಂಚಲವೂ ವಶೀಕರಿಸಲು ಅಶಕ್ಯವೂ ಆಗಿರುವುದು. ಆದುದರಿಂದ ಐಹಿಕ ಮತ್ತು ಪಾರತ್ರಿಕ ಸೌಖ್ಯಗಳಿಂದ ಭ್ರಷ್ಟನಾಗಿ ನಿನ್ನ ಬಳಿಗೆ ಬಂದಿರುವ ನನ್ನನ್ನು ರಕ್ಷಿಸು.

೨೮. ವಿಪ್ರೇಂದ್ರನೆ, ದುಃಖಿಸುತ್ತಿರುವ ನನ್ನನ್ನು ಕರುಣೆಯಿಂದ ಮುಕ್ತಿ ಸಾಧನೋಪಾಯವನ್ನು ಹೇಳಿ ರಕ್ಷಿಸಲು ಅರ್ಹನಾಗಿದ್ದೀ, ಮಹಾಧೀರನಾದ ಭರದ್ವಾಜಮುನಿಯು ಬ್ರಾಹ್ಮಣನ ಈ ವಚನವನ್ನು ಕೇಳಿದನು.

ಧ್ಯಾತ್ವಾ ಮುಹೂರ್ತಂ ತಪಸಾ ತಂ ವಿಜ್ಞಾಯ ಬೃಹಸ್ಪತಿಂ ।
ಶಪ್ತಂ ಮಹರ್ಷಿಭಿಃ ಪೂರ್ವಮೇವಂಭೂತಂ ಸುದುರ್ಭಗಂ ॥ ೨೯ ॥

ತಸ್ಯ ನಿಷ್ಕೃತಿಮನ್ವಿಚ್ಛನ್ನುವಾಚ ದ್ವಿಜಪುಂಗವಃ ।
ಶೃಣು ವಿಪ್ರ ಪ್ರವಕ್ಷ್ಯಾಮಿ ವಚಸ್ತವ ಹಿತಂ ಶುಭಂ ॥ ೩೦ ॥

ಅಸ್ತಿ ದಕ್ಷಿಣತಃ ಕ್ಷೇತ್ರಮಿತಃ ಕ್ರೋಶಸಹಸ್ರಕೇ ।
ದೇಶೇ ಸತ್ಯವ್ರತೇ ನಾಮ ವಿಷ್ಣುಪ್ರೀತಿಕರಂ ಪರಂ ॥ ೩೧ ॥

ತತ್ರಾಸ್ತಿ ಹಸ್ತಿಶೈಲಾಖ್ಯೋ ಭೂಧರಃ ಪುಣ್ಯವರ್ಧನಃ ।
ತಸ್ಮಿನ್ ವಸತಿ ದೇವೇಶೋ ವರದಃ ಸರ್ವದೇಹಿನಾಂ ॥ ೩೨ ॥

ತಸ್ಯ ದರ್ಶನಮಾತ್ರೇಣ ಮುಚ್ಯಂತೇ ಸರ್ವಕಿಲ್ಬಿಷೈಃ ।
ನರಾಃ ಪಾತಕಿನೋ ವಾಪಿ ತಿರ್ಯಂಚೋಽಪಿ ಕುಯೋನಿಜಾಃ ॥ ೩೩ ॥

---

೨೯. ಆಗ ಭರದ್ವಾಜಮುನಿಯು ಮುಹೂರ್ತಕಾಲ ಧ್ಯಾನದೃಷ್ಟಿಯಿಂದ ಚಿಂತಿಸಿ ಆ ಬ್ರಾಹ್ಮಣನನ್ನು ಪೂರ್ವದಲ್ಲಿ ಮಹರ್ಷಿಗಳಿಂದ ಶಪಿಸಲ್ಪಟ್ಟು ಈ ರೀತಿಯಾಗಿ ದುರವಸ್ಥೆಗಳನ್ನು ಹೊಂದಿರುವ ಬೃಹಸ್ಪತಿಯೆಂದು ತಿಳಿದನು.

೩೦. ಆಗ ವಿಪ್ರೋತ್ತಮನಾದ ಮುನಿಯು ಆ ಪಾಪಕ್ಕೆ ಪ್ರಾಯಶ್ಚಿತ್ತವನ್ನಾಚರಿಸಬೇಕೆಂದು ಯೋಚಿಸಿ ಈ ರೀತಿಯಾಗಿ ಹೇಳಿದನು. ವಿಪ್ರನೆ! ನಿನಗೆ ಕಲ್ಯಾಣಕರವೂ ಹಿತಕರವೂ ಆದ ನಾನು ಹೇಳುವ ವಚನವನ್ನು ಕೇಳು.

೩೧. ಈ ಸ್ಥಳದಿಂದ ಸಹಸ್ರ ಯೋಜನ ದೂರದಲ್ಲಿರುವ ಸತ್ಯವ್ರತವೆಂಬ ಪ್ರದೇಶದಲ್ಲಿ ವಿಷ್ಣುಪರಮಾತ್ಮನಿಗೆ ಪ್ರಿಯವಾದ, ಉತ್ತಮವಾದ ಒಂದು ಪವಿತ್ರ ಕ್ಷೇತ್ರವಿರುವುದು.

೩೨. ಆ ಕ್ಷೇತ್ರದಲ್ಲಿ ಹಸ್ತಿಶೈಲವೆಂಬ ಹೆಸರಿನ, ಪುಣ್ಯಾರ್ಜನೆಗೆ ಕಾರಣವಾದ ಒಂದು ಪರ್ವತವಿದೆ. ಅದರ ಶಿಖರದಲ್ಲಿ ಸರ್ವ ಪ್ರಾಣಿಗಳ ಕಾಮಿತ ವರಗಳನ್ನು ಕೊಡುವ, ದೇವೇಶ್ವರನಾದ ವರದರಾಜಸ್ವಾಮಿಯು ವಾಸಮಾಡಿರುವನು.

೩೩. ಪಾಪಿಗಳಾದ ಮಾನವರೂ ನಿಂದ್ಯವಾದ ಯೋನಿಯಲ್ಲಿ ಜನಿಸಿದ ಮೂಕಪ್ರಾಣಿಗಳೂ ಕೂಡ ಆ ವರದಸ್ವಾಮಿಯನ್ನು ಸಂದರ್ಶಿಸಿದ ಮಾತ್ರದಿಂದಲೆ ಸಮಸ್ತ ಪಾಪಗಳಿಂದ ಮುಕ್ತರಾಗುತ್ತಾರೆ.

ತಸ್ಮಾತ್ತ್ವಂ ತತ್ರ ಗತ್ವಾಶು ತಪಶ್ಚರ ಹರೇಃ ಪ್ರಿಯಂ ।
ತಪಸಾ ವರದಸ್ತುಷ್ಟಃ ಪ್ರಸನ್ನಸ್ತೇ ಭವೇದ್ಧ್ರುವಂ ॥ ೩೪ ॥

ಅತ್ರೈವೋದಾಹರಿಷ್ಯಾಮಿ ಪ್ರತ್ಯಯಾರ್ಥಂ ತವಾನಘ ।
ತಚ್ಛೃಣು ತ್ವಮುಪಾಖ್ಯಾನಂ ಪಲ್ಲಿಕಾಮೋಕ್ಷಣಂ ದ್ವಿಜ ॥ ೩೫ ॥

ಕಶ್ಚಿದಾಸೀತ್ಕುರುಕ್ಷೇತ್ರೇ ಬ್ರಾಹ್ಮಣೋ ವೇದಪಾರಗಃ ।
ಉಪಮನ್ಯುರಿತಿ ಖ್ಯಾತಸ್ತಪಸ್ವೀ ವಿಜಿತೇಂದ್ರಿಯಃ ॥ ೩೬ ॥

ವಿಷ್ಣುಭಕ್ತೋ ಜಿತಕ್ರೋಧಃ ಪ್ರಶಾಂತಾತ್ಮಾ ದೃಢವ್ರತಃ ।
ತಸ್ಯಾಸೀಲ್ಲಕ್ಷಣಾ ನಾಮ ಭಾರ್ಯಾ ರೂಪಗುಣಾನ್ವಿತಾ ॥ ೩೭ ॥

ಪತಿವ್ರತಾ ಮಹಾಭಾಗಾ ವಿಷ್ಣುವ್ರತಪರಾಯಣಾ ।
ತಯಾ ಸ ಭಾರ್ಯಯಾ ಸಾರ್ಧಂ ಸತತಂ ವಿಷ್ಣುಮರ್ಚಯತ್ ॥ ೩೮ ॥

---

೩೪. ಆದುದರಿಂದ ನೀನು ಕ್ಷಿಪ್ರವಾಗಿ ಅಲ್ಲಿಗೆ ಹೋಗಿ ವಿಷ್ಣುವಿಗೆ ಪ್ರೀತಿಕರವಾದ ಉತ್ತಮವಾದ ತಪಸ್ಸನ್ನು ಆಚರಿಸು ನೀನು ಮಾಡುವ ತಪಸ್ಸಿನಿಂದ ವರದಸ್ವಾಮಿಯು ನಿನ್ನಲ್ಲಿ ಸಂತುಷ್ಟನೂ ಪ್ರಸನ್ನನೂ ನಿಜವಾಗಿ ಆಗುವನು.

೩೫. ನಿರ್ದುಷ್ಟನೆ, ಈ ವಿಷಯದಲ್ಲಿ ನಿನ್ನ ವಿಶ್ವಾಸಕ್ಕೋಸ್ಕರ ಒಂದು ಚರಿತ್ರೆಯನ್ನು ಉದಾಹರಣವಾಗಿ ಹೇಳುತ್ತೇನೆ. ಬ್ರಾಹ್ಮಣನೆ! ಹಲ್ಲಿಗಳಿಗೆ ಮೋಕ್ಷಪ್ರಾಪ್ತಿಯಾಗಿರುವ ಆ ಉಪಖ್ಯಾನವನ್ನು ಕೇಳು.

೩೬. ಕುರುಕ್ಷೇತ್ರದಲ್ಲಿ ವೇದಪಾರಂಗತನಾದ ಒಬ್ಬ ಬ್ರಾಹ್ಮಣನಿದ್ದನು. ಅವನು ಮಹಾ ತಪಸ್ವಿಯೂ ಜಿತೇಂದ್ರಿಯನೂ ಆಗಿ ಉಪಮನ್ಯುವೆಂಬ ಹೆಸರಿನಿಂದ ಖ್ಯಾತಿಯನ್ನು ಗಳಿಸಿದ್ದನು.

೩೭. ಅವನು ವಿಷ್ಣುವಿನಲ್ಲಿ ಭಕ್ತನೂ ಕೋಪವನ್ನು ಗೆದ್ದವನೂ, ಶಾಂತವಾದ ಮಾನಸವುಳ್ಳವನೂ ಮತ್ತು ದೃಢವಾದ ನಿಯಮಾಚರಣೆಯುಳ್ಳವನೂ ಆಗಿದ್ದನು. ಅವನಿಗೆ ಸೌಂದರ್ಯ-ಸದ್ಗುಣಗಳಿಂದ ಕೂಡಿದ ಲಕ್ಷಣಾ ಎಂಬ ಪತ್ನಿಯಿದ್ದಳು.

೩೮. ಅವಳು ಮಹಾಭಾಗಳಾದ ಪತಿವ್ರತೆಯೂ ವಿಷ್ಣುಪೂಜಾ-ನಿಯಮದಲ್ಲಿ ಆದರವುಳ್ಳವಳೂ ಆಗಿದ್ದಳು. ಆ ಉಪಮನ್ಯುವು ಅನುರೂಪಳಾದ ಆ ಭಾರ್ಯೆಯಿಂದ ಒಡಗೂಡಿ ಸಂತತವಾಗಿ ವಿಷ್ಣುವನ್ನು ಅರ್ಚಿಸುತ್ತಲಿದ್ದಳು.

ವರ್ತಯನ್ನುಂಛವೃತ್ತ್ಯೈವ ಕುರ್ವನ್ ತ್ರಿಷವಣಂ ದ್ವಿಜಃ ।
ಪೂಜಯನ್ನತಿಥೀನ್ನಿತ್ಯಂ ಪಿತೄನ್ ದೇವಾಂಶ್ಚ ತರ್ಪಯನ್ ॥ ೩೯ ॥

ತಸ್ಯೈವಂ ವರ್ತಮಾನಸ್ಯ ಬ್ರಾಹ್ಮಣಸ್ಯ ಮಹಾತ್ಮನಃ ।
ಸುಷುವೇ ತನಯಂ ಪತ್ನೀ ಲಕ್ಷಣಾ ಲಕ್ಷಣೈರ್ಯುತಂ ॥ ೪೦ ॥

ತತಃ ಕದಾಚಿದ್ವಿಪ್ರೇಂದ್ರಃ ಪತ್ನ್ಯಾ ಸಹ ಸುತೇನ ಚ ।
ತೀರ್ಥಯಾತ್ರಾಪರೋ ಭೂಮಿಮುಪಮನ್ಯುಶ್ಚಚಾರ ಹ ॥ ೪೧ ॥

ತತ್ರ ತತ್ರ ಚ ತೀರ್ಥೇಷು ಹ್ರದೇಷು ಚ ನದೀಷು ಚ ।
ಸ್ನಾತ್ವಾ ಲಕ್ಷಣಯಾ ಸಾರ್ಧಂ ತರ್ಪಯಂಶ್ಚ ಪಿತೄನ್ ದ್ವಿಜಃ ॥ ೪೨ ॥

ಕ್ಷೇತ್ರೇಷು ಚ ಸುಪುಣ್ಯೇಷು ಪಶ್ಯನ್ ವಿಷ್ಣುಂ ರಮಾಪತಿಂ ।
ಉಂಛವೃತ್ತ್ಯೈವ ಸತತಮತಿಥೀಂಶ್ಚಾಪಿ ಪೂಜಯನ್ ॥ ೪೩ ॥

---

೩೯. ಮತ್ತು ಆ ದ್ವಿಜನು ಉಂಛವೃತ್ತಿಯಿಂದ ಜೀವಿಸುತ್ತ ತ್ರಿಕಾಲಗಳಲ್ಲಿ ಸ್ನಾನಮಾಡಿ ಅತಿಥಿ, ದೇವ ಮತ್ತು ಪಿತೃಗಳಿಗೆ ತೃಪ್ತಿಯಾಗುವಂತೆ ಆಯಾಯ ಪೂಜಾ ಸತ್ಕಾರಗಳನ್ನು ಮಾಡುತ್ತಿದ್ದನು.

೪೦. ಈ ರೀತಿಯಾಗಿ ಸದಾಚಾರದಿಂದ ಕಾಲವನ್ನು ಕಳೆಯುತ್ತಲಿದ್ದ ಆ ಮಹಾತ್ಮನಾದ ಬ್ರಾಹ್ಮಣನ ಪತ್ನಿಯಾದ ಲಕ್ಷಣಾ ಎಂಬುವಳು ಸಮಗ್ರ ಶುಭ ಲಕ್ಷಣಗಳಿಂದ ಕೂಡಿದ ಪುತ್ರನನ್ನು ಪ್ರಸವಿಸಿದಳು.

೪೧. ತರುವಾಯ ಒಂದು ಕಾಲದಲ್ಲಿ ವಿಪ್ರೇಂದ್ರನಾದ ಆ ಉಪಮನ್ಯುವು ತನ್ನ ಪತ್ನೀ ಪುತ್ರರಿಂದೊಡಗೂಡಿ ತೀರ್ಥಯಾತ್ರೆಯನ್ನು ಮಾಡಬೇಕೆಂಬ ಕುತೂಹಲದಿಂದ ಭೂಮಿಯಲ್ಲಿ ಸಂಚರಿಸಿದನು.

೪೨. ಆ ದ್ವಿಜನು ತೀರ್ಥಯಾತ್ರೆಯನ್ನು ಕೈಗೊಂಡು ಆಯಾಯ ತೀರ್ಥಗಳಲ್ಲಿಯೂ ಮಡುಗಳಲ್ಲಿಯೂ ಮತ್ತು ನದಿಗಳಲ್ಲಿಯೂ ಲಕ್ಷಣಾಂಬೆಯೊಡನೆ ಸ್ನಾನಮಾಡಿ ಪಿತೃಗಳಿಗೆ ತರ್ಪಣವನ್ನು ಕೊಡುತ್ತಲಿದ್ದನು.

೪೩. ಪವಿತ್ರವಾದ ಕ್ಷೇತ್ರಗಳಲ್ಲಿ ಲಕ್ಷ್ಮೀಪತಿಯಾದ ನಾರಾಯಣನನ್ನು ಸಂದರ್ಶಿಸಿ ಉಂಛವೃತ್ತಿಯಿಂದ ಲಭ್ಯವಾದ ಅನ್ನದಿಂದ ಯಾವಾಗಲೂ ಅತಿಥಿಗಳನ್ನು ಸತ್ಕರಿಸುತ್ತಲಿದ್ದನು.

ಸ ತು ಗೋದಾವರೀತೀರಮಾಯಯೌ ಸಹ ಭಾರ್ಯಯಾ ।
ತತ್ರೈಕಸ್ಮಿನ್ ದಿನೇ ಮಾರ್ಗೇ ನದ್ಯಾಸ್ತೀರೇ ವನೇ ಶುಭೇ ॥ ೪೪ ॥

ಕಸ್ಮಿಂಶ್ಚಿದಾಹ್ನಿಕಂ ಕರ್ತುಮವಸದ್ಬ್ರಾಹ್ಮಣೋತ್ತಮಃ ।
ತತ್ರ ಸ್ನಾತ್ವಾ ಸ ಗೌತಮ್ಯಾಂ ಮಧ್ಯಾಹ್ನೇ ದ್ವಿಜಸತ್ತಮಃ ॥ ೪೫ ॥

ಸಂತರ್ಪ್ಯ ಚ ಪಿತೄನ್ ದೇವಾನ್ ಪೂಜಯಾಮಾಸ ಕೇಶವಂ ।
ತತಸ್ತತ್ರ ಚರುಂ ಕೃತ್ವಾ ತಂಡುಲೈಃ ಪಂಚಮುಷ್ಟಿಭಿಃ ॥ ೪೬ ॥

ಶಿಲೋಂಛವೃತ್ತ್ಯೋಪಹೃತೈಸ್ತತ್ರ ಲಬ್ಧೈಶ್ಚ ತದ್ದಿನೇ ।
ವೈಶ್ವದೇವಬಲಿಂ ಚಕ್ರೇ ನಿವೇದ್ಯಾನ್ನಂ ತು ವಿಷ್ಣವೇ ॥ ೪೭ ॥

ಶೇಷಮನ್ನಂ ಸುಪೂತಂ ತಚ್ಚಕ್ರೇ ಭಾಗದ್ವಯಂ ತಥಾ ।
ಭಾಗಮೇಕಂ ತು ಶಿಶವೇ ಪುತ್ರಾಯಾದಾದ್ಧರಿಂ ಸ್ಮರನ್ ॥ ೪೮ ॥

---

೪೪. ಹಾಗೆಯೇ ಸಂಚರಿಸುತ್ತ ಆ ಉಪಮನ್ಯುವು ಪತ್ನಿಯೊಡನೆ ಗೋದಾವರೀನದಿಯ ತೀರಕ್ಕೆ ಬಂದನು. ಆಗ ಒಂದು ದಿನ ಮಾರ್ಗದಲ್ಲಿ ಆ ಗೋದಾವರೀ ನದೀ ತೀರದಲ್ಲಿರುವ ಶುಭಕರವಾದ ವನವನ್ನು ಸೇರಿದನು.

೪೫. ಆ ಬ್ರಾಹ್ಮಣೋತ್ತಮನು ಅಲ್ಲಿ ತನ್ನ ಆಹ್ನಿಕಕರ್ಮವನ್ನು ಪೂರೈಸಲು ವಾಸಮಾಡಿದನು. ಆ ವಿಪ್ರಶ್ರೇಷ್ಠನು ಮಧ್ಯಾಹ್ನಕಾಲದಲ್ಲಿ ಗೌತಮೀನದಿಯಲ್ಲಿ ಸ್ನಾನಮಾಡಿದನು.

೪೬. ಅನಂತರದಲ್ಲಿ ಪಿತೃ ಮತ್ತು ದೇವತೆಗಳನ್ನು ತರ್ಪಣದಿಂದ ತೃಪ್ತಿಪಡಿಸಿ ವಿಷ್ಣುವನ್ನು ಪೂಜಿಸಿದನು. ಆಮೇಲೆ ಐದು ಮುಷ್ಟಿ ಪರಿಮಾಣದ ಅಕ್ಕಿಯಿಂದ ಹವಿಸ್ಸಾದ ಚರುವನ್ನು ಮಾಡಿದನು.

೪೭. ಆ ದಿನದಲ್ಲಿ ತನ್ನ ಉಂಛವೃತ್ತಿಯಿಂದ ಆರ್ಜಿಸಿ ತಂದಿರುವ ಅಕ್ಕಿಯಿಂದ ಚರುವನ್ನು ಮಾಡಿ ಅನ್ನವನ್ನು ವಿಷ್ಣುವಿಗೆ ನಿವೇದನಮಾಡಿ ವೈಶ್ವದೇವ ಕರ್ಮವನ್ನು ಆಚರಿಸಿ ಬಲಿಯನ್ನು ಕೊಟ್ಟನು.

೪೮. ಅನಂತರದಲ್ಲಿ ಮಿಕ್ಕಿರುವ ಪವಿತ್ರವಾದ ಅನ್ನವನ್ನು ಎರಡು ಭಾಗವಾಗಿಮಾಡಿದನು. ಅವುಗಳಲ್ಲಿ ಒಂದು ಭಾಗವನ್ನು ಹರಿಸ್ಮರಣೆಮಾಡುತ್ತ ಅತ್ಯಂತ ಬಾಲಕನಾದ ಪುತ್ರನಿಗೆ ಕೊಟ್ಟನು.

ದ್ವಿತೀಯಂ ಭಾಗಮುತನೋತ್ ಸ್ವಪತ್ನ್ಯಾಶ್ಚಾತ್ಮನೋಽಪಿ ಚ ।
ಏವಂ ವಿಭಜ್ಯ ವಿಧಿವದನ್ನಂ ವಿಪ್ರವರಸ್ತದಾ ॥ ೪೯ ॥

ಪ್ರಥಮಂ ಭೋಜಯಾಮಾಸ ಬಾಲಂ ಪುತ್ರಂ ಬುಭುಕ್ಷಿತಂ ।
ಸ್ವಯಂ ಚಾಪಿ ಯದಾ ಭೋಕ್ತುಮೈಚ್ಛದನ್ನಂ ದ್ವಿಜೋತ್ತಮಃ ॥

ತದೈವಾಭ್ಯಾಯಯೌ ತತ್ರ ವಿಪ್ರಃ ಕಶ್ಚಿದ್ಬುಭುಕ್ಷಿತಃ ।
ಸೋಽಭ್ಯಯಾಚತ ವಿಪ್ರೇಂದ್ರಮನ್ನಂ ದೇಹೀತಿ ಯಾಚಕಃ ॥ ೫೧ ॥

ತಸ್ಮೈ ಸ ಪ್ರದದಾವನ್ನಂ ಸ್ವಭೋಜ್ಯಮಪಿ ಹೃಷ್ಟಧೀಃ ।
ಸ ತು ಭುಕ್ತ್ವಾಽನ್ನಮತಿಥಿರ್ನಾಲಮಿತ್ಯಬ್ರವೀತ್ಪುನಃ ॥ ೫೨ ॥

ತತಃ ಸ್ವಭೋಜ್ಯಮನ್ನಂ ಚ ಲಕ್ಷ್ಮಣಾಪಿ ದದೌ ಮುದಾ ।
ಸ ತು ಭುಕ್ತ್ವಾ ದ್ವಯೋರನ್ನಂ ಪ್ರಯಯಾವತಿಥಿರ್ದ್ವಿಜಃ ॥ ೫೩ ॥

---

೪೯. ಮತ್ತು ಆ ವಿಪ್ರನು ಉಳಿದ ಎರಡನೆಯ ಭಾಗದಲ್ಲಿ ತನಗೂ ಪತ್ನಿಗೂ ಮತ್ತೆ ಎರಡು ಭಾಗಮಾಡಿದನು. ಈ ರೀತಿಯಾಗಿ ವಿಧಿವತ್ತಾಗಿ ಅನ್ನವನ್ನು ಭಾಗಿಸಿ ಭುಂಜಿಸಲು ಯತ್ನಿಸಿದರು.

೫೦. ಹೀಗೆ ಭಾಗಗಳನ್ನು ಕಲ್ಪಿಸಿ ಹಸುಗೊಂಡಿರುವ ಬಾಲಕನಾದ ಪುತ್ರನಿಗೆ ಮೊದಲು ಒಂದು ಭಾಗವನ್ನು ಊಟಮಾಡಿಸಿದನು. ಅನಂತರ ಆ ದ್ವಿಜೋತ್ತಮನು ತಾನು ತನ್ನ ಭಾಗವನ್ನು ಭುಂಜಿಸಲು ಇಚ್ಛಿಸಿದನು.

೫೧. ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಒಬ್ಬ ಹಸಿವಿನಿಂದ ಪೀಡಿತನಾದ ವಿಪ್ರನು ಬಂದನು. ಆ ಯಾಚಕನು ಈ ಬ್ರಾಹ್ಮಣೋತ್ತಮನನ್ನು ಕುರಿತು ಅನ್ನವನ್ನು ಕೊಡೆಂದು ಬೇಡಿದನು.

೫೨. ಆಗ ಉಪಮನ್ಯುವು ಸಂತುಷ್ಟವಾದ ಮಾನಸವುಳ್ಳವನಾಗಿ ತನ್ನ ಭಾಗದ ಅನ್ನವನ್ನು ಅವನಿಗೆ ಕೊಟ್ಟನು. ಆ ಅತಿಥಿಯು ಅನ್ನವನ್ನು ಊಟಮಾಡಿ ಇದು ಸಾಲದೆಂದು ಮತ್ತಷ್ಟು ಅನ್ನವನ್ನು ಹಾಕೆಂದು ಕೇಳಿದನು.

೫೩. ಆಗ ಲಕ್ಷ್ಮಣಾಂಬೆಯು ತನ್ನ ಭಾಗದ ಅನ್ನವನ್ನು ಸಂತೋಷದಿಂದ ಬಡಿಸಿದಳು. ಆ ಅತಿಥಿಯಾದ ಬ್ರಾಹ್ಮಣನು ಇಬ್ಬರ ಭಾಗದ ಅನ್ನವನ್ನು ಭುಂಜಿಸಿ ಮುಂದಕ್ಕೆ ತೆರಳಿದನು.

ಉಪಮನ್ಯುಸ್ತದಾ ಪ್ರಾಪ್ತಕೋಟಿಯಜ್ಞಫಲೋ ದ್ವಿಜಃ ।
ಮುಮೋದ ಸಹಿತಃ ಪತ್ನ್ಯಾ ಭೃಶಮನ್ನಪ್ರದಾನತಃ ॥ ೫೪ ॥

ತತಸ್ತದ್ಗೃಹ್ಯ ಚೋಚ್ಛಿಷ್ಟಂ ಪತ್ರಂ ಭುಕ್ತಸ್ಯ ಚಾತಿಥೇಃ ।
ಚಿಕ್ಷೇಪ ಗರ್ತೇ ಕಸ್ಮಿಂಶ್ಚಿಲ್ಲತಾಗುಲ್ಮಸಮಾವೃತೇ ॥ ೫೫ ॥

ಕ್ಷಿಪ್ತಮಾತ್ರೇ ತದೋಚ್ಛಿಷ್ಟೇ ಬ್ರಾಹ್ಮಣೇನೋಪಮನ್ಯುನಾ ।
ಪತಿತಾ ಬಿಂದವೋ ಮೂರ್ಧ್ನಿ ತತ್ರ ಪಲ್ಲಿಕಯೋರ್ಬಿಲೇ ॥ ೫೬ ॥

ಚಿರಂ ನಿವಸತೋಃ ಪಾಪಾತ್ಪಲ್ಲಿಕಾರೂಪಿಣೋರ್ದ್ವಯೋಃ ।
ಪತಿತಾದ್ಬ್ರಾಹ್ಮಣೋಚ್ಛಿಷ್ಟಾತ್ಪಲ್ಲಿಕಾಯುಗಲಸ್ಯ ತು ॥ ೫೭ ॥

ಬಭೂವ ತತ್ಕ್ಷಣಾದೇವ ಶಿರೋಮಾತ್ರಂ ತು ಕಾಂಚನಂ ।
ಅಭೂತ್ ಪೂರ್ವಸ್ಮೃತಿಶ್ಚಾಪಿ ತಯೋಸ್ತತ್ರ ಕುಜನ್ಮನೋಃ ॥ ೫೮ ॥

---

೫೪. ಆಗ ಉಪಮನ್ಯುವು ಕ್ಷುಧಾರ್ತನಾದ ವಿಪ್ರನೆಂಬ ಸತ್ಪಾತ್ರದಲ್ಲಿ ಮಾಡಿದ ಅನ್ನದಾನದ ಮಹಿಮೆಯಿಂದ ಕೋಟಿ ಯಜ್ಞಗಳನ್ನು ಆಚರಿಸಿದ ಫಲಕ್ಕೆ ಪಾತ್ರನಾಗಿ ಪತ್ನೀ ಸಹಿತನಾಗಿ ಅತ್ಯಂತವಾಗಿ ಆನಂದಿಸಿದನು.

೫೫. ಅನಂತರದಲ್ಲಿ ಉಪಮನ್ಯುವು ಊಟಮಾಡಿ ಹೋದ ಅತಿಥಿಯ ಎಂಜಲು ಎಲೆಯನ್ನು ಬಳ್ಳಿ ಮತ್ತು ಪೊದೆಗಳಿಂದ ಮುಚ್ಚಿದ ಒಂದು ಹಳ್ಳದಲ್ಲಿ ಎಸೆದನು.

೫೬. ಉಪಮನ್ಯು ವಿಪ್ರನು ಉಚ್ಛಿಷ್ಟ ಪತ್ರವನ್ನು ಎಸೆದ ಕೂಡಲೆ ಆ ಹಳ್ಳದಲ್ಲಿದ್ದ ಎರಡು ಹಲ್ಲಿಗಳ ತಲೆಯಲ್ಲಿ ಎಂಜಲಿನ ತೊಟ್ಟುಗಳು ಬಿದ್ದವು.

೫೭. ಯಾವುದೋ ಪಾಪ ವಿಶೇಷದಿಂದ ಹಲ್ಲಿಗಳ ಜನ್ಮವನ್ನು ಎತ್ತಿ ಬಹು ಕಾಲದಿಂದ ಆ ಬಿಲದಲ್ಲಿ ವಾಸಮಾಡುತ್ತಿದ್ದ ಆ ಎರಡು ಪ್ರಾಣಿಗಳ ತಲೆಯಲ್ಲಿ ವಿಪ್ರೋಚ್ಛಿಷ್ಟದ ಬಿಂದುಗಳು ಬಿದ್ದವು.

೫೮. ಉಚ್ಛಿಷ್ಟ ಬಿಂದುಗಳು ಬಿದ್ದಕೂಡಲೆ ಅವುಗಳ ಶಿರಸ್ಸು ಮಾತ್ರ ಸುವರ್ಣಮಯವಾಯಿತು. ಮತ್ತು ಕೆಟ್ಟ ಯೋನಿಯಲ್ಲಿ ಹುಟ್ಟಿದ ಆ ಪ್ರಾಣಿಗಳಿಗೆ ಪೂರ್ವಜನ್ಮದ ಸ್ಮತಿಯು ಉಂಟಾಯಿತು.

ಪಲ್ಲೀಂ ಚ ಪಲ್ಲಿಕಾ ಚೋಭೌ ದಂಪತೀ ಪಾಪಕರ್ಮಿಣೌ ।
ವಾಚಾ ಚುಕ್ರೋಶತುರ್ದೀನೌ ಮಾನುಷ್ಯಾ ತಂ ದ್ವಿಜೋತ್ತಮಂ ॥

ಸ್ಮೃತ್ವಾ ಪೂರ್ವಕೃತಂ ಪಾಪಂ ತ್ರಾಹಿ ತ್ರಾಹೀತಿ ದುಃಖಿತೌ ।
ಕ್ರೋಶಂತಂ ಪಲ್ಲಿಕಾಯುಗ್ಮಮಿಾಕ್ಷ್ಯ ಕಾಂಚನಮಸ್ತಕಂ ॥ ೬೦ ॥

ಪಪ್ರಚ್ಛ ಕೃಪಯಾ ವಿಪ್ರಃ ಕೌ ಯುವಾಮಿತಿ ವಿಸ್ಮಿತಃ ।
ತಮುವಾಚ ತದಾ ಪಲ್ಲೀ ಸ್ಮರ್ನ್ ದುಷ್ಕೃತಮಾತ್ಮನಃ ॥ ೬೧ ॥

ಅಹಂ ನೃಪಸುತಃ ಪೂರ್ವಮಾಸಂ ಜನ್ಮನಿ ಸಪ್ತಮೇ ।
ಅಯೋಧ್ಯಾಧಿಪತೇಃ ಪುತ್ರಃ ಸಗರಸ್ಯ ಮಹಾತ್ಮನಃ ॥ ೬೨ ॥

ಅಸಮಂಜ ಇತಿ ಖ್ಯಾತೋ ಬಾಲಘ್ನಃ ಪಾಪಕರ್ಮಕೃತ್ ।
ಹತ್ವಾ ಸಹಸ್ರಶೋ ಬಾಲಾನ್ ಸರಯ್ವಾಃ ಪ್ರಾಕ್ಷಿಪಂ ಜಲೇ ॥ ೬೩ ॥

---

೫೯. ಪಾಪಕರ್ಮಗಳನ್ನು ಆಚರಿಸಿದ ಆ ದಂಪತಿಗಳಾದ ಹಲ್ಲಿಗಳೆರಡು ಬಹು ದೀನಗಳಾಗಿ ಆ ದ್ವಿಜೋತ್ತಮನನ್ನು ಮನುಷ್ಯ ವಾಕ್ಕಿನಿಂದ ಕೂಗಿಕೊಂಡವು.

೬೦. ಅವು ತಮ್ಮ ಪೂರ್ವ ಜನ್ಮದ ಪಾಪಕರ್ಮವನ್ನು ಸ್ಮರಿಸಿ ದುಃಖಗೊಂಡು "ತ್ರಾಹಿತ್ರಾಹಿ" ಎಂದು ರಕ್ಷಣೆಯನ್ನು ಬೇಡಿಕೊಂಡವು. ಆಗ ಉಪಮನ್ಯುವು ಚಿನ್ನದ ತಲೆಯಿಂದ ಕೂಡಿರುವ ಮತ್ತು ತನ್ನನ್ನು ಕೂಗುತ್ತಲಿರುವ ಆ ಪಲ್ಲೀದಂಪತಿಗಳನ್ನು ನೋಡಿದನು.

೬೧. ಮತ್ತು ಉಪಮನ್ಯು ದ್ವಿಜನು ಆಶ್ಚರ್ಯಗೊಂಡವನಾಗಿ ಕರುಣೆಯಿಂದ ನೀವು ಯಾರೆಂದು ಪ್ರಶ್ನಿಸಿದನು. ಆಗ ಅವುಗಳಲ್ಲಿ ಗಂಡು ಪ್ರಾಣಿಯು ತನ್ನ ದುಷ್ಕೃತವನ್ನು ಸ್ಮರಿಸಿಕೊಂಡು ಈ ರೀತಿಯಾಗಿ ಹೇಳಿತು.

೬೨. ನಾನು ಇದಕ್ಕೆ ಹಿಂದೆ ಏಳನೆಯ ಜನ್ಮದಲ್ಲಿ ಅಯೋಧ್ಯಾನಗರಿಗೆ ಅಧಿಪತಿಯೂ ಮಹಾತ್ಮನೂ ಆದ ಸಗರರಾಜನಿಗೆ ಪುತ್ರನಾಗಿ ಹುಟ್ಟಿ ರಾಜಪುತ್ರತ್ವದಿಂದ ಕೂಡಿಕೊಂಡಿದ್ದನು.

೬೩. ಅಸಮಂಜನೆಂಬ ನಾಮದಿಂದ ಪ್ರಸಿದ್ಧನಾದ ನಾನು ಆಗ ಬಾಲಹತ್ಯಾರೂಪವಾದ ಪಾಪಕರ್ಮವನ್ನು ಆಚರಿಸಿ ಸಾವಿರಾರು ಜನ ಬಾಲಕರನ್ನು ಸರಯೂ ನದಿಯ ನೀರಿನಲ್ಲಿ ಹಾಕುತ್ತಲಿದ್ದೆನು.

ತದಾ ಮಾಂ ಪಾಪಿನಂ ದೃಷ್ಟ್ವಾ ರಾಜಾ ಜನಹಿತೇಚ್ಛಯಾ ।
ಸಭಾರ್ಯಮನಯದ್ರೋಷಾತ್ಸರ್ವಸ್ವಂ ಗೃಹ್ಯ ಕಾನನಂ ॥ ೬೪ ॥

ತತೋಽಹಂ ಭಾರ್ಯಯಾ ಸಾರ್ಧಂ ವನೇಷು ಭೃಶದಾರುಣಃ ।
ಹತ್ವಾ ಮೃಗಾನ್ ಪಕ್ಷಿಣಶ್ಚ ಭಕ್ಷಯನ್ನಚರಂ ದ್ವಿಜ ॥ ೬೫ ॥

ತತಃ ಕದಾಚಿತ್ಕಾಂತಾರೇ ವ್ಯಾಘ್ರೇಣಾಂ ವಾಚ ಘಾತಿತೌ ।
ಶ್ವಾನಯೋನಿಮನುಪ್ರಾಪ್ತಾವೇನಸಃ ಪೂರ್ವಸಂಚಿತಾತ್ ॥ ೬೬ ॥

ಮಾರ್ಜಾಲೀಂ ಸೌಕರೀಂ ಚಾಪಿ ಪ್ರಾಪ್ಯ ಯೋನಿಂ ಚ ನಾಕುಲೀಂ ।
ಷಷ್ಠೇ ಚ ಜನ್ಮನಿ ಪುನಃ ಶ್ವಾನೌ ಭೂತ್ವಾ ಸುದುಃಖಿತಾ ॥ ೬೭ ॥

ಅಸ್ಮಿನ್ನೇವ ವನೇ ಪೂರ್ವಂ ಶಶಂ ದೃಷ್ಟ್ವಾ ಬುಭುಕ್ಷಿತೌ ।
ಭಕ್ಷಾರ್ಥಮನುಧಾವಂತಾವಜ್ಞಾನಾತ್ಪತಿತಾವಿಹ ॥ ೬೮ ॥

---

೬೪. ಆಗ ಪಾಪಿಯಾದ ನನ್ನನ್ನು ಕಂಡು ತಂದೆಯಾದ ರಾಜನು ಪ್ರಜಾವರ್ಗದ ಹಿತವನ್ನು ಕೋರಿ ಕೋಪದಿಂದ ನನ್ನ ಸರ್ವಸ್ವವನ್ನೂ ಕಿತ್ತುಕೊಂಡು ಪತ್ನಿಯೊಡನೆ ನನ್ನನ್ನು ವನಕ್ಕೆ ಕಳುಹಿಸಿದನು.

೬೫. ದ್ವಿಜನೆ! ಆಗ ನಾನು ನನ್ನ ಪತ್ನಿಯೊಡನೆ ಅತ್ಯಂತ ಕ್ರೂರನಾಗಿ ಅರಣ್ಯದಲ್ಲಿ ಮೃಗ-ಪಕ್ಷಿಗಳನ್ನು ಕೊಂದು ತಿನ್ನುತ್ತಾ ಸಂಚರಿಸಿದೆನು.

೬೬. ಅನಂತರದಲ್ಲಿ ಅರಣ್ಯದಲ್ಲಿ ಸಂಚರಿಸುತ್ತಿರಲು ಒಂದು ಹುಲಿಯಿಂದ ನಾವು ದಂಪತಿಗಳಿಬ್ಬರೂ ಕೊಲ್ಲಲ್ಪಟ್ಟೆವು. ಅನಂತರದಲ್ಲಿ ಮೊದಲು ಮಾಡಿದ ಪಾಪಕರ್ಮದ ವಶದಿಂದ ನಾಯಿಯ ಜನ್ಮವನ್ನು ಹೊಂದಿದೆವು.

೬೭. ಹಾಗೆಯೇ ಒಂದಾದ ಮೇಲೊಂದು ಕೆಟ್ಟ ಜನ್ಮವನ್ನು ಹೊಂದುವಾಗ ಬೆಕ್ಕಿನ, ಹಂದಿಯ ಮತ್ತು ಮುಂಗುಸಿಯ ಜನ್ಮವನ್ನು ಎತ್ತಿ ಕಡೆಗೆ ಆರನೆಯ ಜನ್ಮದಲ್ಲಿ ಮತ್ತೆ ದುಃಖಾರ್ತವಾದ ನಾಯಿಯ ಜನ್ಮವನ್ನು ಹೊಂದಿದೆವು.

೬೮. ಆ ಜನ್ಮದಲ್ಲಿ ಪೂರ್ವದಲ್ಲಿ ಈ ವನದಲ್ಲಿಯೇ ಒಂದು ಮೊಲವನ್ನು ನೋಡಿ ಹಸಿದಿರುವುದರಿಂದ ಆ ಮೊಲವನ್ನು ಹಿಡಿದು ತಿನ್ನಲು ನೋಡಿದ ಹಿಂದೆ ಓಡುತ್ತಿರಲು ಅಜ್ಞಾನದಿಂದ ಈ ಹಳ್ಳದಲ್ಲಿ ಬಿದ್ದೆವು.

ಕೂಪೇಽಸ್ಮಿನ್ ಮರಣಂ ಲಬ್ಧ್ವಾ ಸಂಪ್ರಾಪ್ತೌ ಪಲ್ಲಿಕಾತನುಂ ।
ತವ ಸಂದರ್ಶನಾದದ್ಯ ಪೂರ್ವಸ್ಮೃತಿರಭೂಚ್ಚ ನೌ ॥ ೧೯ ॥

ಶಿರಶ್ಚ ಕಾಂಚನಮಭೂದಾವಯೋಸ್ತ್ವತ್ಕರೋದಕಾತ್ ।
ತಸ್ಮಾನ್ನಾವುದ್ಧರ ಕ್ಷಿಪ್ರಂ ತ್ವಾಮೇವ ಶರಣಂ ಗತೌ ॥ ೨೦ ॥

ಇತಿ ತದ್ದುಷ್ಕೃತಂ ಶ್ರುತ್ವಾ ತಾವಪ್ಯುದ್ವೀಕ್ಷ್ಯ ದುಃಖಿತೌ ।
ಬ್ರಾಹ್ಮಣಃ ಕೃಪಯಾವಿಷ್ಟಸ್ಸಮುದ್ಧರ್ತುಮಿಯೇಷ ಹ ॥ ೨೧ ॥

ತತೋ ವಸ್ತ್ರೇಣ ಸಂಗೃಹ್ಯ ಪಲ್ಲಿಕಾಮಿಥುನಂ ದ್ವಿಜಃ ।
ಪತ್ನ್ಯಾ ಪುತ್ರೇಣ ಸಹಿತಸ್ತೀರ್ಥಯಾತ್ರಾಂ ಚಕಾರ ಹ ॥ ೨೨ ॥

ತತ್ರ ತತ್ರ ಚ ತೀರ್ಥೇಷು ಸ್ನಾಪ್ಯ ಪಲ್ಲೀದ್ವಯಂ ದ್ವಿಜಃ ।
ಕ್ಷೇತ್ರಾಣಿ ದರ್ಶಯಾಮಾಸ ಮೋಕ್ಷಾರ್ಥಂ ಪಲ್ಲಿಕಾತನೋಃ ॥ ೨೩ ॥

---

೧೯. ಈ ಕೂಪದಲ್ಲಿಯೇ ಸತ್ತು ಮತ್ತೊಂದು ಜನ್ಮದಲ್ಲಿ ಈ ಹಲ್ಲಿಯ ಶರೀರವನ್ನು ಸ್ವೀಕರಿಸಿದೆವು. ಮಹಾತ್ಮನಾದ ನಿನ್ನ ದರ್ಶನ ಭಾಗ್ಯದಿಂದ ನಮಗೆ ಈ ರೀತಿಯಾಗಿ ಜನ್ಮಾಂತರದ ಸ್ಮೃತಿಯುಂಟಾಯಿತು.

೨೦. ಮತ್ತು ನಿನ್ನ ಹಸ್ತಸಂಪರ್ಕವುಂಟಾದ ನೀರು ನಮ್ಮ ಶಿರಸ್ಸಿನಲ್ಲಿ ಬಿದ್ದು ಶಿರಸ್ಸು ಸುವರ್ಣಮಯವಾಗಿರುವುದು. ಆದುದರಿಂದ ನಿನಗೆ ಶರಣಾಗತರಾದ ನಮ್ಮನ್ನು ಬೇಗ ಉದ್ಧಾರಮಾಡು.

೨೧. ಈ ರೀತಿಯಾಗಿ ಆ ಪ್ರಾಣಿಗಳ ಜನ್ಮಾಂತರದ ಪಾಪಕರ್ಮವನ್ನು ಕೇಳಿ ದುಃಖಿತಗಳಾದ ಆ ಪ್ರಾಣಿಗಳನ್ನು ಕಂಡು ಕರುಣೆಗೆ ವಶನಾಗಿ ಬ್ರಾಹ್ಮಣನು ಅವುಗಳನ್ನು ಉದ್ಧರಿಸಲು ಅಪೇಕ್ಷಿಸಿದನು.

೨೨. ಅನಂತರದಲ್ಲಿ ತನ್ನ ವಸ್ತ್ರದಲ್ಲಿ ಆ ಹಲ್ಲಿಯ ಜೊತೆಯನ್ನು ತೆಗೆದುಕೊಂಡು ಬ್ರಾಹ್ಮಣನು ತನ್ನ ಪತ್ನೀಪುತ್ರರಿಂದ ಕೂಡಿ ಮೊದಲಿನಂತೆ ಮತ್ತೆ ತೀರ್ಥಯಾತ್ರೆಯನ್ನು ಮಾಡಿದನು.

೨೩. ಆ ಬ್ರಾಹ್ಮಣನು ಅಲ್ಲಲ್ಲಿ ದೊರಕುವ ತೀರ್ಥಗಳಲ್ಲಿ ಆಹಲ್ಲಿಗಳ ಜೊತೆಯನ್ನು ಸ್ನಾನಮಾಡಿಸಿ ಆ ಕೆಟ್ಟ ಜನ್ಮದ ಶರೀರದಿಂದ ಆ ಪ್ರಾಣಿಗಳಿಗೆ ಬಿಡುಗಡೆಯಾಗುವುದಕ್ಕೋಸ್ಕರ ಅನೇಕ ಕ್ಷೇತ್ರಗಳನ್ನು ತೋರಿಸಿದನು.

ಪುನರ್ವಾರಾಣಸೀಂ ಗತ್ವಾ ಹರಿದ್ವಾರಂ ಚ ಪುಷ್ಕರಂ ।
ಪ್ರಯಾಗಂ ನೈಮಿಷಂ ಚಾಪಿ ವೃಷಭಾದ್ರಿಮಹೋಬಲಂ ॥ ೭೪ ॥

ಸಿಹ್ಮಾದ್ರಿಮಥ ಗೋಕರ್ಣಂ ಶ್ರೀಶೈಲಂ ಕೌರ್ಮಮುತ್ತಮಂ ।
ಏತಾನ್ಯನ್ಯಾನಿ ಪುಣ್ಯಾನಿ ಕ್ಷೇತ್ರಾಣಿ ವಿಚಚಾರ ಹ ॥ ೭೫ ॥

ಪಲ್ಲೀಯುಗ್ಮಸ್ಯ ಮೋಕ್ಷಾರ್ಥಮೇವಂ ವಿಚರತಸ್ತದಾ ।
ಉಪಮನ್ಯೋರ್ದ್ವಿಜೇಂದ್ರಸ್ಯ ಮಹಾನ್ ಕಾಲೋ ಬಭೂವ ಹ ॥ ೭೬ ॥

ನೈವ ಚಾಸೀತ್ತಯೋರ್ಮೋಕ್ಷಃ ಕ್ಷೇತ್ರೇಷು ಸಕಲೇಷ್ವಪಿ ।
ತತಃ ಕದಾಚಿದ್ವಿಪ್ರೇಂದ್ರಃ ಪ್ರಭಾಸಂ ತೀರ್ಥಮಾಯಯೌ ॥ ೭೭ ॥

ತಪಸ್ಯಂತಂ ಮುನಿಂ ತತ್ರ ಮಾರ್ಕಂಡೇಯಂ ದದರ್ಶ ಚ ।
ತಂ ಪ್ರಣಮ್ಯ ದ್ವಿಜಶ್ರೇಷ್ಠಮುಪಮನ್ಯುರುವಾಚ ಹ ॥ ೭೮ ॥

---

೭೪. ಹಾಗೆಯೇ ತೀರ್ಥಾಟನಮಾಡುತ್ತ ಕ್ರಮವಾಗಿ ಕಾಶೀ, ಹರಿದ್ವಾರ, ಪುಷ್ಕರ, ಪ್ರಯಾಗ, ನೈಮಿಷ, ವೃಷಭಾದ್ರಿ ಮತ್ತು ಅಹೋಬಲ ಕ್ಷೇತ್ರಗಳಿಗೆ ತಾನು ಹೋಗಿ ಆ ಪ್ರಾಣಿಗಳಿಗೂ ಕ್ಷೇತ್ರಾಟನಮಾಡಿಸಿದನು.

೭೫. ಅದರಂತೆ ಮುಂದೆ ಸಿಹ್ಮಾದ್ರಿ, ಗೋಕರ್ಣ, ಶ್ರೀಶೈಲ, ಕೂರ್ಮಕ್ಷೇತ್ರ, ಮುಂತಾದ ಕ್ಷೇತ್ರಗಳನ್ನು ಇನ್ನು ಇತರ ಪವಿತ್ರ ಕ್ಷೇತ್ರಗಳನ್ನು ಸಂಚರಿಸಿದನು

೭೬. ಹಲ್ಲಿ ದಂಪತಿಗಳ ಮೋಕ್ಷಕ್ಕೋಸ್ಕರ ವಿಪ್ರೇಂದ್ರನಾದ ಉಪಮನ್ಯುವು ಹೀಗೆ ತೀರ್ಥಾಟನಮಾಡುತ್ತಿರಲು ಬಹಳ ಕಾಲವು ಕಳೆದುಹೋಯಿತು.

೭೭. ಹೀಗೆ ಸಮಸ್ತ ತೀರ್ಥಗಳಲ್ಲಿ ಯಾತ್ರೆಮಾಡಿದರೂ ಕೂಡ ಆ ಹಲ್ಲಿಗಳಿಗೆ ಮಾತ್ರ ಮೋಕ್ಷವು ದೊರೆಯಲಿಲ್ಲ. ಅನಂತರದಲ್ಲಿ ಒಂದು ವೇಳೆಯಲ್ಲಿ ಆ ವಿಪ್ರೇಂದ್ರನು ಪ್ರಭಾಸವೆಂಬ ಕ್ಷೇತ್ರಕ್ಕೆ ಬಂದನು.

೭೮. ಅಲ್ಲಿ ಮೃಕಂಡುಮುನಿಯ ಪುತ್ರನಾದ ಮಾರ್ಕಂಡೇಯ ಮುನಿಯು ತಪಸ್ಸನ್ನು ಮಾಡುತ್ತಲಿದ್ದನು. ಉಪಮನ್ಯುವು ಆ ಮಾರ್ಕಂಡೇಯನೆಂಬ ದ್ವಿಜಶ್ರೇಷ್ಠನನ್ನು ಕುರಿತು ಈ ರೀತಿಯಾಗಿ ಹೇಳಿದನು.

ಮಾರ್ಕಂಡೇಯ ಮಹಾಪ್ರಾಜ್ಞ ಮನೋಪಾಯಂ ವದಾನಘ ।
ಪಲ್ಲೀಯುಗ್ಮಮಿದಂ ಬ್ರಹ್ಮನ್ ಮಾಮೇವ ಶರಣಂ ಗತಂ ॥ ೭೯ ॥

ತಸ್ಮಾದೇತಸ್ಯ ಮೋಕ್ಷಾರ್ಥಮಹಂ ಯಾಮಿ ಕ್ವ ವಾಧುನಾ ।
ಇತಿ ತಸ್ಯ ವಚಃ ಶ್ರುತ್ವಾ ಮೃಕಂಡುತನಯೋಽಬ್ರವೀತ್ ॥ ೮೦ ॥

ಕಾಂಚೀ ಪುಣ್ಯತಮಾ ಲೋಕೇ ಕಲಿಕಲ್ಮಷನಾಶಿನೀ ।
ಸೈವ ಮುಕ್ತಿಪ್ರದಾ ನೃಣಾಂ ಮಹಾಪಾತಕಿನಾಮಪಿ ॥ ೮೧ ॥

ತತ್ರಾನಂತಸರೋ ನಾಮ ತೀರ್ಥಮಸ್ತಿ ಸುಪಾವನಂ ।
ತತ್ರ ಸ್ನಾಪಯ ಗತ್ವಾ ತ್ವಮೇತೌ ಗೃಹ್ಯ ಕುಯೋನಿಜೌ ॥ ೮೨ ॥

ದರ್ಶಯಸ್ವ ಚ ದೇವೇಶಂ ವರದಂ ಹಸ್ತಿಶೈಲಗಂ ।
ದರ್ಶನಾದೇತಯೋರ್ಮುಕ್ತಿರ್ಭವಿಷ್ಯತಿ ನ ಸಂಶಯಃ ॥ ೮೩ ॥

---

೭೯. ನಿಷ್ಕಳಂಕನಾದ ಮತ್ತು ಮಹಾಪ್ರಜ್ಞಾವಂತನಾದ ಮಾರ್ಕಂಡೇಯ ಮುನಿಯೆ! ನನ್ನ ಚಿಂತಿತಾರ್ಥವನ್ನು ಸಾಧಿಸುವ ಒಂದು ಉಪಾಯವನ್ನು ಹೇಳು, ಬ್ರಾಹ್ಮಣನೆ! ಈ ಹಲ್ಲಿಗಳ ಜೊತೆಯು ದುಃಖದ ಪಾರಕ್ಕೆ ಹೋಗಲು ನನ್ನನ್ನು ಶರಣಹೊಂದಿರುವುದು.

೮೦. ಆದುದರಿಂದ ಇವುಗಳಿಗೆ ಮೋಕ್ಷವಾಗಲು ನಾನು ಈಗ ಎಲ್ಲಿಗೆ ಹೋಗಲಿ, ಎಂದು ಉಪಮನ್ಯುವು ಹೇಳಿದ ಮಾತನ್ನು ಮಾರ್ಕಂಡೇಯನು ಕೇಳಿ ಈ ರೀತಿಯಾಗಿ ಪ್ರತ್ಯುತ್ತರವಿತ್ತನು.

೮೧. ಲೋಕದಲ್ಲಿ ಎಲ್ಲ ಕಲಿಯುಗದ ಪಾಪಭಾರವನ್ನು ಕಳೆಯಲು ಕಾಂಚೀ ನಗರವು ಉತ್ತಮವಾದ ಪುಣ್ಯಸ್ಥಾನವು, ಮಹಾಪಾಪವನ್ನು ಮಾಡಿದಮಾನವರಿಗೆಕೂಡ ಆ ಕ್ಷೇತ್ರವು ಮುಕ್ತಿ ಸಾಮ್ರಾಜ್ಯವನ್ನು ಕೊಡುವ ಮಹಿಮೆಯನ್ನು ಹೊಂದಿರುವುದು.

೮೨. ಆ ಕ್ಷೇತ್ರದಲ್ಲಿ ಅನಂತಸರೋವರವೆಂಬ ಒಂದು ಪರಮಪಾವನವಾದ ತೀರ್ಥವಿರುವುದು. ನೀನು ಈ ನೀಚಜಾತಿಯ ಜಂತುಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಇವುಗಳಿಗೆ ಸ್ನಾನಮಾಡಿಸು.

೮೩. ಮತ್ತು ಹಸ್ತಿಶೈಲದಲ್ಲಿರುವ ಸಮಸ್ತ!ದೇವತಾಪ್ರಭುವಾದ ವರದಸ್ವಾಮಿಯನ್ನು ಇವುಗಳಿಗೆ ದರ್ಶನಮಾಡಿಸು. ವರದಸ್ವಾಮಿಯ ದರ್ಶನದಿಂದ ತಪ್ಪದೆ ಮೋಕ್ಷವು ಲಭಿಸುವುದು, ಅದರಲ್ಲಿ ಸಂದೇಹವಿಲ್ಲ.

ಇತಿ ತಸ್ಯ ವಚಃ ಶ್ರುತ್ವಾ ಮಾರ್ಕಂಡೇಯಸ್ಯ ಧೀಮತಃ ।
ಉಪಮನ್ಯುರ್ಜಗಾಮಾಶು ಕಾಂಚೀಂ ಸಂಗೃಹ್ಯ ತಾವುಭೌ ॥ ೮೪ ॥

ತತ್ರಾನಂತಸರಸ್ತೋಯೇ ಸ್ನಾಪಯಿತ್ವಾ ವಿಧಾನತಃ ।
ದರ್ಶಯಾಮಾಸ ದೇವೇಶಂ ವರದಂ ಹಸ್ತಿಶೈಲಗಂ ॥ ೮೫ ॥

ತೌ ಚಾಪಿ ದೃಷ್ಟ್ವಾ ದೇವೇಶಂ ದಂಪತೀ ಮುಕ್ತಕಿಲ್ಬಿಷೌ ।
ಉತ್ಸೃಜ್ಯ ಸ್ವರ್ಗತೌ ವಿಪ್ರ ಕುತ್ಸಿತಾಂ ಪಲ್ಲಿಕಾತನುಂ ॥ ೮೬ ॥

ತಯೋಃ ಸ್ವರ್ಗತಯೋಸ್ತತ್ರ ದಂಪತ್ಯೋಸ್ತತ್ಕಳೇವರೌ ।
ತತ್ರೈವ ಪಲ್ಲಿಕಾಕಾರೌ ಸ್ಥಿತೌ ಕಾಂಚನಮಸ್ತಕೌ ॥ ೮೭ ॥

ತದೋಪಮನ್ಯುರ್ಹೃಷ್ಟಾತ್ಮಾ ವವಂದೇ ವರದಂ ಹರಿಂ ।
ಸಹಿತಃ ಪುತ್ರಪತ್ನೀಭ್ಯಾಂ ತುಷ್ಟಾವ ಚ ಜಗತ್ಪತಿಂ ॥ ೮೮ ॥

---

೮೪. ಜ್ಞಾನಿಯಾದ ಆ ಮಾರ್ಕಂಡೇಯನ ಈ ರೀತಿಯಾದ ವಚನವನ್ನು ಕೇಳಿ ಉಪಮನ್ಯುವು ಆ ಎರಡು ಜಂತುಗಳನ್ನು ತೆಗೆದುಕೊಂಡು ಬೇಗ ಕಾಂಚೀ ನಗರಕ್ಕೆ ಹೋದನು.

೮೫. ಅಲ್ಲಿ ಆ ಪ್ರಾಣಿಗಳಿಗೆ ಅನಂತ ಸರೋವರದ ತೀರ್ಥದಲ್ಲಿ ವಿಧಾನ ಪೂರ್ವಕವಾಗಿ ಸ್ನಾನಮಾಡಿಸಿ ಅನಂತರ ಹಸ್ತಿಶೈಲ ನಿವಾಸಿಯೂ ದೇವಾಧಿದೇವನೂ ಆದ ವರದರಾಜಸ್ವಾಮಿಯ ದರ್ಶನಮಾಡಿಸಿದನು.

೮೬. ವಿಪ್ರನೆ! ಆ ಪ್ರಾಣಿರೂಪವನ್ನು ಹೊಂದಿದ ದಂಪತಿಗಳು ದೇವತಾಪ್ರಭುವಾದ ವರದಸ್ವಾಮಿಯನ್ನು ದರ್ಶನಮಾಡಿ ನೀಚವಾದ ಪಲ್ಲೀವಿಗ್ರಹವನ್ನು ಬಿಟ್ಟು ಸ್ವರ್ಗವನ್ನು ಹೊಂದಿದರು.

೮೭. ಆ ದಂಪತಿಗಳು ಪಲ್ಲೀಶರೀರವನ್ನು ಬಿಟ್ಟು ಸ್ವರ್ಗಕ್ಕೆ ಹೋಗಲಾಗಿ ಅವರಿಂದ ಬಿಡಲ್ಪಟ್ಟ, ಸುವರ್ಣದ ಶಿರಸ್ಸಿನಿಂದ ಕೂಡಿದ ಪಲ್ಲೀ ಆಕಾರವುಳ್ಳ ದೇಹಗಳು ಅಲ್ಲಿಯೇ ಬಿದ್ದಿದ್ದವು.

೮೮. ಪಲ್ಲಿಗಳಿಗೆ ದುಃಖದಿಂದ ಮುಕ್ತಿಯುಂಟಾದ ಕೂಡಲೆ ಉಪಮನ್ಯುವು ಸಂತೋಷಗೊಂಡ ಅಂತಃಕರಣವುಳ್ಳವನಾಗಿ ಪತ್ನೀ-ಪುತ್ರರಿಂದ ಕೂಡಿ ವರದಸ್ವಾಮಿಯನ್ನು ಸ್ತೋತ್ರಮಾಡಿದನು.

ತಮುವಾಚ ತದಾ ದೇವೋ ವರದೋ ಭಕ್ತವತ್ಸಲಃ ।
ಉಪಮನ್ಯೋ ಮಹಾಪ್ರಾಜ್ಞ ಧನ್ಯಸ್ತ್ವಮಸಿ ಸುವ್ರತ ॥ ೮೯ ॥

ಯನ್ಮಾಂ ದರ್ಶಯತಾ ಚಾತ್ರ ದಂಪತೀ ಉದ್ಧೃತೌ ತ್ವಯಾ ।
ತಯೋಃ ಕಲೇವರಾವೇತಾವತ್ರೈವಂ ಸ್ವರ್ಣಮಸ್ತಕೌ ॥ ೯೦ ॥

ತಿಷ್ಠೇತಾಂ ಹಸ್ತಿಶೈಲಾಗ್ರೇ ತವ ಚ ಖ್ಯಾತಿಕಾರಣಾತ್ ।
ಯೇ ಚಾತ್ರ ಮನುಜಾಃ ಸಮ್ಯಕ್ ಮಾಂ ದೃಷ್ಟ್ವಾ ಮತ್ಪ್ರದಕ್ಷಿಣೇ ॥

ಸ್ಪೃಶಂತಿ ಪಲ್ಲಿಕಾಯುಗ್ಮಂ ನೀರೋಗಾಸ್ತೇ ಭವಂತ್ಯಲಂ ।
ಇತಿ ದತ್ವಾ ವರಂ ತಸ್ಮೈ ಬ್ರಾಹ್ಮಣಾಯೋಪಮನ್ಯವೇ ॥ ೯೨ ॥

ಶ್ರಿಯಂ ಚೈವಾಚಲಾಂ ದತ್ವಾ ತತಶ್ಚಾಂತರ್ಹಿತೋ ಹರಿಃ ।
ಉಪಮನ್ಯುಃ ಶ್ರಿಯಂ ಲಬ್ಧ್ವಾ ಶಾಶ್ವತೀಂ ಹೃಷ್ಟಮಾನಸಃ ॥ ೯೩ ॥

---

೮೯. ಆಗ ಭಕ್ತವತ್ಸಲನಾದ ವರದಸ್ವಾಮಿಯು ಆ ಉಪಮನ್ಯುವನ್ನು ಕುರಿತು ಈ ವಚನವನ್ನು ಆಡಿದನು. ದೃಢವಾದ ವ್ರತತತ್ಪರನೂ ಮಹಾಪ್ರಾಜ್ಞನೂ ಆದ ಉಪಮನ್ಯುವೆ! ನೀನು ಧನ್ಯನಾಗಿದ್ದಿ.

೯೦. ನೀನು ಕೆಟ್ಟ ಜಂತು ಜನ್ಮದಲ್ಲಿದ್ದ ದಂಪತಿಗಳಿಗೆ ನನ್ನ ದರ್ಶನವನ್ನು ಮಾಡಿಸಿ ಉದ್ಧಾರಮಾಡಿರುತ್ತಿ. ಚಿನ್ನದ ಶಿರಸ್ಸಿನಿಂದ ಪ್ರಕಾಶಿಸುವ ಅವುಗಳ ಈ ದೇಹಗಳು ಇಲ್ಲಿ ಈ ರೀತಿಯಾಗಿ ಬಿದ್ದಿವೆ.

೯೧. ಈ ಹಸ್ತಿಶೈಲದ ಅಗ್ರಭಾಗದಲ್ಲಿ ನಿನ್ನ ಖ್ಯಾತಿಯು ಶಾಶ್ವತವಾಗಿರಲು ಈ ದೇಹಗಳು ಯಾವಾಗಲೂ ಇರಲಿ. ಈ ಸ್ಥಳದಲ್ಲಿ ಮಾನವರು ನನ್ನ ದರ್ಶನವನ್ನು ಮಾಡಿ ನನ್ನ ಪ್ರದಕ್ಷಿಣೆಯನ್ನೂ ಕೂಡ ಯಥಾವಿಧಿಯಾಗಿ ನೆರವೇರಿಸುವರು.

೯೨. ಆಗ ಈ ಪಲ್ಲೀದೇಹಗಳನ್ನು ಮುಟ್ಟಿದರೆ ಅಂತಹ ಮಾನವರು ಸಂಪೂರ್ಣ ನೀರೋಗರಾಗುವರು. ಎಂಬುದಾಗಿ ವರದಸ್ವಾಮಿಯು ಉಪಮನ್ಯುವಿಗೆ ವರದಾನವನ್ನು ಮಾಡಿದನು.

೯೩. ಮತ್ತು ಉಪಮನ್ಯುವಿಗೆ ಶಾಶ್ವತವಾದ ಸಂಪತ್ತನ್ನು ಅನುಗ್ರಹಿಸಿ ಹರಿಯು ಅಲ್ಲಿಯೇ ಅಂತರ್ಧಾನಹೊಂದಿದನು. ಉಪಮನ್ಯುವು ಸ್ಥಿರವಾದ ಸಂಪತ್ತನ್ನು ಹೊಂದಿ ಸಂತುಷ್ಟವಾದ ಅಂತರಂಗವುಳ್ಳವನಾದನು.

ಸಹಿತಃ ಪುತ್ರಪೌತ್ರೈಶ್ಚ ಮುಮುದೇ ಶಾಶ್ವತೀಃ ಸಮಾಃ ।
ತಸ್ಮಾತ್ತ್ವಮಪಿ ವಿಪ್ರೇಂದ್ರ ಗಚ್ಛ ಶೀಘ್ರಮಿತಃ ಶುಭಾಂ ॥ ೯೪ ॥

ತತ್ರ ದೃಷ್ಟ್ವಾ ತು ವರದಂ ಪಾಪಾನ್ಮುಕ್ತೋ ಭವಿಷ್ಯಸಿ ।
ಕುಚೇಲಸ್ತ್ವೇವಮುಕ್ತಸ್ತು ಭರದ್ವಾಜೇನ ಧೀಮತಾ ॥ ೯೫ ॥

ಜಗಾಮ ಕಾಂಚೀಂ ವೇಗೇನ ವರದಂ ದ್ರಷ್ಟುಮುತ್ಸುಕಃ ।
ತತ್ರಾನಂತಸರಸ್ತೀರೇ ಚಕಾರ ತಪ ಉತ್ತಮಂ ॥ ೯೬ ॥

ದೇವಂ ಚ ವರದಂ ವಿಪ್ರೋ ದದರ್ಶಾದ್ಭುತದರ್ಶನಂ ।
ತತೋ ದೇವಾಜ್ಞಯಾ ತತ್ರ ಪೂಜಯನ್ ದ್ವಾಪರೇ ಯುಗೇ ।
ವರದಂ ಸತತಂ ಭಕ್ತ್ಯಾ ಜಗಾಮ ಪರಮಾಂ ಗತಿಂ ॥ ೯೭ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ಏಕತ್ರಿಂಶೋಽಧ್ಯಾಯಃ.

---

೯೪. ಮತ್ತು ಅನೇಕ ಪುತ್ರಪೌತ್ರಾದಿ ಸಮೃದ್ಧಿಯಿಂದ ಕೂಡಿ ಅನೇಕ ವರ್ಷಗಳ ದೀರ್ಘಕಾಲ ಸಂತೋಷವನ್ನು ಅನುಭವಿಸಿದನು. ವಿಪ್ರೇಂದ್ರನೆ! ಆದುದರಿಂದ ನೀನೂ ಕೂಡ ಇಲ್ಲಿಂದ ಶುಭಕರವಾದ ಕಾಂಚೀನಗರಕ್ಕೆ ಹೋಗು.

೯೫. ಆ ಕ್ಷೇತ್ರದಲ್ಲಿ ವರದರಾಜಸ್ವಾಮಿಯನ್ನು ನೋಡಿ ಶಾಪದಿಂದ ಬಿಡುಗಡೆಯನ್ನು ಹೊಂದುತ್ತೀ, ಎಂಬುದಾಗಿ ಜ್ಞಾನಿಯಾದ ಭರದ್ವಾಜಮುನಿಯಿಂದ ಆ ಮಲಿನವಸ್ತ್ರದ ದ್ವಿಜನು ಹೇಳಲ್ಪಟ್ಟನು.

೯೬. ತರುವಾಯ ಬಹು ವೇಗದಿಂದ ವರದಸ್ವಾಮಿಯನ್ನು ನೋಡಲೋಸ್ಕರ ಕಾಂಚೀನಗರಕ್ಕೆ ಹೋದನು. ಅಲ್ಲಿಗೆ ಹೋಗಿ ಅನಂತ ಸರೋವರದ ತೀರದಲ್ಲಿ ಉತ್ತಮವಾದ ತಪವನ್ನು ಆಚರಿಸಿದನು.

೯೭. ಮತ್ತು ಆ ವಿಪ್ರನು ಅದ್ಭುತವಾದ ದರ್ಶನವುಳ್ಳ ವರದಸ್ವಾಮಿಯನ್ನು ಸಂದರ್ಶಿಸಿದನು. ಅನಂತರದಲ್ಲಿ ದ್ವಾಪರಯುಗದಲ್ಲಿ ಆ ಸ್ವಾಮಿಯ ಆಜ್ಞೆಯಿಂದ ವರದದೇವನನ್ನು ಸಂತತವಾಗಿ ಪೂಜಿಸಿ ಪರಮಗತಿಯನ್ನು ಹೊಂದಿದನು.

ಕಾಂಚೀಮಾಹಾತ್ಮ್ಯದಲ್ಲಿ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಬ್ರಹ್ಮಾಂಡಪುರಾಣಾಂತರ್ಗತಂ

ಕಾಂಚೀಮಾಹಾತ್ಮ್ಯಮ್

ದ್ವಾತ್ರಿಂಶೋಽಧ್ಯಾಯಃ

ನಾರದ ಉವಾಚ :—

ಪುರಾ ಕದಾಚಿತ್ಕೈಲಾಸೇ ಕಸ್ಮಿಂಶ್ಚಿತ್ಕಾರಣಾಂತರೇ ।
ನಂದೀ ರುದ್ರೇಣ ಸಂಶಪ್ತಃ ಸ್ವಾನುಪಸ್ಥಾನಕಾರಣಾತ್ ॥ ೧ ॥

ರೋಷಾತ್ತೇನ ಪರಿತ್ಯಕ್ತಃ ಶಂಕರೇಣ ಮಹಾತ್ಮನಾ ।
ಕೈಲಾಸಂ ಸಂಪರಿತ್ಯಜ್ಯ ಧರಣೀಂ ವಿಚಚಾರ ಹ ॥ ೨ ॥

ಸ ತು ಭೂತ್ವಾ ಬಲೀವರ್ದೋ ಮಹಾನ್ ಪರ್ವತಸನ್ನಿಭಃ ।
ಸತ್ಯವ್ರತಸ್ಯ ಕ್ಷೇತ್ರಸ್ಯ ಪ್ರತೀಚ್ಯಾಂ ದಿಶಿ ಕಾನನೇ ॥ ೩ ॥

---

೧. ನಾರದಮುನಿಯು ಮುಂದುವರಿಸಿ ಇಂತೆಂದನು :—ಪೂರ್ವಕಾಲದಲ್ಲಿ ಒಂದಾನೊಂದು ಕಾಲದಲ್ಲಿ ಒಂದಾನೊಂದು ಕಾರಣದ ಸಲುವಾಗಿ ತನ್ನನ್ನು ಸರಿಯಾಗಿ ಉಪಸ್ಥಾನಮಾಡದಿರುವುದರಿಂದ ಶಂಕರನಿಂದ ನಂದಿಯು ಶಪಿಸಲ್ಪಟ್ಟನು.

೨. ಬಹು ಕೋಪದಿಂದ ಮಹಾತ್ಮನಾದ ಶಂಕರನಿಂದ ತ್ಯಜಿಸಲ್ಪಟ್ಟ ನಂದಿಯು ಶಾಪದಿಂದ ಕೈಲಾಸವನ್ನು ಬಿಟ್ಟು ಭೂಮಂಡಲವನ್ನು ಸುತ್ತಿದನು.

೩. ಆಗ ನಂದಿಯು ಸತ್ಯವ್ರತಕ್ಷೇತ್ರದ ಪಶ್ಚಿಮದಿಕ್ಕಿನ ಭಾಗದಲ್ಲಿದ್ದ ಒಂದು ಅರಣ್ಯದಲ್ಲಿ ಪರ್ವತಾಕಾರವಾದ ಒಂದು ದೊಡ್ಡ ಗೂಳಿಯಾಯಿತು.

ಚಚಾರ ಪರ್ವತೇ ರಮ್ಯೇ ಬಹುಭಿರ್ಗೋಗಣೈಃ ಸಹ ।
ಏತಸ್ಮಿನ್ನೇವ ಕಾಲೇ ತು ಯುಗಸಂಧಿರಭೂನ್ನೃಪ ॥ ೪ ॥

ಯುಗಸಂಧೌ ಮಹತ್ಯಾಸೀದನಾವೃಷ್ಟಿಃ ಸುದಾರುಣಾ ।
ತದಾ ಗಾವಶ್ಚ ಸಕಲಾಃ ಪ್ರಣಷ್ಟಾ ಧರಣೀತಲೇ ॥ ೫ ॥

ತದಾ ದೇವಾಜ್ಞಯಾ ಧೇನುಸ್ತತ್ರಾಭ್ಯೇತ್ಯ ಚ ನಂದಿನಾ ।
ಸಂಗಮ್ಯ ಸಸೃಜೇ ವತ್ಸಾನ್ ಶತಶೋಽಥ ಸಹಸ್ರಶಃ ॥ ೬ ॥

ಕ್ಷೀರಾಣಿ ತೇಷಾಂ ಪಾನಾರ್ಥಂ ನವರ್ಷ ಸ್ವೋಧಸೋ ಮುಹುಃ ।
ತಸ್ಮಿನ್ನಂದಿಗಿರೌ ರಾಜನ್ ಕ್ಷೀರಪೂರೋ ಮಹಾನಭೂತ್ ॥ ೭ ॥

ನಂದಿನಾಧ್ಯುಷಿತೋ ಯಸ್ಮಾತ್ ಸ ವೈ ನಂದಿಗಿರಿಃ ಸ್ಮೃತಃ ।
ಕ್ಷೀರಪೂರೇಣ ಮಹತಾ ನಂದಿನಾಮ್ನೋ ಮಹಾಗಿರೇಃ ॥ ೮ ॥

---

೪. ರಾಜನೆ! ಆ ವೃಷಭವು ಅನೇಕ ಗೋವುಗಳ ವೃಂದದ ಜೊತೆಯಲ್ಲಿ ರಮ್ಯವಾದ ಪರ್ವತದಲ್ಲಿ ಸ್ವಚ್ಛಂದವಾಗಿ ವಿಹರಿಸಿತು. ಆ ಕಾಲದಲ್ಲಿ ಒಂದು ಯುಗ ಸಂಧಿಯುಂಟಾಯಿತು.

೫. ಆ ಯುಗ ಸಂಧಿಯಲ್ಲಿ ಭಯಂಕರವಾದ ಮಹತ್ತಾದ ಅನಾವೃಷ್ಟಿ ಯುಂಟಾಯಿತು. ಅದರಿಂದ ಭೂಲೋಕದಲ್ಲಿದ್ದ ಸಕಲ ಗೋವುಗಳು ನಷ್ಟವಾದುವು.

೬. ಆಗ ದೇವಾಜ್ಞೆಯಿಂದ ಕಾಮಧೇನುವು ಅಲ್ಲಿಗೆ ಬಂದು ನಂದಿಯ ಸಮಾಗಮದಿಂದ ಸಹಸ್ರಾರು ಸಂಖ್ಯೆಯ ಕರುಗಳನ್ನು ಸೃಜಿಸಿತು.

೭. ಆ ಕರುಗಳಿಗೆಲ್ಲ ಪಾನಕ್ಕೋಸ್ಕರವಾಗಿ ತನ್ನ ಕೆಚ್ಚಲಿನಿಂದ ಪುನಃ ಪುನಃ ಹಾಲನ್ನು ಸುರಿಸಿತು. ರಾಜನೆ, ಆ ನಂದಿಗಿರಿಯಲ್ಲಿ ಈ ಕಾರಣದಿಂದ ಮಹತ್ತಾದ ಕ್ಷೀರಪ್ರವಾಹವು ಉಂಟಾಯಿತು.

೮. ಆ ಗಿರಿಯಲ್ಲಿ ನಂದಿಯು ವಾಸಮಾಡಿದ ನಿಮಿತ್ತದಿಂದ ಅದು ನಂದಿಗಿರಿ ಯೆಂಬ ಅನ್ವರ್ಥ ಸಂಜ್ಞೆಯನ್ನು ಹೊಂದಿತು. ಆ ನಂದಿಪರ್ವತದಿಂದ ಕ್ಷೀರದ ಮಹಾ ಪ್ರವಾಹವು ಹರಿಯಿತು.

ಜಾತಾ ಕ್ಷೀರನದೀ ಪುಣ್ಯಾ ಸತ್ಯವ್ರತಮುಪಾಯಯೌ ।
ಕ್ಷೀರಾಣಿ ಪೀತ್ವಾ ಮುಮುದುಃ ಸತ್ರವ್ರತನಿವಾಸಿನಃ ॥ ೯ ॥

ಮನುಷ್ಯಾಃ ಪಶವಶ್ಚೈವ ಯೇ ಚಾನ್ಯೇ ಮೃಗಪಕ್ಷಿಣಃ ।
ಸಾ ವೈ ಕ್ಷೀರನದೀ ಪುಣ್ಯಾ ಬಭೂವ ಕಲುಷಾಪಹಾ ॥ ೧೦ ॥

ತತೋ ನಂದೀ ಸಮಭ್ಯೇತ್ಯ ಕ್ಷೇತ್ರಂ ಸತ್ಯವ್ರತಂ ಪ್ರತಿ ।
ಆತ್ಮನಃ ಶಾಪಮೋಕ್ಷಾಯ ಪೂಜಯಾಮಾಸ ಶಂಕರಂ ॥ ೧೧ ॥

ಉತ್ತರೇ ಹಸ್ತಿಶೈಲಸ್ಯ ಕ್ಷೀರನದ್ಯಾಸ್ತಟೇ ಶುಭೇ ।
ಸಂಸ್ಥಾಪ್ಯ ಲಿಂಗಂ ರುದ್ರಸ್ಯ ಪೂಜಯಾಮಾಸ ವೈ ವೃಷಃ ॥ ೧೨ ॥

ಆಸ್ಯೇನ ತೋಯಮುದ್ಧೃತ್ಯ ಕುರ್ವನ್ ರುದ್ರಾಭಿಷೇಚನಂ ।
ತಲ್ಲಿಂಗಂ ವೃಷಭೇಶಾನಂ ಪ್ರವದಂತಿ ಮನೀಷಿಣಃ ॥ ೧೩ ॥

---

೯. ಆ ಗಿರಿಯಿಂದ ಹುಟ್ಟಿದ ಪವಿತ್ರವಾದ ಕ್ಷೀರನದಿಯು ಹರಿದು ಸತ್ಯವ್ರತ ಕ್ಷೇತ್ರಕ್ಕೆ ಬಂದಿತು. ಸತ್ಯವ್ರತವಾಸಿಗಳಾದ ಸುಕೃತಿಗಳು ಆ ನದಿಯ ಕ್ಷೀರವನ್ನು ಪಾನಮಾಡಿ ಆನಂದಿಸಿದರು.

೧೦. ಮತ್ತು ಅಲ್ಲಿ ವಾಸಮಾಡುವ ಮನುಷ್ಯರು, ಪಶುಗಳು ಅಥವಾ ಇತರ ಮೃಗಪಕ್ಷಿಗಳೆಲ್ಲರೂ ಆ ನದಿಯ ಕ್ಷೀರವನ್ನು ಪಾನಮಾಡಿದರು. ಆ ಕ್ಷೀರನದಿಯು ಪುಣ್ಯವನ್ನು ಕೊಡುವುದೂ ಪಾಪವನ್ನು ಕಳೆಯುವುದೂ ಆಯಿತು.

೧೧. ಅನಂತರದಲ್ಲಿ ಆ ನದಿಯು ಸತ್ಯವ್ರತಕ್ಷೇತ್ರಕ್ಕೆ ಬಂದು ತನ್ನ ಶಾಪ ವಿಮೋಚನೆಗೆ ಶಂಕರನನ್ನು ಪೂಜಿಸಿದನು.

೧೨. ಮತ್ತು ಆ ನಂದಿಯು ಹಸ್ತಿಶೈಲಕ್ಕೆ ಉತ್ತರದಲ್ಲಿ ಆ ಕ್ಷೀರನದಿಯ ಮಂಗಳಕರವಾದ ತೀರದಲ್ಲಿ ರುದ್ರನ ಲಿಂಗವನ್ನು ಪ್ರತಿಷ್ಠೆಮಾಡಿ ಯಥಾವಿಧಿಯಾಗಿ ಪೂಜಿಸಿದನು.

೧೩. ನಂದಿಯು ಪೂಜಿಸುವಾಗ ತನ್ನ ಮುಖದಿಂದ ಜಲವನ್ನು ತುಂಬಿ ಕೊಂಡು ರುದ್ರನಿಗೆ ಅಭಿಷೇಕವನ್ನು ಮಾಡುತ್ತಲಿದ್ದನು. ಜ್ಞಾನಿಗಳು ಆ ಲಿಂಗ ವನ್ನು ವೃಷಭೇಶ್ವರನೆಂದು ಕರೆಯುತ್ತಾರೆ.

ಮುಕ್ತಶಾಪಶ್ಚ ವೃಷಭೋಽಪ್ಯಾಸೀದ್ರುದ್ರಸಖಃ ಪುನಃ ।
ಹರೇರನುಜ್ಞಯಾ ಶಂಭುರಸುರಾಣಾಂ ಹಿತಾಯ ಚ ॥ ೧೪ ॥

ಚಕಾರ ಮೋಹಶಾಸ್ತ್ರಾಣಿ ತಾಮಸಾನಿ ಬಹೂನ್ಯಪಿ ।
ತತಸ್ತದ್ದೋಷಶಾಂತ್ಯರ್ಥಂ ಕಾಂಚೀಮಭ್ಯೇತ್ಯ ಶಂಕರಃ ॥ ೧೫ ॥

ಅನಂತಸರಸಸ್ತೀರಮಾಶ್ರಿತಸ್ತಪ ಉತ್ತಮಂ ।
ಚಕಾರ ಪುಣ್ಯಕೋಟ್ಯಾಖ್ಯಂ ವಿಮಾನಮವಲೋಕರ್ಯ ॥ ೧೬ ॥

ಅತಸ್ತಂ ಪುಣ್ಯಕೋಟೀಶಂ ಪ್ರವದಂತಿ ಹಿ ಶಂಕರಂ ।
ಕ್ಷೀರಾಬ್ಧಿಮಥನೇ ಪೂರ್ವಮುತ್ಥಿತಂ ಗರಳಂ ಮಹತ್ ॥ ೧೭ ॥

ಪೀತ್ವಾ ತದ್ಗರಳಂ ಧೈರ್ಯಾತ್ಸುರಾಣಾಂ ಹಿತಕಾಮ್ಯಯಾ ।
ಸಂತಪ್ತಹೃದಯೋ ರುದ್ರಃ ಕಾಂಚೀಮಭ್ಯೇತ್ಯ ಸತ್ವರಂ ॥ ೧೮ ॥

---

೧೪. ಆ ಪೂಜಾಪ್ರಭಾವದಿಂದ ನಂದಿಯು ಶಾಪದಿಂದ ಮುಕ್ತನಾಗಿ ರುದ್ರನಿಗೆ ಪ್ರಿಯನಾದನು. ಹಿಂದೆ ಶಂಕರನು ಅಸುರರ ಹಿತಕ್ಕೋಸ್ಕರ ಹರಿಯ ಆದೇಶವೊಂದನ್ನು ಆಚರಿಸಿದನು.

೧೫. ಆಗ ತಮೋಗುಣಮಯವಾದ, ಅನೇಕ ಮೋಹವನ್ನುಂಟುಮಾಡುವ ಶಾಸ್ತ್ರಗಳನ್ನು ಮಾಡಿದನು. ಅಂತಹ ದುಷ್ಟ ಶಾಸ್ತ್ರಪ್ರಣಯನದ ದೋಷಗಳನ್ನು ಕಳೆದುಕೊಳ್ಳಲೋಸ್ಕರ ಶಂಕರನು ಕಾಂಚೀಕ್ಷೇತ್ರಕ್ಕೆ ಬಂದನು.

೧೬. ಶಂಕರನು ಅಲ್ಲಿಗೆ ಬಂದು ಅನಂತ ಸರೋವರದ ಬಳಿಯಲ್ಲಿ ಇದ್ದು ಪುಣ್ಯಕೋಟಿಯೆಂಬ ವಿಮಾನವನ್ನು ನೋಡುತ್ತ ಉತ್ತಮವಾದ ತಪವನ್ನು ಆಚರಿಸಿದನು.

೧೭. ಆದುದರಿಂದ ಅಲ್ಲಿದ್ದ ಶಿವಮೂರ್ತಿಯನ್ನು ಪುಣ್ಯಕೋಟೀಶ್ವರನೆಂದು ಕರೆಯುತ್ತಾರೆ. ಹಿಂದೆ ದೇವದಾನವರು ಮಾಡಿದ ಕ್ಷೀರಸಮುದ್ರ ಮಥನದಲ್ಲಿ ಮೊದಲು ಉಗ್ರವಾದ ಒಂದು ವಿಷವು ಉತ್ಪನ್ನವಾಯಿತಷ್ಟೆ.

೧೮. ಸಮಸ್ತ ದೇವತೆಗಳಿಗೆ ಹಿತವನ್ನು ಮಾಡಲೋಸ್ಕರ ಶಿವನು ಧೈರ್ಯದಿಂದ ಆ ವಿಷವನ್ನು ಪಾನಮಾಡಿ ಸಂತಪ್ತವಾದ ಹೃದಯವುಳ್ಳವನಾಗಿ ಅದರ ಶಾಂತಿಗೋಸ್ಕರ ಬೇಗ ಕಾಂಚೀನಗರಕ್ಕೆ ಬಂದನು.

ಸ್ನಾತ್ವಾ ವೇಗವತೀತೋಯೇ ಚಕಾರ ತಪ ಉತ್ತಮಂ ।
ವಿಷಾಗ್ನಿಶ್ಚೈವ ಶಾಂತೋಽಭೂತ್ ಸುಖಿತಶ್ಚ ಯತೋ ಹರಃ ॥ ೧೯ ॥

ತಸ್ಮಾದ್ರುದ್ರಸ್ಯ ತಲ್ಲಿಂಗಂ ಶಾಂತೇಶಂ ಪ್ರವದಂತಿ ಹಿ ।
ಏತಾದೃಶಾನಿ ಸ್ಥಾನಾನಿ ಕಾಂಚ್ಯಾಂ ರುದ್ರಸ್ಯ ಭೂಮಿಪ ॥ ೨೦ ॥

ಅಷ್ಟಾ ದಶ ಶತಾನ್ಯಾಹುಃ ಸರ್ವಕಾಮಪ್ರದಾನಿ ಹಿ ।
ಸರ್ವಮೇತನ್ಮಯಾ ಪ್ರೋಕ್ತಂ ಕಾಂಚೀಮಾಹಾತ್ಮ್ಯಮದ್ಭುತಂ ॥

ಯ ಇದಂ ಪಠತೇ ನಿತ್ಯಂ ಶೃಣೋತಿ ಚ ಸಮಾಹಿತಃ ।
ಸ ಸರ್ವಾನ್ ಲಭತೇ ಕಾಮಾನ್ ಆಯುರಾರೋಗ್ಯಮೇವ ಚ ॥ ೨೨ ॥

ಸೂತ ಉವಾಚ :—

ಇತ್ಯುಕ್ತ್ವಾ ನಾರದೋ ವಿದ್ವಾನ್ ರಾಜ್ಞಾ ಹೃಷ್ಟೇನ ಪೂಜಿತಃ ।
ಅಂಬರೀಷಮನುಜ್ಞಾಪ್ಯ ಜಗಾಮ ತ್ರಿದಶಾಲಯಂ ॥ ೨೩ ॥

---

೧೯. ಮತ್ತು ವೇಗವತೀ ನದಿಯ ನೀರಿನಲ್ಲಿ ಸ್ನಾನಮಾಡಿ ಕಷ್ಟವಾದ ತಪಸ್ಸನ್ನು ಮಾಡಿದನು. ಅದರಿಂದ ಅವನು ಪಾನಮಾಡಿದ ವಿಷಾಗ್ನಿಯು ಶಾಂತವಾಗಿ ಸುಖವಾಗಿದ್ದನು.

೨೦. ರಾಜನೆ! ರುದ್ರನ ಆ ಲಿಂಗವನ್ನು ಶಾಂತೇಶ್ವರನೆಂಬ ಅನ್ವರ್ಥ ಹೆಸರಿನಿಂದ ಕರೆಯುವರು. ಕಾಂಚೀನಗರದಲ್ಲಿ ರುದ್ರನಿಗೆ ಇಂತಹ ಸ್ಥಾನವಿಶೇಷಗಳು ಪ್ರಸಿದ್ಧವಾಗಿವೆ.

೨೧. ಒಟ್ಟು ಸೇರಿ ಕಾಂಚೀನಗರದಲ್ಲಿ ಒಂದು ನೂರು ಹದಿನೆಂಟು ಸಂಖ್ಯೆಯ ಪುಣ್ಯಸ್ಥಾನಗಳಿವೆ. ಈ ರೀತಿಯಾಗಿ ನಾನು ಸಮಗ್ರವಾಗಿ ಅದ್ಭುತವಾದ ಕಾಂಚೀ ಮಾಹಾತ್ಮ್ಯವನ್ನು ಹೇಳಿರುವೆನು.

೨೨. ಯಾವ ಮಾನವನು ಈ ಕಾಂಚೀಮಾಹಾತ್ಮ್ಯವನ್ನು ಸಮಾಧಾನ ಚಿತ್ತದಿಂದ ಪಠನ, ಅಥವಾ ಶ್ರವಣಗಳನ್ನು ಮಾಡುವನೋ ಅವನು ಆಯುಷ್ಯ-ಆರೋಗ್ಯ ಮುಂತಾದ ಸರ್ವ ಕಾಮಗಳನ್ನು ಹೊಂದುವನು.

೨೩. ಸೂತಮುನಿಯು ಹೀಗೆ ಹೇಳಿದನು :—ಜ್ಞಾನಿಯಾದ ನಾರದ ಮುನಿಯು ಈ ರೀತಿಯಾಗಿ ಉಪದೇಶಿಸಿ ಸಂತುಷ್ಟನಾದ ಅಂಬರೀಷರಾಜನಿಂದ ಸತ್ಕರಿಸಲ್ಪಟ್ಟವನಾಗಿ ರಾಜನ ಸಮ್ಮತಿಯನ್ನು ಪಡೆದು ಸ್ವರ್ಗಲೋಕಕ್ಕೆ ತೆರಳಿದನು.

ಏತತ್ ಸತ್ಯವ್ರತಕ್ಷೇತ್ರಮಾಹಾತ್ಮ್ಯಂ ಪುಣ್ಯವರ್ಧನಂ ।
ಪಾಪಘ್ನಂ ಮೋಕ್ಷಫಲದಂ ಭವದ್ಭ್ಯಃ ಕಥಿತಂ ಮಯಾ ॥ ೨೪ ॥

ಏತತ್ಸುಪುಣ್ಯಂ ಪುರುಷಾರ್ಥಸಾಧಕಂ
ಸತ್ಯವ್ರತಕ್ಷೇತ್ರಗತಸ್ಯ ವಿಷ್ಣೋಃ ।
ಮಾಹಾತ್ಮ್ಯಮತ್ಯದ್ಭುತಮಾದರೇಣ
ಶ್ರುತ್ವಾತಿಹೃಷ್ಟಾ ಮುನಯೋ ಬಭೂವುಃ ॥ ೨೫ ॥

ಇತಿ ಶ್ರೀ ಕಾಂಚೀಮಾಹಾತ್ಮ್ಯೇ ದ್ವಾತ್ರಿಂಶೋಽಧ್ಯಾಯಃ.

ಕಾಂಚೀಮಾಹಾತ್ಮ್ಯಂ ಸಮಾಪ್ತಂ.

---

೨೪. ಪುಣ್ಯಪುಂಜವನ್ನುಂಟುಮಾಡುವ, ಪಾಪರಾಶಿಯನ್ನು ನಾಶಮಾಡುವ, ಮತ್ತು ಮೋಕ್ಷಫಲವನ್ನು ನೀಡುವ ಈ ಸತ್ಯವ್ರತಕ್ಷೇತ್ರದ ಮಾಹಾತ್ಮ್ಯವನ್ನು ನಾನು ನಿಮ್ಮೆಲ್ಲರಿಗೂ ಉಪದೇಶಿಸಿರುವೆನು.

೨೫. ಅತ್ಯಂತ ಪವಿತ್ರವೂ ಪುರುಷಾರ್ಥ ಪ್ರಾಪ್ತಿಗೆ ಸಾಧಕವೂ ಆದ ಸತ್ಯವ್ರತ ಕ್ಷೇತ್ರದಲ್ಲಿ ಆವಿರ್ಭವಿಸಿರುವ ವಿಷ್ಣುವಿನ ಅತ್ಯದ್ಭುತವಾದ ಮಾಹಾತ್ಮ್ಯ ಚರಿತ್ರವನ್ನು ಮಹರ್ಷಿಗಳೆಲ್ಲರೂ ಭಕ್ತ್ಯಾದರಗಳಿಂದ ಶ್ರವಣಮಾಡಿ ಅತ್ಯಂತ ಸಂತುಷ್ಟರಾದರು.

ಕಾಂಚೀಮಾಹಾತ್ಮ್ಯದಲ್ಲಿ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

ಕಾಂಚೀಮಾಹಾತ್ಮ್ಯದ ಅನುವಾದವು ಸಮಾಪ್ತವು.